

ಮನುಷ್ಯ ಜಾತಿ
ತಾನೊಂದೆ ವಲಂ

ವೆರಿಯರ್ ಎಲ್ವಿನ್ನರ ಗಿರಿಜನ ಪ್ರಪಂಚ

ಎಚ್. ಎಲ್. ನಾಗೇಗೌಡ

ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನೋತ್ಸವ ಮಾಲಿಕೆ ಪ್ರಕಟಣೆ

ವೆರಿಯರ್ ಎಲ್ವಿನ್ನರ

ಗಿರಿಜನ ಪ್ರಪಂಚ

ಎಚ್.ಎಲ್. ನಾಗೇಗೌಡ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು- ೫೬೦೦೧೮

Kannada Sahitya Parishattu Centenary Publication

ವೆರಿಯರ್ ಎಲ್ವಿನ್ನರ ಗಿರಿಜನ ಪ್ರಪಂಚ

ಹೆಚ್.ಎಲ್. ನಾಗೇಗೌಡ

ಪ್ರಕಾಶಕರು :

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ
ಚಾಮರಾಜಪೇಟೆ
ಬೆಂಗಳೂರು – ೫೬೦ ೦೧೮

ಮುಖಪುಟ ವಿನ್ಯಾಸ : ಶ್ರೀ ಸುದೇಶ್ ಮಹಾನ್
ಪುಟಗಳು : ೩೧೭
ಮುದ್ರಣ ಕಾಗದ : ೮೦ ಜಿ.ಎಸ್.ಎಂ. ಎನ್.ಎಸ್.ಮ್ಯಾಪ್‌ಲಿಥೋ
ಬೆಲೆ : ೧೬೦=೦೦
ಮೊದಲನೆಯ ಆವೃತ್ತಿ : ೧೯೬೭
ಎರಡನೆಯ ಆವೃತ್ತಿ : ೧೯೭೯
ಮೂರನೆಯ ಆವೃತ್ತಿ : ೨೦೦೪
ಪರಿಷತ್ತಿನಿಂದ ಮುದ್ರಣ: ೨೦೧೪
ಪ್ರತಿಗಳು : ೧೦೦೦

ಮುದ್ರಣ
ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್
೩/೪, ಮೊದಲನೇ ಮುಖ್ಯರಸ್ತೆ
ನ್ಯೂ ತರಗುಪೇಟೆ
ಬೆಂಗಳೂರು – ೫೬೦ ೦೦೨.

ISBN - 978-93-82446-53-8

VERRIER ELWINNARA GIRIJANA PRAPANCHA - Kannada Translation of THE TRIBAL WORLD OF VERRIER ELWIN- by H.L. Nagegowda

published by :

Kannada Sahitya Parishattu
Pampa Mahakavi Road
Chamarajapete
Bengaluru - 560018

Cover Page : Sri Sudesh Mahan
pages : 317
Paper : 80 GS.M. N.S. Maplitho
Rs : 160=00
First Edition : 1967
Second Edition : 1979
Third Edition : 2004
Edition by Parishattu : 2014
Copies : 1000

printed at

Omkar Offset Printers
3/4, 1st Main Road
New Taragupete
Bengaluru - 560002.

ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನೋತ್ಸವ ಕೃತಿಗಳ ಆಯ್ಕೆ ಸಮಿತಿ

ಅಧ್ಯಕ್ಷರು

ಶ್ರೀ ಪುಂಡಲೀಕ ಹಾಲಂಬಿ

ಸದಸ್ಯರು

ಡಾ. ಸಿದ್ಧಲಿಂಗಯ್ಯ

ಪ್ರೊ. ಜಿ. ಅಶ್ವತ್ಥನಾರಾಯಣ

ಡಾ. ಶ್ಯಾಮಸುಂದರ ಬಿದರಕುಂದಿ

ಡಾ. ತಾರಿಣಿ ಶುಭದಾಯಿನಿ

ಡಾ. ಮಾಧವ ಪೆರಾಜೆ

ಶ್ರೀ ಸಿ.ಕೆ. ರಾಮೇಗೌಡ, **ಗೌರವ ಕಾರ್ಯದರ್ಶಿ, ಕ.ಸಾ.ಪ.**

ಡಾ. ರಾಜಶೇಖರ ಹತಗುಂದಿ, **ಗೌರವ ಕಾರ್ಯದರ್ಶಿ, ಕ.ಸಾ.ಪ.**

ಶ್ರೀ ಪಿ. ಮಲ್ಲಿಕಾರ್ಜುನಪ್ಪ, **ಗೌರವ ಕೋಶಾಧ್ಯಕ್ಷ, ಕ.ಸಾ.ಪ.**

ಪ್ರಕಟಣಾ ಸಮಿತಿ ಸಂಚಾಲಕ

ಶ್ರೀ ಜೆ.ಎನ್. ಶಾಮರಾವ್

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
ಕಾರ್ಯಕಾರಿ ಸಮಿತಿ

ಶ್ರೀ ಪುಂಡಲೀಕ ಹಾಲಂಬಿ., ಅಧ್ಯಕ್ಷರು

ಶ್ರೀ ಸಿ.ಕೆ. ರಾಮೇಗೌಡ, ಗೌರವ ಕಾರ್ಯದರ್ಶಿ

ಡಾ. ರಾಜಶೇಖರ ಹತಗುಂದಿ, ಗೌರವ ಕಾರ್ಯದರ್ಶಿ

ಶ್ರೀ ಪಿ. ಮಲ್ಲಿಕಾರ್ಜುನಪ್ಪ, ಗೌರವ ಕೋಶಾಧ್ಯಕ್ಷ

ಶ್ರೀ ಟಿ. ತಿಮ್ಮೇಶ್, ಬೆಂಗಳೂರು ನಗರ

ಶ್ರೀ ಹುಲಿಕಲ್ ನಟರಾಜ್, ಬೆಂ. ಗ್ರಾಮಾಂತರ

ಶ್ರೀ ಬಿ.ಟಿ. ನಾಗೇಶ್, ರಾಮನಗರ

ಶ್ರೀ ಜೆ.ಜಿ. ನಾಗರಾಜ, ಕೋಲಾರ

ಶ್ರೀ ವೈ.ಎಲ್. ಹನುಮಂತರಾವ್, ಚಿಕ್ಕಬಳ್ಳಾಪುರ

ಡಾ. ಸೋ.ಮು. ಭಾಸ್ಕರಾಚಾರ್ಯ, ತುಮಕೂರು

ಶ್ರೀ ಆರ್. ಮಲ್ಲಿಕಾರ್ಜುನಯ್ಯ, ಚಿತ್ರದುರ್ಗ

ಶ್ರೀ ಎ.ಆರ್. ಉಜ್ಜನಪ್ಪ, ದಾವಣಗೆರೆ

ಶ್ರೀ ಡಿ.ಮಂಜುನಾಥ್, ಶಿವಮೊಗ್ಗ

ಡಾ. ಎಂ. ಚಂದ್ರಶೇಖರ್, ಮೈಸೂರು

ಶ್ರೀ ಸೋಮಶೇಖರ ಬಿಸಲ್ವಾಡಿ, ಚಾಮರಾಜನಗರ

ಶ್ರೀಮತಿ ಮೀರಾ ಶಿವಲಿಂಗಯ್ಯ, ಮಂಡ್ಯ

ಡಾ. ಎಚ್.ಎಲ್. ಜನಾರ್ಧನ, ಹಾಸನ

ಶ್ರೀ ಟಿ.ಪಿ.ರಮೇಶ್, ಕೊಡಗು

ಶ್ರೀ ಎನ್.ಎಸ್. ಶಿವಸ್ವಾಮಿ, ಚಿಕ್ಕಮಗಳೂರು

ಶ್ರೀ ನೀಲಾವರ ಸುರೇಂದ್ರ ಅಡಿಗ, ಉಡುಪಿ

ಶ್ರೀ ಎಸ್.ಪ್ರದೀಪಕುಮಾರ ಕಲ್ಕೂರ, ದಕ್ಷಿಣ ಕನ್ನಡ

ಶ್ರೀ ಯ.ರು. ಪಾಟೀಲ, ಬೆಳಗಾವಿ

ಶ್ರೀ ಮಲ್ಲಿಕಾರ್ಜುನ ಅಯ್ಯಪ್ಪ ಯಂಡಿಗೇರಿ, ವಿಜಾಪುರ

ಡಾ. ವಿಜಯಕುಮಾರ ಕಟಗಿಹಳ್ಳಿಮಠ, ಬಾಗಲಕೋಟೆ

ಡಾ. ಲಿಂಗರಾಜ ರು. ಅಂಗಡಿ, ಧಾರವಾಡ

ಶ್ರೀ ಗುರುಶಾಂತಪ್ಪ ಬಿ. ಮಾಸಣಗಿ, ಹಾವೇರಿ

ಡಾ. ಶಿವಪ್ಪ ಮರಿಬಸಪ್ಪ ಕುರಿ, ಗದಗ

ಶ್ರೀ ರೋಹಿದಾಸ ನಾಯಕ, ಉತ್ತರ ಕನ್ನಡ

ಶ್ರೀ ಮಹಿಪಾಲರೆಡ್ಡಿ ಮುನ್ನೂರ, ಗುಲ್ಬರ್ಗ

ಶ್ರೀ ಸಿದ್ದಪ್ಪ ಎಸ್. ಹೊಟ್ಟಿ, ಯಾದಗಿರಿ

ಪ್ರೊ. ಸಿದ್ರಾಮಪ್ಪ ಮಾಸಿಮಾಡೆ, ಬೀದರ್

ಶ್ರೀ ಮಹಾಂತೇಶ ಮಸ್ಕಿ, ರಾಯಚೂರು

ಶ್ರೀ ವೀರಪ್ಪ ಮ. ನಿಂಗೋಜಿ, ಕೊಪ್ಪಳ

ಶ್ರೀ ಸಿರಿಗೇರಿ ಯರ್‍ರಿಸ್ವಾಮಿ, ಬಳ್ಳಾರಿ

ಶ್ರೀ ಎಚ್.ಬಿ.ಎಲ್.ರಾವ್, ಮಹಾರಾಷ್ಟ್ರ

ಶ್ರೀ ಎಚ್.ಬಿ. ಶಿವಕುಮಾರ್, ಆಂಧ್ರ ಪ್ರದೇಶ

ಶ್ರೀ ಕೆ.ಪಿ.ಆಚಾರ್ಯ, ತಮಿಳುನಾಡು

ಶ್ರೀ ಸುಬ್ರಹ್ಮಣ್ಯ ವಿ.ಭಟ್, ಕೇರಳ

ಡಾ. ನಾ. ಡಿಸೋಜ
೮೦ನೇ ಅ.ಭಾ.ಕ.ಸಾ. ಸಮ್ಮೇಳನಾಧ್ಯಕ್ಷರು

ಡಾ. ನಲ್ಲೂರು ಪ್ರಸಾದ್ ಆರ್.ಕೆ.
ನಿಕಟಪೂರ್ವ ಅಧ್ಯಕ್ಷರು

ಡಾ. ವಿಜಯದೇವಿ ಎಸ್.ಎಸ್.
ಮಹಿಳಾ ವಿ.ವಿ. ಪ್ರತಿನಿಧಿ

ಡಾ. ತಂಬಂಡ ವಿಜಯ್ ಪೂಣಚ್ಚ
ಕನ್ನಡ ವಿ.ವಿ.ಪ್ರತಿನಿಧಿ

ಶ್ರೀ ಕೆ.ಎ. ದಯಾನಂದ,
ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಶ್ರೀಮತಿ ಬಿ.ಟಿ. ಲಲಿತಾ ನಾಯಕ್
ಮಹಿಳಾ ಪ್ರತಿನಿಧಿ

ಡಾ. ಕಾ.ವೆಂ. ಶ್ರೀನಿವಾಸಮೂರ್ತಿ
ಪರಿಶಿಷ್ಟ ಜಾತಿ ಪ್ರತಿನಿಧಿ

ಶ್ರೀ ಬಿ.ಎಚ್. ಸತೀಶ್‌ಗೌಡ
ಸಂಘಸಂಸ್ಥೆಗಳ ಪ್ರತಿನಿಧಿ

ಅಧ್ಯಕ್ಷರ ಮಾತು

ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು ಶತಮಾನೋತ್ಸವವನ್ನು ಆಚರಿಸಿಕೊಳ್ಳುತ್ತಿರುವುದು ಹೆಮ್ಮೆಯ ವಿಷಯ. ನಾಡು, ನುಡಿ, ಸಾಹಿತ್ಯಕ್ಕೆ ಪ್ರೇರಕಶಕ್ತಿಯಾಗಿ ಹಾಗೂ ಪೋಷಕವಾಗಿ ದುಡಿಯುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತು ೫-೫-೧೯೧೫ರಂದು ಅಂದಿನ ಮೈಸೂರು ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರು ಹಾಗೂ ದಿವಾನ್‌ರಾಗಿದ್ದ ಸರ್.ಎಂ. ವಿಶ್ವೇಶ್ವರಯ್ಯನವರ ಪ್ರಯತ್ನದ ಫಲವಾಗಿ ಸಂಸ್ಥಾಪನೆಗೊಂಡಿತು. ಈವರೆಗೆ ೨೪ ಜನ ಅಧ್ಯಕ್ಷರು ಪರಿಷತ್ತಿನ ಸೇವೆ ಸಲ್ಲಿಸಿದ್ದಾರೆ. ೮೧ ಅಖಿಲ ಭಾರತ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷತೆಯನ್ನು ೭೯ ಜನ ಮಹಾನ್ ಲೇಖಕರು ಅಲಂಕರಿಸಿದ್ದಾರೆ. ೮೩ ಜನ ಸದಸ್ಯರಿಂದ ಆರಂಭಗೊಂಡ ಪರಿಷತ್ತಿನ ಇಂದಿನ ಸದಸ್ಯರ ಸಂಖ್ಯೆ ೨,೦೩,೦೦೦. ಪರಿಷತ್ತಿನ ಪ್ರಕಟಣೆಗಳ ಸಂಖ್ಯೆ ೧೪೨೪. ಕೇವಲ ಅಂಕಿಸಂಖ್ಯೆಯ ದೃಷ್ಟಿಯಿಂದಲೇ ಕನ್ನಡ ಸಾಹಿತ್ಯ ಪರಿಷತ್ತಿನ ಸಾಧನೆ ಅನನ್ಯವಾದುದು; ಇನ್ನು ಕನ್ನಡ ಸಾರಸ್ವತ ಲೋಕಕ್ಕೆ ನೀಡಿದ ಕೊಡುಗೆಯಂತೂ ಅವಿಸ್ಮರಣೀಯವಾದುದು.

ಈ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನೋತ್ಸವದ ಅಂಗವಾಗಿ ಕೆಲವೊಂದು ಮಹತ್ವದ ಯೋಜನೆಗಳನ್ನು ಪರಿಷತ್ತು ಕೈಗೊಂಡಿರುತ್ತದೆ. ಮೊದಲನೆಯದಾಗಿ, ಎರಡು ಶತಮಾನಗಳಿಗೂ ಮೀರಿದ ಅವಧಿಯ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಗಳ ರಚನೆ ಹಾಗೂ ಪ್ರಕಟಣೆ. ಈ ೧೭ ಸಂಪುಟಗಳ ರಚನೆಯ ಕಾರ್ಯದಲ್ಲಿ ಈಗಾಗಲೇ ಪರಿಣತ ಸಂಪಾದಕರು ಹಾಗೂ ನೂರಾರು ಲೇಖಕರು ಕ್ರಿಯಾಶೀಲರಾಗಿದ್ದಾರೆ. ಎರಡನೆಯದಾಗಿ, ಪರಿಷತ್ತಿನ ನೂರರ ಸಂಭ್ರಮಕ್ಕೆ ಕಿರೀಟಪ್ರಾಯವಾಗಿ ಕನ್ನಡದ ನೂರು ಮೌಲಿಕ ಗ್ರಂಥಗಳ ಮುದ್ರಣ. ಜೊತೆಗೆ, ಪರಿಷತ್ತಿನ ನೂರು ವರ್ಷಗಳ ಇತಿಹಾಸವನ್ನು ದಾಖಲಿಸುವ ನೆನಪಿನ ಸಂಪುಟದ ಪ್ರಕಟಣೆ.

'ಕನ್ನಡ ಸಾಹಿತ್ಯ ಪರಿಷತ್ತು ಶತಮಾನ : ಕೃತಿ ನೂರು' ಎಂಬ ಯೋಜನೆಯಡಿ ಪುಸ್ತಕಗಳ ಆಯ್ಕೆಗೆ ಪರಿಣತರ ಸಮಿತಿಯನ್ನು ರಚಿಸಲಾಯಿತು. ಈ ಆಯ್ಕೆ ಸಮಿತಿಯು ನೂರು ಪುಸ್ತಕಗಳನ್ನು ಆಯ್ಕೆಮಾಡಿ ಕೊಟ್ಟಿರುತ್ತದೆ. ಕನ್ನಡ ಸಾಹಿತ್ಯದ ವಿವಿಧ ಘಟ್ಟಗಳು, ಚಳುವಳಿಗಳು ಹಾಗೂ ವಿವಿಧ ಸಾಹಿತ್ಯಿಕ ಸಂವೇದನೆಗಳನ್ನು ಆಯ್ಕೆ ಸಮಿತಿಯು ಗಮನದಲ್ಲಿರಿಸಿಕೊಂಡು ನೂರು ಪುಸ್ತಕಗಳನ್ನು ಆಯ್ಕೆ ಮಾಡಿರುತ್ತದೆ. ಇದರಲ್ಲಿ ಸಾಹಿತ್ಯದ ಎಲ್ಲ ಪ್ರಕಾರಗಳಿಗೂ ಪ್ರಾತಿನಿಧ್ಯವಿರುವಂತೆ ಸಹ ನೋಡಿಕೊಳ್ಳಲಾಗಿದೆ. ಪ್ರತಿಭೆ, ಪ್ರಾದೇಶಿಕತೆ ಹಾಗೂ ಸಾಮಾಜಿಕ ನ್ಯಾಯಗಳನ್ನು

ಪರಿಗಣಿಸಲಾಗಿದೆ. ಈಗಾಗಲೇ ಸಮಗ್ರವಾಗಿ ಲಭ್ಯವಿರುವ ಹಾಗೂ ಮತ್ತೆ ಮತ್ತೆ ಪುನರ್‌ಮುದ್ರಿತವಾಗಿರುವ ಕೃತಿಗಳಿಗೆ ಆದ್ಯತೆ ನೀಡಿಲ್ಲವಾಗಿದ್ದರೂ, ಒಟ್ಟಾರೆ ಕನ್ನಡ ಸಾಹಿತ್ಯಕ್ಕೆ ಮಹತ್ವದ ಕೊಡುಗೆ ನೀಡಿರುವ ಲೇಖಕರನ್ನು ಬಹುಮಟ್ಟಿಗೆ ಉಳಿಸಿಕೊಳ್ಳಲಾಗಿದೆ. ಇಂಥ ಮಹತ್ವದ ಪುಸ್ತಕಗಳ ಪಟ್ಟಿಯನ್ನು ಸಿದ್ಧಪಡಿಸಿಕೊಟ್ಟ ಆಯ್ಕೆ ಸಮಿತಿ ಸದಸ್ಯರಾದ ಡಾ. ಸಿದ್ಧಲಿಂಗಯ್ಯ, ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಶ್ಯಾಮಸುಂದರ ಬಿದರಕುಂದಿ, ಡಾ. ರಾಜಶೇಖರ ಹತಗುಂದಿ, ಡಾ. ತಾರಿಣಿ ಶುಭದಾಯಿನಿ ಹಾಗೂ ಡಾ. ಮಾಧವ ಪೆರಾಜೆ ಅವರಿಗೆ ನನ್ನ ಕೃತಜ್ಞತೆಗಳು.

ಈ ನೂರು ಕೃತಿಗಳನ್ನು ಏಕ ಚೌಕಟ್ಟಿನಲ್ಲಿ, ಆದರೆ ವಿವಿಧ ಕಲಾವಿನ್ಯಾಸಗಳಲ್ಲಿ ಮುದ್ರಿಸಲು ಸಹ ಯೋಜಿಸಲಾಗಿದೆ. ಸಾಧ್ಯವಾದ ಮಟ್ಟಿಗೂ ಒಟ್ಟಾರೆ ಗುಣಮಟ್ಟದಲ್ಲಿ ಏಕರೂಪತೆಯನ್ನು ಉಳಿಸಿಕೊಳ್ಳಲು ಪ್ರಯತ್ನಿಸಲಾಗಿದೆ.

ಪರಿಷತ್ತಿನ ಯೋಜನೆಯಡಿ ಹೆಚ್.ಎಲ್. ನಾಗೇಗೌಡರ ಈ ಕೃತಿಯನ್ನು ಪುನರ್‌ಮುದ್ರಿಸಲು ಅನುಮತಿಯನ್ನು ಕೋರಿದಾಗ, ಪರಿಷತ್ತಿನ ಮೇಲಿನ ಗೌರವದಿಂದಾಗಿ ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಟಿ. ತಿಮ್ಮೇಗೌಡ ಅವರು ಹಾಗೂ ಅದರ ಮ್ಯಾನೇಜಿಂಗ್ ಟ್ರಸ್ಟಿಯಾದ ಶ್ರೀಮತಿ ಇಂದಿರಾ ಬಾಲಕೃಷ್ಣ ಅವರು ತಮ್ಮ ಒಪ್ಪಿಗೆಯನ್ನು ನೀಡಿ ಹೃತ್ಪೂರ್ವಕವಾಗಿ ಸಹಕರಿಸಿದ್ದಾರೆ. ಅವರಿಗೆ ನನ್ನ ಗೌರವಪೂರ್ವಕ ಕೃತಜ್ಞತೆಗಳು.

ಈ ಮೊದಲ ಕಂತಿನ ಪುಸ್ತಕಗಳನ್ನು ಅಂದವಾಗಿ ಮುದ್ರಿಸಿಕೊಟ್ಟ ಮೆ॥ ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್ ಅವರಿಗೆ ನನ್ನ ಕೃತಜ್ಞತೆಗಳು.

ಪುಂಡಲೀಕ ಹಾಲಂಬಿ
ಅಧ್ಯಕ್ಷರು

ದಿನಾಂಕ : ೨೧.೭.೨೦೧೪
ಬೆಂಗಳೂರು

ಮುನ್ನುಡಿ
(ಮೊದಲನೆಯ ಮುದ್ರಣಕ್ಕೆ)

ವೆರಿಯರ್ ಎಲ್ವಿನರ 'ಗಿರಿಜನ ಪ್ರಪಂಚ'ವೆಂಬ ಈ ಗ್ರಂಥಕ್ಕೆ ಮುನ್ನುಡಿಯ ನಾಲ್ಕು ಮಾತುಗಳನ್ನು ನಾನು ಬರೆಯಬೇಕೆಂಬುದಾಗಿ ಮಿತ್ರರಾದ ಶ್ರೀ ನಾಗೇಗೌಡರವರು ಅಪೇಕ್ಷಿಸಿದ್ದಾರೆ. ಈ ಅಪೇಕ್ಷೆ ಅವರ ಸೌಜನ್ಯವನ್ನೂ, ನನ್ನ ಮೇಲೆ ಅವರು ಇರಿಸಿರುವ ವಿಶ್ವಾಸವನ್ನೂ ಸೂಚಿಸುತ್ತದೆಯೇ ಹೊರತು ನನ್ನ ಮುನ್ನುಡಿಯ ಆವಶ್ಯಕತೆಯನ್ನು ಸೂಚಿಸುವುದಿಲ್ಲ. ವೆರಿಯರ್ ಎಲ್ವಿನರ ಆತ್ಮಕಥನವನ್ನು ಸಂಗ್ರಹವಾಗಿ ಅನುವಾದಿಸುತ್ತಿರುವಾಗ ಮೂಲ ಗ್ರಂಥಕಾರರ ಹಿರಿಮೆಗೆ ನನ್ನ ಮುನ್ನುಡಿಯ ಆವಶ್ಯಕತೆಯೇ ಇಲ್ಲ. ಇನ್ನು ಅನುವಾದಕರ ವಿಚಾರ. ಶ್ರೀ ನಾಗೇಗೌಡರವರು ಸ್ವಂತ ಕೃತಿಗಳನ್ನು ಕನ್ನಡದಲ್ಲಿ ರಚಿಸಿದವರು. ಅದರ ಜತೆಗೆ ಭಾರತಕ್ಕೆ ಬಂದ ಅನೇಕ ಪ್ರವಾಸಿಗಳ ವಿಶಾಲ ಸಾಹಿತ್ಯವನ್ನು ಕನ್ನಡಿಗರಿಗೆ ಅನುವಾದಿಸುವ ಸಾಹಸದಿಂದ ಕನ್ನಡದ ಜನಕ್ಕೆ ಭಾರತದ ವಿಚಾರದಲ್ಲಿ ಪರಕೀಯರ ದೃಷ್ಟಿ ಹೇಗಿತ್ತೆಂದು ಸಮರ್ಥ ರೀತಿಯಿಂದ ತೋರಿಸಿಕೊಟ್ಟಿದ್ದಾರೆ.

ಗಿರಿಜನ ಪ್ರಪಂಚದ ಸಂಗ್ರಹಾನುವಾದವನ್ನು ಆಮೂಲಾಗ್ರವಾಗಿ ಓದಿದಾಗ ವಿಷಯ ಮತ್ತು ಭಾಷೆಗಳ ಓಟ ನನ್ನನ್ನು ಮುಗ್ಧನನ್ನಾಗಿ ಮಾಡಿತು. ಮೂಲ ಲೇಖಕರೇ ಕನ್ನಡದಲ್ಲಿ ಬರೆದಷ್ಟು ಓಜಸ್ಸು ಇದರಲ್ಲಿ ಕಂಡುಬರುತ್ತದೆ. ಶ್ರೀ ನಾಗೇಗೌಡರ ಬಗೆಗೂ ಇದರ ಪ್ರಕಾಶಕರ ಬಗೆಗೂ ಹೇಳಬಹುದಾದ ಮಾತಿದ್ದರೆ ಇದು– "ನೀವು ಕನ್ನಡಕ್ಕೆ ಅತ್ಯಮೂಲ್ಯವಾದ ಒಂದು ಆತ್ಮಕತೆಯನ್ನು ಅರ್ಪಿಸಿದ್ದೀರಿ' ಎಂದಿಷ್ಟೇ ಹೇಳಬೇಕು.

ಗ್ರಂಥದ ಪ್ರಸ್ತಾವನೆಯಾಗಿ ಭಾರತಕ್ಕೆ ಬಂದುಹೋದ ಅನೇಕ ಕ್ರೈಸ್ತಮತ ಪ್ರಸಾರಕರ ಚರಿತ್ರೆ ಮತ್ತು ಚಟುವಟಿಕೆಗಳನ್ನು ಶ್ರೀ ನಾಗೇಗೌಡರು ತಿಳಿಸಿದ್ದಾರೆ. ಅನಂತರ ಎಲ್ವಿನರ ಮಾತಿನಲ್ಲಿ ಆತ್ಮಕಥನ ತೊಡಗುತ್ತದೆ. ಆತ್ಮಕಥನವೆಂದ ಬಳಿಕ ಬಾಲ್ಯದಿಂದ ಅವರ ಪ್ರಬುದ್ಧ ಜೀವನದ ಯಾವತ್ತು ಚಟುವಟಿಕೆಗಳೂ ಇಲ್ಲಿ ನಿವೇದನೆಗೊಂಡಿವೆ.

ಆದರೆ ಭಾರತಕ್ಕೆ ಬಂದ ಕ್ರೈಸ್ತಮತ ಪ್ರಸಾರಾಕಾಂಕ್ಷಿಗಳಾದ ಅನ್ಯಪಾದ್ರಿಗಳ ಜೀವನಕ್ಕೂ ವೆರಿಯರ್ ಎಲ್ವಿನರ ಜೀವನಕ್ಕೂ ಭೂಮಿ ಆಕಾಶಗಳಷ್ಟು ಅಂತರವಿದೆ. ಕ್ರೈಸ್ತ ಕುಟುಂಬದಲ್ಲೇ ಹುಟ್ಟಿ, ಪಾದ್ರಿಯಾಗಿಯೇ ತಿದ್ದಿ, ಭಾರತಕ್ಕೆ ಬಂದ ಅವರ ಮನಸ್ಸಿನಲ್ಲಿ ಸಾಹಿತ್ಯ ಮತ್ತು ಸತ್ಯಾನ್ವೇಷಣೆಯ ಬುದ್ಧಿ ಯಾವ ರೀತಿಯಿಂದ ಅರಳಿ ಸಫಲವಾಯಿತು ಎಂಬುದರ ಬಲು ಸುಂದರ ಚರಿತ್ರೆಯಿದು.

ಇಲ್ಲಿನ ಜನರ ಪ್ರಭಾವ, ಮತಧರ್ಮಗಳ ಪ್ರಭಾವ, ದೇಶಪ್ರೇಮ, ಮಾನವನ ಸ್ವಾತಂತ್ರ್ಯಾಪೇಕ್ಷೆ ಮೊದಲಾದ ವಿವಿಧ ವರ್ಚಸ್ಸುಗಳು ಅವರನ್ನೇ ಕ್ರಮವಾಗಿ ಸಂಸ್ಕರಿಸಿದ ರೀತಿ ಕುತೂಹಲದಾಯಕವಾಗಿವೆ. ಮಹಾತ್ಮಾಗಾಂಧೀಜಿಯವರಿಂದ 'ಮಗ'ನೆನ್ನಿಸಿಕೊಂಡ ಎಲ್ವಿನರು ಸತ್ಯ, ಸುಂದರ ಜೀವನಕ್ಕೆ ತೆರೆಗಣ್ಣಿಂದ ಕಾಲಿರಿಸಿದ್ದನ್ನು ಕಾಣುತ್ತೇವೆ. ಮತಬೋಧನೆಯ ಚಪಲ ಕಣ್ಮರೆಯಾದುದನ್ನು ಕಾಣುತ್ತೇವೆ. ಸ್ವಮತೀಯ ಸಂಸ್ಥೆಯಿಂದ ಅವರು ತಮ್ಮ ಬಂಧನ ಕಳಚಿಕೊಂಡುದನ್ನು ಕಾಣುತ್ತೇವೆ. ಭಾರತದ ಮೇಲಿನ ಪ್ರೇಮ ಬ್ರಿಟಿಷ್ ಸರಕಾರದೊಡನೆ ವಿರಸ ಕಲ್ಪಿಸಿದ್ದನ್ನು ಕಾಣುತ್ತೇವೆ. ಅವರು ಭಾರತೀಯರೇ ಆಗಿ ಇಲ್ಲೇ ನೆಲೆಸಿ ಇಲ್ಲೇ ಮಡಿದುದನ್ನು ಕಾಣುತ್ತೇವೆ.

ಆ ಆತ್ಮಕಥನದ ಜತೆಗೆ ಮಾನವಶಾಸ್ತ್ರದ ಆಳವಾದ ಪ್ರಜ್ಞೆ ಹುದುಗಿದೆ. ನಮಗೇ ನಮ್ಮ ಗಿರಿಜನರ ತಿಳಿವು ಸಾಲದಾಗ ಈ ಅಭಿಜ್ಞರು ಭಾರತದ ಗೊಂಡ ಮೊದಲಾದ ಹಲವು ಆದಿವಾಸಿ ಕುಲಗಳ ಅಭ್ಯಾಸ ಮಾಡಿದ್ದಲ್ಲದೆ, ಅವರ ಜೀವನವನ್ನು ಅರಿತು ಅವರೊಡನೆ ಬಾಳಿ, ಅವರ ಮಾನಸಿಕ ಹಿನ್ನೆಲೆಯ ಅರಿವನ್ನು ಗಳಿಸಿದರು. ಅವರು ಬರೆದಿರುವ ಹಲವು ಗ್ರಂಥಗಳು ಸಂಸ್ಕೃತಿಯ ಅಭ್ಯಾಸಿಗಳಿಗೆ ಒಂದು ಅಮೂಲ್ಯ ನಿಧಿಯಂತಿವೆ.

ಅವರ ಜೀವನ ನಿಸ್ಪೃಹವಾದ ಒಬ್ಬ ವ್ಯಕ್ತಿ ಸತ್ಯ ಸೌಂದರ್ಯಗಳ ಅನ್ವೇಷಣೆಯಲ್ಲಿ ಇರಿಸಿದ ಗಾಢ ಹೆಜ್ಜೆಗಳು. ಅಂಥ ಧೀಮಂತಿಕೆ, ಬಿಚ್ಚುಮನಸ್ಸು, ಸತ್ಯನಿಷ್ಠೆ, ಔದಾರ್ಯ ಎಷ್ಟು ಮಂದಿಗೆ ಬಂದೀತು?

ಅತ್ಯಂತ ಅಮೂಲ್ಯವಾದ ಈ ಆತ್ಮಕಥನವನ್ನು ಕನ್ನಡಕ್ಕೆ ಒದಗಿಸಿದ ಶ್ರೇಯಸ್ಸು ಶ್ರೀ ನಾಗೇಗೌಡರಿಗೆ ಸಲ್ಲುತ್ತದೆ. ಅದು ಅವರ ಅಪೇಕ್ಷೆಯಲ್ಲಿರದೆ ಹೋದರೂ, ಈ ಗ್ರಂಥ ಕನ್ನಡ ಜನಗಳ ಜೀವನಕ್ಕೆ ಒಂದು ನವೀನ ದೃಷ್ಟಿಯನ್ನು ಒದಗಿಸಬಲ್ಲಷ್ಟು ಶಕ್ತಿಯುತವಾಗಿರುವುದರಿಂದ ಅದರ ಶ್ರೇಯಸ್ಸಿನ ಪಾಲು ಅನುವಾದಕರಿಗೂ ತಪ್ಪಿದ್ದಲ್ಲ.

ಪುತ್ತೂರು, ದ.ಕ.
೨-೨-೧೯೬೭

ಇತಿ
ಶಿವರಾಮ ಕಾರಂತ

ಪ್ರಸ್ತಾವನೆ (ಮೊದಲ ಮುದ್ರಣದಿಂದ)

ಈ ರಮ್ಯ ಆತ್ಮಕಥೆಯ ಕರ್ತೃವಾದ ವೆರಿಯರ್ ಅವರು ಈ ದೇಶಕ್ಕೆ ಒಬ್ಬ ಕ್ರೈಸ್ತ ಪಾದ್ರಿಯಾಗಿ ಬಂದು, ಚರ್ಚನ್ನು ತ್ಯಜಿಸಿ, ಗುಡ್ಡನಾಡುಗಳಲ್ಲಿ ನೆಲೆಸಿ, ಗಿರಿಜನರ ಬಗ್ಗೆ ಅಮೋಘ ಸೇವೆ ಸಲ್ಲಿಸಿದವರು. ಅವರಂಥ ಪಾದ್ರಿಗಳು ವಿದೇಶಿಯರೂ ನೂರಾರು ಜನ ಅನೇಕ ಶತಮಾನಗಳಿಂದ ಈ ದೇಶಕ್ಕೆ ಬಂದಿದ್ದಾರೆ ; ನಾನಾ ಕ್ಷೇತ್ರಗಳಲ್ಲಿ ಅಪಾರ ಸೇವೆ ಸಲ್ಲಿಸಿದ್ದಾರೆ. ಆ ಕಥೆಯನ್ನು ಈ ಸಂದರ್ಭದಲ್ಲಿ ಹೇಳಿದರೆ ಅಪ್ರಕೃತವಾಗಲಾರದು. ಏಕೆಂದರೆ, ಅದು ಎಲ್ವಿನರ ಆತ್ಮಕಥೆಗೆ ಒಂದು ಪೀಠಿಕೆ ಇದ್ದಂತೆ ಆಗುವುದಲ್ಲದೆ, ಅವರ ಆತ್ಮಕಥೆಯ ಹಿನ್ನೆಲೆಯನ್ನು ಅರ್ಥ ಮಾಡಿಕೊಳ್ಳುವುದಕ್ಕೂ ಸಹಾಯವಾಗುತ್ತದೆ.*

---

* ಈ ದೀರ್ಘ ಪ್ರಸ್ತಾವನಾ ಲೇಖನವನ್ನು ತಯಾರಿಸುವುದರಲ್ಲಿ ಈ ಕೆಳಗೆ ಕಂಡ ಗ್ರಂಥಗಳು ಮತ್ತು ಲೇಖನಗಳಿಗೂ, ಶ್ರೀ ಜೀಶಂಪ ಅವರ ಅಮೂಲ್ಯ ಸಲಹೆಗಳಿಗೂ ಕೃತಜ್ಞನಾಗಿದ್ದಾನೆ :

ಗ್ರಂಥಗಳು :

೧. ದೇಶಾಂತರಗಳಲ್ಲಿ ಪ್ರಾಚೀನ ಭಾರತದ ಉಪನಿವೇಶಗಳು (The Foreign Settlements of India) ಬಿ. ವೆಂಕಟಾಚಾರ್ಯ, ಮೈಸೂರು – : 1911

೨. Cristians and Cristianity in India and Pakistan : P. Thomas.

೩. Jesuits in Malabar : D. Ferrol, S.J.

೪. The Printing Press in India : A.K. Priolkar.

೫. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ : ಡಾ॥ ಎಂ. ಚಿದಾನಂದಮೂರ್ತಿ.

ಲೇಖನಗಳು

(ಅ) ಭಾರತದ ಭೂ ಸಂಶೋಧನಾಕಾರ್ಯಕ್ಕೆ ಪಾಶ್ಚಾತ್ಯರ ಕಾಣಿಕೆ : ಡಿ. ಎಸ್. ಅಚ್ಚುತರಾವ್ : ಪ್ರಬುದ್ಧ ಕರ್ಣಾಟಕ ಸಂ. ೩೫–ಸಂಚಿಕೆ ೨.

(ಆ) ರೆವರೆಂಡ್ ಎಫ್. ಕಿಟ್ಟೆಲ್ : ಡಿ.ಎಲ್.ಎನ್. – ಪ್ರಬುದ್ಧ ಕರ್ನಾಟಕ. ಸಂ. ೩೫–ಸಂಚಿಕೆ ೩.

(ಇ) ಕನ್ನಡ ಸಾಹಿತ್ಯದಲ್ಲಿ ನಿಘಂಟುಗಳು : ಶಾಂತಯ್ಯ ಕೆಂಪಯ್ಯ ಮಠ–ಸಂ. ೪೫– ಸಂಚಿಕೆ ೩. ಪ್ರಬುದ್ಧ ಕರ್ನಾಟಕ.

(ಈ) ಸಂಯುಕ್ತ ಬಾಸೆಲ್ ಮಿಷನ್ : ಬಲ್ಮಠ ಶಾಂತಿ ದೇವಾಲಯದ ಶತಮಾನೋತ್ಸವ ಸ್ಮಾರಕ ಸಂಚಿಕೆ : ಮಂಗಳೂರು.

ನಮ್ಮೀ ಭಾರತ ದೇಶ ಸಾವಿರಾರು ವರ್ಷಗಳಿಂದ ದೇಶವಿದೇಶಗಳ ಸಂಪರ್ಕಕ್ಕೆ ಒಳಗಾಯಿತು. ಆ ಸಂಪರ್ಕವೇ ಇಲ್ಲದಿದ್ದರೆ ಈ ದೇಶ ಯಾವ ಸ್ಥಿತಿಯಲ್ಲಿರುತ್ತಿತ್ತು, ನಮ್ಮ ಸಾಹಿತ್ಯ, ಇತಿಹಾಸ, ಸಾಮಾಜಿಕ ಸ್ಥಿತಿಗತಿ, ಆರ್ಥಿಕ ರೀತಿ ನೀತಿ, ಧಾರ್ಮಿಕ ಭಾವನೆ, ನಡೆ ನುಡಿ, ಆಚಾರ ವಿಚಾರ–ಇತ್ಯಾದಿ ನಮ್ಮ ಜೀವನದ ನಾನಾ ಕ್ಷೇತ್ರಗಳು ಯಾವ ಸ್ಥಿತಿಯಲ್ಲಿ ಇರುತ್ತಿದ್ದುವು ಎಂಬುದು ಊಹಾ ಪ್ರಪಂಚದ ಒಂದು ಮಹಾ ವಿಚಾರವಾಗಿ ಪರಿಣಮಿಸುತ್ತಿತ್ತು. ಯಾವ ಭೂಮಿಕೆಯ ಆಧಾರದ ಮೇಲೆ ನಾವು ನಮ್ಮ ಬಾಳನ್ನು ರೂಪಿಸಿಕೊಳ್ಳುತ್ತಿರುವೆವೋ, ನಮ್ಮ ಸಮಸ್ತ ಆಲೋಚನೆಗಳು ಸಾಗುತ್ತಿರುವುವೋ, ಆ ಭೂಮಿಕೆಯೇ ಬದಲಾವಣೆಯಾಗಿ ನಮ್ಮ ಎಲ್ಲಾ ಚಟುವಟಿಕೆಗಳು ಬೇರೊಂದು ದಾರಿ ಹಿಡಿಯುತ್ತಿದ್ದುವು ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಎಲ್ಲಾ ದೇಶಗಳಂತೆ ಈ ದೇಶವೂ ದೇಶವಿದೇಶಗಳ ಸಂಪರ್ಕ ಪಡೆದ ಕಾರಣವಾಗಿ ತನ್ನ ಬಾಳನ್ನು ಈಗಿರುವ ಸ್ಥಿತಿಯಲ್ಲಿ ರೂಢಿಸಿಕೊಳ್ಳದೆ ಉಳಿಯ ಲಾಗಲಿಲ್ಲ.

ನಮಗೆ ಸಿಕ್ಕಿರುವ ದಾಖಲೆಗಳ ಪ್ರಕಾರ ಕ್ರಿ.ಪೂ. ೫೦೦ರಿಂದಲೇ, ಅಂದರೆ ಇಲ್ಲಿಗೆ ೨೫೦೦ ವರ್ಷಗಳಿಂದ ಗ್ರೀಕರು, ಚೀನೀಯರು, ಈಜಿಪ್ಷಿಯನರು, ಅರಬ್ಬರು, ಪೋರ್ಚುಗೀಸರು, ಡಚ್ಚರು, ಫ್ರೆಂಚರು ಮತ್ತು ಇಂಗ್ಲಿಷರು –ಇವರ ಸಂಪರ್ಕ, ಸಹವಾಸ ಮತ್ತು ಅವರ ಆಚಾರ ವಿಚಾರಗಳ ಪ್ರಭಾವಗಳಿಗೆ ಈ ದೇಶ ಒಳಗಾಯಿತು. ಆದರೆ ಅದಕ್ಕಿಂತ ಬಹಳ ಮುನ್ನ ನಮ್ಮವರು ಹೆಚ್ಚು ಕಡಿಮೆ ಪ್ರಪಂಚದ ಎಲ್ಲಾ ಭಾಗಗಳಿಗೂ ಹೋಗಿ ವಸಾಹತುಗಳನ್ನು ಸ್ಥಾಪಿಸಿದ ವಿಷಯ ಪರ್ಯಾಯವಾಗಿ ತಿಳಿದುಬರುತ್ತದೆ. ನಮ್ಮವರು ಯಾರೂ ನೇರವಾಗಿ ತಮ್ಮ ಸಾಹಸದ ಇತಿಹಾಸವನ್ನು ಬರೆದಿಡುವ ಗೋಜಿಗೆ ಹೋಗಲಿಲ್ಲ; ಬರೆದಿದ್ದರೂ ಅವು ಈಗ ಇಲ್ಲ. ಈಗ ನಮಗೆ ಇರುವ ಆಧಾರಗಳೆಂದರೆ ಪುರಾಣಗಳು. ಈ ಪುರಾಣಗಳಲ್ಲಿ ಅಲ್ಲಲ್ಲಿ ಹುಡುಕಿ ತೆಗೆದ ಅಂಶಗಳನ್ನು ದಿವಂಗತ ಬಿ. ವೆಂಕಟಾಚಾರ್ಯರು ೧೯೧೧ರಲ್ಲಿ ಪ್ರಕಟಿಸಿದ 'ದೇಶಾಂತರಗಳಲ್ಲಿ ಪ್ರಾಚೀನ ಭಾರತದ ಉಪನಿವೇಶಗಳು' ಎಂಬ ಪುಟ್ಟ ಪುಸ್ತಕದಲ್ಲಿ ತಿಳಿಸಿದ್ದಾರೆ. ಅವರು ಹೇಳುವುದೇನೆಂದರೆ :

'ನಮ್ಮ ಪೂರ್ವಪುರುಷರು ಕೇವಲ ಅಧ್ಯಾತ್ಮ ವಿದ್ಯೆಯಲ್ಲಿಯೇ ಮನವಿಟ್ಟು ಮುಕ್ತಿಯ ಸಲುವಾಗಿಯೇ ಮೂಗನ್ನು ಹಿಡಿದು ಕುಳಿತು ಕಾಲವನ್ನು ಕಳೆದವರಲ್ಲ ವೆಂದು ತಿಳಿಯಬಹುದು. ಅವರು ಬ್ರಹ್ಮವಿದ್ಯೆಯಲ್ಲಿಯೂ ಚರಮೋತ್ಕರ್ಷವನ್ನು ಹೊಂದಿ ಈಗಲೂ ಜ್ಞಾತವಾಗಿರುವ ಭೂಮಂಡಲದಲ್ಲೆಲ್ಲಾ ಅದ್ವಿತೀಯರಾಗಿ ಖ್ಯಾತಿ ಗೊಂಡಿರುವುದಲ್ಲದೆ ನಮ್ಮ ಐಹಿಕ ಸುಖಕ್ಕನುಸಾರ ಸಕಲ ವಿದ್ಯೆಗಳಲ್ಲಿ ಪಾರಂಗತರಾಗಿ ದೂರ ದೂರಾಂತವಾದ ಭೂಮಂಡಲದ ನಾಲ್ಕು ಮಹಾ ಖಂಡಗಳಿಗೆ ಹೋಗಿ ಅನೇಕಾನೇಕ ಉಪನಿವೇಶಗಳನ್ನೂ (Settlements) ಖ್ಯಾತಿಗೊಂಡ ರಾಜ್ಯಗಳನ್ನೂ ಸ್ಥಾಪಿಸಿ ಏಕಾಧಿಪತ್ಯವನ್ನು ಕೈಗೊಂಡು ಪ್ರಜೆಗಳನ್ನು ಸಂತಾನರಂತೆ ಸಲುಹಿ

ಸನ್ಮಾರ್ಗದಲ್ಲಿ ಸುಖವಾಗಿಟ್ಟು ಇಹಪರ ಎರಡಕ್ಕೂ ಯೋಗ್ಯರನ್ನಾಗಿ ಮಾಡುತ್ತಿದ್ದರೆಂತಲೂ ತಿಳಿಯಬಹುದು. ನಮ್ಮ ಪೂರ್ವಪುರುಷರು ಸದಾ ಸರ್ವದಾ ಸಮುದ್ರಯಾನ ಮಾಡುತ್ತಿದ್ದರು. ಅವರ ಸಂತಾನರಾದ ನಾವಾದರೋ ಆವದೋ ಕಾರಣದಿಂದ, ಸಕೃದ್ಭಲ್ಲೂಕ[೧] ಭೀತರಾಗಿ ಕಂಬಳಕ್ಕೂ ಹೆದರುವವರಂತೆ, ಸಮುದ್ರದ ಹೆಸರನ್ನು ಕೇಳಿದರೆ ಹೆದರಿ ಬೆರಗಾಗಿ ನಿಲ್ಲುವವರಾಗಿದ್ದೇವೆ.'

ಮೇಲೆ ಹೇಳಿರುವ ಧೈರ್ಯೋತ್ಸಾಹಗಳು ಈಚಿನವುಗಳಲ್ಲ : ಪುರಾಣಗಳ ಕಥೆಗಳಲ್ಲಿ ಬರುವ ಸಗರ ಚಕ್ರವರ್ತಿಯಿಂದಲೇ ಆರಂಭವಾಗುತ್ತವೆ. ಭಾರತೀಯರ ಸಂಪರ್ಕ ಶ್ರೀಲಂಕಾ, ಶ್ಯಾಮ (ಸಯಾಂ), ಕಾಂಬೋಜ (ಕ್ಯಾಂಬೋಡಿಯಾ), ಯವದ್ವೀಪ (ಜಾವಾ), ಮಲಯಾ, ಬಾಲಿದ್ವೀಪ, ಅಮೆರಿಕಾ, ಮೆಕ್ಸಿಕೋ, ಆಫ್ರಿಕಾ, ಈಜಿಪ್ಟ್, ಸೈಬೀರಿಯಾ. ಫಿನ್‌ಲ್ಯಾಂಡ್, ತುರ್ಕಿ, ಚೀನಾ, ಅರಬ್ಬೀ ದೇಶ, ಪಲೆಸ್ಟೈನ್, ಆರ್ಮೀನಿಯಾ, ಪರ್ಷಿಯಾ, ಗ್ರೀಸ್ ಮುಂತಾದ ದೇಶಗಳಿಗೆಲ್ಲ ಒದಗಿತ್ತು. ಭಾರತೀಯ ಉಪನಿವೇಶಿಕೆಗಳು ವಿದೇಶಗಳಲ್ಲಿ ಸ್ಥಾಪನೆಯಗಿ ಅಲ್ಲಿಯ ಭಾಷೆ, ಸಾಹಿತ್ಯ, ರೀತಿ, ನೀತಿ, ಧರ್ಮ, ವ್ಯಾಪಾರ, ರಾಜ್ಯಶಾಸನ ಮುಂತಾದ ಎಲ್ಲಾ ವಿಷಯಗಳೊಂದಿಗೂ ಹಿಂದುಗಳ ಸಭ್ಯತೆಗೆ ಸಂಬಂಧವಿತ್ತೆಂದು ಗೊತ್ತಾಗುತ್ತದೆ. ಆದರೆ ಈ ಬಗ್ಗೆ ಇನ್ನೂ ಹೆಚ್ಚು ಅಭ್ಯಾಸ ನಡೆಯಬೇಕಾಗಿದೆ. ಸ್ವರ್ಣ ಅಥವಾ ಬಂಗಾರವೆಂಬ ಅರ್ಥವುಳ್ಳ 'ಮಾಕ್ಷಿಕ' ಎಂಬ ಶಬ್ದದ ಅಪಭ್ರಂಶವಾಗಿರಬಹುದಾದ 'ಮೆಕ್ಸಿಕೋ' ದೇಶದ 'ಮಾಯಾ ಸಂಸ್ಕೃತಿ'ಯಲ್ಲಿ ಭಾರತೀಯ ಸಂಸ್ಕೃತಿಯ ಸ್ಪಷ್ಟ ಛಾಯೆಯನ್ನು ಕಾಣಬಹುದೆಂದು ಈಚಿನ ಸಂಶೋಧನೆಗಳಿಂದ ಹೊರಪಟ್ಟ ವಿಚಾರವಾಗಿರುತ್ತದೆ. ಜಾವಾ, ಸುಮಾತ್ರ, ಕ್ಯಾಂಬೋಡಿಯ, ಥೈಲ್ಯಾಂಡ್ ಮುಂತಾದ ಪೂರ್ವದೇಶಗಳಲ್ಲಿಯಂತೂ ಭಾರತೀಯ ಸಂಸ್ಕೃತಿಯ ಕುರುಹುಗಳು ಸ್ಪಷ್ಟವಾಗಿ ಕಾಣುತ್ತಿವೆ.

ಆದರೆ ಹಿಂದೂಗಳು ತಾವು ಕಂಡ ದೇಶಗಳ ಬಗ್ಗೆ, ಅಲ್ಲಿಯ ಜನ ಮತ್ತು ಅವರ ನಡೆನುಡಿಗಳ ಬಗ್ಗೆ ಬರೆದಿಡುವ ತೊಂದರೆ ತೆಗೆದುಕೊಳ್ಳಲಿಲ್ಲ. ಅನೇಕ ರಾಷ್ಟ್ರಗಳ ಜನರನ್ನು ಬೌದ್ಧಮತಕ್ಕೆ ಪರಿವರ್ತನೆ ಮಾಡಲು ಶಕ್ತರಾಗಿದ್ದ ಇಂಡಿಯಾದ ಬೌದ್ಧರೂ ಆ ಕೆಲಸ ಮಾಡಲಿಲ್ಲವೆಂದರೆ ಆಶ್ಚರ್ಯವೇ ಸರಿ. ತಮ್ಮ ಕೆಲಸ ಬೋಧನೆ ಅಷ್ಟೇ ಹೊರತು ಕಲಿಯುವುದಲ್ಲ : ಅಥವಾ ಕಂಡದ್ದನ್ನು ಬರೆದಿಡುವ ಆವಶ್ಯಕತೆ ಇಲ್ಲ ಎಂದು ಭಾವಿಸಿದರೋ ಏನೋ ! ಈ ಕಾರಣವಾಗಿ ಫಾಹಿಯಾನ್, ಹುಯೆನ್‌ತ್ಸಾಂಗ್, ಇಬ್ನೆ ಬತೂತ, ಮಾರ್ಕೊ ಪೋಲೋ ಮುಂತಾದವರ ಸೊಗಸಾದ ಪ್ರವಾಸ ಕಥನಗಳಂಥ ಒಂದು ಪ್ರವಾಸ ಕಥನವೂ ನಮ್ಮಲ್ಲಿ ಇಲ್ಲ. ಪಾಶ್ಚಾತ್ಯರ ಐತಿಹಾಸಿಕ ಪ್ರಜ್ಞೆ ಭಾರತೀಯರಿಗೆ ಏಕೆ ಬರಲಿಲ್ಲವೋ ಗೊತ್ತಾಗುವುದಿಲ್ಲ. ಬೇರೆ

[೧] ಒಮ್ಮೆಲೇ ನಾಯಿ ನರಿಗಳನ್ನು ಕಂಡವರಂತೆ ಭಯಪಡುವುದು. ಕನ್ನಡದ ನಾಯಿ ನರಿಗಳೂ ಕೇವಲ ಇನ್ನೂರು ವರ್ಷಗಳ ಹಿಂದೆ ಸಂಸ್ಕೃತದ ಹೆಸರಿನಲ್ಲಿ ಕರೆಸಿಕೊಳ್ಳಬೇಕಾದರೆ ಅಂದಿನ ಜನಸಾಮಾನ್ಯರ ಕನ್ನಡ ಆಡು ಭಾಷೆ ಬದುಕಿ ಉಳಿದದ್ದೇ ಹೆಚ್ಚು !

ದೇಶದವರು ಇಲ್ಲಿಗೆ ಬಂದು ಇಲ್ಲಿಯ ಜನಜೀವನವನ್ನು ಅಭ್ಯಸಿಸಿ ಅದನ್ನು ಬರೆದಿಟ್ಟರು. ಈ ಕೆಲಸವನ್ನು ಅವರು ತಮ್ಮ ದೇಶದಲ್ಲಿಯಂತೂ ಬೇಕಾದಷ್ಟು ಮಾಡಿದ್ದಾರೆ. ಆದರೆ ನಮ್ಮವರು ಪರದೇಶದ ವಿಷಯಗಳನ್ನು ಬರೆದಿಡುವುದು ಹೋಗಲಿ, ತಮ್ಮ ದೇಶದ ನೈಜಚಿತ್ರವನ್ನೇ ಬರೆದಿಡುವ ಗೋಜಿಗೆ ಹೋಗಲಿಲ್ಲ. ಅಷ್ಟು ಇಷ್ಟು ಹೇಳಿರುವುದನ್ನು ಆಲಂಕಾರಿಕವಾಗಿ, ಛಂದೋಬದ್ಧವಾಗಿ ಹೇಳಿರುವುದರಿಂದ ಅದರಲ್ಲಿ ಕಟ್ಟುಕಥೆ ಎಷ್ಟು, ವಾಸ್ತವಾಂಶ ಎಷ್ಟು ಎಂಬುದನ್ನು ತಿಳಿಯುವುದೇ ಕಷ್ಟವಾಗಿದೆ. ಹೀಗಾಗಿ ಪ್ರಾಚೀನ ಭಾರತೀಯರು ಅಪಾರ ಆಸಕ್ತಿವಹಿಸಿ ಅತಿ ಗಹನವಾದ ಅನೇಕ ವಿಷಯಗಳ ಬಗ್ಗೆ ಅಪಾರ ಸಾಹಿತ್ಯವನ್ನು ಬಿಟ್ಟುಹೋಗಿದ್ದರೂ ಅಪ್ಪಟ ಇತಿಹಾಸವನ್ನು ಕುರಿತ ಒಂದು ಪುಸ್ತಕವನ್ನೂ ಬರೆದಿಡಲಿಲ್ಲ.

ನಮ್ಮ ಪೂರ್ವಿಕರು ಪರದೇಶಗಳಲ್ಲಿ ವಹಿಸಿದ ಆಸಕ್ತಿ ಮಧ್ಯಯುಗದಲ್ಲಿ ನಿಂತೇಹೋಯಿತು. ನಮ್ಮವರು ಸಮುದ್ರವನ್ನು ದಾಟಕೂಡದೆಂದು ದಿಗ್ಬಂಧನ ಹಾಕಲಾಯಿತು. ಇದನ್ನೆಲ್ಲ ಕಂಡೇ ಆಲ್ಬೆರೂನಿ ಎಂಬ ಮುಸ್ಲಿಂ ಪಂಡಿತ " ಈ ಜನ ಹೊರಗಡೆ ಸಂಚಾರಮಾಡಿ ಇತರ ರಾಷ್ಟ್ರಗಳೊಡನೆ ಸಂಪರ್ಕ ಬೆಳೆಸಿದ್ದರೆ ತಮ್ಮ ಮನಸ್ಸನ್ನು ಬದಲಾಯಿಸಿಕೊಳ್ಳಲು ಸಾಧ್ಯವಾಗುತ್ತಿತ್ತು. ಇವರ ಪೂರ್ವಿಕರು ಇವರಷ್ಟು ಸಂಕುಚಿತ ಬುದ್ಧಿಯವರಾಗಿರಲಿಲ್ಲ. ಏಕೆಂದರೆ ಅವರು ಹೊರಗಡೆ ಸಂಚಾರಮಾಡಿ ಸಂಪರ್ಕ ಬೆಳೆಸಿಕೊಂಡಿದ್ದರು" ಎಂದು ಉದ್ಗಾರ ಎತ್ತಿದ್ದಾನೆ.

ಹೀಗೆ ನಮ್ಮ ಸಂಪರ್ಕದಿಂದ ಪ್ರಪಂಚದ ಬೇರೆ ದೇಶಗಳ ಮೇಲೆ ಯಾವ ಯಾವ ಪರಿಣಾಮವಾಗಿದೆ ಎಂಬುದು ಇನ್ನೂ ಅಭ್ಯಾಸಮಾಡಬೇಕಾದ ವಿಚಾರವಾದರೂ, ನಮ್ಮ ಮೇಲೆ ಬೇರೆ ದೇಶದ ಸಂಪರ್ಕ ಯಾವ ಪರಿಣಾಮವನ್ನುಂಟುಮಾಡಿದೆ ಎಂಬುದು ಸ್ಪಷ್ಟವಾಗಿದೆ.

ಮೊದಮೊದಲು ಆದ ಸಂಪರ್ಕದಿಂದ ಅಷ್ಟೊಂದು ಪರಿಣಾಮ ಕಂಡುಬರದಿದ್ದರೂ ಕಳೆದ ಸಾವಿರ ವರ್ಷಗಳಲ್ಲಿ ಆದ ಪರಿಣಾಮ ಸ್ಪಷ್ಟವಾಗಿ ತೋರಿಬರುತ್ತಿದೆ. ಇಸ್ಲಾಂಮತ ಮತ್ತು ಆ ಮತಕ್ಕೆ ಸೇರಿದ ರಾಜಮಹಾರಾಜರು ಮತ್ತು ಚಕ್ರವರ್ತಿಗಳು ಇಲ್ಲಿ ಆಳಿದ ಕಾರಣವಾಗಿ ಶಿಲ್ಪ, ಭಾಷೆ ಹಾಗೂ ಸಾಹಿತ್ಯ ಕ್ಷೇತ್ರಗಳಲ್ಲಿ ಆದ ಅದರ ಪ್ರಭಾವವನ್ನು ಕಾಣುತ್ತಿದ್ದೇವೆ. ಆದರೆ ಮಹತ್ತರವಾದ ಪರಿಣಾಮ ಕಂಡುಬರುವುದು ಯೂರೋಪಿನ ರಾಜ್ಯಗಳಾದ ಪೋರ್ಚುಗಲ್ ಮತ್ತು ಇಂಗ್ಲೆಂಡ್ ದೇಶಗಳು ಈ ದೇಶಕ್ಕೆ ಕಾಲಿಟ್ಟಾಗಿನಿಂದ.

ಪೋರ್ಚುಗೀಸರು ಈ ದೇಶಕ್ಕೆ ಬಂದದ್ದು ವ್ಯಾಪಾರಕ್ಕಾಗಿ ಮತ್ತು ಕ್ರೈಸ್ತಮತ ಪ್ರಸಾರಕ್ಕಾಗಿ. ಅವರು ಮೊದಮೊದಲು ಒತ್ತಾಯದಿಂದ ಹಾಗೂ ಕತ್ತಿಯ ಬಲದಿಂದ ಜನರನ್ನು ಕ್ರೈಸ್ತಮತಕ್ಕೆ ಪರಿವರ್ತನೆ ಮಾಡಿದರು. ಆದರೆ ಅದು ಅಷ್ಟು ಸೂಕ್ತವಲ್ಲ ಎಂದು ಅರಿತ ಮೇಲೆ ಬೋಧನೆಯಿಂದ ಮತಪರಿವರ್ತನೆ ಮಾಡಲಾರಂಭಿಸಿದರು. ಬೋಧನೆ ಮಾಡಲು ಇಲ್ಲಿಯ ಜನರ ಭಾಷೆ, ನಡೆನುಡಿ ಮುಂತಾದವುಗಳನ್ನು

ಅರಿಯುವುದು ಅನಿವಾರ್ಯವಾಯಿತು. ಈ ಕಾರಣದಿಂದ ಬರುಬರುತ್ತಾ ಕ್ರೈಸ್ತಪಾದ್ರಿಗಳೂ ಅವರ ಜೊತೆಗೆ ಬಂದ ಇತರ ಯೂರೋಪಿಯನರೂ ಇಲ್ಲಿಯ ಜನಜೀವನದ ಅಭ್ಯಾಸದಲ್ಲಿ ಮಗ್ನರಾದುದಷ್ಟೇ ಅಲ್ಲದೆ, ಆ ಅಭ್ಯಾಸದ ಫಲವಾಗಿ ನಮಗೆ ಅಪಾರ ಕೊಡುಗೆಯನ್ನಿತ್ತು ಮಹೋಪಕಾರ ಮಾಡಿದ್ದಾರೆ. ಈ ಕಾರಣ ಕ್ರೈಸ್ತಮತ ಈ ದೇಶಕ್ಕೆ ಕಾಲಿಟ್ಟ ಬಗ್ಗೆ ಮತ್ತು ಕ್ರೈಸ್ತ ಮಿಷನರಿಗಳು ಮಾಡಿದ ಕೆಲಸದ ಬಗ್ಗೆ ಒಂದು ಪಕ್ಷಿನೋಟವನ್ನು ಇಲ್ಲಿ ಕೊಡುವುದು ಸೂಕ್ತವೆನಿಸುವುದು.

೨

ಕ್ರಿಸ್ತ ಶಕೆಯ ಆರಂಭದಲ್ಲಿ ಭಾರತದ ಇತಿಹಾಸ ಅಸ್ಪಷ್ಟವಾಗಿದೆ. ಕ್ರಿ.ಶ. ಒಂದನೆಯ ಶತಮಾನದಲ್ಲಿ ಗುಂಡ ಫೋರೋಸ್ ಎಂಬ ಶಕ್ತಿವಂತ ರಾಜನೊಬ್ಬ ಇಂಡಿಯಾದ ವಾಯವ್ಯದ ಕಡೆಯಲ್ಲಿ ಆಳುತ್ತಿದ್ದನಂತೆ. ಅವನ ಹೆಸರು ಸಿರಿಯಾ ಮತ್ತು ಏಷ್ಯಾ ಮತ್ತು ಆಫ್ರಿಕಾಗಳ ಮೆಡಿಟರೇನಿಯಾ ಪ್ರದೇಶಗಳಲ್ಲಿ ಕೇಳಿಬರುತ್ತಿತ್ತು. ಇವನ ರಾಜ್ಯಕ್ಕೇನೆ ಕ್ರೈಸ್ತನ ಹನ್ನೆರಡು ಮಂದಿ ಶಿಷ್ಯರಲ್ಲಿ ಒಬ್ಬರಾದ ಧರ್ಮದೂತ (Apostle) ಥಾಮಸ್ ಮೊಟ್ಟಮೊದಲು ಬಂದದ್ದು. ಈತನು ಅಲ್ಲಿಂದ ಮಲಬಾರಿನ ಮುಜ್ಯೈರಿಸ್ (ಕ್ರ್ಯಾಂಗನೂರು) ಎಂಬ ಸ್ಥಳಕ್ಕೆ ಕ್ರಿ.ಶ. ೫೨ರಲ್ಲಿ ಬಂದ. ಮಲಬಾರಿನಲ್ಲಿ ಈಗಾಗಲೇ ಯಹೂದಿಗಳು ನೆಲೆಸಿದ್ದರು. ಅವರಿಗೂ ಬೇರೆ ಜನರಿಗೂ ಥಾಮಸ್ ಬೋಧನೆ ಮಾಡಿದನು. ಇಪ್ಪತ್ತು ವರ್ಷಗಳ ಕಾಲ ಅವನ ಬೋಧನೆ ನಡೆಯಿತು. ಬಹುಮಂದಿ ಕ್ರೈಸ್ತಮತವನ್ನವಲಂಬಿಸಿದರು. ಅವರಲ್ಲಿ ರಾಜಮಹಾರಾಜರುಗಳೂ ಉನ್ನತ ಕುಲದ ಬ್ರಾಹ್ಮಣರೂ ಇದ್ದರು. ಇಷ್ಟೆಲ್ಲಾ ಮಾಡಿ ಥಾಮಸ್ ಮದರಾಸಿನ ಬಳಿ ಇರುವ ಮೈಲಾಪುರದಲ್ಲಿ ಧರ್ಮಬಲಿಯಾಗಿ ಅಲ್ಲಿಯೇ ಸಮಾಧಿಯಾದರು. ಅಂದಿನಿಂದ ಮೈಲಾಪುರ ಚರ್ಚು ಕ್ರೈಸ್ತರಿಗೆ ಯಾತ್ರಾಕ್ಷೇತ್ರವಾಗಿ ಉಳಿದಿದೆ.

ಅನಂತರ ಕ್ರಿ.ಶ. ಎರಡನೆಯ ಶತಮಾನದಲ್ಲಿ ಸಂತ ಬಾರ್ತೊಲೋಮ್ಯೂ (St. Bartholomew) ಎಂಬ ಮತ್ತೊಬ್ಬ ಧರ್ಮದೂತ ಇಂಡಿಯಾಕ್ಕೆ ಬಂದು ಕ್ರೈಸ್ತ ಮತಬೋಧನೆ ಮಾಡಿದನೆಂದು ಹೇಳುತ್ತಾರೆ. ಆದರೆ ಅದಕ್ಕೆ ಸರಿಯಾದ ದಾಖಲೆಗಳು ಇಂಡಿಯಾದಲ್ಲಿ ಇಲ್ಲ. ಅಂತೂ ಎರಡನೆಯ ಶತಮಾನದಿಂದ ಮೂರನೆಯ ಶತಮಾನದವರೆಗೆ ಇಂಡಿಯಾದಲ್ಲಿ ಕ್ರೈಸ್ತ ಮತದ ಪರಿಸ್ಥಿತಿ ಏನಿತ್ತು ಎಂಬುದು ತಿಳಿಯುವುದಿಲ್ಲ. ಆದರೆ ನಾಲ್ಕನೆಯ ಶತಮಾನದಲ್ಲಿ ಅಂದರೆ ಕ್ರಿ.ಶ. ೩೪೫ರಲ್ಲಿ ದೊಡ್ಡ ವರ್ತಕನೊಬ್ಬನ ನೇತೃತ್ವದಲ್ಲಿ ಸಿರಿಯಾದೇಶದ ಎಪ್ಪತ್ತೆರಡು ಸಂಸಾರಗಳನ್ನೊಳಗೊಂಡ ೪೦೦ ಜನರ ದೊಡ್ಡ ತಂಡವೊಂದು ಮಲಬಾರಿಗೆ ವಲಸೆ ಬಂದಿದ್ದು, ಸ್ವದೇಶದಲ್ಲಿ ಅವರಿಗುಂಟಾದ ಉಪಟಳವೇ ಈ ವಲಸೆಗೆ ಕಾರಣವೆಂದು ಹೇಳುತ್ತಾರೆ. ಅಂತೂ ಈ ರೀತಿ ಮಲಬಾರಿಗೆ ವಲಸೆ ಬಂದದ್ದು ಮಲಬಾರ್ ಚರ್ಚಿನ ಹಿರಿಮೆಯನ್ನು ಹೆಚ್ಚಿಸಿದಂತಾಯ್ತು. ಕನಾಯ್ ತೋಮನನ್ನು ಸಿರಿಯನ್ ಕ್ರೈಸ್ತರು ಈಗಲೂ ತಮ್ಮ ರಾಷ್ಟ್ರಪಿತನೆಂದು ಸ್ಮರಿಸುತ್ತಾರೆ.

ಯೂರೋಪಿಗೆ ಇಂಡಿಯಾದ ಮೆಣಸಿನ ಅವಶ್ಯಕತೆ ಬಹಳ ಇತ್ತು. ಇದು ಭೂಮಾರ್ಗವಾಗಿ ಯೂರೋಪಿಗೆ ಹೋಗುತ್ತಿತ್ತು. ಆದರೆ ಇದನ್ನು ತುರ್ಕಿದೇಶ ತಡೆದಿದ್ದರಿಂದ ಯೂರೋಪಿನಲ್ಲಿ ಮೆಣಸಿನ ಅಭಾವ ಹೆಚ್ಚಾಯಿತು. ಆಗ ಇಂಡಿಯಾಕ್ಕೆ ನೇರವಾದ ಸಮುದ್ರ ಮಾರ್ಗವನ್ನು ಕಂಡುಹಿಡಿಯುವ ಆಲೋಚನೆ ಮಾಡಬೇಕಾಯಿತು. ಈ ಕೆಲಸವನ್ನು ಮಾಡಿದ ಮೊದಲಿಗರೆಂದರೆ ಪೋರ್ಚುಗೀಸರು. ಅವರು ಕೇಫ್ ಆಫ್ ಗುಡ್‌ಹೋಪ್ ಮೂಲಕ ವಾಸ್ಕೋ ದ ಗಾಮಾನನ್ನು ಇಂಡಿಯಾಕ್ಕೆ ಕಳುಹಿಸಿದರು. ಆತ ಕ್ರಿ.ಶ. ೧೪೯೮ರಲ್ಲಿ ಇಂಡಿಯಾದ ಪಶ್ಚಿಮ ತೀರದಲ್ಲಿ ಕಾಲಿಟ್ಟ. ಆಮೇಲೆ ಪೋರ್ಚುಗೀಸರು ತುರುಕರ ಮತ್ತು ಅರಬ್ಬರ ಕೈಯಲ್ಲಿದ್ದ ವ್ಯಾಪಾರವನ್ನು ಕಸಿದುಕೊಂಡು ಸಮುದ್ರದ ಮೇಲೆ ತಮ್ಮ ಸ್ವಾಮಿತ್ವವನ್ನು ಸ್ಥಾಪಿಸಿದರು. ಅವರು ಗೋವೆಯನ್ನು ತಮ್ಮ ಕೇಂದ್ರವನ್ನಾಗಿ ಮಾಡಿಕೊಂಡು ಜನರನ್ನು ಕ್ರೈಸ್ತಮತಕ್ಕೆ ಪರಿವರ್ತನೆ ಮಾಡುವುದನ್ನು ತಮ್ಮ ಎರಡು ಮುಖ್ಯ ಗುರಿಗಳಲ್ಲಿ ಒಂದಾಗಿಮಾಡಿಕೊಂಡರು. ೧೨೫೨ರಲ್ಲಿಯೇ ನಾಲ್ಕನೆಯ ಇನ್ನೊಸೆಂಟ್ ಪೋಪರು (Pope Innocent) 'The Society of Wayfarers for Christ' ಎಂಬ ಸಂಘವನ್ನು ಸ್ಥಾಪಿಸಿದ್ದರು. ಅದೇ ಯೂರೋಪಿಯನ್ ಮಿಷನರಿಗಳ ಉಗಮವಾಯಿತೆಂದು ಹೇಳಬಹುದು. ಈ ಸಂಘದಲ್ಲಿ ಫ್ರಾನ್ಸಿಸ್ಕನ್ (Franciscan) ಮತ್ತು ಡಾಮಿನಿಕನ್ (Dominican) ಪಂಥದ ಪಾದ್ರಿಗಳಿದ್ದರು.

ಇಂಡಿಯಾಕ್ಕೆ ಬಂದ ಮೊಟ್ಟಮೊದಲನೆ ಯೂರೋಪಿಯನ್ ಮಿಷನರಿ ಎಂದರೆ ಮೊಂಟಿಕೋರ್ವಿನೋದ ಫ್ರೈಅರ್ ಜಾನ್ ಎಂಬುವನು. ಈತ ಚೀನಾಕ್ಕೆ ಹೋಗುವಾಗ ಕ್ರಿ.ಶ. ೧೨೯೧–೯೨ರಲ್ಲಿ ಇಂಡಿಯಾಕ್ಕೆ ಬಂದು, ಹದಿಮೂರು ತಿಂಗಳುಗಳ ಕಾಲ ಮೈಲಾಪುರದಲ್ಲಿ ತಂಗಿ ನೂರು ಜನರನ್ನು ಕ್ರೈಸ್ತಮತಕ್ಕೆ ಪರಿವರ್ತಿಸಿದನು.

ಇವನನಂತರ ಫ್ರೈಆರ್ ಜೋರ್ಡಾನಸನ ನೇತೃತ್ವದಲ್ಲಿ ಐದುಜನ ಮಿಷನರಿಗಳು ಕ್ರಿ.ಶ. ೧೩೨೧ರಲ್ಲಿ ಇಂಡಿಯಾಕ್ಕೆ ಬಂದರು. ಇದರಲ್ಲಿ ನಾಲ್ಕು ಜನರು ಮುಸಲ್ಮಾನರಿಂದ ಕೊಲ್ಲಲ್ಪಟ್ಟರು. ಜೋರ್ಡಾನಸ್ ಅವರೆಲ್ಲರ ಶವಸಂಸ್ಕಾರಮಾಡಿ ತನ್ನ ದೇಶಕ್ಕೆ ಹಿಂದಿರುಗಿದನು. ಪುನಃ ೧೩೩೧ರಲ್ಲಿ ಆತ ಇಂಡಿಯಾಕ್ಕೆ ಕ್ವಿಲಾನಿನ ಬಿಷಪ್ಪನಾಗಿ ಬಂದನು.

ಪೋರ್ಚುಗೀಸರು ಇಂಡಿಯಾಕ್ಕೆ ಬಂದ ಮೇಲೆ ಗೋವಾ ಅವರ ಕ್ರೈಸ್ತ ಧಾರ್ಮಿಕ ಕೇಂದ್ರವೂ ಆಯಿತು. ೧೫೩೪ರಲ್ಲಿ ಗೋವಾಕ್ಕೆ ಬಿಷಪ್ಪರ ಸ್ಥಾನ ಸಿಕ್ಕಿತು. ೧೫೬೦ರಲ್ಲಿ ಇನ್‌ಕ್ವಿಸಿಷನ್ (Inquisition), ಅಂದರೆ ಪಾಷಂಡ ಮತವನ್ನು ಅಡಗಿಸಲು ನಿಯಮಿಸಿದ್ದ ಮತೀಯ ನ್ಯಾಯಸ್ಥಾನ ಸ್ಥಾಪನೆಯಾಯಿತು. ಪೋರ್ಚುಗೀಸ್ ಇಂಡಿಯಾದಲ್ಲಿ ಆಗ್ಗೆ ಫ್ರಾನ್ಸಿಸ್ಕನ್ ಮತ್ತು ಡಾಮಿನಿಕನ್ ಪಾದ್ರಿಗಳು ಮಿಷನರಿ ಕೆಲಸದಲ್ಲಿ ಮೊಟ್ಟಮೊದಲಿಗರಾಗಿದ್ದರು. ಸ್ವಲ್ಪ ಕಾಲದಲ್ಲಿಯೇ ಅವರು

ಗೋವಾ ನಗರದ ಬಹುಮಂದಿ ಜನರನ್ನು ಕ್ರೈಸ್ತಮತಕ್ಕೆ ಪರಿವರ್ತನೆ ಮಾಡಿದರು. ಅವರ ಕಾರ್ಯಕ್ಷೇತ್ರ ಕೊಚಿನ್, ಕ್ರ್ಯಾಂಗನೂರು ಮತ್ತು ಮೈಲಾಪುರದವರೆಗೂ ಹಬ್ಬಿತ್ತು.

ಯೂರೋಪಿನಲ್ಲಿ ಹೊಸದಾಗಿ ಸೊಸೈಟಿ ಆಫ್ ಜೀಸಸ್ ಎಂಬ ಸಂಘವೊಂದರ ಸ್ಥಾಪನೆಯಾಯಿತು. ಇಗ್ನೇಷಿಯಸ್ ಲೊಯೊಲಾ ಎಂಬುವರು ಅದರ ಸ್ಥಾಪಕರು. ಅವರ ಪ್ರಭಾವಕ್ಕೆ ಒಳಗಾದ ಜೇವಿಯರ್ ಆ ಸಂಘವನ್ನು ಸೇರಿ ೧೫೪೨ರಲ್ಲಿ ಇಂಡಿಯಾಕ್ಕೆ ಬಂದರು. ಅವರು ಹೆಸರಾಂತ ಕ್ರೈಸ್ತ ಮಹಾಸಂತರು. ಇಂಡಿಯಾದಲ್ಲಿ ಅವರು ಏಳು ಲಕ್ಷ ಜನರನ್ನು ಕ್ರೈಸ್ತಮತಕ್ಕೆ ಪರಿವರ್ತನೆ ಮಾಡಿದರಂತೆ. ಆ ಮಹನೀಯರ ಪಾರ್ಥಿವ ಶರೀರಕ್ಕೆ ಈಗಲೂ ಗೋವೆಯಲ್ಲಿ ಕ್ರೈಸ್ತ ಬಂಧುಗಳ ಗೌರವ ಸಲ್ಲುತ್ತಿದೆ.

ಸಂತ ಜೇವಿಯರ್ ಮತ್ತು ಅವರಿಗಿಂತ ಮುನ್ನಿನ ಮಿಷನರಿಗಳು ಇಂಡಿಯಾದ ಕೆಳದರ್ಜೆಯ ಜನರ ಪರಿವರ್ತನೆ ಮಾಡುವುದರಲ್ಲಿ ಮಾತ್ರ ನಿರತರಾಗಿದ್ದರು. ಇದು ಕ್ರೈಸ್ತ ಧರ್ಮದ ಬಗ್ಗೆ ತಪ್ಪು ಅಭಿಪ್ರಾಯ ಬರುವಂತೆ ಮಾಡಿತು. ಕ್ರೈಸ್ತಮತವೆಂದರೆ ಪರಂಗಿಗಳಿಗೂ ಕೀಳ್ದರ್ಜೆಯ ಜನರಿಗೂ ಸಲ್ಲುವ ಮತವೇ ಹೊರತು, ಗೌರವಸ್ಥರ ಮತವಲ್ಲವೆಂಬ ಭಾವನೆಯನ್ನುಂಟುಮಾಡಿತು. ಕ್ರೈಸ್ತರಾದ ಪೋರ್ಚುಗೀಸರ ವರ್ತನೆಯೂ ಅಸಹ್ಯವಾಗಿದ್ದುದು ಇದಕ್ಕೆ ಒಂದು ಕಾರಣವಾಗಿತ್ತು. ಇಂಥ ಸಂದರ್ಭದಲ್ಲಿ ಫಾದರ್ ರಾಬರ್ಟ್ ದೆ ನೊಬಿಲಿ ಎಂಬುವನು ಮದುರೆಗೆ ಬಂದು ಬ್ರಾಹ್ಮಣರು ಮುಂತಾದ ಮೇಲ್ಜಾತಿಯ ಜನರ ಪರಿವರ್ತನೆಯಲ್ಲಿ ತೊಡಗಿದನು. ಇವನಿಗೆ 'ರೋಮನ್ ಬ್ರಾಹ್ಮಣ'ನೆಂಬ ಅಡ್ಡಹೆಸರೂ ಇತ್ತು. ಬ್ರಾಹ್ಮಣರಂತೆ ಜುಟ್ಟು ಜನಿವಾರಗಳನ್ನು ಧರಿಸಿ ಹಣೆಗೆ ಗಂಧ ಹಚ್ಚಿದ ಈ ಪಾದ್ರಿ ತನ್ನ ಕೈಲಾದ ಕೆಲಸ ಮಾಡಿ ಒಂದು ಲಕ್ಷ ಜನರನ್ನು ಕ್ರೈಸ್ತ ಮತಕ್ಕೆ ಸೇರಿಸಿ, ಮೈಲಾಪುರದಲ್ಲಿ ತನ್ನ ಎಂಬತ್ತನೆಯ ವಯಸ್ಸಿನಲ್ಲಿ (೧೬೫೬)ರಲ್ಲಿ ಕಾಲವಾದನು. ತಮಿಳು ಭಾಷೆಗೂ ಇವನು ಸಾಕಷ್ಟು ಸೇವೆ ಸಲ್ಲಿಸಿದನು. ತನ್ನ ಇಳಿ ವಯಸ್ಸಿನಲ್ಲಿಯೂ ನಾಲ್ಕು ಜನ ಆಪ್ತ ಕಾರ್ಯದರ್ಶಿಗಳನ್ನು ಇಟ್ಟುಕೊಂಡು ತಮಿಳು ಭಾಷೆಯಲ್ಲಿ ತನ್ನ ಬೋಧನೆ ಮತ್ತು ವಿಚಾರಗಳನ್ನು ಬರೆದಿಟ್ಟನು.

ನೊಬಿಲಿಯ ನಂತರ ಜಾನ್ ದೆ ಬ್ರಿಟೊ ಎಂಬುವನು ಮದುರೆ ಮಿಷನಿಗೆ ಬಂದನು. ಇವನು ನೊಬಿಲಿಗಿಂತ ಹೆಚ್ಚಿನ ಸೇವೆಯನ್ನು ತಮಿಳು ಭಾಷೆಗೆ ಸಲ್ಲಿಸಿದನು. ಆಗಿನ ತಮಿಳು ಭಾಷಾ ಬರಹಗಾರರಲ್ಲಿ ಇವನು ಅಗ್ರಗಣ್ಯನೆಂದು ಹೇಳುತ್ತಾರೆ.

ಬ್ರಿಟೊ ನಂತರ ಫಾದರ್ ಬೆಸ್ಕಿ ಮದುರೆಗೆ ಬಂದನು. ಇವನ ತಮಿಳು ಭಾಷಾ ಸಾಹಿತ್ಯ ಸೇವೆ ಬ್ರಿಟೋಗಿಂತ ಹೆಚ್ಚಿನದೆಂದು ಹೇಳುತ್ತಾರೆ. ಇವನ ಗ್ರಂಥಗಳನ್ನು ತಮಿಳರಾದಿಯಾಗಿ ಎಲ್ಲರೂ ಆಸಕ್ತಿಯಿಂದ ಓದುತ್ತಿದ್ದರು. ವೆಲ್ಲೂರಿನ ನವಾಬನಾದ ಚಂದಾಸಹೇಬ ಇವನ ಸಾಹಿತ್ಯ ಸೌರಭವನ್ನು ಮೆಚ್ಚಿ ೧೨,೦೦೦ ರೂಪಾಯಿ

ಆದಾಯ ಬರುವ ತಿರುಚಿನಾಪಳ್ಳಿ ಜಿಲ್ಲೆಯ ನಾಲ್ಕು ಗ್ರಾಮಗಳನ್ನು ಇವನಿಗೆ ಬಳುವಳಿಯಾಗಿ ಕೊಟ್ಟನು. ೧೭೪೨ರಲ್ಲಿ ಬೆಸ್ಕಿ ಕಾಲವಾದನು. ಇವನ ಕಾಲದಲ್ಲಿ ಮದುರೆ ಮಿಷನ್ ತನ್ನ ಔನ್ನತ್ಯವನ್ನು ಕಂಡಿತು. ೧೭೫೯ರಲ್ಲಿ ಪೋರ್ಚುಗಲ್‌ನಲ್ಲಿ ಜೊಸೂಯಿಟ್ ಸಂಘವನ್ನು ದಮನಮಾಡಿದ ಕಾರಣ ಮದುರೆಯ ಮಿಷನ್ನೂ ತನ್ನ ಕೊನೆಗಾಲವನ್ನು ಕಂಡಿತು.

ಇದಕ್ಕೆ ಮುನ್ನ ಜೊಸೂಯಿಟರು ತಮ್ಮ ಚಟುವಟಿಕೆಗಳನ್ನು ಉತ್ತರ ಭಾರತದ ಕಡೆಗೂ ಪಸರಿಸಿದ್ದರು. ೧೫೫೬ರಲ್ಲಿ ಅಕ್ಬರನು ಮೊಗಲ್ ಸಿಂಹಾಸನವನ್ನೇರಿದನಷ್ಟೆ. ಆತನಿಗೆ ಕ್ರೈಸ್ತನಾಗುವ ಆಂತರಿಕ ಆಸೆ ಇದೆಯೆಂದು ಭಾವಿಸಿದ ಗೋವೆಯ ಜೊಸೊಯಿಟ್ ಪಾದ್ರಿಗಳು ಅವನ ರಾಜಧಾನಿಯಾದ ಫತೇಪುರಕ್ಕೆ ಹೊರಟರು. ರುಡೋಲ್ಫ್ ಆಕ್ವಾವಿವಾ ಎಂಬುವನ ನೇತೃತ್ವದಲ್ಲಿ ಹೊರಟ ಜೊಸೂಯಿಟರ ತಂಡ ೧೫೮೦ರಲ್ಲಿ ಫತೇಪುರವನ್ನು ತಲುಪಿ ತನ್ನ ಕೆಲಸದಲ್ಲಿ ತೊಡಗಿತು. ಆದರೆ ಅಕ್ಬರ ಈ ಪಾದ್ರಿಗಳಿಗೆ ಸುಲಭನಾಗಿರಲಿಲ್ಲ. ಆತನಿಗೆ ಎಲ್ಲಾ ಮತಗಳ ಬೋಧನೆಗಳನ್ನು ತಿಳಿದುಕೊಳ್ಳುವ ಆಸಕ್ತಿ ಇದ್ದುದರಿಂದ ಜೊಸೂಯಿಟ್ ಪಾದ್ರಿಗಳು ಹೇಳಿದ್ದನ್ನೆಲ್ಲಾ ಕೇಳಿದ. ಆದರೆ ಕ್ರೈಸ್ತಮತಕ್ಕೆ ಮಾತ್ರ ಸೇರಲಿಲ್ಲ.

೧೫೮೩ರಲ್ಲಿ ಜೊಸೂಯಿಟ್ ತಂಡ ಗೋವೆಗೆ ಹಿಂದಿರುಗಿತು. ಮತ್ತೊಂದು ಸಲ ಪ್ರಯತ್ನ ನಡೆಯಿತು. ೧೫೯೫ರಲ್ಲಿ ಲಾಹೋರು ಮುಟ್ಟಿದ ಈ ತಂಡವೂ ತನ್ನ ಕೆಲಸದಲ್ಲಿ ನಿಷ್ಫಲವಾಯಿತು.

೧೬೦೬ರಲ್ಲಿ ಅಕ್ಬರ್ ಕಾಲವಾದನು. ಅವನ ನಂತರ ಸಿಂಹಾಸನವನ್ನೇರಿದವರು ಸಹ ಕ್ರೈಸ್ತಮತದ ಬಗ್ಗೆ ಸಹಾನುಭೂತಿ ತೋರಿಸಿದರೂ ಮುಸಲ್ಮಾನರ ಆಕ್ರೋಶಕ್ಕೆ ಹೆದರಿಯೊ ಏನೊ ಯಾರೂ ಕ್ರೈಸ್ತರಾಗಲಿಲ್ಲ.

ಔರಂಗಜೇಬನ ಮತಾಂಧತೆಯ ಕಾರಣವಾಗಿ ಮೊಗಲ್ ಸಾಮ್ರಾಜ್ಯ ನಾಶವಾಯಿತು. ಅವನ ಕಾಲದಲ್ಲಿ ಮಿಷನರಿಗಳು ಏನೇನೂ ಕೆಲಸ ಮಾಡಲು ಸಾಧ್ಯವಾಗಲಿಲ್ಲ. ೧೭೦೭ರ ವರೆಗೆ ಕುಟುಕುಜೀವ ಹಾಕಿಕೊಂಡಿದ್ದ ಸಾಮ್ರಾಜ್ಯ ಆ ವರ್ಷದಲ್ಲಿ ಪರ್ಷಿಯಾದ ನಾದಿರ್‌ಷಾನ ಧಾಳಿಯಿಂದ ನಾಶವಾಯಿತು.

ದಕ್ಷಿಣದಲ್ಲಿ ಮಾಡಿದಂಥ ಕೆಲಸವನ್ನು ಜೊಸೂಯಿಟ್ ಪಾದ್ರಿಗಳು ಉತ್ತರದಲ್ಲಿ ಮಾಡಲಾಗಲಿಲ್ಲ. ಮೊಗಲ್ ಚಕ್ರವರ್ತಿಗಳೂ ಮುಸಲ್ಮಾನರೂ ಅವರ ಬೋಧನೆಗೆ ಅಷ್ಟು ಕಿವಿಗೊಡಲಿಲ್ಲ. ದಕ್ಷಿಣದಲ್ಲಿ ಇದ್ದಂತೆ ಪೋರ್ಚುಗೀಸರ ಬೆಂಬಲ ಉತ್ತರದಲ್ಲಿ ಇರದಿದ್ದುದೂ ಇದಕ್ಕೆ ಒಂದು ಕಾರಣವೆಂದು ಹೇಳಬಹುದು.

ಪೋರ್ಚುಗೀಸರು ಮತ್ತು ಆಮೇಲೆ ಸ್ಪೆಯ್ನ್‌ನವರು ಸಾಧಿಸಿದ ಸಮುದ್ರದ ಮೇಲಿನ ಸ್ವಾಮಿತ್ವದಿಂದಲೂ ಅದರಿಂದ ಅವರಿಗೆ ದೊರೆತ ಐಶ್ವರ್ಯದಿಂದಲೂ ಬೇರೆ ರಾಷ್ಟ್ರಗಳು ಕಣ್ಣು ತೆರೆದುವು. ಪೋರ್ಚುಗಲ್ ಮತ್ತು ಸ್ಪೆಯ್ನ್ – ಈ

ಎರಡು ರಾಷ್ಟ್ರಗಳು ಕ್ಯಾಥೊಲಿಕ್ ಮತಾನುಸರಣೆ ಮಾಡುತ್ತ ರೋಮಿನ ಪೋಪರ ಅಧೀನವಾಗಿದ್ದುವು. ಪೋಪರು ಈ ಎರಡು ರಾಷ್ಟ್ರಗಳಿಗೆ ಒದಗಿದ ಭಿನ್ನಾಭಿಪ್ರಾಯ ವನ್ನು ಹೋಗಲಾಡಿಸಿ, ಅಮೇರಿಕಾ ಮುಂತಾದ ದೂರದ ಪಶ್ಚಿಮ ದೇಶಗಳನ್ನು ಸ್ಪೈನ್ನಿಗೂ, ಪೂರ್ವ ದೇಶಗಳನ್ನು ಪೋರ್ಚುಗಲ್‌ಗೂ ಹಂಚಿಕೊಟ್ಟರು. ಯೂರೋಪಿನ ರಾಷ್ಟ್ರಗಳು ಎಲ್ಲಿಯವರೆಗೆ ಪೋಪರ ಅಧಿಕಾರವನ್ನು ಒಪ್ಪಿಕೊಂಡುವೊ ಅಲ್ಲಿಯವರೆಗೆ ಅವರ ತೀರ್ಮಾನಕ್ಕೆ ಮನ್ನಣೆ ಸಿಕ್ಕಿತು. ಆದರೆ ಲ್ಯೂತರ್ (Luther) ಎಂಬ ಮತ ಸುಧಾರಕನಿಂದ ಆರಂಭವಾದ ಪೋಪರ ಮೇಲಿನ ಪ್ರತಿಭಟನೆಯ ಕಾರಣವಾಗಿ ಹೊಸ ರಾಷ್ಟ್ರಗಳು ಪೋಪರ ಅಧಿಕಾರವನ್ನು ಒಪ್ಪಲಿಲ್ಲ. ಈ ರಾಷ್ಟ್ರಗಳಲ್ಲಿ ಮುಖ್ಯವಾದವುಗಳು ಹಾಲ್ಯಾಂಡ್ ಮತ್ತು ಇಂಗ್ಲ್ಯಾಂಡ್. ಈ ಪ್ರೊಟೆಸ್ಟೆಂಟ್ ರಾಷ್ಟ್ರಗಳು ಸ್ಪೈನ್ ಮತ್ತು ಪೋರ್ಚುಗಲ್ ದೇಶಗಳ ಅಧಿಕಾರವನ್ನು ಕಿತ್ತೊಗೆಯುವುದರಲ್ಲಿ ಎರಡು ಉದ್ದೇಶಗಳನ್ನಿಟ್ಟುಕೊಂಡಿದ್ದುವು : ಒಂದು, ಪೋಪರ ಬಗ್ಗೆ ತಮಗಿರುವ ನಿಕೃಷ್ಟ ಭಾವನೆಯನ್ನು ತೋರಿಸುವುದು; ಎರಡು, ಪೋರ್ಚುಗೀಸರ ಕೈಯಲ್ಲಿದ್ದ ಸಮುದ್ರದ ಮೇಲಿನ ಸ್ವಾಮಿತ್ವವನ್ನು ತಮ್ಮ ಕೈಗೆ ತೆಗೆದುಕೊಳ್ಳುವುದು. ಈ ಕೆಲಸದಲ್ಲಿ ಅವರು ಜಯಶೀಲರೂ ಆದರು. ಪೂರ್ವದೇಶಗಳ ಮೇಲೆ ಪೋರ್ಚುಗೀಸರಿಗಿದ್ದ ಸ್ವಾಮಿತ್ವವನ್ನು ಡಚ್ಚರು ಕಸಿದುಕೊಂಡು ೧೬೬೩ರಲ್ಲಿ ಕ್ವಿಲಾನ್, ಕ್ರ್ಯಾಂಗನೂರು ಮತ್ತು ಕೊಚಿನ್‌ಗಳನ್ನು ತಮ್ಮ ಸ್ವಾಧೀನಮಾಡಿಕೊಂಡರು. ಡಚ್ಚರು ಕೇವಲ ವ್ಯಾಪಾರಕ್ಕಾಗಿ ಬಂದವರು. ಆದರೆ ಇಂಗ್ಲಿಷರಿಗೆ ಅದಷ್ಟೇ ಅಲ್ಲದೆ ರಾಜಕೀಯ ಗುರಿಯೂ ಇತ್ತು. ಮೊಗಲ್ ಸಾಮ್ರಾಜ್ಯದ ಪತನದ ನಂತರ ಅವರ ಕೆಲಸ ಸುಲಭವಾಯಿತು. ಬರುಬರುತ್ತಾ ಅವರು ಇಡೀ ಇಂಡಿಯಾದ ಒಡೆಯರಾಗಿ ವಿಜೃಂಭಿಸಿದರು.

ಕ್ಯಾಥೊಲಿಕ್ ಪೋರ್ಚುಗೀಸರಂತೆ ಪ್ರೊಟೆಸ್ಟಂಟರೂ ಕೂಡ ಆರಂಭದಲ್ಲಿ ಮತಬೋಧನೆ ತಮ್ಮ ಕೆಲಸವಲ್ಲವೆಂದು ಭಾವಿಸಿ ತಮ್ಮ ವ್ಯಾಪಾರ ಸಾಪಾರದಲ್ಲಿ ಮಗ್ನರಾಗಿದ್ದರು. ಈಸ್ಟ್ ಇಂಡಿಯಾ ಕಂಪೆನಿ ಒಂದು ನಿಯಮವನ್ನೂ ಹಾಕಿತು. ಏನೆಂದರೆ, ಇಂಡಿಯಾಕ್ಕೆ 'ಮಿಷನರಿಗಳು ಮತ್ತು ಜೆಂಟಲ್‌ಮೆನ್' (Missionar-ies and Gentleman) ಗಳನ್ನು ಕಳುಹಿಸಕೂಡದು ಎಂದು. ಹೀಗಾಗಿ ಧಾರ್ಮಿಕ ಹತೋಟಿ ಇಲ್ಲದೆ ಈಸ್ಟ್ ಇಂಡಿಯಾ ಕಂಪೆನಿಯ ನೌಕರರು ಸ್ವೇಚ್ಛಾಜೀವನ ನಡೆಸಲಾರಂಭಿಸಿದರು. ಈ ಕಾರಣದಿಂದ ಇಲ್ಲಿಗೆ ಮೊದಲು ಬಂದ ಪ್ರೊಟೆಸ್ಟಂಟರು ಗಳು ಡಚ್ಚರಾಗಲೀ ಇಂಗ್ಲಿಷಿನವರಾಗಲೀ ಆಗಿರಲಿಲ್ಲ. ಪ್ರೊಟೆಸ್ಟಂಟರನ್ನು ಕಳುಹಿಸಿದ್ದು ಸಣ್ಣ ದೇಶವಾದ ಡೆನ್ಮಾರ್ಕ್. ೧೭೦೬ರಲ್ಲಿ ಆ ದೇಶದ ನಾಲ್ಕನೆಯ ಫ್ರೆಡೆರಿಕ್ ದೊರೆ ಜೀಗೆನ್‌ಬಾಗ್ (Zeigenbalg) ಮತ್ತು ಹೆನ್ರಿಚ್ ಪ್ಲುಶ್ಯು (Heinrich Plutschau) ಎಂಬ ಇಬ್ಬರು ಪ್ರೊಟೆಸ್ಟಂಟ್ ಪಾದ್ರಿಗಳು ಶಾಲೆಯ ಮಕ್ಕಳೊಡನೆ ಚಕ್ಕಲು ಬೊಕ್ಕಲು ಹಾಕಿ ಕುಳಿತುಕೊಂಡು ಮರಳಿನಲ್ಲಿ ಅಕ್ಷರಗಳನ್ನು ತಿದ್ದಿ ತಮಿಳನ್ನು ಕಲಿತುಕೊಂಡರು.

ಭಾಷೆಯ ತೊಂದರೆಯನ್ನು ನಿವಾರಿಸಿಕೊಂಡ ನಂತರ ಅವರು ಕ್ರೈಸ್ತಮತ ಬೋಧನೆ ಆರಂಭಿಸಿದರು. ಅಲ್ಲಿಯವರೆಗೆ ಕ್ರೈಸ್ತರಂಥ ಹೊಲಸು ಜನರಿಲ್ಲವೆಂದು ಜನರ ಭಾವನೆಯಾಗಿತ್ತು. ಏಕೆಂದರೆ ಆ ರೀತಿ ಕ್ರೈಸ್ತರು ವರ್ತಿಸುತ್ತಿದ್ದರು. ಆದರೆ ಈ ಇಬ್ಬರು ಪಾದ್ರಿಗಳು ಧೃತಿಗೆಡದೆ ತಮ್ಮ ಮತಪ್ರಚಾರ ಕೆಲಸವನ್ನು ಮುಂದುವರಿಸಿ ೧೭೧೧ರಲ್ಲಿ ಮೊಟ್ಟಮೊದಲನೆಯ ಪ್ರೊಟೆಸ್ಟೆಂಟ್ ಚರ್ಚು ಕಟ್ಟಿ ಮುಗಿಸಿದರು. ಜೀಗೆನ್‌ಬಾಗನು ಹೊಸ ಒಡಂಬಡಿಕೆ (New Testament) ಯನ್ನು ತಮಿಳು ಭಾಷೆಗೆ ಭಾಷಾಂತರಿಸಿದ್ದಲ್ಲದೆ ಪಾದ್ರಿಗಳ ಅನುಕೂಲಕ್ಕಾಗಿ ತಮಿಳು–ಜರ್ಮನ್ ಭಾಷಾ ನಿಘಂಟುವೊಂದನ್ನು ತಯಾರುಮಾಡಿದನು. ಮಲಬಾರಿಯೊಬ್ಬನ ಸಹಾಯದಿಂದ ೧೭೧೫ರಲ್ಲಿ ತಮಿಳು ಭಾಷೆಯ ವ್ಯಾಕರಣವೊಂದನ್ನು ಬರೆಸಿ ಪ್ರಕಟಿಸಿದನು. ಅವನ ಬೋಧನೆಗೆ ಮಾರುಹೋದ ಕನಬಡಿ ವತಿಯರ್ (Kanabadi Vathier) ಎಂಬ ತಮಿಳು ಕವಿಯೊಬ್ಬ ಕ್ರೈಸ್ತಮತವನ್ನು ಅವಲಂಬಿಸಿ ಕ್ರೈಸ್ತ ಬೋಧನೆಯನ್ನು ಪದ್ಯರೂಪದಲ್ಲಿ ಹಾಡಿದನು. ಬರುಬರುತ್ತಾ ಈಸ್ಟ್‌ಇಂಡಿಯಾ ಕಂಪೆನಿಯವರೂ ಈ ಮಿಷನರಿ ಕೆಲಸಕ್ಕೆ ಸಹಾನುಭೂತಿ ಮತ್ತು ಸಹಕಾರಗಳನ್ನಿತ್ತರು. ಜೀಗೆನ್‌ಬಾಗ್ ಕೇವಲ ತನ್ನ ಮೂವತ್ತಾರನೆಯ ವಯಸ್ಸಿನಲ್ಲಿ ಕಾಲವಾದ.

ಜೀಗೆನ್‌ಬಾಗನು ಕಾಲವಾದನಂತರ ಶ್ವರ್ಜ್ (Schwartz) ಎಂಬುವನು ಟ್ರಾಂಕೊಬಾರಿನಲ್ಲಿ ಮಿಷನರಿ ಕೆಲಸದಲ್ಲಿ ತೊಡಗಿದನು. ಈತನು ತನ್ನ ಸ್ವಚ್ಛ ನಡೆ–ನುಡಿಯಿಂದ ಹೈದರಾಲಿಯ ಮನಸ್ಸನ್ನೂ ಆಕರ್ಷಿಸಿದನು. ಇಂಗ್ಲಿಷಿನವರು ತನ್ನ ಬಳಿಗೆ ಸಂಧಾನಕ್ಕೆ ರಾಯಭಾರಿಯನ್ನು ಕಳುಹಿಸುವುದಾದರೆ ಶ್ವರ್ಜನನ್ನು ಕಳುಹಿಸಲಿ ಎಂದು ಹೈದರಾಲಿ ತಿಳಿಸಿದ ಪ್ರಕಾರ ಆತ ಶ್ರೀರಂಗಪಟ್ಟಣಕ್ಕೂ ಬಂದು ಹೋದ. ಆತ ಕಾಲವಾದ ಮೇಲೆ ಟ್ರಾಂಕೊಬಾರ್ ಮಿಷನ್ ಅನಾಥವಾಗಿ ಕ್ಷೀಣಿಸತೊಡಗಿತು.

ಇಂಗ್ಲೆಂಡಿನಲ್ಲಿ 'ಬ್ಯಾಪ್ಟಿಸ್ಟ್ ಮಿಷನರಿ ಸೊಸೈಟಿ' ಎಂಬ ಸಂಘವೊಂದು ೧೭೯೨ರಲ್ಲಿ ಸ್ಥಾಪನೆಯಾಯಿತು. ಈ ಸಂಘದ ಉದ್ದೇಶ ಕ್ರೈಸ್ತಮತ ಬೋಧನೆ ಮತ್ತು ಮತಪರಿವರ್ತನೆ ಆಗಿತ್ತು. ಈ ಸಂಘದ ಪರವಾಗಿ ಕ್ಯಾರಿ (Carey) ಎಂಬುವನು ತನ್ನ ಹೆಂಡತಿ, ನಾಲ್ಕು ಮಕ್ಕಳು ಮತ್ತು ಒಬ್ಬ ತಂಗಿ ಸಮೇತ ಕಲ್ಕತ್ತೆಗೆ ಬಂದನು. ಆದರೆ ಅಲ್ಲಿ ಅವನನ್ನು ಯಾರೂ ಕೇಳುವವರಿಲ್ಲವಾದರು. ಮಕ್ಕಳು ಮರಿಗಳನ್ನು ಕಟ್ಟಿಕೊಂಡು ಬಂದ ಆತ ಹೊಟ್ಟೆಗಾಗಿ ಬಹಳ ಪರದಾಡಬೇಕಾಯಿತು. ಆಮೇಲೆ ಅವನ ಸ್ಥಿತಿ ಉತ್ತಮಗೊಂಡನಂತರ ಸೆರಾಂಪುರಕ್ಕೆ ಹೋಗಿ, ಅಲ್ಲಿ ನೆಲಸಿ ಹೆಸರಾದ ಸೆರಾಂಪುರ ಮಿಷನ್ ಸ್ಥಾಪನೆ ಮಾಡಿದ.

ಇಷ್ಟು ಹೊತ್ತಿಗಾಗಲೇ ಮುದ್ರಣ ಇಂಡಿಯಾಕ್ಕೆ ಕಾಲಿಟ್ಟಿತ್ತು. ಮುದ್ರಣ ಸೌಕರ್ಯವನ್ನು ಕ್ಯಾರಿ ಸಂಪೂರ್ಣವಾಗಿ ಉಪಯೋಗಿಸಿಕೊಂಡು ಆ ಮೂಲಕ ಕ್ರೈಸ್ತರ ಬೋಧನೆಯ ಪ್ರಸಾರ ಮಾಡಲು ಯತ್ನಿಸಿದ. ಕ್ಯಾರಿಗೆ ಭಾರತದ ಅನೇಕ ಭಾಷೆಗಳು ಬರುತ್ತಿದ್ದುವು. ಆತ ಬೈಬಲನ್ನು ಭಾರತದ ಮೂವತ್ತಾರು ಭಾಷೆಗಳಿಗೆ

ಅನುವಾದ ಮಾಡಿದ; ಅವುಗಳಲ್ಲಿ ಮುಖ್ಯವಾದವುಗಳೆಂದರೆ ಹಿಂದಿ, ಮರಾಠಿ, ಸಂಸ್ಕೃತ, ಗುಜರಾತಿ, ಒರಿಯಾ, ತೆಲುಗು, ಕನ್ನಡ ಮತ್ತು ಮಲೆಯಾಳಿ ಭಾಷೆಗಳಿಗೆ ಮಾಡಿದ ಭಾಷಾಂತರ. ಭಾಷಾಂತರವಾದಂತೆ ಮುದ್ರಣದಲ್ಲಿ ಹೆಸರಾದ ವಾರ್ಡ್ ಎಂಬುವನು ಮುದ್ರಿಸುತ್ತಿದ್ದ.

ಕ್ಯಾರಿ ಈ ರೀತಿ ಎಂಟು ವರ್ಷಗಳು ಶ್ರಮಿಸಿದರೂ ಒಬ್ಬನೂ ಕ್ರೈಸ್ತಮತವನ್ನು ಅವಲಂಬಿಸಲಿಲ್ಲ. ಕೊನೆಗೆ ೧೮೦೦ರಲ್ಲಿ ಕೃಷ್ಣಚಂದ್ರಪಾಲನೆಂಬ ಬಡಗಿ ಕ್ರೈಸ್ತಮತ ವನ್ನು ಸೇರಿದ. ಆ ಸಂದರ್ಭದಲ್ಲಿ ಕ್ಯಾರಿ ಮತ್ತು ಇತರರು ಸಂತೋಷದಿಂದ ಕುಣಿದಾಡಿದರಂತೆ.

ಇಂಡಿಯಾದ ಜನರಲ್ಲಿದ್ದ ಮೂಢನಂಬಿಕೆಗಳಿಗೆ ಅವಿದ್ಯೆಯೇ ಕಾರಣವೆಂದು ಅರಿತ ಕ್ಯಾರಿ ಜನಗಳಲ್ಲಿ ವಿದ್ಯಾಪ್ರಸಾರ ಮಾಡುವ ಕೆಲಸ ಆರಂಭಿಸಿದ. ಸೆರಾಂಪುರ ಮಿಷನ್ನಿನ ಕೆಲಸ ಬಂಗಾಳ, ಬರ್ಮಾ, ಒರಿಸ್ಸಾ, ಭೂತಾನ ಮುಂತಾದ ಪ್ರದೇಶಗಳಿಗೆ ಹಬ್ಬಿತು. ೧೮೧೮ರಲ್ಲಿ ಸೆರಾಂಪುರ ಮಿಷನ್ ೧೦,೦೦೦ ವಿದ್ಯಾರ್ಥಿಗಳಿದ್ದ ೧೨೬ ದೇಶೀಯ ಶಾಲೆಗಳನ್ನು ಸ್ಥಾಪಿಸಿತು. ಸರ್ವೇಸಾಮಾನ್ಯ ವಿದ್ಯಾಭ್ಯಾಸವಲ್ಲದೆ ಕ್ರೈಸ್ತಮತಕ್ಕೆ ಸಂಬಂಧಪಟ್ಟ ವಿದ್ಯೆಯನ್ನೂ ಈ ಶಾಲೆಗಳಲ್ಲಿ ಹೇಳಿಕೊಡಲಾಗುತ್ತಿತ್ತು. ೧೮೨೧ರಲ್ಲಿ ಸೆರಾಂಪುರದಲ್ಲಿ ಕಾಲೇಜನ್ನು ಸ್ಥಾಪಿಸಲಾಯಿತು. ಅದು ಆಮೇಲೆ ಒಂದು ವಿಶ್ವವಿದ್ಯಾನಿಲಯವೇ ಆಯಿತು. ಇಲ್ಲಿ ಮೊದಲಿಗೆ ಇಂಗ್ಲಿಷ್ ಮತ್ತು ಪೌರ್ವಾತ್ಯಸಾಹಿತ್ಯ (Classics)ಗಳ ಅಭ್ಯಾಸ ಮಾತ್ರ ನಡೆಯುತ್ತಿತ್ತು. ಆಮೇಲೆ ಇಂಗ್ಲಿಷನ್ನೇ ಶಿಕ್ಷಣ ಮಾಧ್ಯಮವನ್ನಾಗಿ ಮಾಡಲಾಯಿತು. ಇದರ ಪರಿಣಾಮ ಕ್ರಾಂತಿಕಾರಕವಾಗಿತ್ತು.

ವೆಲ್ಲೆಸ್ಲಿ ಕಾಲೇಜು ಎಂಬ ಮತ್ತೊಂದು ವಿದ್ಯಾಮಂದಿರವನ್ನು ಕ್ಯಾರಿ ಈಸ್ಟ್ ಇಂಡಿಯಾ ಕಂಪೆನಿಯ ಇಂಗ್ಲಿಷ್ ಜನರ ಸೌಕರ್ಯಕ್ಕಾಗಿ ಕಲ್ಕತ್ತೆಯಲ್ಲಿ ತೆರೆದನು. ಅಲ್ಲಿ ಬಂಗಾಳಿ ಭಾಷಾ ಪ್ರೊಫೆಸರ್ ಆಗಿದ್ದ ಕ್ಯಾರಿಗೆ ೧,೦೦೦ ಪೌಂಡು ವೇತನ ಬರುತ್ತಿತ್ತು.

ಈಸ್ಟ್ಇಂಡಿಯಾ ಕಂಪೆನಿಯವರೂ ತಮ್ಮ ನೌಕರರಿಗೆ ಪೌರೋಹಿತ್ಯಮಾಡುವ ಪಾದ್ರಿಗಳನ್ನು ನೇಮಿಸಿಕೊಳ್ಳಲಾರಂಭಿಸಿದರು. ಆದರೆ ಅವರು ಮಿಷನರಿ ಕೆಲಸ ಮಾಡುವಂತಿರಲಿಲ್ಲ. ಹೀಗೆ ನೇಮಿಸಿಕೊಂಡವರಲ್ಲಿ ಹೆಸರಾದವನೆಂದರೆ ಹೆನ್ರಿ ಮಾರ್ಟಿನ್ ಎಂಬುವನು. ಈತ ಹಗಲು ರಾತ್ರಿ ಒಂದೇ ಸಮನೆ ದುಡಿದು ಒಂದು ಜೀವನಮಾನದಲ್ಲಿ ಮಾಡುವಷ್ಟು ಕೆಲಸವನ್ನು ಕೇವಲ ಆರು ವರ್ಷಗಳಲ್ಲಿ ಮಾಡಿದನು. ಹಿಂದೂಸ್ತಾನಿ, ಅರ್ಯಾಬಿಕ್ ಮತ್ತು ಪರ್ಷಿಯನ್ ಭಾಷೆಗಳನ್ನು ಅಭ್ಯಾಸ ಮಾಡಿ ಹೊಸ ಒಡಂಬಡಿಕೆಯನ್ನು ಆ ಭಾಷೆಗಳಿಗೆ ಅನುವಾದಿಸಿದನು.

ಇಂಗ್ಲಿಷಿನವರು ಇಲ್ಲಿ ರಾಜ್ಯ ಕಟ್ಟಬೇಕೆಂಬ ಉದ್ದೇಶವನ್ನು ಮಾತ್ರ ಇಟ್ಟುಕೊಂಡಿದ್ದರು. ಅದರ ಜೊತೆಗೆ ಕ್ರೈಸ್ತಮತಕ್ಕೆ ಪರಿವರ್ತನೆ ಮಾಡುವ ಕೆಲಸವನ್ನೂ ಹಚ್ಚಿಕೊಂಡರೆ ತಮ್ಮ ಮುಖ್ಯ ಉದ್ದೇಶಕ್ಕೆ ಧಕ್ಕೆ ಬರುವುದೆಂದು ಭಾವಿಸಿದರು. ಒತ್ತಾಯವಾಗಿ ಮತಪರಿವರ್ತನೆ ಮಾಡಲು ಹೋಗಿ ಪೋರ್ಚುಗೀಸರು ಆಗಲೇ ಅದರ ದುಷ್ಪರಿಣಾಮವನ್ನು ಅನುಭವಿಸಿದ್ದರು. ಹಿಂದೂಗಳಿಗೂ ಮುಸಲ್ಮಾನರಿಗೂ ಪೋರ್ಚುಗೀಸರ ಹೆಸರು ಹೇಳಿದರೆ ಆಗುತ್ತಿರಲಿಲ್ಲ. ಹೀಗಿರುವಾಗ ತಾವು ಅಂಥ ಕೆಲಸ ಮಾಡಬಾರದೆಂಬ ಬುದ್ಧಿಯನ್ನು ಇಂಗ್ಲಿಷರು ಕಲಿತಿದ್ದರು. ಇದೆಲ್ಲವನ್ನು ಅರಿತ ಇಂಗ್ಲೆಂಡಿನ ಪಾರ್ಲಿಮೆಂಟ್ ಈಸ್ಟ್ ಇಂಡಿಯಾ ಕಂಪೆನಿಗೆ ಸಂಪೂರ್ಣ ಅಧಿಕಾರ ಕೊಟ್ಟಿತು : ಕಂಪೆನಿಯ ಕೆಲಸಕ್ಕೆ ಎಡರು ತೊಡರುಗಳನ್ನು ತಂದೊಡ್ಡುವ ಪಾದ್ರಿಗಳನ್ನು ಇಂಡಿಯಾಕ್ಕೆ ಹೋಗದಂತೆ ತಡೆಯಬಹುದು ಎಂದು. ಹೀಗಾಗಿ ಎಂಥೆಂಥ ಭಂಡಜನರಿಗೆ ಇಂಡಿಯಾಕ್ಕೆ ಬರಲು ಅನುಮತಿ ಸಿಕ್ಕಿದರೂ ಸುವಾರ್ತೆಯನ್ನು (Gospel) ಬೋಧಿಸುವ ಬೋಧಕರಿಗೆ ಅವಕಾಶ ಸಿಕ್ಕದೇ ಹೋಯಿತು.

ಆದರೆ ಈ ನೀತಿಯನ್ನು ಬಹಳ ಕಾಲ ಅನುಸರಿಸಲಾಗಲಿಲ್ಲ. ಹದಿನೆಂಟನೆಯ ಶತಮಾನದ ಉತ್ತರಾರ್ಧದಲ್ಲಿ ಇಂಗ್ಲಿಷರು ತಮ್ಮ ಧೋರಣೆಯನ್ನು ಬದಲಾಯಿಸಿದರು. ತಿಂದು ಕುಡಿದು ಸ್ತ್ರೀಲೋಲರಾಗಿ ತೊಡಗುವುದೊಂದೇ ಜೀವನದ ಗುರಿಯಲ್ಲ; ಅದಕ್ಕಿಂತ ಹೆಚ್ಚಿನದೊಂದು ಇದೆ ಎಂದು ಅರಿಯಲಾರಂಭಿಸಿದರು. ಸುವಾರ್ತೆಯ ಬೋಧನೆ ಇಂಡಿಯಾದಲ್ಲಿ ಆವಶ್ಯಕ ಎಂಬುದು ಇಂಡಿಯಾಕ್ಕೆ ಬಂದುಹೋದ ಪ್ರವಾಸಿಗಳ ವರದಿಯಿಂದ ಸ್ಪಷ್ಟವಾಗಿತ್ತು. ಈ ಕೆಲಸಕ್ಕೆ ಹಲವಾರು ಸಂಘಗಳು ಸ್ಥಾಪನೆಯಾದುವು; ಅನೇಕ ಜನರು ಸೇವೆಗೆ ಸಿದ್ಧರಾದರು. ೧೭೯೨ರಲ್ಲಿ ಬ್ಯಾಪ್ಟಿಸ್ಟ್ ಮಿಷನರಿ ಸಂಘವೂ, ೧೭೯೫ರಲ್ಲಿ ಲಂಡನ್ ಮಿಷನ್ ಸಂಘವೂ ಮತ್ತು ೧೭೯೯ರಲ್ಲಿ ಚರ್ಚ್ ಮಿಷನರಿ ಸೊಸೈಟಿಯೂ ಸ್ಥಾಪನೆಯಾದುವು.

ಈ ಸಂಘಗಳ ಕಡೆಯಿಂದ ಬಂದ ಮಿಷನರಿಗಳು ತಮ್ಮವರೇ ಆದ ಕ್ರೈಸ್ತ-ಇಂಗ್ಲಿಷರ ಮೇಲೆ ಧಾಳಿ ಮಾಡಬೇಕಾಯಿತು. ಅವರು ಈ ಇಂಗ್ಲಿಷರ ಅನೀತಿಯುತವೂ ಅಧಾರ್ಮಿಕವೂ ಆದ ಮಾರ್ಗಗಳನ್ನು ಹಸ್ತಪತ್ರಿಕೆಗಳ ಮುಖೇನ ಖಂಡನೆ ಮಾಡಲಾರಂಭಿಸಿದರು. ಕ್ಲಾಡಿಯಸ್ ಬುಕಾನನು ಇಂಡಿಯಾದ ಮತಗಳ ಬಗ್ಗೆ ಬರೆದ ವರದಿ ಅನೇಕ ಜನರನ್ನು ರೇಗಿಸಿತು. ಅದಕ್ಕೆ ಪ್ರತಿಯಾಗಿ ಇಂಗ್ಲಿಷ್ ನವಾಬರು ಅವರ ಪರವಾಗಿ ಸರ್ ಹೆನ್ರಿ ಮೊಂಟ್ಗೊಮೆರಿ (Sir Henry Montegomery) ಮುಂತಾದವರೂ ವಾದಿಸಿದರು. ಮೊಂಟ್ಗೊಮೆರಿ ಹೇಳಿದ, 'ಹಿಂದುಗಳಿಗೆ ಬೋಧಿಸುವಂಥಾದ್ದು ಕ್ರೈಸ್ತಮತದಲ್ಲಿ ಯಾವುದೂ ಇಲ್ಲ. ಮುಖ್ಯವಾಗಿ ಆಗಬೇಕಾಗಿರುವುದು ಇಂಡಿಯಾದಲ್ಲಿರುವ ೩೦,೦೦೦ ಇಂಗ್ಲಿಷ್ ಜನರನ್ನು ಉಳಿಸುವುದೇ ಹೊರತು, ಹಿಂದುಗಳೆಲ್ಲರನ್ನೂ ಪರಿವರ್ತಿಸಿ ಅವರ ಆತ್ಮೋದ್ಧಾರ ಮಾಡುವುದಲ್ಲ' ಎಂದು. ಮದ್ರಾಸಿನಲ್ಲಿದ್ದ ಮಾರ್ಷ್ (Mr. Marsh) ಎಂಬ ವಕೀಲ

'ಹಿಂದೂಗಳಿಗೆ ಬೋಧಿಸಬೇಕಾದ್ದು ಏನೂ ಇಲ್ಲ; ಅವರ ಪಾದಸೇವೆ ಮಾಡಿ ಕಲಿಯಬೇಕಾದ್ದು ಬಹಳ ಇದೆ' ಎಂದ. ಇದಕ್ಕೆ ವಿರೋಧವಾಗಿ ವಿಲ್ಬರ್‌ಫೋರ್ (Wilberfore), ಫೋರ್ಬ್ಸ್ (Forbes), ವಿಲಿಯಂ ಸ್ಮಿತ್ (William Smith), ವ್ಹಿಟ್‌ಬ್ರೆಡ್ (Whitbread) ಮುಂತಾದವರು ಹಿಂದೂಗಳಲ್ಲಿ ಸತಿ, ಶಿಶುಹತ್ಯೆ, ಮೂರ್ತಿಪೂಜೆ, ಮತದ ಹೆಸರಿನಲ್ಲಿ ಆಗುತ್ತಿದ್ದ ಆತ್ಮಹತ್ಯೆ ಮುಂತಾದ ಪದ್ಧತಿಗಳನ್ನು ಎತ್ತಿತೋರಿಸಿ ಹಿಂದೂಮತವನ್ನು ಖಂಡಿಸಿದರು. ಜಗನ್ನಾಥನ ರಥೋತ್ಸವದ ಕಾಲದಲ್ಲಿ ನಡೆಯುತ್ತಿದ್ದ ಜನರ ಅಪರಿಮಿತ ಉತ್ಸಾಹದ ಪರಿಣಾಮಗಳನ್ನು ವಿವರವಾಗಿ ವರ್ಣಿಸಿ ವರ್ಷೆ ವರ್ಷೆ ಒಂದು ಲಕ್ಷ ಇಪ್ಪತ್ತು ಸಾವಿರ ಜನರ ಆಹುತಿ ಆಗುತ್ತಿದೆ ಎಂದು ಹೇಳಿದರು. ಅದನ್ನು ರುಜುವಾತು ಮಾಡಿಕೊಡಿ ಎಂದು ಅವರಿಗೆ ಸವಾಲು ಹಾಕಿದಾಗ ಅವರು ತಾವು ಸತ್ತವರ ಹೆಣಗಳನ್ನು ಎಣಿಸಲಿಲ್ಲವೆಂದೂ, ಬುದ್ಧಿವಂತಿಕೆಯ ಲೆಕ್ಕಾಚಾರದಿಂದ ಅಷ್ಟೊಂದು ಜನರ ಆಹುತಿ ಆಗಿದೆಯೆಂದು ಹೇಳಿದೆವೆಂದೂ ತಿಳಿಸಿ ತಪ್ಪಿಸಿಕೊಂಡರು.

ಈ ವಾಕ್‌ಯುದ್ಧದಲ್ಲಿ ಕೊನೆಗೆ ಮಿಷನರಿಗಳಿಗೇ ಜಯವಾಯಿತು. ಕ್ರೈಸ್ತ ಬೋಧನೆಯನ್ನು ಇಂಡಿಯಾದಲ್ಲಿ ಮಾಡಬಹುದೆಂದು ಅವರಿಗೆ ೧೮೧೩ರಲ್ಲಿ ಅನುಮತಿ ಸಿಕ್ಕಿತು. ಕಲ್ಕತ್ತೆಯಲ್ಲಿ ಒಬ್ಬ ಬಿಷಪ್ಪನ ನೇಮಕವಾಯಿತು. ಈಸ್ಟ್ ಇಂಡಿಯಾ ಕಂಪೆನಿಯ ಅಧಿಕಾರಕ್ಕೊಳಪಟ್ಟ ಪ್ರದೇಶವೆಲ್ಲಾ ಆತನ ಮೇಲ್ವಿಚಾರಣೆಗೆ ಸೇರಿತು.

೧೮೩೩ನೆಯ ಇಸವಿ ವರೆಗೆ ಬ್ರಿಟಿಷ್ ಮಿಷನ್ ಸಂಘವಲ್ಲದೆ ಬೇರೆ ಮಿಷನ್ ಸಂಘಗಳು ಹಿಂದೂದೇಶದಲ್ಲಿ ನೆಲೆಸಿ ಸುವಾರ್ತೆ ಸೇವೆಯನ್ನು ನಡೆಸುವುದಕ್ಕೆ ಅನುಮತಿ ಇರಲಿಲ್ಲ. ೧೮೩೦ರಲ್ಲಿ ಬ್ರಿಟಿಷ್ ಮಿಷನ್ ಸಂಘದವರು ಬಾಸೆಲ್ ಮಿಷನ್ ಸಂಘದವರಿಗೆ ಹಿಂದೂಸ್ಥಾನದ ಪಶ್ಚಿಮ ಕರಾವಳಿಯಲ್ಲಿ ಕೊಚ್ಚಿನ್‌ನಿಂದ ಮುಂಬಯಿವರೆಗಿನ ಪ್ರದೇಶವನ್ನು ಆ ಮಿಷನ್ನಿನ ಕಾರ್ಯಕ್ಷೇತ್ರವನ್ನಾಗಿ ಮಾಡಿದರೆ ಒಳ್ಳೆಯದೆಂದು ಸಲಹೆಕೊಟ್ಟರು. ಈ ಸಂದರ್ಭವನ್ನು ಉಪಯೋಗಿಸಿಕೊಳ್ಳುವ ಉದ್ದೇಶದಿಂದ ೧೮೩೩ರಲ್ಲಿ ಜಾನ್ ಕ್ರಿಸ್ಟೊಫ್ ಲೇಹ್ನರ್ (John Christoph Lehnor), ಕ್ರಿಸ್ಟೊಫ್ ಲಿಯೊನಾರ್ಡ್ ಗ್ರೈನರ್ (Christoph Leonard Greiner) ಮತ್ತು ಸಾಮುಯೆಲ್ ಹೇಬಿಕ್ (Samel Hebich) ಎಂಬ ಮೂವರು ಜರ್ಮನ್ ಮಹಾಶಯರು ಮಂಗಳೂರಿಗೆ ಬಂದು ಬಾಸೆಲ್ ಮಿಷನ್ ಸ್ಥಾಪನೆ ಮಾಡಿದರು. ಇವರಲ್ಲಿ ಹೇಬಿಕರು ಕನ್ನಡ ಭಾಷೆಯನ್ನೂ, ಗ್ರೈನರ್ ಅವರು ತುಳು ಭಾಷೆಯನ್ನು ಲೇಹ್ನರ್ ಅವರು ಕೊಂಕಣಿ ಭಾಷೆಯನ್ನೂ ಅಭ್ಯಾಸ ಮಾಡಿದರು. ಈ ಮೂವರನ್ನು ಆಮೇಲೆ ಡಾ॥ ಎಚ್. ಮೋಗ್ಲಿಂಗ್ (Dr. H. Mogling) ಮುಂತಾದವರು ಕೂಡಿಕೊಂಡರು. ಮೋಗ್ಲಿಂಗರು ಮಂಗಳೂರಿನ ಬಾಸೆಲ್ ಮಿಷನ್ ಸೇರಿದ ಮೇಲೆ ಕನ್ನಡ ಭಾಷೆಯನ್ನು ಕಲಿತು, ೧೮೫೭ರಲ್ಲಿ 'ಕನ್ನಡ ವಾರ್ತೆ' ಎಂಬ ಪತ್ರಿಕೆಯನ್ನು ಹೊರಡಿಸಿದರು. ಈ ಕಾರಣ ಕನ್ನಡ ಪತ್ರಿಕೋದ್ಯಮಕ್ಕೂ ಕ್ರೈಸ್ತ ಪಾದ್ರಿಗಳೇ ಆದ್ಯ

ಪ್ರವರ್ತಕರೆನ್ನಬಹುದೆ ? ಕನ್ನಡ ಗಾದೆಗಳ ಸಂಗ್ರಹ, ಜೈಮಿನಿ ಭಾರತ, ದಾಸರ ಪದ, ಕನಕದಾಸರ ಹರಿಭಕ್ತಿಸಾರ, ಬಸವ ಪುರಾಣ ಮುಂತಾದ ಗ್ರಂಥಗಳನ್ನು ಮುದ್ರಿಸಿ ಪ್ರಕಟಿಸಿದರು. ಹೀಗೆ ಹಳೆಗನ್ನಡ ಗ್ರಂಥಗಳ ಸಂಪಾದನೆ, ಲಿಪಿ ಸುಧಾರಣೆ, ಕನ್ನಡ ಪತ್ರಿಕಾ ಸಂಪಾದನೆ – ಇವುಗಳಿಗೆ ಮೋಗ್ಲಿಂಗರು ತಮ್ಮ ಕಾಣಿಕೆಯನ್ನು ಸಲ್ಲಿಸಿ ನಮ್ಮ ಕೃತಜ್ಞತೆಗೆ ಪಾತ್ರರಾಗಿದ್ದಾರೆ.

ಈ ಬಾಸೆಲ್ ಮಿಷನ್ ಸಂಘ ದಿನೇ ದಿನೇ ಅಭಿವೃದ್ಧಿಹೊಂದಿ ಚರ್ಚು, ಹೆಂಚಿನ ಕಾರ್ಖಾನೆ ಮತ್ತು ಬಟ್ಟೆ ಕಾರ್ಖಾನೆಗಳು, ಮುದ್ರಣ ಯಂತ್ರ, ಶಾಲೆ ಮುಂತಾದುವುಗಳನ್ನು ಸ್ಥಾಪಿಸಿ ಅನೇಕ ಜನರ ವಿದ್ಯಾಭ್ಯಾಸಕ್ಕೂ ಜೀವನ ಮಾರ್ಗಕ್ಕೂ ಕಾರಣವಾಯಿತು. ಡಾ॥ ಕಿಟೆಲ್ ಅವರ ಅಪೂರ್ವ 'ಕನ್ನಡ – ಇಂಗ್ಲಿಷು' ನಿಘಂಟು ಅಚ್ಚಾದುದು ಬಾಸೆಲ್ ಮಿಷನ್ ಪ್ರೆಸ್ಸಿನಲ್ಲಿಯೇ. ಈ ಕಡೆಯಲ್ಲಿ ಮುದ್ರಣದಲ್ಲಿ ಮೊದಲ ಹೆಜ್ಜೆ ಇಟ್ಟವರು ಬಾಸೆಲ್ ಮಿಷನ್ನಿನವರು.

ಮಿಷನರಿಗಳ ಚಟುವಟಿಕೆಗಳಿಂದಾಗಿ ಇಂಡಿಯಾದಲ್ಲೆಲ್ಲಾ ಸ್ಥಳೀಯ ಕ್ರೈಸ್ತಮತೀಯ ಮಂಡಲಿಗಳು ತಲೆಯೆತ್ತಿದುವು. ಬಹುತೇಕ ಮಿಷನುಗಳು ಪರದೇಶದ ಆಡಳಿತ ಮಂಡಲಿಗೆ ಅಥವಾ ಚರ್ಚುಗಳ ಅಧೀನಕ್ಕೆ ಒಳಪಟ್ಟಿದ್ದುವು. ಮಿಷನರಿಗಳು ಕೇವಲ ಸಂಬಳದ ನೌಕರರಾಗಿದ್ದರು. ಇದನ್ನು ತಪ್ಪಿಸುವುದು ಸೂಕ್ತವಾಗಿ ಕಂಡರೂ ಇಲ್ಲಿಯ ಜನರ ಬಡತನದ ಕಾರಣವಾಗಿ ಪರದೇಶದವರ ಸಹಾಯ ಮತ್ತು ಮೇಲ್ವಿಚಾರಣೆಗಳಿಂದ ಮುಕ್ತವಾಗುವುದು ಸುಲಭವಾಗಿರಲಿಲ್ಲ. ಅಂತೂ ೧೯೧೪ರಲ್ಲಿ ನ್ಯಾಷನಲ್ ಕ್ರಿಶ್ಚಿಯನ್ ಕೌನ್ಸಿಲ್ ಎಂಬ ಕೇಂದ್ರ ಸಂಸ್ಥೆ ನಾಗಪುರದಲ್ಲಿ ಸ್ಥಾಪನೆಯಾಯಿತು. ಇದಕ್ಕಿಂತ ಮುಂಚೆ ೧೮೭೨ರಲ್ಲಿ ಪ್ರೆಸ್ಬಿಟೇರಿಯನರ, ಅಂದರೆ ಇಂಡಿಯಾದ ಕ್ರೈಸ್ತಮಠಗಳ ಹಿರಿಯರೆಲ್ಲರ, ಒಂದು ಸಭೆ ನಡೆಯಿತು. ಈ ಸಭೆಯ ಕಾರಣವಾಗಿ ಇಡೀ ಇಂಡಿಯಾಕ್ಕೆ ಅಲ್ಲದಿದ್ದರೂ ದಕ್ಷಿಣ ಇಂಡಿಯಾಕ್ಕೆ ಯುನೈಟೆಡ್ ಚರ್ಚ್ ಆಫ್ ಸೌತ್ ಇಂಡಿಯಾ ಎಂಬ ಸಂಘದ ಸ್ಥಾಪನೆಯಾಯಿತು. ಆದರೆ ರೋಮನ್ ಕ್ಯಾಥೋಲಿಕ್ ಚರ್ಚಿನ ವಿಶಿಷ್ಟ ಸಂಘವ್ಯವಸ್ಥೆ ಮತ್ತು ಸಂಪ್ರದಾಯಗಳು ಇಡೀ ಇಂಡಿಯಕ್ಕೂ ಮತ್ತು ಪ್ರಪಂಚಕ್ಕೂ ಒಂದೇ ಚರ್ಚು ಆಗುವುದಕ್ಕೆ ಕೊಂಚ –ಅಡೆ–ತಡೆಗಳನ್ನು ತಂದಂತೆ ಕಾಣುತ್ತದೆ.

ಇವಲ್ಲದೆ ಇಂಡಿಯಾ, ಬರ್ಮಾ ಮತ್ತು ಸಿಲೋನ್ ಚರ್ಚ್ ಎಂಬ ಆ್ಯಂಗ್ಲಿಕನ್ ಚರ್ಚ್ ಎಂಬ ಸಂಸ್ಥೆಯೂ ಸ್ಥಾಪನೆಯಾಯಿತು. ಇದರ ಮುಖ್ಯ ಕೇಂದ್ರ ಕಲ್ಕತ್ತೆಯಲ್ಲಿದೆ. ಹದಿಮೂರು ಬಿಷಪ್ಪರುಗಳು ಅಲ್ಲಲ್ಲಿ ಇದ್ದಾರೆ. ಅಲ್ಲದೆ, ಬಾಪ್ಟಿಸ್ಟರ ನಾಲ್ಕು ಚರ್ಚು ಯೂನಿಯನ್ನುಗಳಿವೆ. ಇವು ಒಂದೊಂದು ಪರಸ್ಪರ ಸ್ವತಂತ್ರವಾಗಿವೆ. ಲೂತೆರನರಿಗೆ ಸೇರಿದ ಆರು ಚರ್ಚುಗಳಿವೆ. ಆಗ್ನೇಯ ಏಷ್ಯಾದ ಮೆಥಾಡಿಸ್ಟ್ ಚರ್ಚುಗಳಿಗೆ ಸೇರಿದ ನಾಲ್ಕು ಬಿಷಪ್ಪರಿದ್ದಾರೆ. ಮಾರ್‌ಥೋಮ್ ಸಿರಿಯನ್ ಚರ್ಚಿನ ಬಿಷಪ್ಪರ ಮುಖ್ಯ ಕೇಂದ್ರ ತಿರುವೆಲ್ಲಾದಲ್ಲಿದೆ.

ಮೊದಲಿಗೆ ಕ್ಯಾಥೋಲಿಕ್ ಮಿಷನುಗಳು ಮತಪರಿವರ್ತನೆಗೆ ಪ್ರಮುಖ ಸ್ಥಾನ ಕೊಟ್ಟಿದ್ದವು. ಆದರೆ ಪ್ರೊಟೆಸ್ಟೆಂಟ್ ಮಿಷಿನುಗಳು ಕ್ರೈಸ್ತಮತ ಬೋಧನೆಗೆ ಹೆಚ್ಚು ಪ್ರಾಧಾನ್ಯತೆ ಕೊಟ್ಟು ಬೀದಿಗಳಲ್ಲಿ ಭಾಷಣ ಮಾಡುವುದು, ಬೈಬಲಿನ ಮತ್ತು ಹಸ್ತಲೇಖನಗಳ ಮಾರಾಟ ಮಾಡುವುದು – ಈ ಕೆಲಸಗಳಲ್ಲಿ ತೊಡಗಿದುವು. ಅಲ್ಲದೆ ಬಡಬಗ್ಗರ ಸೇವೆ ಮಾಡುವುದು ಮತಪರಿವರ್ತನೆಗಿಂತ ಹೆಚ್ಚಿನದೆಂದು ಪರಿಗಣಿಸಲಾಯಿತು. ಕೆಲವು ಮಿಷನುಗಳು ಗಿರಿಜನ ಪ್ರದೇಶಗಳಲ್ಲಿ ನೆಲೆಸಿ ಅಲ್ಲಿ ತುಂಬ ಒಳ್ಳೆಯ ಕೆಲಸಗಳನ್ನು ಮಾಡಿದುವು. ಆಗ ಅನಿವಾರ್ಯವಾಗಿ ಮತಾಂತರ ನಡೆಯಿತು.

ಅಮೇರಿಕಾದ ಮೊಟ್ಟಮೊದಲನೆ ಮಿಷನರಿ ತಂಡ ೧೮೧೨ರಲ್ಲಿ ಇಂಡಿಯಾಕ್ಕೆ ಬಂದಿತು. ಇದರಲ್ಲಿ ಗಾರ್ಡನ್ ಹಾಲ್ (Gordon Hall), ನಾಟ್ (Nott) ಮತ್ತು ಅವರ ಹೆಂಡತಿ ರೈಸ್ (Rice,) ಜಡ್ಸನ್ (Judson) ಮತ್ತು ಅವರ ಹೆಂಡತಿ – ಇಷ್ಟು ಜನ ಇದ್ದರು. ಕೊನೆಯ ಮೂರು ಜನರು ಸೆರಾಂಪುರ ಮಿಷನ್ ಸೇರಿಕೊಂಡರು. ಹಾಲ್ ಮತ್ತು ನಾಟರಿಗೆ ಕಲ್ಕತ್ತೆಯಲ್ಲಿ ಇಳಿಯಲು ಅವಕಾಶ ಸಿಕ್ಕದೆ ಹೋದ ಕಾರಣ ಬೊಂಬಾಯಿಗೆ ಹೋದರು. ಅಲ್ಲಿ ಹಾಲ್ ಬೋಧನೆಯ ಕೆಲಸದಲ್ಲಿ ನಿರತನಾದ.

ಮೊದಮೊದಲಿಗೆ ಇಂಗ್ಲಿಷರಲ್ಲಿ ಮನೆಮಾಡಿಕೊಂಡಿದ್ದ ದುರ್ನಡತೆ ಮಾರ್ಪಾಡಾಗುತ್ತಾ ಬಂದಿತು. ಕಂಪೆನಿ ಮತ್ತು ಪಾದ್ರಿಗಳು ಇಬ್ಬರೂ ಸೇರಿಕೊಂಡು ಹಿಂದಿನ ಹೊಲಸು ತೊಳೆದು ಬ್ರಿಟಿಷರಿಗೆ ಒಳ್ಳೆಯ ಹೆಸರು ಬರುವಂತೆ ಮಾಡಿದರು. ಇಂಗ್ಲಿಷ್ ವಿದ್ಯಾಭ್ಯಾಸ ಮಾಡಿದ ಹಿಂದೂಗಳು ಕ್ರೈಸ್ತನ ಮತ್ತು ಆತನ ಬೋಧನೆಗೆ ಗೌರವ ಕೊಡಲಾರಂಭಿಸಿದರು. ಹೊಸ ಚೇತನವೊಂದು ಅವರಲ್ಲಿ ಮೂಡಿತು. ಅನೇಕ ಕಂದಾಚಾರಗಳನ್ನು ಕಿತ್ತೊಗೆಯಲಾಯಿತು. ಹೊಸ ಸಮಾಜದ ಸೃಷ್ಟಿಯಾಗಲಿಕ್ಕೆ ಆರಂಭವಾಯಿತು.

ಇದಾದನಂತರ ಇಂಡಿಯಾಕ್ಕೆ ಬಂದ ಪಾದ್ರಿಗಳಿಗೆ ಮೊದಲಿದ್ದ ಭಾಷಾ ತೊಂದರೆಗಳಿರಲಿಲ್ಲ. ಮೊದಲಿನವರು ಸ್ಥಳದ ಭಾಷೆಗಳನ್ನು ಕಲಿತುಕೊಳ್ಳಬೇಕಾಗಿತ್ತು. ಆದರೆ ಹೊಸ ಮಿಷನರಿಗಳಿಗೆ ಈ ತೊಂದರೆ ಇರಲಿಲ್ಲ. ಇಂಗ್ಲಿಷ್ ಬಲ್ಲವರು ಬಹು ಮಂದಿ ಇದ್ದುದರಿಂದ ಅವರ ಕೆಲಸ ಸುಲಭವಾಯಿತು.

ಸ್ತ್ರೀಯರ ವಿದ್ಯಾಭ್ಯಾಸಕ್ಕೂ ಮಿಷನರಿಗಳು ಗಮನಕೊಟ್ಟರು. ಪಂಡಿತ ರಮಾಬಾಯಿಯೆಂಬ ಬ್ರಾಹ್ಮಣ ಕುಟುಂಬದ ಮಹಿಳೆ ೧೮೮೩ರಲ್ಲಿ ಇಂಗ್ಲೆಂಡಿಗೆ ಹೋದಾಗ ಕ್ರೈಸ್ತಮತವನ್ನು ಅವಲಂಬಿಸಿದರು. ಅವರು ಸ್ತ್ರೀಯರಿಗಾಗಿ ಶಾರದಾ ಸದನವನ್ನು ತೆರೆದು ಅವರ ಏಳ್ಗೆಗಾಗಿ ದುಡಿದು ಮಡಿದ ಮಹಿಳೆಯಾಗಿದ್ದಾರೆ.

ಇಂಡಿಯಾದ ಜನರಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸ ಮತ್ತು ತಿಳುವಳಿಕೆ ಹೆಚ್ಚಿದಂತೆಲ್ಲ ಮತಾಂತರಗೊಳಿಸುವ ಕೆಲಸ ಸುಲಭವಾಗಲಿಲ್ಲ. ಆದ್ದರಿಂದ ಕ್ರೈಸ್ತ ಮಿಷನರಿಗಳು

ಬೋಧನೆಯಿಂದ ಮನಃಪರಿವರ್ತನೆ ಮಾಡುವ ಕೆಲಸದ ಜೊತೆಗೆ ಜನತಾ ಸೇವೆ ಮತ್ತು ಶೈಕ್ಷಣಿಕ ಕೆಲಸಗಳನ್ನು ಕೈಗೆ ಹಚ್ಚಿಕೊಂಡರು. ಆಸ್ಪತ್ರೆಗಳನ್ನು ಸ್ಥಾಪಿಸಿದರು; ದಾದಿಯರನ್ನು ತರಪೇತು ಮಾಡಿದರು. ೧೯೫೪ರಲ್ಲಿ ಸಂಗ್ರಹಿಸಿದ ಅಂಕಿಅಂಶಗಳ ಪ್ರಕಾರ ಕ್ರೈಸ್ತರು ೭೦೦ ಔಷಧಶಾಲೆಗಳನ್ನೂ, ೪೦೦ ಆಸ್ಪತ್ರೆಗಳನ್ನೂ, ೩೦೦ ಕೈಗಾರಿಕಾ ಶಾಲೆಗಳನ್ನೂ, ೬೦ ಕಾಲೇಜಗಳನ್ನೂ, ೮೦೦ ಹೈಸ್ಕೂಲುಗಳನ್ನೂ, ೧೫೦೦ ಮಿಡಲ್ ಸ್ಕೂಲುಗಳನ್ನು ಮತ್ತು ಸಾವಿರಾರು ಪ್ರೈಮರಿ ಶಾಲೆಗಳನ್ನೂ ದೇಶದಲ್ಲೆಲ್ಲಾ ತೆರೆದು ನಡೆಸಿಕೊಂಡು ಬರುತ್ತಿದ್ದರು.

೩

ಹೀಗೆ ಕ್ರೈಸ್ತಮತ ಇಂಡಿಯಾಕ್ಕೆ ಕಾಲಿಟ್ಟ ಕಾರಣವಾಗಿ, ಅದರ ಮಿಷನರಿಗಳೂ ಪಾದ್ರಿಗಳೂ ವಹಿಸಿದ ಆಸಕ್ತಿಯಿಂದಾಗಿ, ಇಂಗ್ಲಿಷು ವಿದ್ಯಾಭ್ಯಾಸ ಜನರಲ್ಲಿ ಪ್ರಸಾರವಾದ ಕಾರಣದಿಂದಾಗಿ ಇಂಡಿಯಾದ ನಾನಾ ಕ್ಷೇತ್ರಗಳಲ್ಲಿ ಕ್ರೈಸ್ತಪಾದ್ರಿಗಳೂ ಯೂರೋಪಿನ ಅನೇಕ ಮಹನೀಯರೂ ಕೆಲಸ ಮಾಡಲಾರಂಭಿಸಿದರು. ಪ್ರಾಚೀನ ಶೋಧನದಲ್ಲಿ, ಶಾಸನಶಾಸ್ತ್ರದಲ್ಲಿ, ದೇಶವಿಚಾರ ಕೋಶ ರಚನೆಯಲ್ಲಿ, ಭೂಶೋಧನೆಯಲ್ಲಿ, ದೇಶೀಯ ಭಾಷೆಗಳ ಅರ್ಥಕೋಶ ಮತ್ತು ವ್ಯಾಕರಣಗಳ ರಚನೆಯಲ್ಲಿ, ಸ್ವತಂತ್ರ ಗ್ರಂಥಗಳ ರಚನೆಯಲ್ಲಿ, ಆದಿವಾಸಿಗಳು ಮತ್ತು ಗಿರಿಜನರ ನಡೆನುಡಿಗಳ, ಅವರ ಆಚಾರ ವ್ಯವಹಾರಗಳ, ಅವರಲ್ಲಿರುವ ಜಾನಪದದ ಅಭ್ಯಾಸ ಹಾಗೂ ಸಂಗ್ರಹಕಾರ್ಯದಲ್ಲಿ ಎಲ್ಲರಿಗಿಂತ ಮೊದಲು ಅವರು ಮುನ್ನುಗ್ಗಿ, ಅಪಾರ ಕೆಲಸಮಾಡಿ ಕೀರ್ತಿ ಶೇಷರಾಗಿದ್ದಾರೆ. ಮೊಟ್ಟ ಮೊದಲ ಆಂಗ್ಲೇಯನಾಗಿ ಕ್ರಿ.ಶ. ೧೫೭೯ರಲ್ಲಿ ಬಂದ ಫಾದರ್ ಥಾಮಸ್ ಸ್ಟೀವೆನ್ಸ್ ಎಂಬುವನು ಮರಾಠಿ ಸಾಹಿತ್ಯದ ಓವಿ ಛಂದಸ್ಸನ್ನು ಅನುಸರಿಸಿ ರಚಿಸಿದ ಮರಾಠೀ ಭಾಷೆಯ ಕ್ರಿಸ್ತಪುರಾಣವೆಂಬ ಬೃಹತ್‌ಗ್ರಂಥ ಐರೋಪ್ಯರು ಇಂಡಿಯಾ ಭಾಷೆಯಲ್ಲಿ ಬರೆದ ಮೊದಲ ಗ್ರಂಥವೆನ್ನಬಹುದೊ ಏನೊ. ಅವನು ಕೊಂಕಣಿ ಭಾಷಾ ವ್ಯಾಕರಣವನ್ನೂ ಬರೆದನು. ಕನ್ನಡದಲ್ಲಿಯೂ ಒಂದು ವ್ಯಾಕರಣವನ್ನು ಬರೆದನೆಂದು ಹೇಳುತ್ತಾರೆ. ಆದರೆ ಅದು ಈಗ ಲಭ್ಯವಿಲ್ಲ.

ಹೀಗೆ ಐರೋಪ್ಯರು ನಾನಾ ರೀತಿಗಳಲ್ಲಿ ತಮ್ಮ ಸೇವೆ ಸಲ್ಲಿಸಿದ್ದಾರೆ. ಮೊಟ್ಟ ಮೊದಲು ಮುದ್ರಣಯಂತ್ರ ಭಾರತಕ್ಕೆ ಬಂದುದು ಪೋರ್ಚುಗೀಸರಿಂದ. ಅವರು ಗೋವೆಯಲ್ಲಿ ಅದನ್ನು ೧೫೫೬ರಲ್ಲಿ ಸ್ಥಾಪಿಸಿದರು. ಕನ್ನಡ ಲಿಪಿಯ ಮೊಳೆಗಳನ್ನು ತಯಾರಿಸುವ ಕೆಲಸವನ್ನು ಸ್ಪೈನಿನ ಕಮ್ಮಾರನೊಬ್ಬ ಆರಂಭಿಸಿದ. ಕನ್ನಡದ ಒತ್ತಕ್ಷರಗಳನ್ನೂ ಸೇರಿಸಿ ೨೫೦ ಅಚ್ಚಿನ ಮೊಳೆಗಳನ್ನು ಮಾಡಿ ಮುಗಿಸಲು ಸಾಧ್ಯವಾಗದ ಕಾರಣ ಆ ಕೆಲಸ ಕೈಬಿಟ್ಟು ತಮಿಳು ಲಿಪಿಯ ಅಚ್ಚುಮೊಳೆಗಳನ್ನು ತಯಾರಿಸಿದ. ಇಂಡಿಯಾದ ಲಿಪಿಯೊಂದರಲ್ಲಿ ಅಚ್ಚಾದ ಮೊಟ್ಟಮೊದಲನೆಯ ಗ್ರಂಥ ಸಂತ ಜೇವಿಯರನ 'ದೌತ್ರಿನಾ ಕ್ರಿಸ್ತ' ಎಂಬುದು. ಇದು ಅಚ್ಚಾದದ್ದು ಕ್ರಿ.ಶ. ೧೫೭೮ರಲ್ಲಿ.

ಜೊಸೂಯಿಟ್ ಮಿಷನರಿಗಳನಂತರ ಬಂದ ಡೇನಿಷ್ ದೇಶದ ಮಿಷನರಿಗಳಲ್ಲಿ ಪ್ರಮುಖನಾದ ಜೀಗೆನ್‌ಬಾಗ್ (Ziegenblag) ಎಂಬುವನು ಮಲಬಾರಿಯೊಬ್ಬನ ಸಹಾಯದಿಂದ ಕ್ರಿ.ಶ. ೧೭೧೫ರಲ್ಲಿ ತಮಿಳು ಭಾಷೆಯ ವ್ಯಾಕರಣವೊಂದನ್ನು ಬರೆಯಿಸಿ ಪ್ರಕಟಿಸಿದನು. ಆಮೇಲೆ ೧೭೭೯ರಲ್ಲಿ ಫಬ್ರಿಸಿಯಸ್ (Fabricious) ಎಂಬುವನು ತಮಿಳು – ಇಂಗ್ಲಿಷು ನಿಘಂಟನ್ನು ಬರೆದು ಪ್ರಕಟಿಸಿದನು. ೧೭೮೬ರಲ್ಲಿ ಇಂಗ್ಲಿಷ್ – ತಮಿಳು ನಿಂಘಟೂ ಪ್ರಕಟವಾಯಿತು. ತೆಲುಗು ಮತ್ತು ಕನ್ನಡ ಭಾಷೆ ಗ್ರಂಥಗಳ ಮುದ್ರಣ ಆರಂಭ ಮದ್ರಾಸಿನ ಫೋರ್ಟ್ ಸೆಂಟ್ ಜಾರ್ಜ್ ಕಾಲೇಜಿನಲ್ಲಿ ಎನ್ನಬಹುದು. ಎ.ಡಿ. ಕ್ಯಾಂಬೆಲ್ (A.D. Campbell) ಎಂಬುವನು ೧೮೯೬ರಲ್ಲಿ ತೆಲುಗು ಭಾಷೆಯ ವ್ಯಾಕರಣವನ್ನೂ, ಇದಕ್ಕೆ ಎರಡು ವರ್ಷಗಳ ಮುನ್ನವೇ ಡಾ॥ ವಿಲಿಯಂ ಕ್ಯಾರಿ (Dr. William Carry) ಎಂಬುವನು ಕಲ್ಕತ್ತೆಯ ಬಳಿ ಸೆರಾಂಪುರದ ಮುದ್ರಣದಲ್ಲಿ ಇನ್ನೊಂದು ತೆಲುಗು ಭಾಷಾ ವ್ಯಾಕರಣವನ್ನೂ ಪ್ರಕಟಿಸಿದ್ದರು. ಲಂಡನ್ ಮಿಷನರಿ ಸೊಸೈಟಿಯ ರೆವೆರೆಂಡ್ ವಿಲಿಯಂ ರೀವ್ ಎಂಬುವನು ೧೮೨೪ರಲ್ಲಿ ಇಂಗ್ಲಿಷ್ – ಕನ್ನಡ ನಿಘಂಟೊಂದನ್ನು ತಯಾರಿಸಿ ಮದ್ರಾಸಿನಲ್ಲಿ ಅಚ್ಚುಮಾಡಿಸಿ ಪ್ರಕಟಿಸಿದನು. ೧೮೨೦ರಲ್ಲಿ ಜೆ.ಎಂ. ಮಕೆರ್ರೆಲ್ (J.M. M'Kerrel) ಎಂಬುವನು ಕನ್ನಡದಲ್ಲಿ ಒಂದು ವ್ಯಾಕರಣವನ್ನು ಬರೆದನು. ಕ್ಯಾರಿಯೂ ಸೆರಾಂಪುರ ಪ್ರೆಸ್ಸಿನಲ್ಲಿ ಒಂದು ಕನ್ನಡ ಭಾಷಾ ವ್ಯಾಕರಣವನ್ನು ಪ್ರಕಟಿಸಿದ್ದನು. ಈ ಸಂದರ್ಭದಲ್ಲಿ ಬಿಷಪ್ ಕಾಲ್ಡ್‌ವೆಲ್ ಅವರು ತಮಿಳು ಭಾಷೆಗೂ, ಡಾ॥ ಗುಂಡರ್ಟ್ ಅವರು ಮಳೆಯಾಳಿ ಭಾಷೆಗೂ, ಬ್ರೌನ್ ಅವರು ತೆಲುಗು ನುಡಿಗೂ ಸಲ್ಲಿಸಿದ ಸೇವೆಯನ್ನು ಸ್ಮರಿಸದೇ ಇರಲಾಗುವುದಿಲ್ಲ.

ಭಾರತದಲ್ಲಿ ಪ್ರಾಚ್ಯ ಸಂಶೋಧನಾ ಕಾರ್ಯವನ್ನು ಕೈಕೊಂಡು, ಚಾರಿತ್ರಿಕ ಸಾಧನ ಸಾಮಗ್ರಿಗಳನ್ನು ಸಂಗ್ರಹಿಸಿ, ಅವುಗಳನ್ನು ಪರಿಷ್ಕರಿಸಿ ಭಾರತದ ಇತಿಹಾಸವನ್ನು ಬರೆಯಲು ಪ್ರಯತ್ನಪಟ್ಟವರಲ್ಲಿ ಪಾಶ್ಚಾತ್ಯರೇ ಮೊಟ್ಟಮೊದಲಿಗರು. ಸರ್. ಜಾನ್ ಮಾರ್ಷಲ್, ಡಾ॥ ಸ್ಪೂನರ್, ಡಾ॥ ಮ್ಯಾಕ್ ಕನ್ನಿಂಗ್‌ಹಾಮ್, ಸ್ಟೀನ್, ಸ್ಟೂವಿಯರ್ಟ್ ಪಿಗಟ್, ಬ್ರೂಸ್‌ಫುಟ್ ಮತ್ತು ಮಾರ್ಟಿಮರ್ ವ್ಹೀಲರ್ – ಇವರುಗಳೂ ಈ ಕ್ಷೇತ್ರದಲ್ಲಿ ಮಹತ್ತರವಾದ ಸೇವೆ ಸಲ್ಲಿಸಿ ಕೀರ್ತಿಶೇಷರಾಗಿದ್ದಾರೆ.

ಪ್ರಾಚೀನ ಭಾರತದಲ್ಲಿ ಪ್ರಚಲಿತವಾಗಿದ್ದಂತಹ ಖರೋಷ್ಠಿ ಮತ್ತು ಬ್ರಾಹ್ಮೀಲಿಪಿ ಗಳನ್ನು ಓದಿದ ಕೀರ್ತಿಯೂ ಪಾಶ್ಚಾತ್ಯರಿಗೆ ಸಲ್ಲುತ್ತದೆ. ಕ್ರಿ.ಶ. ೧೮೩೬ರಲ್ಲಿ ಮತ್ತು ಅದರಿಂದೀಚೆಗೆ ಲ್ಯಾಸೆನ್ ಮತ್ತು ಪ್ರಿನ್ಸೆಪ್ ಎಂಬುವರು ಆ ಲಿಪಿಗಳನ್ನು ಓದಿದರು. ಈ ಕಾರಣ ಅನೇಕ ಪ್ರಾಚೀನ ಶಾಸನಗಳಲ್ಲಿ ಏನಿದೆ ಎಂಬುದನ್ನು ಮೊಟ್ಟಮೊದಲಿಗೆ ತಿಳಿದುಕೊಳ್ಳುವಂತಾಯಿತು.

ಕ್ರಿ.ಶ. ೧೭೮೪ರಲ್ಲಿಯೇ ಸರ್ ವಿಲಿಯಂ ಜೋನ್ಸ್ ಎಂಬ ಶ್ರೇಷ್ಠ ನ್ಯಾಯಾಲಯದ ಅಧಿಪತಿ 'Asiatic Society of Bengal' ಎಂಬ ಸಂಸ್ಥೆಯನ್ನು ಸ್ಥಾಪಿಸಿದನು. ಈ ಸಂಸ್ಥೆ ಭಾರತದ ಇತಿಹಾಸವನ್ನು ಬರೆಯುವ ಮೊಟ್ಟಮೊದಲ

ಕೆಲಸ ಮಾಡಿತು. ಜೋನ್ಸ್ ಮತ್ತು ವಿಲ್ಕಿನ್ಸ್ ಅವರು ಭಾರತೀಯಶಾಸ್ತ್ರದ (Indology) ನಿಜವಾದ ಪಿತಾಮಹರು.

ಶಾಸನಗಳ ಅಧ್ಯಯನವೂ ಮೊದಲಿಗೆ ಅವರಿಂದಲೇ ಆರಂಭವಾಯಿತು. ಕನ್ನಡ ಶಾಸನಗಳ ಒಂದು ಸುವ್ಯವಸ್ಥಿತ ಅಧ್ಯಯನ ಆರಂಭವಾದದ್ದು ವಾಲ್ಟರ್ ಇಲಿಯಟ್ ಎಂಬುವನಿಂದ. ಅವನು ೧೮೩೭ರಲ್ಲಿ ಬರೆದ Hindu Inscriptions ಎಂಬ ಲೇಖನದಿಂದ ಕರ್ಣಾಟಕದ ಸಾಂಸ್ಕೃತಿಕ ಮತ್ತು ರಾಜಕೀಯ ಇತಿಹಾಸಗಳ ಅಧ್ಯಯನದಲ್ಲಿ ಒಂದು ಹೊಸ ಅಧ್ಯಾಯವೇ ಆರಂಭವಾಯತು. ಶಾಸನಗಳನ್ನು ಕುತೂಹಲದಿಂದ ಈಕ್ಷಿಸಿ ದೇಶದ ಇತಿಹಾಸವನ್ನು ಬರೆಯುವುದರಲ್ಲಿ ಅವುಗಳಿಗಿರುವ ಮಹತ್ವದ ಸ್ಥಾನವನ್ನು ಗುರುತಿಸಿದವರಲ್ಲಿ ಕರ್ನಲ್ ಮೆಕಂಜೀ (Colonel Colin Mackenzie) ಮೊದಲಿಗನೆಂದು ಹೇಳುತ್ತಾರೆ. ಮೈಸೂರಿನ ಆಂಗ್ಲ ಸೈನ್ಯದಲ್ಲಿ ಅಧಿಕಾರಿಯಾಗಿದ್ದು ೧೭೯೯–೧೮೦೯ರಲ್ಲಿ ಮೈಸೂರು ದೇಶದ ಪರಿವೀಕ್ಷಣಾ ಕಾರ್ಯವನ್ನು (Survey) ಇತರ ನಾಲ್ವರ ಸಹಾಯದಿಂದ ಕೈಗೊಂಡು ಮುಗಿಸಿದನು. ಇವನು ಅನೇಕ ತಾಮ್ರಪಟಗಳನ್ನೂ ಶಾಸನಗಳನ್ನೂ ಸಂಗ್ರಹಿಸಿದನು. ಆಮೇಲೆ ಫ್ಲೀಟರು, ರೈಸರೂ ಶಾಸನಾಧ್ಯಯನದ ಕೆಲಸವನ್ನು ಸಮಗ್ರವಾಗಿ ಮಾಡಿ ಆ ರಂಗದಲ್ಲಿ ಅಗ್ರಗಣ್ಯರೆನಿಸಿಕೊಂಡರು. ರೈಸ್ ಅವರು (೧೮೩೩–೧೯೨೭) ಸಂಗ್ರಹಿಸಿದ ಶಾಸನಗಳು `Epigraphia Carnatica' ಎಂಬ ಹೆಸರಿನ ಹಲವಾರು ಸಂಪುಟಗಳಲ್ಲಿ ಪ್ರಕಟವಾಗಿವೆ.

ಭಾರತೀಯರ ಬೇರೆ ಭಾಷೆಗಳಲ್ಲಿ ನಿಘಂಟುಗಳನ್ನು ರಚಿಸುವುದರಲ್ಲಿ ಕ್ರೈಸ್ತ ಪಾದ್ರಿಗಳು ಹೇಗೆ ಅಗ್ರಗಣ್ಯರೋ ಹಾಗೆ ಕನ್ನಡದಲ್ಲಿಯೂ ಆಗಿದ್ದಾರೆ. ಆಧುನಿಕ ನಿಘಂಟುಗಳ ರಚನೆ ಮಾಡಿದವರುಗಳಲ್ಲಿ ಹಿರಿಯಸ್ಥಾನದಲ್ಲಿರುವವರೆಂದರೆ ರೆವರೆಂಡ್ ಎಫ್. ಕಿಟ್ಟಲರು. ಕ್ರಿ.ಶ. ೧೮೯೩ರಲ್ಲಿ ೧೭೫೨ ಪುಟಗಳುಳ್ಳ ಕನ್ನಡ – ಇಂಗ್ಲಿಷ್ ನಿಘಂಟನ್ನು ರಚಿಸಿದರು 'ಎಲ್ಲಿಯೋ ಹುಟ್ಟಿ ಎಲ್ಲಿಯೋ ಬೆಳೆದು ಯಾವ ಭಾಷೆಯನ್ನೋ ಆಡುತ್ತಿದ್ದ ಅವರೂ ಈ ದೇಶಕ್ಕೆ ಬಂದು ಇಲ್ಲಿನ ಭಾಷೆಯನ್ನು ಅಭ್ಯಾಸ ಮಾಡಿ ಪ್ರಾವೀಣತೆಯನ್ನು ಸಂಪಾದಿಸಿ ಶಾಶ್ವತವಾಗಿ ನಿಲ್ಲುವ ಕೃತಿಗಳನ್ನು ರಚಿಸಿ ಕೀರ್ತಿಭಾಜನರಾಗುವುದು ತುಂಬ ಕಷ್ಟವೂ ಅಪೂರ್ವವೂ ಆದ ಕೆಲಸ. ಇದನ್ನು ಒಂದು ಪವಾಡವೆಂದು ಬೇಕಾದರೂ ಕರೆಯಬಹುದು.' ಕನ್ನಡ ವಿದ್ವತ್ ಪ್ರಪಂಚದಲ್ಲಿ ಮಾರ್ಗದರ್ಶಕರಾದ ಪುಣ್ಯಾತ್ಮರು ಕಿಟ್ಟಲರು. ಸುಮಾರು ೧೮೫೩ರಲ್ಲಿ ಮಂಗಳೂರಿಗೆ ಬಂದು, ಇಲ್ಲಿಗೆ ಬಂದಮೇಲೆ ಕನ್ನಡವನ್ನು ಕಲಿತು, ಶಬ್ದಮಣಿದರ್ಪಣ ಮತ್ತು ನಾಗವರ್ಮನ ಛಂದೋಂಬುದಿಗಳನ್ನು ಪರಿಷ್ಕರಿಸಿ ಮುದ್ರಿಸಿದರು. ಆದರೆ ಕಿಟ್ಟಲ್ ಅವರ ಕೀರ್ತಿ ಶಾಶ್ವತವಾಗಿ ನೆಲೆಸಿರುವುದು ಅವರ ಹದಿನೈದು ವರ್ಷಗಳ ಕಾಲ ಅಪಾರ ಕಷ್ಟಪಟ್ಟು ಸಿದ್ಧಗೊಳಿಸಿದ ಕನ್ನಡ – ಇಂಗ್ಲಿಷ್ ನಿಘಂಟುವಿನಿಂದ.

ಕಿಟ್ಟೆಲ್ ಅವರಿಗಿಂತ ಮುಂಚೆ ೧೮೩೨ರಲ್ಲಿ ರೀವ್ಸ್ ಎಂಬುವರು ಕನ್ನಡ – ಇಂಗ್ಲಿಷ್ ಕೋಶವನ್ನು ರಚಿಸಿದ್ದರೆಂಬುದನ್ನು ಆಗಲೇ ಹೇಳಿದೆ.

ಹೀಗೆ ಪಾಶ್ಚಾತ್ಯರು, ಅವರಲ್ಲಿ ಮುಖ್ಯವಾಗಿ ಪಾದ್ರಿಗಳು ಮತ್ತು ಆಡಳಿತಾಧಿಕಾರಿಗಳು ಈ ದೇಶದ ನಾನಾ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸಿ ಕೀರ್ತಿಶೇಷರಾಗಿದ್ದಾರೆ. ಅವರ ಶ್ರಮದ ಕಥೆಯೇ ಒಂದು ದೊಡ್ಡ ಗ್ರಂಥವಾದೀತು !

ಮೇಲೆ ಹೇಳಿರುವವರಲ್ಲದೆ ಇನ್ನೂ ಅನೇಕ ಮಹನೀಯರು ತಮ್ಮ ಕೊಡುಗೆಗಳನ್ನು ಸಲ್ಲಿಸಿದ್ದಾರೆ. ಆದರೆ ಇಲ್ಲಿ ಸ್ಥಳಾವಕಾಶವಿಲ್ಲದಿರುವುದರಿಂದ ಅವರ ಹೆಸರನ್ನೂ ಅವರು ಮಾಡಿರುವ ಕೆಲಸವನ್ನೂ ಹೇಳಲಿಕ್ಕೆ ಸಾಧ್ಯವಾಗಿಲ್ಲ.

೪

ಪ್ರಕೃತ, ಜನಪದ ಸಾಹಿತ್ಯವೊಂದನ್ನೇ ಗಮನಿಸಿದರೆ ವಿದೇಶಿಯ ಕ್ರೈಸ್ತರೂ ಇತರ ಮಹನೀಯರೂ ಮಾಡಿರುವ ಸೇವೆ ಚಿರಸ್ಮರಣೀಯವಾದುದು. ಜನಪದ ಸಾಹಿತ್ಯ ಅಗಾಧವಾಗಿದೆ. ಅದು ದಿನೇ ದಿನೇ ಕಣ್ಮರೆಯೂ ಕಿವಿಮರೆಯೂ ಆಗುತ್ತಿದೆ. 'ವಿಶ್ವದ ಜನಪದ ಸಾಹಿತ್ಯದೊಡನೆ ಹೋಲಿಸಿ ನೋಡಿದರೆ ಭಾರತದಲ್ಲಿ ಜನಪದ ಸಾಹಿತ್ಯ ಸಂಗ್ರಹಣೆ ಏನೇನೂ ಸಾಲದು' ಎಂದು ಮರಿಯನ್ ಡಬ್ಲ್ಯು ಸ್ಮಿತ್ (Marian W. Smith) ಅವರು ಭಾರತದ ಜನಪದ ಸಾಹಿತ್ಯವನ್ನು ಕುರಿತು 'The Standard Dictionary of Floklore' ಎಂಬ ಜನಪದ ಸಾಹಿತ್ಯದ ವಿಶ್ವಕೋಶದಲ್ಲಿ ಬರೆಯುತ್ತಾ ಹೇಳಿರುವ ಮಾತು ಸಂಪೂರ್ಣ ಸತ್ಯ. ವಿಶ್ವದ ಅನೇಕ ರಾಷ್ಟ್ರಗಳ ಜನಪದ ಸಾಹಿತ್ಯದ ವಿಚಾರದಲ್ಲಿ ಪ್ರಸಿದ್ಧ ಜಾನಪದ ವಿದ್ವಾಂಸರು ಬರೆದಿರುವ ಲೇಖನಗಳನ್ನು ಗಮನಿಸಿದಾಗ, ಅಲ್ಲಿಯ ಸರ್ಕಾರ, ಜನತೆ ಮತ್ತು ವಿಶ್ವವಿದ್ಯಾನಿಲಯಗಳು ಆ ಸಾಹಿತ್ಯಕ್ಕೆ ನೀಡಿರುವ ಮಾನ್ಯತೆ, ಅದನ್ನು ಸಂರಕ್ಷಿಸಿಕೊಳ್ಳಲು ತೋರಿರುವ ಶ್ರದ್ಧೆ ಹಾಗು ಆಸಕ್ತಿಗಳನ್ನು ಪರಿಶೀಲಿಸಿದಾಗ ಭಾರತೀಯರಾದ ನಾವು ನಮ್ಮ ಅಮೂಲ್ಯ ರಾಷ್ಟ್ರೀಯ ಸಂಪತ್ತೊಂದನ್ನು ಅರಿತೋ ಅರಿಯದೆಯೋ ನಿರ್ಲಕ್ಷಿಸಿದ್ದೇವೆ ಎಂಬುದನ್ನು ವಿಷಾದದಿಂದ ಹೇಳಬೇಕಾಗಿದೆ.

ಪಾಶ್ಚಾತ್ಯ ದೇಶಗಳಲ್ಲಿ ಜನಪದ ಸಾಹಿತ್ಯ ವಿಶ್ವವಿದ್ಯಾನಿಲಯಗಳ ಪ್ರಮುಖ ಅಭ್ಯಾಸ ವಿಷಯಗಳಲ್ಲೊಂದಾಗಿದೆ. ಸಂಶೋಧಕರಿಗೆ ಉತ್ತಮ ಸಾಮಗ್ರಿಯನ್ನು ಒದಗಿಸುವಷ್ಟು ವಿಫುಲವಾದ ಸಂಗ್ರಹಣೆ ಮತ್ತು ವಿಶ್ಲೇಷಣೆಗಳು ನಡೆದಿವೆ. ಇದಕ್ಕೆ ಮುಖ್ಯ ಕಾರಣ ತಮ್ಮ ನಾಡಿನ ಜನಪದ ಸಾಹಿತ್ಯದ ಬಗ್ಗೆ ಅವರು ಬಹಳ ಹಿಂದೆಯೇ ಒಲವನ್ನೂ ಗೌರವವನ್ನೂ ಬೆಳೆಸಿಕೊಂಡು ಆಸಕ್ತಿಯಿಂದ ಕೆಲಸ ಮಾಡಿದುದು. ಹದಿನೆಂಟನೆಯ ಶತಮಾನದ ಕೊನೆಯ ಭಾಗದಲ್ಲಿ ಆರಂಭವಾದ ಈ ಕಾರ್ಯಕ್ಕೆ ವೈಜ್ಞಾನಿಕ ಹಿನ್ನೆಲೆಯನ್ನು ಕಲ್ಪಿಸಿದವರು ಜರ್ಮನಿಯ ಗ್ರಿಮ್

ಸಹೋದರರು (Grimm Brothers). ೧೮೩೨ರ ವೇಳೆಗೆ ಯೂರೋಪಿನ ಜನಪದ ಸಾಹಿತ್ಯ ಸ್ವರೂಪನಿರ್ಣಯಕ್ಕೆ ಮೇಲ್ಪಂಕ್ತಿಯನ್ನು ಹಾಕಿದ ಮೇಲೆ ಎಲ್ಲಾ ಐರೋಪ್ಯ ರಾಷ್ಟ್ರಗಳಲ್ಲೂ ಅಮೇರಿಕಾ ರಷ್ಯಾಗಳಲ್ಲೂ ತುಂಬ ವ್ಯವಸ್ಥಿತವಾದ ರೀತಿಯಲ್ಲಿ ಜನಪದ ಸಾಹಿತ್ಯದ ಸಂಗ್ರಹಣೆ, ಅಭ್ಯಾಸ, ಮೌಲ್ಯ ನಿರ್ಧಾರ ಆಗಿವೆ. ಯುರೋಪಿನಲ್ಲಿರುವ ಅನೇಕ ದಂತಕಥೆಯ ಬಗೆಗಳಲ್ಲಿ ಐವತ್ತು ಭಾರತೀಯ ಮೂಲಕ್ಕೆ ಸೇರಬೇಕೆಂದು ವಿದ್ವಾಂಸರು ನಿರ್ಧರಿಸಿದ್ದಾರೆ. ಅಷ್ಟು ದೂರವೇಕೆ, ನಮ್ಮ ನೆರೆಯ ಬರ್ಮಾದೇಶದ ಕಥೆಗಳ ಸಂಗ್ರಹವೂ ಆಮೂಲಾಗ್ರವಾಗಿ ನಡೆದು ಇಂತಿಷ್ಟೇ ದಂತಕಥೆಗಳು ಎಂಬ ತೀರ್ಮಾನವಾಗಿ, ಅವುಗಳ ತುಲನಾತ್ಮಕ ಅಧ್ಯಯನ ನಡೆದಿದೆ. ಮೌಂಗ್ ಹೀನ್ ಆಂಗ್ (Maung Hin Aung) ಅವರ 'ಬರ್ಮಾದ ಜನಪದ ಕಥೆಗಳು' ಎಂಬ ಗ್ರಂಥ ಅತ್ಯಂತ ಶಾಸ್ತ್ರೀಯವಾಗಿ ವಿವೇಚಿಸಲ್ಪಟ್ಟ ಕೃತಿಯಾಗಿದೆ. ಜರ್ಮನಿ, ಜಪಾನ್, ಇಟಲಿ, ಗ್ರೀಸ್, ಚೀನ, ರಷ್ಯ, ಬ್ರಿಟನ್‌ಗಳಲ್ಲಿ ಜನಪದ ಸಾಹಿತ್ಯದ ಸಂರಕ್ಷಣೆ ಸಮರ್ಪಕವಾಗಿ ನಡೆದು ವಿಶ್ವದ ಇತರ ರಾಷ್ಟ್ರಗಳಿಗೆ ಸ್ಫೂರ್ತಿಯನ್ನು ನೀಡಿದೆ.

ಹದಿನಾಲ್ಕು ಪ್ರಧಾನ ಭಾಷೆಗಳ ಜೊತೆಗೆ ಅನೇಕ ಉಪಭಾಷೆಗಳಿಂದ ಭಾರತದಲ್ಲಿ ಜನಪದ ಸಾಹಿತ್ಯ ಸಂಗ್ರಹಣೆ ಅಲ್ಲಿಷ್ಟು ಇಲ್ಲಿಷ್ಟು ನಡೆದಿದೆಯಾದರೂ, ಸಮಗ್ರ ಭಾರತದ ದೃಷ್ಟಿಯಿಂದ ತುಲನಾತ್ಮಕ ಅಭ್ಯಾಸಕ್ಕೆ ಆಗಿರುವ ಸಂಗ್ರಹಕಾರ್ಯ ಅತ್ಯಲ್ಪವೆನಿಸಿದಿರದು. ಸಂಗ್ರಹಕಾರ್ಯದಲ್ಲಿಯೂ ಸಂಪೂರ್ಣವಾಗಿ ಜನಪದ ಸಾಹಿತ್ಯ ಕ್ಷೇತ್ರಕ್ಕಾಗಿಯೇ ತಮ್ಮ ಬದುಕನ್ನು ಮೀಸಲಿಟ್ಟು ದುಡಿದವರು ಕೇವಲ ಬೆರಳೆಣಿಸುವಷ್ಟು ಮಂದಿ ಮಾತ್ರ.

ಭಾರತದಲ್ಲಿ ಜನಪದ ಸಾಹಿತ್ಯ ಸಂಗ್ರಹಣೆಯ ಕಾರ್ಯ ಹತ್ತೊಂಬತ್ತನೆಯ ಶತಮಾನದ ಆದಿಭಾಗದಲ್ಲಿಯೇ ಮಂದಗತಿಯಲ್ಲಿ ಆರಂಭವಾಯಿತು. ಸಂಶೋಧನೆಯ ಎಲ್ಲಾ ಕ್ಷೇತ್ರಗಳನ್ನೂ ತಮ್ಮ ಪಾಲಿಗೆ ಮೀಸಲಿರಿಸಿಕೊಂಡ ಐರೋಪ್ಯರೇ ಭಾರತದ ಜನಪದ ಸಾಹಿತ್ಯ ಕ್ಷೇತ್ರದಲ್ಲೂ ಆರಂಭದಲ್ಲಿ ಶ್ರಮಿಸಿದರು. ಭಾರತದ ಜನಪದ ಸಾಹಿತ್ಯ ಕ್ಷೇತ್ರದ ಮೂಲಪುರುಷರಾಗಿ ಕರ್ನಲ್ ಟಾಡ್ (Co. Todd), ಡಬ್ಲು, ಡಬ್ಲು. ಹಂಟರ್ (W.W. Hunter), ಜಿ.ಎ. ಗ್ರಿಯರ್‌ಸನ್ (G.A. Grierson) – ಮುಂತಾದವರು ಮಾಡಿದ ಸೇವೆ ಅಸದೃಶವಾದುದು. ಟಾಡರ 'ರಾಜಸ್ಥಾನದ ಜನಪದ ಸಾಹಿತ್ಯ', ಹಂಟರ 'ಆ್ಯನಲ್ಸ್ ಆಫ್ ರೂರಲ್ ಬೆಂಗಾಲ್', ಸರ್ ಎಡ್ವರ್ಡ್‌ಗೇಲ್ (Sir Edward Gale) ಮತ್ತು ಗ್ರಿಯರ್‌ಸನ್ನರ 'ಬಿಹಾರ ಮತ್ತು ಅಸ್ಸಾಮ ಜನಪದ ಸಾಹಿತ್ಯ' ಕೃತಿಗಳು ವಿಶ್ವ ಜನಪದ ಸಾಹಿತ್ಯಕ್ಕೆ ಆರಂಭದಲ್ಲಿ ದೊರೆತ ಭಾರತೀಯ ಕಾಣಿಕೆಗಳು.

ಆಂಗ್ಲ ವಿದ್ವಾಂಸರೂ ಮಿಷನರಿಗಳೂ ಅಧಿಕಾರಿಗಳೂ ಭಾರತೀಯ ಭಾಷೆಗಳನ್ನು ಕಲಿತು, ಇಲ್ಲಿಯ ಜನಜೀವನವನ್ನು ಗಮನಿಸಿ, ನಿಕಟ ಸಂಪರ್ಕದೊಡನೆ ಕೆಲಸ ಮಾಡಿ ಭಾರತೀಯ ಸಂಸ್ಕೃತಿಯನ್ನು ವಿಶ್ವಕ್ಕೆ ಪರಿಚಯ ಮಾಡಿಕೊಡುವ ಹರಿಕಾರರಾದರೆಂದರೂ ತಪ್ಪಾಗಲಾರದು. ಕೇವಲ ಕುತೂಹಲಕ್ಕಾಗಿ ಆರಂಭವಾದ ಅವರ ಕೆಲಸ ಭಾರತದಲ್ಲಿ ಅನೇಕ ಅದ್ಭುತಗಳನ್ನೇ ಕಂಡರಿಸಿತು. ೧೮೧೬ರ ವೇಳೆಗೆ ಪ್ರಕಟವಾದ ಅಬ್ಬೆ ಡೂವಾ (Abbe Dubbois) ಅವರ ' The Hindu Customs and Manners' ಎನ್ನುವ ಕೃತಿ ಭಾರತೀಯ ಬದುಕಿನ ಬಗ್ಗೆ ಐರೋಪ್ಯದ ಪ್ರತಿಕ್ರಿಯೆಯೇನು ಎಂಬುದನ್ನು ಬಹು ಸೊಗಸಾಗಿ ಬಿತ್ತರಿಸುವ ಕೃತಿಯಾಗಿದೆ. ದೇಶ ಭಾಷೆಗಳಲ್ಲಿ ಅನಂತವಾಗಿ ವ್ಯಾಪಿಸಿದ್ದ ಗಾದೆಗಳು ಭಾರತೀಯರ ಲೋಕಾನುಭವಕ್ಕೆ, ಬುದ್ಧಿಕುಶಲತೆಗೆ, ಬದುಕಿನ ರೀತಿ–ನೀತಿಗಳಿಗೆ, ಅವರ ರಸಿಕತೆಗೆ ಹಿಡಿದ ಕನ್ನಡಿ. ಅವನ್ನು ಆರಂಭದಲ್ಲಿ ಸಂಗ್ರಹಿಸಿ ಇಂಗ್ಲಿಷಿಗೆ ಅನುವಾದಿಸಿ ಪ್ರಕಟಿಸಿರುವುದನ್ನು ಗಮನಿಸಬಹುದು. ೧೮೩೨ರ ವೇಳೆಗೆ ರೆವರೆಂಡ್ ಮಾರ್ಟನರು (Rev. Morton) ಬಂಗಾಳದ ಗಾದೆಗಳ ಒಂದು ಸಂಕಲನವನ್ನು ಹೊರತಂದರು. ೧೮೯೪ರಲ್ಲಿ ಪ್ರಕಟವಾದ ಜಿ.ಡಿ. ಉಪ್ರಾತಿ (G.D. Uprathi) ಅವರ ಗಾದೆಗಳ ಸಂಕಲನವೂ ಗಮನಾರ್ಹವಾದ ಕೃತಿ. ಇಪ್ಪತ್ತನೆಯ ಶತಮಾನದ ಆದಿ ಭಾಗದಲ್ಲಿ ದಕ್ಷಿಣ ಭಾರತದಲ್ಲಿ ಗಾದೆಗಳ ಸಂಕಲನಗಳು ಹೊರಬಂದಿವೆ. ಮಂಗಳೂರಿನ ಬಾಸೆಲ್ ಮಿಷನ್ ಪ್ರೆಸ್ಸಿನಿಂದ ಐದು ದಶಕಗಳ ಹಿಂದೆಯೇ ಪ್ರಕಟವಾದ ಗಾದೆಗಳ ಸಂಕಲನಗಳಲ್ಲಿ ಕನ್ನಡ ಮೂಲ ಇಂಗ್ಲಿಷ್ ಅನುವಾದ ಎರಡನ್ನೂ ಕಾಣಬಹುದಾಗಿದೆ. ಕಿಟ್ಟೆಲ್ ಅವರ ಅರ್ಥಕೋಶವೂ ಗಾದೆಗಳ ಒಂದು ಅಪೂರ್ವ ಕೋಶವೇ ಆಗಿದೆ.

ಆದರೂ ದಕ್ಷಿಣ ಭಾರತದಲ್ಲಿ ಸಾಕಷ್ಟು ಯಶಸ್ವಿಯಾಗಿ ಜನಪದ ಸಾಹಿತ್ಯವನ್ನು ಸಂಕಲಿಸಿ ಪ್ರಕಟಿಸಿದವರು ಚಾರ್ಲ್ಸ್ ಈ. ಗೋವರ್ಸನ್ (Charles E. Goverson) ಅವರೇ. ಕನ್ನಡದ ಕೆಲವು ಕಥೆಗಳನ್ನು ಸಂಗ್ರಹಿಸಿ ಫ್ಲೀಟರು ಇಂಡಿಯನ್ ಅಂಟಿಕ್ವರಿಯಲ್ಲಿ ಪ್ರಕಟಿಸಿದ್ದರು. ೧೮೦೫ರ ಸುಮಾರಿಗೆ ಕನ್ನಡ ಮೂಲದ 'ಟಿಪ್ಪು ಸುಲ್ತಾನರ ಬಾಳಿನ ಹಾಡ'ನ್ನು ಲೇಯ್ಡನ್ (John Leyden) ಇಂಗ್ಲಿಷಗೆ ಅನುವಾದಿಸಿದ ನಿದರ್ಶನವನ್ನು 'ನಾಡ ಪದಗಳು' ಎಂಬ ಜನಪದ ಸಾಹಿತ್ಯ ಸಂಕಲನದಲ್ಲಿ ಕಾಣಬಹುದು.

೧೯೦೯ ರಲ್ಲಿ ಇ.ಎಂ. ಗೋರ್ಡರ್ (E.M. Gordar) ಅವರು 'ಭಾರತೀಯ ಜನಪದ ಕಥೆ'ಗಳನ್ನು ಪ್ರಕಟಿಸಬೇಕಾದರೆ ಅದಕ್ಕೆ ಪೂರ್ವಭಾವಿಯಾಗಿ ಪ್ರಕಟವಾಗಿದ್ದ ಕೃತಿಗಳನ್ನು ಮರೆಯುವಂತಿಲ್ಲ. ೧೮೯೧ರಲ್ಲಿಯೇ ಕ್ಯಾಂಬೆಲರು (Campbell) 'ಸಂತಾಲದ ಜನಪದ ಕಥೆ'ಗಳನ್ನು ಪ್ರಕಟಿಸಿದ್ದರು, ೧೮೯೨ರಲ್ಲಿ ಜೆ. ಜಾಕಬ್

(J. Jacob) ಅವರು 'ಭಾರತದ ದಂತಕಥೆಗಳು' ಎಂಬ ಸಂಕಲನವನ್ನು ಹೊರತಂದರು. ೧೮೮೦ರಲ್ಲಿ ಜೆ. ಎಚ್. ನೋಲ್ಸರು (J.H. Knowles) 'ಕಾಶ್ಮೀರದ ಜಕನಪದ ಕಥೆ'ಗಳನ್ನು ಪ್ರಕಟಿಸಿದರು. ಎಂ. ಸ್ಟೋಕ್ಸರ (M. Stokes) 'ಭಾರತೀಯ ದಂತಕಥೆಗಳು' ಎಂಬ ಪುಸ್ತಕ ಈ ಮೊದಲೇ ಪ್ರಕಟವಾಗಿತ್ತು. ಇವರ ಸಾಲಿನಲ್ಲಿಯೇ ೧೮೮೩ರ ವೇಳೆಗೆ 'ಬಂಗಾಳದ ಜನಪದ ಕಥೆಗಳು' ಎನ್ನುವ ಸಂಕಲನವನ್ನು ಹೊರತಂದ ಎಲ್.ಬಿ.ಡೇ (L.B. Day) ಅವರಂಥ ಭಾರತೀಯ ವಿದ್ವಾಂಸರನ್ನೂ ಮರೆಯುವಂತಿಲ್ಲ. ಆದರೂ ಈ ಕ್ಷೇತ್ರದಲ್ಲಿ ಕಳೆದ ಶತಮಾನದಲ್ಲಿ ಏನಾದರೂ ಕೆಲಸ ನಡೆದಿದ್ದರೆ ಅದು ಐರೋಪ್ಯ ವಿದ್ವಾಂಸರಿಂದಲೇ ಎಂಬುದನ್ನು ಒಪ್ಪಿಕೊಳ್ಳಬೇಕು.

'ಜನಪದ ಸಾಹಿತ್ಯ' ಎನ್ನುವ ಪದ ವ್ಯಾಪ್ತವಾದ ಅರ್ಥವುಳ್ಳದ್ದು. 'Folk Literature' ಎನ್ನುವ ಅರ್ಥಕ್ಕಷ್ಟೇ ಅದರ ವ್ಯಾಪ್ತಿಯನ್ನು ಸೀಮಿತಗೊಳಿಸಿಕೊಂಡರೂ, ಅದರಲ್ಲಿ ಒಗಟುಗಳು, ಗಾದೆಗಳು, ಕಥೆಗಳು, ಗೀತೆಗಳು – ಇಷ್ಟಾದರೂ ಬರ ಬೇಕಾಗುತ್ತದೆ. 'Folklore' ಎನ್ನುವ ಪದ ಎಲ್ಲಾ ಜಾನಪದ ಸಂಪ್ರದಾಯಗಳಿಗೂ ಒಳಪಟ್ಟರೆ, 'Folk literature' ಎನ್ನುವ ಪದವನ್ನು 'ಜಾನಪದ ವಾಙ್ಮಯ' ಎಂದೇ ಕರೆದುಕೊಳ್ಳಬಹುದು. ಒಗಟುಗಳು, ಗಾದೆಗಳು ಇತ್ತೀಚೆಗೆ ಸಂಗ್ರಹವಾದಂತೆಯೇ ಇಲ್ಲ. ಜನಪದ ಕಥೆಗಳ ಸಂಕಲನವೂ ಸಾಲದು. ಆದರೆ ಗೀತೆಗಳ ಸಂಗ್ರಹಕಾರ್ಯ ಯಶಸ್ವಿಯಾಗಿ ಆಗುತ್ತಿದೆ.

ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಜನಪದ ಸಾಹಿತ್ಯಕ್ಷೇತ್ರ ಅನೇಕ ಭಾರತೀಯ ಕಾರ್ಯಕರ್ತರಿಂದ ಸುಪುಷ್ಟವಾಯಿತೆಂದೇ ಹೇಳಬೇಕು. ವಿಶೇಷವಾಗಿ ಉತ್ತರ ಭಾರತದಲ್ಲಿ ಈ ಕಾರ್ಯ ತೀವ್ರ ಸ್ವರೂಪದಲ್ಲಿ ಆರಂಭವಾಯಿತು. ಬಂಗಾಳದಲ್ಲಿ ಹಿರಿಯ ಸಾಹಿತಿಗಳೂ ಸುಪ್ರಸಿದ್ಧ ವಿದ್ವಾಂಸರೂ ಈ ಸಾಹಿತ್ಯ ಸಂಗ್ರಹ ಹಾಗೂ ಅವುಗಳ ಶಾಸ್ತ್ರೀಯ ವಿವೇಚನೆಯನ್ನು ನಡೆಸಿದ್ದಾರೆ. ಡಾ. ಡಿ.ಸಿ. ಸೇನ್ ಎಂಬ ಗಣ್ಯ ವಿದ್ವಾಂಸರ ನೇತೃತ್ವದಲ್ಲಿ ಅನೇಕ ಮಹಾ ಸಂಪುಟಗಳಲ್ಲಿ ಬಂಗಾಳದ ಜನಪದ ಸಾಹಿತ್ಯ ಪ್ರಕಟವಾಗಿದೆ. ರವೀಂದ್ರರಂಥ ಮಹಾ ಕವಿಗಳೂ ಸರೋಜಿನೀದೇವಿಯವರೂ ಬಂಗಾಳದ ಜನಪದ ಸಾಹಿತ್ಯದ ಸ್ಫೂರ್ತಿಶಕ್ತಿಯಾಗಿ ಕೆಲಸ ಮಾಡಿದ್ದಾರೆ. ಕಲ್ಕತ್ತದಲ್ಲಿ ಶ್ರೀ ಶಂಕರ್ ಸೇನ್ ಗುಪ್ತರಂಥ ಉತ್ಸಾಹಿಗಳು ಮುಂದೆ ಬಂದು ಒಂದು ಜನಪದ ಸಾಹಿತ್ಯ ಸಂಸ್ಥೆಯನ್ನೇ ಸ್ಥಾಪಿಸಿದ್ದಾರೆ. ಅವರು ಇಂಗ್ಲಿಷಿನಲ್ಲಿ ಪ್ರಕಟಿಸುತ್ತಿರುವ 'Folklore' ಪತ್ರಿಕೆ ಅತ್ಯಂತ ಉಪಯುಕ್ತವಾಗಿದೆ. ಅಲಹಾಬಾದಿನ 'Folklore Research Institute' ಕೂಡ ಭಾರತೀಯ ಜನಪದ ಸಾಹಿತ್ಯ ಸಂಶೋಧನೆಗಳಿಗೆ ಉತ್ತಮ ಅವಕಾಶಗಳನ್ನು ಕಲ್ಪಿಸಿದೆ.

ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶ, ರಾಜಪುತಾನ, ಕಾಶ್ಮೀರ, ಅಸ್ಸಾಮ್, ಬಿಹಾರ ಮುಂತಾದ ಕಡೆಗಳಲ್ಲಿ ಜನಪದ ಸಾಹಿತ್ಯ ಸಂಗ್ರಹವಾಗಿರುವಂತೆ ದಕ್ಷಿಣ

ಭಾರತದಲ್ಲಿ ಆಗಲಿಲ್ಲ; ಆಗಿದ್ದರೂ ಹೆಚ್ಚು ಪ್ರಚಾರಕ್ಕೆ ಬರಲಿಲ್ಲ. ಏಳೆಂಟು ದಶಕಗಳ ಹಿಂದೆಯೇ ನಟೇಶ ಶಾಸ್ತ್ರಿಗಳ 'Folklore of South India' ಪ್ರಕಟವಾಯಿತಾದರೂ, ಅಲ್ಲಿಂದೀಚೆಗೆ ಪ್ರಾದೇಶಿಕ ಭಾಷೆಗಳಲ್ಲಿ ಆದ ಕಾರ್ಯವನ್ನು ಆಂಗ್ಲ ಭಾಷೆಗೆ ಅನುವಾದಿಸುವ ಹೊಣೆಯನ್ನು ಹೆಚ್ಚು ಮಂದಿ ಹೊತ್ತಂತಿಲ್ಲ. ೧೯೦೦ರಿಂದ ಈಚೆಗೆ ಕನ್ನಡ, ತಮಿಳು, ತೆಲುಗು ಮಲೆಯಾಳಗಳಲ್ಲಿ ಸಾಕಷ್ಟು ಸಂಗ್ರಹಕಾರ್ಯ ಆಗುತ್ತಿದೆ. ಆಂಧ್ರದಲ್ಲಿ ಡಾ॥ ರಾಮರಾಜು, ಕರ್ನಾಟಕದಲ್ಲಿ ಡಾ॥ ಗದ್ದೀಮಠ ಮುಂತಾದ ಜನಪದ ಸಾಹಿತ್ಯದ ಶ್ರೇಷ್ಠ ವಿದ್ವಾಂಸರ ನಿದರ್ಶನಗಳಿದ್ದರೂ, ಆಂಧ್ರದಲ್ಲಿ ನೇದಮುರಿ ಗಂಗಾಧರಂ ಅವರೂ, ಕರ್ನಾಟಕದಲ್ಲಿ ಕ.ರಾ.ಕೃ., ಜೀಶಂಪ, ಮತಿಘಟ್ಟ ಮುಂತಾದವರೂ ಈ ಕ್ಷೇತ್ರದಲ್ಲಿ ವಿಶೇಷವಾಗಿ ಕೆಲಸ ಮಾಡುತ್ತಿದ್ದರೂ ಆಗಬೇಕಾದ ಕೆಲಸ ಅನಂತವಾಗಿಯೇ ಇದೆ ಎಂದು ಒಪ್ಪಿಕೊಳ್ಳಬೇಕು.

ಭಾರತದ ಆಧುನಿಕ ಜನಪದ ಸಾಹಿತ್ಯ ವಿದ್ವಾಂಸರ ಸಾಲಿನಲ್ಲಿ ದೇವೇಂದ್ರನಾಥ ಸತ್ಯಾರ್ಥಿ, ಪ್ರಫುಲ್ಲದತ್ತ ಗೋಸಾಮಿ, ದುರ್ಗಾ ಭಾಗವತ್, ಸಾವಿತ್ರಿ ಸೆರಿನ್, ನರೇಂದ್ರ ಧಿರ್, ಸರೋಜಿನಿ, ಬಾಬರ್, ಎಸ್. ಸಿ. ಜೈನ್ ಮುಂತಾದ ಹೆಸರುಗಳು ಕೇಳಿಬರುತ್ತಿವೆ.

ಹೀಗೆ ಎರಡು ಸಾವಿರ ವರ್ಷಗಳ ಕ್ರೈಸ್ತ ಪಾದ್ರಿಗಳ ಮತ್ತು ವಿದೇಶೀಯರ ಪರಂಪರೆಯಲ್ಲಿ ಕೊನೆಯವರು ಡಾ॥ ವೆರಿಯರ್ ಎಲ್ವಿನ್ ಅವರು. ಕೇಂಬ್ರಿಡ್ಜ್ ಪದವೀಧರರಾಗಿ, ಕ್ರೈಸ್ತಪಾದ್ರಿಯಾಗಿ ಕೆಲಸಮಾಡಲು ಇಂಡಿಯಾಕ್ಕೆ ಬಂದು, ಗಾಂಧೀಜಿಯವರ ಪ್ರಭಾವಕ್ಕೂ ಸ್ವಾತಂತ್ರ್ಯ ಆಂದೋಳನಕ್ಕೂ ಸಿಕ್ಕಿ, ಆ ಕಾರಣ ಒದಗಿದ ಭಿನ್ನಾಭಿಪ್ರಾಯಗಳಿಂದ ಚರ್ಚು ಬಿಟ್ಟು, ಗಿರಿಜನರ ಸೇವೆಯಲ್ಲಿ ತೊಡಗಿ, ಗಿರಿಜನರ ಜೀವನವನ್ನು ಸಮಗ್ರವಾಗಿ ಅಭ್ಯಾಸ ಮಾಡಿ, ಅವರನ್ನು ಕುರಿತು ಅವರಲ್ಲಿರುವ ಜನಪದ ಸಾಹಿತ್ಯವನ್ನು ಕುರಿತು ಇಪ್ಪತ್ತೈದಕ್ಕಿಂತಲೂ ಹೆಚ್ಚು ಗ್ರಂಥಗಳನ್ನು ರಚಿಸಿ, ಆರ್ಕ್ಸ್‌ಫರ್ಡಿನ ಡಾಕ್ಟರ್ ಆಫ್ ಸೈನ್ಸ್ ಪದವಿಯನ್ನೂ ಇಂಡಿಯಾ ಸರ್ಕಾರದ ಪದ್ಮಭೂಷಣ ಎಂಬ ಗೌರವವನ್ನೂ ಪಡೆದು, ಗಿರಿಜನ ಪ್ರಪಂಚದಲ್ಲಿ ತಮ್ಮ ಹೆಸರನ್ನು ಶಾಶ್ವತವಾಗಿ ನಿಲ್ಲಿಸಿ ೧೯೬೪ರಲ್ಲಿ ಕಣ್ಮರೆಯಾದವರು ಎಲ್ವಿನ್. ಗಿರಿಜನರ ಅಭಿವೃದ್ಧಿಯ ಬಗ್ಗೆ ಆಳವಾದ ಅಭ್ಯಾಸ ನಡೆಸಿ ಅದು ಹೇಗೆ ನಡೆಯಬೇಕು ಎಂಬ ಬಗ್ಗೆ ಅಮೋಘ ಸಲಹೆಗಳನ್ನಿತ್ತು ಅವನ್ನು ಕಾರ್ಯರೂಪಕ್ಕೆ ತರಲು ಯತ್ನಿಸಿದ ಮಾನವಶಾಸ್ತ್ರಜ್ಞರು ಎಲ್ವಿನ್. ಗಿರಿಜನರ ಬಗ್ಗೆ ಅವರು ತಳೆದ ಧೋರಣೆ ಮತ್ತು ಅವರ ಬಾಳಿನಲ್ಲಿ ಐಕ್ಯವಾಗುವ ಆಸಕ್ತಿ ಗಿರಿಜನ ಕನ್ಯೆಯೊಬ್ಬಳನ್ನು ಮದುವೆಯಾಗುವವರೆಗೂ ಹೋಯಿತು. ತಾನೊಬ್ಬ ಭಾರತೀಯ, ಭಾರತದ ನೆಲ ನೀರು ಗಾಳಿಗಳು ತನ್ನವು ಎಂದು ಭಾವಿಸಿ, ಅವುಗಳನ್ನು ಒಗ್ಗಿಸಿಕೊಂಡು, ಅವುಗಳಿಂದ ತಮ್ಮ ಬಾಳನ್ನು ರೂಪಿಸಿಕೊಂಡವರು ಎಲ್ವಿನರು. ಆ ಕಥೆಯನ್ನು ಸೊಗಸಾಗಿ ಹೇಳಿದ್ದಾರೆ ಎಲ್ವಿನರು ತಮ್ಮ ಈ ಆತ್ಮಚರಿತ್ರೆಯಲ್ಲಿ.

ಒಟ್ಟಿನಲ್ಲಿ ಎಲ್ವಿನರು ಒಬ್ಬ ವಿಶಿಷ್ಟ ವ್ಯಕ್ತಿ. ಜನಸಾಮಾನ್ಯರಲ್ಲಿ ಕೆಲಸಮಾಡಬೇಕೆಂದು ಇಚ್ಛಿಸುವವರು ಏನೇನು ಮಾಡಬಹುದೆಂಬುದನ್ನೂ ಹಾಗೆ ಕೆಲಸಮಾಡುವವರಿಗೆ ಒದಗಬಹುದಾದ ಕಷ್ಟಗಳೇನೆಂಬುದನ್ನೂ ತೋರಿಸಿಕೊಟ್ಟು ಬಹಳ ಕಾಲ ಭಾರತೀಯರ ಕೃತಜ್ಞತೆಗೆ ಪಾತ್ರರಾಗಿ ಉಳಿಯುವ ವ್ಯಕ್ತಿ.

ಎಲ್ವಿನರು ಕಾಲವಾದ ಎರಡು ತಿಂಗಳನಂತರ ಅವರ ಈ ಆತ್ಮಕತೆ ಪ್ರಕಟವಾಯಿತು. ಆದ್ದರಿಂದ ಅವರ ಜೀವನದ ಕೊನೆಯವರೆಗೂ ನಡೆದದ್ದೆಲ್ಲಾ ಈ ಪುಸ್ತಕದಲ್ಲಿ ಸೇರಿದೆ. ೧೯೬೫ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯೂ ಈ ಗ್ರಂಥಕ್ಕೆ ದೊರಕಿತು. ಶ್ರೀಮತಿ ಲೀಲಾ ಎಲ್ವಿನರು ಆ ಪ್ರಶಸ್ತಿಯನ್ನು ಸ್ವೀಕರಿಸಿದರು.

* * *

ಇಂಥವರ ಆತ್ಮಕಥೆಯನ್ನು ಕನ್ನಡಿಗರ ಮುಂದಿಡಲು ಬಹಳ ಸಂತೋಷ ವಾಗುತ್ತದೆ. ಕ.ರಾ.ಕೃ. ಅವರು ಎಲ್ವಿನರ ಆತ್ಮಕಥೆಯನ್ನೂ ಮತ್ತಿತರ ಗ್ರಂಥಗಳನ್ನೂ ನನ್ನ ಮುಂದಿಡುವವರೆಗೆ ನನಗೆ ಅವರ ಹೆಸರೂ ಗೊತ್ತಿರಲಿಲ್ಲ; ಕೇಳಿದ್ದರೂ ಗಮನಿಸಿರಲಿಲ್ಲವೆಂದು ಕಾಣುತ್ತದೆ. ಜಾನಪದ, ಜಾನಪದದ ಅಭಿವೃದ್ಧಿ, ಜನಪದ ಸಾಹಿತ್ಯ, ಅದರ ಸಂಗ್ರಹಣೆ, ಪ್ರಕಟಣೆ ಮುಂತಾದುವುಗಳಲ್ಲಿ ಅಪಾರ ಅಭಿಮಾನ ಆಸಕ್ತಿಗಳಿರುವ ನನಗೆ ಈ ಕ್ಷೇತ್ರದಲ್ಲಿ ಕೆಲಸ ಮಾಡಿ ನಮಗೆ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿರುವ ಈ ವಿದೇಶಿಯರೊಬ್ಬರ ಆತ್ಮಕಥೆಯನ್ನು ಕನ್ನಡಕ್ಕೆ ತರಬೇಕೆಂಬ ಮನಸ್ಸಾಯಿತು. ಆ ಮನಸ್ಸಿನ ಪರಿಣಾಮವೇ ಈ 'ಗಿರಿಜನ ಪ್ರಪಂಚ'. ಸುಮಾರು ಎರಡು ವರ್ಷಗಳ ಹಿಂದೆ ಆರಂಭಿಸಿದ ಕೆಲಸ ಈಗ ಮುಗಿದು ಸರ್ವಾಂಗ ಸುಂದರವಾಗಿ ಅಚ್ಚಾಗಿ, ಸಜ್ಜಾಗಿ ಕನ್ನಡಿಗರ ಕೈಯಲ್ಲಿದೆ. ಈ ಸಂಗ್ರಹಾನುವಾದ ಎಷ್ಟರಮಟ್ಟಿಗೆ ಆಗಿದೆ ಎಂಬುದನ್ನು ಹೇಳಲಾರೆ. ಮೂಲದ ಭಾವನೆಗಳಿಗೆ ಚ್ಯುತಿಬರದಂತೆ, ಅಲ್ಲಿ ಬರುವ ಸ್ವಾರಸ್ಯ ಪ್ರಸಂಗಗಳು ಹಾಗೂ ತಿಳಿಹಾಸ್ಯಗಳು ಉಳಿಯುವಂತೆ ಮಾಡಲು ಪ್ರಯತ್ನಪಟ್ಟಿದ್ದೇನೆ. ಕೊರತೆಗಳಿದ್ದರೆ ಅವಕ್ಕೆ ನಾನು ಕಾರಣನೇ ಹೊರತು ಮೂಲ ಗ್ರಂಥಕರ್ತರಲ್ಲ.

ಈ ಗ್ರಂಥಕ್ಕೆ ಮುನ್ನುಡಿಯನ್ನು ಬರೆಯಬೇಕೆಂಬ ನನ್ನ ಕೋರಿಕೆಯನ್ನು ಪೂಜ್ಯರೂ ಕನ್ನಡ ಸಾಹಿತ್ಯ ಭಂಡಾರಕ್ಕೆ ವೈಶಿಷ್ಟ್ಯಪೂರ್ಣವಾದ ನಿಧಿಯನ್ನು ಅರ್ಪಿಸಿ ಕೃತಾರ್ಥರಾಗಿರುವವರೂ ಆದ ಶ್ರೀ ಶಿವರಾಮ ಕಾರಂತರಲ್ಲಿ ಮೊದಲೇ ಸಲ್ಲಿಸಿದ್ದೆ. ಅದನ್ನು ಅವರು ನೆರವೇರಿಸಿಕೊಟ್ಟಿದ್ದಾರೆ. ಅಷ್ಟೇ ಅಲ್ಲ. ನನ್ನ ಈ ಕೆಲಸದ ಬಗ್ಗೆ ತುಂಬ ಪ್ರೋತ್ಸಾಹಕರವಾದ ಮುತ್ತುಗಳಂಥ ನಾಲ್ಕು ಮಾತುಗಳನ್ನು ಹೇಳಿ ಆಶೀರ್ವದಿಸಿದ್ದಾರೆ. ಯಕ್ಷಗಾನ, ಜಾನಪದ ಮತ್ತು ಜನಪದ ಸಾಹಿತ್ಯ– ಇವೆರಡಕ್ಕೂ ಹೆಚ್ಚಿನ ಸೇವೆ ಸಲ್ಲಿಸಿರುವವರಲ್ಲಿ ಶ್ರೀ ಕಾರಂತರೊಬ್ಬರು. ಈ ಹಿರಿಯರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಜನಪದ ಸಾಹಿತ್ಯದ ಬಗ್ಗೆ ಅಪಾರ ಕೆಲಸ ಮಾಡುತ್ತಿರುವ ಶ್ರೀ ಜೀಶಂಪ ಅವರ ಮೆಚ್ಚುಗೆ ಹಾಗೂ ಸಲಹೆಗಳಿಗೆ ನಾನು ಕೃತಜ್ಞ. ಈ ಗ್ರಂಥದ ಹಸ್ತಪ್ರತಿಯನ್ನು ಆಮೂಲಾಗ್ರವಾಗಿ ಓದಿ, ತಪ್ಪುಗಳನ್ನು ತಿದ್ದಿ, ಸೂಕ್ತ ಸಲಹೆ ಹಾಗೂ ಮೆಚ್ಚುಗೆಗಳನ್ನು ಸೂಚಿಸಿ ಪ್ರೋತ್ಸಾಹಿಸಿದ ದ.ಕ. ಜಿಲ್ಲೆಯ ಸನ್ಮಿತ್ರ ಏರ್ಯ ಲಕ್ಷ್ಮೀನಾರಾಯಣ ಆಳ್ವರಿಗೂ ವಿದ್ವಾನ್ ಕೊಳಂಬೆ ಪುಟ್ಟಣ್ಣಗೌಡರಿಗೂ ನನ್ನ ಕೃತಜ್ಞತಾಪೂರ್ವಕವಾದ ವಂದನೆಗಳು. ಸಹೃದಯರ ಸಹವಾಸ ಕೆಲಸಗಾರನಿಗೆ ಸಾವಿರ ಕೈಗಳ ಶಕ್ತಿಯನ್ನು ನೀಡುತ್ತದೆ.

ಮಂಗಳೂರು
೯–೨–೧೯೬೭

ಎಚ್. ಎಲ್. ನಾಗೇಗೌಡ

ಚಿತ್ರಗಳು

೧೯೩೮ರಲ್ಲಿ ಷಿಲ್ಲಾಂಗ್ ರಾಜಭವನದಲ್ಲಿ ನಡೆದ ಹಿರಿಯ ಅಧಿಕಾರಿಗಳ ಸಮಾವೇಶ

ಪ್ರೊಫೆಸರ್ ಕ್ರಿಸ್ಟೋಫರ್ ಎಂಬ ಆಸ್ಟ್ರಿಯನ್ ವಿದ್ವಾಂಸರೊಡನೆ ಷಿಲಾಂಗ್‌ನಲ್ಲಿ

ಶ್ರೀಮತಿ ಇಂದಿರಾಗಾಂಧಿಯವರೊಡನೆ – ಷಿಲ್ಲಾಂಗ್‌ನಲ್ಲಿ

ನೀಫಾದಲ್ಲಿ ವಿದ್ಯಾರ್ಥಿಗಳೊಡನೆ

ಜವಹರ್‌ಲಾಲ್ ನೆಹ್ರೂ ಅವರೊಡನೆ

Dr. Elwin and his Family Members with Mrs. Elwin sister Edyith Elwin.

ಎಲ್ವಿನ್ ಓದಿದ ಆಕ್ಸ್‌ಫರ್ಡ್ ಯೂನಿವರ್ಸಿಟಿ ಮೆರ್ಟನ್ ಕಾಲೇಜು – ಲೀಲಾ ಎಲ್ವಿನ್

ಬೊಂಬಾಯಿ ತಾಜ್‌ಮಹಲ್ ಹೊಟೇಲಿನಲ್ಲಿ ಜಹಾಂಗೀರ್ ಪಟೇಲ್, ಅವರ ಪತ್ನಿ ಮರಿಯಾ ಸೋಫಿಯಾ ಪಟೇಲ್ ಮತ್ತು ಹಿವ್ ಲೇ ಅವರೊಡನೆ

Dr. Verrier Elwin

Dr. Verrier Elwin with Mr. Fazal Ali, the then Governor of Assam.

ಆದಿವಾಸಿ ಮಕ್ಕಳೊಡನೆ ಎಲ್ವಿನ್ – ಒಬ್ಬ ಆದಿವಾಸಿ ಜೊತೆ ಡಾ॥ ಎಲ್ವಿನರಿಗೆ ೧೯೬೧ರಲ್ಲಿ ದೊರೆತ ಪದ್ಮಭೂಷಣ ಪ್ರಶಸ್ತಿ

ಮೊಟ್ಟಮೊದಲಿಗೆ ಎಲ್ವಿನ್ ಜೊತೆ ಕೆಲಸ ಮಾಡಿದ ಶ್ಯಾಮರಾವ್ ಹಿವ್ ಲೇ ಮತ್ತು ಅವರ ಪತ್ನಿ ಕುಸುಮ್ ಹಿವ್‌ಲೇ

ಆದಿವಾಸಿ ಗೊಂಡ ಬುಡಕಟ್ಟಿಗೆ ಸೇರಿದ ಎಲ್ವಿನ್‌ರ ಮೊದಲ ಹೆಂಡತಿ ಕೋಷಿ ಎಲ್ವಿನ್

ವೆರಿಯರ್ ಎಲ್ವಿನ್ ೧೯೦೪ರಲ್ಲಿ – ಎರಡು ವರ್ಷದ ಮಗುವಾಗಿದ್ದಾಗ ತಂದೆತಾಯಿಗಳೊಡನೆ ಗಾಂಧೀಜಿಯವರ ಜೊತೆ ಗಾಳಿಸವಾರಿ

ಬೈಗಾನೊಬ್ಬ ಕೂನಿಯಿಂದ ಮೀನುಗಳನ್ನು ಕೊಡವುತ್ತಿರುವುದು – ಬೈಗರು ಮೀನುಹಿಡಿಯುತ್ತಿರುವುದು

ಬೈಗಾ ಹೆಂಗಸು ಅಡುಗೆ ಮಾಡುತ್ತಿರುವುದು, ಬೈಗಾ – ಮುರಿಯ, ಬೈಗಾ – ಬಿಂಜ್‌ವರ್.

ಬೈಗಾ – ಯುವಕ ಭೂಮಿಯಾ

ವೆರಿಯರ್ ಎಲ್ವಿನ್ ತಮ್ಮ ಷಿಲ್ಲಾಂಗ್ ಪುಸ್ತಕ ಭಂಡಾರದಲ್ಲಿ

ಮೀರಾಬೆನ್ನಳೊಡನೆ ಸಬರ್ಮತಿ ಆಶ್ರಮದಲ್ಲಿ

ಗೊಂಡ್ ಮತ್ತು ಪರ್ಧಾನ್ ಮಕ್ಕಳೊಡನೆ – ೧೯೪೪ – ಕುಮಾರ್ – ಟಿಬೆಟ್ ಗಡಿಯಲ್ಲಿ – ೧೯೫೮,

ನಕುಲ್ – ಅಶೋಕ್ – ವಸಂತ್

ಒರಿಯ ಕುಲುಮೆ – ದೂಧ್ ಭೈನಾ ಹೆಂಗಸು ಬೇರುಕೀಳುವ ಹಾರೆಯೊಡನೆ – ಭೈರೋತಿಯಾ ಹೆಂಗಸು

ಭೂಮಿಯಾ ಜನರ ಟುಮ್ಕಿ ಮತ್ತು ಡೋಲು, ಭೂಮಿಯಾ ಹುಡುಗಿ ನೇಯಿಗೆ ಕೆಲಸದಲ್ಲಿ, ಭೂಮಿಯಾ ಮದುವೆಯಾದ ಮೇಲೆ – ಅಗರಿಯಾ ಹುಡುಗ ನೃತ್ಯದ ಉಡುಪಿನಲ್ಲಿ

ಪಟಾರಿಯಾ ಅಗರಿಯಾ ಜನ – ಕುಣಿತಕ್ಕೆ ಸಿದ್ಧಳಾದ ಭೂಮಿಯಾ ಹೆಣ್ಣು

ಮುರಿಯ ಹೆಣ್ಣೊಬ್ಬಳು ನೃತ್ಯದ ಭಂಗಿಯಲ್ಲಿ – ಕೊನ್ಯಾಕ – ತನ್ನ ತಂದೆಯ ಸಮಾಧಿ ಗೊಂಬೆಯೊಡನೆ.

ಕೊನ್ಯಾಕ್ ಹುಡುಗಿ ಹೆಣಿಗೆ ಕೆಲಸದಲ್ಲಿ, ಕೆಲಸಕ್ಕೆ ಹೊರಟ ಕೊನ್ಯಾಕ್ ಹುಡುಗಿ ಹುಲ್ಲಿನ ಲಂಗದಲ್ಲಿ

ಚಂದಾ ಅನುಸರಿಸಿ – ನೀಫಾದ ದೈವದ ಕುಣಿತ – ಲಡಾಖಿ ಜನಪದ ಕುಣಿತ.

ಪ್ರವೇಶ

ಬ್ರಿಟನ್ ಮತ್ತು ಇಂಡಿಯಾ – ಈ ಎರಡು ಪ್ರಪಂಚಗಳ ಮಧ್ಯೆ ಅನೇಕ ವರ್ಷಗಳು ಬಾಳಿದ ಒಬ್ಬನ ಕಥೆ ಇದು. ತನ್ನ ಬಾಳಿನ ಅನುಭವದಿಂದ ಪೂರ್ವ ಪಶ್ಚಿಮಗಳು 'ಒಂದೇ ಹೃದಯದ ಎರಡು ಮಿಡಿತ'ಗಳೆಂದು ಕಂಡುಕೊಂಡವನ ಚರಿತ್ರೆ ಇದು. ಬಹು ಧರ್ಮನಿಷ್ಠವೂ ಕ್ರೈಸ್ತಮತ ಬೋಧನಾ ನಿರತವೂ ಆದ ಮನೆಯಿಂದ ಹೊರಟ ನಾನು ಆಧುನಿಕವೂ ಪರಮತ ಸಹಿಷ್ಣುವೂ ಆದ ಆಕ್ಸ್‌ಫರ್ಡಿಗೆ ಹೋಗಿ, ಅನಂತರ ಗಾಂಧೀಜಿಯ ಸಬರ್ಮತಿ ಆಶ್ರಮದ ಮೂಲಕ ಇಂಡಿಯಾದ ಗುಡ್ಡಗಾಡುಗಳಿಗೆ ಬಂದೆ. ಈ ಯಾತ್ರೆ ನನ್ನ ದೃಷ್ಟಿಕೋನದಲ್ಲಿ ಮತ್ತು ಜೀವನರೀತಿಯಲ್ಲಿ ಅನೇಕ ಬದಲಾವಣೆಗಳನ್ನುಂಟುಮಾಡಿತು. ಆಂಗ್ಲಿಕನ್ (ಅಂದರೆ ಇಂಗ್ಲೆಂಡಿನ ಸುಧಾರಿತ ಧರ್ಮದ) ಪಾದ್ರಿಯಾಗಿ ಆಕ್ಸ್‌ಫರ್ಡ್‌ನಲ್ಲಿ ಇನ್ನೇನು ನೆಲೆಸಿಬಿಟ್ಟೆ ಎನ್ನುವಷ್ಟರಲ್ಲಿ, ಇಂಡಿಯಾ ನನ್ನ ಮನಸೆಳೆದು, ನನ್ನನ್ನು ಬೇರೊಂದು ಭೂಭಾಗಕ್ಕೆ ಕೊಂಡೊಯ್ಯಿತು. ಕೆಲವು ವರ್ಷಗಳ ಹೋರಾಟದ ನಂತರ ನಾನು ಚರ್ಚನ್ನು ಬಿಟ್ಟೆ. ಚರ್ಚ್ ಬಿಟ್ಟರೂ ಕಲಿಯುವುದನ್ನು ಬಿಡಲಿಲ್ಲ. ಗಾಂಧೀಜಿಯವರ ಸಂಪರ್ಕ ಇಂಡಿಯಾಕ್ಕೆ ನನ್ನನ್ನು ಬಂಧಿಸಿತು. ಈಗ ನಾನು ಇಂಡಿಯಾದ ಪ್ರಜೆಯಾಗಿದ್ದೇನೆ. ಭವ್ಯವೂ ಪುರಾತನವೂ ಆದ ನಗರಗಳು ನನಗೆ ಹಿಂದೆ ಮೆಚ್ಚಿಗೆಯಾಗಿದ್ದರೂ, ಈಗಲೂ ಇದ್ದರೂ, ನಾನು ಬೇಕಾಗಿಯೇ ದೂರದ ಹಾಗೂ ತುಂಬಾ ಹಿಂದುಳಿದ ಹಳ್ಳಿಗಳಲ್ಲಿ ವಾಸಮಾಡುತ್ತ ಬಂದೆ. ಗಿರಿಜನ ಸಮಾಜದ ಹೆಣ್ಣುಮಗಳನ್ನು ಮದುವೆಯಾದೆ. ಆ ಮದುವೆಯಿಂದ ಆನಂದವನ್ನು ಪಡೆದೆ. ಇಂಡಿಯಾದಲ್ಲಿ ಸುಖದುಃಖಗಳನ್ನು ಸಿದ್ಧಿಸಿದ ಆಸೆಗಳನ್ನು, ಕನಸುಗಳನ್ನು ಕಂಡಿದ್ದೇನೆ. ಎಲ್ಲಕ್ಕಿಂತ ಹೆಚ್ಚಾಗಿ ನಿಜವಾದುದನ್ನು ಕಂಡಿದ್ದೇನೆ; 'ಅವಾಸ್ತವದ ಏಕತೆಯಿಂದ ವಾಸ್ತವಿಕೆಗೆ ಕರೆದೊಯ್' ಎಂಬ ಪ್ರಾರ್ಥನೆಗೆ ಉತ್ತರವನ್ನು ಪಡೆದಿದ್ದೇನೆ.

ಈ ಬದಲಾವಣೆಗಳಾದರೂ, ನನ್ನ ಬಾಳಿನಲ್ಲಿ ಒಂದು ಸಮಂಜಸ ಸೂತ್ರ ಇರುವುದು ಕಂಡುಬಂದಿದೆ; ಸಾಂಪ್ರದಾಯಿಕ ನಂಬಿಕೆ ಹೋದರೂ ಸಜೀವವಾದ ತತ್ವವೊಂದು ಉಳಿದುಬಂದಿದೆ. ಇಲ್ಲಿ – ಈ ಪ್ರಪಂಚದಲ್ಲಿ – ನೆಲೆಯಾದ ನಗರವೊಂದಿಲ್ಲ, ಮತ್ತು ಈ ಪ್ರಪಂಚದ ಬಹುಮಾನಗಳನ್ನು ಮೀರಿಸಿದ ಮತ್ತು ಕೈ ಸಿಲುಕದ ನಿಧಿಯೊಂದಿದೆ ಎಂಬುದನ್ನು ನನ್ನ ಬಾಲ್ಯ ನನ್ನ ಮೇಲೆ ಮುದ್ರೆಯೊತ್ತಿತ್ತು. ಶಾಲೆಗೆ ಹೋದಾಗ ವರ್ಡ್ಸ್‌ವರ್ತ್ ಮಹಾಕವಿ ನನಗೆ ಮೆಚ್ಚುಗೆಯಾದ. ಗುಡ್ಡಗಾಡಿನಲ್ಲಿ ಬಡಬಗ್ಗರಲ್ಲಿ ಮಾನವನ ಮೂಲಗುಣವನ್ನು ಕಾಣಬಹುದೆಂದು ಆತನ ಕಾವ್ಯಗಳು ಒತ್ತಿಹೇಳಿದುವು. ಆಕ್ಸ್‌ಫರ್ಡ್‌ನಲ್ಲಿ ಸ್ವತಂತ್ರವಾಗಿ ಹಾಗೂ ನವ್ಯವಾಗಿ ಆಲೋಚಿಸುವ ಗುಣವನ್ನು ಬೆಳೆಸಿಕೊಂಡೆ. ಈ ಗುಣ ಮನುಷ್ಯನಿಗೆ ಒಳಶಕ್ತಿಯನ್ನು ನೀಡಿ, ಹೊರಗಣ

ಸನ್ನಿವೇಶದಿಂದ ಸ್ವತಂತ್ರವಾಗುವಂತೆ ಮಾಡುತ್ತದೆ. ಈ ಗುಣವಿಲ್ಲದಿದ್ದರೆ ಜೀವನದ ಒಂಟಿತನವನ್ನೂ ದುರಂತಗಳನ್ನೂ ನಾನು ಸಹಿಸುವುದು ಅಸಾಧ್ಯವಾಗುತ್ತಿತ್ತು. ಇಂಡಿಯಾದಲ್ಲಿ ಅದರಲ್ಲಿಯೂ ಗಾಂಧೀಜಿಯ ಆಶ್ರಮಗಳಲ್ಲಿ, ನಾನು ಕಳೆದ ಮೊದಲ ಕೆಲವು ವರ್ಷಗಳು ಕಷ್ಟದ ಬಾಳಿಗೆ ಶಿಕ್ಷಣ ನೀಡಿದಂತಿದ್ದುವು. ಈಗಲೂ, ನನ್ನ ಮನೆ ಹಳ್ಳಿಯಲ್ಲಿಲ್ಲದಿರುವಾಗಲೂ, ನನ್ನ ಹೆಚ್ಚು ಕಾಲವನ್ನು ಹಳ್ಳಿಯಲ್ಲಿ ಕಳೆಯುತ್ತಿದ್ದೇನೆ; ನನ್ನ ಮನಸ್ಸನ್ನು ಹೆಚ್ಚಾಗಿ ಗಿರಿಜನ ಪ್ರಪಂಚದಲ್ಲಿ ಲೀನಮಾಡಿದ್ದೇನೆ.

ಇಂಡಿಯಾ ಬಗ್ಗೆ ನನಗೆ ಬಹಳ ಅಭಿಮಾನವುಂಟು. ನಾನು ಇಂಡಿಯನ್ ಆದುದಕ್ಕೆ ಹೆಮ್ಮೆಯುಂಟು. ಹಾಗೆಯೇ ಯಾವುದರ ಸಂಸ್ಕೃತಿಯಲ್ಲಿ ನನ್ನ ಬೇರುಗಳುಂಟೋ ಮೂಲಗಳುಂಟೋ ಆ ಬ್ರಿಟನ್ ದೇಶದ ಬಗ್ಗೆಯೂ ಗೌರವವುಂಟು. ಡಾ॥ ರಾಧಾಕೃಷ್ಣನ್ ಹೇಳಿದ್ದಾರೆ, 'ಇಂಡಿಯಾದಲ್ಲಿ ಅಧಿಕಾರವನ್ನು ವರ್ಗಾಯಿಸಿದ್ದು ಮಾನವನ ಇತಿಹಾಸದಲ್ಲಿ ಹೊಂದಾಣಿಕೆಯ ಅತ್ಯುನ್ನತ ಕೆಲಸಗಳಲ್ಲಿ ಒಂದು' ಎಂದು. ಈ ಗ್ರಂಥದ ಮೊದಲಲ್ಲಿ ಬರುವ ಕೆಲವು ಹಳೆಯ ಜಗಳಗಳನ್ನು ಸುಸೂತ್ರವಾಗಿ ಬಗೆಹರಿಸಿಕೊಂಡ ರೀತಿ ಮನಸ್ಸಿಗೆ ಬಹಳ ಹಿತವನ್ನುಂಟುಮಾಡುತ್ತಿದೆ. ಆ ಹಳೆಯ ವಿಷಯ ಹೇಳಿ ಕಹಿನೆನಪುಗಳನ್ನು ಸ್ಮರಿಸಿಕೊಳ್ಳುವ ಉದ್ದೇಶವಿರಲಿಲ್ಲ ನನಗೆ. ಆದರೆ ಬ್ರಿಟಿಷರ ಕಾಲದ ಆ ಘಟನೆಗಳು ನನ್ನ ಆತ್ಮಚರಿತ್ರೆಗೆ ಆವಶ್ಯಕವಾಗಿರುವುದರಿಂದ ಅವುಗಳಲ್ಲಿ ಕೆಲವನ್ನು ಇಲ್ಲಿ ಸೇರಿಸಿದ್ದೇನೆ. ಆರ್ಥರ್ ಕೋಸ್ಲೆರ್ ಅವರು ಬ್ರಿಟಿಷ್ ಸಾಮ್ರಾಜ್ಯವನ್ನು ಕುರಿತು ಹೀಗೆ ಹೇಳಿದ್ದಾರೆ : 'ಹಿಂದಿನ ಕಾಲದ ಪ್ರತಿಯೊಂದು ದೊಡ್ಡ ಸಾಮ್ರಾಜ್ಯದ ಪತನ ಅಸಹ್ಯವೂ ವಿನಾಶಕಾರಕವೂ ಆದ ಘಟನೆ. ಆದರೆ ಇತಿಹಾಸದಲ್ಲಿಯೇ ಮೊಟ್ಟಮೊದಲನೆಯ ಸಲ ಒಂದು ಸಾಮ್ರಾಜ್ಯ ಘನತೆ ಗೌರವದಿಂದ ಸಾವಧಾನವಾಗಿ ಮಾಯವಾಗುವುದನ್ನು ನೋಡಿದ್ದೇನೆ ; ಈ ಸಾಮ್ರಾಜ್ಯದ ಉದ್ಭವ ಹಿತವಾದ ಕಥೆಯಲ್ಲ, ಅದರ ಪತನ ಹಿತವಾಗಿದೆ.'

ಯುರೋಪು ನನ್ನ ಮೂಳೆಮೂಳೆಯಲ್ಲಿದೆ. ಆದರೆ ಇಂಡಿಯಾ ನನ್ನ ರಕ್ತಗತವಾಗಿದೆ. ಇದರ ಅರಿವು ನನಗಾದದ್ದು ಈ ಗ್ರಂಥವನ್ನು ಬರೆಯಲಾರಂಭಿಸಿದಾಗ. ಏಕೆಂದರೆ, ಇಲ್ಲಿ ಬರೆದಿರುವುದರಲ್ಲಿ ಬಹುಭಾಗವನ್ನು ಇಂಡಿಯಾದ ದೃಷ್ಟಿಯಿಂದ ಬರೆಯಲಾಗಿದೆ. ಇಲ್ಲಿ ಬರುವ ವ್ಯಕ್ತಿಗಳಲ್ಲಿ ಬಹುಮಂದಿ ಇಂಡಿಯನರು. ಬೇರೊಂದು ರೀತಿಯಾಗಲು ಸಾಧ್ಯವಿರಲಿಲ್ಲ. ಏಕೆಂದರೆ ನನ್ನ ಹೆಂಡತಿ ಇಂಡಿಯಾದವಳು. ಮನೆ ಮಠ ಇಂಡಿಯಾದ್ದು. ಸ್ನೇಹಿತರಲ್ಲಿ ಬಹುಮಂದಿ ಇಂಡಿಯಾದವರು. ಎಲ್ಲಕ್ಕಿಂತ ಹೆಚ್ಚಾಗಿ ನಾನು ಇಂಡಿಯಾದ ಗಿರಿಜನರಲ್ಲಿ ತಲ್ಲೀನನಾದೆ ; ಅವರ ಬಗ್ಗೆ ತುಂಬಾ ಆಸಕ್ತಿವಹಿಸಿದೆ.

ಈ ಪುಸ್ತಕದಲ್ಲಿ ಪೌರ್ವಾತ್ಯ ಹಾಗೂ ಪಾಶ್ಚಿಮಾತ್ಯ ಓದುಗರಿಬ್ಬರಿಗೂ ನನಗಾದ ಒಂದು ರೀತಿಯ ಅನುಭವವನ್ನು ಹೇಳಿ, ಆ ಅನುಭವದ ಕಾರಣ ನಾನು ಈಗ ಏನಾಗಿರುವೆನೋ ಹಾಗೆ ಆದಮೇಲೆ ನನ್ನ ದೃಷ್ಟಿಯೇನು ಮತ್ತು ನನ್ನ ಪ್ರತಿಕ್ರಿಯೆ ಏನು ಎಂದು ತಿಳಿಸಿದ್ದೇನೆ.

ನನ್ನ ಜೀವನವನ್ನು ಅಖಂಡವಾಗಿ ತೋರಿಸಲು ಪ್ರಯತ್ನಪಟ್ಟಿದ್ದೇನೆ. ಮತ್ತು ಅದರಲ್ಲಿ ನನಗೆ ಮುಖ್ಯವಾಗಿ ಕಂಡವುಗಳನ್ನು ವರ್ಣಿಸಿದ್ದೇನೆ. ಎಲ್ಲವನ್ನೂ ಇಲ್ಲಿ ಹೇಳಿಲ್ಲ. ಇತ್ತೀಚೆಗೆ ಟೈಮ್ಸ್ ಆಫ್ ಇಂಡಿಯಾ ಪುರವಣಿಯಲ್ಲಿ ಒಂದು ವಿಚಾರವನ್ನು ಮಂಡಿಸಲಾಗಿತ್ತು. ಅದೇನೆಂದರೆ. 'ಪ್ರತಿಯೊಂದು ಆತ್ಮಚರಿತ್ರೆಯೂ ಹೇಳಬೇಕಾದು ದನ್ನೆಲ್ಲಾ ಹೇಳದಿರುವ ಪ್ರಬಂಧವಾಗುವುದು ಅನಿವಾರ್ಯವಾದರೂ, ಆಧುನಿಕ ಓದುಗರು ಸ್ವಕಲ್ಪಿತ ಹಿರಿತನದ ವ್ಯಕ್ತಿಯಿಂದ ತೃಪ್ತರಾಗುವುದಿಲ್ಲ. ಆತ್ಮಚರಿತ್ರೆ ಸತ್ಯವಾದುದರಿಂದ ತೀರಾ ದೂರವಾಗಿರಬಾರದು; ಆದರೆ ಸದ್ಯ ತೀರಾ ಹತ್ತಿರವೂ ಇರಬಾರದು. ಆದುದನ್ನೆಲ್ಲಾ ಒಪ್ಪಿಕೊಳ್ಳುವುದು, ನಡೆದುದನ್ನು ನಡೆದ ಹಾಗೆ ಒಂದಿಷ್ಟೂ ಬಿಡದಂತೆ ಹೇಳುವುದು ಈಗಿನವರಿಗೆ ಹಿಡಿಸುತ್ತದೆ. ಒಬ್ಬನ ಜೀವನಚಿತ್ರ ಎಷ್ಟು ಕಪ್ಪಾಗಿದ್ದರೆ ಅಷ್ಟೂ ಹೆಚ್ಚು ಮೆಚ್ಚಿಗೆಯನ್ನು ಜನಗಳಿಂದ ಪಡೆಯಬಹುದು ಎಂದು. ಆದರೆ ತೊಂದರೆ ಏನು ಎಂದರೆ, ಯಾವುದು ಮುಖ್ಯ ಎಂಬುದರ ಬಗ್ಗೆ ಲೇಖಕನ ಮತ್ತು ಓದುಗರ ಅಭಿಪ್ರಾಯ ಬೇರೆಬೇರೆ ಇರಬಹುದಾದುದು. ಅಷ್ಟೆ ಅಲ್ಲ, ಯಾವುದು ತಪ್ಪು ಎಂಬ ಬಗ್ಗೆಯೂ ಬೇರೆ ಬೇರೆ ಅಭಿಪ್ರಾಯ ಇರಬಹು ದಾದುದು'.

ನನ್ನ ಬಾಳಿನ ದಾರಿಯಲ್ಲಿ ಕೆಲವೊಮ್ಮೆ ಮೋಡಗಳು ಕವಿದುವು. ಅವುಗಳನ್ನು ಮುಂದೆ ಸೂಚಿಸಿದ್ದೇನೆ. ಆದರೆ ಅವನ್ನು ಹೆಚ್ಚಾಗಿ ವರ್ಣಿಸಿಲ್ಲ. ಏಕೆಂದರೆ, ಅವು ಹೆಚ್ಚು ಆಸಕ್ತಿಯುಳ್ಳವೆಂದು ನಾನು ಭಾವಿಸಿಲ್ಲ. ಉಳಿದ ವಿಚಾರಗಳನ್ನು ಕೆಲವರು ಮೆಚ್ಚಬಹುದು, ಮತ್ತೆ ಕೆಲವರು ಖಂಡಿಸಬಹುದು. ಆದರೆ ಅವು ನನ್ನ ಸ್ವಂತ ವಿಚಾರಗಳು. ಆಧುನಿಕ ಧೋರಣೆ ಏನೇ ಇರಲಿ, ಯಾವ ಆತ್ಮಕಥನಕಾರನೂ ತನ್ನ ಆತ್ಮಚರಿತ್ರೆಯಲ್ಲಿ ನಿತ್ಯನಡವಳಿಕೆಯಲ್ಲಿ ಅನುಸರಿಸಬೇಕಾದ ಇತಿ–ಮಿತಿಗಳ ಎಲ್ಲೆಯನ್ನು ಮೀರುವುದು ಸರಿಯಲ್ಲ. ಒಟ್ಟಿನಲ್ಲಿ ನನ್ನ ಜೀವನ ಜಯಪ್ರದವಾಗಿದೆ ಎಂದು ನಾನು ಭಾವಿಸಿದ್ದರೂ – ಏಕೆಂದರೆ ನಾನು ಆ ದೃಷ್ಟಿಯಲ್ಲಿ ಯೋಚನೆ ಮಾಡಿದವನಲ್ಲ – ಅದು ನನಗೆ ಕೈತುಂಬ ಕೊಟ್ಟಿದೆ. ಆಂತರಿಕ ಆನಂದದ ಚಿತ್ರಣ ಕೇವಲ ವ್ಯಕ್ತಿಯನ್ನು ಚಿತ್ರಿಸುವುದರಲ್ಲಿ ಮುಗಿಯುವುದಿಲ್ಲ; ಅದು ವಾಸ್ತವಿಕವಾಗಿ ಇಡೀ ಮನುಷ್ಯನನ್ನೇ ಚಿತ್ರಿಸುತ್ತದೆ.

ಹೀಗೆ, ಮೇಲೆ ಒಪ್ಪಿಕೊಂಡಂತೆ, ಎಲ್ಲವನ್ನೂ ನಾನಿಲ್ಲಿ ಬರೆದಿಲ್ಲ; ಎಲ್ಲರನ್ನೂ ಇಲ್ಲಿ ಹೇಳಿಲ್ಲ. ನನಗೆ ಅನೇಕಾನೇಕ ಸ್ನೇಹಿತರಿದ್ದಾರೆ. ಏಕೆಂದರೆ, ಸುಲಭವಾಗಿ

ಸ್ನೇಹಿತರನ್ನು ಮಾಡಿಕೊಳ್ಳುವಂಥವನು ನಾನು. ಆದರೆ ಆತ್ಮಚರಿತ್ರೆ ಒಂದು ಪಟ್ಟಿಯಲ್ಲ. ಈ ಕಾರಣ ನನಗೆ ಬೇಕಾದವರೆಲ್ಲರ ಹೆಸರು ಹೇಳಲು ಆಗಿಲ್ಲ. ಅವರೆಲ್ಲ ನನ್ನನ್ನು ಕ್ಷಮಿಸುವರೆಂದು ನಂಬಿದ್ದೇನೆ. ನಾನು ಅವರನ್ನು ಮರೆತಿದ್ದೇನೆಂದು ಭಾವಿಸಬಾರದು. ತನ್ನ ಗ್ರಂಥವನ್ನು ಜನರು ಓದಬೇಕೆಂದಿರುವ ಗ್ರಂಥಕರ್ತ ಅದನ್ನು ದೊಡ್ಡದು ಮಾಡಬಾರದು ಎಂಬುದನ್ನು ಅರಿತುಕೊಳ್ಳಬೇಕೆಂದು ನನ್ನ ಪ್ರಾರ್ಥನೆ.

ಷಿಲ್ಲಾಂಗ್ **ವೆರಿಯರ್ ಎಲ್ವಿನ್**

ಜುಲೈ ೧೯೬೩

ಪರಿವಿಡಿ

ವೆರಿಯರ್ ಎಲ್ವಿನ್‌ರ ಗಿರಿಜನ ಪ್ರಪಂಚ

ವೆರಿಯರ್ ಎಲ್ವಿನ್‌ರ ಗಿರಿಜನ ಪ್ರಪಂಚ

೧. ಮುದ್ದಿನ ಬಾಲ್ಯ

ನಾನು ಇಂಗ್ಲೆಂಡಿನ ಕೆಂಟ್ ಪ್ರಾಂತದ ಡೋವರ್ ಎಂಬ ಊರಿನಲ್ಲಿ ೧೯೦೨ನೆಯ ಇಸವಿ ಆಗಸ್ಟ್ ೨೯ನೆಯ ತಾರೀಖು ಬೆಳಗಿನ ಜಾವ ಹುಟ್ಟಿದೆ. ಆಗಸ್ಟ್ ೨೯ನೆಯ ತಾರೀಖು ಜಾನ್ ಎಂಬ ಬಾಪ್ಟಿಸ್ಟನ[೧] ತಲೆಕಡಿದ ದಿನವೆಂದು ಚರ್ಚುಗಳಲ್ಲಿ ಸಂಪ್ರದಾಯವಿದೆ. ಅದೇ ದಿನವೇ ದೊರೆ ಹೆರೊಡ್ ಹುಟ್ಟಿದ್ದು. ಆ ದಿನವನ್ನು ಇಂದು ನಾವು ಗಿರಿಜನರ ನೃತ್ಯಗಳೆಂದು ಕರೆಯಬಹುದಾದ ರೀತಿಯಲ್ಲಿ ಆಚರಿಸಿತ್ತೇವೆ. ಆ ಹೆಸರಾಂತ ಮಹಾ ನೇಮಿಷ್ಠ ಸುಧಾರಕನ ವಿರುದ್ಧ ನಾಟಕೀಯವಾದ ಕೆಲಸವೊಂದು ನಡೆದ ದಿನವೇ ನಾನೂ ಈ ಪ್ರಪಂಚಕ್ಕೆ ಬಂದದ್ದರಲ್ಲಿ ಏನೋ ಅರ್ಥವಿದೆ.

ನಮ್ಮ ಮಾತಾಪಿತೃಗಳ ಮೂರು ಮಕ್ಕಳಲ್ಲಿ ನಾನೇ ದೊಡ್ಡವನು. ನನ್ನ ತಂಗಿ ಎಲ್ಡಿತ್ ನನಗಿಂತ ಎರಡು ವರ್ಷ ಚಿಕ್ಕವಳು; ನನ್ನ ತಮ್ಮ ಬೇಜಿಲ್ ಐದು ವರ್ಷ ಚಿಕ್ಕವನು.

ಒಬ್ಬರಲ್ಲ, ಮೂರು ಜನ ಬಿಷಪ್ಪರು ಸೇರಿ ನನಗೆ 'ಹೆನ್ರಿ ವೆರಿಯರ್ ಹೋಲ್‌ಮನ್ ಎಲ್ವಿನ್' ಎಂದು ನಾಮಕರಣ ಮಾಡಿದರು. ಆ ಮೂವರಲ್ಲಿ ಒಬ್ಬರು ಅನಂತರ ಒಮ್ಮೆ ಹೇಳಿದರು, 'ಮೂವರೂ ಪ್ರಯತ್ನಪಟ್ಟೆವು, ನಿನ್ನೊಳಗಿದ್ದ ದೆವ್ವ ಬಿಡಿಸಬೇಕೆಂದು. ಆದರೆ ಸಾಧ್ಯವಾಗಲಿಲ್ಲ' ಎಂದು.

ನಮ್ಮ ತಂದೆ ಎಡ್ಮಂಡ್ ಹೆನ್ರಿ ಎಲ್ವಿನ್ ಎಂಬುವರು ಇಂಗ್ಲೆಂಡಿನ ಸುಧಾರಿತ ಕ್ರೈಸ್ತಧರ್ಮದ (Anglican) ಬಿಷಪ್ಪರು. ಅವರು ಪಶ್ಚಿಮ ಆಫ್ರಿಕಾದ ಸಿರಾಲಿಯೋನ್ ಎಂಬ ಬಿಷಪ್ಪನ ಅಧಿಕಾರಕ್ಷೇತ್ರದಿಂದ ಬ್ರಿಸ್ಟಲಿನ ಬಿಷಪ್ಪರಾಗಿ ನೇಮಕಗೊಂಡು ಇಂಗ್ಲೆಂಡಿಗೆ ಬರುವುದಕ್ಕೆ ಕೆಲವು ವಾರಗಳ ಮುನ್ನ ಹಳದಿ ಜ್ವರದಿಂದ ಪೀಡಿತರಾಗಿ ತಮ್ಮ ೩೮ನೆಯ ವಯಸ್ಸಿನಲ್ಲಿ ತೀರಿಕೊಂಡರು. ಆಗ ನನಗೆ ಏಳು ವರ್ಷ. ಅವರು ಮೊದಲು ಮರ್ಟನ್ ಎಂಬಲ್ಲಿದ್ದು, ಆಕ್ಸ್‌ಫರ್ಡಿನ ಸಹಾಯಕ ಪಾದ್ರಿಯಾಗಿ ಕೆಲಸ ಮಾಡಿ, ಆಮೇಲೆ ಪಶ್ಚಿಮ ಆಫ್ರಿಕಾದಲ್ಲಿ ಪಾದ್ರಿಯಾದರು. ಅದಕ್ಕೆ ಮೊದಲು ಫೌರಾ ಬೇ ಕಾಲೇಜಿನ ಮೊದಲನೆಯ ಪ್ರಿನ್ಸಿಪಾಲರಾಗಿದ್ದು, ಅನಂತರ ಇಂಗ್ಲೆಂಡ್ ಚರ್ಚಿನ ಅತ್ಯಂತ ಕಿರಿಯ ವಯಸ್ಸಿನ ಬಿಷಪ್ಪರಾದರು.

---

[೧] ಈ ಗ್ರಂಥದಲ್ಲಿ ಬರುವ ವ್ಯಕ್ತಿಗಳ ಮತ್ತು ವಿಶಿಷ್ಟ ವಿಷಯಗಳ ಬಗ್ಗೆ ಪುಸ್ತಕದ ಕೊನೆಯಲ್ಲಿ ಕೊಟ್ಟಿರುವ ಟಿಪ್ಪಣಿಗಳನ್ನು ನೋಡಿ.

ಈ ಶತಮಾನದ ಪ್ರಾರಂಭದಲ್ಲಿ ಪಶ್ಚಿಮ ಆಫ್ರಿಕ ಮಾನವ ಶಾಸ್ತ್ರಜ್ಞನ (Anthropologist) ವಿಶೇಷ ಆಸಕ್ತಿಯನ್ನು ಕೆರಳಿಸಿರಬೇಕು. ಏಕೆಂದರೆ, ನಮ್ಮ ಮನೆಯ ತುಂಬ ಮನೆಯವರು ವಿಚಿತ್ರ ವಸ್ತುಗಳೆಂದು ಕರೆಯುತ್ತಿದ್ದ ಸಾಮಾನುಗಳಿರುತ್ತಿದ್ದುವು. ನನ್ನ ತಾಯಿ ಪಶ್ಚಿಮ ಆಫ್ರಿಕದ ವಿಧರ್ಮಿಗಳ ಗುಡಿಗಳಿಗೆ ಹೋಗಿ ಅಲ್ಲಿಂದ ವಿಗ್ರಹಗಳನ್ನು ಮನೆಗೆ ಒಯ್ಯುವ ತುಂಬಾ ಒಳ್ಳೆ ಕೆಲಸ ಕಲಿತಿದ್ದಳು. ಹಾಗೆ ತಂದ ವಿಗ್ರಹಗಳನ್ನು ಇಂಗ್ಲೆಂಡಿಗೆ ತೆಗೆದುಕೊಂಡು ಬಂದು ಮನೆಯಲ್ಲಿ ಇಟ್ಟಿದ್ದಳು. ಇವು ಈಗ ಇದ್ದರೆ ಎಷ್ಟು ಚೆನ್ನಾಗಿತ್ತು ಎನಿಸುತ್ತಿದೆ ನನಗೆ! ಒಮ್ಮೆ ನಮ್ಮ ತಾಯಿ ಪಶ್ಚಿಮ ಆಫ್ರಿಕಾದಲ್ಲಿ ನರಮಾಂಸಭಕ್ಷಕರಿದ್ದ ಹಳ್ಳಿಯೊಂದಕ್ಕೆ ಅಪ್ಪಿತಪ್ಪಿ ಹೋಗಿಬಿಟ್ಟಳಂತೆ. ಅವಳನ್ನು ಇನ್ನೇನು ಹಿಡಿದು ತಿಂದುಹಾಕಬೇಕು ಎನ್ನುವಷ್ಟರಲ್ಲಿ, ತಂದೆ ಜನರನ್ನು ಕರೆದುಕೊಂಡು ಹೋಗಿ ಆಕೆಯನ್ನು ಅಡುಗೆಪಾತ್ರೆಯಿಂದ ಹೊರದೆಗೆದರಂತೆ.

ನಾನು ನನ್ನ ತಂದೆಯನ್ನು ನೋಡುತ್ತಿದ್ದುದು ತೀರಾ ಅಪರೂಪ. ಏಕೆಂದರೆ, ಅವರು ಯಾವಾಗಲೂ ಆಫ್ರಿಕಾದ ಸಂಚಾರದಲ್ಲಿ ತೊಡಗಿರುತ್ತಿದ್ದರು. ನನ್ನ ತುಂಟತನಕ್ಕೆ ಅವರು ಎರಡು ಸಲ ಏಟುಕೊಟ್ಟಿದ್ದು ಬಿಟ್ಟರೆ ಬೇರೆ ಯಾವುದೂ ನನಗೆ ಜ್ಞಾಪಕವಿಲ್ಲ. ಒಂದು ಸಲ ಏಟುಕೊಟ್ಟದ್ದು, ಅಮ್ಮನು ಎಲ್ಲಿಗೋ ಹೋಗಲು ರೈಲ್ವೆ ಸ್ಟೇಷನ್ನಿಗೆ ಹೋದಾಗ ಆರು ವರ್ಷದ ನಾನೂ ಅಪ್ಪ ಬೇಡವೆಂದರೂ ಸ್ಟೇಷನ್ನಿಗೆ ಓಡಿಹೋದಾಗ.

ನನ್ನ ತಾಯಿ ಸುಲಕ್ಷಣವಾದ ಹಾಗೂ ತಿಳುವಳಿಕೆಯ ಹೆಂಗಸು. ಚೆನ್ನಾಗಿ ಓದಿದವಳು; ಸರಸವಾಗಿ ಮಾತಾಡಬಲ್ಲವಳು. ಅತ್ಯಾವಶ್ಯಕವಾದಂಥ ಕವನ, ಸಂಗೀತ ಮತ್ತು ಕಲೆಗಳನ್ನು ಅರಿತವಳು. ಆದರೆ ದುರದೃಷ್ಟವಶಾತ್ ಅವಳ ಮುಖ್ಯ ಆಸಕ್ತಿ ಯಾವುದೋ ಒಂದು ತರಹ ಮತದಲ್ಲಿ ನೆಟ್ಟಿತ್ತು. ಆ ಆಸಕ್ತಿ, ಆಕೆ ಅರಿತ ಕವನ, ಸಂಗೀತ ಹಾಗೂ ಕಲೆಗಳಿಗೆ ಬೆಲೆ ಇಲ್ಲದಂತೆ ಮಾಡಿಬಿಟ್ಟಿತ್ತು. ನಮ್ಮ ತಂದೆ ಅಷ್ಟು ಚಿಕ್ಕ ವಯಸ್ಸಿನಲ್ಲಿ ಸಾಯದೆ ನಾವೆಲ್ಲಾ ಬ್ರಿಸ್ಟಲಿಗೆ ಹೋಗಿ ದೊಡ್ಡಸ್ತಿಕೆ ಹಾಗೂ ಅನುಕೂಲತೆಗಳಿಂದ ಬಾಳಿದ್ದರೆ ತಾಯಿಯ ಬಾಳು ಬೇರೊಂದು ರೀತಿಯದಾಗುತ್ತಿತ್ತು. ಆದರೆ ತಂದೆ ಸತ್ತದ್ದು ಅವಳಲ್ಲಿ ಮಕ್ಕಳ ಬಗ್ಗೆ ಅಪಾರ ಮಮತೆಯನ್ನೂ ತನ್ನ ಮತದ ಬಗ್ಗೆ ಅಷ್ಟೇ ಆಸಕ್ತಿಯನ್ನೂ ಉಂಟುಮಾಡಿದುವು.

ನಮ್ಮ ಕೈಯಲ್ಲಿ ಕಾಸು ಇರಲಿಲ್ಲವೆಂದೇ ಹೇಳಬೇಕು. ಸುಮ್ಮನೆ ಕುಳಿತಿರುವುದೆಂದರೆ ಅಮ್ಮನಿಗೆ ಆಗುತ್ತಿರಲಿಲ್ಲ. ನಮ್ಮನ್ನು ನೋಡಿಕೊಳ್ಳುವುದಲ್ಲದೆ ಅವಳಿಗೆ ಬೇರೆ ಕೆಲಸವಿರಲಿಲ್ಲ. ಒಂದು ಕಡೆ ನೆಲೆಯಾಗಿ ನಿಲ್ಲುವುದು ಅವಳಿಗೆ ಹಿಡಿಸುತ್ತಿರಲಿಲ್ಲ. ಈ ಕಾರಣ ನಾವು 'ರೂಮು'ಗಳಲ್ಲಿ (rooms) ವಾಸ ಮಾಡಬೇಕಾಯಿತು. 'ರೂಮು'ಗಳೆಂದರೆ ಸಜ್ಜುಗೊಳಿಸಿದ ಒಂದು ಮಲಗುವ ಕೋಣೆ ಮತ್ತು ಕುಳಿತುಕೊಳ್ಳುವ ಇನ್ನೊಂದು ಕೋಣೆ. ಅದೇ ಮನೆಯಲ್ಲಿ ನಮ್ಮಂತೆ ಬಂದಿರುತ್ತಿದ್ದ ಬೇರೆಯವರಿಗೂ ನಮಗೂ ಒಂದೇ ಶೌಚದ ಕೋಣೆ ಇರುತ್ತಿತ್ತು.

ಮನೆಯ ಒಡತಿಯರಿಗೂ ನಮ್ಮ ತಾಯಿಗೂ ಆಗುತ್ತಿರಲಿಲ್ಲವಾದ ಕಾರಣ, ಆಕೆ ಒಂದು ಕಡೆ ನಿಲ್ಲದೆ ಊರಿಂದ ಊರಿಗೆ ಹೋಗುತ್ತಿದ್ದಳು. ಹೀಗೆ ನಾವು ಬೆಳದದ್ದು ಗಾಳಿಗಂಟಲು ಮನೆಯೊಡತಿಯರ ಜೊತೆ; ನಮ್ಮ ತಾಯಿ ಆಡುತ್ತಿದ್ದ ಭಾರಿ ಜಗಳ ಗುದ್ದಾಟಗಳ ಸನ್ನಿವೇಶದಲ್ಲಿ. ಈ ಕಾರಣ ನಮಗೆ ಬಾಲ್ಯದಲ್ಲಿ ಸ್ನೇಹಿತರಿರಲಿಲ್ಲ. ಆಟಕ್ಕೆ ತೋಟವಿರಲಿಲ್ಲ. ಏಕಾಂತವಾಗಿರುವುದಂತೂ ಸಾಧ್ಯವಾಗಿರಲಿಲ್ಲ. ಒಟ್ಟಿನಲ್ಲಿ 'ಟೂರ್' (tour) ಅಥವಾ 'ಟ್ರಾನ್ಸ್‌ಫರ್' (transfer)ನಲ್ಲಿ ಇರುತ್ತಿದ್ದೆವು.

ದೇವರು ದಿಂಡರು ಎಂದು ಯಾವಾಗಲೂ ಒದ್ದಾಡುತ್ತಿದ್ದ ತಾಯಿ ತನ್ನ ಬರಿದಾದ ಮನಸ್ಸನ್ನು ತುಂಬಿಕೊಳ್ಳಲು ಜೀಸಸ್ ಕ್ರೈಸ್ತನ ಮೊರೆಹೋಗುತ್ತಿದ್ದಳು. ತಂದೆಗೆ ಒಪ್ಪಿಗೆಯಾಗಿದ್ದ ಜನೋದ್ಧಾರಕ ಮತತ್ವ (Evangelical Anglicanism) ತಾಯಿಗೆ ಹಿಡಿಸಲಿಲ್ಲ. ಚರ್ಚನ್ನೂ ಬಿಡದೆ ಬೇರೊಂದು ರೀತಿಯಲ್ಲಿ ತನ್ನ ಮನಸ್ಸಿಗೆ ಸಮಾಧಾನ ತಂದುಕೊಳ್ಳುತ್ತಿದ್ದಳು. ಇದು ಒಂದು ರೀತಿಯಲ್ಲಿ ಉತ್ತೇಜನಕರವಾಗಿತ್ತು. ಏಕೆಂದರೆ, ಆಕೆ ಬೇಕೆಂದಾಗ ಆನಂದಪರವಶಳಾಗ ಬಹುದಾಗಿತ್ತು; ಏನೇನೊ ಮಾತಾಡಬಹುದಿತ್ತು; ಮತ್ತು ಪವಿತ್ರ ಮೇಜಿನ (Holy Table) ಮುಂದೆ ಕುಣಿಯಬಹುದಾಗಿತ್ತು. ಈ ಸ್ಥಿತಿಯನ್ನು ಪಡೆಯಲು ಬಹಳ ಪ್ರಯತ್ನಪಟ್ಟಳು, ನನ್ನ ಮುದ್ದು ತಾಯಿ. ಆದರೆ ಅದು ಅವಳಿಂದ ಸಾಧ್ಯವಾಗಲಿಲ್ಲ. ಅಮ್ಮನನ್ನು ಮಿಳಿ ಮಿಳಿ ಕಣ್ಣುಬಿಟ್ಟುಕೊಂಡು ನೋಡುತ್ತಿದ್ದ ಪುಟಾಣಿಯಾದ ನನಗೂ ಸಾಧ್ಯವಾಗಲಿಲ್ಲ ಅನ್ನಿ.

ಆದರೆ 'ಬೈಬಲ್ ದೇವರ ಸಂದೇಶ; ಅದೊಂದು ಮಂತ್ರದ ಪುಸ್ತಕ' ಎಂಬ ನಂಬಿಕೆಯನ್ನು ನಾವೆಲ್ಲಾ ಪಡೆದಿದ್ದೆವು. ದೇವರನ್ನು ಕಾಣುವ ಮತ್ತು ಅವನನ್ನು ಪಡೆಯುವ ನಂಬಿಕೆ ನಮ್ಮಲ್ಲಿ ಗಾಢವಾಗಿ ಬೇರೂರಿತ್ತು. ಇದರಿಂದ ಒಂದಿಷ್ಟು ಒಳ್ಳೆಯದೂ ಆಯಿತು. ದೇವರಿಗೆ ಯಾವಾಗ ಎಂದರೆ ಆಗ ನಮ್ಮ ಪ್ರಾರ್ಥನೆ ಸಲ್ಲಿಸಬಹುದೆಂಬ ನಂಬಿಕೆ ಇತ್ತು.

ಈ ನಂಬಿಕೆಗಳು ವಾಸ್ತವಿಕವಾಗಿ ಕೆಲವು ಅನುಕೂಲಗಳನ್ನು ಮಾಡಿಕೊಟ್ಟವು. ನಾವು ನಾಟಕ, ಸಿನೆಮಾ, ಸರ್ಕಸ್ ಮುಂತಾದ ಮನರಂಜನೆಯ ಸ್ಥಳಗಳಿಗೆ ಹೋಗುತ್ತಿರಲೇ ಇಲ್ಲ. ಏಕೆಂದರೆ, ಹಾಗೆ ಹೋದಾಗ ಮನೆಗೆ ಜೀಸಸ್ ಬಂದುಬಿಟ್ಟರೆ ಏನು ಗತಿ ! ನಾವಿದ್ದ ಒಂದು ಮನೆಯಲ್ಲಿ ಅಮ್ಮನು ಮಲಗುವ ಕೋಣೆ ನಾನು ಮಲಗಿಕೊಳ್ಳುತ್ತಿದ್ದ ಕೋಣೆಯ ಕೆಳಗಿತ್ತು. ಪ್ರತಿದಿನ ರಾತ್ರಿ ನಾನು ಹಾಸಿಗೆಯಿಂದ ಎದ್ದು ಮೆಲ್ಲನೆ ಕೆಳಗಿಳಿದುಬಂದು ಬಾಗಿಲ ಬಳಿ ನಿಂತು ಕಿವಿಗೊಟ್ಟು ಕೇಳುತ್ತಿದ್ದೆ – ಅಮ್ಮ ಮಲಗಿಕೊಂಡಮೇಲೆ ದೇವರ ಸಾನ್ನಿಧ್ಯ ಸೇರಿಬಿಟ್ಟಿರುವಳೋ ಏನೋ ಎಂದು. ಅಂಥ ಸೌಭಾಗ್ಯ ನನಗಿಲ್ಲವೆಂಬುದನ್ನು ಅರಿತಿದ್ದ ನಾನು, ಅಮ್ಮನಿಗೆ ಅದು ಒದಗಿ ಇದ್ದಕ್ಕಿದ್ದಂತೆ ಅವಳು ಮಾಯವಾಗಿಬಿಟ್ಟರೆ ನನ್ನ ಗತಿಯೇನೆಂದು ಆಲೋಚಿಸಿ ಮನಸ್ಸನ್ನು ಖಿನ್ನಮಾಡಿಕೊಳ್ಳುತ್ತಿದ್ದೆ.

ನಾನು ಬೆಳೆದದ್ದು ಇಂಥ ಸನ್ನಿವೇಶದಲ್ಲಿ. ಮಗುವಿನ ಮನಸ್ಸಿನ ಮೇಲೆ ದೈವಲೀಲೆಯ ಮಹತ್ವದ ಮುದ್ರೆಯೊತ್ತುವ ಕೆಲಸ ಚೆನ್ನಾಗಿ ಸಾಗಿತ್ತು. ದೈಹಿಕ ಸುಖಗಳಾವುವೂ ನಮಗಿರಲಿಲ್ಲ. ನಮಗೆ ನೆಲೆಯಾದ ನಗರವೊಂದಿಲ್ಲ ಎಂಬುದನ್ನು ಸುಲಭವಾಗಿ ನಂಬಬಹುದಾಗಿತ್ತು. ಏಕೆಂದರೆ ನಾವು ಒಂದು ಕಡೆ ನಿಲ್ಲದೆ ಊರಿಂದೂರಿಗೆ ಅಲೆಯುವ ಅಲೆಮಾರಿಗಳಾಗಿದ್ದೆವು.

ಇವೆಲ್ಲದರ ಪರಿಣಾಮವಾಗಿ ಪುಟ್ಟ ಬಾಲಕನಾದ ನಾನು ವಿಚಿತ್ರವಾದ ರೀತಿಗಳಲ್ಲಿ ಸಂತೋಷಪಟ್ಟುಕೊಳ್ಳಬೇಕಾಗಿತ್ತು. ದಂತವೈದ್ಯನಿಂದ ನನ್ನ ಹಲ್ಲು ಕೀಳಿಸುವ ಕೆಲಸ ಸಾಗುತ್ತಿದ್ದಾಗ ನಾನು ವಿಶ್ವಕ್ಕೆಲ್ಲಾ ಒಪ್ಪುವ ಭಾಷೆಯೊಂದನ್ನು ಕಂಡುಹಿಡಿದೆ. ಅದರ ಮೊದಲ ಮುಖ್ಯ ವಾಕ್ಯ 'Oo Lovessisiaeiya- I Love You' (ನಾನು ನಿನ್ನನ್ನು ಪ್ರೀತಿಸುತ್ತೇನೆ) ಎಂದು. ಕಾಗದದ ದೊಡ್ಡ ಹಾಳೆಗಳ ಮೇಲೆ ನನ್ನದೇ ಆದ ರೀತಿಯ ಅಂಚೆಚೀಟಿಗಳನ್ನು ಬರೆಯುತ್ತಿದ್ದೆ. ದೊಡ್ಡವನಾದ ಮೇಲೂ ಅಂಚೆಚೀಟಿ ಗಳನ್ನು ಕೂಡಿಹಾಕುವ ಹವ್ಯಾಸ ಮಾಡುತ್ತಿದ್ದು, ಆಮೇಲೆ ಕೈಬಿಟ್ಟೆ. ಕೂಡಿಹಾಕಿದ ಚೀಟಿಗಳನ್ನು ಇಟ್ಟಿದ್ದರೆ ಅದೊಂದು ಅಮೂಲ್ಯ ಸಂಗ್ರಹವೇ ಆಗುತ್ತಿತ್ತು. ಮುರುಕಲು ಪೆಟ್ಟಿಗೆಗಳಲ್ಲಿ ಹಳೆಯ ಕಾಗದಪತ್ರಗಳೊಡನೆ ನಾನು ಸಂಗ್ರಹಿಸಿದ ಇಂಡಿಯಾದ ಅಂಚೆಚೀಟಿಗಳ ಅಮೂಲ್ಯ ಶೇಖರಣೆ ಇತ್ತು. ಇಂಡಿಯಾಕ್ಕೆ ಹೊರಡುವಾಗ ಅವುಗಳನ್ನು ಸೈನ್ಯದ ಉಗ್ರಾಣಕ್ಕೆ ಐದು ಪೌಂಡಿಗೆ ಮಾರಿ ದಡ್ಡ ಕೆಲಸ ಮಾಡಿಬಿಟ್ಟೆ.

ಆ ಕಾಲದಲ್ಲಿ ಓದಲು ಪುಸ್ತಕಗಳು ಸಿಕ್ಕುತ್ತಿರಲಿಲ್ಲ. ಪುಸ್ತಕಗಳನ್ನು ಕೊಳ್ಳಲು ನಮ್ಮಲ್ಲಿ ದುಡ್ಡಿರಲಿಲ್ಲ. ನಾನು ಹೇಳುತ್ತಿರುವುದು ಅಗ್ಗವಾದ ಪುಸ್ತಕಗಳು ಅಚ್ಚಾಗುವುದಕ್ಕೆ ಹಿಂದಿನ ಮಾತು. ಎರವು ಕೊಡುವ ಪುಸ್ತಕ ಭಂಡಾರಗಳೂ ಆಗ ಇರಲಿಲ್ಲ. ಆದರೆ ನಾನು ಉಳಿಸಿದ ಅಷ್ಟಿಷ್ಟು ದುಡ್ಡಿನಲ್ಲಿ (Boys Own Paper) 'ಮಕ್ಕಳದೇ ಪತ್ರಿಕೆ' ಎಂಬ ಪತ್ರಿಕೆಯನ್ನು ಪ್ರತಿವಾರ ಕೊಂಡುಕೊಳ್ಳುತ್ತಿದ್ದೆ. ಅದು ಯಾವಾಗ ಬರುವುದೋ ಎಂದು ನಾನು ಬಹಳ ಚಡಪಡಿಸುತ್ತಿದ್ದೆ. ಆದರೆ ಅದು ಬಂದಾಗ ಅದನ್ನು ಒಂದೇ ಸಲ ಪೂರ್ತಿ ಓದದೆ ಅದರದಲ್ಲಿದ್ದ ಕತೆಗಳನ್ನು ದಿನಕ್ಕೊಂದರಂತೆ ಓದುತ್ತಾ ಆದಷ್ಟು ದಿನ ಆ ಪತ್ರಿಕೆಯ ಉಪಯೋಗ ಪಡೆಯುತ್ತಿದ್ದೆ.

ಅಮ್ಮ ಸಂಸಾರವನ್ನು ಹೇಗೆ ಸಾಗಿಸುತ್ತಿದ್ದಳೋ ಕಾಣೆ. ಆದರೆ ವರ್ಷಕ್ಕೊಂದು ಸಲ ತಪ್ಪದೆ ನಮ್ಮನ್ನೆಲ್ಲಾ ಎಲ್ಲಿಗಾದರೂ ವಿಹಾರಕ್ಕಾಗಿ ಕರೆದುಕೊಂಡು ಹೋಗುತ್ತಿದ್ದಳು. ಆಕೆ ಹೊಸ ಬಟ್ಟೆ ಹೊಸ ಪ್ಯಾಂಟುಗಳನ್ನು ಕೊಂಡುಕೊಳ್ಳುತ್ತಿರಲಿಲ್ಲವೆಂದು ಕಾಣುತ್ತೆ. ಟ್ಯಾಕ್ಸಿಗೆ ಬದಲು ಬಸ್ಸಿನಲ್ಲಿ ಹೋಗುವುದು, ಲೆಯನ್ಸ್ ಕ್ಲಬ್‌ನಲ್ಲಿ ಟೀ ಇದ್ದಾಗ ಮನೆಯಲ್ಲಿ ರೊಟ್ಟಿ ತಿನ್ನದಿರುವುದು – ಈ ರೀತಿ ಆಕೆ ಖರ್ಚು ಕಡಮೆಮಾಡಿರಬೇಕು. ಚಿಕ್ಕವರಾದ ನಮಗೆ ಅವೆಲ್ಲಾ ಹೇಗೆ ಅರ್ಥವಾಗಬೇಕು! ಅಂತೂ ನಾವೆಲ್ಲಾ ಒಂದೊಂದು ವರ್ಷ ಒಂದೊಂದು ಸ್ಥಳಕ್ಕೆ ಹೋಗಿಬರುತ್ತಿದ್ದೆವು. ಅವೇ ನಮ್ಮ ಬಾಲ್ಯದ ಮುದ್ದಿನ ದಿನಗಳು.

ಆಗ ನಮ್ಮ ಸಂಬಂಧಿಗಳು ನಮಗೆ ತುಂಬಾ ಬೇಕಾದವರಾಗಿದ್ದರು. ನಮಗೆ ಅನೇಕ ಜನ ಸಂಬಂಧಿಕರಿದ್ದರು. ಅವರಲ್ಲಿ ಸೋದರ ಸಂಬಂಧಿಗಳನ್ನೇ ನಾವು ಹೆಚ್ಚಾಗಿ ನೋಡುತ್ತಿದ್ದುದು. ಆ ಕಾರಣದಿಂದ ಅವರನ್ನು ಎಲ್ಲರಿಗಿಂತ ಹೆಚ್ಚಾಗಿ ಪ್ರೀತಿಸುತ್ತಲೂ ಇದ್ದೆವು. ಮದುವೆಯಾಗುವುದಕ್ಕಿಂತ ಮುನ್ನ ನಮ್ಮ ಅವ್ವನ ಹೆಸರು 'ಹೋಲ್‌ಮೆನ್' ಎಂದು. ಹೋಲ್‌ಮೆನ್ ಮನೆತನದವರು ಬಹಳ ಉದಾರಿಗಳೂ ಎಲ್ಲರಿಗೂ ಬೇಕಾದವರೂ ಆಗಿದ್ದವರು. ಅವರ ಮನೆತನದ ಬಗ್ಗೆ ಸರಿಯಾದ ದಾಖಲಾತಿಗಳಿಲ್ಲ. ನಮ್ಮ ಮರಿಅಜ್ಜಿ ಕ್ವೀನ್ಸ್‌ಟೌನ್‌ನಲ್ಲಿ ಹುಟ್ಟಿದಳು. ಅವಳ ಹೆಸರು ಅಗಸ್ಟಾ ಆಂಡರ್‌ಸನ್ ಎಂದು. ಅವಳ ಅವ್ವ ಡಬ್ಲಿನ್‌ನ ಡಾ|| ಆಂಡರ್‌ಸನ್ ಎಂಬುವವನನ್ನು ಮದುವೆಯಾಗಿದ್ದಳು. ೧೮೨೬ನೆಯ ಏಪ್ರಿಲ್ ತಿಂಗಳಿನಲ್ಲಿ ನಮ್ಮ ಮರಿ ಅಜ್ಜಿ ತನ್ನ ಹದಿನೇಳನೆಯ ವಯಸ್ಸಿನಲ್ಲಿ ಜೇಮ್ಸ್ ಕೆಂಬೆಲ್ ಎಂಬ ಸಿಪಾಯನ್ನು ಮದುವೆಯಾದಳು. ಈ ಜೇಮ್ಸ್ ಕೆಂಬೆಲನ ಜನ ಪೆಯ್ಸಲಿ – ಶಾಲ್ ಫ್ಯಾಕ್ಟರಿ (Paisly Shawl Factory) ಎಂಬ ಕಾರ್ಖಾನೆಗೆ ಸಂಬಂಧಪಟ್ಟವರು. ಕೆಂಬೆಲ್ ಸೈನ್ಯದೊಡನೆ ಇಂಡಿಯಾಕ್ಕೆ ಹೋದ. ಅಲ್ಲಿ ನಮ್ಮ ಮರಿಅಜ್ಜಿಗೆ ಮೂರು ಗಂಡು, ನಾಲ್ಕು ಹೆಣ್ಣುಮಕ್ಕಳಾದುವು. ಈ ಹೆಣ್ಣುಮಕ್ಕಳಲ್ಲಿ ಒಬ್ಬಳ ಹೆಸರು ಫ್ಲೋರಾ ಕೆಂಬೆಲ್ ಎಂದು. ಇವಳೇ ನಮ್ಮ ಅಜ್ಜಿ.

ನಮ್ಮ ಅಜ್ಜಿಯ ಅಕ್ಕಂದಿರಲ್ಲಿ ಒಬ್ಬಳು – ಅವಳ ಹೆಸರು ಜೆನ್ ದೊಡ್ಡಜ್ಜಿ ಎಂದು – ಸ್ಲೇನ್ ಎಂಬುವವನನ್ನು ಮದುವೆಯಾದಳು. ಈತ ತನ್ನ ಹದಿನೆಂಟನೆಯ ವಯಸ್ಸಿನಲ್ಲಿಯೇ ಇಂಜನೀಯರ್ ಆಗಿದ್ದನೆಂದು ತಿಳಿದು ಬರುತ್ತದೆ. ಮದುವೆಯಾದ ಮೂರನೆಯ ವರ್ಷವೇ ನಮ್ಮ ದೊಡ್ಡಜ್ಜಿ ತೀರಿಕೊಂಡಳು. ಅವಳ ಗಂಡನನ್ನು ಸಿಪಾಯಿ ದಂಗೆಯ ಕಾಲದಲ್ಲಿ (೧೮೫೭) ರಲ್ಲಿ ಕಾನ್ಪುರದಲ್ಲಿ ಬಾವಿಗೆ ಎಸೆದುಬಿಟ್ಟರು.

ನಮ್ಮ ತಾತ ವಿಲಿಯಂ ಲೆಬನ್ ಹೋಲ್‌ಮೆನ್ ಮನೆಯಿಂದ ಓಡಿಹೋಗಿ ಈಸ್ಟ್ ಇಂಡಿಯಾ ಕಂಪನಿ ಸೇರಿಕೊಂಡ. ಈಗ ಪಾಕಿಸ್ತಾನದಲ್ಲಿರುವ ಮರ್‍ರೀ ರಸ್ತೆಯನ್ನು ನಿರ್ಮಿಸಲು ಸಹಾಯಮಾಡಿದ. ಸೊಗಸಾದ ಮರ್‍ರೀ ವಿಶ್ರಾಂತಿ ಧಾಮವನ್ನು ಸ್ಥಾಪಿಸಿದವರಲ್ಲಿ ಅವನೊಬ್ಬ. ನನ್ನ ತಾಯಿ ಹುಟ್ಟಿದ್ದು ಅಲ್ಲಿಯೇ.

ನನ್ನ ತಾಯಿ ಕಡೆಯ ಸಂಬಂಧಿಗಳಲ್ಲಿ ಸ್ಕಾಟಿಷ್ ರಕ್ತ ಒಂದಿಷ್ಟು ಹೆಚ್ಚಾಗಿಯೇ ಇತ್ತೆಂಬುದರಲ್ಲಿ ಸಂದೇಹವಿಲ್ಲ. ಐರ್‌ಲ್ಯಾಂಡ್ ಸಂಪರ್ಕ ಇದ್ದದ್ದರಿಂದ ಆ ರಕ್ತವೂ ಅಷ್ಟಿಷ್ಟು ಸೇರಿರಬೇಕು. ಇವೆರಡೂ ರಕ್ತಗಳಿದ್ದ ಕಾರಣ ಹೋಲ್‌ಮೆನ್ ಮನೆತನ ಹಾಗೂ ನನ್ನ ತಾಯಲ್ಲಿ ಜೀವನದ ಬಗ್ಗೆ ಮಾನವೀಯ ಹಾಗೂ ಉತ್ಸಾಹಭರಿತ ಆಸಕ್ತಿ ಮತ್ತು ಹಾಸ್ಯಬುದ್ಧಿ ಕಂಡುಬರುತ್ತಿದ್ದುವು. ಇವರಲ್ಲಿ ಕೆಲವರಿಗೆ ಮತದ ಬಗ್ಗೆ ಅಷ್ಟೇನೂ ಆಸಕ್ತಿ ಇರಲಿಲ್ಲ. ನಮ್ಮಜ್ಜಿ ಹೋಲ್‌ಮೆನ್ನಳು ತನ್ನ ಮಗಳು ಮಿನ್ನೀ ಕೆಲಸಕ್ಕೆ ಬಾರದ ಪಾದ್ರಿಯನ್ನು ಮದುವೆ ಆಗಕೂಡದೆಂದು ಆಕ್ಷೇಪಣೆ ಎತ್ತಿದ್ದಳು. ಆದರೆ ಪಾದ್ರಿ ಬಿಷಪ್ ಆದಾಗ ಕೊಂಚ ಸಮಾಧಾನವಾಯಿತು. ಅವಳು ಚರ್ಚಿಗೆ

ಎಂದೂ ಹೋಗಲಿಲ್ಲ; ಬೈಬಲ್ ಓದಲಿಲ್ಲ. ಆದರೆ ಅಜ್ಜಿ ಬಹಳ ಗುಟ್ಟಾಗಿ ಮಾಡುತ್ತಿದ್ದ ಒಂದು ಕೆಲಸ ಮಕ್ಕಳಾದ ನಮಗೆಲ್ಲ ಬಹಳ ಕುತೂಹಲವನ್ನುಂಟು ಮಾಡುತ್ತಿತ್ತು. ಅದೇನೆಂದರೆ, ಅಜ್ಜಿ ಕುಡಿಯುತ್ತಿದ್ದಳು; ಪಾಪ, ಅಷ್ಟೇನೂ ಹೆಚ್ಚಾಗಿ ಕುಡಿಯುತ್ತಿರಲಿಲ್ಲ. ಅಂತ ಕಾಣುತ್ತೆ. ಅಂತೂ ಅಜ್ಜಿಯ ಕರಿ ಉಡುಪುಗಳನ್ನು ಇಡುತ್ತಿದ್ದ ಬೀರಿನೊಳಗೆ ಒಂದು ಬ್ರಾಂದಿ ಸೀಸೆ ಯಾವಾಗಲೂ ಇರುತ್ತಿತ್ತು. ಬೇಕಾದಾಗ ಅಜ್ಜಿ ಒಂದೆರಡು ಗುಟುಕು ಕುಡಿಯುತ್ತಿದ್ದಳು.

ನಾನು, ನನ್ನ ತಂಗಿ ಮತ್ತು ತಮ್ಮ – ನಾವು ಮೂರು ಜನ ಸೇರಿಕೊಂಡು 'ಇಂಥ ಅಜ್ಜಿ ನರಕಕ್ಕೆ ಹೋಗ್ತಾಳಾ ?' ಎಂಬ ಬಗ್ಗೆ ಚರ್ಚೆಮಾಡುತ್ತಿದ್ದೆವು. ಶಾಸ್ತ್ರದ ರೀತಿಯಲ್ಲಿ ನೋಡಿದರೆ ಆಕೆ ನರಕಕ್ಕೆ ಹೋಗಬೇಕು. ಏಕೆಂದರೆ, ಆಕೆ ಕುಡಿಯುವುದು ಕಲಿತು ಕೆಟ್ಟುಹೋಗಿದ್ದಳು. ಆದರೆ ಅಷ್ಟೊಂದು ಒಳ್ಳೆ ಅಜ್ಜಿ ನರರಕ್ಕೆ ಹೋಗುವುದು ಸರಿಯಲ್ಲ ಎಂದು ನಮಗೆ ಅನ್ನಿಸುತ್ತಿತ್ತು. ತನಗೆ ಬರುತ್ತಿದ್ದ ದುಡ್ಡಿನಲ್ಲಿ ಅಜ್ಜಿ ಅರ್ಧ ಕ್ರೌನು, ಒಮ್ಮೊಮ್ಮೆ ಚಿನ್ನದ ಸವರನ್ನನ್ನು, ನಮಗೆ ತಪ್ಪದೆ ಕೊಡುತ್ತಿದ್ದಳು. ಅಲ್ಲದೆ ಅವಳು ತುಂಬ ಮುದ್ದಾಗಿದ್ದಳು. ಅಂಥವಳು ನರಕಕ್ಕೆ ಹೋಗುತ್ತಾಳೆಯೇ ? ನಮ್ಮ ಅಜ್ಜಿ ಎಷ್ಟು ಚಂದವಾಗಿದ್ದಳೆಂದರೆ, ಬಹಳ ಹಿಂದೆ ಅವಳು ಇಂಡಿಯಾದಲ್ಲಿದ್ದಾಗ ಆಕೆಯನ್ನು 'ಪಂಜಾಬಿನ ಸುಂದರಿ' ಎಂದು ಕರೆಯುತ್ತಿದ್ದರು. ಆಕೆ ಬೀದಿಯಲ್ಲಿ ಕುದುರೆಸಾರೋಟಿನಲ್ಲಿ ಹೊರಟರೆ, ಜನ ಮನೆಗಳ ಬಾಗಿಲಲ್ಲಿ ನಿಂತು ನೋಡುತ್ತಿದ್ದರು. ಅಂಥವಳು ನರಕದ ಜ್ವಾಲೆಯಲ್ಲಿ ಸುಟ್ಟು ಭಸ್ಮವಾಗುವುದನ್ನು ನೆನಸಿಕೊಂಡು ನಾವು ಗಡಗಡ ನಡುಗುತ್ತಿದ್ದೆವು. ನಮ್ಮ ಅವ್ವನನ್ನು ಒಂದೊಂದು ಸಲ ಈ ಬಗ್ಗೆ ಕೇಳಿದಾಗ ಅವಳೂ ನಮ್ಮಂತೆಯೇ ಭಾವಿಸಿ, ಅಜ್ಜಿ ಸತ್ತಾಗ ಏನಾದರೂ ವಿಶೇಷ ವ್ಯವಸ್ಥೆ ಮಾಡಬೇಕಾಗಿ ಬರಬಹುದೋ ಏನೋ ಎಂದು ಅನ್ನುತ್ತಿದ್ದಳು.

ಈ ಮಾತು ನಮ್ಮ ಇಬ್ಬರು ಸೋದರಮಾವಂದಿರಿಗೂ ಅನ್ವಯಿಸುತ್ತದೆ. ಅವರನ್ನು ಕಂಡರೆ ನಮಗೆ ಬಹಳ ಪ್ರೀತಿ. ಇವರಲ್ಲಿ ಒಬ್ಬ ಸೋದರಮಾವನ ಹೆಸರು ಫ್ರೆಡ್ ಎಂದು. ಡಾಕ್ಟರಾಗಿದ್ದ ಅವನಿಂದ ವರ್ಷಕ್ಕೆ ಒಂದೆರಡು ಸಲ ಕೋಳಿಮೀನು ಮುಂತಾದವುಗಳು ಬುಟ್ಟಿಗಟ್ಟಲೆ, ಬರುತ್ತಿದ್ದವು. ಚೆನ್ನಾಗಿ ಅಡಿಗೆಮಾಡುತ್ತಿದ್ದ ಅಮ್ಮ ಅವುಗಳನ್ನು ರುಚಿಯಾಗಿ ಮಾಡಿ ಬಡಿಸುತ್ತಿದ್ದಳು. ಅಲ್ಲದೆ ಫ್ರೆಡ್ ಮಾವನಿಗೆ ಷಿಕಾರಿ ಬರುತ್ತಿತ್ತು. ಆಟಪಾಟಗಳಲ್ಲಿ ಆಸಕ್ತಿ. ಅವನ ಕೈತುಂಬ ಹಣ ಇತ್ತು ಅಂತ ಕಾಣುತ್ತೆ. ಸೀಸದ ಸಿಪಾಯಿಗಳನ್ನೂ ಪುಟ್ಟ ಪುಟ್ಟ ಫಿರಂಗಿಗಳನ್ನೂ ಅವನು ತಂದುಕೊಡುತ್ತಿದ್ದ. ನಾವು ಅವುಗಳೊಡನೆ ಆಟ ಆಡಿ ಆನಂದಪಡುತ್ತಿದ್ದೆವು.

ಈ ಮಾವನಿಗಿಂತ ಹೆಚ್ಚು ಹೆರ್ಬರ್ಟ್ ಮಾವ. ಇವನು ಸಿಪಾಯಿಯಾಗಿದ್ದ. ರಷ್ಯನ್, ಫ್ರೆಂಚ್ ಮತ್ತು ಜರ್ಮನ್ ಭಾಷೆಗಳು ತುಂಬ ಚೆನ್ನಾಗಿ ಬರುತ್ತಿದ್ದುದರಿಂದ ಇವನನ್ನು ದುಭಾಷಿಯಾಗಿ ಪ್ರಪಂಚದ ನಾನಾ ಭಾಗಗಳಿಗೆ ಕಳುಹಿಸುತ್ತಿದ್ದರು.

ಕಳೆದ ಶತಮಾನದ ಕೊನೆಯಲ್ಲಿ ಬಾಕ್ಸರುಗಳನ್ನು (Boxers) ಬಲಿಹಾಕಲು ಚೀನೀ ದಂಡಯಾತ್ರಾ ಸೈನ್ಯದೊಡನೆ ಇವನನ್ನು ಕಳುಹಿಸಿದ್ದರು. ಅದಾದ ಕೆಲವು ವರ್ಷಗಳ ನಂತರ ಮಂಚೂರಿಯಾಕ್ಕೆ ಕಳುಹಿಸಿದ್ದರು. ಅಲ್ಲಿ ಇವನು ರಷ್ಯಾ- ಜಪಾನ್ ಯುದ್ಧದಲ್ಲಿ ರಷ್ಯದ ಕಡೆ ಹೋರಾಡಿದ ಮೊದಲನೆಯ ಮಹಾಯುದ್ಧದಲ್ಲಿ ವಿಶಿಷ್ಟ ಸೇವೆ ಸಲ್ಲಿಸಿದ ಕಾರಣ ಇವನನ್ನು ೧೯೧೯ರಲ್ಲಿ ದಕ್ಷಿಣ ರಷ್ಯಾ ದೇಶಕ್ಕೆ ಹೋದ ಬ್ರಿಟಿಷ್ ಮಿಷನ್ನಿನ ಮುಖ್ಯಸ್ಥನನ್ನಾಗಿ ಮಾಡಿದರು. ಅಲ್ಲಿಯ ಬಾಲ್ಷೆವಿಕರು (Bolshe-viks) ಇವನೇನಾದರೂ ತಮ್ಮ ಕೈಗೆ ಸಿಕ್ಕಿದರೆ ತಲೆಕೆಳಗಾಗಿ ನೇಣುಹಾಕುತ್ತಿದ್ದೆವೆಂದು ಹೇಳಿದರಂತೆ !

ನಾನು ಆಕ್ಸ್‌ಫರ್ಡಿಗೆ ಹೋದಾಗ ಈ ಮಾವ ಇಂಡಿಯಾಕ್ಕೆ ಹಿಂದಿರುಗಿದ. ಅದಕ್ಕೆ ಮುನ್ನ ಇವನು ೧೬ನೆಯ ಬಂಗಾಳ ಲ್ಯಾನ್ಸರ್ಸ್‌ನಲ್ಲಿ ಇದ್ದ. ಆ ಲಾನ್ಸರ್ಸ್‌ನ ನಾಯಕತ್ವ ವಹಿಸಿ ಸಿಂಧ್- ರಾಜಪುಟಾಣ ಎಂಬಲ್ಲಿ ಕೆಲಸಮಾಡಿದ. ಇವನಿಗೆ ಕಾಗದಗಳ ವಿಲೇವಾರಿ ವಿಳಂಬವಾದರೆ ಆಗುತ್ತಿರಲಿಲ್ಲ. 'ಫೈಲುಗಳನ್ನು ಸುಡುವ ಹೋಲ್‌ಮನ್' ಎಂಬ ಹೆಸರು ಪಡೆದಿದ್ದ. ಇದಕ್ಕೆ ಕಾರಣ ಸಿಮ್ಲಾದಲ್ಲಿ ಕೆಲವು ಕಾಗದಗಳನ್ನು ಮಾವ ಸುಟ್ಟದ್ದು. ಹೀಗೆ ಸುಡುವಾಗ ಕೆಲವು ಮುಖ್ಯವಾದ ಮತ್ತು ಇನ್ನೊಮ್ಮೆ ಪಡೆಯಲಾಗದ ಜಮೀನು ದಾಖಲೆಗಳನ್ನೂ ಸೇರಿಸಿ ಸುಟ್ಟುಬಿಟ್ಟ. ಕೊನೆಗೆ ಮಾವ ಲೆಫ್ಟಿನೆಂಟ್ - ಜನರಲ್ ದರ್ಜೆಗೇರಿ ೧೯೨೮ರಲ್ಲಿ ನಿವೃತ್ತನಾದ. ಅವನ ಹೆಸರಿನ ಮುಂದೆ ಬಿರುದುಗಳ ಸರಮಾಲೆಯೇ ಇರುತ್ತಿತ್ತು - ಕೆ. ಸಿ. ಬಿ., ಸಿ.ಎಂ.ಜಿ., ಡಿ.ಎಸ್.ಓ. ಎಂದು. ಇಪ್ಪತ್ತು ವರ್ಷಗಳ ಕಾಲ ಅವನು ಕನ್ನಾಟ್ - ಡ್ಯೂಕರ ಸ್ವಂತ ಲಾನ್ಸರ್ಸ್‌ನ ಆರನೆ ಪಡೆಯ ಕರ್ನಲ್ ಆಗಿದ್ದ. ಮಾವನ ಜೊತೆ ಇರಲು ಹೋದಾಗ ನಾವು ದೊಡ್ಡಸ್ತಿಕೆಯ ಶಿಖರ ಏರಿಬಿಡುತ್ತಿದ್ದೆವು. ವಿಶಾಲ ಪ್ರಪಂಚದ ಭಾಗವೊಂದರಲ್ಲಿ ಇರುವಂತೆ ನಮಗನ್ನಿಸುತ್ತಿತ್ತು.

ನಮ್ಮ ಚಿಕ್ಕವ್ವ ಮತ್ತು ದೊಡ್ಡವ್ವ ಇವರುಗಳಲ್ಲಿ ನಮಗೆ ಅಚ್ಚುಮೆಚ್ಚಾದವಳು ಎಂದರೆ ಮೊಲ್ಲಿ ಚಿಕ್ಕವ್ವ. ದರ್ಬಾರು ನಡೆಸುವ ತಾಯಿಯರಿಗೆ ದಾರಿಯಾಗಿ ದುಡಿಯುವ ದೌರ್ಭಾಗ್ಯದ ಹೆಂಗಸರಲ್ಲಿ ಅವಳೂ ಒಬ್ಬಳು. ಅವಳು ಮದುವೆಯಾಗಲೂ ಇಲ್ಲ; ಮದುವೆಯಾಗಲೂ ಬಿಡಲೂ ಇಲ್ಲ. ಏಕೆಂದರೆ, ಅಜ್ಜಿ ಹೋಲ್‌ಮನ್ನಳನ್ನು ಆಕೆ ನೋಡಿಕೊಳ್ಳಬೇಕಾಗಿತ್ತು. ನಮ್ಮನ್ನು ಕಂಡರೆ ಅವಳಿಗೆ ತುಂಬಾ ಪ್ರೀತಿ. ನಮ್ಮ ಅವ್ವನನ್ನು ಕಂಡರಂತೂ ಪಂಚಪ್ರಾಣ. ನಮ್ಮ ಅಜ್ಜನಿಗೆ ಬಹಳ ಬೇಕಾದವಳಾಗಿದ್ದಳು. ಅಜ್ಜಿ ಸಾಯುವಾಗ ಅವಳಿಗೆ ಸ್ವಲ್ಪ ಹಣ ಬಿಟ್ಟುಹೋದಳು. ಆ ಹಣದಿಂದ ಅವಳು ವರ್ದಿಂಗ್‌ನಲ್ಲಿ ಒಂದು ಚಿಕ್ಕಮನೆ ಕೊಂಡುಕೊಂಡು ಒಬ್ಬಳೇ ಇರುತ್ತಿದ್ದಳು. ನಾವು ಆಗಾಗ್ಗೆ ಹೋಗಿ ಅವಳೊಡನೆ ಇರುತ್ತಿದ್ದೆವು. ಮೊಲ್ಲಿ ಚಿಕ್ಕವ್ವ ಬೇರೆಯವರಿಗಿಂತ ಹೆಚ್ಚಾಗಿ ಇಂಡಿಯಾ ದೇಶದವಳಾಗಿದ್ದಳು. ಅವಳ ಬಾಯಿಂದ ಯಾವಾಗಲೂ 'ಡಾಕ್', 'ದೋಭಿ' ಎಂಬ ಮಾತುಗಳು ಬರುತ್ತಿದ್ದುವು. ಆಗಾಗ್ಗೆ 'ಸುವರ್ ಕಾ ಬಚ್ಚಾ' ಎಂಬ ಕೆಟ್ಟ

ಮಾತುಗಳನ್ನೂ ಆಡುತ್ತಿದ್ದಳು. ಅಮ್ಮನಂತೆ ರುಚಿಯಾದ ಅಡಿಗೆ ಮಾಡುತ್ತಿದ್ದಳು. ಜಿಲೇಬಿ ಮಾಡುವುದರಲ್ಲಂತೂ ಎತ್ತಿದ ಕೈ.

ಲೂ ಎಂಬ ಇನ್ನೊಬ್ಬ ಚಿಕ್ಕವ್ವ ಇದ್ದಳು. ಅವಳು ದಪ್ಪಗೆ ದುಂಡಾಗಿದ್ದಳು. ಎಲ್ಲರೊಡನೆ ನಗುನಗುತ್ತಾ ಇರುತ್ತಿದ್ದಳು. ನಿರ್ಗತಿಕನಾಗಿದ್ದ ಶಿಲ್ಪಿಯೊಬ್ಬನನ್ನು ಮದುವೆಯಾದಳು. ಮನೆತುಂಬ ಗಂಡುಮಕ್ಕಳು.

ಈ ನಮ್ಮ ದಾಯಾದಿಗಳಲ್ಲಿ ಒಬ್ಬ ಸಬ್‌ಮೆರೀನ್ ಕಮ್ಯಾಂಡರ್ ಆಗಿದ್ದ. ಆತ ಮೊದಲನೆಯ ಯುದ್ಧದಲ್ಲಿ ನೀರುಪಾಲಾದ. ಮತ್ತೊಬ್ಬ ಎರಡನೆಯ ಯುದ್ಧದಲ್ಲಿ ಸಿಂಗಪೂರ್ ಪತನದ ನಂತರ ಜಪಾನರ ಕೈಗೆ ಸಿಕ್ಕಿ ಸತ್ತುಹೋದ.

ಕೊನೆಯದಾಗಿ, ಉಳಿದ ಒಬ್ಬಿಬ್ಬರ ವಿಷಯ. ಇವರಲ್ಲಿ ಒಬ್ಬಳು ನಮ್ಮ ಚಿಕ್ಕವ್ವನ ಮಗಳು ಲೂಸಿ. ಇವಳು ರೋಮ್ ಚರ್ಚನ್ನು ಸೇರಿ ಮಹಾಪರಾಧ ಮಾಡಿಬಿಟ್ಟಳು. ಶಿಲುಬೆ ಧರಿಸಿ ದಯಾಮೂರ್ತಿಯಂತಿದ್ದ ಈ ಅಕ್ಕನನ್ನು ನಾನು ನೋಡಿದ್ದು ಜ್ಞಾಪಕ.

ದಾಯಾದಿಗಳ ಪೈಕಿ ಅಣ್ಣ ಹ್ಯೂಫ್ ಎಂಬುವನೊಬ್ಬನಿದ್ದ. ಇವನನ್ನು ಮೊದಲನೆಯ ಯುದ್ಧದ ಕಾಲದಲ್ಲಿ ಸೈನ್ಯಕ್ಕೆ ಸೇರಿಸಿದೆವು. ಸೈನ್ಯಕ್ಕೆ ಸೇರಿದನೋ ಇಲ್ಲವೋ ಇವನ ತಲೆ ಕೆಟ್ಟುಹೋಯಿತು. ಇವನನ್ನು ಸಾಕುವ ಭಾರ ಸರಕಾರದ ಮೇಲೆ ಬಿತ್ತು. ಈ ಕಾರಣ ನಮ್ಮ ಭಾರ ಎಷ್ಟೋ ಕಡಿಮೆಯಾಯಿತು. ಒಮ್ಮೊಮ್ಮೆ ಇವನನ್ನು ಮನೆಗೆ ಕಳುಹಿಸುತ್ತಿದ್ದರು. ಇವನು ಮನೆಗೆ ಬಂದಾಗಲೆಲ್ಲಾ ನಮಗೆ ಸಂತೋಷ. ನಾನಾ ಬಗೆಯ ಹಾಡುಗಳನ್ನು ಹಾಡಿ ನಮ್ಮನ್ನು ಸಂತೋಷಪಡಿಸುತ್ತಿದ್ದ. ನಮ್ಮ ಅಮ್ಮನನ್ನು ವರ್ಜಿನ್ ಮೇರಿ ಎಂದೇ ಭಾವಿಸಿದ್ದ. ಆದರೆ ವರ್ಜಿನ್ ಮೇರಿಯ ಮಗನಾದ ನನಗೆ ಸಿಕ್ಕಬೇಕಾದ ಸ್ಥಾನ ಮಾತ್ರ ಸಿಕ್ಕಲಿಲ್ಲ!

ನನ್ನ ತಾಯಿಯ ಮನೆತನಕ್ಕೆ ಹೋಲಿಸಿದರೆ ನಮ್ಮ ತಂದೆಯ ಮನೆತನ ಅಷ್ಟೇನೂ ಹೇಳಿಕೊಳ್ಳುವಂತಹುದಾಗಿರಲಿಲ್ಲ. ಎಲ್ವಿನರು ಆ್ಯಂಗ್ಲೊ ಸ್ಯಾಕ್ಸನ್ ಮನೆತನಕ್ಕೆ ಸೇರಿದವರು; ವೆಲ್ಷ್ ಮನೆತನಕ್ಕೆ ಸೇರಿದವರಲ್ಲ. ಬರ್ಕ್ ಅವರು ಬರೆದ **'ಭೂಮಾಲೀಕರು'** (Landed Gentry) ಎಂಬ ಪುಸ್ತಕದಲ್ಲಿ ನಮ್ಮ ಮನೆತನದ ಹೆಸರು ೧೫೩೧ರಿಂದ ಕಾಣಿಸಿಕೊಳ್ಳುತ್ತದೆ. ನನ್ನ ಹೆಸರೂ ಆ ಪುಸ್ತಕದಲ್ಲಿದೆ. ಆದರೆ ನನಗೆ ಸಿಕ್ಕಬಹುದಾದ ಭೂಮಿ ಮಾತ್ರ ಕೇವಲ ಆರೇ ಅಡಿ.

ನಮ್ಮ ಪೂರ್ವಿಕರಲ್ಲಿ ಯಾರೂ ಹೆಸರಾದವರಲ್ಲ. ೧೬೦೦ರಲ್ಲಿ ಹೆನ್ರಿ ಎಲ್ವಿನ್ ಎಂಬುವರೊಬ್ಬರು ನ್ಯೂ ಇನ್ ಎಂಬಲ್ಲಿ ಹಿರಿಯ ಬ್ಯಾರಿಸ್ಟರಾಗಿದ್ದರು. ಇನ್ನೂರು ವರ್ಷಗಳ ನಂತರ ಮೈಕೇಲ್ ಎಲ್ವಿನ್ ಎಂಬುವರು ಡೋವರ್‌ನಲ್ಲಿ ಹಡಗಿನ ಆಹಾರ ಸರಬರಾಜು ಇಲಾಖೆಯಲ್ಲಿ ಒಬ್ಬ ಅಧಿಕಾರಿಯಾಗಿದ್ದರು. ಎಲ್ವಿನರುಗಳಲ್ಲಿ ಬಹಳ ಜನ ಸಿಪಾಯಿಗಳು ಅಥವಾ ಸರಕಾರಿ ನೌಕರರು. ಈಚೆಗೆ ಪಾದ್ರಿಗಳಾಗಿದ್ದರು.

ನಮ್ಮ ಚಿಕ್ಕಪ್ಪಂದಿರಲ್ಲಿ ಇಬ್ಬರು ಐ.ಸಿ.ಎಸ್. ನಲ್ಲಿದ್ದು ಮಾರ್ಲಿ – ಮಿಂಟೋ ಸುಧಾರಣೆಗಳ ವೇಳೆ ಆ ಹುದ್ದೆಯನ್ನು ಬಿಟ್ಟುಬಿಟ್ಟರು. ಇವರಲ್ಲಿ ಚಿಕ್ಕವನ ಇಬ್ಬರು ಮಕ್ಕಳು ಅಂದರೆ ಡಿ.ಎಚ್. ಎಲ್ವಿನ್ ಮದ್ರಾಸು ರಾಜ್ಯದಲ್ಲಿಯೂ ಆರ್. ಬಿ. ಎಲ್ವಿನ್ ಪಂಜಾಬ್ ರಾಜ್ಯದಲ್ಲಿಯೂ ಐ.ಸಿ.ಎಸ್. ಅಧಿಕಾರಿಗಳಾಗಿದ್ದರು. ಇಂಡಿಯಾ ಸ್ವತಂತ್ರವಾದಾಗ ಅವರನ್ನು ನ್ಯಾಯವಾಗಿಯೇ ನಿವೃತ್ತಿಮಾಡಿದರು.

ನಮ್ಮ ಮನೆತನದ ನಾನೂರು ವರ್ಷಗಳ ಚರಿತ್ರೆಯಲ್ಲಿ ನಾನು ಮತ್ತು ಮಾರ್ಗರೆಟ್ ಎಲ್ವಿನ್ ಮಾತ್ರ ಮತೀಯ ಹಾಗೂ ರಾಜಕೀಯ ವಿಚಾರಗಳಲ್ಲಿ ಪೂರ್ವಿಕರ ಕಟ್ಟುನಿಟ್ಟಾದ ದಾರಿ ಬಿಟ್ಟು ಬೇರೆ ದಾರಿ ಹಿಡಿದಂತೆ ಕಾಣುತ್ತದೆ. ೧೬೧೫ರಲ್ಲಿ ನಾರ್‌ಫೋಕ್ ಎಂಬ ಪ್ರಾಂತದ ಒಂದು ಪಟ್ಟಣಕ್ಕೆ ಬೆಂಕಿ ಹಚ್ಚಲು ಮತ್ತು ಅದಕ್ಕೆ ಅನುಕೂಲವಾದ ಗಾಳಿಯನ್ನೆಬ್ಬಿಸಲು ಸನ್ನಾಹಮಾಡಿದ ಮಾಟಗಾತಿ ಎಂದು ಭಾವಿಸಿ ಮಾರ್ಗರೆಟ್ ಎಲ್ವಿನಳನ್ನು ಸುಟ್ಟುಹಾಕಿದರು.

ನನಗೆ ಗೊತ್ತಿದ್ದಂತೆ ಎಲ್ವಿನರುಗಳೆಲ್ಲ ಸಾಂಪ್ರದಾಯಿಕವಾಗಿ ಬಂದ ಕಟ್ಟುನಿಟ್ಟಾದ ಮತಪದ್ಧತಿಗಳನ್ನು ಅನುಸರಿಸಿಕೊಂಡೇ ಹೋಗುತ್ತಿದ್ದರು. ಈಚೆಗೆ ಐ.ಸಿ.ಎಸ್. ಅಧಿಕಾರಿಯಾಗಿದ್ದ ಚಿಕ್ಕಪ್ಪ ಎಡ್ಗಾರ್ ಎಲ್ವಿನ್ ನನ್ನ ಪುಸ್ತಕಗಳು ಯಾವನ್ನೂ ಮನೆಯ ಹೆಂಗಸರು ಓದಕೂಡದೆಂದು ಕಟ್ಟುಮಾಡಿದ್ದ.

ನನ್ನ ನಾಮಕರಣವಾದಾಗ ಧರ್ಮೀಯಪಿತನ (God - Father) ಸ್ಥಾನವನ್ನು ಪಡೆದಿದ್ದ ಬಿಷಪ್ ಟೇಲರ್ ಸ್ಮಿತ್ ಎಂಬುವರು ಮೊದಲನೆಯ ಮಹಾಯುದ್ಧದಲ್ಲಿ ಸೈನ್ಯಪಡೆಯ ಚ್ಯಾಪ್ಲೆನ್ – ಜನರಲ್ ಆಗಿದ್ದರು. ಇಂಗ್ಲಿಷ್ ಪಾದ್ರಿಗಳಾರೂ ಶಿಲುಬೆಗಳನ್ನು ಉಪಯೋಗಿಸಕೂಡದೆಂಬ ಕಟ್ಟಾಜ್ಞೆ ಮಾಡಿ ಕುಪ್ರಸಿದ್ಧರಾದ ಅವರಿಗೆ ಹಿಡಿಸದೆ ಇದ್ದ ಮತ್ತೊಂದು ಕೆಟ್ಟ ಚಾಳಿ ಎಂದರೆ ಮುಷ್ಟಿಮೈಥುನ. ಅವರು ಯಾವಾಗಲೂ ಆ ವಿಷಯವಾಗಿ ನನ್ನೊಡನೆ ಮಾತಾಡುತ್ತಿದ್ದರು. ಪುರುಷವೀರ್ಯ ರಕ್ತಕ್ಕಿಂತ ನಲವತ್ತರಷ್ಟು ಹೆಚ್ಚು ಬೆಲೆಯಾದದ್ದು; ಅದನ್ನು ಕಳೆದುಕೊಂಡರೆ ಕಣ್ಣುಗಳ ಸುತ್ತ ಕಪ್ಪು ಕಾಣಿಸುತ್ತದೆ, ಬುದ್ಧಿ ಕ್ಷೀಣವಾಗುತ್ತದೆ, ಬೆಳವಣಿಗೆ ಕಡಿಮೆಯಾಗುತ್ತದೆ; ಸೇದುವುದಕ್ಕಿಂತ ಹೆಚ್ಚು ಅಪಾಯಕರವಾದುದು ವೀರ್ಯನಾಶ – ಎಂದು ಅವರು ಹೇಳುತ್ತಿದ್ದರು. ಅವರೊಮ್ಮೆ ಆಕ್ಸ್‌ಫರ್ಡ್‌ನಲ್ಲಿ ಯಾವುದೋ ಕೂಟದಲ್ಲಿ ಎದ್ದುನಿಂತು ತಮ್ಮ ಟಾರ್ಜಾನನಂತಹ ಎದೆಯನ್ನು ತಟ್ಟುತ್ತಾ 'ನೋಡಿ ನನ್ನನ್ನು! ಒಬ್ಬ ಸ್ತ್ರೀಯನ್ನೂ ನಾನಿಲ್ಲಿಯವರೆಗೆ ಮುಟ್ಟಿಲ್ಲ' ಎಂದು ಹೇಳಿದ್ದು ನನಗೆ ಜ್ಞಾಪಕವಿದೆ. ಅವರ ಮಾತನ್ನು ಕೇಳಲು ನೆರೆದಿದ್ದವರಲ್ಲಿ ಬಹು ಮಂದಿ ತಾತ್ಕಾಲಿಕವಾಗಿಯಾದರೂ ಸಲಿಂಗಕಾಮಿಗಳ ಸ್ಥಿತಿಯನ್ನು (Homosexual - phase) ಹೊಂದಿದ್ದರಿಂದ ಅವರು ಹೇಳಿದ ಮಾತು ಬಹಳ ಹಿಡಿಸಿತು. ನಮ್ಮ ತಂದೆಯ ಸ್ನೇಹಿತರೊಬ್ಬರು ನನಗೆ ಯಾವಾಗಲೂ ಹೇಳುತ್ತಿದ್ದರು. 'ಗಂಡಸಾಗಿರು' ಎಂದು. ಈಗಲೂ ಆ ಮಾತನ್ನು ನೆನಸಿ ಕೊಂಡಾಗಲೆಲ್ಲಾ ಅದು ನನಗೆ ವಿಚಿತ್ರವಾಗಿ ಕಾಣುತ್ತದೆ.

ನಾವು ಬೆಳೆದು ದೊಡ್ಡವರಾದೆವು. ತಂಗಿ ಎಲ್ಡಿತ್ ಬಹಳ ಮುದ್ದು ಮುದ್ದಾಗಿ ಬೆಳೆದಳು. ಆದರೆ ನಾನು ? ಮರದ ಚಕ್ಕೆಯಂತೆ ಹೇಗೇಗೊ ಇದ್ದೆ. ಮುಂದೆ ಚಾಚಿದ ನನ್ನ ಒಸಡನ್ನು ನಾನು ಪ್ರತಿದಿನ ಸಂಜೆ ಒಂದು ತರಹ ಯಂತ್ರದಿಂದ ಹಿಂದಕ್ಕೆ ಎಳೆದುಕೊಳ್ಳಬೇಕಾಗಿತ್ತು. ಬೇಸಿಲ್ ತಮ್ಮ ಮನೆಗೆಲ್ಲಾ ಮುದ್ದಾಗಿದ್ದ. ಎಲ್ಡಿತ್ ಮತ್ತು ನಾನು ಇಬ್ಬರೂ ಸೇರಿ ಅವನನ್ನು ಪೀಡಿಸಿದ್ದೇ ಪೀಡಿಸಿದ್ದು.

ನನಗೆ ಆರು ವರುಷ ಆಗಿದ್ದಾಗ ನಮ್ಮ ಮನೆಯ ಬೋಧಕಳು (Governess) ಸೇಂಟ್‌ಜಾನ್ ಗಾಸ್ಪೆಲ್‌ನ ಮೊದಲನೆ ಪ್ರಕರಣವನ್ನು ನಮಗೆಲ್ಲಾ ಬಾಯಿ ಪಾಠ ಮಾಡಿಸಿದಳು. ಹೀಗಿದ್ದರೂ ಒಂದೆರಡು ವರ್ಷಗಳ ನಂತರ ನನ್ನ ತುಂಟಾಟವನ್ನು ಸಹಿಸಲಾರದೆ ನಮ್ಮ ಅಮ್ಮ ನನ್ನನ್ನು ಲಂಡನ್ನಿನ ಒಂದು ಖಾಸಗಿ ಬೋರ್ಡಿಂಗ್ ಸ್ಕೂಲಿಗೆ ಸೇರಿಸಿದಳು. ನನ್ನ ತರಗತಿಯಲ್ಲಿದ್ದವರೆಲ್ಲಾ ಹುಡುಗಿಯರು. ಒಂದು ದಿನ ಅವರೆಲ್ಲಾ ಸೇರಿಕೊಂಡು ನನಗೆ ಸಾಕು ಅನ್ನಿಸಿಬಿಟ್ಟರು. ನನ್ನನ್ನು ಕಟ್ಟಿ ಮೇಜಿನ ಕೆಳಕ್ಕೆ ಹಾಕಿ ಗುಂಡುಸೂಜಿಯಿಂದ ನನ್ನ ಅಂಡುಗಳನ್ನು ಚುಚ್ಚಿದರು.

ಇಲ್ಲಿಯ ಊಟವೂ ನನಗೆ ಹಿಡಿಸಲಿಲ್ಲ. ಅರ್ಧ ಟರ್ಮ್ (Term) ಆದಮೇಲೆ ತಾಯಿ ಲಂಡನ್ನಿಗೆ ಬಂದು ನನ್ನನ್ನು ಮನೆಗೆ ಕರೆದುಕೊಂಡುಹೋದಳು. ಆಗ ನಾವು ವಲ್ಲಿಂಗ್‌ಟನ್‌ನಲ್ಲಿದ್ದವು. ಅಲ್ಲಿಂದ ರಿಗೇಟಿಗೆ ಹೋದೆವು. ಅಲ್ಲಿ ಇಡೀ ಮನೆಯೊಂದನ್ನೇ ಬಾಡಿಗೆಗೆ ತೆಗೆದುಕೊಂಡೆವು. ನಮಗೆಲ್ಲಾ ಖುಷಿ. ತೋಟವು ಇತ್ತು. ಅಮ್ಮನೇ ಸೊಗಸಾಗಿ ಅಡಿಗೆ ಮಾಡಿ ಬಡಿಸುತ್ತಿದ್ದಳು. ನಾವು ಒಬ್ಬ ಸೇವಕಿಯನ್ನೂ ನೇಮಿಸಿಕೊಂಡೆವು. ಆಕೆ ಕೆಲವು ವಾರಗಳ ನಂತರ ಅಮ್ಮನ ಉಡುಪು ಧರಿಸಿಕೊಂಡು, ನೂರು ಪೌಂಡುಗಳಷ್ಟು ಬೆಲೆಯ ಚಾಕು ಕತ್ತರಿ ಮುಂತಾದ ಬೆಳ್ಳಿಯ ಸಾಮಾನುಗಳನ್ನು ಹಾರಿಸಿಕೊಂಡು ಪರಾರಿಯಾದಳು. ಪೋಲೀಸನವರು ಸಂಪರ್ಕ ನನಗೆ ಆದದ್ದು ಅದೇ ಮೊದಲು. ಆಗ ಆ ಕಳ್ಳಿಯ ಷೂ ಒಂದರ ಮೇಲೆ ಆಕೆಯ ಹಸ್ತರೇಖೆಗಳ ಗುರುಗು ಇರುವುದನ್ನು ಕಂಡೆ. ಇದನ್ನು ಹೇಳಿದಾಗ ನಮ್ಮ ಅಮ್ಮ ನನ್ನನ್ನು ಕುರಿತು 'ವೆರಿಯರ್, ನೀನೊಂದು ಇಟ್ಟಿಗೆಕಣೊ' ಎಂದು ಹೇಳಿ ಬಹಳ ಒಳ್ಳೆಯ ಶಹಬಾಸ್‌ಗಿರಿ ಕೊಟ್ಟದ್ದು ನನಗೆ ಇನ್ನೂ ಜ್ಞಾಪಕವಿದೆ. ವಿಮೆ ಮಾಡಿದ್ದರಿಂದ ಷೂಗಳ ದುಡ್ಡು ಬಂದಿತು. ಅಂತೂ ಈ ಪ್ರಕರಣದ ಕಾರಣವೊ ಏನೊ, ನನ್ನ ಇಡೀ ಜೀವನವೆಲ್ಲಾ ನಾನು ಅಪರಾಧಕ್ಕೆ ಸಂಬಂಧಪಟ್ಟ ಕಾದಂಬರಿಗಳನ್ನೇ ಓದುತ್ತ ಬಂದಿದ್ದೇನೆ.

ನಾನು ರಿಗೇಟ್‌ನಲ್ಲಿ ಶಾಲೆಗೆ ಹೋದೆ, ಇದು ಒಳ್ಳೆಯ ಶಾಲೆ. ಈ ಶಾಲೆಯಲ್ಲಿ ಏನು ಮಾಡಿದೆ ಎಂದು ಜ್ಞಾಪಕವಿಲ್ಲ. ಆದರೆ ಒಂದು ಜ್ಞಾಪಕವಿದೆ. 'ಕಡಮೆ ಹೊತ್ತು ಪಾಠ ಮತ್ತು ರುಚಿಯಾದ ಊಟ' ಎಂದು ಹುಡುಗರ ಗುಂಪುಕಟ್ಟಿದ್ದು. ಇದಕ್ಕಾಗಿ ಹಳೆ ಜಾಗದ ಮೇಲೆ ಚುರುಕಾದ ಆರೇಟು ಬಿದ್ದುವು. ತಾಯಿ

ಹೆಡ್‌ಮಾಸ್ತರನ್ನು ಮನೆಗೆ ಕರೆಸಿದಳು. ನಮ್ಮಿಬ್ಬರಲ್ಲಿ ಹೆಡಾಮಾಸ್ತರೇ ಹೆಚ್ಚು ತೊಂದರೆಗೊಳಗಾದರು ಎಂದು ಕಾಣುತ್ತೆ.

ಅನಂತರ ನಾನು ಈಸ್ಟ್‌ಬೊರ್ನ್‌ಲ್ಲಿದ್ದ ಮತ್ತೊಂದು ಶಾಲೆಗೆ ಹೋದೆ. ಆ ಶಾಲೆಯ ಮುಖ್ಯೋಪಾಧ್ಯಾಯರು ತುಂಬಾ ಕೆಂಪು ಮುಖದ ಭಾರೀ ಮನುಷ್ಯ. ಅವರು ನನ್ನ ಜೀವಮಾನವೆಲ್ಲಾ ನೆನೆದುಕೊಳ್ಳುವಂತಹ ಒಂದು ಪಾಠ ಕಲಿಸಿದರು. ಶಾಲೆಯ ಸಹೋಪಾಧ್ಯಾಯರಲ್ಲಿ ಒಬ್ಬ ಕಕ್ಕಸುಗಳ ಬಳಿ ಅಡ್ಡಾಡುತ್ತ, ಅಲ್ಲಿಗೆ ಬಂದ ಚಿಕ್ಕ ಹುಡುಗರಿಗೆ ಏನೇನೋ ಅಶ್ಲೀಲವಾದ ಪ್ರಸ್ತಾಪಮಾಡುವ ಹವ್ಯಾಸದಲ್ಲಿ ತೊಡಗುತ್ತಿದ್ದ. ಈ ವಿಷಯ ಹೆಡ್‌ಮಾಸ್ತರಿಗೆ ಗೊತ್ತಾಯಿತು. ಅವರು ವಿಚಾರಣೆ ನಡೆಸಿದರು. ನಾನೂ ಒಬ್ಬ ಸಾಕ್ಷಿಯಾಗಿದ್ದೆ. ಲೈಂಗಿಕ ವಿಷಯಗಳ ಬಗ್ಗೆ ನನ್ನ ಪ್ರಪ್ರಥಮ ಅನುಭವ ಅದು. ನನಗಂತೂ ದಿಗ್ಭ್ರಮೆಯಾಯಿತು. ಬೆವರಿದೆ; ಮಾತು ತಡವರಿಸಿತು. ಹೆಡ್‌ಮಾಸ್ತರು ಮೇಲೆದ್ದು ನಿಂತುಗಟ್ಟಿಯಾಗಿ ಕಿರಿಚುತ್ತಾ, 'ಲೇ ಹುಡುಗ, ಗುದ್ದಲಿಯನ್ನು ಗುದ್ದಲಿ ಅಂತ ಕರೆಯೋ!' ಎಂದು ಹೇಳಿದರು. ಅಂದಿನಿಂದ, ಅದರಲ್ಲಿಯೂ ನನ್ನ 'ಬೈಗಾ' ಎಂಬ ಪುಸ್ತಕದಲ್ಲಿ, ಅದರಂತೆ ಮಾಡಲು ಪ್ರಯತ್ನಿಸಿದ್ದೇನೆ.

ನನಗೆ ಹದಿಮೂರು ವರ್ಷವಾದಾಗ ಪಬ್ಲಿಕ್ ಸ್ಕೂಲಿಗೆ ಸೇರಿಸುವ ಸಮಸ್ಯೆ ಉಂಟಾಯಿತು. ಯಾವ ಸ್ಕೂಲಿಗೆ ಸೇರಿಸಬೇಕೆನ್ನುವಷ್ಟರಲ್ಲಿ ಕೊಂಚ ಆಲೋಚನೆ ಮಾಡಬೇಕಾಯಿತು. ರೋಮ್ ಚರ್ಚಿನ ಪ್ರಭಾವಕ್ಕೊಳಗಾಗದಂತಹ ಮತ್ತು ನವೀನ ವಿದ್ಯೆಗೂ ಬೈಬಲಿಗೂ ಗಂಟುಹಾಕಿದರೆ ಉಂಟಾಗುವ ನಾಸ್ತಿಕತೆ ಬಾರದಂತಹ ಶಾಲೆಯೊಂದನ್ನು ಹುಡುಕಿ, ಅದಕ್ಕೆ ನಮ್ಮ ಮನೆಯವರೂ ನಮ್ಮ ಹಿತೈಷಿಗಳೂ ಸೇರಿಸಿದರು. ನಾನು ವೆಸ್ಟ್‌ಮಿನ್‌ಸ್ಟರ್ ಶಾಲೆಗೆ ಹೋದರೆ ಮನೆಯವರಿಗೆ ಅಲ್ಲೇನೊ ಪೋಪರ ಪ್ರಭಾವದ ಅಪಾಯಕಂಡ ಕಾರಣ ಅದಕ್ಕೆ ಸೇರಿಸಲಿಲ್ಲ. ರಗ್ಬಿಗೆ ಸೇರಿಸುವುದಕ್ಕೆ ನೋಡಿದರು. ಅದೂ ಸರಿಕಾಣಲಿಲ್ಲ. ಕೊನೆಗೆ ಒಬ್ಬ ಮಿಷನರಿ ಸ್ನೇಹಿತನ ಸಲಹೆಯಂತೆ ಚೆಲ್ಟನ್‌ಹ್ಯಾಂನಲ್ಲಿದ್ದ ಡೀನ್ ಕ್ಲೋಸ್ ಎಂಬ ಶಾಲೆಗೆ ಸೇರಿಸಿದರು. ಕರ್ಮಾಚರಣೆ, ಸಂಸ್ಕಾರ – ಇವಕ್ಕಿಂತ ಶ್ರದ್ಧಾಭಕ್ತಿಗಳೇ ಮುಕ್ತಿ ಸಂಪಾದನೆಗೆ ಮುಖ್ಯ ಎಂಬ ಮತದ ಮೂಲತತ್ವಗಳನ್ನು ಬೋಧಿಸುವ ಸಲುವಾಗಿಯೇ ಈ ಶಾಲೆ ಸ್ಥಾಪಿತವಾಗಿತ್ತು. ಅಲ್ಲಿ ದೇವರು ಹೇಳಿರುವ ಮಾತಿಗೆ ಸಾಮಾನ್ಯ ರೀತಿಯ ಅರ್ಥಮಾಡುವ ದಡ್ಡತನಕ್ಕೆ ಅವಕಾಶವಿರಲಿಲ್ಲ.

ನನ್ನ ಬಾಲ್ಯದಿಂದ ಇಲ್ಲಿಯವರೆಗೂ ನನ್ನನ್ನು ಅಷ್ಟೊಂದು ಪಟ್ಟಾಗಿ ಹಿಡಿದಿದ್ದ ಮತಧರ್ಮವು ಶಾಲೆಯಲ್ಲಿಯೂ ಅಷ್ಟೇ ಪ್ರಧಾನವಾಗಿ ಬೆಳೆದಿತ್ತು. ಕಾಲಕ್ಕೆ ಸರಿಯಾಗಿ ಪ್ರಾರ್ಥನೆಗಳಾಗುತ್ತಿದ್ದುವು. ಆರಾಧನೆಗೆ ತಪ್ಪಿಸಿಕೊಳ್ಳುತ್ತಿರಲಿಲ್ಲ. ಜೊತೆಗೆ ನಾನು ಭಾನುವಾರ ನಡೆಯುತ್ತಿದ್ದ ಪ್ರಾರ್ಥನಾ ಸಭೆಗೆ ತಪ್ಪದೆ ಹೋಗುತ್ತಿದ್ದೆ. ಅಲ್ಲಿ ಪ್ರತಿಯೊಬ್ಬರೂ ಸರದಿಯಮೇಲೆ ಮತಬೋಧನೆ ಮಾಡಬೇಕಾಗಿತ್ತು. ಬೋಧನೆಯಾದ

ಮೇಲೆ ಪ್ರತಿಯೊಬ್ಬರೂ ಪೂರ್ವಸಿದ್ಧತೆ ಮಾಡಿಕೊಳ್ಳದೆ ಪ್ರಾರ್ಥನೆ ಸಲ್ಲಿಸಬೇಕಾಗಿತ್ತು. ಇದು ನನಗೆ ಬಹಳ ಕಷ್ಟವಾಗಿ ಕಂಡಿತು.

ಡೀನ್ ಕ್ಲೋಸ್ ಶಾಲೆಯ ಮುಖ್ಯೋಪಾಧ್ಯಾಯರ ಹೆಸರು ಡಾ॥ ಡಬ್ಲ್ಯೂ ಎಚ್. ಫ್ಲೆಕ್ಕರ್ ಎಂದು. ನನ್ನ ಅಭಿಪ್ರಾಯದಲ್ಲಿ ಇವರು ಒಳ್ಳೆಯ ಕವಿ ಎನಿಸಿಕೊಂಡ ಜೇಮ್ಸ್ ಎಲ್ರಾಯ್ ಫ್ಲೆಕ್ಕರ್ ಎಂಬುವರ ತಂದೆ. ನಾನು ಶಾಲೆಯಲ್ಲಿರಬೇಕಾದರೆ ರುಪರ್ಟ್ ಬ್ರೂಕ್ ಮತ್ತು ಎಲ್ರಾಯ್ ಫ್ಲೆಕ್ಕರ್‌ರವರು ತಮ್ಮ ಕೀರ್ತಿಯ ಶಿಖರ ಮುಟ್ಟಿದ್ದರು. ನಾವು ಫ್ಲೆಕ್ಕರ್ ಅವರ ಕೆಲವು ಕವನಗಳನ್ನು ರಾಗವಾಗಿ ಪ್ರಾರ್ಥನಾ ಮಂದಿರದಲ್ಲಿ ಹಾಡುತ್ತಿದ್ದೆವು.

ನಮಗೆ ಈ ಫ್ಲೆಕ್ಕರ್‌ಗಳ ಬೋಧನೆ ಹೆಚ್ಚಾಯಿತು ಅಂತ ಕಾಣುತ್ತೆ. ಏಕೆಂದರೆ, ಡಾ॥ ಫ್ಲೆಕ್ಕರ್ ಅವರ ಒಬ್ಬ ಮಗ ನಮಗೆ ಪ್ರಾಚೀನ ಸಾಹಿತ್ಯದ ಪಾಠಮಾಡುತ್ತಿದ್ದ. ಒಬ್ಬ ಮಗಳು– ಅವಳ ಹೆಸರು ಜಾಯ್ಸ್ – ವಿಜ್ಞಾನದ ಪಾಠಮಾಡುತ್ತಿದ್ದಳು. ಮುದುಕಿಯಾದ ಫ್ಲೆಕ್ಕರರ ಹೆಂಡತಿ ನನಗೊಮ್ಮೆ ಹೀಬ್ರ್ಯೂ ಭಾಷೆ ಹೇಳಿಕೊಡುವುದಕ್ಕೆ ಪ್ರಯತ್ನಪಟ್ಟಳು. ಇದಕ್ಕಿಂತ ಹೆಚ್ಚಾಗಿ, ಅವಳು ಪ್ರತಿ ರಾತ್ರಿ ಊಟದ ವೇಳೆಯಲ್ಲಿ ನಡೆಸುತ್ತಿದ್ದ ತನಿಖೆಯನ್ನು ನಾವು ಮರೆಯುವಂತಿಲ್ಲ. ಊಟದ ಮನೆಯ ಒಂದು ಕೊನೆಯಲ್ಲಿ ನಿಂತು ಆಕೆ 'ಸರಿಯಾಗಿ ಮಲಪ್ರವರ್ತನೆ ಆಯಿತೇ?' ಎಂದು ಕೇಳಿದ ಪ್ರಶ್ನೆಗೆ ಹುಡುಗರು ಒಬ್ಬೊಬ್ಬರಾಗಿ 'ಹೌದು, ಮಿಸೆಸ್ ಫ್ಲೆಕ್ಕರ್' ಅಥವಾ 'ಇಲ್ಲ, ಮಿಸೆಸ್ ಫ್ಲೆಕ್ಕರ್' ಎಂದು ಹೇಳುತ್ತಾ ಅವಳ ಮುಂದೆ ಸಾಲಾಗಿ ಹೋಗಬೇಕಾಗಿತ್ತು.

ಡಾ॥ ಫ್ಲೆಕ್ಕರ್ ದೊಡ್ಡಮನುಷ್ಯರೆಂದೇ ನನ್ನ ಭಾವನೆ. ಅವರೇ ಆ ಶಾಲೆಯನ್ನು ಪ್ರಾರಂಭಿಸಿದವರು. ಅದಕ್ಕೆ ಒಂದು ಸ್ವಾಭಿಮಾನ ಸಿಕ್ಕುವಂತೆ ಮಾಡಿದವರೂ ಅವರೇ. ಅವರು ಮತಧರ್ಮವನ್ನು ಸೊಗಸಾಗಿ ಬೋಧಿಸುತ್ತಿದ್ದರು. ಅವರ ಈ ಬೋಧನೆಗಳನ್ನು ನಾವು ತಪ್ಪದೆ ಕೇಳುತ್ತಿದ್ದೆವು. ಅವರು ಸಾಹಿತ್ಯವನ್ನು ಸಾಕಷ್ಟು ಚೆನ್ನಾಗಿ ಅಭ್ಯಾಸಮಾಡಿದ್ದರು. ಒಮ್ಮೆ ಮಿಲ್ಟನ್ ಮೇಲೆ ಅವರು ಸೊಗಸಾದ ಭಾಷಣ ಮಾಡಿದ್ದು ನನಗೆ ಜ್ಞಾಪಕ. ಅವರಲ್ಲಿ ಕೊಂಚ ಜರ್ಮನ್ ರಕ್ತ ಇದ್ದ ಕಾರಣ ಮೊದಲನೆಯ ಯುದ್ಧದ ಕಾಲದಲ್ಲಿ ಅವರಿಗೆ ತೊಂದರೆಯಾಯಿತು. ಒಂದೆರಡು ಸಲ ಚೆಲ್ಟೆನ್‌ಹ್ಯಾಮಿನಲ್ಲಿದ್ದ ಒಳ್ಳೆಯ ಜನರೂ ಕೂಡ ಫ್ಲೆಕ್ಕರ್ ಅವರು ಸ್ಥಳದ ಚರ್ಚಿನಲ್ಲಿ ಮತಬೋಧನೆ ಮಾಡಲು ಬಂದಾಗ ಹೊರಕ್ಕೆ ಎದ್ದುಹೋದರಂತೆ.

ಡೀನ್ ಕ್ಲೋಸ್ ಬಹು ಚೆನ್ನಾದ ಶಾಲೆಯಲ್ಲದಿದ್ದರೂ ಅಲ್ಲಿ ಏನಾದರೊಂದು ಪ್ರಸಂಗ ನಡೆಯುತ್ತಲೇ ಇತ್ತು. 'ಹಸಿರು ಸೈಕಲ್ ಕೊಲೆ' ವಿಷಯವನ್ನು ಆಮೇಲೆ ಹೇಳುತ್ತೇನೆ. ಅಷ್ಟೇ ಆಸಕ್ತಿಯನ್ನುಂಟುಮಾಡಿದ್ದು ಸೈನ್ಯದ ಉಗ್ರಾಣದಲ್ಲಿ ಒಂದು ಬೈಬಲ್, ಮೀನಿನ ಡಬ್ಬ ಮತ್ತು ಶೌಚದ ಒಂದು ಕಟ್ಟು ಕಾಗದ ಕದ್ದ ಕಾರಣಕ್ಕಾಗಿ ತಮ್ಮ ದಸ್ತಗಿರಿಯಾಗಿದೆಯೆಂದು ಡಾ॥ ಫ್ಲೆಕ್ಕರ್ ಅವರು ಹಾಲ್‌ನಲ್ಲಿ ಎದ್ದುನಿಂತು

ಹೇಳಿದ್ದು. ಇದು ಕೇವಲ ಆಕಸ್ಮಿಕವೆಂದು ಎಲ್ಲರಿಗೂ ಗೊತ್ತಿದ್ದ ವಿಷಯವಾದರೂ ಜರ್ಮನರ ಮೇಲಿದ್ದ ಭಾರಿ ದ್ವೇಷಾಸೂಯೆಯ ಕಾರಣ ಪೋಲೀಸರು ಕೋರ್ಟಿಗೆ ಕೇಸು ಹಾಕಿದರು. ಆದರೆ ಕೇಸು ಆಗಲೇ ವಜಾ ಆಯಿತು ಅನ್ನಿ.

ಆ ಕಾಲದಲ್ಲಿ ನಾನು ಬಹಳ ನಾಚಿಕೆ ಸ್ವಭಾವದ ಹುಡುಗನಾಗಿದ್ದೆ. ನೋಡಲು ಅಷ್ಟು ಚೆನ್ನಾಗಿಲ್ಲದ ಪುಟ್ಟ ಹುಡುಗ ನಾನು. ಅತಿ ನಿಷ್ಠೆ ನನ್ನಲ್ಲಿ. ನಮ್ಮ ಸೋದರ ಮಾವಂದಿರ ಸಾಮ್ರಾಜ್ಯಷಾಹಿ ಭಾವನೆ ಮತ್ತು ಜೀಸಸ್ ಕ್ರೈಸ್ತನ ಬಳಿಗೆ ಆತ್ಮಗಳನ್ನು ಕರೆದೊಯ್ಯುವ ಆನಂದಕ್ಕಿಂತ ಪ್ರಪಂಚದಲ್ಲಿ ಬೇರೊಂದಿಲ್ಲವೆಂದು ನಮ್ಮ ತಾಯಿಯ ಬೋಧನೆ ನನ್ನಲ್ಲಿ ತುಂಬಿ ತುಳುಕುತ್ತಿದ್ದುವು.

ಒಮ್ಮೆ ನಾನು ತರಗತಿಯ ಹುಡುಗರ ಗುಣಾವಗುಣಗಳ ಒಂದು ಪಟ್ಟಿ ತಯಾರಿಸಿದೆ. ಹುಡುಗರ ಹೆಸರು ಬರೆದು ಪ್ರತಿಯೊಬ್ಬರಿಗೂ ಅವರ ನೈತಿಕ ವರ್ತನೆ, ಬುದ್ಧಿ, ಮತಧರ್ಮ ಮತ್ತು ಆಕರ್ಷಣೆಗಳಿಗೆ ನಂಬರು ಕೊಟ್ಟು, ಕೊನೆಯಲ್ಲಿ ಅವರು ಸ್ವರ್ಗಕ್ಕೆ ಹೋಗುತ್ತಾರೊ ಇಲ್ಲ ನರಕಕ್ಕೆ ಹೋಗುತ್ತಾರೊ ಎಂದು ಟಿಪ್ಪಣಿ ಬರೆದಿದ್ದೆ. ಮಾನವಶಾಸ್ತ್ರಜ್ಞನ ಹುಟ್ಟುಗುಣ ನನ್ನಲ್ಲಿ ಆಗಲೇ ತನ್ನ ಕೆಲಸ ಮಾಡುತ್ತಿತ್ತು. ನನ್ನ ಗ್ರಹಚಾರದಿಂದ ಈ ಕಾಗದವನ್ನು ಶಾಲೆಯ ಕಕ್ಕಸ್‌ನಲ್ಲಿ ಬಿಟ್ಟುಬಿಟ್ಟೆ. ಅನಂತರ ಆ ಕಾಗದದ ಕೆಲವು ವಿಷಯಗಳು ತರಗತಿಯ ಕಪ್ಪುಹಲಗೆಯ ಮೇಲೆ ಕಾಣಿಸಿಕೊಂಡವು. 'ಆಕರ್ಷಣೆ ಇಲ್ಲ' ಎಂದು ಬರೆದಿದ್ದ ಹುಡುಗರಿಂದ ನನಗೆ ತಕ್ಕ ಶಾಸ್ತಿಯೂ ಆಯಿತು ಅನ್ನಿ.

ನನ್ನ ಎಳನೆಯ ವಯಸ್ಸಿನಿಂದ ಹಿಡಿದು ಆಕ್ಸ್‌ಫರ್ಡಿಗೆ ಹೋದ ಮೂರು ವರ್ಷದವರೆಗೆ ನಮ್ಮ ಜೀವನದಲ್ಲಿ ಬಹು ಮುಖ್ಯವಾದುದೆಂದರೆ ಆಗಸ್ಟ್ ತಿಂಗಳಿನಲ್ಲಿ ಸಮುದ್ರತೀರದ ಸ್ಥಳಗಳಿಗೆ ವಿಹಾರಕ್ಕಾಗಿ ಹೋಗಿಬರುತ್ತಿದ್ದುದು. ಇದನ್ನು ನಡೆಸುತ್ತಿದ್ದುದು ಸಿ.ಎಸ್. ಎಸ್. ಎಂ (Children's Social Srevice Mission) ಎಂಬ ಮಕ್ಕಳ ಸಂಸ್ಥೆ. ಅಂಥ ವಿಹಾರದ ವೇಳೆ ಸಭೆ, ಆಟಪಾಟ, ವಿನೋದಗಳು ನಡೆಯುತ್ತಿದ್ದವು. ಸಮುದ್ರ ತೀರದಲ್ಲಿ ಮರಳದಿಬ್ಬಮಾಡಿ, ಅದನ್ನು ಶಂಖ ಮುಂತಾದ ನೀರಿನಲ್ಲಿ ಸಿಕ್ಕುವ ಸಾಮಾನುಗಳಿಂದಲೂ ಜೊಂಡಿನಿಂದಲೂ ಅಲಂಕರಿಸುತ್ತಿದ್ದೆವು. ಕೆಂಪು ಬಾವುಟ ಹಾರಿಸಿ, ಹಾಡಿ ಕುಣಿದು ಕುಪ್ಪಳಿಸುತ್ತಿದ್ದೆವು.

ಆದರೆ ಈ ಸಂಸ್ಥೆ ನಮ್ಮಲ್ಲಿ ಮತಧರ್ಮದ ಬಗ್ಗೆ ಏನೋ ಒಂದು ಒತ್ತಾಯದ ಆಸಕ್ತಿಯನ್ನುಂಟುಮಾಡುತ್ತಿತ್ತು. ಜೀಸಸನಿಗೆ ನಮ್ಮ ಮನಸ್ಸನ್ನೆಲ್ಲಾ ಅರ್ಪಿಸಿರುವ ಭಾವನೆಯನ್ನುಂಟುಮಾಡುವ ರೀತಿಯಲ್ಲಿ ಬೋಧನೆ ನಡೆಯುತ್ತಿತ್ತು. ನಾನು ಎರಡು ವರ್ಷದ ಮುನ್ನವೇ ಆ ರೀತಿಯ ಅರ್ಪಣೆ ಮಾಡಿಕೊಂಡಿರುವೆನೆಂದು ಪಾದ್ರಿಗೆ ಹೇಳಿದೆ. ಇದು ನನಗೂ ನನ್ನ ತಂಗಿ ಎಲ್ಡಿತಳಿಗು ಮನಸ್ತಾಪಕ್ಕೆ ಕಾರಣವಾಯಿತು. ಏಕೆಂದರೆ, ಆಕೆಯೂ ಜೀಸಸನಿಗೆ ತನ್ನ ಮನಸ್ಸನ್ನು ಅರ್ಪಿಸಿರುವುದಾಗಿ ಹೇಳಿದಳು. ನಮ್ಮ ಮನೆತನದಲ್ಲಿ ನನಗೊಬ್ಬನಿಗೆ ಮಾತ್ರ ಆ ಹಕ್ಕು ಸೇರಿದ್ದೆಂದು ಭಾವಿಸಿದ್ದ

ನಾನು ಸಿಟ್ಟಾಗಿ ಆಕೆಯ ತಲೆಯನ್ನು ಕರ್ಪೂರದ ಗೊಂಬೆಯೊಂದರಿಂದ ಬಡಿದೆ. ಅದರಿಂದ ಆಕೆಯ ತಲೆಗೆ ಪೆಟ್ಟಾಗದಿದ್ದರೂ ಮನಸ್ಸಿಗೆ ಬಹಳ ನೋವಾಯಿತು. ಇದರ ಪರಿಣಾಮವಾಗಿ ನನ್ನನ್ನು ಕೋಣೆಯಲ್ಲಿ ಇಡೀ ದಿನ ಕೂಡಿಹಾಕಿದರು. ನನ್ನ ಬಣ್ಣದ ಕೋಟಿಗೆ ಹಾಕಿಕೊಂಡಿದ್ದ ನಮ್ಮ ಶಾಲೆಯ ಲಾಂಛನವನ್ನು ತೆಗೆದುಹಾಕಿದರು. ಆದರೆ ಏನು ವಿಚಿತ್ರ! ಇಂದು ನಮ್ಮ ಮನೆತನದಲ್ಲಿ ಆಕೆಯೊಬ್ಬಳೇ ಸ್ವರ್ಗಕ್ಕೆ ಹೋಗಲು ಅರ್ಹಳಾಗಿರುವುದು.

ನಾನು ಡೀನ್ ಕ್ಲೋಸ್ ಶಾಲೆಗೆ ಹೋದ ಸ್ವಲ್ಪ ಕಾಲದಲ್ಲಿಯೇ ಮೊದಲನೆಯ ಮಹಾಯುದ್ಧ ಆರಂಭವಾಯಿತು. ದೇಶದ ಪಶ್ಚಿಮ ಭಾಗದಲ್ಲಿದ್ದುದರಿಂದ ನಮಗೆ ಯುದ್ಧದ ಬಿಸಿ ಮೊದಲಿಗೆ ತಾಕಲಿಲ್ಲ. ಆಗ ನನಗೆ ಹನ್ನೆರಡು ವರ್ಷ. ಆದರೆ ಒಳ್ಳೊಳ್ಳೆಯ ಉಪಾಧ್ಯಾಯರುಗಳು ಯುದ್ಧಕ್ಕೆ ಹೋದಂತೆ ಯುದ್ಧದಲ್ಲಿ ಸತ್ತ ಹಳೆಯ ವಿದ್ಯಾರ್ಥಿಗಳ ಪಟ್ಟಿಯೂ ಬರಲಾರಂಭಿಸಿತು. ನಮ್ಮ ಊಟ ಕೆಡುತ್ತಾ ಬಂತು. ಯುದ್ಧ ಎಂದರೆ ಏನು ಎಂದು ಆಗ ಅರ್ಥವಾಯಿತು. ದಿನ ಕಳೆದಂತೆ ಆಹಾರದ ಅಭಾವ ಜಾಸ್ತಿಯಾಗಿ ನಾವು ಕುದುರೆ ಮಾಂಸ ತಿನ್ನಬೇಕಾಗಿ ಬಂದಿತು. ನಮಗೆ ರೇಷನ್ ಮೇಲೆ ಕೊಡುತ್ತಿದ್ದ ಸಕ್ಕರೆ, ಬೆಣ್ಣೆ ಮತ್ತು ರೊಟ್ಟಿ ಯಾವಾಗ ಬರುತ್ತವೋ ಎಂದು ಕಾಯುತ್ತಿದ್ದೆವು. ಬೆಣ್ಣೆ ಕೊಟ್ಟು ಬಿಳೀ ಇಲಿ ಮತ್ತು ಅಂಚೆ ಚೀಟಿಗಳನ್ನು ಪಡೆಯುತ್ತಿದ್ದೆವು. ಹೀಗಾಗಿ ಆಹಾರವನ್ನೇ ನಾಣ್ಯದ ಬದಲು ಚಲಾವಣೆಗೆ ಉಪಯೋಗಿಸಬೇಕಾಯಿತು.

ಆಮೇಲೆ ಇನ್‌ಫ್ಲೂಯೆಂಜಾ ನಮ್ಮ ಶಾಲೆಯ ಮೇಲೆ ಎರಗಿತು. ನಾವು ವಾಸಮಾಡುತ್ತಿದ್ದ ಕೋಣೆಗಳಲ್ಲಿಯೂ ಸೇವಕರ ವಾಸದ ಮನೆಗಳಲ್ಲಿಯೂ ಈ ಜಾಡ್ಯ ಕಾಣಿಸಿಕೊಂಡಿತು. ಮೊದಲೆರಡು ದಿನ ನಮ್ಮನ್ನು ನೋಡಿಕೊಳ್ಳುವವರೇ ಇಲ್ಲದಂತಾಯಿತು. ಸರಿಯಾದ ಊಟವೂ ಸಿಕ್ಕುತ್ತಿರಲಿಲ್ಲ. ನಾನು ಅಂಬೆಗಾಲಿನಲ್ಲಿ ತೆವಳುತ್ತಾ ಕುಡಿಯುವ ಹಾಲಿಗಾಗಿ ಅಡಿಗೆಮನೆಗೆ ಹೋದದ್ದು ಜ್ಞಾಪಕವಿದೆ. ನನಗೆ ಅತ್ಯಂತ ಪ್ರೀತಿಪಾತ್ರನಾದ ಪುಟ್ಟ ಬಾಲಕನೊಬ್ಬ ಸತ್ತುಹೋದ. ಕೊನೆಗೆ ಸೈನ್ಯದ ದಾದಿಯರು ಬಂದು ನಮ್ಮೆಲ್ಲರ ಯೋಗಕ್ಷೇಮ ವಹಿಸಿಕೊಂಡರು.

ಯುದ್ಧದ ಕಾರಣ ಅಧಿಕಾರಿಗಳ ತರಬೇತಿ ದಳಕ್ಕೆ ಹೆಚ್ಚು ಪ್ರಾಶಸ್ತ್ಯಬಂದಿತು. ಆಟದಲ್ಲಿ ಅಷ್ಟು ಆಸಕ್ತಿ ಇಲ್ಲದಿದ್ದ ನಾನು ಈಗ ಕೂಡಿಟ್ಟ ನನ್ನ ಶಕ್ತಿಯನ್ನು ಈ ದಳದಲ್ಲಿ ಸೇರಿ ಉಪಯೋಗಿಸಲಾರಂಭಿಸಿದೆ. ಕೊನೆಗೆ ಸಾರ್ಜೆಂಟ್ ಮೇಜರ್ ಆದೆ. ಅಂದಿನಿಂದ ಕಂದುಬಣ್ಣದ ಬಟ್ಟೆಯಲ್ಲಿ ಓಡಾಡುವುದು ನನಗೆ ಬಹು ಹರ್ಷವಾಯಿತು. ಬಾಂಬು ಎಸೆಯುವುದರಲ್ಲಿ ನಾನು ಪರಿಣತನಾದೆ. ಬಾಂಬ್ ಹಾಕುವ ಬಗ್ಗೆ ನಡೆದ ಬರವಣಿಗೆ ಪರೀಕ್ಷೆಯಲ್ಲಿ ನನಗೆ ನೂರಕ್ಕೆ ತೊಂಬತ್ತೆಂಟು ಅಂಕಗಳು ಬಂದುವು. ಬಾಂಬಿನ ಒಳಭಾಗಗಳನ್ನು ಚಿತ್ರಿಸುವುದು ನನಗೆ ಚೆನ್ನಾಗಿ ಗೊತ್ತಿತ್ತು. ಆದರೆ ವಾಸ್ತವವಾಗಿ ಬಾಂಬ್ ಹಾಕುವುದು ಅಷ್ಟು ಚೆನ್ನಾಗಿ ಗೊತ್ತಿರಲಿಲ್ಲ.

ಒಮ್ಮೆ ಬಾಂಬ್ ಹಾಕಬೇಕಾದಾಗ ಅದನ್ನು ನೇರವಾಗಿ ಆಕಾಶಕ್ಕೆ ಎಸೆದುಬಿಟ್ಟೆ. ಅದು ಸೇನಾ ನಾಯಕನನ್ನೇ ಆಹುತಿ ತೆಗೆದುಕೊಳ್ಳುವುದು ಅದೃಷ್ಟವಶಾತ್ ತಪ್ಪಿತು.

ಯುದ್ಧದಲ್ಲಿ ಜಯವಾದಾಗ ಎಲ್ಲರಂತೆಯೇ ಶಾಲೆಯಲ್ಲಿದ್ದ ನಾವು ಕುಣಿದಾಡಿದೆವು. ಸಾರ್ಜೆಂಟ್ – ಮೇಜರನಾದ ನಾನು ಜಯದ ದಿನ ಬೆಳಗ್ಗೆ ಶಾಲೆಯ ಶಿಖರದ ಮೇಲೆ ನಿಂತು ಪಟಾಕಿಗಳ ಕಟ್ಟನ್ನೇ ಹತ್ತಿಸಿ ಢಮಾಢಮಾ ಅನಿಸಿದೆ. ಮತ್ತು ಕೈವಶವಾಗಿದ್ದ ಒಂದು ಜರ್ಮನ್ ಟ್ಯಾಂಕನ್ನು ಊರಿನಲ್ಲಿ ಮೆರವಣಿಗೆ ಮಾಡಿಕೊಂಡು ಹೋದಾಗ ಅದರ ನಾಯಕತ್ವ ವಹಿಸಿದೆ.

ನೀತಿಬೋಧನೆಯ ತರಗತಿಯಲ್ಲಿ ನಿಮ್ಮ ಶತ್ರುಗಳನ್ನು ಪ್ರೀತಿಸಿರಿ ಎಂದು ಹೇಳುತ್ತಿದ್ದರು. ಆದರೆ ಬಾಂಬ್ ತರಗತಿಯಲ್ಲಿ ಅವರನ್ನು ಕೊಲ್ಲಿರಿ ಎಂದು ಹೇಳುತ್ತಿದ್ದರು. ಇದು ಎಂಥ ಆಭಾಸ ನೋಡಿ.

ನನ್ನ ಜೀವನದ ಮೇಲೆ ಮಹತ್ಪರಿಣಾಮವನ್ನುಂಟುಮಾಡಿದವಳೆಂದರೆ ನಾನೆಂದೂ ನೋಡದ ಯುವತಿ. ಆಕೆಯ ಕೊಲೆಯಾದಾಗ ಅವಳಿಗೆ ಇಪ್ಪತ್ತೊಂದು ವರ್ಷ; ನನಗೆ ಹದಿನೇಳು ವರ್ಷ. ಅವಳ ಹೆಸರು ಬೆಲ್ಲಾರಾಯ್ಟ್ ಎಂದು. ಒಳ್ಳೆ ರೂಪವತಿಯಂತೆ. ಕಮ್ಮಾರನೊಬ್ಬನಿಗೆ ಮದುವೆಮಾಡಬೇಕೆಂದು ಏರ್ಪಾಡು ನಡೆದಿತ್ತು. ಒಂದು ದಿನ ಲೀಸೆಸ್ಟರ್ ಬಳಿಯ ಹಳೆ ರೋಮನ್ ರಸ್ತೆಯಲ್ಲಿ ಆಕೆಯ ಶವ ಸಿಕ್ಕಿತು. ಆರು ತಿಂಗಳನಂತರ ನಮ್ಮ ಶಾಲೆಯ ಉಪಾಧ್ಯಾಯರೊಬ್ಬರನ್ನು – ಅವರ ಹೆಸರು ರೋನಾಲ್ಡ್ ಲಾಯ್ಟ್ ಎಂದು – ದಸ್ತಗಿರಿಮಾಡಿ ಅವರ ಮೇಲೆ ಕೊಲೆಯ ತಕ್ಸೀರು ಹೊರಿಸಿದರು. ಈ ವಿಷಯವನ್ನು ಡಾ॥ ಫ್ಲೆಕ್ಕರ್ ಅವರು ಹಾಲ್‌ನಲ್ಲಿ ಹೇಳಿದಾಗ ನನಗಾದ ರೋಮಾಂಚನವನ್ನು ಇನ್ನೂ ಮರೆಯಲಾಗಿಲ್ಲ.

ಲಾಯ್ಟ್ ಅವರನ್ನು ಆಮೇಲೆ ಬಿಡುಗಡೆಮಾಡಿದರು. ಆದರೆ ಅವರು ಹಿಂದಿರುಗಿ ಶಾಲೆಗೆ ಬರಲಿಲ್ಲ. ಯುದ್ಧಕಾಲದಲ್ಲಿ ಉಪಾಧ್ಯಾಯರು ಸಿಕ್ಕುವುದು ಕಷ್ಟವಾಗಿತ್ತು. ಈ ಕಾರಣ ನಮ್ಮ ಶಾಲೆಯಲ್ಲಿ ಒಬ್ಬರು ಕಡಮೆಯಾದರು.

ನಾನು ಇಂಗ್ಲಿಷ್ ಸಾಹಿತ್ಯ ಅಭ್ಯಾಸಮಾಡಬೇಕೆಂದು ತೀರ್ಮಾನಿಸಿದೆ. ಆದರೆ ಉಪಾಧ್ಯಾಯರೇ ಇರಲಿಲ್ಲ. ಆದ್ದರಿಂದ ಡಾ॥ ಫ್ಲೆಕ್ಕರ್ ಅವರು ನನ್ನನ್ನು ಪುಸ್ತಕ ಭಂಡಾರದಲ್ಲಿ ಬಿಟ್ಟು, ಇಷ್ಟಬಂದದ್ದನ್ನು ಓದಿಕೋ ಎಂದು ಹೇಳಿಬಿಟ್ಟರು. ಬೆಲ್ಲಾರಾಯ್ಟ್‌ಳ ಖೂನಿಯ ಕಾರಣವಾಗಿ ನನಗೆ ಒಂದು ವರ್ಷ ಪುಸ್ತಕ ಭಂಡಾರದಲ್ಲಿದ್ದ ಕಾವ್ಯಗಳ ಹೆದ್ದಾರಿ – ಕಿರುದಾರಿಗಳಲ್ಲಿ ಅಡ್ಡಾಡುವ ಅವಕಾಶ ಸಿಕ್ಕಿತು. ಭಂಡಾರದಲ್ಲಿ ಸೊಗಸಾದ ಪುಸ್ತಕಗಳಿದ್ದುವು. ನಾನು ಇದು ಮಾಡಬೇಕು ಅದು ಮಾಡಬೇಕು. ಎಂದು ಹೇಳುವವರು ಇರಲಿಲ್ಲ. ನನಗೆ ನಾನೇ ಹೇಳಿ ಕೊಳ್ಳಬೇಕಾಗಿತ್ತು. ಪುಸ್ತಕಗಳೆಂದರೆ ಆಸೆಪಡುತ್ತಿದ್ದ ನಾನು ಸಿಕ್ಕಿದ ಅವಕಾಶವನ್ನು ಉಪಯೋಗಿಸಿಕೊಂಡು ಸಂಶೋಧನಾ ಅಭ್ಯಾಸವನ್ನು ಬೆಳೆಸಿಕೊಂಡೆ. ಆ ಅಭ್ಯಾಸ ಇನ್ನೂ ಉಳಿದುಬಂದಿದೆ.

ಹೀಗೆ ನನ್ನ ಬಾಲ್ಯ ಒಂದು ತರಹ ವಿಚಿತ್ರವಾಗಿತ್ತು. ರಜಾ ಕಾಲದಲ್ಲಿ ಅಷ್ಟೇನೂ ಅನುಕೂಲತೆಗಳಿಲ್ಲದ ಜೀವನ ಸಾಗಿಸಬೇಕಾಗಿತ್ತು. ಮನಸ್ಸಿಗೆ ಆಹ್ಲಾದವನ್ನುಂಟುಮಾಡುವ ಮತೀಯ ವಿಚಾರಗಳನ್ನು ಬಿಟ್ಟು ಬೇರೆ ಅವಕಾಶಗಳೇ ಇರುತ್ತಿರಲಿಲ್ಲ. ಆ ಕಾಲದಲಿ ಎಲ್ಲೋ ಅಲ್ಲೊಂದು ಇಲ್ಲೊಂದು ಸಿನೆಮಾ ಮತ್ತು ಕಾರು. ನಮಗೆ ಹೆಚ್ಚು ಜನರ ಭೇಟಿಯೂ ಆಗುತ್ತಿರಲಿಲ್ಲ. ನಾವು ಹೇಗಿದ್ದೇವೆಂದು ನೋಡಿಕೊಂಡು ಹೋಗಲು ಬರುತ್ತಿದ್ದ ನಮ್ಮ ತಂದೆಯ ಸ್ನೇಹಿತರು ಭಾರಿ ದೊಡ್ಡವರು. ನಾವು ಕಷ್ಟಪಟ್ಟು ಕೆಲಸಮಾಡಬೇಕಾಗಿತ್ತು. ಎಲ್ಲೋ ಒಂದು ಸಲ ಮಾತ್ರ ಒಬ್ಬ ಸೇವಕಿಯನ್ನಿಟ್ಟುಕೊಂಡಿದ್ದೆವು. ಅಡಿಗೆ ಮಾಡುವುದು ತೊಳೆಯುವುದು ಬಳಿಯುವುದು – ಇವನ್ನೆಲ್ಲಾ ತಾಯಿಯೇ ಮಾಡುತ್ತಿದ್ದಳು. ಹುಡುಗರಾದ ನಾವು ನಮ್ಮ ಕೈಲಾದ ಕೆಲಸಮಾಡಿಕೊಡುತ್ತಿದ್ದೆವು. ಇದು ನಮಗೆ ಬೇಸರವನ್ನುಂಟು ಮಾಡುತ್ತಿರಲಿಲ್ಲ. ಅವೆಲ್ಲಾ ನಮಗೆ ತಮಾಷೆಯಾಗಿ ಕಾಣುತ್ತಿದ್ದುವು. ಜೀವನ ನಮಗಿನ್ನೆಷ್ಟು ಕೊಡಬಲ್ಲುದೆಂಬ ಮತ್ತು ನಮ್ಮ ತಿಳಿವಳಿಕೆ ಬಹಳ ಮಿತಿಗೊಳಗಾಗಿದೆ ಯೆಂಬ ಭಾವನೆ ನಮಗೆ ಬರಲೇ ಇಲ್ಲ.

ಆದರೆ ಒಂದು ವಿಚಾರದಲ್ಲಿ ನಾನೇನೂ ಪಶ್ಚಾತ್ತಾಪಪಡಬೇಕಾಗಿರಲಿಲ್ಲ. ನನ್ನ ಹದಿನಾರನೆಯ ವಯಸ್ಸಿನಲ್ಲೇ ನಾನು ಕವಿತಾರಮಣಿಯಲ್ಲಿ ಅನುರಕ್ತನಾದೆ. ಮಾತಿನ ಮುರಲಿಗೆ ಮುಗ್ಧನಾದೆ. ಮೊದಲು ಮೊದಲಿಗೆ ಟೆನ್ನಿಸನ್ ಮತ್ತು ಅಂತಹ ಕವಿಗಳಿಂದ ಆಕರ್ಷಿತನಾಗಿ, ಅನಂತರ ಸ್ವಿನ್‌ಬರ್ನನಿಗೆ ಮಾರುಹೋದೆ. ಈಟ್ಸ್‌ನ ಕವನಗಳ ಒಂದು ಪುಸ್ತಕವನ್ನು ಕೂಡಿಟ್ಟ ಹಣದಿಂದ ಕೊಂಡುಕೊಂಡೆ.

ನನಗೆ ಮಹದಾನಂದವನ್ನುಂಟುಮಾಡಿದವನೆಂದರೆ ವರ್ಡ್ಸ್‌ವರ್ತ್. ಶಾಲೆಯಲ್ಲಿದ್ದಾಗ ನೀಲಿಬಣ್ಣದ ರಟ್ಟು ಹಾಕಿದ ಅವನ ಆರಿಸಿದ ಕವನಗಳ ಪುಟ್ಟ ಪುಸ್ತಕವನ್ನು ಹಿಡಿದು, ಬೆಳಗ್ಗೆ ಹೊತ್ತಿಗೆ ಮುಂಚೆ ಹೊರಟು ಹೊಲ ಕಾಡುಗಳಲ್ಲಿ ಅಲೆಯುತ್ತಿದ್ದೆ. ಅಲ್ಲಿಯ ಶಾಂತ ವಾತಾವರಣದಲ್ಲಿ ಕುಳಿತು ಆ ಕವಿಯ ಸುಮಧುರ ಸಂದೇಶವನ್ನು ಹೀರಿ ಆನಂದಪಡುತ್ತಿದ್ದೆ. ಇದು ನನ್ನಲ್ಲಿ ಪ್ರಕೃತಿಸೌಂದರ್ಯವನ್ನು ಸವಿದು ಸುಖಿಸುವಂತೆ ಮಾಡಿತು. ಲೇಕ್ ಡಿಸ್ಟ್ರಿಕ್ಟ್‌ನಲ್ಲಿ ಕಾಲ್ನಡಗೆಯಲ್ಲಿ ಸಂಚಾರ ಮಾಡುವುದಕ್ಕಿಂತ ಹೆಚ್ಚು ಆನಂದವನ್ನೀಯುತ್ತಿದ್ದುದು ನನಗೆ ಬೇರೊಂದಿರಲಿಲ್ಲ. ಈ ಕವಿಯು ಬರೆದ ಡಡ್ಡನ್ ಸಾನೆಟ್ಟುಗಳನ್ನು ಓದುತ್ತಾ, ಕವಿಯು ಎಲ್ಲೆಲ್ಲಿ ಅಡ್ಡಾಡಿದ್ದನೋ ಅದೇ ದಾರಿಯಲ್ಲಿ ನಾನೂ ಅಡ್ಡಾಡಿ ಡಡ್ಡನ್ ನದಿಯ ಮೂಲವನ್ನು ನೋಡಿಬಂದೆ.

ವಾಸ್ತವವಾಗಿ ಶಾಲೆಯ ಕೊನೆಯ ಎರಡು ವರ್ಷಗಳನ್ನು ಏನೊ ಒಂದು ಬಗೆಯ ಆನಂದಪರವಶತೆಯಲ್ಲಿ ಕಳೆದೆನೆಂದು ಹೇಳಬೇಕು. ಸಮನ್ವಯ ಮಾಡಲಾರದ ಎರಡು ಪ್ರಪಂಚಗಳಲ್ಲಿ ನಾನಿದ್ದೆ. ಸಾಂಪ್ರದಾಯಿಕ ಕ್ರೈಸ್ತ ಮತಬೋಧೆ ಹಾಗೂ ವರ್ಡ್ಸ್‌ವರ್ತ್ ಕವಿಯ ರಹಸ್ಯಯುತ ಸರ್ವದೇವತಾರಾಧನೆ – ಎರಡೂ ಒಂದರ

ಪಕ್ಕದಲ್ಲೊಂದು ನಿಂತಿದ್ದುವು. ಆಗ ಮತ್ತು ಅನಂತರ ಬಹಳ ವರ್ಷಗಳವರೆಗೆ ಅವುಗಳಲ್ಲಿ ಯಾವುದು ಸತ್ಯ ಎಂದು ನನಗೆ ಅರ್ಥವಾಗಲಿಲ್ಲ. ಶಾಲೆಯ ಅಧ್ಯಾಪಕರಿಗೆ ನಾನೊಂದು ಒಗಟಾಗಿದ್ದೆ ಎಂದು ಕಾಣುತ್ತೆ. ಒಂದು ದಿನ ಮುಖ್ಯೋಪಾಧ್ಯಾಯರ ತೋಟದಲ್ಲಿ ಅವರ ಪತ್ನಿಯೊಡನೆ ಹೋಗುತ್ತಿರುವಾಗ ಅಲ್ಲಿ ಬೆಳೆದ ಗುಲಾಬಿ ಹೂಗಳ ಸೊಗಸನ್ನು ರಿಚರ್ಡ್ ಜೆಫೆರೀಸರ ಮಾತಿನಲ್ಲಿ "That pure colour which is rest of heart" (ಆ ಪವಿತ್ರ ಬಣ್ಣ ಹೃದಯದ ಉಳಿದೆಲ್ಲವು ಅಣ್ಣ) ಎಂದು ಹೇಳಿದಾಗ ಆಕೆ ಕಕ್ಕಾಬಿಕ್ಕಿಯಾಗಿ ನೋಡಿದಳು. ಅಷ್ಟೊಂದು ಕಕ್ಕಾಬಿಕ್ಕಿಯಾಗಿ ನೋಡಿದವರನ್ನು ನಾನಿಲ್ಲಿಯವರೆಗೂ ಕಂಡಿಲ್ಲ.

ನನ್ನ ಶಾಲೆಯ ದಿನಗಳು ಸುಗಮವಾಗಿರಲಿಲ್ಲ ಎಂದು ಹೇಳಲು ನಾನಿಷ್ಟ ಪಡುವುದಿಲ್ಲ. ನನ್ನ ಹಿಂದಿನ ಆ ದಿನಗಳನ್ನು ನೆನೆಸಿಕೊಂಡರೆ ನಾನು ಪಡೆದುದಕ್ಕಿಂತ ಉತ್ತಮವಾದ ವಿದ್ಯೆಯನ್ನು ಪಡೆಯಬಹುದಾಗಿತ್ತು ಎನಿಸುತ್ತದೆ. ಹೇಳುವುದನ್ನೇ ಬೇರೊಂದು ರೀತಿ ನನಗೆ ಹೇಳಿದ್ದರೆ, ಬೇರೆ ಸ್ನೇಹಿತರನ್ನು ಮಾಡಿಕೊಂಡಿದ್ದರೆ ಚೆನ್ನಾಗಿತ್ತಲ್ಲ ಎಂದು ಎನಿಸುತ್ತದೆ. ಆದರೂ ಇದ್ದುದರಿಂದ ಜೀವನದ ಅಂದ ಚೆಂದಗಳನ್ನು ಅಷ್ಟಿಷ್ಟು ಅರಿತೆನೆಂದು ಹೇಳಬೇಕು.

ನನ್ನ ಮನೆ ಮುದ್ದಿನ ತಾಣವಾಗಿತ್ತು. ಅಮ್ಮ ಅಪರಂಜಿಯಾಗಿದ್ದಳು. ನಮ್ಮನ್ನೆಲ್ಲಾ ತುಂಬಾ ಚೆನ್ನಾಗಿ ಸಾಕಿದಳು. ಆದರೆ ಬಡತನದ ಕಾರಣ ಕಷ್ಟದಲ್ಲಿ ಬೆಳೆಯಬೇಕಾಯಿತು. ಅದರಿಂದ ತನಗೆ ವ್ಯಸನವಿಲ್ಲ. ಅನಂತರ ನಾನು ಜೀವನದಲ್ಲಿ ಚರ್ಚು ಮತ್ತು ಪೊಲೀಸರಿಂದ ಪಡೆದ ತೊಂದರೆಗಿಂತ ಅದು ಹೆಚ್ಚಲ್ಲ. ನಾನು ಚಿಕ್ಕಂದಿನಲ್ಲಿ ಏನನ್ನೂ ನಿರೀಕ್ಷಿಸದೆ ಇದ್ದುದರ ಪರಿಣಾಮವೇನೆಂದರೆ ಈಗಲೂ ಜೀವನದಲ್ಲಿ ಏನಾದರೊಂದು ಒಳ್ಳೆಯದು ನಡೆದಾಗ ಕೊನೆಗಾದರೂ ಅದು ಆಯಿತಲ್ಲ ಎಂದು ತುಂಬಾ ಸಂತೃಪ್ತನಾಗುವುದು.

೨. ಹಿಗ್ಗಿನ ಯೌವನ

೧೯೨೧ರಲ್ಲಿ ಆಕ್ಸ್‌ಫರ್ಡ್‌ಗೆ ಹೋದೆ. ಶಾಲೆಯ ಪುಸ್ತಕ ಭಂಡಾರದಲ್ಲಿದ್ದ ಪುಸ್ತಕಗಳಿಂದ ಓದಿದ್ದಷ್ಟೇ ನನ್ನ ತಿಳುವಳಿಕೆಯಾಗಿತ್ತು. ನನ್ನ ಹತ್ತಿರ ಹೆಚ್ಚು ದುಡ್ಡಿರಲಿಲ್ಲ. ನನ್ನ ಯೋಗಕ್ಷೇಮ ನಾನೇ ನೋಡಿಕೊಳ್ಳಬೇಕಾಗಿಬಂದುದು ಇದೇ ಮೊದಲು. ನನಗೆ ಏನೂ ತೋಚದಾಯಿತು. ಅಲ್ಲದೆ, ರೋಜರ್ ಫುಲ್‌ಫೋರ್ಡರು ತಮ್ಮ 'ರೈಟ್ ಆನರಲ್ ಜೆಂಟಲ್‌ಮ್ಯಾನ್' ಎಂಬ ಗ್ರಂಥದಲ್ಲಿ ಹೇಳಿದಂತೆ ಅದು ಮನಸ್ಸು ಕಲಕುವ ಕಾಲವಾಗಿತ್ತು. ಅವರು ೧೯೨೧–೨೨ರಲ್ಲಿ ಆಕ್ಸ್‌ಫರ್ಡ್ ಹೇಗಿತ್ತು ಎಂದು ಹೀಗೆ ವರ್ಣಿಸಿದ್ದಾರೆ :

'ಯುದ್ಧ ಮುಗಿದು ಶಾಂತಿ ಸ್ಥಾಪನೆಯಾದ ಮೇಲೆ ಇಂಗ್ಲೆಂಡಿನ ಯೂನಿವರ್ಸಿಟಿಗಳಲ್ಲಿ ಓದುತ್ತಿದ್ದ ಪದವೀಪೂರ್ವ ವಿದ್ಯಾರ್ಥಿಗಳ ಜೀವನ ಬಲು ರಂಜನೀಯವಾಗಿತ್ತು. ಆಕ್ಸ್‌ಫರ್ಡಿನ ಯುವಕರು ಮದ್ಯಪಾನಮಾಡುತ್ತಾ, ಅಪ್ಪನ ಆಸ್ತಿಯನ್ನು ಖರ್ಚುಮಾಡುತ್ತಾ, ತಾವು ಮಾತ್ರ ಸರಿ ಉಳಿದ ಪ್ರಪಂಚವೆಲ್ಲ ತಪ್ಪು ಎನ್ನುವಂತೆ ವರ್ತಿಸುತ್ತಿದ್ದರು. ಮಹಿಳೆಯರ ಕ್ಲಬ್ಬಿನಲ್ಲಿ ಅಸೂಯಾಪರರಾದ ಹೆಂಗಸರು ಪರಸ್ಪರ ನಿಂದೆಯಲ್ಲಿ ತೊಡಗಿರುತ್ತಿದ್ದಂತೆ ವಿಶ್ವವಿದ್ಯಾನಿಲಯದ ಹುಡುಗರೂ ಮಾಡುತ್ತಿದ್ದರು. ತಿಳಿಯದಿದ್ದರೂ ತಿಳಿದವರಂತೆ ವರ್ತಿಸುವುದು ಆಕ್ಸ್‌ಫರ್ಡ್‌ಗೂ ಹಬ್ಬಿತ್ತು. ವಿಷಯಗಳ ಬಗ್ಗೆ ಚರ್ಚೆಮಾಡುವುದು ಕಷ್ಟ. ಆದರೆ ಜನರ ಬಗ್ಗೆ ಮಾತನಾಡುವುದು ಸುಲಭ. ಆದ್ದರಿಂದ ಅನ್ಯರ ಬಗ್ಗೆ ಹರಟೆ ಹೊಡೆಯುವ ಸೊಗಸುಗಾರಿಕೆಯಲ್ಲಿ ಹುಡುಗರು ತೊಡಗಿದ್ದರು. ಕಟುವಾದ ಮಾತು, ಚಕಮಕಿಯ ನುಡಿ–ಇವು ಅವರಲ್ಲಿ ಕಾಣುತ್ತಿದ್ದುವು. ೧೯೨೨ರಲ್ಲಿ ಆಕ್ಸ್‌ಫರ್ಡ್ ಎಡ್ವರ್ಡ್ ಯುಗದ ಕೊನೆಯ ಮರುಳುಮಂತ್ರವನ್ನು ಪಿಸುಗುಟ್ಟುತ್ತಿತ್ತು.'

ನನ್ನ ಮೂರನೆಯ ವರ್ಷದ ಅಭ್ಯಾಸದ ವೇಳೆ ವಿಶ್ವವಿದ್ಯಾನಿಲಯಕ್ಕೆ ಹೆಣ್ಣುಮಕ್ಕಳನ್ನು ಸೇರಿಸಿದ್ದು ತಪ್ಪು ಎಂದು ಪ್ರತಿಭಟಿಸುವ ಮೆರವಣಿಗೆಯಲ್ಲಿ ಮುಖ್ಯಪಾತ್ರ ವಹಿಸಿ, ಪೊಲೀಸ್ ಸ್ಟೇಷನ್ ಮೆಟ್ಟಲುಗಳ ಮೇಲೆ ನಿಂತು ನಾನು ಭಾಷಣ ಮಾಡಿದೆ.

ನಾನು ಓದುತ್ತಿದ್ದುದು ಮರ್ಟನ್ ಕಾಲೇಜಿನಲ್ಲಿ. ನನ್ನ ತಂದೆ ಓದಿದ್ದುದೂ ಇದೇ ಕಾಲೇಜಿನಲ್ಲಿ. ೧೩೭೭ರಲ್ಲಿ ಸ್ಥಾಪಿತವಾದ ಹೆಸರಾಂತ ಪುಸ್ತಕ ಭಂಡಾರದ ಎದುರಿನಲ್ಲಿದ್ದ ಸಣ್ಣ ಕೋಣೆಗಳಲ್ಲೊಂದರಲ್ಲಿ ನಾನಿದ್ದೆ. ನನ್ನ ಮೇಲ್ವಿಚಾರಕನ

ಹೆಸರು ಹೋಬ್ಸ್. ತಾನು ಮೆಚ್ಚಿದವರಿಗೆ ದುಡ್ಡಿಲ್ಲದೆ ಬೆಳಗ್ಗೆ ಒಂದು ಕಪ್ ಟೀ ಕೊಡುತ್ತಿದ್ದ. ಅವನ ಮನವೊಲಿಸಲು ನನಗೆ ಒಂದು ವರ್ಷ ಹಿಡಿಯಿತು. ಒಂದು ವರ್ಷದ ತನಕ ಅಕ್ಕಪಕ್ಕದವರು ಟೀ ಕುಡಿಯುತ್ತಿರುವಾಗ ನಾನು ಅವರ ಬಾಯಿನೋಡಿ ಕೊಂಡಿರುವ ಸ್ಥಿತಿ ಒದಗಿತ್ತು.

ಎರಡನೆಯ ವರ್ಷದಲ್ಲಿ ನನಗೆ ದೊಡ್ಡ ಕೋಣೆ ಸಿಕ್ಕಿತು. ಈ ಕೋಣೆಯ ಸುತ್ತ ಕೆಂಪು ಪರದೆಯನ್ನು ಇಳಿಯಬಿಟ್ಟಿದ್ದರು. ದೊಡ್ಡದೊಂದು ಕನ್ನಡಿ ಇತ್ತು. ಆ ಕನ್ನಡಿಯ ಮಧ್ಯೆ ಗುಂಡು ತಗುಲಿ ಆದ ಒಂದು ತೂತಿತ್ತು. ಅದು ಕುಡಿದ ವಿದ್ಯಾರ್ಥಿಯೊಬ್ಬ ಆತ್ಮಹತ್ಯೆಮಾಡಿಕೊಳ್ಳುವ ಉದ್ದೇಶದಿಂದ ಕನ್ನಡಿಯಲ್ಲಿ ಕಂಡ ತನ್ನ ಪ್ರತಿಬಿಂಬಕ್ಕೆ ಗುಂಡಿನಿಂದ ಹೊಡೆದದ್ದರಿಂದ ಉಂಟಾಗಿತ್ತು.

ಇಲ್ಲಿ ನನಗೆ ಬೇಕಾದಷ್ಟು ಸ್ನೇಹಿತರಿದ್ದರು. ನನ್ನ ಅತ್ಯಂತ ಸುಖಮಯವಾದ ಜೀವನವನ್ನು ಇಲ್ಲಿ ಕಳೆದೆ. ಹೆಸರಾಂತ ಅಧ್ಯಾಪಕರು ನಮಗೆ ಪಾಠ ಹೇಳುತ್ತಿದ್ದರು. ಎಲ್ಲರಿಗಿಂತ ಹೆಚ್ಚಿನವರೆಂದರೆ ಎ.ಸಿ. ಬ್ರೆಡ್ಲೀ ಅವರು. ಇವರು ಇಲ್ಲೇ ಹಿಂದೆ ಓದಿದ ಟಿ.ಎಸ್. ಇಲಿಯಟ್ ಎಂಬುವರ ಮೇಲೆ ಅಪಾರವಾದ ಪ್ರಭಾವ ಬೀರಿದವರು. ಸರ್ ವೊಲ್ಟರ್ ರೋಲೆಯೂ ಇದ್ದರು. ಅವರು ಕೆಲವೇ ಕೆಲವು ದಿನ ನನಗೆ ಪಾಠ ಹೇಳಿದರು. ಡಬ್ಲ್ಯು ಡಬ್ಲ್ಯು ಹಾ ಎಂಬುವರೂ ಇದ್ದರು. ಇವರು ಮೊದಲನೆಯ ವರ್ಷ ಲಿವಿ ಅವರ ಗ್ರಂಥಗಳಿಂದ ಪಾಠ ಹೇಳಿದರು. ಇವರೆಲ್ಲರನ್ನೂ ಮೀರಿಸಿದವರೆಂದರೆ ಹೆಚ್. ಡಬ್ಲ್ಯು ಗರ್ರೋಡ್ ಅವರು. ಇವರು ಕೀಟ್ಸ್ ಮತ್ತು ವರ್ಡ್ಸ್‌ವರ್ತರ ಕಾವ್ಯಗಳನ್ನು ಬಹಳ ಚೆನ್ನಾಗಿ ಅಭ್ಯಾಸಮಾಡಿದ್ದರು. ಗರ್ರೋಡ್ ಅವರನ್ನು ನಾನು ದೇವರೆಂದೇ ಪೂಜಿಸುತ್ತಿದ್ದೆ.

ಮೂರನೆಯ ವರ್ಷ ನಾನು ಇಂಗ್ಲಿಷ್ ಸಾಹಿತ್ಯದ ಅಭ್ಯಾಸ ಆರಂಭಿಸಿದೆ. ಇದು ಬೇಡ ಎಂದರು ಎಲ್ಲರೂ. ಇದರಲ್ಲಿ ಮೊದಲನೆಯ ತರಗತಿ ಪಡೆಯುವುದು ಕಷ್ಟ ಎಂದೇ ಅವರ ಅಭಿಪ್ರಾಯವಾಗಿತ್ತು. ನನಗೆ ಡೇವಿಡ್ ನಿಕೊಲ್ ಸ್ಮಿತ್, ಹೆಚ್. ಸಿ. ವಿಲ್ಡ್ ಮತ್ತು ಸರ್ ಜಾರ್ಜ್ ಗೋರ್ಡನ್ ಉಪಾಧ್ಯಾಯರಾಗಿದ್ದರು. ೧೯೨೧ರಲ್ಲಿ ಇಂಗ್ಲಿಷ್ ಸಾಹಿತ್ಯಾಭ್ಯಾಸಕ್ಕೆ ವಿಶ್ವವಿದ್ಯಾನಿಲಯದಲ್ಲಿ ಹೆಚ್ಚಿನ ಗೌರವದ ಸ್ಥಾನ ಸಿಕ್ಕಿರಲಿಲ್ಲ. ಸಾಹಿತ್ಯವನ್ನು ಅಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಯಾವ ವಿದ್ಯಾರ್ಥಿವೇತನವನ್ನೂ ಕೊಡುತ್ತಿರಲಿಲ್ಲ. ಈ ಕಾರಣ ನಾನು ಸಾಮಾನ್ಯ ರೀತಿಯಲ್ಲಿ ಮುಂದುವರಿಯುತ್ತಾ ಹೋದೆ. ಸಾಮಾನ್ಯ ಮಟ್ಟದಲ್ಲಿ ಓದುವ ವಿದ್ಯಾರ್ಥಿಗಳು ಒಂದು ತರಹ ತುಂಡಂಗಿಯನ್ನು ತೊಟ್ಟುಕೊಳ್ಳಬೇಕಾಗಿತ್ತು. ನಾನು ಅದನ್ನು ಮೂರು ವರ್ಷ ತೊಟ್ಟುಕೊಳ್ಳುತ್ತಿದ್ದೆ. ಆ ಅಂಗಿ ಈಗ ನಾನು ಆಗಾಗ್ಗೆ ತೊಟ್ಟುಕೊಳ್ಳುವ ಗಿರಿಜನರ ಅಥವಾ ಮಿಷ್ಮಿ ಜನರ ಅಂಗಿಯಂತೆ ಇತ್ತು.

ಷೇಕ್ಸ್‌ಪಿಯರನನ್ನು ಅಭ್ಯಾಸ ಮಾಡಿದವರಿಗೆ ಒಂದು ಬಹುಮಾನವಿತ್ತು. ನಾನು ಆ ಬಹುಮಾನ ಪಡೆದೆ. ಆಗ ನನಗಾದ ಆನಂದ ಹೇಳತೀರದು. ಆ

ಬಹುಮಾನದ ದುಡ್ಡಿನ ಬೆಲೆ ಈಗ ೩,೦೦೦ರೂ. ಆಗಬಹುದು. ಜೊತೆಗೆ ಕಾಲೇಜಿನವರು ಹಲವಾರು ಪುಸ್ತಕಗಳನ್ನು ಬಹುಮಾನವಾಗಿ ಕೊಟ್ಟರು. ಡಿಗ್ರಿ ಪಡೆದನಂತರ ನಾನು ಯೂನಿವರ್ಸಿಟಿಯ ಮತ್ತೊಂದು ಬಹುಮಾನವನ್ನು ಗೆದ್ದೆ. The Poetry of Revolution (ಕ್ರಾಂತಿಯ ಕಾವ್ಯ) ಎಂಬ ವಿಷಯದ ಮೇಲೆ ಪ್ರಬಂಧವೊಂದನ್ನು ಬರೆದಿದ್ದಕ್ಕೆ ಸಿಕ್ಕಿದ ಆ ಬಹುಮಾನಕ್ಕೆ ಮಾಥ್ಯೂ ಆರ್ನಾಲ್ಡ್ ಬಹುಮಾನವೆಂದು ಹೆಸರು.

ನನಗೆ ದೊಡ್ಡ ಸೋಲಾದದ್ದು ನ್ಯೂಡಿಗೇಟ್ ಬಹುಮಾನಕ್ಕೆ ಸ್ಪರ್ಧಿಸಿದಾಗ. ಕಾವ್ಯದ ವಿಷಯ ಮೈಕೆಲಾಂಜಲೋ ಆಗಿತ್ತು. ಅನೇಕ ಜನ ಸ್ಪರ್ಧಿಸಿದ್ದರು. ಅವರಲ್ಲಿ ನಾನು ಐದನೆಯವನಾದೆ. 'ಅದರಲ್ಲಿ ನೀನು ಭಾರಿ ಉಪದೇಶ ಮಾಡಿದ್ದೀಯೆ' ಎಂದರು ಗರ್ರೋಡ್.

ಆಕ್ಸ್‌ಫರ್ಡಿನಲ್ಲಿರುವ ಬೋಧನಾಕ್ರಮ ಪ್ರಪಂಚದ ಇತರ ಕಡೆಗಳಲ್ಲಿರುವುದಕ್ಕಿಂತ ಬೇರೆಯಾದುದು. ಇಂಡಿಯಾದ ಕ್ರಮಕ್ಕೂ ಅದಕ್ಕೂ ತೀರ ವಿರುದ್ಧ. ಪುಸ್ತಕಗಳನ್ನು ಮುದ್ರಿಸುವ ವಿಧಾನವನ್ನು ೧೫ನೆಯ ಶತಮಾನದಲ್ಲಿ ಕಂಡುಹಿಡಿದರಷ್ಟೆ ಅಂದಿನಿಂದ ಬೋಧನೆ (Lecture) ಮಾಡಿ ಪಾಠ ಹೇಳಿಕೊಡಬೇಕಾದ ಆವಶ್ಯಕತೆಯೇ ಇರಲಿಲ್ಲವೆಂದು ನನ್ನ ಅಭಿಪ್ರಾಯ. ನಾನಂತೂ ನನ್ನ ಐದು ವರ್ಷದ ಅಭ್ಯಾಸದಲ್ಲಿ ಒಂದು ದಿನವೂ ಬೋಧನೆಯನ್ನು ಕೇಳಲು ಕುಳಿತವನಲ್ಲ. ತುಂಬಾ ಚೆನ್ನಾಗಿದೆ ಎಂದು ಕಂಡುಬಂದ ಕೆಲವು ಬೋಧನೆಗಳನ್ನು ಮಾತ್ರ ಕೇಳಿದೆ. ಅನೇಕ ಜನ ಅಧ್ಯಾಪಕರು ತಮ್ಮ ಬೋಧನೆಯನ್ನು ಬರೆದುಕೊಂಡುಬಂದು ಓದುತ್ತಿದ್ದರು. ಹೀಗಿರುವಾಗ ಅದೇ ವಿಷಯವನ್ನು ನೇರವಾಗಿ ಪುಸ್ತಕದಿಂದಲೇ ಏಕೆ ಪಡೆಯಬಾರದೆಂದು ಭಾವಿಸಿ ನಾನು ಅವನ್ನು ಕೇಳುವುದಕ್ಕೆ ಹೋಗುತ್ತಿರಲೇ ಇಲ್ಲ. ವಾಸ್ತವವಾಗಿ ನನಗೆ ವಾರಕ್ಕೊಂದು ಗಂಟೆ ಮಾತ್ರ ಪಾಠ ಆಗುತ್ತಿತ್ತು. ಆ ಒಂದು ಗಂಟೆಯ ಪಾಠ ತುಂಬ ಉಪಯುಕ್ತವಾಗಿರುತ್ತಿತ್ತು.

೧೮೦೦ರ ವರೆಗಿನ ಇಂಗ್ಲಿಷ್ ಸಾಹಿತ್ಯವನ್ನು ಕುರಿತು ಓದಬಹುದಿತ್ತು. ಆದರೆ ನನ್ನ ಉಪಾಧ್ಯಾಯರು ಬೇಡ ಅಂದರು. ಅದರಲ್ಲಿ ಬಹಳ 'ಸಾಹಿತ್ಯ'ವಿರುವ ಕಾರಣ ಓದುವುದು ಸುಲಭವಾಗಿತ್ತು. ಸುಲಭವಾದ ಕಾರಣ ಪರೀಕ್ಷಕರು ಬಹಳಷ್ಟು ಕಷ್ಟವಾದ ಪ್ರಶ್ನೆಗಳನ್ನು ಕೊಡುತ್ತಿದ್ದರು. ನೇರವಾದ ಪ್ರಶ್ನೆಗಳನ್ನು ಕೇಳುತ್ತಿರಲಿಲ್ಲ. ಮಾಥ್ಯೂ ಆರ್ನಾಲ್ಡನ ಮೇಲಾಗಲೀ ಕಾರ್ಲೈಲನ ಮೇಲಾಗಲೀ ನೇರವಾದ ಪ್ರಶ್ನೆ ಕೇಳದೆ, ಏನೋ ಒಂದು ತೊಡಕು ಮಾಡುತ್ತಿದ್ದರು. ಹೀಗಾಗಿ ನಾನು ವಿಕ್ಟೋರಿಯನ್ ಯುಗದ ಕಾವ್ಯವನ್ನು ಓದುವ ಆನಂದಕ್ಕಾಗಿ ಓದುತ್ತಿದ್ದೆ.

ನನ್ನ ಉಪಾಧ್ಯಾಯ ನಿಕೊಲ್ ಸ್ಮಿತ್ತರ ಮನೆಯ ತುಂಬ ಪುಸ್ತಕಗಳಿದ್ದವು. ೧೮ನೆಯ ಶತಮಾನದ ಕಾವ್ಯಗಳನ್ನೆಲ್ಲಾ ಅವರು ಮೊದಲನೆಯ ಮುದ್ರಣದಲ್ಲೇ ಓದುತ್ತಿದ್ದರೆಂದು ಕಾಣುತ್ತೆ. ನಾನು ಪದವೀಧರನಾದ ಮೇಲೆ ಆ ಶತಮಾನದ

ಪದ್ಯದ ಬಗ್ಗೆ ಒಂದು ಗ್ರಂಥವನ್ನು ಸಂಪಾದಿಸುತ್ತಿದ್ದರು. 'The Oxford Book of Eighteenth Centrury Verse' (ಹದಿನೆಂಟನೆಯ ಶತಮಾನದ ಪದ್ಯದ ಆಕ್ಸ್‌ಫರ್ಡ್ ಪುಸ್ತಕ) ಎಂದು ಅದರ ಹೆಸರು. ಅದಕ್ಕೆ ನನ್ನ ಸಹಾಯ ಕೋರಿದರು. ವಾರಕ್ಕೊಂದು ಸಲ ನಾನು ಅವರ ಮನೆಗೆ ಹೋಗುತ್ತಿದ್ದೆ. ಒಟ್ಟಿಗೆ ಇಬ್ಬರೂ ಕುಳಿತು ಒಂದೆರಡು ಗಂಟೆಗಳ ಕಾಲ ಒಳ್ಳೆಯ ಕವನಗಳು ಕೆಟ್ಟ ಕವನಗಳು ಎಲ್ಲವನ್ನೂ ಓದಿ ರಸವನ್ನು ಕಸದಿಂದ ಬೇರೆಮಾಡುವ ಕೆಲಸ ಮಾಡುತ್ತಿದ್ದೆವು. ಈ ಕೆಲಸ ಮಾಡುವಾಗ ನಾನು ಒಳ್ಳೆಯ ಕವಿತೆ ಯಾವುದು ಎಂಬುದನ್ನು ಚೆನ್ನಾಗಿ ತಿಳಿದುಕೊಂಡೆ.

ನಿಕೊಲ್ ಸ್ಮಿತ್ತರಿಗೆ ಪದ್ಯಕ್ಕಿಂತ ಗದ್ಯ ಹೆಚ್ಚು ಪ್ರಿಯವಾಗಿತ್ತು. ಅವರು ಬ್ಲೇಕ್, ವರ್ಡ್ಸ್‌ವರ್ತ್, ಕೋಲ್‌ರಿಜ್ ಅವರ ಕವನಗಳನ್ನು ಓದಿಸುವುದರ ಜೊತೆಗೆ ಪೋಪ್, ಡ್ರ್ರಾಯ್ಡನ್, ಬೊಜ್‌ವೆಲ್, ಜೊನ್‌ಸನ್, ಡಿ.ಎಚ್. ಲಾರೆನ್ಸ್ ಮುಂತಾದವರ ಕವನಗಳನ್ನೂ ಓದಿಸಿದರು. ಟಿ.ಎಸ್. ಎಲಿಯಟ್ ಮತ್ತು ಎಜ್ರಾ ಪೌಂಡ್ ಅವರ ಕವನಗಳನ್ನು ಇಂಡಿಯಾಕ್ಕೆ ಹೋದಮೇಲೆ ಓದಲು ಆರಂಭಿಸಿದೆ.

ಒಮ್ಮೊಮ್ಮೆ ನನಗೆ ಒಳ್ಳೆಯ ಬುದ್ಧಿವಾದ ಸಿಕ್ಕುತ್ತಿತ್ತು. 'ನಾನು ತಿಳಿದಿದ್ದೇನೆ ಎಂದು ಯಾವಾಗಲೂ ಹೇಳಬೇಡ' ಎಂಬುದು ಸರ್ ವೊಲ್ಟರ್ ರೊಲೇಯವರ ಬುದ್ಧಿವಾದ. 'ಹಾಗೆ ನೀನು ಹೇಳಿದ ತಕ್ಷಣ ನೀನೊಬ್ಬ ಶುದ್ಧ ತಕ್ಕ ಎಂಬ ಮುದ್ರೆ ಬೀಳುತ್ತೆ' ಎಂದು ಹೇಳುತ್ತಿದ್ದರು ಅವರು. ನಾನೊಮ್ಮೆ ಒಂದು ಪ್ರಬಂಧದಲ್ಲಿ ನನಗೆ ಅಷ್ಟೇನು ತಿಳಿಯದ ಇಟಾಲಿಯನ್ ಭಾಷೆಯ ಒಂದು ವಾಕ್ಯ ಬರೆದೆ. ಗರ್ರ್ರೋಡ್ ಅವರು ಅದನ್ನು ನೋಡಿ ಆಕ್ಷೇಪಣೆ ಮಾಡಿದರು. 'ಕೇವಲ ತೋರಿಕೆಗಾಗಿ ಇದನ್ನು ಬರೆದಿದ್ದೀಯೆ' ಎಂದುಬಿಟ್ಟರು.

ಚುಟುಕುನುಡಿಗಳ ಹಾಡುಗಳನ್ನು ರಚಿಸುವುದು ಆಗ್ಗೆ ನನಗೆ ಚೆನ್ನಾಗಿ ಬರುತ್ತಿತ್ತು. ಗರ್ರ್ರೋಡರು ಅದಕ್ಕೆ ಪ್ರೋತ್ಸಾಹ ಕೊಡುತ್ತಿದ್ದರು. ಆದರೆ ಒಂದು ಪ್ರಬಂಧದಲ್ಲಿ ಯಾರೋ ಒಬ್ಬರ 'essential gutlessness' ಎಂಬ ಬಗ್ಗೆ ಪ್ರಸ್ತಾಪ ಮಾಡಿದ್ದೆ. ನಾನು ಹಾಗೆ ಮಾಡಿದ್ದು ಬಹುಶಃ ಕಿಪ್ಲಿಂಗ್ ಅವರನ್ನು ಅನುಸರಿಸಿ ಅಂತ ಕಾಣುತ್ತೆ. ಆದರೆ ಗರ್ರ್ರೋಡರು ಅದು ಬೇಡ ಎಂದುಬಿಟ್ಟರು. ಅವರು ರಾಗವಾಗಿ 'ಮಿಸ್ಟರ್ ಎಲ್ವಿನ್, ಮಿಸ್ಟರ್ ಎಲ್ವಿನ್, ಯಾವಾಗಲೂ ಎಂದೂ ಹೀಗೆ ಮಾಡಬೇಡ' ಎಂದು ಹೇಳಿದರು.

ಒಮ್ಮೆ ಗರ್ರ್ರೋಡರು ಯಾವುದೋ ಒಂದು ವಿಶ್ವವಿದ್ಯಾನಿಲಯದ ಪತ್ರಿಕೆಯೊಂದಕ್ಕೆ ಲೇಖನ ಬರೆಯಬೇಕಾಗಿತ್ತು. ವಿಷಯ ೧೭ನೆಯ ಶತಮಾನದ ನಾಟಕಕಾರ ಮಿಡಲ್‌ಟನ್ನನ್ನು ಕುರಿತದ್ದು. ಗರ್ರ್ರೋಡರು ಅರ್ಧ ಲೇಖನ ಬರೆದು ಉಳಿದರ್ಧವನ್ನು ನಾನು ಪೂರ್ತಿಮಾಡಬೇಕೆಂದು ಹೇಳಿದರು. ಇದು ಅವರು ನನಗೆ ಮಾಡಿದ ದೊಡ್ಡ ಗೌರವ. ಆ ವಿಷಯದ ಮೇಲೆ ಅವರನ್ನು ಬಿಟ್ಟರೆ ವಿಶ್ವವಿದ್ಯಾನಿಲಯದಲ್ಲಿ ಮತ್ತಾರೂ ಅಧಿಕೃತವಾಗಿ ಹೇಳುವ ಶಕ್ತರಿರಲಿಲ್ಲ. ನಾನು

ಪ್ರಬಂಧವನ್ನು ಮುಗಿಸಿ ತಂದುಕೊಟ್ಟೆ. ಅದರಲ್ಲಿ ಏನನ್ನೂ ತಿದ್ದದೆ ಅವರು ಅದನ್ನು ಒಪ್ಪಿಕೊಂಡರು. ಮೊದಲಿನ ಅರ್ಧಕ್ಕೂ ಕೊನೆಯ ಅರ್ಧಕ್ಕೂ ಇರುವ ವ್ಯತ್ಯಾಸವನ್ನು ಓದುಗರು ತಿಳಿದುಬಿಡುತ್ತಾರೆ ಎಂಬ ಹೆದರಿಕೆಯನ್ನು ನಾನು ವ್ಯಕ್ತಪಡಿಸಿದೆ. ಆಗ ಅವರು 'ಮಿಸ್ಟರ್ ಎಲ್ವಿನ್, ನಾನೂ ನೀನೂ ಎಷ್ಟು ಆಸಕ್ತಿಯಿಂದ ಇದನ್ನು ಸಿದ್ಧಪಡಿಸಿರುವೆವೋ ಅಷ್ಟು ಆಸಕ್ತಿಯಿಂದ ಓದುವ ಎರಡು ಜನ ಸಿಕ್ಕುವುದಿಲ್ಲ' ಎಂದು ಹೇಳಿದರು. ನಾನು ಬರೆದದ್ದನ್ನು ಅಚ್ಚಿನಲ್ಲಿ ಕಂಡುದು ಅದೇ ಮೊದಲು.

ಈಗ ಎಷ್ಟೋ ಸಲ ಇತರರಿಗೆ ನಾನು ಕರಡು ಪ್ರತಿ ಸಿದ್ಧಪಡಿಸಿಕೊಡುತ್ತೇನೆ. ಆದರೆ ಅವರಾರೂ ಗರ್‍ರೋಡರಷ್ಟು ದಯಾದಾಕ್ಷಿಣ್ಯ ತೋರಿಸಲಿಲ್ಲ. ನಾನು ಷಿಲಾಂಗ್‌ನಲ್ಲಿದ್ದಾಗ ಕೆ.ಎಲ್. ಮೆಹ್ತಾ ಅವರು ಸರ್ಕಾರದ ಸಲಹೆಗಾರರಾಗಿದ್ದರು. ನಾನು ಹಸ್ತಪ್ರತಿ ಸಿದ್ಧಮಾಡಿಕೊಟ್ಟರೆ ಅವರು ಹೆಚ್ಚು ಕಡಮೆ ಪ್ರತಿಯೊಂದು ಪದವನ್ನೂ ಬದಲಾಯಿಸಿ, ಅಂಚಿನಲ್ಲಿ 'ಸೊಗಸಾದ ಹಸ್ತಪ್ರತಿ. ಎಲ್ಲೋ ಒಂದೆರಡು ಸಣ್ಣಪುಟ್ಟ ಬದಲಾವಣೆ ಮಾಡಿದ್ದೇನೆ' ಎಂದು ಬರೆಯುತ್ತಿದ್ದರು. ಇದರಿಂದ ನನಗೆ ಅನೇಕ ಸಲ ನಗು ಬರುತ್ತಿತ್ತು. ಒಟ್ಟಿನಲ್ಲಿ, ಕರಡುಪ್ರತಿ ತಯಾರಿಸುವುದರಲ್ಲಿ ಮತ್ತು ಬೇರೆಯವರು ತಯಾರಿಸಿದ್ದನ್ನು ತಿದ್ದುವುದರಲ್ಲಿ ನನಗೆ ಆನಂದ. ಒಂದರಲ್ಲಿ ಬೇಜವಾಬ್ದಾರಿಯ ಹಾಗೂ ಸ್ವಾತಂತ್ರ್ಯದ ಆನಂದ; ಇನ್ನೊಂದರಲ್ಲಿ ಬೇರೆಯವರನ್ನು ಸರಿಪಡಿಸುವ ಶಾಲಾ ಉಪಾಧ್ಯಾಯನ ಆನಂದ.

ನಾನು ಪಡೆದ ಮತ್ತೊಂದು ಬುದ್ಧಿವಾದ, ಕ್ರೈಸ್ತಮತದ ಮಹಾಸುಧಾರಕ ಡಾ॥ ಜೆ. ಜೆ. ಮೇಯರ್ ಅವರು ಹೇಳಿದ್ದು. ಬೋಧನೆ ಮಾಡುವುದಕ್ಕೆ ಅವರು ಅನೇಕ ಸಲ ಬರುತ್ತಿದ್ದರು. ಒಮ್ಮೆ ಅವರನ್ನು ನನ್ನ ಕೋಣೆಗೆ ಟೀಗೆ ಕರೆದೆ, ಕೋಣೆಯನ್ನೆಲ್ಲಾ ಚೆನ್ನಾಗಿ ಗುಡಿಸಿದೆ. ಬೇಡದ ಕಾಗದಗಳನ್ನು ಹಾಕುವ ಬುಟ್ಟಿಯನ್ನು ಹೊರಗಡೆ ಖಾಲಿಮಾಡಿ ತಂದು ಇಟ್ಟಿದ್ದೆ. ಸ್ವಲ್ಪ ಹೊತ್ತು ಮಾತನಾಡಿದ ಮೇಲೆ ಅವರ ಕಣ್ಣು ಮೇಜಿನ ಕಡೆ ಹೋಯಿತು. ಆಗ ಅವರು, 'ಸಾಹಿತ್ಯ ಅಥವಾ ಪಾಂಡಿತ್ಯ ಪ್ರಪಂಚದಲ್ಲಿ ನೀನು ಮುಂದುವರಿಯಬೇಕೆಂದಿದ್ದರೆ ಬರೆದುದನ್ನೆಲ್ಲಾ ತಪ್ಪದೆ ಹರಿದುಹಾಕುತ್ತಾ ಬರಬೇಕು; ಮತ್ತೆ ಬರೆಯಬೇಕು. ಕಸದ ಬುಟ್ಟಿಯೊಳಗೆ ಬಿಸಾಡಿದ ಕಾಗದ ಎಷ್ಟಿದೆ ಎಂಬುದನ್ನು ಲೆಕ್ಕಹಾಕಿ ಒಬ್ಬನ ಪಾಂಡಿತ್ಯ ಪರೀಕ್ಷೆ ಮಾಡುತ್ತೇನೆ' ಎಂದರು. ಈ ಬುದ್ಧಿವಾದ ನನ್ನನ್ನು ಬಿಟ್ಟುಹೋಗಿಲ್ಲ. ಕಳೆದ ಮೂವತ್ತು ವರ್ಷಗಳ ನನ್ನ ಬರವಣಿಗೆಯಲ್ಲಿ ಬಹಳ ಕಾಗದ ಹಾಳುಮಾಡಿದ್ದೇನೆ. ಇದರ ಜೊತೆಗೆ ಬರೆದು ಪ್ರಕಟಿಸುವುದರಲ್ಲಿಯೂ ಎಷ್ಟೋ ಕಾಗದ ಹಾಳುಮಾಡಿದ್ದೇನೆ.

೧೯೨೪ರಲ್ಲಿ ನಾನು ಇಂಗ್ಲಿಷ್ ಫೈನಲ್ ಪರೀಕ್ಷೆಗೆ ಕುಳಿತೆ. ಮೊದಲನೆಯವನಾಗಿ ತೇರ್ಗಡೆಯಾದೆ. ಇಂಗ್ಲಿಷ್ ಅಭ್ಯಾಸವನ್ನು ಮುಗಿಸಿದ ನಂತರ ನಾನು ಇನ್ನೆರಡು ವರ್ಷ ಮುಂದುವರಿಸಿ ಮತಧರ್ಮಶಾಸ್ತ್ರ (Theology)ವನ್ನು ಓದಿ ಮುಗಿಸಬೇಕೆಂದು ತೀರ್ಮಾನಿಸಿದೆ. ಮೆರ್ಟನ್ ಕಾಲೇಜಿನಿಂದ ನನಗೆ ಕೈತುಂಬ ಹಣದ ಸಹಾಯ

ವಾಯಿತು. ಮತಧರ್ಮಶಾಸ್ತ್ರದ ಉಪಾಧ್ಯಾಯರ ಹೆಸರು ಎಫ್. ಡಬ್ಲ್ಯು ಗ್ರೀನ್ ಎಂದು. ಇವರು ಧರ್ಮಪರಾಯಣರು ಹಾಗೂ ಸತ್ಯಾರಾಧಕರು. ನಾನು ಜರ್ಮನ್ ಭಾಷೆಯನ್ನು ಕಲಿಯಲು ಆರಂಭಿಸಿದೆ. ಆದರೆ ಹೆಚ್ಚು ಕಲಿಯಲು ಸಾಧ್ಯವಾಗಲಿಲ್ಲ. ಗ್ರೀನ್ ಅವರಿಗೆ ಆ ಭಾಷೆ ಚೆನ್ನಾಗಿ ಬರುತ್ತಿತ್ತು. ಅವರು ಜರ್ಮನ್ ಮತಶಾಸ್ತ್ರಜ್ಞರು ಬರೆದ ಗ್ರಂಥಗಳ ಆಧಾರದ ಮೇಲೆ ತಯಾರುಮಾಡಿದ ಪಿಂಡಿಗಟ್ಟಲೆ ಟಿಪ್ಪಣಿಗಳನ್ನು ಕೊಟ್ಟರು.

ನನ್ನ ನಾಲ್ಕನೆಯ ವರ್ಷದ ಅಭ್ಯಾಸದ ಕಾಲದಲ್ಲಿ ಆಕ್ಸ್‌ಫರ್ಡಿನಲ್ಲಿ ಚರ್ಚ್ ಕಾಂಗ್ರೆಸ್ ನಡೆಯಿತು. 'ಯುವಕರು ಚರ್ಚ್‌ನಿಂದ ನಿರೀಕ್ಷಿಸುವುದೇನು ?' ಎಂಬ ವಿಷಯದ ಮೇಲೆ ಚರ್ಚೆ ನಡೆಸಬೇಕೆಂದು ತೀರ್ಮಾನವಾಯಿತು. ನಾನು ಆಕ್ಸ್‌ಫರ್ಡ್‌ನ್ನು ಪ್ರತಿನಿಧಿಸಿದೆ. ಕೇಂಬ್ರಿಡ್ಜ್ ಪರವಾಗಿ ಎಸ್.ಸಿ.ನೀಲ್ ಎಂಬುವರನ್ನು ಕಳುಹಿಸಿದರು. ನೀಲ್ ಅವರು ನನ್ನ ಹಿಂದಿನ ಸಹಪಾಠಿ. ಬೇಕಾದಷ್ಟು ಬಹುಮಾನಗಳನ್ನೂ ವಿದ್ಯಾರ್ಥಿವೇತನಗಳನ್ನೂ ಗಳಿಸಿದವರು. ಅವರು ಈಗಲೂ ಬಿಷಪ್ಪರಾಗಿದ್ದಾರೆ. ವಿಷಯಗಳನ್ನು ಚೆನ್ನಾಗಿ ತಿಳಿದಂಥವರು. ಮೇಲೆ ಹೇಳಿದ ಕಾಂಗ್ರೆಸ್ ಪ್ರಾರಂಭವಾಗುವ ಮುನ್ನ ಅವರು ನನಗೆ ಪತ್ರ ಬರೆದು ಕಾಂಗ್ರೆಸ್‌ನಲ್ಲಿ ಮಾಡಬೇಕೆಂದಿರುವ ನನ್ನ ಭಾಷಣದ ನಕಲನ್ನು ಕೇಳಿದರು. ನಾನು ಏನೂ ತಿಳಿಯದೆ ಅದನ್ನು ಕೊಟ್ಟುಬಿಟ್ಟೆ. ನನ್ನ ಭಾಷಣವನ್ನು ಪೂರ್ವಭಾವಿಯಾಗಿ ಓದಿಕೊಂಡಿದ್ದ ಅವರು ಅಧಿವೇಶನದಲ್ಲಿ ನನ್ನ ವಿಷಯದ ಬಗ್ಗೆ ಕೆಲವು ವಿನೋದಗಳನ್ನು ಮಾಡಿದರು. ನನ್ನ ಭಾಷಣ ಪತ್ರಿಕೆಗಳಲ್ಲಿ ದೊಡ್ಡದಾಗಿ ಅಚ್ಚಾಯಿತು. ಜೊತೆಗೆ ಮಾರ್ಗೊಟ್ ಆಸ್ಕ್ವಿತ್‌ರಂಥ ದೊಡ್ಡಮನುಷ್ಯರೂ ನನ್ನ ಭಾಷಣವನ್ನು ಪತ್ರಿಕೆಗಳಲ್ಲಿ ಓದಿ ಚೆನ್ನಾಗಿದೆ ಎಂದು ಕಾಗದ ಬರೆದರು.

ನನ್ನ ತಾಯಿ ಹೆಡಿಂಗ್‌ಟನ್ ಹೋಲೊ ಎಂಬಲ್ಲಿ ಸಜ್ಜುಗೊಳಿಸಿದ ಮನೆಯನ್ನು ಬಾಡಿಗೆಗೆ ಪಡೆದು ಅಲ್ಲಿ ವಾಸಮಾಡುತ್ತಿದ್ದಳು. ನಾನು ಪ್ರತಿ ಭಾನುವಾರ ಅಲ್ಲಿಗೆ ಹೋಗಿ ಕಾಲ ಕಳೆದು ಬರುತ್ತಿದ್ದೆ. ಆಕ್ಸ್‌ಫರ್ಡ್‌ನಿಂದ ಕಷ್ಟಪಟ್ಟು ಬೈಸಿಕಲ್ ತುಳಿದು ದಿಣ್ಣೆ ಹತ್ತಿ ಹೆಡಿಂಗ್‌ಟನ್ ಹಿಲ್‌ಗೆ ಹೋಗಿ, ಅಲ್ಲಿಂದ ಇಳಿಜಾರು ದಾರಿಯಲ್ಲಿ ತುಳಿಯದೆ ಹಾಯಾಗಿ ಬೈಸಿಕಲ್ ಮೇಲೆ ಕುಳಿತು ಹಿಂದಿರುಗುತ್ತಿದ್ದುದು ನನಗೆ ತುಂಬ ಆನಂದವನ್ನುಂಟುಮಾಡುತ್ತಿತ್ತು.

ಆಕ್ಸ್‌ಫರ್ಡಿನ ಬಳಿ ಎಲ್ಸ್‌ಫೀಲ್ಡ್ ಎಂಬ ಹಳ್ಳಿ ಇತ್ತು. ಅಲ್ಲಿ ನನ್ನ ಮೆಚ್ಚಿನ ಗೆಳೆಯ ಮೆರ್ವಿನ್ ಹಾಟ್ ಎಂಬುವನು ವಾಸಮಾಡುತ್ತಿದ್ದ. ಅವನ ತಾಯಿ ಲಕ್ವಾ ಹೊಡೆತದಿಂದ ಮಲಗಿರುತ್ತಿದ್ದಳು. ಆಕೆ ಮಾತಿನಲ್ಲಿ ಜಾಣೆ. ಹಾಟ್‌ನ ತಂದೆ ಹಳೆಯ ಕಾಲದ ರೈತ. ಅವನಿಗೆ ಸುಂದರಿಯಾದ ಇಬ್ಬರು ತಂಗಿಯರಿದ್ದರು. ನಮ್ಮಲ್ಲಿ ಬಹು ಜನ ವಿದ್ಯಾರ್ಥಿಗಳು ಅಲ್ಲಿಗೆ ಹೋಗಿ ಆ ಇಂಗ್ಲಿಷ್ ಹಳ್ಳಿಯ ಆತಿಥ್ಯವನ್ನು ಅನುಭವಿಸಿ ಬರುತ್ತಿದ್ದರು.

ಮೆರ್ವಿನ್ ಹಾಟ್ ಡಾಕ್ಟರ್ ಪರೀಕ್ಷೆ ಮಾಡಿಕೊಂಡನಂತರ ಇಂಡಿಯಾಕ್ಕೆ ಹೋಗಿ ಕಲ್ಕತ್ತೆಯ ಬಳಿ ರಾನಾಘಾಟ್ ಎಂಬಲ್ಲಿದ್ದ ಆಸ್ಪತ್ರೆಯಲ್ಲಿ ಡಾಕ್ಟರಾದ. ಸ್ವಲ್ಪಮಟ್ಟಿಗೆ ಗಾಂಧೀಜಿಯವರ ಪ್ರಭಾವಕ್ಕೊಳಗಾಗಿ ಕಸಗುಡಿಸುವುದನ್ನು ಸ್ವತಃ ಮಾಡಬೇಕೆಂಬ ಉದ್ದೇಶದಿಂದ ಆಸ್ಪತ್ರೆಯ ಜಾಡಮಾಲಿಗಳನ್ನು ತೆಗೆದುಹಾಕಿದ. ಆಸ್ಪತ್ರೆಯ ಸಿಬ್ಬಂದಿವರ್ಗದವರು ಗುಡಿಸುವ ಕೆಲಸವನ್ನು ತಾವೇ ಮಾಡುತ್ತೇವೆಂದು ಒಪ್ಪಿಕೊಂಡರು. ಆದರೆ ಅಸ್ಪೃಶ್ಯತಾ ನಿವಾರಣೆಯ ಈ ದಿಟ್ಟ ಪ್ರಯತ್ನ ಫಲಕಾರಿಯಾಗಲಿಲ್ಲ. ಕೆಲಸ ಕಳೆದುಕೊಂಡ ಜಾಡಮಾಲಿಗಳು ಕಮ್ಯೂನಿಸ್ಟರ ಪ್ರೇರಣೆಯಿಂದ ಗಲಾಟೆ ಎಬ್ಬಿಸಿದರು. ೧೯೪೯ನೆಯ ನವೆಂಬರ್ ೩೦ನೆಯ ತಾರೀಖು ಒಂದು ದಿನ ಸಂಜೆ ಆಸ್ಪತ್ರೆ ಸಿಬ್ಬಂದಿಯವರೆಲ್ಲ ಊಟಮಾಡುತ್ತಾ ಕುಳಿತಿದ್ದರು. ಆಗ ಯಾರೋ ಒಬ್ಬ ಕಿಟಕಿಯ ಬಳಿ ನಿಂತು ಬಂದೂಕ ಹಾರಿಸಿ ಮೆರ್ವಿನನನ್ನೂ ಇಬ್ಬರು ದಾದಿಯರನ್ನೂ ಕೊಂದುಬಿಟ್ಟ. ಆಕ್ಸ್‌ಫರ್ಡಿನಲ್ಲಿದ್ದಾಗಲೂ ಮೆರ್ವಿನ್‌ನಲ್ಲಿ ಸಂತನ ಲಕ್ಷಣಗಳನ್ನು ಕಾಣಬಹುದಾಗಿತ್ತು. ಅವನ ಸಾವು ಮತಧರ್ಮಕ್ಕೂ ವೈದ್ಯಕ್ಕೂ ಅಪಾರ ನಷ್ಟವನ್ನುಂಟುಮಾಡಿತು.

ನನ್ನ ತಾಯಿ ಸಾವಿರ ಪೌಂಡು ಕೊಟ್ಟು ಉತ್ತರ ಆಕ್ಸ್‌ಫರ್ಡಿನಲ್ಲಿ ಒಂದು ಮನೆ ಕೊಂಡುಕೊಂಡಳು. ಆದ್ದರಿಂದ ನಾನು ಓದುತ್ತಿರುವಾಗ ಆಗಾಗ್ಗೆ ಮನೆಗೆ ಹೋಗಿಬರಬಹುದಾಗಿತ್ತು. ನಾನು ಮತಧರ್ಮಶಾಸ್ತ್ರದ ಅಭ್ಯಾಸವನ್ನು ಮುಗಿಸಿ ಪರೀಕ್ಷೆಗೆ ಕುಳಿತೆ. ಏನಾಗುತ್ತೋ ಎಂಬ ಹೆದರಿಕೆ ಇತ್ತು. ಆದರೆ ಅದೃಷ್ಟವಶಾತ್ ಮೊದಲನೆಯ ತರಗತಿಯಲ್ಲಿ ಪಾಸಾದೆ.

೧೯೨೫ರಲ್ಲಿ ಮಾಗ್ಡಲೆನ್ ಕಾಲೇಜಿನಲ್ಲಿ ಇಂಗ್ಲಿಷ್ ಸಾಹಿತ್ಯ ಬೋಧಿಸಲು ಒಬ್ಬ ಉಪಾಧ್ಯಾಯ ಬೇಕಾಗಿತ್ತು. ನಾನು ಆ ಕೆಲಸಕ್ಕೆ ಅರ್ಜಿಹಾಕಿದೆ. ಆದರೆ ನನಗಿಂತ ಹೆಚ್ಚು ಪ್ರತಿಭಾವಂತರಾದ ಸಿ.ಎಸ್. ಲಿವಿಸ್ ಎಂಬುವರಿಗೆ ಆ ಕೆಲಸ ಸಿಕ್ಕಿತು. ಆದರೂ ಕಾಲೇಜಿನ ಪ್ರೆಸಿಡೆಂಟರಾದ ಸರ್ ಹೆರ್ಬರ್ಟ್ ವೊರೆನ್ ಅವರನ್ನು ಭೇಟಿಮಾಡುವ ಮತ್ತು ಕಾಲೇಜಿನ ಭೋಜನಕೂಟಕ್ಕೆ ಹೋಗುವ ಅವಕಾಶ ಸಿಕ್ಕಿತು. ಭೋಜನದ ವೇಳೆ ಯಾರೋ ಒಂದು ಕಥೆ ಹೇಳಿದರು. ಅದೇನೆಂದರೆ, ಉಪಾಧ್ಯಾಯನ ಕೆಲಸಕ್ಕೆ ಹಲವಾರು ಜನ ಅರ್ಜಿಹಾಕಿಕೊಂಡರು. ಪರೀಕ್ಷೆಗಾಗಿ ಅವರಿಗೆ ಬೇಯಿಸಿದ ಚೆರ್ರಿ ಹಣ್ಣುಗಳನ್ನು ತಿನ್ನಲು ಕೊಟ್ಟರು. ಒಬ್ಬ ಹಣ್ಣು ತಿಂದು ಬೀಜವನ್ನು ತಟ್ಟೆಯಲ್ಲಿ ಉಗುಳಿದ. ಅವನನ್ನು ಆರಿಸಲಿಲ್ಲ. ಇನ್ನೊಬ್ಬ ಹಣ್ಣು ತಿಂದು ಬೀಜಗಳನ್ನು ಚಮಚದಲ್ಲಿ ಉಗಿದು ಲಕ್ಷಣವಾಗಿ ತಟ್ಟೆಯಲ್ಲಿ ಜೋಡಿಸಿದ. ಅವನನ್ನೂ ಆರಿಸಲಿಲ್ಲ. ಮೂರನೆಯವನು ಬೀಜಗಳನ್ನೂ ನುಂಗಿಬಿಟ್ಟ. ಅವನನ್ನು ಆರಿಸಿದರು. ಆದರೆ ಅವನಿಗೆ ಕರುಳುಬಾಲದ ರೋಗ ಆಗಿ ಕೆಲಸಕ್ಕೆ ಬರಲು ಸಾಧ್ಯವಾಗಲೇ ಇಲ್ಲವಂತೆ.

ಆಕ್ಸ್‌ಫರ್ಡ್‌ನಲ್ಲಿ ಮತ್ತೊಂದು ಕಥೆ ಹೇಳುತ್ತಿದ್ದರು. ಅದು ಸರ್ ಹೆರ್ಬರ್ಟ್ ಅವರನ್ನು ಕುರಿತದ್ದು. ಹೆರ್ಬರ್ಟರು ಪ್ರತಿಷ್ಠೆಗೆ ಹೆಸರಾಗಿದ್ದರು. ಶ್ರೀಮತಿ ಅನಿಬೆಸೆಂಟರು

ತಮ್ಮ ಪಾಲನೆಯಲ್ಲಿದ್ದ ಕೃಷ್ಣಮೂರ್ತಿಯನ್ನು ಕಾಲೇಜಿಗೆ ಸೇರಿಸಲು ಆಕ್ಸ್‌ಫರ್ಡಿಗೆ ಹೋದರು. ನೇರವಾಗಿ ಹೋಗಿ ಪ್ರೆಸಿಡೆಂಟ್ ಸರ್ ಹೆರ್ಬರ್ಟರನ್ನು ಕಂಡರು. ಕೃಷ್ಣಮೂರ್ತಿಯನ್ನು ಸೇರಿಸಿಕೊಳ್ಳುವ ಬಗ್ಗೆ ಹರ್ಬರ್ಟರು ಕೊಂಚ ಹಿಂಜರಿದರು. ಆಗ ಅನಿಬೆಸೆಂಟರು, 'ನನ್ನ ಕೃಷ್ಣಮೂರ್ತಿ ತುಂಬಾ ವಿಶಿಷ್ಟ ವ್ಯಕ್ತಿ. ಹೇಳಬಾರದು, ಆದರೂ ಹೇಳುತ್ತೇನೆ : ಆತ ದೇವರ ಮಗ' ಎಂದರಂತೆ. ಇದಕ್ಕೆ ಸರ್ ಹೆರ್ಬರ್ಟರು, 'ನೋಡಿ ಅಮ್ಮಾ, ಈ ಕಾಲೇಜಿನಲ್ಲಿ ಭಾರಿ ಹೆಸರಾಂತ ಮಹನೀಯರ ಮಕ್ಕಳಿದ್ದಾರೆ' ಎಂದು ಜವಾಬು ಕೊಟ್ಟರಂತೆ. ಅನೇಕ ವರ್ಷಗಳನಂತರ ಸರ್ದಾರ್ ಪಣಿಕ್ಕರ್ ಅವರಿಗೆ ಈ ಕಥೆ ಹೇಳಿದೆ. ಆಗ ಅವರು 'ಈ ಕಥೆ ಎಲ್ಲಿ ಕೇಳಿದಿರಿ ನೀವು ?' ಎಂದರು. ನಾನು 'ಆಕ್ಸ್‌ಫರ್ಡ್‌ನಲ್ಲಿ' ಎಂದೆ. ಅವರು, 'ನೋಡಿ ಆ ಕಥೆ ಹುಟ್ಟಿಸಿದವನು ನಾನೇ. ನಾನು ಯುವಕನಾಗಿದ್ದಾಗ ಪ್ಯಾರಿಸ್‌ನಲ್ಲಿ ದುಡ್ಡಿಗೆ ತಾಪತ್ರಯ ಪಡುತ್ತಿದ್ದೆ. ನಾಲ್ಕು ಕಾಸು ಸಂಪಾದಿಸಲು ನಾನು ಅಮೇರಿಕಾ ಪತ್ರಿಕೆಗಳಿಗೆ ಬರೆಯುತ್ತಿದ್ದೆ. ನೀವು ಹೇಳಿದ ಕಥೆ ಮೊದಲು ಅಮೇರಿಕಾದಲ್ಲಿ ಪ್ರಕಟವಾಯಿತು. ಅನಂತರ ಲಂಡನ್ ಟೈಮ್ಸ್ ಪತ್ರಿಕೆಯಲ್ಲಿ ಕಾಣಿಸಿಕೊಂಡಿತು. ಕೊನೆಗೆ ಆಕ್ಸ್‌ಫರ್ಡ್‌ನಲ್ಲಿ ತಳ ಊರಿತು' ಎಂದರು.

ನಾನು ಅಂಗಸಾಧನೆಯ ಬಗ್ಗೆ ಅಷ್ಟೇನೂ ಗಮನ ಕೊಡುತ್ತಿರಲಿಲ್ಲ. ಅದು ಶರೀರದ ಶಕ್ತಿಯ ವ್ಯಯವೆಂದು ಷೆರ್‌ಲಾಕ್ ಹೋಮ್ಸ್ ಹೇಳುತ್ತಿದ್ದರು. ನಾನೂ ಅಂತೆಯೇ ಭಾವಿಸಿದ್ದೆ. ಆದರೂ ಆಟದ ಮೈದಾನದಲ್ಲಿ ಆಗಾಗ ಕಾಣಿಸಿಕೊಳ್ಳುತ್ತಿದ್ದೆ. ಸ್ಕೂಲಿನಲ್ಲಿದ್ದಾಗ "Through the Looking Glass' (ಕನ್ನಡಿಯ ಮೂಲಕ) ಎಂಬ ಪುಸ್ತಕವೊಂದನ್ನು ಬಾಕ್ಸಿಂಗ್‌ನಲ್ಲಿ ಗೆದ್ದದ್ದಕ್ಕೆ ಬಹುಮಾನವಾಗಿ ಕೊಟ್ಟರು. ಆದರೆ ಈ ಬಾಕ್ಸಿಂಗ್ ಹೊನೋರಿಯಾ ಗ್ಲೊಸ್ಸೊಪ್‌ಳಂಥ ಧಡಿಯ ಹೆಂಗಸರಿಗೆ ಸರಿ ಎಂದು ಅದನ್ನು ಕೈಬಿಟ್ಟೆ. ಕಾಲೇಜಿಗೆ ಹೋದಮೇಲೆ ಶರೀರಕ್ಕೆ ತುಂಬ ಕಡಮೆ ಆಯಾಸವಾಗುವ Soccer (ಸಾಕರ್) ಆಟ ಹಿಡಿದೆ. ಮೆರ್ಟನ್ ಕಾಲೇಜಿನಲ್ಲಿ ಆ ಆಟದ ತಂಡದ ಕ್ಯಾಪ್ಟನ್ ಆಗಿದ್ದೆ. ಆದರೆ ಒಂದು ಪಂದ್ಯದಲ್ಲಿಯೂ ನಮ್ಮ ತಂಡ ಆ ವರ್ಷ ಗೆಲ್ಲಲಿಲ್ಲ. ಕೊನೆಗೆ ಅದನ್ನೂ ಕೈಬಿಟ್ಟೆ. ಆದರೂ ನನಗೆ ಈಜಾಡುವುದರಲ್ಲಿ ಭಾರಿ ಆಸಕ್ತಿ ಇತ್ತು. 'ಪಾರ್ಸನ್ಸ್ ಪ್ಲೆಷರ್' ಎಂಬಲ್ಲಿಗೆ ಹೋಗಿ, ಎಲ್ಲರಂತೆ ಬೆತ್ತಲೆ ಈಜಾಡಿ, ಅನಂತರ ದೋಣಿಯಲ್ಲಿ ಕುಳಿತು ನದಿಯ ಮೇಲೆ ತೇಲಿಬರುತ್ತಿದ್ದೆ.

ಒಂದು ದಿನ ಬೇಸಗೆಯ ಮಧ್ಯಾಹ್ನ ನಾನೂ ಬೆರ್ನಾರ್ಡ್ ಅಲುವಿಹೇರನೂ ಸೇರಿಕೊಂಡು ಡಾ॥ ರಾಧಾಕೃಷ್ಣನ್ ಅವರನ್ನು – ಆಗ ಅವರು Fellow of all Souls ಆಗಿದ್ದರು. ದೋಣಿಯಲ್ಲಿ ಕರೆದುಕೊಂಡು ವಿಹಾರಹೋದೆವು. ಆಗ ಅವರನ್ನು ಕೇಳಿದೆ, 'ವಿವಿಧ ಮತಧರ್ಮಗಳ ಪರಸ್ಪರ ಹೋಲಿಕೆ ಗೊತ್ತಿದೆಯೆ ?' ಎಂದು. ಹಾಗೆ ಕೇಳಿದ್ದನ್ನು ಈಗ ನೆನೆಸಿಕೊಂಡರೆ ನಾಚಿಕೆಯಾಗುತ್ತದೆ.

ಆಕ್ಸ್‌ಫರ್ಡಿನಲ್ಲಿ ಸೇದುತ್ತಿರಲಿಲ್ಲ. ಕುಡಿಯುತ್ತಿದ್ದುದೂ ತೀರಾ ಕಡಮೆ. ಮೂರನೆಯ ವರ್ಷ ಮಾತ್ರ ಆಗಾಗ್ಗೆ ಬೀರ್ ಅಥವಾ ಬ್ರ್ಯಾಂಡಿ ತೆಗೆದುಕೊಳ್ಳುತ್ತಿದ್ದೆ. ಕಾಲೇಜು ಅಥವಾ ಕ್ಲಬ್‌ನಲ್ಲಿ ಭೋಜನಕೂಟಗಳಾದರೆ ವೈನ್ ಇಷ್ಟವಾಗುತ್ತಿತ್ತು. ಕುಡಿಯುವವರು ಹೀಗೆ ಬಹಿರಂಗವಾಗಿ ಊಟಮಾಡುವಾಗ ಕುಡಿಯಬೇಕು. ಅದು ಬಿಟ್ಟು, ಒಂಟಿಯಾಗಿ ಮತ್ತು ಬರುವಂತೆ ಕುಡಿದು ಉರುಳಾಡುವುದು ಬಹಳ ಅನಾಗರಿಕ ನಡತೆ ಎಂದು ಹೇಳಬೇಕು. ನಾನು ಇಂಡಿಯಾಕ್ಕೆ ಹೋದಮೇಲೆ ಮತ್ತು ನನ್ನ ನಲವತ್ತನೆ ವಯಸ್ಸಿನವರೆಗೆ ಯಾವಾಗಲೂ ಮಲೇರಿಯಾದಿಂದ ನರಳುತ್ತಿದ್ದೆ. ಆಗ ನಾನು ಸೇದದಿದ್ದುದೇ ಅದಕ್ಕೆ ಕಾರಣ ಎಂದು ನನ್ನ ಭಾವನೆ. ನಾನು ಚುಟ್ಟಾ ಸೇದುವುದಕ್ಕೆ ಆರಂಭಿಸಿದ ಮೇಲೆ – ನಾನು ಸಿಗರೇಟ್ ಸೇದಿಯೇ ಇಲ್ಲ – ಮಲೇರಿಯಾ ನನ್ನ ಹತ್ತಿರ ಬರಲಿಲ್ಲ; ನನ್ನ ಆರೋಗ್ಯವೂ ಚೆನ್ನಾಯಿತು. ಇಂಗ್ಲೆಂಡ್ ಮತ್ತು ಯುರೋಪಿನಲ್ಲಿ ಚುಟ್ಟಾ ಧನಿಕರ ದವಲತ್ತಿನ ಗುರುತು. ಕಮ್ಯೂನಿಸ್ಟರು ಶ್ರೀಮಂತರ ವ್ಯಂಗಚಿತ್ರ ಬರೆಯುವಾಗ ಬಾಯಿಗೆ ಚುಟ್ಟಾ ಇಡುತ್ತಾರೆ. ಇಂಡಿಯಾದಲ್ಲಿಯೇ ತಯಾರಾದ ಚುಟ್ಟಾ ನಿಜವಾಗಿಯೂ ಚಿರೂಟ್. ಅಲ್ಲದೆ, ಅದು ಸಿಗರೇಟಿಗಿಂತ ಅಗ್ಗ.

ನಾನು ಪದವಿ ಪಡೆಯುವ ಪೂರ್ವದ ದಿನಗಳನ್ನು ಮತದ ಅಭ್ಯಾಸ ಮಾಡುವುದರಲ್ಲಿ ವ್ಯರ್ಥಮಾಡಿದೆನೆಂದು ಅನ್ನಿಸುತ್ತದೆ. ಆಗ ನಾನು ಪಡೆದಿದ್ದ ಸಂಕುಚಿತ ಭಾವನೆಗಳು ನನ್ನನ್ನು ಬಿಟ್ಟು ಯಾವೊತ್ತೋ ಓಡಿಹೋದವು. ಅವುಗಳಿಂದ ಯಾವೊತ್ತಾದರೂ ನನಗೆ ಪ್ರಯೋಜನವಾಯಿತೇ ಎಂಬುದು ಸಂದೇಹ. ಅಂತೂ ಮತದ ಅಭ್ಯಾಸ ಅತ್ಯಂತ ಕುತೂಹಲಕಾರಿಯಾಗಿತ್ತು ಆಗ. ಬ್ರಿಡ್ಜ್ ಆಟ ಅಥವಾ ಕುದುರೆ ಜೂಜಿನಲ್ಲಿ ಕಾಲ ಕಳೆಯುವ ಬದಲು ಅದನ್ನು ತಿಳಿಯುವ ಆಸಕ್ತಿ ವಹಿಸಬಹುದಿತ್ತು.

ನಾವು ಪ್ರಾರ್ಥನಾ ಸಭೆಯನ್ನು ಏರ್ಪಡಿಸಿ ಪಾದ್ರಿಯೊಬ್ಬನನ್ನು ಕರೆಸಿ ಅವನಿಂದ ಭಾಷಣ ಮಾಡಿಸುತ್ತಿದ್ದೆವು. ಪ್ರತಿ ಭಾನುವಾರ ಸಾಯಂಕಾಲ ಎಂಟು ಗಂಟೆಯ ವೇಳೆಗೆ ಎಲ್ಲಾ ಪದವೀಪೂರ್ವ ವಿದ್ಯಾರ್ಥಿಗಳು ನೆರೆದು ಹಾರ್ಮೋನಿಯಂ ಬಾರಿಸಿಕೊಂಡು ಹಾಡುತ್ತಿದ್ದೆವು. ನನಗೆ ಹಾರ್ಮೋನಿಯಂ ಕಂಡರೆ ಆಗದಿರುವುದಕ್ಕೆ ಇದೂ ಒಂದು ಕಾರಣವಿರಬಹುದು. ಇನ್ನೊಂದು ತರಹ ಮಹತ್ವಬೋಧನೆಯೂ ನಡೆಯುತ್ತಿತ್ತು. 'ಆಕ್ಸ್‌ಫರ್ಡ್ ಯೂನಿವರ್ಸಿಟಿ ಬೈಬಲ್ ಯೂನಿಯನ್' ಎಂಬ ಸಂಘದ ಆಶ್ರಯದಲ್ಲಿ ನಾವು ಪ್ರತಿ ಶುಕ್ರವಾರ ಸಾಯಂಕಾಲ ಸೇರಿ ದೊಡ್ಡದೊಡ್ಡವರನ್ನು ಕರೆಸಿ ಉಪದೇಶ ಕೊಡಿಸುತ್ತಿದ್ದೆವು. ನಾವು ಎಪ್ಪತ್ತು ಎಂಬತ್ತು ಜನ ಪದವೀ ಪೂರ್ವ ವಿದ್ಯಾರ್ಥಿಗಳು ನೆರೆದು ಆ ಉಪದೇಶಗಳಿಂದ ಸ್ಫೂರ್ತಿಯನ್ನು ಪಡೆಯುತ್ತಿದ್ದೆವು. ನಾನು ಅನಂತರ ಆ ಸಂಘದ ಅಧ್ಯಕ್ಷನೂ ಆದೆ.

ಇಷ್ಟಲ್ಲದೆ, ನಾನು ಮೂವರು ಆಂಗ್ಲೋ ಕ್ಯಾಥೋಲಿಕ್ ಸ್ನೇಹಿತರ ಪ್ರಭಾವಕ್ಕೆ ಒಳಗಾಗಿದ್ದೆ. ಆ ಮೂವರು ಸ್ನೇಹಿತರು ನನ್ನನ್ನು ಮತಾಂತರಗೊಳಿಸಲು ಪ್ರಯತ್ನಪಟ್ಟರು.

ನನ್ನನ್ನು ಹೊಗಳಿದರು. ಚರ್ಚೆ ಮಾಡಿದರು; ಅಂತೆಯೇ ತುಂಬಾ ಪ್ರೀತಿಸಿದರು. ಒಬ್ಬನು ನನ್ನೊಡನೆ ಚರ್ಚೆಮಾಡುತ್ತಿದ್ದರೆ ಇನ್ನೊಬ್ಬನು ಪಕ್ಕದ ಕೋಣೆಯಲ್ಲಿ ಮಂಡಿಯೂರಿ ದೇವರು ನನ್ನ ಮನಸ್ಸನ್ನು ಬದಲಿಸುವಂತೆ ಪ್ರಾರ್ಥಿಸುತ್ತಿದ್ದನು. ಕೊನೆಗೆ ಅವರು ಗೆದ್ದರು. ಅವರು ಹೇಗೆ ಗೆದ್ದರೆಂದು ಅನಂತರ ಹೇಳುತ್ತೇನೆ.

ಆಕ್ಸ್‌ಫರ್ಡ್‌ನಲ್ಲಿ ಇರುವಾಗ ಇವೆಲ್ಲದರ ಜೊತೆಗೆ ನಾನು ಮತ್ತೊಂದು ಪ್ರಭಾವಕ್ಕೆ ಒಳಗಾದೆ. ಅದಾವುದೆಂದರೆ, ಫ್ರಾಂಕ್ ಬುಕ್‌ಮನ್ ಅವರ ಬೋಧನೆ. ಅವರು ಆಕ್ಸ್‌ಫರ್ಡಿಗೆ ಬಂದ ಮೊದಲ ದಿನವೇ ಅವರಿಗೆ ನನ್ನ ಪರಿಚಯ ಮಾಡಿಕೊಡಲಾಯಿತು. ಆಗ ಅವರು ನನ್ನ ಕಡೆ ಬೆರಳು ತೋರಿಸಿ 'ನಿನ್ನ ಜೀವನದಲ್ಲೇನೊ ರಹಸ್ಯವಿದೆ' ಎಂದರು. ನಾನು ಅವರ ಎರಡು ಮೂರು ಭಾಷಣಗಳನ್ನು ಕೇಳಿದೆ. ಹೇಳಿದ್ದೆಲ್ಲವನ್ನೂ ನಾನು ಒಪ್ಪಲಿಲ್ಲ. ಆದರೂ ಅವರ ಭಾಷಣಗಳು ಚೆನ್ನಾಗಿದ್ದವು.

ಆಗ ಬಹಿರಂಗವಾಗಿ ತಪ್ಪೊಪ್ಪಿಗೆಗಳು ಆಗುತ್ತಿದ್ದವು. ಅಂಥ ತಪ್ಪೊಪ್ಪಿಗೆ ಸಭೆಯೊಂದರಲ್ಲಿ ಮೊದಲನೆಯ ವರ್ಷದ ವಿದ್ಯಾರ್ಥಿಯೊಬ್ಬನಿದ್ದ. ಆತ ತಪ್ಪುಮಾಡದ ಮುಗ್ಧ ಬಾಲಕ. ತನ್ನ ಸರದಿ ಬಂದಾಗ ಯೂನಿಯನ್ ಶೌಚದ ಕೋಣೆಯಲ್ಲಿದ್ದ ಮುಖ ಒರೆಸುವ ಟವಲಿಗೆ ಮೂಗಿನ ಗೊಣ್ಣೆ ಒರೆಸಿದೆ ಎಂದು ಒಪ್ಪಿಕೊಂಡ.

ನಾನು ಮತಧರ್ಮಶಾಸ್ತ್ರಾಭ್ಯಾಸವನ್ನು ಮುಗಿಸಿದ ಕೂಡಲೇ ನನಗೆ ವೈಕ್ಲಿಫ್ ಹಾಲ್ ಎಂಬ ಕಾಲೇಜಿನ ವೈಸ್- ಪ್ರಿನ್ಸಿಪಾಲ್ ಕೆಲಸ ಸಿಕ್ಕಿತು. ನನ್ನೊಡನೆ ಪಾಸಾದ ಸ್ನೇಹಿತನೊಬ್ಬ ಪಾದ್ರಿಯಾದ. ಕೆಲವು ತಿಂಗಳನಂತರ ಆಕ್ಸ್‌ಫರ್ಡಿನ ಬಿಷಪ್ ಟಾಮ್ಮಿ ಸ್ಟ್ರಾಂಗ್ ಎಂಬುವರು–ಇವರು ನನ್ನ ಬಗ್ಗೆ ತುಂಬ ಆದರ ತೋರುತ್ತಿದ್ದರು–ನನಗೆ ದೀಕ್ಷೆಕೊಟ್ಟರು. ಬಹು ಗಹನವಾದ ವಿಚಾರಗಳನ್ನು ನಾನು ಅವರೂ ಚರ್ಚಿಸುತ್ತಿದ್ದೆವು. ಅವರು ಹೆಚ್ಚು ಮಾತಾಡುತ್ತಿರಲಿಲ್ಲ; ಒಂದೆರಡು ಪದಗಳಲ್ಲಿ ತಾವು ಹೇಳುವುದನ್ನು ಹೇಳುತ್ತಿದ್ದರು. ಮಾತಿನಲ್ಲಿ ಮತ್ತು ಬರೆವಣಿಗೆಯಲ್ಲಿ ನಾನು ಅವರನ್ನು ಅನುಕರಿಸಬೇಕೆನಿಸಿತು.

ವೈಸ್–ಪ್ರಿನ್ಸಿಪಾಲನಾದ ನನಗೆ ಕಾಲೇಜಿನ ಒಂದು ಭಾಗದಲ್ಲಿ ವಾಸಕ್ಕೆ ಒಳ್ಳೆಯ ಕೋಣೆಗಳು ದೊರೆತುವು. ನಾನೊಬ್ಬನೇ ಅಲ್ಲಿದ್ದುಕೊಂಡು ಪಾಠ ಹೇಳುತ್ತಾ ಪಾದ್ರಿಯ ನಿತ್ಯಕರ್ಮಗಳನ್ನು ಆಚರಿಸುತ್ತಾ ಹಾಯಾಗಿ ಇದ್ದೆ. ಒಂದು ವರ್ಷ ಈ ಕೆಲಸದಲ್ಲಿದ್ದ ನನಗೆ ಅಧ್ಯಾತ್ಮಯೋಗವನ್ನು ಅಭ್ಯಾಸಮಾಡುವುದಕ್ಕೆ ಮತ್ತು ಮೊದಲಿಗಿಂತ ಹೆಚ್ಚಾಗಿ ನನ್ನ ಮತಾನುಚರಣೆ ಮಾಡುವುದಕ್ಕೆ ಅವಕಾಶ ಮತ್ತು ಸೌಲಭ್ಯ ಸಿಕ್ಕಿತು. ಅಧ್ಯಾತ್ಮದ ಬಗ್ಗೆ ಸಿಕ್ಕಬಹುದಾದ ಪುಸ್ತಕಗಳನ್ನೆಲ್ಲಾ ಕೊಂಡು ಓದಿದೆ. ಉಳಿಸಬಹುದಾದ ಒಂದು ಕಾಸನ್ನು ಸಹ ಪುಸ್ತಕ ಕೊಳ್ಳಲು ಉಪಯೋಗಿಸಿದೆ. ದೇವರನ್ನು ಅರಸುವ ಆತುರ ನನ್ನಲ್ಲಿ ಮೂಡಿತು. ಪ್ರತಿ ಬುಧವಾರ ಮತ್ತು ಶುಕ್ರವಾರ ಬೆಳಗಿನಿಂದ ಸಾಯಂಕಾಲ ಏಳುಗಂಟೆಯವರೆಗೆ ಏನನ್ನೂ ತಿನ್ನದೆ ಉಪವಾಸಮಾಡುತ್ತಿದ್ದೆ. ಕೆಲವು ವೇಳೆ ರಾತ್ರಿಯೆಲ್ಲಾ ಜಾಗರಣೆ

ಮಾಡುತ್ತಿದ್ದೆ. ಶತಮಾನಗಳ ಹಿಂದೆ ಆಗಸ್ಟಿನ್ ಯೋಗಿಯ ಹೃದಯವು ಕಂಪಿಸುವಂತೆ ಮಾಡಿದ ಸೌಂದರ್ಯಕ್ಕೆ, ಸನಾತನ ಹಾಗೂ ಚಿರನೂತನವಾದ ಸೌಂದರ್ಯಕ್ಕೆ, ದಾಸನಾದೆ. ಪ್ರೇಮಕ್ಕೆ – ಸೂರ್ಯ ಚಂದ್ರ ನಕ್ಷತ್ರಗಳನ್ನು ಚಲಿಸುವಂತೆ ಮಾಡುವ ಪ್ರೇಮಕ್ಕೆ – ನಾನು ಅಡಿಯಾಳಾದೆ. ದೇವರೇ ನನ್ನ ರಕ್ಷಕ, ಅವನಿಚ್ಛೆಪಟ್ಟರೆ ನನಗೆ ಶಾಂತಿ ಇಲ್ಲದಿದ್ದರೆ ಇಲ್ಲ ಎನಿಸಿತು. ನನ್ನ ಕೋಣೆಯ ಏಕಾಂತದಲ್ಲಿ ನಾನು ಬೇಡುತ್ತಿದ್ದೆ, 'ದೇವ, ನಿನಗಾಗಿ ನನ್ನನ್ನು ಸೃಷ್ಟಿಮಾಡಿದ್ದೀಯೆ. ನಿನ್ನನ್ನು ಸೇರುವತನಕ ನನಗೆ ಶಾಂತಿ ಇಲ್ಲ' ಎಂದು.

ಈ ಮಧ್ಯೆ ಕಾಲೇಜಿನ ನನ್ನ ತುಂಟ ಸ್ನೇಹಿತರ ಬಗ್ಗೆ ಹಿಂದಿನ ಪ್ರೇಮ ಹೆಚ್ಚಾಯಿತು. ಅವರಲ್ಲಿ ಬಹುಮಂದಿ ನನ್ನ ಅಂತರಂಗಕ್ಕೆ ಒಳಗಾದರು. ಜೊತೆಗೆ ನನ್ನನ್ನು ಮೆರ್ಟನ್ ಕಾಲೇಜಿನ ಪುರೋಹಿತನನ್ನಾಗಿ ನೇಮಿಸಿದರು – ವೈಕ್ಲಿಫ್ ಪೌರೋಹಿತ್ಯದ ಜೊತೆಗೆ.

ಹೀಗಿದ್ದಾಗ ನಾನು ಕ್ಯಾತೊಲಿಕ್ ಕ್ರೈಸ್ತನಾಗಿ ಪರಿವರ್ತನೆಯಾಗುತ್ತಿದ್ದುದು ಸ್ವಾಭಾವಿಕವಾಗಿಯೇ ಇತ್ತು. ಕ್ಯಾತೊಲಿಕ್ ಕ್ರೈಸ್ತನೆಂದರೆ ಪೂರ್ತಕ್ಯಾತೊಲೀಕನಲ್ಲ. ಆಂಗ್ಲೇಯ ಕ್ಯಾತೊಲಿಕನಾಗಿ ರೋಮಿನ ಕ್ಯಾತೊಲಿಕನಾಗುವುದರಲ್ಲಿ ನನಗೇನೂ ಅಭ್ಯಂತರವಿರಲಿಲ್ಲ. ಆದರೆ ಅದು ನನ್ನ ತಾಯಿಗೆ ಅಷ್ಟು ಒಗ್ಗುತ್ತಿರಲಿಲ್ಲ. ಆಂಗ್ಲೇಯ ಕ್ಯಾತೊಲಿಕ್ ಪಂಥದಲ್ಲಿ ಇಂಗ್ಲೆಂಡಿನ ಚರ್ಚು ಒದಗಿಸಲಾರದ ರಾಗ ಹಾಗೂ ಸೌಂದರ್ಯಗಳು ಮತ್ತು ಒಂದು ಬಗೆಯ ಅಧ್ಯಾತ್ಮ ಇದ್ದುವು.

ನನ್ನ ಮೊಟ್ಟಮೊದಲಿನ ತಪ್ಪೊಪ್ಪಿಕೆ ಮೆಟ್ರನ್ ಕಾಲೇಜಿನಲ್ಲಿ ಗ್ರೀನ್ ಅವರ ಮುಂದೆ ಆಯಿತು. ತಪ್ಪೊಪ್ಪಿಕೆಗೆ ಧೈರ್ಯ ಸಾಲದೆ, ಅದಕ್ಕೆ ಮುನ್ನ ಕೋಣೆಯೊಳಕ್ಕೆ ಹೋಗಿ ಕ್ರೈಸ್ತ ಸಂಸ್ಕಾರದಲ್ಲಿ ಉಪಯೋಗಿಸುವ ಅರ್ಧ ಸೀಶೆ ಮದ್ಯವನ್ನು ಕುಡಿದು, ಅಲ್ಲಿಯವರೆಗಿನ ಪಾಪಜೀವನದ ವಿಮರ್ಶೆಗೆ ಸಿದ್ಧನಾಗಿ ಹೋದೆ. ಅದನ್ನು ಈಗ ನೆನೆಸಿಕೊಂಡರೆ ಆಗ ಹೇಳಬೇಕಾದ್ದು ಎಷ್ಟು ಕಡಮೆ ಇತ್ತು ಎಂದು ಅಚ್ಚರಿಯಾಗುತ್ತದೆ.

ಇದೆಲ್ಲದರ ಪರಿಣಾಮವೇನಾಯಿತೆಂದರೆ, ನಾನು ಆಂಗ್ಲೊ ಕ್ಯಾತೊಲಿಕ್ (Anglo Catholic) ಚಳುವಳಿಗೆ ಮುಖ್ಯ ವಿರೋಧವಾದ ಸಂಸ್ಥೆಯ ಮುಖ್ಯ ಅಧಿಕಾರಿಯಾಗಿರುವುದು ಕಷ್ಟವಾಯಿತು. ನಾನು ಮತಧರ್ಮಶಾಸ್ತ್ರವನ್ನು ಒಂದು ದೃಷ್ಟಿಕೋನದಿಂದ ಬೋಧಿಸಬೇಕಾಗಿತ್ತು; ವ್ರತಾಚರಣೆ ಮತ್ತು ಆರಾಧನೆ, ತಪ್ಪೊಪ್ಪಿಕೆ, ಮೇರಿ ಕನ್ಯೆಯ ವಿಗ್ರಹ ಪೂಜೆ ಮತ್ತು ರೋಮನ್ ಚರ್ಚಿನ ಮತೀಯ ವಿಚಾರಕ್ಕೆ ಸಂಬಂಧಪಟ್ಟ ಇತರ ವಿಧಿಗಳಿಗೆ ವಿರೋಧವಾಗಿ ಹೇಳಬೇಕಾಗಿತ್ತು. ಹೀಗಾಗಿ ನಾನು ಅಲ್ಲಿರುವುದು ಅಸಾಧ್ಯವೆಂದು ಒಂದು ವರ್ಷದೊಳಗೆ ಸ್ಪಷ್ಟವಾಯಿತು.

೧೯೨೭ನೆಯ ಬೇಸಗೆ ಕಾಲದಲ್ಲಿ ನಮ್ಮ ಕಾಲೇಜಿನ ಪ್ರಿನ್ಸಿಪಾಲರು ಪ್ಯಾಲೆಸ್ಟೈನಿಗೆ ಒಂದು ಯಾತ್ರೆ ಏರ್ಪಡಿಸಿದರು. ಉಪಾಧ್ಯಾಯರೂ ವಿದ್ಯಾರ್ಥಿಗಳೂ ಅಲ್ಲಿಗೆ

ಹೋಗಿ, ಒಂದೆರಡು ತಿಂಗಳು ತಂಗಿ, ಬೈಬಲನ್ನೂ ಅದರ ಇತಿಹಾಸವನ್ನೂ ಅದು ಹುಟ್ಟಿದ ಸ್ಥಳದಲ್ಲೇ ತಿಳಿಯಬೇಕೆಂಬುದು ಆ ಯಾತ್ರೆಯ ಉದ್ದೇಶವಾಗಿತ್ತು. ಇಡೀ ಒಂದು ವರ್ಷ ಆ ಯಾತ್ರೆಗಾಗಿ ಆಸೆಪಟ್ಟು ಕಾಯುತ್ತಿದ್ದೆ. ಆದರೆ ಈಗ ಅದರ ಉಪಯೋಗ ಪಡೆಯುವುದು ಸೂಕ್ತವಲ್ಲವೆನಿಸಿತು. ಪ್ಯಾಲೆಸ್ಟೈನಿಗೆ ಹೋಗಿಬಂದ ಮೇಲೆ ರಾಜೀನಾಮೆ ಕೊಡುವ ಬದಲು ಹೋಗುವುದಕ್ಕೆ ಮುನ್ನವೇ ಕೊಡುವುದು ಧರ್ಮವೆಂದು ಭಾವಿಸಿದೆ. ಪ್ರಿನ್ಸಿಪಾಲರನ್ನು – ಅವರ ಹೆಸರು ಗ್ರಹಾಂಟ್ರಾನ್ ಎಂದು – ಭೇಟಿಮಾಡಲು ಹೋದೆ. ಆ ಬೇಟಿ ಕಹಿಯಾಗಿತ್ತು. ವೇಶ್ಯೆಯ ಮನೆಗೆ ಹೋಗಿ ಅಪರಾಧ ಮಾಡಿದವರಿಗೆ ಹೇಳುವಂತೆ ಅವರು ನನ್ನನ್ನು ಕುರಿತು, 'ನೀವು ತಪ್ಪು ಒಪ್ಪಿಕೊಳ್ಳುತ್ತೀರೆಂದು ಅನೇಕ ದಿನಗಳಿಂದ ಸಂದೇಹವಿದ್ದೇ ಇತ್ತು' ಎಂದರು. ದೇವರು ತೋರಿಸಿದ ಬೆಳಕಿನ ಕಡೆ ದಾರಿ ಹಿಡಿದು ಸಾಗುವುದನ್ನು ನಾನು ಇಷ್ಟು ಹೊತ್ತಿಗೆ ಕಲಿತಿದ್ದೆ. ಹಾಗೆ ಮಾಡಿದರೆ ನನ್ನ ಮನೆಯವರಿಗೂ ಸ್ನೇಹಿತರಿಗೂ ವ್ಯಥೆಯನ್ನುಂಟುಮಾಡುತ್ತೇನೆಂಬುದು ಗೊತ್ತಿತ್ತು. ಅವರ ವ್ಯಥೆ ನನ್ನ ಮನಸ್ಸಿಗೂ ವ್ಯಥೆಯನ್ನುಂಟುಮಾಡುತ್ತಿತ್ತು. ಆದರೆ ಏನುಮಾಡುವುದು? ಶಾಲೆಯ ಬೇಸಗೆ ಗಡು ಮುಗಿಯುತ್ತಾ ಬಂದಾಗ ನಾನು ಕೆಲಸವಿಲ್ಲದವನಾದೆ. ತಾಯಿಯ ಮನೆಗೆ ಹೋಗಿ ಅಲ್ಲಿ ಇರತೊಡಗಿದೆ.

ಇಲ್ಲಿಯವರೆಗೂ ನನ್ನ ಜೀವನ ನೇರವಾಗಿ ಸಾಗಿತ್ತು. ಆದರೆ ವೈಕ್ಲಿಫ್‌ನಿಂದ ರಾಜೀನಾಮೆ ಕೊಟ್ಟು ಹೊರಕ್ಕೆ ಬಂದದ್ದು ಆಲೋಚನೆಗೆ ಎಡೆಕೊಟ್ಟಿತು. ನನ್ನ ಹಿಂದಿನ ಉಪಾಧ್ಯಾಯರಾದ ಗ್ರೀನ್ ಅವರು ನನಗೆ ಬುದ್ಧಿವಾದ ಹೇಳಿ, ನಾನು ಆಕ್ಸ್‌ಫರ್ಡ್‌ನಲ್ಲಿರುವ ಬದಲು ಲಂಡನ್ ಅಥವಾ ಮತ್ತೆ ಯಾವುದಾದರೂ ಕೈಗಾರಿಕಾ ನಗರದ ಹೊಲಸು ಪ್ರದೇಶದ ಬಡವರೊಡನೆ ಬಾಳಿ ಬದುಕಬೇಕೆಂದು ತಿಳಿಸಿದರು. ಆ ರೀತಿ ಮಾಡಬೇಕೆಂದು ನಾನೂ ಆಲೋಚಿಸಿದೆ. ಆದರೆ ಅದು ಆಗಲಿಲ್ಲ. ಬೇರೆ ಶಕ್ತಿಗಳು ನನ್ನ ಒಲವನ್ನು ಇಂಡಿಯಾ ಕಡೆ ತಿರುಗಿಸಿದುವು.

ನಾನು ಆಗ್ಗೆ ಆಕ್ಸ್‌ಫರ್ಡ್‌ನ್ನು ಪ್ರೀತಿಸಿದ್ದಕ್ಕಿಂತ ಹೆಚ್ಚಾಗಿ ಪ್ರಪಂಚದಲ್ಲಿ ಮತ್ತಾವುದನ್ನೂ ಪ್ರೀತಿಸಿದಂತೆ ಕಾಣಲಿಲ್ಲ. ನನಗೆ ಬೇಕಾದುದೆಲ್ಲಾ ಅಲ್ಲಿತ್ತು. ಕೇವಲ ದೈಹಿಕ ಸುಖವೊಂದೇ ನನಗೆ ಬೇಕಿರಲಿಲ್ಲ. ಸುಖವಾಗಿ ಆರಾಮವಾಗಿರುವುದೊಂದನ್ನೇ ನಾನು ಬಯಸಿರಲಿಲ್ಲ. ನನ್ನ ಮೇಲೆ ಪ್ರಭಾವ ಬೀರಿದ ಪುಸ್ತಕಗಳಲ್ಲಿ 'ಜಾನ್ ಇಂಗಲ್‌ಸೆಂಟ್' ಎಂಬ ಪುಸ್ತಕವೂ ಒಂದು. ಸತ್ಯಾನ್ವೇಷಣೆಗೆ, ವಿದ್ವತ್ ಸಂಪಾದನೆಗೆ, ಬಹು ಆಪ್ಯಾಯಮಾನವಾದ ಸ್ನೇಹಗಳಿಕೆಗೆ ಸುಂದರವಾದ ಪ್ರಕೃತಿಗೆ ಆಕ್ಸ್‌ಫರ್ಡ್‌ನಲ್ಲಿ ಅವಕಾಶವಿತ್ತು. ಆದರೂ ಅದು ನನಗೆ ತೃಪ್ತಿ ನೀಡಲಿಲ್ಲ. ಸ್ಕಾಲರ್ ಜಿಪ್ಸಿ (Scholar Gypsy) ಯನ್ನು ಕೆರಳಿಸಿದಂತೆ, ಆ ಕೆರಳುವಿಕೆಯ ಕಾರಣವಾಗಿ ಆತ ಅಡವಿಗೆ ಹೋದಂತೆ, 'ಯಾರ ಜೀವನವಿನ್ನೂ ಅನುಗೃಹೀತವಲ್ಲವೊ' ಅಂಥವರ ಕಡೆ ನನ್ನ ಮನಸ್ಸು ವಾಲುತ್ತಿತ್ತು.

ಆಗ ಮತ್ತು ಅನಂತರವೂ ನಾನು ದುಡ್ಡಿನ ಕಡೆ ಏನೇನೂ ಗಮನಕೊಟ್ಟವನಲ್ಲ. ದುಡ್ಡಿಲ್ಲ ಎಂದು ಪೇಚಾಡುವುದು ಅಷ್ಟು ಮರ್ಯಾದೆ ಅಲ್ಲ ಎಂದು ನಾವು ಭಾವಿಸುವ ರೀತಿಯಲ್ಲಿ ನಮ್ಮ ತಾಯಿ ನಮ್ಮನ್ನು ಸಾಕಿದ್ದಳು. ನಮ್ಮ ಮನೆತನ ಹೆಸರಾಂತುದೇನಲ್ಲ. ವ್ಯಾಪಾರ ಮಾಡಿದವರು ಯಾರೂ ಇರಲಿಲ್ಲ. ವ್ಯಾಪಾರಸ್ಥರ ಮಕ್ಕಳು ಎಷ್ಟೇ ಅನುಕೂಲಸ್ಥರಾಗಿದ್ದರೂ ಅಂಗಡಿ ಇಟ್ಟವರ ಮಕ್ಕಳು ಎಷ್ಟೇ ಸುಖವಾಗಿದ್ದರೂ ಅವರು ನಮ್ಮ ಸಹವಾಸಕ್ಕೆ ಯೋಗ್ಯರಲ್ಲವೆಂಬ ಭಾವನೆ ಇತ್ತು. ಸಂಸಾರ ಸಾಗಿಸಲು ತಾಯಿ ಒದ್ದಾಡುತ್ತಿದ್ದರೂ ಸುಖವೆನ್ನುವುದು ದುಡ್ಡಿನಿಂದ ಬರುವುದಿಲ್ಲ ಮತ್ತು ಕುಲೀನ ವಂಶಸ್ಥರು ಅದರ ಬಗ್ಗೆ ಆಲೋಚನೆ ಮಾಡುವುದಿಲ್ಲ ಎಂಬ ಭಾವನೆ ಇತ್ತು.

ಹೀಗಾಗಿ ನನಗೆ ಬಹುಮಾನ ಮತ್ತು ವಿದ್ಯಾರ್ಥಿವೇತನಗಳ ಮೂಲಕ ಕೈತುಂಬ ಹಣ ಬಂದರೂ ಅದು ನನ್ನ ತಲೆ ಕೆಡಿಸಲಿಲ್ಲ. ಅವುಗಳಲ್ಲಿ ಎಷ್ಟು ಸಾಧ್ಯವೋ ಅಷ್ಟನ್ನು ಮನೆಗೂ ಕೊಡುತ್ತಿದ್ದೆ. ವೈಕ್ಲಿಫ್ ಹಾಲ್‌ನ ವೈಸ್ – ಪ್ರಿನ್ಸಿಪಾಲ್ ಹುದ್ದೆಯನ್ನು ನನಗೆ ಕೊಡುತ್ತೇನೆಂದಾಗ ಸಂಭಾವನೆ ಎಷ್ಟೆಂದು ನಾನು ಕೇಳಲೇ ಇಲ್ಲ. ವಾಸ್ತವವಾಗಿ ಅದಕ್ಕೆ ಇದ್ದ ಸಂಭಾವನೆ ವರ್ಷಕ್ಕೆ ೨೦೦ ಪೌಂಡು. ಜೊತೆಗೆ ೩೦ ವಾರಗಳು ಊಟ ಮತ್ತು ವಸತಿ. ಇದು ಬಹಳ ಕಡಮೆ ಎಂದು ಕಾಣಬಹುದು. ಆದರೆ ಅದು ೧೯೨೭ರಲ್ಲಿ ಈಗಿನ ೧,೦೦೦ ರೂಪಾಯಿಗೆ ಸಮನಾಗಿತ್ತು ಎಂದು ಹೇಳಬಹುದು.

ಹೆಬ್ಬಯಕೆಗಳು ನನ್ನ ತಲೆಯಲ್ಲಿ ಹೋಗಲೇ ಇಲ್ಲ. ಇದು ವಿಚಿತ್ರವಾಗಿ ಕಂಡರೂ ವಾಸ್ತವವಾಗಿ ಮೊದಲಿನಿಂದಲೂ ಹಾಗೆಯೇ. ಮುಂದೇನು ಆಗಬೇಕೆಂಬುದಕ್ಕೆ ಈಗಿನಿಂದಲೇ ಸಿದ್ಧತೆ ಮಾಡಿಕೊಳ್ಳಬೇಕೆಂದು ನನ್ನವರು ಹೇಳಲಿಲ್ಲ. ದೇವರು ತೋರಿಸಿದ ದಾರಿಯಲ್ಲಿ ನಡೆಯುವುದೊಂದೇ ನಾವು ಮಾಡಬೇಕಾದ ಕೆಲಸವಾಗಿತ್ತು. ಹೀಗಾಗಿ ನಾನೇನು ಮಾಡಬೇಕೆಂಬುದು ಸಾಕಷ್ಟು ಸರಳವಾಗಿತ್ತು. ಇಂಡಿಯಾದ ಕಡೆ ನನ್ನ ಮನಸ್ಸು ಹೋಗಲು ಸಾಕಷ್ಟು ಕಾರಣಗಳಿದ್ದುವು. ನನ್ನ ಮನೆತನದವರಿಗೂ ಇಂಡಿಯಾಕ್ಕೂ ಬಹು ಹಳೆಯ ಸಂಬಂಧವಿತ್ತು. ಇದಕ್ಕಿಂತ ಹೆಚ್ಚಾಗಿ ನನ್ನಲ್ಲಿದ್ದ ಏನೋ ಒಂದು ಶಕ್ತಿ ನನ್ನನ್ನು ಆ ಕಡೆಗೆ ನೂಕುತ್ತಿತ್ತು.

ಕ್ಯಾತೊಲಿಕ್ ಮತವು 'ಅರ್ಪಣೆ' (Reparation) ಎಂದು ಕರೆಯಲ್ಪಡುವ ಆಧ್ಯಾತ್ಮಿಕ ಭಾವನೆಗೆ ಹೆಚ್ಚು ಬೆಲೆ ಕೊಡುತ್ತದೆ. ಪ್ರಪಂಚದ ಪಾಪಗಳಿಗೆ ಕ್ರೈಸ್ತ ಅರ್ಪಣೆ ಮಾಡಿಕೊಂಡ. ಸಂತರು ತಮ್ಮ ತಪ್ಪಿಗಾಗಿ ಮತ್ತು ಇತರರ ತಪ್ಪಿಗಾಗಿ ತಮ್ಮ ಧ್ಯಾನ ಮತ್ತು ತ್ಯಾಗದ ಮೂಲಕ ಅರ್ಪಣೆ ಮಾಡುತ್ತಾರೆ. ಅನುಕೂಲಸ್ಥರು ನಿರ್ಗತಿಕರ ಬಗ್ಗೆ ತಾವು ಮಾಡಿದ ತಪ್ಪಿಗಾಗಿ ಅರ್ಪಣೆ ಮಾಡುತ್ತಾರೆ. ಆಕ್ಸ್‌ಫರ್ಡ್‌ನ ನನ್ನ ಕೊನೆಯ ದಿನಗಳಲ್ಲಿ ಈ ಅರ್ಪಣಾ ಭಾವನೆ ನನ್ನಲ್ಲಿ ಬೇರೂರಿತು. ನನ್ನ ಪೂರ್ವಿಕರು ಇಂಡಿಯಾದಲ್ಲಿ ಹಣ ಸಂಪಾದಿಸಿದ್ದರು. ನನ್ನ ದೇಶದವರು ಇಂಡಿಯಾಕ್ಕೆ

ಹೋಗಿ ಅದನ್ನು ಶೋಷಿಸಿ ಅದರ ಮೇಲೆ ತಮ್ಮ ಆಧಿಪತ್ಯ ಸ್ಥಾಪಿಸಿದರು. ಈ ಕಾರಣ ಅದರ ಪ್ರಾಯಶ್ಚಿತ್ತಕ್ಕಾಗಿ ನಾನು ಇಂಡಿಯಾಕ್ಕೆ ಹೋಗಬೇಕೆನಿಸಿತು. ನನ್ನ ಮನೆತನದವರಲ್ಲಿ ಒಬ್ಬರಾದರೂ ಇಂಡಿಯಾದಿಂದ ತರುವುದನ್ನು ಬಿಟ್ಟು ಕೊಡುವುದಕ್ಕಾಗಿ ಅಲ್ಲಿಗೆ ಹೋಗಬೇಕೆನಿಸಿತು. ಹೋಗಿ, ಆ ಬಡ ಜನರನ್ನು ಆಳುವ ಬದಲು ಅವರ ಸೇವೆ ಮಾಡಬೇಕು ಮತ್ತು ಆ ದೇಶದಲ್ಲಿ ಐಕ್ಯವಾಗಬೇಕು ಎಂದು ಅನಿಸಿತು. ಈ ಭಾವನೆಯೇ ನನ್ನನ್ನು ಆಕ್ಸ್‌ಫರ್ಡ್‌ನಿಂದ ಬೇರ್ಪಡಿಸಲು ಮುಖ್ಯವಾದದ್ದು; ಈ ಭಾವನೆಯೇ ನನಗೊದಗಿದ ಅನೇಕ ಕಷ್ಟಗಳಿಂದ ನನ್ನನ್ನು ಪಾರುಮಾಡಿದ್ದು.

ಈ ತೀರ್ಮಾನ ಮಾಡಿದಾಗ ನನಗೆ ಅನಿಸಿತು. ನಾನು ವಿದ್ವತ್ತಿನ ಜೀವನವನ್ನು ತೊರೆದು ಕಾಣದ ಪ್ರಪಂಚಕ್ಕೆ ಹೋಗುತ್ತಿದ್ದೇನೆ ಎಂದು. ಆದರೆ ಆ ಪ್ರಪಂಚಕ್ಕೆ ಹೋದದ್ದರಿಂದ ನನಗೆಂತಹ ಮಹದಾವಕಾಶ ದೊರಕಿತು ಎಂಬುದರ ಅರಿವಾಗಲಿಲ್ಲ ಆಗ. ಸಂಶೋಧನೆಗೆ ಆಕ್ಸ್‌ಫರ್ಡ್‌ನ ಪುಸ್ತಕಗಳು ಒದಗಿಸುವುದಕ್ಕಿಂತ ಎಷ್ಟೋ ಪಟ್ಟು ಅವಕಾಶ ದೊರಕಿತು ಅದರಿಂದ. ನಾವು ಇನ್ನೂ ಅರಿಯದ ಎಷ್ಟೋ ಮಾನವರನ್ನು ನೋಡಿ ಅವರ ಜೀವನವನ್ನು ಅಭ್ಯಾಸಮಾಡುವ ಸದವಕಾಶ ಸಿಕ್ಕಿತು – ನಾನೇ ನನ್ನ ಮೇಲೆ ಹಾಕಿಕೊಂಡ ವನವಾಸದಿಂದ, ಹದಿನಾಲ್ಕು ವರ್ಷಗಳ ನಂತರ ನಾನು ನನ್ನ ವನವಾಸದಲ್ಲಿ ಮಾಡಿದ ಕೆಲಸಕ್ಕೆ ಆಕ್ಸ್‌ಫರ್ಡ್ ನನಗೆ ಡಿ.ಎಸ್.ಸಿ. ಕೊಟ್ಟು ಗೌರವಿಸಿತು.

ನಾನು ಮೊದಲಿಗೆ ಆಕ್ಸ್‌ಫರ್ಡ್‌ಗೆ ಹೋದಾಗ ನನ್ನ ಸಂಬಂಧಿಕರು ಇಂಡಿಯಾದ ಬಗ್ಗೆ ಹೇಳುತ್ತಿದ್ದ ವಿಷಯಗಳಲ್ಲದೆ ಬೇರೇನೂ ತಿಳಿದಿರಲಿಲ್ಲ. ಇಂಡಿಯಾದವರು ಅನಾಗರಿಕ ಜನಾಂಗದವರು, ತಮ್ಮನ್ನು ತಾವೇ ಆಳಿಕೊಳ್ಳುವ ಶಕ್ತಿ ಇಲ್ಲದವರು, ಆದ್ದರಿಂದ ಅವರನ್ನು ಎಲ್ಲಿಡಬೇಕೋ ಅಲ್ಲಿಡಬೇಕು – ಎಂಬೀ ಭಾವನೆಗಳಿದ್ದುವು. ನಾನು ಬೆರ್ನ್ಯಾರ್ಡ್, ಅಲುವಿಹೇರ್ ಎಂಬುವರನ್ನು ಭೇಟಿಮಾಡಿದೆ. ಅವರು ಇಂಡಿಯಾದಿಂದ ಬರದೆ ಸಿಲೋನಿನಿಂದ ಬಂದವರಾಗಿದ್ದರೂ, ಇಂಡಿಯಾದ ರಾಷ್ಟ್ರೀಯ ಚಳುವಳಿಯ ಬಗ್ಗೆ ತುಂಬಾ ಅಭಿಮಾನವುಳ್ಳವರಾಗಿದ್ದರು. ನಾನು ಇಂಡಿಯಾ ಮತ್ತು ಏಷ್ಯಾದ ಬಗ್ಗೆ ಏನು ತಪ್ಪು ತಿಳಿದುಕೊಂಡಿದ್ದೆನೋ ಅದನ್ನು ಪರಿಹಾರ ಮಾಡುವ ವ್ಯಕ್ತಿಗಳಾಗಿದ್ದರು. ಅವರು ನನಗೆ ಟಾಗೂರರ ಬರೆವಣಿಗೆಗಳ ಪರಿಚಯ ಮಾಡಿಕೊಟ್ಟರು. ಗಾಂಧೀಜಿಯವರ ಅಭಿಪ್ರಾಯಗಳೇನೆಂದು ತಿಳಿಸಿಕೊಟ್ಟರು. ಇಂಡಿಯಾದ ತತ್ವಶಾಸ್ತ್ರಕ್ಕೆ ಸಂಬಂಧಪಟ್ಟ ಗ್ರಂಥಗಳನ್ನು ಎರವುಕೊಟ್ಟರು. ನಿಧಾನವಾಗಿ ನನ್ನ ಇಡೀ ದೃಷ್ಟಿಯನ್ನೇ ಬದಲಾಯಿಸಿಬಿಟ್ಟರು.

ಇಂಡಿಯಾದ ರಾಷ್ಟ್ರೀಯತಾಭಾವನೆಗಳು ನನ್ನಲ್ಲಿ ಕಿಚ್ಚೆಬ್ಬಿಸಿದುವು. ಅದರಲ್ಲಿಯೂ ಗಾಂಧೀಜಿಯ ವ್ಯಕ್ತಿತ್ವ ನನ್ನ ಮನಸನ್ನಾಕರ್ಷಿಸಿತು. ಹಿಂದೂಮತದ ಅಧ್ಯಾತ್ಮ ರಹಸ್ಯ ನನ್ನ ಗಮನವನ್ನು ಸೆಳೆಯಿತು. ನನಗೆ ಇಂಡಿಯಾದಿಂದ ಬಂದ ವಿದ್ಯಾರ್ಥಿಗಳ

ಪರಿಚಯ ಅಷ್ಟಿರಲಿಲ್ಲ. ಪರಿಚಯವಾಗಿದ್ದವರಲ್ಲಿ ಜಯಪಾಲ್ ಸಿಂಗ್ ಎಂಬುವರೊಬ್ಬರಿದ್ದರು. ಅವರು ಆಗಲೇ ಹೆಸರಾಂತ ಜಟ್ಟಿ ಎನಿಸಿಕೊಂಡಿದ್ದರು. ಮುಂದೆ ಅವರು ಇಂಡಿಯಾದ ಜೀವನದಲ್ಲಿ ಪ್ರಮುಖ ಪಾತ್ರ ವಹಿಸಬಲ್ಲ ವ್ಯಕ್ತಿಯಾಗಿದ್ದರು.

ಬೇರೆ ಶಕ್ತಿಗಳು ಇಂಡಿಯಾದ ಬಗ್ಗೆ ನನ್ನ ಆಸಕ್ತಿಯನ್ನು ಬಲಪಡಿಸಿದುವು. ನಾನು ಉಪಾಧ್ಯಾಯನಾಗಿರುವಾಗ ಆಕ್ಸ್‌ಫರ್ಡಿಗೆ ಸಾಧು ಸುಂದರ್‌ಸಿಂಗ್ ಎಂಬ ಕ್ರೈಸ್ತ ಸನ್ಯಾಸಿ ಬಂದು ನಮ್ಮ ಮೇಲೆ ಮಹತ್ಪರಿಣಾಮವನ್ನುಂಟುಮಾಡಿದ್ದರು. ಅನಂತರ ಪ್ರೊಫೆಸರ್ ಹೀಲೆರ್ ಎಂಬುವರು ವಿಶ್ವವಿದ್ಯಾನಿಲಯಕ್ಕೆ ಬಂದು ಕೆಲವು ಉಪನ್ಯಾಸಗಳನ್ನು ಕೊಟ್ಟರು. ಯುದ್ಧ ಮುಗಿದ ನಂತರ ಆಕ್ಸ್‌ಫರ್ಡಿಗೆ ಬಂದ ಜರ್ಮನ್ ಮತಧರ್ಮಶಾಸ್ತ್ರರಲ್ಲಿ ಇವರೇ ಮೊದಲೆಂದು ಕಾಣುತ್ತೆ. ಇವರು ಸಾಧುವಿನ ಬಗ್ಗೆ ಒಂದು ಪುಸ್ತಕ ಬರೆದಿದ್ದರು. ನಾವು ಪೂರ್ವ ಮತ್ತು ಪಶ್ಚಿಮ ದೇಶಗಳ ಅಧ್ಯಾತ್ಮ ರಹಸ್ಯಗಳ ಬಗ್ಗೆ ಚರ್ಚೆ ನಡೆಸಿದೆವು. ಅನಂತರ ಫಾದರ್ ಜಾಕ್ ವಿನ್‌ಸ್ಲೋ ಬಂದಿದ್ದರು. ಇವರೇ 'ಕ್ರೈಸ್ತ ಸೇವಾ ಸಂಘ' ಎಂಬ ಆಶ್ರಮವನ್ನು ಸ್ಥಾಪಿಸಿದವರು. ಪಶ್ಚಿಮ ಇಂಡಿಯಾದಲ್ಲಿ ಅನೇಕ ವರ್ಷಗಳ ಕಾಲ ಮಿಷನರಿಯಾಗಿ ಕೆಲಸ ಮಾಡಿದ ಇವರು ಅನಂತರ ಆ ಕೆಲಸ ಬಿಟ್ಟು, ಇಂಡಿಯಾದ ರಾಷ್ಟ್ರೀಯತೆ, ಅದರ ಸಂಸ್ಕೃತಿ ಮತ್ತು ಅಲ್ಲಿಯ ಬಡಜನರಲ್ಲಿ ಹೆಚ್ಚು ಆಸಕ್ತಿ ವಹಿಸಲಾರಂಭಿಸಿದರು. ಅವರು ಅದಕ್ಕೆ ಅರ್ಹರೂ ಆಗಿದ್ದರು. ಇಂಡಿಯಾದ ಅಧ್ಯಾತ್ಮರಹಸ್ಯಗಳನ್ನು ಅರಿವುಮಾಡಿ ಕೊಂಡಿದ್ದರಲ್ಲದೆ, ಅವನ್ನು ಆಚರಿಸುತ್ತಲೂ ಇದ್ದರು. ಅವರು ದೊಡ್ಡ ಕ್ರೈಸ್ತ ಮುಂದಾಳಾಗಬಹುದಾಗಿತ್ತು. ಆದರೆ ಹಾಗೆ ಮಾಡದೆ ಬೇರೊಂದು ಮಾರ್ಗ ಹಿಡಿದರು. ನನ್ನನ್ನೂ ಇತರರನ್ನೂ ಆಕರ್ಷಿಸಿ, ಕ್ರೈಸ್ತಮತವು ನಿಜವಾದ ಪೌರ್ವಾತ್ಯಭಾವನೆಗಳಿಂದ ಉದ್ದೀಪನಗೊಂಡರೆ ಏನಾಗಬಹುದೆಂಬುದನ್ನು ತೋರಿಸಿಕೊಟ್ಟರು.

ಈ ಹೊಸ ಭಾವನೆಯಿಂದ ಉತ್ತೇಜಿತನಾದ ನಾನು ಇಂಗ್ಲೆಂಡ್ ಬಿಡುವ ಮುನ್ನ ಹಿಂದೂ ತತ್ವಶಾಸ್ತ್ರ ಹಾಗೂ ಧರ್ಮವನ್ನು ಅಭ್ಯಾಸಮಾಡಿದೆ. ಅಲ್ಲದೆ ಕ್ರೈಸ್ತಶಿಲ್ಪಕಲೆ, ತತ್ವಶಾಸ್ತ್ರ, ಅಧ್ಯಾತ್ಮಶಾಸ್ತ್ರ ಮತ್ತು ಅರ್ಚನೆಗಳನ್ನು ಪೌರ್ವಾತ್ಯ ರೀತಿಗೆ ಹೇಗೆ ಅಳವಡಿಸಬಹುದೆಂಬುದನ್ನು ಅರಿತುಕೊಂಡೆ.

ಕ್ರೈಸ್ತ ಮತವನ್ನು ಉದ್ದೀಪನಗೊಳಿಸುವ ಸಾಧ್ಯಾಸಾಧ್ಯತೆಗಳನ್ನು ತಿಳಿಯಲು ಕ್ರೈಸ್ತ ಸೇವಾ ಸಂಘ ಸ್ಥಾಪನೆಯಾಗಿತ್ತು. ಇದೇನೂ ಹೊಸದಲ್ಲ. ಇಂಡಿಯಾಕ್ಕೆ ಹೋದ ಮೊಟ್ಟ ಮೊದಲನೆಯ ಇಂಗ್ಲಿಷರಲ್ಲಿ ಒಬ್ಬರಾದ ಜೊಸ್ಯೂಯಿಟ್ ಪಾದ್ರಿ ಫಾದರ್ ಸ್ಟಿವನ್ಸ್ ಅವರು ಬೈಬಲನ್ನು ಪುರಾಣದೋಪಾದಿಯಲ್ಲಿ ಬರೆದಿದ್ದರು. ಅಬ್ಬೆ ಡೂಬ್ವಾ ಎಂಬುವರು ಇಂಡಿಯಾದವರಂತೆ ಬಟ್ಟೆ ಹಾಕಿಕೊಂಡು ಅವರಂತೆಯೇ ಜೀವನ ನಡೆಸುತ್ತಿದ್ದರು. ಕ್ರೈಸ್ತ ತತ್ವದ ಸತ್ಯತೆಯನ್ನು ಸಿದ್ಧಪಡಿಸಲು ಅವರು ವೇದಗಳಿಗೆ ಒಂದು ಅನುಬಂಧವನ್ನು ಬರೆದಿದ್ದರಂತೆ, ಇತ್ತೀಚಿನ ವಿಚಾರ

ಹೇಳಬೇಕೆಂದರೆ, ಹೆಸರಾಂತ ಬೊಂಬಾಯಿ ಇತಿಹಾಸಕಾರ ಫಾದರ್ ಹೆರಾಜ್ ಅವರು ಚರ್ಚುಶಿಲ್ಪವನ್ನು ಹೇಗೆ ಇಂಡಿಯಾಶಿಲ್ಪಕ್ಕೆ ಬದಲಿಸಬಹುದೆಂಬ ಬಗ್ಗೆ ಕೆಲಸ ಮಾಡಿದರು. ಇವೆಲ್ಲವನ್ನೂ ಮಾಡಬೇಕೆಂಬ ಉದ್ದೇಶದಿಂದಲೇ ಕ್ರೈಸ್ತ ಸೇವಾ ಸಂಘ ಹೊರಟಿತು. ಆದರೆ ಅದು ಹೆಚ್ಚು ಕಾಲ ಇರಲಿಲ್ಲವಾದ್ದರಿಂದ ಆ ದಿಶೆಯಲ್ಲಿ ಸಾಕಷ್ಟು ಕೆಲಸ ಸಾಗಲಿಲ್ಲ.

ನನ್ನ ಆತ್ಮೀಯ ಗೆಳೆಯರಲ್ಲಿ ಇಬ್ಬರಾದ ಆಲಿವರ್ ಫೀಲ್ಡಿಂಗ್ – ಕ್ಲಾರ್ಕ್ ಮತ್ತು ಆಲ್ಗಿ ರೊಬರ್ಟ್‌ಸನ್ ಅವರುಗಳು ವಿನ್‌ಸ್ಲೋ ಅವರ ಯೋಜನೆಯಿಂದ ಆಕರ್ಷಿತರಾಗಿ ಪೂನಾದ ಬಳಿ ಸ್ಥಾಪಿತವಾಗಿದ್ದ ಕ್ರೈಸ್ತ ಸೇವಾ ಸಂಘವನ್ನು ಸೇರುತ್ತೇವೆಂದು ಹೇಳಿದರು. ದೀರ್ಘವಾಗಿ ಆಲೋಚನೆಮಾಡಿದ ಮೇಲೆ ನಾನೂ ಅವರನ್ನು ಸೇರುವುದೆಂದು ತೀರ್ಮಾನಿಸಿದೆ.

ಕಾಣದ ದೇಶಕ್ಕೆ ಹೋಗುವುದು ಆಕ್ಸ್‌ಫರ್ಡ್ ಬಿಡುವಷ್ಟು ಸುಲಭವಾಗಿರಲಿಲ್ಲ. ಸಂನ್ಯಾಸವನ್ನು ಸ್ವೀಕರಿಸಿ ಭಿಕ್ಷುಕನಂತೆ ಜೀವಿಸಬೇಕಾಗಿತ್ತು; ಬ್ರಹ್ಮಚರ್ಯವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾಗಿತ್ತು. ಮೂರು ವರ್ಷ ನಾವು ಮೂವರೂ ಹಾಗೆಯೇ ಜೀವನ ನಡೆಸಿದೆವು. ಅನಂತರ ಆಲ್ಗಿ ಮಾತ್ರ ತಮ್ಮ ಜೀವಮಾನವೆಲ್ಲ ಸಂನ್ಯಾಸ ಜೀವನವನ್ನು ನಡೆಸುತ್ತಾ ಹೋದರು. ಆದರೆ ನಾನು ಮತ್ತು ಆಲಿವರ್ ಕಾರಣಾಂತರಗಳಿಂದ ಅದನ್ನು ಬಿಡಬೇಕಾಯಿತು.

ಅದೃಷ್ಟವಶಾತ್ ನನ್ನ ತಾಯಿ ಅಡ್ಡಬರಲಿಲ್ಲ. ಸಂನ್ಯಾಸಿತನದ ಬಗ್ಗೆ ಆಕೆಗೆ ಇಷ್ಟವಿರಲಿಲ್ಲದಿದ್ದರೂ ಪರದೇಶಕ್ಕೆ ಹೋಗುವುದಕ್ಕೆ ಆಕೆಯ ಅಭ್ಯಂತರವಿರಲಿಲ್ಲ. ತಂಗಿ ಎಲ್ಡಿತಳು ನನ್ನ ತೀರ್ಮಾನಕ್ಕೆ ಸಂಪೂರ್ಣ ಬೆಂಬಲವಿತ್ತಳು. ಗಾಂಧೀಜಿ ಹೇಳುತ್ತಿದ್ದುದು ಬ್ರಿಟನ್ನಿನ ರಾಜಕಾರಣಿಗಳಿಗೂ ಕಂದಾಚಾರದ ಬಿಷಪ್ಪರುಗಳಿಗೂ ಕಿರಿಕಿರಿಯನ್ನುಂಟು ಮಾಡುತ್ತಿದ್ದು ಉದಾಹರಣೆಗೆ, ನಮ್ಮ ತಾಯಿ ಒಂದು ರೀತಿಯಲ್ಲಿ ಕ್ರೈಸ್ತಮತಕ್ಕೆ ವಿರೋಧವಾದ ಮತ್ತು ಅದರ ಟೀಕೆ ಮಾಡುತ್ತಿದ್ದ ಗಾಂಧೀಜಿಯ ಬಗ್ಗೆ ಆಸಕ್ತಿವಹಿಸುತ್ತಿದ್ದಳು. ಐದು ವರ್ಷಗಳ ನಂತರ ಗಾಂಧೀಜಿ ಇಂಗ್ಲೆಂಡಿಗೆ ದುಂಡುಮೇಜಿನ ಸಮ್ಮೇಳನಕ್ಕೆ ಬಂದಾಗ ನನ್ನ ತಾಯಿಯ ಮನೆಗೆ ಭೇಟಿಕೊಟ್ಟರು. ಆಗ ಆಕೆ ಬಹು ಸಡಗರಗೊಂಡಳು. ಗಾಂಧೀಜಿಯ ಕಾರ್ಯದರ್ಶಿ ಮಹದೇವ ದೇಸಾಯಿ ಅವರೊಡನೆ ನನ್ನ ತಾಯಿ ದೀರ್ಘವಾದ ಪತ್ರವ್ಯವಹಾರ ನಡೆಸುತ್ತಿದ್ದಳು. ಇಂಡಿಯಾದ ಹೊಸ ರಾಜಕೀಯ ತತ್ವಕ್ಕೆ ಆಕರ್ಷಿತರಾದ ಅನೇಕ ಜನರ ಮಾದರಿಯಂತಿದ್ದಳು ನನ್ನ ತಾಯಿ ಎಂದು ಹೇಳಬಹುದು.

ಗಾಂಧೀಜಿ ನನ್ನ ತಾಯಿಯ ಮೇಲೆ ಎಂಥ ಪರಿಣಾಮವನ್ನುಂಟು ಮಾಡಿದ್ದರೆಂಬುದನ್ನು ಅನೇಕ ವರ್ಷಗಳ ನಂತರ ಅವರ ಕೊಲೆಯಾದಾಗ ಆಕೆ ನನಗೆ ಬರೆದ ಪತ್ರದಿಂದ ತಿಳಿಯಬಹುದು : 'ಈ ನಿರ್ಭಾಗ್ಯ, ದುಃಖಮಯ ಹಾಗೂ ಕಷ್ಟಕರವಾದ ಪ್ರಪಂಚದಿಂದ ಎಂಥಾ ಆತ್ಮವೊಂದು ಕಣ್ಮರೆಯಾಯಿತು !

ಆ ಮಹಾತ್ಮನಲ್ಲಿ ಎಷ್ಟೊಂದು ತ್ಯಾಗ, ಎಷ್ಟೊಂದು ಸಂಯಮ! ಎಷ್ಟೊಂದು ಧೈರ್ಯ ಮತ್ತು ಎಂತಹ ಪ್ರೇಮ! ಅವನ ಆ ಪ್ರೇಮದ ನೋಟವನ್ನು, ನಿಷ್ಕಪಟ ಪ್ರೀತಿಯನ್ನು ನಾನೆಂದೂ ಮರೆಯಲಾರೆ. ಅವನನ್ನು ನಂಬಿದ ಆ ಜನರ ದುಃಖವೆಷ್ಟಿರಬಹುದೆಂದು ನೆನೆಸಿಕೊಂಡರೆ ನನ್ನ ಎದೆ ಒಡೆಯುತ್ತದೆ. ಜನತೆಯ ಆ ಭವ್ಯ ಮುನ್ನಡೆಯಲ್ಲಿ ಅವರಿಗಾಗುವ ನಿರಾಶೆಯನ್ನು ನೆನೆಸಿಕೊಂಡರೆ ನನಗೆ ದಿಗ್ಭ್ರಮೆಯಾಗುತ್ತದೆ ; ಎಂಥ ಕ್ರೂರ ಕಷ್ಟವೊದಗಿತು ಎಂದೆನಿಸುತ್ತದೆ.'

ಗಾಂಧೀಜಿಯ ಕೊಲೆಯ ಸುದ್ದಿ ಕೇಳಿದಾಗ ತನಗೆ ಹೇಗಾಯಿತೆಂದು ನನ್ನ ತಾಯಿ ವರ್ಣಿಸಿ ಬರೆದಿದ್ದಳು ಈ ಕಾಗದದಲ್ಲಿ. ಆಕೆ ಊಟಕ್ಕೆ ಹೋಗಿದ್ದಾಗ ಯಾರೋ ರೇಡಿಯೋ ಕೇಳಿ ಆ ಸುದ್ದಿಯನ್ನು ಆಕೆಗೆ ಮುಟ್ಟಿಸಿದರಂತೆ. ಸುದ್ದಿ ಕೇಳಿದ ಕೂಡಲೇ ಆಕೆ ಊಟಮಾಡುವುದನ್ನು ಬಿಟ್ಟು ಅಳುತ್ತಾ ಬಂದುಬಿಟ್ಟಳಂತೆ. 'ಅಷ್ಟೊಂದು ದುಃಖವನ್ನು, ಅಷ್ಟೊಂದು ತಲ್ಲಣವನ್ನು ನಾನೆಂದೂ ಅನುಭವಿಸಿರಲಿಲ್ಲ. ಇಂದು ಬಾಪುವನ್ನು ಪ್ರಪಂಚದ ಮಹೋನ್ನತ ವ್ಯಕ್ತಿಯೆಂದು ಕರೆಯುತ್ತಾರೆ ಅಂಥವನಿಗೆ ಎಂಥ ಉಡುಗೊರೆ!' ಎಂದು ಬರೆದಳು ನನ್ನ ತಾಯಿ.

ಕ್ರೈಸ್ತ ಸೇವಾ ಸಂಘವನ್ನು ಸೇರಬೇಕೆಂದು ತೀರ್ಮಾನಿಸಿದ ಮೇಲೆ ನಾನು ಇಂಡಿಯಾಕ್ಕೆ ಹೊರಡುವ ಸಿದ್ಧತೆಯಲ್ಲಿ ತೊಡಗಿದೆ. ಆ ಸಂಘದಿಂದ ನನಗೆ ಯಾವ ಧನ ಸಹಾಯವೂ ದೊರಕಲಿಲ್ಲ. ವಾಸ್ತವವಾಗಿ ಹಣ ಕೊಡಕೂಡದೆಂಬುದೇ ಆ ಸಂಘದ ಧ್ಯೇಯವಾಗಿತ್ತು. ಹಣ ಬೇಕಿಲ್ಲವೆಂದೇ ಅವರು ಹೇಳುತ್ತಿದ್ದರು. ಸ್ವಂತ ಆಸ್ತಿ ಯಾವುದೂ ಇರಕೂಡದೆಂಬ ಧ್ಯೇಯವನ್ನು ಹೊಂದಿದ್ದ ಆ ಸಂಘದಲ್ಲಿ ಯಾರ ಬಳಿಯಾದರೂ ಹಣ ಇದ್ದರೆ ಅದನ್ನು ಆ ಸಂಘಕ್ಕೆ ವಹಿಸಿಕೊಡಬೇಕಾಗಿತ್ತು. ನಾನು ಆಕ್ಸ್‌ಫರ್ಡ್ ಬಿಟ್ಟಾಗ ನನ್ನಲ್ಲಿ ಬಿಡಿಗಾಸೂ ಇರಲಿಲ್ಲ. ಸಂಘವೇ ನಮಗೆ ಮೂರನೆಯ ತರಗತಿ ಟಿಕೇಟ್ ಕೊಂಡುಕೊಟ್ಟಿತು.

ರೈಲಿನಲ್ಲಿ ಯೂರೋಪು ಹಾದು, ಪ್ರಯಾಣಿಕರ ಫ್ರೆಂಚ್ ಹಡಗೊಂದರಲ್ಲಿ ಜಿನೋವದಿಂದ ಕೊಲಂಬೋಕ್ಕೆ ಹೊರಟೆವು. ಹಡಗು ಹತ್ತುವ ಮುನ್ನ ಮೂರನೆಯ ತರಗತಿಯ ಪ್ರಯಾಣಿಕರಿಗೆ ಮೇಹಜಾಡ್ಯವಿದೆಯೆ ಇಲ್ಲವೆ ಎಂದು ಪರೀಕ್ಷೆಮಾಡಿದರು. ಏಳೆಂಟು ಜನರನ್ನು ಕುರಿ ತುಂಬಿದ ಹಾಗೆ ಹಡಗಿನ ಕೋಣೆಗಳಿಗೆ ತುಂಬಿದರು. ನಮಗಂತೂ ತುಂಬ ಕಷ್ಟವಾಯಿತು. ಆದರೆ ಕಷ್ಟವನ್ನು ಅನುಭವಿಸಲು ಹೊರಟಿರುವ ಯುವಕರಾದ ನಾವು ಅದನ್ನು ನಗುಮುಖದಿಂದ ಸಹಿಸಬೇಕಾಗಿತ್ತು. ಸಹಿಸಿದೆವು. ಈ ರೀತಿಯ ಉತ್ಸಾಹದ ಅಲೆಗಳ ಮೇಲೆ ನಮ್ಮ ಪ್ರಯಾಣ ಸಾಗಿತು.

೩. ಸನ್ಯಾಸಿಗಳು ಮತ್ತು ಸತ್ಯಾಗ್ರಹಿಗಳು

೧೯೨೬ರ ನವೆಂಬರ್ ೩೦ನೆಯ ತಾರೀಖು ನಾವು ಕೊಲಂಬೋ ತಲುಪಿದೆವು. ಅಲ್ಲಿ ಕೆಲವು ದಿನ ನಿಂತು ಕ್ಯಾಂಡಿ ನೋಡಿಕೊಂಡು ಮಲಬಾರಿಗೆ ಹೋದೆವು. ಅಸಂಖ್ಯಾತ ಯೋಗಿಗಳ, ವೇದಾಂತಿಗಳ ಹಾಗೂ ಸತ್ಯಾನ್ವೇಷಕರ ಪಾದಧೂಳಿಯಿಂದ ಪವಿತ್ರವಾದ ಇಂಡಿಯಾದ ನೆಲದ ಮೇಲೆ ಕಾಲಿಟ್ಟಾಗ ನನಗೊಂದು ರೀತಿಯ ರೋಮಾಂಚನವಾಯಿತು. ಡಿಸೆಂಬರ್ ತಿಂಗಳ ಆರಂಭದಲ್ಲಿ ಮಲಬಾರ್ ಸೊಗಸಾಗಿ ಕಾಣುತ್ತದೆ – ಹೊಚ್ಚ ಹೊಸದಾಗಿ, ಹಚ್ಚಹಸುರಾಗಿ. ಇಂಡಿಯಾ ಎಂದರೆ ಕೊಳಕು ಹೊಲಸು ಬಡತನ ಹಾಗೂ ಅಜ್ಞಾನಗಳ ಕೊಂಪೆಯೆಂದು ಓದಿದ್ದೆ. ಆದರೆ ನಾನು ನೋಡಿದ್ದು ನನಗೆ ಆಶ್ಚರ್ಯವನ್ನುಂಟು ಮಾಡಿತು. ಸ್ವಚ್ಛತೆ, ಹೊಟ್ಟೆತುಂಬ ಉಂಡ ಮೈತುಂಬ ಬಟ್ಟೆ ಹೊದ್ದ ಜನ, ಶಾಲೆಗೆ ಹೋಗುತ್ತಿದ್ದ ಸಾವಿರಾರು ಬಾಲಕ ಬಾಲಕಿಯರು – ಇವು ನಾನು ಕಂಡದ್ದು. ಆಮೇಲೆ ಬಡತನವನ್ನು ಸಾಕಷ್ಟು ನೋಡಿದೆ. ಆದರೆ ಮೊಟ್ಟಮೊದಲಿಗೆ ಅದು ನನ್ನ ಕಣ್ಣಿಗೆ ಬೀಳಲಿಲ್ಲ.

ಇಲ್ಲಿಯ ಗುಡ್ಡಗಾಡಿನಲ್ಲಿ ಇದ್ದ ಸಣ್ಣ ಆಶ್ರಮವೊಂದಕ್ಕೆ ಹೋಗಿಬರುವ ಉದ್ದೇಶದಿಂದ ನಾವು ಇಲ್ಲಿ ತಂಗಬೇಕಾಯಿತು. ಆ ಆಶ್ರಮವನ್ನು ಸ್ಥಾಪಿಸಿದ ಬ್ರಿಷಪ್ಪರ ಹೆಸರು ಮಾರ್ ಐವಾನಿಯೋಸ್ ಎಂದು. ಅವರು ಅಪೂರ್ವ ಶ್ರದ್ಧಾವಂತ ಮನುಷ್ಯ. ಆಶ್ರಮವನ್ನು ಬಲು ಸರಳವಾಗಿಯೂ ಶಿಸ್ತಿನಿಂದಲೂ ನಡೆಸಿಕೊಂಡು ಬರುತ್ತಿದ್ದರು. ಅಲ್ಲಿದ್ದ ಸಂನ್ಯಾಸಿಗಳ ಆನಂದವನ್ನು ನೋಡಿ ನಾವು ತುಂಬಾ ಮೆಚ್ಚಿದೆವು. ಇದೇ ತರಹ ಜೀವನವನ್ನೇ ನಾನೂ ಆಶಿಸಿದ್ದು ಮತ್ತು ನಿರೀಕ್ಷಿಸಿದ್ದು. ನನಗೆ ಮುಂದೊದಗಿದ ವಿಚಿತ್ರ ಅನುಭವಗಳಿಗೆ ನಾನು ಸಿದ್ಧನಾಗಿರಲಿಲ್ಲ. ನಾನು ಇಲ್ಲಿಗೆ ಬಂದಾಗ ರಾಜಕೀಯವೆಂದರೆ ನನಗೆ ಆಗುತ್ತಿರಲಿಲ್ಲ. ಆದರೆ ಅದು ಅನಂತರ ನನ್ನಲ್ಲಿ ಬಹು ಬಗೆಯ ಆಸಕ್ತಿಯನ್ನು ಕೆರಳಿಸುವುದೆಂದು ಭಾವಿಸಿರಲಿಲ್ಲ. ಗಾಂಧೀಜಿಯವರನ್ನು ನೋಡಿ ಅವರೊಡನೆ ಮಾತಾಡುವೆನೆಂದು ನೆನೆಸಿರಲಿಲ್ಲ. ಇಂಡಿಯಾದ ಮುಖಂಡರನ್ನು ಅಷ್ಟು ಸುಲಭವಾಗಿ ಭೇಟಿಯಾಗಬಹುದೆಂದು ನಾನು ಊಹಿಸಿರಲಿಲ್ಲ. ಮಲಬಾರಿನ ಸುತ್ತ ಮುತ್ತ ಇಂಡಿಯಾದ ಗಿರಿಜನರಿದ್ದರೂ ಅವರ ವಿಷಯ ಗೊತ್ತಿರಲಿಲ್ಲ. ಸತ್ಯ, ಪ್ರೇಮ ಅಥವಾ ಸೌಂದರ್ಯಗಳಿಗಿಂತ ಒಳ್ಳೆಯತನಕ್ಕೆ ಹಿರಿಯಸ್ಥಾನ ಸಿಕ್ಕಿ, ಅದು ನನ್ನ ಮುಖ್ಯ ಉದ್ದೇಶವಾದದ್ದು ನನ್ನ ಜೀವನದಲ್ಲಿ ಇದು ಒಂದೇ ಸಲವೆಂದು ಕಾಣುತ್ತದೆ.

ನಾವು ಮಲಬಾರಿನಿಂದ ಪೂನಾಕ್ಕೆ ರೈಲಿನಲ್ಲಿ ಹೋದೆವು. ಪೂನಾದ ಹೊರಗಡೆ ವ್ಯವಸಾಯ ಕಾಲೇಜಿಗೆ ಸಮೀಪದಲ್ಲಿದ್ದ ಕ್ರೈಸ್ತ ಸೇವಾ ಸಂಘಕ್ಕೆ ಹೋದಾಗ ಪಾದರ್ ವಿನ್‌ಸ್ಲೋ ಮತ್ತು ಕೆಲವು ಇಂಡಿಯಾದ ಸೋದರರು ನಮ್ಮನ್ನು ಸ್ವಾಗತಿಸಿದರು. ನಮ್ಮ ವಿಚಿತ್ರ ಜೀವನ ಇಲ್ಲಿ ಆರಂಭವಾಯಿತು. ಆ ವೇಳೆಯಲ್ಲಿ ಇಂಗ್ಲಿಷಿನವರು, ಅದರಲ್ಲಿಯೂ ಪಾದ್ರಿಗಳು ಈ ರೀತಿಯ ಜೀವನ ನಡೆಸುವ ನಿರೀಕ್ಷೆ ಇರಲಿಲ್ಲ. ಆದರೂ ನಾವು ನೆಲದ ಮೇಲೆ ಮಲಗಿಕೊಳ್ಳಬೇಕಾಯಿತು. ಮೇಜು ಕುರ್ಚಿಗಳೆಂಬುವೇ ಇಲ್ಲದ್ದರಿಂದ ಎಲ್ಲವನ್ನೂ ನೆಲದ ಮೇಲೆ ಕುಳಿತೇ ಮಾಡಬೇಕಾಗಿತ್ತು. ಇದು ಪಶ್ಚಿಮ ಇಂಡಿಯಾದ ಹಿಂದೂಗಳ ಮನೆಯಲ್ಲಿದ್ದಂತೆ ಇತ್ತು. ಇಂಡಿಯಾದ ಆಹಾರವನ್ನೇ ನಾವು ಸೇವಿಸುತ್ತಿದ್ದೆವು. ದೊಡ್ಡ ಹಿತ್ತಾಳೆಯ ತಟ್ಟೆ ಮತ್ತು ನಾಲ್ಕಾರು ಸಣ್ಣ ವಾಟೆಗಳಲ್ಲಿ ಊಟ ಬಡಿಸುತ್ತಿದ್ದರು. ಕೈಯಿಂದಲೇ ಊಟಮಾಡುತ್ತಿದ್ದೆವು. ಊಟಕ್ಕೆ ಮುನ್ನ ಮತ್ತು ಅನಂತರ ತಪ್ಪದೆ ಕೈತೊಳೆಯುವ ಶಾಸ್ತ್ರ ಆಗಲೇಬೇಕಿತ್ತು. ನಾವು ಮನೆಯೊಳಕ್ಕೆ ಹೋಗಬೇಕಾದಾಗ ಅನಿವಾರ್ಯವಾಗಿ ನಮ್ಮ ಪಾದರಕ್ಷೆಗಳನ್ನು ತೆಗೆಯಬೇಕಾಗಿತ್ತು. ಸಂಘಕ್ಕೆ ಸೇರಿದ್ದವರ ಉಡುಪು ಬಿಳಿ ಖಾದಿ. ದೀಕ್ಷೆಯನ್ನು ಸ್ವೀಕರಿಸಿದ್ದವರು ಕಾವಿ ಧೋತ್ರ ಉಡಬಹುದಿತ್ತು.

ವಿನ್‌ಸ್ಲೋ ಅವರು ನುರಿತ ಬಹುಭಾಷಾಪಂಡಿತರು. ನಮ್ಮ ಸುತ್ತಮುತ್ತ ಬಳಕೆಯಲ್ಲಿದ್ದ ಮರಾಠಿ ಭಾಷೆಯನ್ನು ನಾವು ಕಲಿಯಬೇಕೆಂದು ಅವರು ಕಡ್ಡಾಯಮಾಡಿದರು. ಕಲಿಸಲು ಪೂನಾದಿಂದ ಅನೇಕ ಜನ ಪಂಡಿತರು ನಮ್ಮ ಸಂಘಕ್ಕೆ ಬರುತ್ತಿದ್ದರು. ಎಚ್. ವಿ. ಹರ್ಷೆ ಎಂಬ ಒಬ್ಬ ವೃದ್ಧ ಬ್ರಾಹ್ಮಣರು ನನಗೆ ಪಾಠ ಹೇಳಲು ಸಿಕ್ಕಿದ್ದು ನನ್ನ ಅದೃಷ್ಟ. ಸಾಂಪ್ರದಾಯಿಕವಾಗಿ ಬಂದ ಹಿಂದೂಮತಾನುಸರಣೆಯ ಅವತಾರವೋ ಎನ್ನುವಂಥ ಮನುಷ್ಯರು ಅವರು. ಮರಾಠಿ ಭಾಷೆ ಕಲಿಯತೊಡಗಿ ನಾನು ಹಿಂದೂ ಅಧ್ಯಾತ್ಮ ಹಾಗೂ ವೇದಾಂತ ವಿಚಾರಗಳನ್ನು ಅವರೊಡನೆ ಚರ್ಚಿಸುತ್ತಿದ್ದೆ. ಆರು ತಿಂಗಳಲ್ಲಿ ನಾನು ಅಧ್ಯಾತ್ಮಕ್ಕೆ ಮತ್ತು ಯೋಗಮುದ್ರೆಗಳಿಗೆ ಸಂಬಂಧಪಟ್ಟ ಮರಾಠಿ ಮತ್ತು ಸಂಸ್ಕೃತ ಪದಗಳನ್ನು ಕಲಿತೆ. ಆದರೆ ರೈಲ್ವೆ ಸ್ಟೇಷನ್ನಿಗೆ ಹೋದಾಗ ಊಟಕ್ಕೆ ಬಡಿಸಿ ಎಂದು ಹೇಳಲು ಮಾತ್ರ ಬರುತ್ತಿರಲಿಲ್ಲ.

ನಮ್ಮ ಆಂತರಿಕ ಜೀವನ ಸತತವಾದ ಸಂಕ್ಷೋಭೆ ಹಾಗೂ ಗಡಿಬಿಡಿಯಿಂದ ಕೂಡಿತ್ತು. ಆಶ್ರಮದಿಂದ ನಾವು ಹೊರಗಡೆ ಹೋದದ್ದು ೧೯೨೮ನೆಯ ಜನವರಿಯಲ್ಲಿ, ಬೊಂಬಾಯಿಯ ಪಿ.ಎ. ವಾಡಿಯಾ ಎಂಬುವರ ಅಧ್ಯಕ್ಷತೆಯಲ್ಲಿ ಬೊಂಬಾಯಲ್ಲಿ ಸ್ಥಾಪಿತವಾಗಿದ್ದ ಒಂದು ಧರ್ಮ ಸಂಸ್ಥೆಯ ಅಧಿವೇಶನ ಗಾಂಧೀಜಿಯವರ ಸಬರ್ಮತಿ ಆಶ್ರಮದಲ್ಲಿ ನಡೆಯಿತು. ಅದಕ್ಕೆ ನಾವೂ ಹೋಗಿದ್ದೆವು. ಅಲ್ಲಿಗೆ ಹೋದೆನೋ ಇಲ್ಲವೋ ನನ್ನ ಭವಿಷ್ಯದ ತೀರ್ಮಾನವಾಯಿತು. ಇಲ್ಲಿಯವರೆಗೂ ಸಹಾನುಭೂತಿಯ ಸಹಪ್ರಯಾಣಿಕನಾಗಿದ್ದವನು ಈಗ ಶಿಷ್ಯನಾಗಿಬಿಟ್ಟೆ. ಆ ವೇಳೆ ಇಂಡಿಯಾದ ರಾಷ್ಟ್ರೀಯ ಚಳುವಳಿಯು ಪ್ರಪಂಚದ ಯಾವ ರಾಜಕೀಯ

ಚಳುವಳಿಯಲ್ಲಿಯೂ ಕಾಣದಂತಹ ಶ್ರದ್ಧೆ ಹಾಗೂ ನಿಷ್ಠೆಯ ಮಟ್ಟವನ್ನು ಮುಟ್ಟಿತ್ತು. ಸಬರ್ಮತಿ ನದಿಯ ಎತ್ತರವಾದ ದಂಡೆಯ ಮೇಲೆ ಸ್ಥಾಪಿತವಾಗಿದ್ದ ಆಶ್ರಮವು ಶ್ರದ್ಧಾವಂತ ಹಾಗೂ ಬಡತನದ ಜೀವನಕ್ಕೆ ತಮ್ಮ ಬಾಳನ್ನು ಮುಡುಪಾಗಿಟ್ಟ ನೂರಾರು ಕಾಂಗ್ರೆಸ್ ಜನರಿಗೆ ಆಶ್ರಯ ನೀಡಿತ್ತು. ಇವರ ಮಧ್ಯೆ ಗಾಂಧೀಜಿ ಅಲೌಕಿಕ ಗಾಂಭೀರ್ಯ ಹಾಗೂ ಸೊಗಸಿನಿಂದ ಮೆರೆಯುತ್ತಿದ್ದರು. ಅವರ ಆ ಸೊಗಸು – ನನಗೆ ತುಂಬ ಮೆಚ್ಚಿಕೆಯಾಯಿತು, ಮೊದಲಿಗೆ ಅವರನ್ನು ಕಂಡಾಗ ಜೊತೆಗೆ ಅವರ ಆಧ್ಯಾತ್ಮಿಕ ಶಕ್ತಿ – ಆ ಬಡಕಲು ಶರೀರಕ್ಕೆ ಶಕ್ತಿಯನ್ನೂ ಆ ಸ್ಥಳಕ್ಕೆ ಪ್ರೇಮವನ್ನೂ ಕರುಣೆಯನ್ನೂ ಸಿಂಪಡಿಸಿದ ಆ ಶಕ್ತಿ – ನನ್ನ ಮನಸ್ಸನ್ನು ಆರ್ಷಿಸಿತು.

ನಾನು ಸಬರ್ಮತಿಯಲ್ಲಿ ತಂಗಿದ್ದ ಕೆಲವು ದಿನಗಳು ಅಪೂರ್ವವಾಗಿದ್ದುವು. ಇಂಡಿಯಾದ ಭೂಮಿಯಲ್ಲಿ ಇಂಡಿಯಾದವನಾಗಿ ಇದ್ದಕ್ಕಿದ್ದಂತೆ ಪುನರ್ಜನ್ಮ ತಾಳಿದಂತಾಯಿತು. ಅಲ್ಲಿ ಎಲ್ಲವೂ ಬಹು ಸ್ವಾಭಾವಿಕವಾಗಿ ಆಗುತ್ತಿದೆಯೆಂದು ಭಾಸವಾಯಿತು. ಅದು ನನ್ನ ಮೇಲೆ ಯಾವ ಪರಿಣಾಮವನ್ನುಂಟುಮಾಡುವುದೆಂದು ಆಗ ನನಗೆ ಅರಿವಾಗಲಿಲ್ಲ.

ಇಂಡಿಯಾ ದೇಶಕ್ಕೂ ಬ್ರಿಟನ್ನಿಗೂ ಹೋರಾಟ ನಡೆಯುತ್ತಿದೆಯೆಂದು ನನಗೆ ಮೊದಲು ಕಾಣಿಸಲಿಲ್ಲ. ಎರಡು ಬಗೆಯ ಜನಗಳಿಗೆ ಹೋರಾಟ ನಡೆಯುತ್ತಿದೆಯೆಂದು ಕಾಣಿಸಿತು. ನನ್ನ ಮನಸ್ಸಿನಲ್ಲಿದ್ದುದು ಸ್ವಾತಂತ್ರ್ಯದ ಆಲೋಚನೆ. ಅದು ಇಂಡಿಯಾಕ್ಕೆ ಮಾತ್ರ ಅನ್ವಯಿಸಿರಲಿಲ್ಲ. ಆಕ್ಸ್‌ಫರ್ಡ್‌ನಲ್ಲಿದ್ದಾಗ ಬರೆದ 'ಕ್ರಾಂತಿಯ ಕಾವ್ಯ' ಎಂಬ ಪ್ರಬಂಧದಲ್ಲಿ – ಇದಕ್ಕೆ ಬಹುಮಾನವೂ ಬಂದಿತ್ತು– ಯುರೋಪಿನ ಅದರಲ್ಲಿಯೂ ಇಂಗ್ಲಿಷಿನ ಕವಿಗಳು ಸ್ವಾತಂತ್ರ್ಯವೆಂದರೆ ಎಷ್ಟು ಅಮೂಲ್ಯ ಎಂದು ಹಾಡಿರುವುದನ್ನು ನಾನು ವರ್ಣಿಸಿದ್ದೆ. ಮೊದಲಿಗೆ ಪಾಶ್ಚಾತ್ಯ ದೇಶಗಳೇ ಇಂಡಿಯಾದ ರಾಷ್ಟ್ರೀಯ ಚಳುವಳಿಗೆ ಸ್ಫೂರ್ತಿ ನೀಡಿದ್ದುವು. ಟಾಲ್‌ಸ್ಟಾಯ್ ಮತ್ತು ರಸ್ಕಿನ್ ಇವರುಗಳು ಗಾಂಧೀಜಿಯ ಮೇಲೆ ಅಳಿಸಲಾಗದ ಮುದ್ರೆಯನ್ನೊತ್ತಿದ್ದರು. ಈ ಕಾರಣ ಮೊಟ್ಟಮೊದಲಿಗೆ ಗಾಂಧೀಜಿಯನ್ನು ಕಂಡಾಗ ನಾನು ಮತ್ತೊಮ್ಮೆ ಸ್ವಾತಂತ್ರ್ಯ ಗೀತೆಯನ್ನು ಹಾಡಿ, ಪರತಂತ್ರತೆ ಅಥವಾ ಸಾಮ್ರಾಜ್ಯಶಾಹಿ ಮನೋಭಾವನೆಯನ್ನು ಧಿಕ್ಕರಿಸಿದ ಯೂರೋಪು ಮತ್ತು ಇಂಗ್ಲಿಷ್ ಕವಿಗಳ ಮಧ್ಯೆ ಇರುವೆನೆಂದು ಭಾಸವಾಯಿತು.

ಇದರಿಂದ ನನ್ನ ಮನಸ್ಸಿನಲ್ಲಿ ಯಾವ ವಿರುದ್ಧ ಭಾವನೆಗಳೂ ಹುಟ್ಟಿದ್ದು ನನಗೆ ಜ್ಞಾಪಕವಿಲ್ಲ. ಗಾಂಧೀಜಿಯನ್ನು ನೋಡಿದ ಮೇಲೆ ಆ ಭಾವನೆಯೊಂದನ್ನು ಬಿಟ್ಟು ಬೇರೊಂದು ಭಾವನೆ ಬರಲು ಸಾಧ್ಯವಿಲ್ಲ ಎಂದೆನಿಸಿತು. ಇದು ಆಶ್ಚರ್ಯವಾಗಿ ಕಾಣಬಹುದು. ಆದರೆ ನನಗೆ ಇಂಡಿಯಾದಲ್ಲಿದ್ದ ಯಾವ ಯುರೋಪಿಯನ್ನರ ಪರಿಚಯವೂ ಇಲ್ಲದಿದ್ದುದರಿಂದ ಆ ನನ್ನ ನಡತೆ ಸರಿಯೆಂದು ಕಂಡಿತು. ಆ ನಡತೆಯಿಂದಾಗಿ ನನ್ನನ್ನು ಬಹಿಷ್ಕರಿಸಬಹುದಾದ ಯಾವ ಕ್ಲಬ್ಬಿಗೂ ನಾನು ಸೇರಿರಲಿಲ್ಲ.

ಒಬ್ಬಿಬ್ಬರು ಇಂಗ್ಲಿಷ್ ಬಿಷಪ್ಪರನ್ನು ಬಿಟ್ಟರೆ ನನಗೆ ಬ್ರಿಟಿಷ್ ಅಧಿಕಾರಿಗಳ ಭೇಟಿಯೇ ಆಗಿರಲಿಲ್ಲ. ಇಂಗ್ಲೆಂಡಿನಲ್ಲಿದ್ದ ನನ್ನ ಸ್ನೇಹಿತರಿಗೆ ಪತ್ರ ಬರೆಯುತ್ತಿದ್ದೆ. ಅವರೆಲ್ಲಾ ಇಂಡಿಯಾದ ಬಗ್ಗೆ ಸಹಾನುಭೂತಿಯಿಂದಿದ್ದರು.

ಅನಂತರ ಹೋರಾಟ ಹೆಚ್ಚಾದಂತೆ ನಾನು ಗಾಂಧೀಜಿಯ ಮತ್ತು ಅವರ ಚಳುವಳಿಯ ಪ್ರಭಾವಕ್ಕೆ ಒಳಗಾದುದರ ಪರಿಣಾಮ ಚೆನ್ನಾಗಿ ಗೊತ್ತಾಯಿತು. ಇಂಗ್ಲಿಷ್ ಜನರ ಮತ್ತು ಇಂಗ್ಲಿಷ್ ಅಧಿಕಾರಿಗಳ ಸಂಪರ್ಕ ಹೆಚ್ಚಾದಂತೆ ನಾನು ದಾರಿ ತಪ್ಪಿರುವೆನೆಂದು ಅವರು ನನಗೆ ಹೇಳಲಾರಂಭಿಸಿದರು. ಕೆಲವು ವೇಳೆ ಇದು ನನಗೆ ವ್ಯಸನವನ್ನುಂಟುಮಾಡುತ್ತಿತ್ತು. ಆದರೆ ಸ್ವಾತಂತ್ರ್ಯದ ಸುಧೆಯನ್ನು ಕುಡಿದ ನನಗೆ ಅವರು ಹೇಳಿದ್ದು ಹಿಡಿಸಲಿಲ್ಲ.

ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸುವುದರ ತೊಡಕು ಏನೆಂದು ನನಗೆ ಅರ್ಥವಾದದ್ದು ಅನಂತರ. ಎರಡನೆಯ ಮಹಾಯುದ್ಧ ನಡೆಯುತ್ತಿದ್ದಾಗ ಜಬ್ಬಲ್‌ಪುರದಲ್ಲಿ ಬ್ರಿಟಿಷ್ ಅಧಿಕಾರಿಗಳಿಗೆ ಕೊಟ್ಟ ಭೋಜನಕೂಟದಲ್ಲಿ ನಾನೂ ಸೇರಿದ್ದೆ. ಆಗ ನಮ್ಮ ಆತಿಥೇಯ 'ಇಂಡಿಯಾ ಸ್ವಾತಂತ್ರ್ಯವಾದರೆ ಮತ್ತು ಇಂಡಿಯಾಕ್ಕೂ ಇಂಗ್ಲೆಂಡಿಗೂ ಯುದ್ಧವಾದರೆ ನೀನೇನು ಮಾಡುತ್ತಿ?' ಎಂದು ಕೇಳಿದ. 'ಇಂಡಿಯಾದ ಕಡೆ ಇರುವವರಿಗೆ ಅದು ನಿಜವಾದ ಪರೀಕ್ಷೆ' ಎಂದ ಆತ. ಅದಕ್ಕೆ ನಾನು, 'ನನಗೆ ಯುದ್ಧದಲ್ಲಿ ನಂಬಿಕೆ ಇಲ್ಲ. ಹಾಗೇನಾದರೂ ಆದರೆ, ನಾನು ಖಂಡಿತ ಇಂಡಿಯಾದ ಕಡೆ ಇರುತ್ತೇನೆ' ಎಂದು ಉತ್ತರಕೊಟ್ಟೆ. ನನ್ನ ಮಾತು ಕೇಳಿ ಊಟಕ್ಕೆ ಕುಳಿತಿದ್ದವರೆಲ್ಲ ಸ್ತಬ್ಧರಾಗಿಬಿಟ್ಟರು. ನನ್ನಂತಹ ದೇಶದ್ರೋಹಿ ಬೇರೆ ಇಲ್ಲವೆಂದು ಭಾವಿಸಿದರು. ಆದರೆ ನಾನು ಬ್ರಿಟನ್ನಿಗೆ ದ್ರೋಹಮಾಡುತ್ತಿರುವುದರ ಬದಲು, ಅದು ಸಾರಿದ ಮಹಾತತ್ವಗಳನ್ನು ಎತ್ತಿಹಿಡಿಯುತ್ತಿರುವೆನೆಂದು ನನಗೆ ಸ್ಪಷ್ಟವಾಗಿ ಗೊತ್ತಿತ್ತು.

ನನ್ನ ಕಥೆ ಬಹಳ ಮುಂದಕ್ಕೆ ಹಾರಿತು ಎಂದು ಕಾಣುತ್ತೆ. ಹಿಂದೆ ಹೋಗಿ ನನ್ನ ಕಥೆಯನ್ನು ಹೇಳುತ್ತೇನೆ. ಸಬರ್ಮತಿಗೆ ಹೋದದ್ದು ಮತ್ತು ಅಲ್ಲಿ ನನಗಾದ ಭಾವೋದ್ರೇಕ – ಈ ವಿಷಯಗಳನ್ನು ಬಿಟ್ಟರೆ ನನ್ನ ಜೀವನದಲ್ಲಿ ನಡೆದ ಮುಂದಿನ ಘಟನೆ ಎಂದರೆ ನನಗೊದಗಿದ ಸಖತ್ ಕಾಯಿಲೆ. ೧೯೨೮ನೆಯ ಇಸವಿಯಲ್ಲೆಲ್ಲಾ ನಾನು ನನ್ನ ಆರೋಗ್ಯದ ಕಡೆ ಗಮನ ಕೊಡಲೇ ಇಲ್ಲ. ನಾನು ನೆಲದ ಮೇಲೆ ಕುಳಿತುಕೊಳ್ಳುತ್ತಿದ್ದುದಲ್ಲದೆ ಅದರ ಮೇಲೆ ಮಲಗುತ್ತಲೂ ಇದ್ದೆ. ಸಿಮೆಂಟ್ ಹಾಕಿದ ನೆಲದ ಮೇಲೆ, ಕೇವಲ ತೆಳುವಾದ ಗೋಣಿತಾಟಿನ ಮೇಲೆ, ಮಲಗಿ ತಪ್ಪುಮಾಡಿದೆ. ಹಾಸಿಗೆ ದಿಂಬುಗಳನ್ನು ತೊರೆದುಬಿಟ್ಟೆ, ನನ್ನ ಸರಳ ಜೀವನದ ಉದ್ವೇಗದಲ್ಲಿ, ಬರಿಗಾಲಿನಲ್ಲಿ ತಿರುಗಾಡುತ್ತಿದ್ದೆ. ಏನು ಸಿಕ್ಕಿದರೆ ಅದನ್ನು ತಿನ್ನುತ್ತಿದ್ದೆ. ಮೊದಮೊದಲು ಇದು ಸರಿಯಾಗಿತ್ತು. ಆದರೆ ಬೇಸಗೆ ಕಳೆದು ಮಳೆಗಾಲ ಆರಂಭವಾಗಿ ಸಿಮೆಂಟ್ ನೆಲ ತಣ್ಣಗೆ ಕೊರೆಯುತ್ತಿರುವಾಗಲೂ ನಾನು ನೆಲದ ಮೇಲೆ ಮಲಗುತ್ತಿದ್ದುದು ದಡ್ಡತನದ ಕೆಲಸವೆಂದು ಕೊನೆಗೆ ಸ್ಪಷ್ಟವಾಯಿತು. ಇದರ ಪರಿಣಾಮವೇನಾಯಿತೆಂದರೆ,

ನನಗೆ ವಿಪರೀತ ರಕ್ತಭೇದಿ ಕಾಣಿಸಿಕೊಂಡಿತು. ನನ್ನನ್ನು ಆಸ್ಪತ್ರೆಗೆ ಸಾಗಿಸಿದರು. ಆರು ವಾರಗಳ ಕಾಲ ನಾನು ಸಾವು – ಬದುಕುಗಳ ಮಧ್ಯೆ ತೊಳಲುತ್ತಿದ್ದೆನಂತೆ. ಈಗ ಹೊಸದಾಗಿ ಕಂಡುಹಿಡಿದಿರುವ ಔಷಧಿಗಳು ಆಗ ಇರಲಿಲ್ಲ. ಈ ಕಾರಣ ರಕ್ತಭೇದಿಯಿಂದ ನಾನು ಅನುಭವಿಸಿದ ನೋವು ಸಂಕಟಗಳು ಅವರ್ಣನೀಯ. ನನಗೆ ಸಖತ್ ಕಾಯಿಲೆಯಾಗಿರುವ ವಿಷಯ ಇಂಗ್ಲೆಂಡಿಗೆ ತಂತಿ ಮೂಲಕ ತಿಳಿಸಿದರು. ಅಲ್ಲಿ ನನ್ನ ಉತ್ತರಕ್ರಿಯೆಗೂ ಏರ್ಪಾಡು ಮಾಡಿಕೊಂಡಿದ್ದರಂತೆ. ಬೊಂಬಾಯಿಂದ ಬಿಷಪ್ಪರೂ ಬಂದಿದ್ದರಂತೆ, ನನ್ನ ಆತ್ಮಕ್ಕೆ ಶಾಂತಿಯನ್ನೀಯಲು. ಆದರೆ ಅದೇ ಬಿಷಪ್ಪರು ಒಂದು ಒಳ್ಳೆಯ ಕೆಲಸ ಮಾಡಿದರು. ಅವರು ತಮ್ಮ ಜೊತೆ ಮೂರು ಸೀಶೆ 'ಷ್ಯಾಂಪೆಯನ್' ಮದ್ಯ ತಂದಿದ್ದರು. ಔಷದದ ಬದಲು ಅದನ್ನು ಕೊಟ್ಟರೆ ಒಳ್ಳೆಯದೆಂದು ಡಾಕ್ಟರನ್ನು ಒಪ್ಪಿಸಿದರು. ಆ ಪಾನೀಯದಿಂದ ನಾನು ಬದುಕದೆ ಸತ್ತರೂ ನನ್ನ ಮುಂದಿನ ಪ್ರಯಾಣ ಸುಲಲಿತವಾಗುವುದೆಂದು ಭರವಸೆಕೊಟ್ಟರು. ವಾಸ್ತವವಾಗಿ ಬಿಷಪ್ಪರ ಮದ್ಯವೇ ನನ್ನನ್ನು ಉಳಿಸಿತು ಎಂದು ಕಾಣುತ್ತೆ. ಮೊಟ್ಟಮೊದಲು ತೆಗೆದುಕೊಂಡ ಲೋಟದಿಂದಲೇ ನನ್ನ ಆರೋಗ್ಯ ಕುದುರಿತು. ಒಂದು ತಿಂಗಳಿನಲ್ಲಿ ಹಾಗೂಹೀಗೂ ತಿರುಗಾಡಲು ಆರಂಭಿಸಿದೆ ; ತುಂಬ ನಿಶ್ಶಕ್ತನಾದರೂ ಬದುಕಬಹುದೆಂದುಕೊಂಡೆ. ಆದರೆ ಪೂನಾದ ಡಾಕ್ಟರುಗಳು, ನಾನು ಆಕ್ಸ್‌ಫರ್ಡ್‌ಗೆ ಹಿಂದಿರುಗಿ ಅಲ್ಲಿ ಒಂದು ವರ್ಷವಾದರೂ ವಿಶ್ರಾಂತಿಪಡೆದು ಇಂಡಿಯಾಕ್ಕೆ ಹಿಂದಿರುಗುವುದು ಒಳ್ಳೆಯದು ಎಂದರು.

ನಾನು ಇಂಗ್ಲೆಂಡಿಗೆ ಹೋದೆ. ಒಂದು ವರ್ಷವನ್ನು ಉಪಯುಕ್ತವಾಗಿ ಕಳೆದೆ. ಆಕ್ಸ್‌ಫರ್ಡ್‌ನಲ್ಲಿ ನನ್ನ ತಾಯಿಯ ಮನೆಯಲ್ಲಿದ್ದುಕೊಂಡು ಬೋಡ್ಲಿಯನ್ ಮತ್ತು ಇತರ ಪುಸ್ತಕಭಂಡಾರಗಳಲ್ಲಿ ಓದುವ ಅವಕಾಶ ಕಲ್ಪಿಸಿಕೊಂಡೆ. ಓದುವುದು ಬರೆಯುವುದಲ್ಲದೆ ನನಗೆ ಬೇರೊಂದು ಕೆಲಸ ಇರಲಿಲ್ಲ. ಮೂರು ಸಣ್ಣ ಪುಸ್ತಕಗಳನ್ನು ಬರೆದೆ. 'ಕ್ರಿಶ್ಚಿಯನ್ ಧ್ಯಾನ' ಎಂಬ ಪುಸ್ತಕ ಅವುಗಳಲ್ಲಿ ಒಂದು. ಇನ್ನೊಂದು ಇದೇ ಕಾಲದಲ್ಲಿ ಕೊರಾನ್ ಮತ್ತು ಭಗವದ್ಗೀತೆಗಳ ಮೇಲೂ ಗ್ರಂಥಗಳು ಬರೆಯಲ್ಪಟ್ಟವು. ಭಗವದ್ಗೀತೆಯ ಮೇಲೆ ಬರೆದವರು ಸಿ. ರಾಜಗೋಪಾಲಾಚಾರಿಯವರು. ನನ್ನ ಗ್ರಂಥದಲ್ಲಿ ಕೇಶವಚಂದ್ರಸೇನ, ರಾಜ ರಾಮಮೋಹನ ರಾಯ್ ಮತ್ತು ಇತರರು ಹೇಳಿದ ಆಣಿಮುತ್ತುಗಳಿದ್ದವು.

ಮತ್ತೊಂದು ಪುಸ್ತಕ, ರಿಚರ್ಡ್ ರೋಲ್ (Richard Rolle) ಎಂಬ ಇಂಗ್ಲಿಷ್ ಯೋಗಿಯನ್ನು ಕುರಿತದ್ದು. ಅವರ ಸಂದೇಶವನ್ನು ಹಿಂದೂ ಭಕ್ತಿಮಾರ್ಗದಲ್ಲಿ ನಿರೂಪಿಸಲು ಪ್ರಯತ್ನಮಾಡಿದ್ದೆ. ಆಮೇಲೆ ಸೆಂಟ್ ಫ್ರಾನ್ಸಿಸ್ ಅಸ್ಸಿಸಿ ಅವರನ್ನು ಕುರಿತು ಇನ್ನೊಂದು ಪುಸ್ತಕ ಬರೆದೆ. ಅದರಲ್ಲಿಯೂ ಅಸ್ಸಿಯ ಸಂದೇಶವನ್ನು ಮತ್ತು ಜೀವನವನ್ನು ಭಾರತೀಯ ರೀತಿಯಲ್ಲಿ ಹೇಳಲು ಪ್ರಯತ್ನಮಾಡಿದೆ.

೧೯೨೭ನೆಯ ಶರತ್ಕಾಲಕ್ಕೆ ನನ್ನ ಆರೋಗ್ಯ ಸಂಪೂರ್ಣ ಸುಧಾರಿಸಿತು.

ಇಂಡಿಯಾಕ್ಕೆ ಹೋಗಬಹುದೆಂದು ಹೇಳಿದರು. ಹೊರಟೆ. ಮೊದಲು ಅಸ್ಸಿಸಿಗೂ, ಅನಂತರ ಪ್ಯಾಲಸ್ಟೈನಿಗೂ ಹೋದೆ. ಅಸ್ಸಿಸಿಗೆ ಹೋಗಿ, ಅಲ್ಲಿಂದ ಹತ್ತಿರದಲ್ಲಿಯೇ ಇದ್ದ 'ಇಟಲಿಯ ಸೋದರಿಯರು' (Italian Sisters) ಅವರನ್ನು ಕಂಡೆ. ಅವರು ಬಹು ಸರಳ ಜೀವನ ನಡೆಸುತ್ತಿದ್ದರು. ನನ್ನೊಡನೆಯೂ ಪತ್ರ ವ್ಯವಹಾರ ನಡೆಸಿದ್ದರು. ಅವರು ನನಗೆ ವಿಶೇಷ ಆಶೀರ್ವಾದವನ್ನೂ ಕಳುಹಿಸಿದ್ದರು. ಆ ಆಶೀರ್ವಾದ ಇಂತಿದೆ :

> ನಿನ್ನ ಆರೋಗ್ಯ ಚೆಂದವಿರಲಿ; ನಿನ್ನ ಮನಕೆ ಮುದವಿರಲಿ.
> ಬಿಸಿಲ ಬೇಗೆಯಿಂದ, ಸುರಿವ ಮಳೆಯಿಂದ,
> ಹುಳು ಹುಪ್ಪಟೆಗಳಿಂದ, ಕಾಲರ ಮಲೇರಿಯಾದಿಂದ,
> ಸಕಲ ರೋಗರುಜಿನಗಳಿಂದ, ಕಿರುಕುಳದ ನೌಕರರಿಂದ,
> ಮತ್ತೆ ಕಾಡುವ ಜನರಿಂದ ಮುಕ್ತನಾಗಿರು ನೀ.
> ಅನುಮಾನ ದುಃಖಗಳು ಸುಳಿಯದಿರಲಿ,
> ಶಾಂತಿ ಸ್ವಾತಂತ್ರ್ಯ ಶಕ್ತಿಗಳು ನಿನ್ನನೊಲಿದಿರಲಿ.

ಅತ್ಯುನ್ನತವಾದ ಹಾಗೂ ಪರಿಶುದ್ಧವಾದ ಕ್ಯಾಥೊಲಿಕ್ ತತ್ವವನ್ನಿಲ್ಲಿ ಕಾಣಬಹುದು. ಈ ಪರಿಶುದ್ಧ ತತ್ವವನ್ನು ಯುರೋಪು ಮತ್ತು ಇಂಡಿಯಾದ ಜೀವನದಲ್ಲಿ ಹಾಗೂ ಗಾಂಧೀಜಿಯವರ ಸಬರ್ಮತಿ ಆಶ್ರಮದಲ್ಲಿ ಕಾಣುವ ಸೌಭಾಗ್ಯ ನನಗೆ ಒದಗಿತು.

ನನ್ನ ಪ್ಯಾಲಸ್ಟೈನ್ ಯಾತ್ರೆ ಬಹು ಸೊಗಸಾಗಿತ್ತು. ಆ ದೇಶದಲ್ಲಿ ಅನೇಕ ವರ್ಷಗಳು ತಂಗಿದ್ದ ಆಂಗ್ಲೇಯ ಪಾದ್ರಿಯೊಬ್ಬರು ನನ್ನನ್ನು ಕರೆದುಕೊಂಡು ತೋರಿಸಬೇಕಾದುದನ್ನೆಲ್ಲಾ ತೋರಿಸಿದರು. ಅವುಗಳಲ್ಲಿ ಜೆರೂಸಲೆಂ, ಬೆತ್ಲೆಹೆಂ ಮತ್ತು ಜುಡಿಯಾ ಈ ಸ್ಥಳಗಳನ್ನು ನೋಡಿ ನಾನು ಆನಂದಭರಿತನಾದೆ.

ಪ್ಯಾಲಸ್ಟೈನ್‌ನಿಂದ ಇಂಡಿಯಾಕ್ಕೆ ಬಂದೆ. ಪೂನಾ ತಲುಪಿದ್ದು ನವೆಂಬರ್ ತಿಂಗಳಿನಲ್ಲಿ. ಕ್ರೈಸ್ತ ಸೇವಾ ಸಂಘ ಇಷ್ಟು ಹೊತ್ತಿಗೆ ಆಶ್ರಮಕ್ಕಿಂತ ಹೆಚ್ಚಾಗಿತ್ತು. ಅದೊಂದು ಸುಂದರ ಸ್ಥಳವಾಗಿದ್ದುದಲ್ಲದೆ, ಹೆಚ್ಚು ವ್ಯವಸ್ಥೆಯಿಂದ ಕೂಡಿತ್ತು. ನಾನು ಸಂಘಕ್ಕೆ ಬಂದ ಸ್ವಲ್ಪ ಕಾಲದಲ್ಲೇ ಫಾದರ್ ವಿನ್‌ಸ್ಲೋ ಅವರು ರಜಾದ ಮೇಲೆ ಹೊರಟರು. ತುಂಬ ಚಿಕ್ಕವನಾದ ನನಗೆ ಆಶ್ರಮದ ಜವಾಬ್ದಾರಿ ವಹಿಸಿದರು. ಇದರಿಂದ ಅನಿರೀಕ್ಷಿತ ಫಲಿತಾಂಶ ಉಂಟಾಯಿತು. ಇಂಡಿಯಾದ ಸ್ವಾತಂತ್ರ್ಯ ಚಳುವಳಿಯ ಬಗ್ಗೆ ವಿನ್‌ಸ್ಲೋ ಅವರಿಗೆ ಸಹಾನುಭುತಿ ಇದ್ದು ಇಂಡಿಯಾಕ್ಕೆ ನ್ಯಾಯಸಮ್ಮತವಾದುದನ್ನು ಸಲ್ಲಿಸಬೇಕೆಂಬ ಅಭಿಪ್ರಾಯವನ್ನು ಹೊಂದಿದ್ದರು. ಅವರು ಇದೇ ಅಭಿಪ್ರಾಯವನ್ನು ಹೊಂದಿದ್ದ ಉದಾರ ಹೃದಯದ ಇಂಗ್ಲಿಷಿನವರ ಗುಂಪಿಗೆ ಸೇರಿದವರಾಗಿದ್ದರು. 'ನ್ಯಾಯಸಮ್ಮತವಾದದ್ದು' ಎಂಬುದಕ್ಕೆ ಯಾವ ರೀತಿಯ ಅರ್ಥವನ್ನಾದರೂ ನೀವು ಮಾಡಬಹುದಿತ್ತು. ಈ ರೀತಿ ಅವರು ಎರಡು ಪಕ್ಷಗಳೊಡನೆಯೂ ಸಂಬಂಧ ಬೆಳೆಸಿಕೊಂಡು ಬಂದಿದ್ದರು. ಅವರು ಆಶ್ರಮವನ್ನು

ಬಿಟ್ಟುಹೋದರೂ ಇಲ್ಲವೊ ಉಳಿದ ನಮಗೆ ಆಡಿದ್ದೇ ಆಟವಾಯಿತು. ಬೆಕ್ಕು ಹೋದದ್ದೇ ತಡ, ಇಲಿಗಳಿಗೆ ಆನಂದವಾಯಿತು. ನಾನು ಕ್ರಾಂತಿಕಾರಕವಾದ ತ್ರಿವರ್ಣಧ್ವಜವನ್ನು ಆಶ್ರಮದ ಮೇಲೆ ಹಾರಿಸಿದೆ. ಬೊಂಬಾಯಿಯ ಆಂಗ್ಲಿಕನ್ ಚರ್ಚು ಯೂನಿಯನ್ ಜಾಕ್ ಹಾರಿಸಬಹುದಾದರೆ, ನಾವು ಇಂಡಿಯಾದ ಬಾವುಟವನ್ನೇಕೆ ಹಾರಿಸಬಾರದೆಂದು ನನ್ನ ವಾದವಾಗಿತ್ತು. ಆದರೆ ತಾಪತ್ರಯ ಬಂದದ್ದು ಈ ಬಾವುಟ ಹಾರಿಸಿದ್ದರಿಂದಲ್ಲ, ನಾವು ಆಶ್ರಮದಲ್ಲಿ ಮಾಡಿದ ಭಾಷಣದಿಂದ.

ಗಾಂಧೀಜಿ ವೈಸರಾಯರಿಗೆ ಪತ್ರಗಳನ್ನು ಬರೆದಿದ್ದು ಸರಿಯಷ್ಟೆ ಆ ಹೆಸರಾಂತ ಪತ್ರಗಳಲ್ಲಿ ಒಂದನ್ನು ಗಾಂಧೀಜಿಯವರು ಒಬ್ಬ ಆಂಗ್ಲೇಯ ಯುವಕನ ಮುಖಾಂತರ ಕಳುಹಿಸಿಕೊಟ್ಟರು. ಈ ಸುದ್ದಿ ಪತ್ರಿಕಾ ಪ್ರಪಂಚದಲ್ಲಿ ಅಚ್ಚರಿಯನ್ನುಂಟುಮಾಡಿತು. ಈ ಯುವಕನೇ ರೆಜಿನಾಲ್ಡ್ ರೇನೋಲ್ಡ್ ಎಂಬುವನು. ಅನಂತರ ಇವನು ಎಥೆಲ್ ಮನ್ನಿನ್ ಎಂಬುವಳನ್ನು ಮದುವೆಯಾದ. 'ನೀರಿನ ತೊಟ್ಟಿಗಳ' ಬಗ್ಗೆ ಒಂದು ಚರಿತ್ರೆಯನ್ನೇ ಬರೆದ. ನನ್ನ ಆತ್ಮೀಯ ಸ್ನೇಹಿತನೂ ಆದ. ಆಗ್ಗೆ ರೆಜಿನಾಲ್ಡ್ ನನ್ನಂತೆ ಯೌವನದ ಹುರುಪಿನಲ್ಲಿ ತಪ್ಪುಗಳನ್ನು ಮಾಡುತ್ತಿದ್ದ. ಅವನು ಹೇಳಿದ್ದೆಲ್ಲಾ ಮಾಡಿದ್ದೆಲ್ಲಾ ತಪ್ಪಾಗುತ್ತಿತ್ತು. ಕಾರಣ, ಇನ್ನೂ ಹುಡುಗ. ಕೆಲವು ವರ್ಷಗಳ ಹಿಂದೆ ಅವನು ಅಕಾಲಮರಣಕ್ಕೆ ತುತ್ತಾದ. ಯುವಕನಾಗಿದ್ದಾಗ ತೋರಿಸಿದ ಉತ್ಸಾಹಕ್ಕೆ ಆತ ತನ್ನ ತಲೆಯೊಡ್ಡಬೇಕಾಯಿತು.

ಆಗ್ಗೆ ರೆಜಿನಾಲ್ಡ್ ಯಾರೆಂದು ನನಗೆ ಗೊತ್ತಿರಲಿಲ್ಲ. ಆದರೆ ಅವನು ಇಂಗ್ಲೆಂಡಿಗೆ ಹೋಗುವ ಮಾರ್ಗದಲ್ಲಿ ಕೆಲವು ದಿವಸಗಳು ನಮ್ಮ ಆಶ್ರಮದಲ್ಲಿ ತಂಗುವುದಕ್ಕೆ ಅವಕಾಶಬೇಕೆಂದು ಕೇಳಿದಾಗ ನಾನು ಆಗಬಹುದು ಎಂದು ಒಪ್ಪಿಕೊಂಡೆ. ಅವನು ತನ್ನ ಸರಳತೆ ಹಾಗೂ ಬುದ್ಧಿಚಾತುರ್ಯದಿಂದ ನಮ್ಮೆಲ್ಲರನ್ನೂ ಮರುಳುಗೊಳಿಸಿದ. ಗಾಂಧೀ ತತ್ವದ ಮೇಲೆ ಒಂದು ಉಪನ್ಯಾಸ ಕೊಡು ಎಂದು ಕೇಳಿದೆ. ಆತ ತುಂಬ ಸೊಗಸಾದ ಉಪನ್ಯಾಸಮಾಡಿದ. ಜನಸಂದಣಿ ಇತ್ತು. ಗಾಂಧೀಜಿಯ ಬೋಧನೆ ಅಂತರರಾಷ್ಟ್ರೀಯ ಶಾಂತಿಗೂ ರಾಷ್ಟ್ರೀಯ ಉನ್ನತಿಗೂ ಹೇಗೆ ಮಾರ್ಗ ತೋರಿಸುತ್ತದೆ ಎಂಬುದನ್ನೇ ಅವನು ಹೇಳಿದ್ದು. ಇಂಗ್ಲೆಂಡಿನ ಯಾವ ಚರ್ಚಿನಲ್ಲಿಯೂ ಅವನು ಹೇಳಿದ ಮಾತುಗಳನ್ನಾಡಿದರೆ ತಪ್ಪಾಗುತ್ತಿರಲಿಲ್ಲ. ಆದರೆ ಇದು ಸರ್ಕಾರಕ್ಕೆ ಹಿಡಿಸಲಿಲ್ಲ. ಪೊಲೀಸರು ಬರುತ್ತಾರೆಂದು ನಾನು ನಿರೀಕ್ಷಿಸುತ್ತಿದ್ದೆ. ಅದರ ಬದಲು ಬಿಷಪ್ಪರ ಕೆಳಗಿನ ಅಧಿಕಾರಿಯಿಂದ ಒಂದು ಪತ್ರ ಬಂದಿತು. ಅದರಲ್ಲಿ ನಾವು ರೆಜಿನಾಲ್ಡ್‌ನಂಥ ಮನುಷ್ಯನಿಗೆ ಆಶ್ರದಲ್ಲಿ ಸ್ಥಾನಕೊಟ್ಟದ್ದು ತಪ್ಪೆಂತಲೂ, ಅದಕ್ಕೆ ನಾನು ಸಮಜಾಯಿಸಿ ಕೊಡಬೇಕೆಂತಲೂ ಬರೆದಿತ್ತು. ನಾನು ಕೊಡಬೇಕಾದ ಸಮಜಾಯಿಷಿ ಏನೂ ಇರಲಿಲ್ಲ. ಆದರೆ ಸಿ.ಐ.ಡಿ. ಬದಲು ಚರ್ಚು ಈ ವಿಚಾರದಲ್ಲಿ ಆಸಕ್ತಿ ವಹಿಸಿದ್ದು ನನಗೆ ಆಶ್ಚರ್ಯವನ್ನುಂಟುಮಾಡಿತು.

ಇದಾದ ಮೇಲೆ ಪೊಲೀಸರು ನನ್ನನ್ನು ಹಿಂಬಾಲಿಸುತ್ತಲೇ ಇದ್ದರು; ಚರ್ಚಿನ ಪಾದ್ರಿಗಳು ನನ್ನ ಬೆನ್ನು ಹಿಂದೆಯೇ ಬರುತ್ತಿದ್ದರು. ಆದರೆ ಇವು ಯಾವುವೂ ಕ್ರೈಸ್ತ ಸೇವಾ ಸಂಘ ತನಗೆ ಸರಿಯೆಂದು ಕಂಡುದನ್ನು ಮಾಡುವುದನ್ನು ತಪ್ಪಿಸಲಾಗಲಿಲ್ಲ. ಸಂಘದ ಉಳಿದೆಲ್ಲಾ ಸದಸ್ಯರ ಸಂಪೂರ್ಣ ಅನುಮತಿಯೊಡನೆ ನಾನು ಸುಭಾಷ್ ಚಂದ್ರಬೋಸರನ್ನು ಗೌರವಿಸಿದೆ. ಆಮೇಲೆ, ೧೯೨೦ರಲ್ಲಿ ಸರ್ದಾರ್ ವಲ್ಲಭಭಾಯಿ ಪಟೇಲರು ಮತ್ತು ನಾನು ಗುಜರಾತಿಗೆ ಹೋಗಿ ಕರನಿರಾಕರಣೆ ಚಳುವಳಿಯಲ್ಲಿ ಪೊಲೀಸರು ನಡೆಸಿದ ದೌರ್ಜನ್ಯದ ಬಗ್ಗೆ ವಿಚಾರಣೆಮಾಡಬೇಕೆಂದು ಹೇಳಿದಾಗ ಆ ಆಹ್ವಾನವನ್ನೂ ಒಪ್ಪಿದೆ.

ಗುಜರಾತಿನ ಕರನಿರಾಕರಣಾ ಚಳುವಳಿ ಭಾರಿ ದೊಡ್ಡದಾಗಿ ನಡೆಯಿತು. ಸರ್ಕಾರ ಆ ಚಳುವಳಿಯನ್ನು ಮಟ್ಟಹಾಕಲು ಭಾರಿ ಪ್ರಯತ್ನಮಾಡಿತು. ಸರ್ಕಾರದ ಉಪಟಳವನ್ನು ತಪ್ಪಿಸಿಕೊಳ್ಳಲು ಅನೇಕ ಕಡೆ ಊರಿಂದೂರೇ ಪಕ್ಕದ ಬರೋಡಾ ಸಂಸ್ಥಾನಕ್ಕೆ ಗುಳೇಹೋದುವು. ನಾನು ಈ ಕುರಿತು ಐದು ತಾಲ್ಲೂಕುಗಳ ಅರುವತ್ತು ಗ್ರಾಮಗಳಿಗೆ ಭೇಟಿಕೊಟ್ಟು ತನಿಖೆ ನಡೆಸಿ ಒಂದು ವರದಿಯನ್ನು ಸಿದ್ಧಪಡಿಸಿದೆ. ಈ ವರದಿ ಮೊದಲಿಗೆ ಬೊಂಬಾಯಿ ಕ್ರಾನಿಕಲ್ ಪತ್ರಿಕೆಯಲ್ಲೂ ಅನಂತರ 'ಗುಜರಾತಿನ ಹಾಳೂರುಗಳಲ್ಲಿ' ಎಂಬ ಹೆಸರಿನ ಸಣ್ಣ ಪುಸ್ತಕವಾಗಿಯೂ ಪ್ರಕಟವಾಯಿತು. ಆಗ ನಾನಿನ್ನೂ ಕ್ರೈಸ್ತಪಾದ್ರಿಯಾಗಿದ್ದೆ. ಕ್ರೈಸ್ತ ಸರ್ಕಾರ ಕ್ರೈಸ್ತಮತ ತತ್ವಗಳನ್ನು ಪರಿಪಾಲಿಸಬೇಕೆಂದು ತುಂಬಾ ಬಿರುಸಿನ ಈ ಮಾತುಗಳನ್ನು ಉಪಯೋಗಿಸಿದೆ; 'ಕ್ರೈಸ್ತ ಬೋಧನೆಯು ಸಾರ್ವಜನಿಕ ಹಾಗೂ ಖಾಸಗಿ ಜೀವನ – ಇವೆರಡಕ್ಕೆ ಒಂದೇ ಸಮನಾಗಿ ಅನ್ವಯಿಸುತ್ತದೆ. ಹಾಗೆ ಕ್ರೈಸ್ತನ ಬೋಧನೆಯನ್ನು ಗುಜರಾತಿನಲ್ಲಿ ಅನುಸರಿಸಿದ್ದೇ ಆದರೆ ಈ ಹೋರಾಟದ ಫಲಿತಾಂಶ ಏನೇ ಆಗಲಿ, ಸರ್ಕಾರ ತನ್ನ ನ್ಯಾಯಪರಿಪಾಲನೆಯನ್ನು ಖಂಡಿತ ಎತ್ತಿಹಿಡಿದಂತಾಗುತ್ತದೆ ಮತ್ತು ಯಾವ ಮನಃಕ್ಲೇಶಕ್ಕೂ ಅವಕಾಶಕೊಡದಂತಾಗುತ್ತದೆ.'

ನಾನು ಪೂನಾದಲ್ಲಿದ್ದಾಗ ನಮ್ಮ ಆಶ್ರಮ ಅನೇಕ ಜನ ಇಂಡಿಯನರನ್ನು ಆಕರ್ಷಿಸಿತು. ಅವರಲ್ಲಿ ಶಾಮರಾವ್ ಹಿವಾಲೆ ಎಂಬುವರೂ ಒಬ್ಬರು. ಅವರು ಆಮೇಲೆ ನನ್ನ ಅಚ್ಚುಮೆಚ್ಚಿನ ಸ್ನೇಹಿತರಾದರು. ಅವರು ವಯಸ್ಸಿನಲ್ಲಿ ನನಗಿಂತ ಆರು ತಿಂಗಳು ಚಿಕ್ಕವರು. ಆದರೆ ಆಶ್ರಮಕ್ಕೆ ಬಂದ ಕೂಡಲೇ ಅವರು ನನ್ನನ್ನು ತಮ್ಮ ರಕ್ಷಣೆಗೆ ತೆಗೆದುಕೊಂಡು ಇಂಡಿಯಾದ ನಡೆನುಡಿಗಳನ್ನು ಕಲಿಸಿದ್ದಲ್ಲದೆ ನನ್ನ ಯೋಗಕ್ಷೇಮವನ್ನೂ ನೋಡಿಕೊಂಡರು. ನಾನು ಕಾಯಿಲೆ ಬಿದ್ದಾಗ ಕೂಡಲೇ ಆಸ್ಪತ್ರೆಗೆ ಸೇರಿಸಿ ನನ್ನ ಪ್ರಾಣ ಉಳಿಸಿದರೆಂದೂ ಹೇಳಬಹುದು. ನಗುಮುಖದ ಅವರನ್ನು ಕಂಡರೆ ನನಗೆ ಆನಂದವಾಗುತ್ತದೆ. ಜನರನ್ನು ಆಕರ್ಷಿಸುವ ವಿನಯ ಅವರಲ್ಲಿದೆ. ಅವರು ಡಾ॥ ಬಿ.ಪಿ. ಹಿವಾಲೆ ಅವರ ಸಹೋದರರು. ಹಿವಾಲೆ ಅವರು ಅಹಮದ್‌ನಗರದಲ್ಲಿ ಒಂದು ಕಾಲೇಜನ್ನು ಸ್ಥಾಪಿಸಿ ಹೆಸರು ಪಡೆದವರು. ಅಂಥವರ ಸಹೋದರರಾದ ಹಿವಾಲೆಯವರು ಹಿಡಿದ ಕೆಲಸ ಬಿಡದೆ ನಡೆಸುವ ವ್ಯಕ್ತಿ.

ಇಂಗ್ಲೆಂಡಿಗೆ ಹೋಗಿ ಬರುವ ಕನಸು ಕಾಣುತ್ತಿದ್ದ ಅವರಿಗೆ ಅವಕಾಶವನ್ನು ಕ್ರೈಸ್ತ ಸೇವಾ ಸಂಘ ಒದಗಿಸಿಕೊಟ್ಟಿತು. ಅಲ್ಲಿಗೆ ಹೋಗಿ ಒಂದು ವರ್ಷ ಇದ್ದು ಬಂದರು. ಹೋಗುವ ಮುನ್ನ ನನ್ನೊಡನೆ ಗುಜರಾತಿಗೆ ಬಂದಿದ್ದರು. ಅವರು ಹಿಂದಿರುಗಿ ಬರುವುದರೊಳಗೆ ನಾನು ಕ್ರೈಸ್ತ ಸೇವಾ ಸಂಘವನ್ನು ಬಿಟ್ಟಿದ್ದೆ. ಹಿಂದಿರುಗಿದ ಮೇಲೆ ನನ್ನೊಡನೆ ಗಡಿನಾಡಿಗೆ ಹೋಗಿಬಂದರು. ಇದಾದನಂತರ ಅನೇಕ ವರ್ಷಗಳ ಕಾಲ ನಾವಿಬ್ಬರೂ ಏನೂ ಮಾಡಬೇಕಾದರೂ ಒಟ್ಟಿಗೆ ಆಲೋಚಿಸಿ ಕೆಲಸ ಮಾಡುತ್ತಿದ್ದೆವು. ಆ ಕಾಲದಲ್ಲಿ ಇಂಗ್ಲಿಷಿನವರು ಸಾಹೇಬರುಗಳ ಕೃಪಾಕಟಾಕ್ಷ ಪಡೆದ ಹೊರತು ಏನೂ ಮಾಡುವಂತಿರಲಿಲ್ಲ. ಈ ಕಾರಣ, ಶಾಮರಾವ್ ನನ್ನ ಸಹಾಯಕ್ಕೆ ಬಾರದಿದ್ದರೆ ನಾನೇನೂ ಮಾಡಲಾಗುತ್ತಿರಲಿಲ್ಲ. ಅವರು ನನ್ನ ಅಚ್ಚುಮೆಚ್ಚಿನ ಸ್ನೇಹಿತರು. ಅವರ ಸರಳತೆ ಹಾಗೂ ನಗುಮುಖ ನಮ್ಮನ್ನು ಎಷ್ಟೋ ಕಷ್ಟಗಳಿಂದ ಪಾರುಮಾಡಿತು.

೧೯೨೮ ರಿಂದ ೧೯೩೦ರವರೆಗೆ ನಾನು ಗಾಂಧೀಜಿಯವರ ಮತ್ತು ಅವರ ಅನುಯಾಯಿಗಳ ನಿಕಟ ಸಂಪರ್ಕ ಪಡೆದಿದ್ದೆ. ಆ ಕಾಲ ತುಂಬ ಕಷ್ಟದ ಕಾಲವಾಗಿತ್ತು. 'ಡೊಮಿನಿಯನ್ ಸ್ಟೇಟಸ್ ಬೇಡ, ಸಂಪೂರ್ಣ ಸ್ವಾತಂತ್ರ್ಯ ಬೇಕು' ಎಂಬ ಹಟತೊಟ್ಟದ್ದು ಆಗಲೇ. ಪ್ರಜಾಪ್ರಭುತ್ವ ಮತ್ತು ಸಮಾಜ ಸಾಮ್ಯವಾದಗಳ ಅರ್ಥವನ್ನು ನೆಹರು ಅವರು ಸ್ಪಷ್ಟಪಡಿಸಿದ್ದೂ ಘೋಷಿಸಿದ್ದೂ ಆಗಲೇ. ಸಮಾಜ ಸಾಮ್ಯವಾದಕ್ಕೆ (Socialist Pattern of Society) ಕಾಂಗ್ರೆಸ್ ಕಟ್ಟುಬಿದ್ದದ್ದು ಆಗಿನಿಂದಲೇ.

೧೯೨೮ರಿಂದ ಇಂಡಿಯಾದ ಜನತೆಯಲ್ಲಿ ಮಹತ್ವದ ಬದಲಾವಣೆಯಾಯಿತು. ರೈತರು ಎಚ್ಚೆತ್ತರು. ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿದ್ದ ಜನ ಸಂಘಗಳನ್ನು ಸ್ಥಾಪಿಸಿಕೊಳ್ಳಲಾರಂಭಿಸಿದರು. ವಲ್ಲಭಭಾಯಿ ಪಟೇಲರು ಮುಂದೆ ಬಂದು ಸರ್ಕಾರದ ವಿರುದ್ಧ ಮೊಟ್ಟಮೊದಲನೆಯ ಚಳುವಳಿ ಆರಂಭಿಸಿದರು. ಸೈಮನ್ ಕಮಿಷನ್ ಬಂದು ಹೋದದ್ದು ಬುದ್ಧಿವಂತರನ್ನೂ ಯುವಕರನ್ನೂ ಕೆರಳಿಸಿತು. ನಾನು ಮೊಟ್ಟಮೊದಲಿಗೆ ಸಬರ್ಮತಿಗೆ ಹೋಗಿಬಂದ ಕೆಲವು ದಿನಗಳಲ್ಲಿ ಪೊಲೀಸರು ಲಾಲಾ ಲಜಪತ್‌ರಾಯ್ ಅವರನ್ನು ಹೊಡೆದ ಕಾರಣ ಅವರು ಸತ್ತುಹೋದರು. ಕೆಲವು ವಾರಗಳ ಅನಂತರ ಲಾಹೋರಿನಲ್ಲಿ ನೆಹರು ಅವರನ್ನು ಹೊಡೆದರು. ಪಂಜಾಬ ಮತ್ತು ಬಂಗಾಳದಲ್ಲಿ ಕ್ರಾಂತಿಕಾರಕ ಚಳುವಳಿಗಳು ಆರಂಭವಾದವು.

ಸರ್ಕಾರವು ಕಠಿಣ ಕ್ರಮ ಕೈಗೊಂಡಿತು. ಅಸಹಕಾರ ಚಳುವಳಿ ದೇಶದಲ್ಲೆಲ್ಲಾ ಹಬ್ಬಿದಂತೆ ಸಾವಿರಾರು ಜನರು ಜೈಲಿಗೆ ಹೋದರು. ೧೯೨೯ನೆಯ ಡಿಸೆಂಬರ್‌ನಲ್ಲಿ ಕಾಂಗ್ರೆಸ್ ವಾರ್ಷಿಕ ಅಧಿವೇಶನ ಲಾಹೋರಿನಲ್ಲಿ ನೆಹ್ರೂ ಅವರ ಅಧ್ಯಕ್ಷತೆಯಲ್ಲಿ ಸೇರಿತು. ಬ್ರಿಟಿಷರ ಉದಾಸೀನ ಹಾಗೂ ಮಾತಿಗೆ ತಪ್ಪುವ ಮನೋಭಾವನೆಯನ್ನು ಸಹಿಸಲಾರದೆ ೧೯೩೦ ಜನವರಿ ೨೬ನೆಯ ತಾರೀಖು ಇಂಡಿಯಾದ ಲಕ್ಷಾಂತರ ಜನ ಮೊಟ್ಟಮೊದಲನೆಯ ಸಲ ಸ್ವಾತಂತ್ರ್ಯ ಪ್ರತಿಜ್ಞೆಯನ್ನು ಸ್ವೀಕರಿಸಿದರು :

'ಎಲ್ಲ ಜನರಂತೆ ನಾವೂ ಸ್ವತಂತ್ರರಾಗಿರುವುದು, ನಾವು ಬೆವರು ಸುರಿಸಿ ಸಂಪಾದಿಸುವುದನ್ನು ಅನುಭವಿಸುವುದು ಮತ್ತು ಜೀವನದ ಆವಶ್ಯಕತೆಗಳನ್ನು ಹೊಂದುವುದು ನಮ್ಮ ಆಜನ್ಮಸಿದ್ಧ ಹಕ್ಕು. ಎಲ್ಲರ ಏಳಿಗೆಗೆ ಸಂಪೂರ್ಣ ಅವಕಾಶಗಳಿರಬೇಕು. ಯಾವಾಗ ಸರ್ಕಾರ ಇವಕ್ಕೆ ಅಡ್ಡಿಬರುವುದೋ ಜನರನ್ನು ತುಳಿಯಲು ಯತ್ನಿಸುವುದೋ ಆಗ ಅವರಿಗೆ ಅದನ್ನು ಬದಲಿಸಲು ಮತ್ತು ತೆಗೆದುಹಾಕಲು ಹಕ್ಕುಂಟು.'

ಉಪ್ಪಿನ ಕಾಯಿದೆಗಳನ್ನು ಮುರಿಯಲು ಗಾಂಧೀಜಿ ಮಾರನೆಯ ವರ್ಷ ದಂಡಿಯಾತ್ರೆ ಮಾಡಿದ್ದು ಸಾರ್ವಜನಿಕರ ಆಸಕ್ತಿಯನ್ನು ಕೆರಳಿಸಿತು. ಅದಕ್ಕಾಗಿ ಮೇ ೫ನೇ ತಾರೀಖು ಗಾಂಧೀಜಿಯವರ ದಸ್ತಗಿರಿಯಾಯಿತು. ಮೂರು ವಾರಗಳ ಮುನ್ನ ನೆಹ್ರೂ ಅವರ ದಸ್ತಗಿರಿಯಾಗಿತ್ತು. ಅಸಹಕಾರ ಚಳುವಳಿ ದೇಶದಲ್ಲೆಲ್ಲಾ ಹಬ್ಬಿತು. ಹಲವು ಲಕ್ಷ ಜನ ಜೈಲಿಗೆ ಹೋದರು. ಸರ್ಕಾರ ತಲ್ಲಣಿಸಿತು. ಸರ್ಕಾರದ ಆಗಿನ ಗೃಹಸಚಿವರಾಗಿದ್ದ ಎಮರ್ಸನ್ ಅವರು ಆಮೇಲೆ ನನಗೆ ಹೇಳಿದ ಒಂದು ಸಂಗತಿ ಜ್ಞಾಪಕವಿದೆ. ಇಂಡಿಯಾದ ಸ್ತ್ರೀಯರಲ್ಲಿ ಉಂಟಾದ ಜಾಗೃತಿ ಮತ್ತು ಅದರ ಕಾರಣವಾಗಿ ಅವರು ರಾಜಕೀಯದಲ್ಲಿ ವಹಿಸುತ್ತಿರುವ ಪಾತ್ರ ಬಹು ಆಶ್ಚರ್ಯವನ್ನುಂಟುಮಾಡಿದೆಯೆಂದು ಅವರು ಹೇಳಿದರು. ಇಡೀ ಇಂಡಿಯಾ ತಕಪಕ ಕುದಿಯುತ್ತಿತ್ತು. ಚಳುವಳಿ ಗಡಿನಾಡಿಗೂ ಹಬ್ಬಿತು.

೧೯೩೧ನೆಯ ಫೆಬ್ರವರಿಯಲ್ಲಿ ಮೋತಿಲಾಲ್ ನೆಹ್ರೂ ಮೃತರಾದರು. ಆಮೇಲೆ ಅದೇ ತಿಂಗಳಿನಲ್ಲಿ ಗಾಂಧೀಜಿ ಮತ್ತು ಲಾರ್ಡ್ ಇರ್ವಿನ್ ಅವರಲ್ಲಿ ಮಾತುಕತೆ ಆರಂಭವಾದುವು. ಗಾಂಧೀಜಿ ಯಾವಾಗಲೂ ಶಾಂತಿ ಸಂಧಾನಗಳಿಗೆ ಸಿದ್ಧರಾಗಿದ್ದರು. ಇರ್ವಿನರು ಸಂಧಾನಕ್ಕೆ ಬರಲು ಎಷ್ಟೇ ಸಿದ್ಧರಿದ್ದರೂ ಬ್ರಿಟಿಷ್ ಜನರ ಹಳೆಯ ಸಾಮ್ರಾಜ್ಯಶಾಹೀ ಭಾವನೆಗಳ ಕಾರಣ ಸಂಧಾನ ಮುರಿದುಬಿತ್ತು. ಆದರೂ ಎಲ್ಲಾ ವಿಚಾರಗಳನ್ನೂ ಲಂಡನ್‌ನಲ್ಲಿ ದುಂಡುಮೇಜು ಸಮ್ಮೇಳನ ಸೇರಿ ಚರ್ಚಿಸಬೇಕೆಂದು ತೀರ್ಮಾನವಾಯಿತು. ಆಗಸ್ಟ್ ೨೯ನೆಯ ತಾರೀಖು ಗಾಂಧೀಜಿ ಸಮ್ಮೇಳನದಲ್ಲಿ ಭಾಗವಹಿಸಲು ಇಂಡಿಯಾದಿಂದ ಹೊರಟರು. ಡಿಸೆಂಬರ್ ಕೊನೆಯಲ್ಲಿ ಅವರು ಹಿಂದಿರುಗಿದರು. ಜನವರಿ ೪ನೆಯ ತಾರೀಖು (೧೯೩೨) ಅವರ ದಸ್ತಗಿರಿ ಯಾಯಿತು; ಅನೇಕ ತಿಂಗಳ ದೀರ್ಘ ಜೈಲುವಾಸ ಅನುಭವಿಸಬೇಕಾಯಿತು.

ಈ ಕಾಲದಲ್ಲಿ ಕ್ರೈಸ್ತ ಸೇವಾ ಸಂಘದೊಡನೆ ನನ್ನ ಸಂಬಂಧ ಕಡಮೆಯಾಗುತ್ತಾ ಬಂದಿತು. ಸಬರ್ಮತಿಗೆ ಹೆಚ್ಚಾಗಿ ಹೋಗಿಬರುತ್ತಿದ್ದೆ. ನಾನು ಮೊಟ್ಟಮೊದಲು ಸಬರ್ಮತಿಯಲ್ಲಿ ತಂಗಿದ್ದಾಗ ನನಗೆ ಇಳಿದುಕೊಳ್ಳಲು ಗಾಂಧೀಜಿಯವರಿದ್ದ ಮನೆಯಲ್ಲಿಯೇ ಒಂದು ಕೋಣೆ ಸಿಕ್ಕಿತು. ಆ ಕೋಣೆಯಲ್ಲಿ ನಿಂತು ನೋಡಿದರೆ ವಿಶಾಲವಾದ ಸಬರ್ಮತಿ ನದಿಯ ಮರಳೂ ನೀರು ಕಾಣುತ್ತಿದ್ದವು. ಕೈಮಗ್ಗದ ಕೈಗಾರಿಕೆಯನ್ನು ನಾಶಮಾಡುತ್ತಿದ್ದ ಕಾರ್ಖಾನೆಗಳ ಎತ್ತರವಾದ ಚಿಮಣಿಗಳಿದ್ದುವು.

ಕಲೆಕ್ಟರ ಅರಮನೆ ಇತ್ತು. ಅದು ಇಂಡಿಯಾದ ಗಂಡಸುತನವನ್ನು ಹೀರಿದ ಪರಕೀಯ ಆಡಳಿತದ ಸಂಕೇತವಾಗಿತ್ತು. ರೈಲೂ ಇತ್ತು. ಅದು ಗಾಂಧೀಜಿಯ ಅಭಿಪ್ರಾಯದಲ್ಲಿ ಗ್ರಾಮಾಂತರ ಪ್ರದೇಶದ ಶಾಂತ ಜೀವನವನ್ನು ಹಾಳುಗೆಡಿಸುವುದಕ್ಕೆ ಏನೋ ಬೇಕೋ ಅಷ್ಟನ್ನೆಲ್ಲಾ ಮಾಡಿತ್ತು. ಈ ಕಡೆ ಆಶ್ರಮದ ತಗ್ಗು ಸೂರಿನ ಸರಳ ಮನೆಗಳಿದ್ದುವು. ಒಂದು ಕಡೆ ಪ್ರಪಂಚದ ಶಕ್ತಿಗಳೂ ಇನ್ನೊಂದು ಕಡೆ ಆಧ್ಯಾತ್ಮಿಕ ಶಕ್ತಿಗಳೂ ಕಣ್ಣಿಗೆ ಕಟ್ಟುವಂತೆ ನಿಂತಿದ್ದುವು : ಯಂತ್ರಬಲಕ್ಕೆ ವಿರುದ್ಧವಾಗಿ ಆತ್ಮಬಲ ; ಆಯುಧ ಬಲಕ್ಕೆ ಎದುರಾಗಿ ಪ್ರೇಮಬಲ.

ನಾನು ಮೊದಲು ಆಶ್ರಮಕ್ಕೆ ಹೋದಾಗ ನದಿ ನಿಧಾನವಾಗಿ ಏರುತ್ತಿತ್ತು. ಅಲ್ಲಿಯವರೆಗೂ ಕಾಣಿಸುತ್ತಿದ್ದ ಮರಳುದಿಣ್ಣೆಗಳು – ನೀರಿಗಾಗಿ ಹಾತೊರೆಯುತ್ತಿದ್ದ ಮರಳು ದಿಣ್ಣೆಗಳು – ಮಾಯವಾದುವು. ಬೇಸಗೆಯಲ್ಲಿ ಸಣ್ಣದಾಗಿ ಹರಿಯುತ್ತಿದ್ದ ನದಿ ಇನ್ನೇನು ದೊಡ್ಡ ಪ್ರವಾಹವಾಗಿ ದಡಮೀರಿ ಹರಿಯುವುದರಲ್ಲಿತ್ತು. ಆಗ ನಾನು ಹೀಗೆ ಬರೆದೆ; ಯುವಕನಾಗಿ ಬರೆದೆ 'ಇದೂ ಒಂದು ಸಂಕೇತ ಇರಬಹುದೆ ? ಪ್ರೇಮ, ಧರ್ಮ ಮತ್ತು ತ್ಯಾಗದ ಮೇಲೆ ಕಟ್ಟಿದ ಹೊಸ ಸಂಸ್ಕೃತಿಯೊಂದು ದೇವರ ಬೆಟ್ಟಗುಡ್ಡಗಳಿಂದ ಇಳಿದು ಆಧುನಿಕ ಪ್ರಪಂಚದ ಬೆಂಗಾಡು ಪ್ರದೇಶಕ್ಕೆ ಹರಿದುಬರುತ್ತಿರುವುದೇ ?'

ಆಶ್ರಮದ ದಿನಚರಿ ಬಹಳ ಕಟ್ಟುನಿಟ್ಟು. ಬೆಳಗ್ಗೆ ನಾಲ್ಕು ಗಂಟೆ ಹೊಡೆದಾಗ ಎಲ್ಲರೂ ಏಳಬೇಕು. ಎದ್ದ ಇಪ್ಪತ್ತು ನಿಮಿಷಗಳ ಅನಂತರ ಬಯಲಿನಲ್ಲಿ ಪ್ರಾರ್ಥನೆಗೆ ಸೇರಬೇಕು. ಸುಮಾರು ಒಂದು ಗಂಟೆ ಕಾಲ ಪ್ರಾರ್ಥನೆ. ಆರು ಗಂಟೆಗೆ ಅಲ್ಪ ಉಪಾಹಾರ : ಒಂದು ಲೋಟ ಹಾಲು, ಒಂದು ಚೂರು ರೊಟ್ಟಿ. ಅನಂತರ ಒಂದಾದ ಮೇಲೊಂದು ಕೆಲಸ. ನೂಲುವ ತರಗತಿಗೆ ಹೋಗಬೇಕು. ಹತ್ತಿ ಹಿಂಜಬೇಕು. ಹಿಂದೀ ಕಲಿಯಬೇಕು. ಹತ್ತು ಗಂಟೆಗೆ ಸ್ನಾನಮಾಡಬೇಕು ಮತ್ತು ಬಟ್ಟೆ ಒಗೆದುಕೊಳ್ಳಬೇಕು. ಈ ಕೆಲಸಕ್ಕೆ ಬೇರೆಯವರಿರಲಿಲ್ಲ. ಹತ್ತು ಮುಕ್ಕಾಲು ಗಂಟೆಗೆ ಚಪಾತಿ, ತರಕಾರಿ ಪಲ್ಯ ಮತ್ತು ಮೊಸರಿನ ಊಟ. ಆಮೇಲೆ ಹನ್ನೆರಡೂವರೆಯಿಂದ ಐದು ಗಂಟೆಯವರೆಗೆ ನೇಯುವುದು ಮತ್ತು ನೂಲುವುದು. ಕೆಲವು ವೇಳೆ ನೂಲುವುದು ಮತ್ತು ನೆಯ್ಯುವುದರ ಮೇಲೆ ಪಾಠ ನಡೆಯುತ್ತಿತು. ಅಂತೂ ಕನಿಷ್ಠ ಪಕ್ಷ ಎರಡು ಗಂಟೆ ನೇಯುವುದರಲ್ಲಿ, ಒಂದು ಗಂಟೆ ನೂಲುವುದರಲ್ಲಿ ಕಳೆಯುತ್ತಿತ್ತು. ಸಾಯಂಕಾಲ ಐದೂವರೆ ಗಂಟೆಗೆ ಸಂಜೆ ಊಟ. ಚಪಾತಿ, ಬೇಯಿಸಿದ ತರಕಾರಿ, ಸ್ವಲ್ಪ ಅನ್ನ, ಹಾಲು ಮತ್ತು ಹಣ್ಣು. ಇದಾದ ನಂತರ ಆರೂಕಾಲು ಗಂಟೆಗೆ ಗಾಳಿಸವಾರಿ. ಇದು ನನಗೆ ಬಹಳ ಸಡಗರದ ಕಾಲ. ನಾವೆಲ್ಲಾ ಗಾಂಧೀಜಿಯ ಸುತ್ತ ಗುಂಪಾಗಿ ಗಾಳಿಸವಾರಿಗೆ ಹೋಗುತ್ತಿದ್ದೆವು. ಗಾಂಧೀಜಿ ಗುಂಪಿನಲ್ಲಿ ಒಬ್ಬರನ್ನು ಆರಿಸಿಕೊಂಡು ಅವರೊಡನೆ ಸಂಭಾಷಣೆ ಮಾಡುತ್ತಾ ಹೋಗುತ್ತಿದ್ದರು. ಏಳೂವರೆಗೆ ಸಂಜೆಯ ಪ್ರಾರ್ಥನೆ. ಅನಂತರ ಕೊಂಚ ವಿಶ್ರಾಂತಿ. ಒಂಬತ್ತು ಗಂಟೆಗೆ ಮಲಗಿಕೊಳ್ಳಲು ಬಾರಿಸುವ ಗಂಟೆ.

ಇದೆಲ್ಲಾ ನಾನು ಪುನಃ ಶಾಲೆಗೆ ಹಿಂದಿರುಗಿದಂತಿತ್ತು. ಎಲ್ಲಿ ಹೊತ್ತಾಗಿ ಬಿಡುವುದೋ ಎಂದು ಹೆದರಿ ಓಡುತ್ತಿದ್ದೆ. ಗಾಂಧೀಜಿಯವರನ್ನು 'ಬಾಪು' ಎಂದು ಕರೆಯುತ್ತಿದ್ದೆವು. ಅವರು ದಿನಚರಿಯನ್ನು ರೈಲ್ವೆ ಟ್ರೈನಿಗೆ ಹೋಲಿಸುತ್ತಿದ್ದರು. ಸ್ಟೇಷನ್ನಿಗೆ ಹೊತ್ತಾಗಿ ಹೋದರೆ ಟ್ರೈನು ಸಿಕ್ಕುವುದಿಲ್ಲ; ಅಂತೆಯೇ ಊಟಕ್ಕೆ ಹೊತ್ತಾಗಿ ಬಂದರೆ ಊಟ ಸಿಕ್ಕದು. ತುಂಬ ಕಟ್ಟುನಿಟ್ಟಾದ ಶಿಸ್ತು. ಬೆಳಗ್ಗೆ ಮತ್ತು ಸಾಯಂಕಾಲದ ಪ್ರಾರ್ಥನೆ ವೇಳೆ ಹೆಸರು ಕರೆಯುತ್ತಿದ್ದರು. ಸಾಯಂಕಾಲದ ವೇಳೆ ಆ ದಿವಸ ಎಷ್ಟು ನೂಲು ನೂತವೆಂದು ಹೇಳಬೇಕಾಗಿತ್ತು. ವಿದ್ಯಾರ್ಥಿಗಳ ಜೊತೆ ನನ್ನ ಹೆಸರನ್ನೂ ಕರೆಯುತ್ತಿದ್ದರು. ನಾನಿದ್ದಾಗ ಆಶ್ರಮದಲ್ಲಿ ಹುಡುಗರು ಹುಡುಗಿಯರು, ಗಂಡಸರು, ಹೆಂಗಸರು, ಮದುವೆಯಾದವರು ಆಗದವರು ಎಲ್ಲಾ ಸೇರಿ ನೂರೈವತ್ತು ಜನ ಇದ್ದರು. ಕಟ್ಟುನಿಟ್ಟಾದ ಬ್ರಹ್ಮಚರ್ಯವನ್ನು ಎಲ್ಲರೂ – ಮದುವೆಯಾದವರೂ ಕೂಡ – ಅನುಸರಿಸಬೇಕಾಗಿತ್ತು. ಗಂಡು ಹೆಣ್ಣು ಒಂದೇ ಕಡೆ ಇದ್ದು ಸಂಯಮ ಜೀವನ ನಡೆಸುವ ಒಂದು ಪ್ರಯೋಗಶಾಲೆಯಾಗಿತ್ತು ಆಶ್ರಮ. ಆದರೆ ಅದು ಎಷ್ಟರಮಟ್ಟಿಗೆ ಯಶಸ್ವಿಯಾಗಿ ನಡೆಯಿತು ಎಂದು ಹೇಳಲು ನಾನು ಇಚ್ಛಿಸುವುದಿಲ್ಲ.

ಆಶ್ರಮಜೀವನದ ಮುಖ್ಯ ಲಕ್ಷಣಗಳೇನೆಂದರೆ : ಶಾರೀರಿಕ ಶ್ರಮ – ಇದಕ್ಕಾಗಿ ಎಂಟು ಗಂಟೆ ಕೆಲಸಮಾಡಬೇಕು; ಮಿತವ್ಯಯ – ತಿಂಗಳಿಗೆ ಹನ್ನೆರಡು ರೂಪಾಯಿಗಳಿಗಿಂತ ಹೆಚ್ಚು ಖರ್ಚಾಗಕೂಡದು ಮತ್ತು ಯಾರಿಗೂ ಸ್ವಂತ ಆಸ್ತಿ ಇರಕೂಡದು; ಶಿಸ್ತು; ಸ್ವಚ್ಛತೆ; ಕಾಲನಿಷ್ಠೆ ಮತ್ತು ಆಜೀವ ಸದಸ್ಯತನ. ಆರು ವಾಗ್ದಾನಗಳನ್ನು ಮಾಡಬೇಕಾಗಿತ್ತು. ಅವು ಯಾವುವೆಂದರೆ : ಸತ್ಯ, ಅಹಿಂಸೆ, ಬ್ರಹ್ಮಚರ್ಯ, ಜಿಹ್ವಾಬಂಧನ, ಕದಿಯದಿರುವುದು ಮತ್ತು ಏನನ್ನೂ ಹೊಂದದಿರುವುದು.

ನಾಲಗೆ ಬಿಗಿಹಿಡಿಯುವುದು ಭಾರಿ ಕಷ್ಟವೆಂದು ಬಾಪು ಒಂದು ಸಲ ಹೇಳಿದರು. ಕೊಂಚ ನಾಚಿಕೆಯಿಂದ ಅವರು ಪಿಸುಮಾತಿನಲ್ಲಿ ರುಚಿಯಾದ ತಿಂಡಿಯ ಮೇಲೆ ತಮಗೂ ಆಸೆ ಅಂತ ತಿಳಿಸಿದರು. ಅವರ ಹುಟ್ಟು ಊರಾದ ಗುಜರಾತಿನಲ್ಲಿ ಅತ್ಯಂತ ರುಚಿಯಾದ ಶಾಖಾಹಾರ ತಯಾರಿಸುತ್ತಾರೆ. ಬಾಪು ಅವರೇ ಎಲ್ಲರಿಗೂ ಮೇಲ್ಪಂಕ್ತಿ ಹಾಕಿಕೊಟ್ಟರು. ಕಾಯಕವನ್ನು ತಪ್ಪದೆ ಮಾಡುತ್ತಿದ್ದರು. ಊಟ ಎಷ್ಟುಬೇಕೋ ಅಷ್ಟೇ. ಬಡ ರೈತನು ಉಡುವಷ್ಟೇ ಬಟ್ಟೆ ಉಡುತ್ತಿದ್ದರು. ಅವರ ಹೆಸರಾಂತ ದಟ್ಟಿಯನ್ನು ಒಗೆಯುವ ಗೌರವ ಒಮ್ಮೆ ನನಗೆ ದೊರಕಿತ್ತು. ಆಗ ನೋಡಿದೆ. ಆ ದಟ್ಟಿಯಲ್ಲಿ ಎಷ್ಟು ಬೇಕೊ ಅಷ್ಟು ಮಾತ್ರ ಬಟ್ಟೆ ಇದ್ದುದನ್ನು ಹೆಚ್ಚಾದ್ದನ್ನೆಲ್ಲಾ ಕರವಸ್ತ್ರಕ್ಕೆ ಕತ್ತರಿಸಿ ತೆಗೆಯಲಾಗಿತ್ತು. ಅವರು ರೈಲಿನಲ್ಲಿ ಯಾವಾಗಲೂ ಮೂರನೆಯ ತರಗತಿಯಲ್ಲಿಯೇ ಪ್ರಯಾಣ ಮಾಡುತ್ತಿದ್ದರು. ಅವರು ಬರೆದ ಪುಸ್ತಕಗಳ ಮೇಲೆ ಯಾವ ಸ್ವಾಮ್ಯವನ್ನೂ ಇಟ್ಟುಕೊಂಡಿರಲಿಲ್ಲ. ಸಬರ್ಮತಿಯಲ್ಲಿದ್ದ ಅವರ ವಾಸದ

ಗುಡಿಸಲಿನಲ್ಲಿಯೇ ಆಗಲಿ, ಅವರು ದಸ್ತಗಿರಿಯಾದಾಗ ಇದ್ದ ಕೇರಡಿಯ ಗುಡಿಸಲಿನಲ್ಲಿಯೇ ಆಗಲಿ ಹೆಚ್ಚು ಸಾಮಾನುಗಳಿರಲಿಲ್ಲ. ಅವರ ಎಂಥ ಸಾಮಾನ್ಯ ಅನುಯಾಯಿಗೂ ಅದು ತನ್ನ ಮನೆ ಎನ್ನುವ ಭಾವನೆ ಬರುವಂತಿತ್ತು. ಅವರು ತಮ್ಮ ಅಸಂಖ್ಯಾತ ಪತ್ರಗಳನ್ನು ಚೂರುಪಾರು ಕಾಗದದ ಮೇಲೆ ಬರೆಯುತ್ತಿದ್ದರು. ಒಂದಿಷ್ಟೂ ಕಾಗದವನ್ನು ಹಾಳುಮಾಡುತ್ತಿರಲಿಲ್ಲ. ದೇವರ ಪೂಜೆ ಹೇಗೊ ಹಾಗೆ ಬಾಪುವಿಗೆ ಸರಳ ಜೀವನವನ್ನೆವುದು ಧಾರ್ಮಿಕ ಸಾಹಸವಾಗಿತ್ತು.

ಅವರ ಸಂನ್ಯಾಸಜೀವನ ಸ್ವಚ್ಛಂದವಾದ ಗಾಳಿಯಂತೆ. ಆಕಾಶದ ಕೆಳಗೆ, ನಕ್ಷತ್ರಗಳ ಶಾಂತವಾತಾವರಣದಲ್ಲಿ ಅವರು ಮಲಗುತ್ತಿದ್ದರು. ಅರಳುವ ಹೂವಿನಂತೆ, ಹೊಸ ಹಣ್ಣಿನಂತೆ, ಅಗಲವಾಗಿ ಹರಿವ ನದಿಯಂತೆ ಅವರ ಜೀವನ. ಹೊತ್ತುಮೂಡುವ ಮುಂಚೆ ಎದ್ದು ಅವರು ಪ್ರಾರ್ಥನೆಮಾಡುತ್ತಿದ್ದರು. ಬೆಳಗಿನ ಶುದ್ಧಗಾಳಿಯಲ್ಲಿ ಅವರು ಅಡ್ಡಾಡುತ್ತಿದ್ದರು.

ಸಬರ್ಮತಿ ಆಶ್ರಮದಲ್ಲಿದ್ದಾಗ ಹತ್ತಿಯನ್ನು ನೂಲುವುದಕ್ಕೂ ನೇಯುವುದಕ್ಕೂ ನನಗೆ ತುಂಬ ಸಂತೋಷವಾಗುತ್ತಿತ್ತು. ಅದೆಲ್ಲಾ ನನಗೆ ಹೊಸದಾಗಿದ್ದರೂ ಆ ಶಾರೀರಕ ಕೆಲಸ ಮನಸ್ಸಿಗೆ ಒಪ್ಪುತ್ತಿತ್ತು. ಬಿಲ್ಲನ್ನು ಮಿಡಿದು ಹತ್ತಿಯನ್ನು ಎಕ್ಕಿದಾಗ ನೊರೆಯಂತೆ ಉಕ್ಕುವ ಹತ್ತಿಯ ರಾಶಿಯನ್ನು ನೋಡಿ ನನ್ನ ಮನಸ್ಸೂ ಹಿಗ್ಗುತ್ತಿತ್ತು. ಒಂದೇ ಸಮನಾದ ದಾರವನ್ನು ತೆಗೆಯುವುದು, ಅದಕ್ಕಿಂತ ಹೆಚ್ಚಾಗಿ ನೇಯುವುದು, ನಾವು ನೋಡುತ್ತಿದ್ದಂತೆಯೇ ನೂಲು ಬಟ್ಟೆಯಾಗುವುದು – ಇವೆಲ್ಲಾ ನನ್ನ ಮನಸ್ಸನ್ನು ಸೂರೆಗೊಳ್ಳುತ್ತಿದ್ದುವು. ಮುಂದೆಯೂ ಇದೇ ರೀತಿ ಮಾಡಿಕೊಂಡು ಹೋಗಿದ್ದರೆ ಚೆನ್ನಾಗಿತ್ತು. ಹಾಗೆ ಮಾಡಿದ್ದರೆ ಅದು ನಾನು ಸೇದುವ ಚುಟ್ಟಾದಷ್ಟೇ ಹಿತಕರವಾಗುತ್ತಿತ್ತು.

ನಾನು ಬಾಪುವನ್ನು ಅಧ್ಯಾತ್ಮ ದೃಷ್ಟಿಯಿಂದಲೂ ನೋಡಿದೆ. ವೈಸರಾಯರನ್ನು ನೋಡುವುದಕ್ಕೆ ಹೋಗುವಾಗ ದಾರಿಯಲ್ಲಿಯೂ ಸಹ ಅವರು ಆಶ್ರಮವಾಸಿಗಳಿಗೆ ಅಧ್ಯಾತ್ಮ ಜೀವನದ ಬಗ್ಗೆ ಅನೇಕಾನೇಕ ಕಾಗದಗಳನ್ನು ಬರೆದು ಬುದ್ಧಿ ಹೇಳುತ್ತಿದ್ದರು. ತಮ್ಮ ಅನುಯಾಯಿಗಳನ್ನೆಲ್ಲಾ ಅವರು ಚೆನ್ನಾಗಿ ಅರಿತಿದ್ದರು. ಅವರ ತಪ್ಪೊಪ್ಪಿಗೆಯನ್ನು ಕೇಳುತ್ತಿದ್ದರು. ಬುದ್ಧಿವಾದ ಹೇಳುತ್ತಿದ್ದರು ಮತ್ತು ಅವರ ಸೇವೆಗೆ ಸದಾ ಸಿದ್ಧರಾಗಿರುತ್ತಿದ್ದರು. ಹದಿನೇಳು ವರ್ಷದ ಹುಡುಗನೊಬ್ಬ ನನಗೆ ಹೇಳಿದ, 'ಅವರ ಬಳಿಗೆ ಹೋಗಿ ನಾನು ಮಾಡಿದ ಕೆಟ್ಟ ಕೆಲಸಗಳನ್ನೆಲ್ಲಾ ಹೇಳಿದೆ. ಆಗ ನನಗಾದ ಸಮಾಧಾನ ಎಷ್ಟೆಂದು ಹೇಳಲಿ!' ಎಂದು. ಒಬ್ಬರು ಬಂದು ತಮ್ಮ ಜೀವನದಲ್ಲಿ ಏನು ಮಾಡಬೇಕೆಂದು ಬಾಪುವನ್ನು ಕೇಳಿದರು. ಅದಕ್ಕೆ ಬಾಪು, 'ಮೊದಲು ಸತ್ಯವನ್ನು ಅರಸು. ಆಮೇಲೆ ಉಳಿದುದೆಲ್ಲ ನಿನಗೆ ದೊರಕುವುದು' ಎಂದು ಹೇಳಿದರು. ಅವರು ಭಾರಿ ಕಟ್ಟುನಿಟ್ಟಾಗಿದ್ದೂ ನಮ್ಮ ಕಷ್ಟವನ್ನು ಅರ್ಥಮಾಡಿಕೊಳ್ಳುತ್ತಿದ್ದರು. ಎಂಥ ಸಣ್ಣ ವಿಷಯವಾದರೂ ಅದರಲ್ಲಿ ತಲ್ಲೀನವಾಗುತ್ತಿದ್ದರು.

ನಾನು ಆಶ್ರಮಕ್ಕೆ ಹೋಗುವುದಕ್ಕೆ ಕೆಲವು ವರ್ಷಗಳ ಮೊದಲೇ ಮೀರಾಬೆನ್ ಎಂದು ಹೆಸರಾದ ಮಿಸ್ ಸ್ಲೇಡ್ ಅವರು ರೊಮೆನ್ ರೊಲಾಂಡರ ಪ್ರೇರಣೆಯ ಮೇಲೆ ಸಬರ್ಮತಿ ಆಶ್ರಮವನ್ನು ಸೇರಿದ್ದರು. ಆಕೆ ತುಂಬ ಬುದ್ಧಿವಂತೆ ಹಾಗೂ ಸುಂದರಿಯಾದ ಹುಡುಗಿ. ಕಠೋರ ನಿರ್ಧಾರ ಮಾಡಬಲ್ಲವಳಾಗಿದ್ದಳು. ಹೆಸರಾಂತ ಮನೆತನದ ಹೆಣ್ಣು ಆಕೆ. ಆದರೆ ನಾನು ಆಶ್ರಮಕ್ಕೆ ಹೋಗುವುದರೊಳಗೆ ಆಕೆ ತನ್ನ ಸುಂದರ ಕೂದಲನ್ನೆಲ್ಲಾ ಕತ್ತರಿಸಿಹಾಕಿದ್ದಳು. ಬಾಪು ಆಕೆಯನ್ನು ತಮ್ಮ ಮಗಳೆಂದು ಭಾವಿಸಿದ್ದರು. ೧೯೩೦ನೆಯ ಇಸವಿಯಲ್ಲಿ ಒಂದು ದಿನ ಅವರು ನನ್ನನ್ನು ಕುರಿತು, 'ಮೀರಾನೆನ್ ನನ್ನ ಮಗಳಾಗಿರುವಂತೆ, ನೀನು ನನ್ನ ಮಗನಾಗಿರುವೆ' ಎಂದಾಗ ನನಗಾದ ಆನಂದ ಅಷ್ಟಿಷ್ಟಲ್ಲ. ಅಂದಿನಿಂದ ನಾನು ಇಂಡಿಯಾಕ್ಕೆ ಸೇರಿದವನೆಂದು ಭಾವಿಸಿದೆ.

ಆಶ್ರಮದಲ್ಲಿ ನನ್ನನ್ನು ನೋಡಿಕೊಂಡವಳೆಂದರೆ ಮೀರಾಬೆನ್. ಬೆಳಗ್ಗೆ ಒಂದು ಕಪ್ಪು ಟೀ ಕುಡಿದ ಹೊರತು, ೪ ಗಂಟೆ ೨೦ ನಿಮಿಷಕ್ಕೆ ನಡೆಯುವ ಪ್ರಾರ್ಥನೆಯಲ್ಲಿ ನಾನು ಭಾಗವಹಿಸುವುದು ಸಾಧ್ಯವಿಲ್ಲ ಎಂದು ಬಾಪುಗೆ ಹೇಳಿದೆ. ನನಗೆ ಬೇಕಾದ ಟೀಯನ್ನು ಮೀರಾಬೆನ್ ಕೊಡುತ್ತಿದ್ದಳು. ಈ ಸೌಲಭ್ಯ ಪಡೆದ ಕೆಲವೇ ಕೆಲವರಲ್ಲಿ ನಾನೊಬ್ಬನೆಂದು ಕಾಣುತ್ತೆ.

ನನಗೆ ಆಶ್ರಮದಲ್ಲಿದ್ದಾಗ ಅಲ್ಲಿಗೆ ಬರುತ್ತಿದ್ದ ಆಗಂತುಕರಿಂದ ಬಹಳ ತಾಪತ್ರಯವಾಗುತ್ತಿತ್ತು. ನಾನಿದ್ದ ಕೋಣೆಯ ಕಿಟಕಿಗಳಿಗೆ ಸಲಾಕಿಗಳಿದ್ದುವೇ ಹೊರತು ಮುಚ್ಚಲು ಗಾಜಿನ ಕದಗಳಿರಲಿಲ್ಲ. ನಾನು ಒಂದು ಬಗೆಯ ಪಂಜರದಲ್ಲಿರುವೆನೊ ಎಂದು ಭಾಸವಾಗುತ್ತಿತ್ತು. ದಿನವೂ ಆಶ್ರಮಕ್ಕೆ ಜನ ತಂಡೋಪತಂಡವಾಗಿ ಬರುತ್ತಿದ್ದರು. ಅವರೆಲ್ಲಾ ನನ್ನನ್ನೂ ನೋಡಲು ಬರುತ್ತಿದ್ದರು. ಕಿಟಕಿಯಲ್ಲಿ ಇಣುಕಿನೋಡಿ ಹೋಗುತ್ತಿದ್ದರು. ನಾನು ಮಲಗಿರಲಿ, ಊಟಮಾಡುತ್ತಿರಲಿ, ಬಟ್ಟೆ ಹಾಕಿಕೊಳ್ಳುತ್ತಿರಲಿ ಜನರು ಬಂದು ಇಣುಕಿನೋಡಿದ್ದೂ ನೋಡಿದ್ದೆ. ಅನೇಕ ಸಲ ನನ್ನನ್ನು ಮೀರಾಬೆನ್ ಎಂದು ಭಾವಿಸಿದ್ದೂ ಉಂಟು. ಕೂದಲು ಕತ್ತರಿಸಿಕೊಂಡ ಆಕೆ ಸ್ವಲ್ಪ ಹೆಚ್ಚು ಕಡಮೆ ಗಂಡಸಿನಂತೆ ಕಾಣುತ್ತಿದ್ದಳು. ನೆಲ ಗುಡಿಸುವ ಪಂಚೆ ಉಟ್ಟ ನಾನು ಹೇಗೆ ಬೇಕಾದರೂ ಕಾಣುತ್ತಿದ್ದೆ ಅನ್ನಿ. ಕಿಟಕಿಯ ಬಳಿ ಬಂದ ಜನ ಮಕ್ಕಳನ್ನು ಎತ್ತಿ ನನ್ನ ಕಡೆಗೆ ತೋರಿಸುತ್ತಿದ್ದರು. ನನ್ನನ್ನು ಒಂದೇ ಸಮನೆ ನೋಡಿ ಅನಂತರ, 'ಇಂಗ್ಲಿಷ್ ನೌಕಾಧಿಕಾರಿಯೊಬ್ಬನ ಮಗಳಂತಪ್ಪ ಇವಳು !' ಎಂದು ಪಿಸುಮಾತಿನಲ್ಲಿ ಅನ್ನುತ್ತಿದ್ದರು.

ಆಶ್ರಮದಲ್ಲಿ ಎಲ್ಲರಿಗೂ ಗುಡಿಸುವ ಸರದಿ ಬರುತ್ತಿತ್ತು. ಕಕ್ಕಸುಗಳನ್ನು ಶುಚಿಮಾಡುವುದು ನಮ್ಮ ಗೌರವಕ್ಕೆ ಕಡಮೆ ಎಂಬ ಭಾವನೆಗೆ ಆಶ್ರಮದಲ್ಲಿ ಎಡೆಯಿರಲಿಲ್ಲ. ಕಕ್ಕಸದ ವಾಸನೆ ಎಂದರೆ ಗಾಂಧೀಜಿ ಮೂಗು ಮುಚ್ಚಿಕೊಳ್ಳುತ್ತಿರಲಿಲ್ಲ. ಹೀಗಾಗಿ ಅವರು ಕಕ್ಕಸುಗಳ 'ಇನ್‌ಸ್ಪೆಕ್ಷನ್'ಗೆ ಹೋದಾಗ ಮೀರಾಬೆನ್ನಳೂ ಒಮ್ಮೊಮ್ಮೆ ನಾನೂ ಅವರೊಡನೆ ಹೋಗಿ ವಾಸನೆಯಿಂದ ಅವುಗಳ ಸ್ವಚ್ಛತೆಯ ಬಗ್ಗೆ ವರದಿಮಾಡಬೇಕಾಗಿತ್ತು.

ಹಿಂದಿನದನ್ನು ಈಗ ನೆನಪಿಕೊಂಡರೆ ಆಶ್ರಮದಲ್ಲಿ ಬ್ರಹ್ಮಚರ್ಯದ ಬಗ್ಗೆ ಹಾಕಿದ್ದ ನಿಯಮಗಳು ಅತಿ ಎಂತಲೇ ನನಗೆ ಅನ್ನಿಸುತ್ತದೆ. ಆದರೆ ಆಗ ಅನ್ನಿಸಲಿಲ್ಲ. ಗಂಡಹೆಂಡಿರೂ ಸಹ ಅಣ್ಣತಂಗಿಯರಂತೆ ಇರಬೇಕಾಗಿತ್ತು. ಇದು ಭಾರಿ ಕಷ್ಟವಾಗುತ್ತಿತ್ತು. ಸ್ತ್ರೀ ಪುರುಷರು ಅಪ್ಪಿತಪ್ಪಿ ತಪ್ಪು ಮಾಡಿದರೆ ಅದಕ್ಕೆ ಕ್ರೂರ ಶಿಕ್ಷೆ ವಿಧಿಸಲಾಗುತ್ತಿತ್ತು. ಒಮ್ಮೆ ಚಿಕ್ಕವಯಸ್ಸಿನ ಗಂಡಹೆಂಡಿರು ಮಾಡಿದ ತಪ್ಪಿನ ವಿಚಾರಣೆಯನ್ನು ಗಾಂಧೀಜಿ ನಡೆಸುತ್ತಿರುವಾಗ ನಾನೂ ಇದ್ದೆ. ಆಗ, 'ನಾನು ದಕ್ಷಿಣ ಆಫ್ರಿಕಾದಲ್ಲಿದ್ದಾಗ ನನ್ನ ಅನುಭವದಂತೆ....' ಎಂದು ಬಾಪು ಆರಂಭಿಸಿದಾಗ, ಅಲ್ಲಿಯೇ ಇದ್ದ ಅವರ ಹೆಂಡತಿ ಕಸ್ತೂರಿಬಾ, 'ಬೇಡಿ ಬೇಡಿ, ಆ ಮಾತು ಹಾಗಿರಲಿ' ಎಂದು ತಡೆದರು.

ಇದು ಎಷ್ಟು ಅತಿರೇಕಕ್ಕೆ ಹೋಗಿತ್ತು ಎನ್ನುವುದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ಬೊಂಬಾಯಲ್ಲಿದ್ದಾಗ ಒಮ್ಮೆ ನಾನು ಮೀರಾಬೆನ್ನಳಿದ್ದ ಮನೆಗೆ ಊಟಕ್ಕೆ ಹೋಗಿದ್ದೆ. ಆಕೆ ಇದ್ದುದು ಸಮುದ್ರ ತೀರದಲ್ಲಿದ್ದ ಒಂದು ಮಹಡಿ ಮನೆಯಲ್ಲಿ, ಸಂತೋಷವಾಗಿ ಮಾತುಕತೆ ನಡೆಯುತ್ತಿದ್ದಾಗ ಊಟ ಬಂದಿತು. ನೆಲದ ಮೇಲೆ ತಟ್ಟೆ ಹಾಕಿ ಬಡಿಸಿದಳು. ಎದ್ದು ಕಿಟಕಿಗಳನ್ನು ಮುಚ್ಚಿದಳು. ತುಂಬಾ ಶೆಖೆಯ ಕಾರಣ ಮುಚ್ಚಬೇಡ ಎಂದೆ ನಾನು. ಅದಕ್ಕೆ ಆಕೆ, 'ಬೇಡ, ವೆರಿಯರ್ ಸಮುದ್ರದ ಗಾಳಿಯಲ್ಲಿ ಉಪ್ಪಿನ ಕಣಗಳಿರುತ್ತವೆ. ಅವು ಅನ್ನದ ಮೇಲೆ ಬೀಳುತ್ತವೆ. ಅಂಥ ಊಟವನ್ನು ತಿಂದರೆ ನಿನ್ನ ಮನಸ್ಸನ್ನು ಬಿಗಿಹಿಡಿಯುವುದು ಇನ್ನೂ ಕಷ್ಟ' ಎಂದಳು.

ಬಾಪು ಎಲ್ಲರನ್ನೂ ಸತ್ಯದ ದೃಷ್ಟಿಯಿಂದ ನೋಡುತ್ತಿದ್ದರು. ೧೯೩೩ನೆಯ ಇಸವಿಯ ಪ್ರಾರಂಭದಲ್ಲಿ ನಾನು ಹೆಚ್ಚು ಕಡಮೆ ಮದುವೆಮಾಡಿಕೊಂಡಂತೆಯೇ ಆಗಿಬಿಟ್ಟಿತ್ತು. ಈ ಸಂಗತಿಯನ್ನು ಬಾಪುಗೆ ಬರೆದು ತಿಳಿಸಿದೆ. ಆಗ ಎರವಾಡ ಜೈಲಿನಲ್ಲಿದ್ದ ಅವರು ನನಗೆ ತಮ್ಮದೆ ಆದ ರೀತಿಯಲ್ಲಿ ಪ್ರೀತಿಪೂರ್ವಕವಾದ ಉತ್ತರ ಬರೆದರು : 'ನನ್ನ ಅಚ್ಚುಮೆಚ್ಚಿನ ಮಗನೇ, ನಿನಗೆ ತೋಚಿದ ದಾರಿಯಲ್ಲಿ ನೀನು ನಡೆದಿದ್ದೀ. ನನ್ನ ಜವಾಬ್ದಾರಿ ನನಗಿದೆ. ಯಾವ ಕಾಲಕ್ಕೂ ನೀನು ಮಗನಾಗಿಯೇ ಉಳಿಯುವೆ. ರಕ್ತ ಸಂಬಂಧಕ್ಕಿಂತ ಹೆಚ್ಚಾದದ್ದು ನನ್ನ ನಿನ್ನ ಸಂಬಂಧ. ಏನೇ ಆದರೂ ಅದು ಸತ್ಯದ ಬಗ್ಗೆ ಇಟ್ಟಿರುವ ಅಪಾರ ಪ್ರೇಮ. ಆದ್ದರಿಂದ ನೀನು ಏನು ಮಾಡಿದರೂ ನನಗೆ ನಿರಾಶೆಯಿಲ್ಲ. ಆದರೆ ಮನಸ್ಸಿಗೆ ವ್ಯಥೆಯಾಯಿತು.

'ಮದುವೆಗಿಂತ ಬ್ರಹ್ಮಚರ್ಯ ಹೆಚ್ಚೆಂದು ನಾನು ಹೇಳುತ್ತಿಲ್ಲ. ನಾನು ಚಿಂತಿಸುತ್ತಿರುವುದು ನೀನು ಮಾಡಿದ್ದ ತೀರ್ಮಾನವನ್ನು ಮತ್ತು ಹೆಚ್ಚು ಕಡಮೆ ನೀನು ಕೊಟ್ಟ ಮಾತನ್ನು. ಆದರೆ ನಿನ್ನ ಮನಸ್ಸಿನಂತೆ ನೀನು ನಡೆಯಬೇಕಾಗಿ ಬಂದದ್ದನ್ನು ನಾನು ಅರಿತಿದ್ದೇನೆ. ಒಳಗೊಂದು ಹೊರಗೊಂದು ಇರಬಾರದೆಂಬುದು ನನಗೆ ಗೊತ್ತಿದೆ.'

ಮುಂದುವರಿದು ತಮ್ಮ ಪತ್ರದಲ್ಲಿ ನನ್ನ ಮದುವೆಗೆ ತಮ್ಮ ಆಶೀರ್ವಾದಗಳನ್ನು ಕಳುಹಿಸಿದ್ದರು. ಆದರೆ ಆ ಮದುವೆ ಆಗಲಿಲ್ಲ ಎನ್ನಿ. ಕೊನೆಯಲ್ಲಿ ಬಾಪು ಹೀಗೆ ಹೇಳಿದರು : 'ನೀನು ಮದುವೆಯಾಗಬಾರದೆಂದು ತೀರ್ಮಾನಮಾಡಿದ ಪಕ್ಷದಲ್ಲಿ ಆಗ ನೀನು ಪ್ರೇಮವನ್ನೇ ಮದುವೆಯಾಗುವೆ. ಅಂಥ ಅಲೌಕಿಕ ಮದುವೆಯಾದಾಗ ಗಂಡಸರು ಹೆಂಗಸರೆಲ್ಲಾ ಹೆಂಗಸರಾಗುತ್ತಾರೆ. ಸತ್ಯವೊಂದೇ ಹೆಂಗಸರ ಗಂಡ, ಒಡೆಯ ಹಾಗೂ ದೇವರು.'

ಆ ಕಾಲದ ನನ್ನ ಸ್ವಂತ ಅನುಭವಗಳನ್ನು ನಾನು ಚೆನ್ನಾಗಿ ಬರೆದಿಡಲಿಲ್ಲ. ೧೯೩೧ನೆಯ ಇಸವಿಯಲ್ಲಿ ಮಾಡಿದ ರೈಲ್ವೆ ಪ್ರಯಾಣದ ವಿವರ ಈ ರೀತಿ ಇದೆ. ಬೊಂಬಾಯಿಗೆ ಹೋಗಲು ಮೂರು ಮೂರನೆಯ ತರಗತಿ ಚಿಕ್ಕಗಾಡಿಗಳನ್ನು ಕಾದಿಡಲಾಗಿತ್ತು. ರೈಲ್ವೆ ಪ್ಲಾಟ್‌ಫಾರಮ್‌ಗೆ ಬಂದವರಲ್ಲಿ ನಾನೇ ಮೊದಲನೆಯವನು. ಅನಂತರ ಮೀರಾಬೆನ್ ಬಂದಳು. ಅವಳ ಜೊತೆ ಬಾಪು ಬೊಂಬಾಯಿಗೆ ಶುಶ್ರೂಷೆಗೆ ಕರೆದುಕೊಂಡು ಹೊರಟಿದ್ದ ಒಬ್ಬ ರೋಗಿ ಹುಡುಗ ಮತ್ತು ರೋಗಿ ಹೆಂಗಸರಿದ್ದರು. ಆಮೇಲೆ ಪ್ಯಾರೇಲಾಲ್ ಬಂದರು. ಒಂದು ಬಸ್ಸಿಗಾಗುವಷ್ಟು ಸಾಮಾನಿತ್ತು ಅವರ ಬಳಿ. ಹಾಸಿಗೆಗಳು, ಆಹಾರದ ಬುಟ್ಟಿಗಳು, ಚರಕಗಳು, ನೀರಿನ ಹೂಜಿಗಳು, ಆ ಗಂಟು ಈ ಗಂಟು, ರಾಶಿರಾಶಿಯಾಗಿ ಸಾಮಾನುಗಳಿದ್ದುವು. ಅವನ್ನೆಲ್ಲಾ ಸಣ್ಣ ಗಾಡಿಯೊಂದಕ್ಕೆ ತುರುಕಿದರು. ಕೊನೆಗೆ ಇನ್ನೇನು ರೈಲು ಹೊರಡಬೇಕು ಆಗ ಬಾಪು ಮತ್ತು ಬಾ ಅವರು ಜಮ್ನಾಲಾಲ್ ಬಜಾಜರು ಮತ್ತು ತಮ್ಮ ಕಾರ್ಯದರ್ಶಿಗಳೊಡನೆ ಬಂದರು. ಬಾಪು ಬರುವರೆಂದು ಯಾರಿಗೂ ಗೊತ್ತಿರಲಿಲ್ಲ. ಆದ್ದರಿಂದ ಭಾರಿ ಜನಸಂದಣಿ ಸೇರಿರಲಿಲ್ಲ. ಆದರೂ ನೂರಾರು ಜನ ಗಾಡಿಯ ಸುತ್ತ ಸೇರಿದರು. ರೈಲು ಬಿಟ್ಟಾಗ ಜಯಕಾರಗಳಾಗಲಿಲ್ಲ. ರೈಲು ಹೊರಟಿತೊ ಇಲ್ಲವೋ ಬಾಪು ತಮ್ಮ ಮೌನ ದಿನ ಆರಂಭವಾಯಿತೆಂದೂ ಮಾರನೆಯ ದಿನ ಸಾಯಂಕಾಲದವರೆಗೆ ಅದು ಮುಂದುವರಿಯುವುದೆಂದೂ ಹೇಳಿದರು. ಮೀರಾಬೆನ್ ಅವರ ಹಾಸಿಗೆ ಸಿದ್ಧಮಾಡಿದ್ದಳು. ಬಾಪು ಒಮ್ಮೆಲೆ ಹಾಸಿಗೆಯ ಮೇಲೆ ಮಲಗಿ ಐದು ನಿಮಿಷಗಳಲ್ಲಿ ಗೊರಕೆ ಹೊಡೆಯಲಾರಂಭಿಸಿದರು. ಉಳಿದ ನಾವೆಲ್ಲಾ ಮರದ ಹಲಗೆಯ ಕಿರುಜಾಗದಲ್ಲಿ ಮಧ್ಯರಾತ್ರಿಯವರೆಗೆ ಒದ್ದಾಡುತ್ತಿದ್ದೆವು. ಪ್ರತಿಸ್ಟೇಷನ್‌ನಲ್ಲಿಯೂ ಯಾರಾದರೂ ಎದ್ದು, ಕೆಳಗೆ ಇಳಿದು, ಬಾಪು ಕಡೆಗಿದ್ದ ಕಿಟಕಿ ಬಳಿ ನಿಂತುಕೊಂಡು ಅವರನ್ನು ಯಾರೂ ಎಳಿಸದಂತೆ ನೋಡಕೊಳ್ಳ ಬೇಕಾಗಿತ್ತು. ಮುದುಕಿಯರು ಬಾಪುವಿನ ತಲೆ ಮುಟ್ಟಬೇಕೆನ್ನುತ್ತಿದ್ದರು. ಕೆಲವರು ಅವರಿಗೆ ಏನಾದರೂ ಕೊಡಬೇಕೆನ್ನುತ್ತಿದ್ದರು. ಮತ್ತೆ ಕೆಲವರು ಲಾಟೀನು ಹಿಡಿದು ಅವರನ್ನು ನೋಡಬೇಕೆನ್ನುತ್ತಿದ್ದರು. ಮಗುವಿನಂತೆ ಬಾಪು ನಿದ್ದೆಮಾಡುವುದನ್ನು ನೋಡುವುದಕ್ಕೆ ಒಂದು ಚಂದ. ಅಲ್ಲಾಡುತ್ತ ದಡಾದಡಾ ಅನ್ನುತ್ತಿದ್ದ ರೈಲಿನಿಂದಾಗಲೀ ಅವರ ಸುತ್ತ ಪೇರಿಸಿದ್ದ ಅನೇಕ ಕಾಗದ ಪತ್ರಗಳ ನೆನಪಿನಿಂದಾಗಲೀ ಅವರಿಗೆ ಕಿಂಚಿತ್ತೂ ತೊಂದರೆಯಾಗುತ್ತಿರಲಿಲ್ಲ.

ನಾಲ್ಕು ಗಂಟೆಗೆ ನಾವೆಲ್ಲಾ ಪ್ರಾರ್ಥನೆಗೆ ಎದ್ದೆವು. ಕತ್ತಲೆಯಲ್ಲಿ ಧಾವಿಸುತ್ತಿರುವ ರೈಲಿನಲ್ಲಿ ಮಾಮೂಲು ಹಾಡುಗಳನ್ನು ಹಾಡಿದೆವು.

ನಾನು ಬೊಂಬಾಯಲ್ಲಿ ಕೆಲವು ದಿವಸ ತಂಗಿದೆ. ಕೊನೆಯ ದಿನ ಬೆಳಗ್ಗೆ ಪೂನಾಕ್ಕೆ ಹೊರಡುವ ಎಂಟುಗಂಟೆ ರೈಲಿಗೆ ಹೊರಡಲು ಸಿದ್ಧತೆಮಾಡಿ ಕೊಳ್ಳುತ್ತಿರುವಾಗ ಕೂಡಲೇ ಬಾಪು ಅವರನ್ನು ನೋಡಬೇಕೆಂಬ ಫೋನ್ ಕರೆಬಂದಿತು. ಏನೋ ಬಹಳ ಮುಖ್ಯವಾದ ವಿಷಯ ಇದ್ದಂತೆ ಕಂಡದ್ದರಿಂದ ಕೂಡಲೇ ಹೊರಟು ಬಾಪು ಇಳಿದುಕೊಂಡಿದ್ದ ಮನೆಯ ಮೆಟ್ಟಲು ಹತ್ತಿ ಅವರ ಬಳಿಗೆ ಹೋದೆ. ಆ ದಿನ ಅಖಿಲಭಾರತ ಕಾಂಗ್ರೆಸ್ ಕಮಿಟಿಯ ಅಧಿವೇಶನದ ಬಹಳ ಮುಖ್ಯ ದಿನ. ಪೊಲೀಸಿನವರಿಂದ ತೊಂದರೆಗೀಡಾದ ಮನುಷ್ಯನೊಬ್ಬ ನೊಡನೆ ಮಾತಾಡುತ್ತಾ ಬಾಪು ಸಣ್ಣ ಕೋಣೆಯಲ್ಲಿ ಆರಾಮವಾಗಿ ಕುಳಿತಿದ್ದರು. ನಾನು ಕೊಂಚಹೊತ್ತು ಕಾಯ್ದಮೇಲೆ ಬಾಪು 'ನಿನ್ನ ಭವಿಷ್ಯದ ಬಗ್ಗೆ ಮಾತನಾಡಲು ಹೇಳಿಕಳುಹಿಸಿದೆ' ಎಂದರು. ಮೀರಾಬೆನ್ ಯಾವೊತ್ತೊ ಹೇಳಿದ್ದಳಂತೆ ನನಗೂ ಕ್ರೈಸ್ತ ಸೇವಾ ಸಂಘಕ್ಕೂ ಇದ್ದ ಸಂಬಂಧದ ವಿಷಯವನ್ನು. ಅದನ್ನು ಗಾಂಧೀಜಿ ಮನಸ್ಸಿನಲ್ಲೇ ಇಟ್ಟುಕೊಂಡಿದ್ದು ಕೈತುಂಬ ಕೆಲಸ ಇದ್ದರೂ ಆ ದಿನ ನನಗೆ ಹೇಳಿಕಳುಹಿಸಿದ್ದರು. ಇಪ್ಪತ್ತು ನಿಮಿಷಗಳ ಕಾಲ ಎಲ್ಲಾ ತಿಳಿದವರಂತೆ ಬಾಪು ಮಾತನಾಡಿ ತಮಗೂ ಮತ್ತು ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಗೂ ಇದ್ದ ಸಂಬಂಧವನ್ನೂ ತಿಳಿಸಿದರು.

'ಒಂದು ಸಂಘದಲ್ಲಿ ನಿನ್ನ ಸ್ಥಾನಮಾನದ ಬಗ್ಗೆ ಅನುಮಾನವಿದ್ದ ಪಕ್ಷದಲ್ಲಿ, ನಿನ್ನ ಬಗ್ಗೆ ಹೇಳಬೇಕಾದ್ದನ್ನೆಲ್ಲಾ ಹೇಳಿಬಿಡು. ನಿನ್ನ ಕಷ್ಟಗಳನ್ನು ಉತ್ಪ್ರೇಕ್ಷೆಮಾಡಿ ಹೇಳಿದರೂ ಪರವಾಯಿಲ್ಲ. ನಿನಗೆ ಒಳ್ಳೆಯದಾಗುತ್ತೆ ಎನ್ನಬಹುದು. ನಿನ್ನನ್ನು ಹೊರದೂಡುವವರೆಗೂ ನೀನು ಹೋಗದಿರುವುದು ಸಾಮಾನ್ಯವಾಗಿ ಒಳ್ಳೆಯದು. ಆದರೆ ನಿನ್ನಿಂದ ಸಂಘಕ್ಕೆ ತೊಂದರೆಯಾಗಿದೆ ಎಂಬ ಭಾವನೆ ನಿನ್ನ ಮನಸ್ಸಿಗೆ ಬರಬಾರದು. ಅಂಥ ಭಾವನೆ ಕೇವಲ ಊಹೆಯಾದರೂ ಅದು ತನ್ನ ಕೆಲಸ ಮಾಡಿಯೇ ತೀರುತ್ತದೆ. ನನ್ನ ಕೋಣೆಯಲ್ಲಿ ಒಂದು ದೆವ್ವ ಇದೆಯೆಂದು ಊಹಿಸಿ ಕೊಂಡರೆ ಎಲ್ಲಿಯೂ ದೆವ್ವವೇ ಇಲ್ಲದಿದ್ದರೂ ನನಗೆ ನಿದ್ದೆಮಾಡಲು ಸಾಧ್ಯ ವಾಗುವುದಿಲ್ಲ. ಆ ದೆವ್ವ ನಿನ್ನನ್ನು ಕಾಡದಂತೆ ನೋಡಿಕೊಳ್ಳಬೇಕು; ಅದನ್ನು ಕೊಂದುಹಾಕಬೇಕು. ಹೀಗೆ ಮಾಡುವಾಗ ಅಹಿಂಸೆ ಅಡ್ಡಬರುವುದಿಲ್ಲ.'

ಇಷ್ಟು ಹೇಳಿ ಬಾಪು, ನಾನು ಹಿಮಾಲಯದಲ್ಲಿರುವ ಆಲ್ಮೋರಾಕ್ಕೆ ಹೋಗಿ, ಅವರ ಖರ್ಚಿನಲ್ಲಿ ನನ್ನ ಆರೋಗ್ಯ ಸುಧಾರಿಸಿಕೊಳ್ಳಬೇಕೆಂದು ತಿಳಿಸಿದರು.

ಈ ಕೆಲವು ತಿಂಗಳುಗಳ ನನ್ನ ಅನುಭವಗಳು ನನ್ನ ಭವಿಷ್ಯದ ಬಗ್ಗೆ ಒಂದು ತೀರ್ಮಾನಕ್ಕೆ ಬರುವಂತೆ ಮಾಡಿದುವು. ನಾನು ಕ್ರೈಸ್ತ ಸೇವಾಸಂಘವನ್ನು ಬಿಟ್ಟು ಯಾವುದೋ ಒಂದು ಮೂಲೆಹಳ್ಳಿಯಲ್ಲಿ ಜನಸಾಮಾನ್ಯರೊಡನೆ ಇದ್ದು

ಬಾಳಬೇಕೆಂದು ತೀರ್ಮಾನಿಸಿದೆ. 'ಮಿಥ್ಯೆಯಿಂದ ಸತ್ಯಕ್ಕೆ ಕರೆದೊಯ್' ಎಂಬ ಮಾತಿಗೆ ಹೊಸ ಅರ್ಥ ಕಾಣಿಸಿತು. ನಾನು ಗುಜರಾತಿಗೆ ಹೋಗಿ ಅಸ್ಪೃಶ್ಯರೊಡನೆ ಇರಬೇಕೆಂದುಕೊಂಡೆ. ಆದರೆ ಸರದಾರ್ ವಲ್ಲಭಬಾಯಿ ಪಟೇಲರು ನನ್ನ ಮನಸ್ಸನ್ನು ಬೇರೆ ಕಡೆ ತಿರುಗಿಸಿದರು. 'ಅಸ್ಪೃಶ್ಯರು ನಿನ್ನ ಸಮಸ್ಯೆಯಲ್ಲ. ಅವರು ಹಿಂದೂಗಳ ಪಾಪದ ಪರಿಣಾಮ. ಅದಕ್ಕೆ ಹಿಂದೂಗಳೇ ಪ್ರಾಯಶ್ಚಿತ್ತಮಾಡಿಕೊಳ್ಳಬೇಕು' ಎಂದು ಅವರು ಹೇಳಿ, 'ಗುಜರಾತಿನಲ್ಲಿ ಆಗಲೇ ಸಾಕಷ್ಟು ಸಮಾಜ ಸೇವಕರು ಇದ್ದಾರೆ. ಆದ್ದರಿಂದ ನೀನು ಗಿರಿಜನರ ಮಧ್ಯೆ ಇರುವುದೊಳ್ಳೆಯದು' ಎಂದು ತಿಳಿಸಿದರು.

ಒಂದು ದಿನ ನಾನು ಸರದಾರ್ ವಲ್ಲಭಭಾಯಿ ಪಟೇಲರು ಮತ್ತು ಸೇತ್ ಜಮ್ನಾಲಾಲ್ ಬಜಾಜರೊಡನೆ ಅಹಮದಾಬಾದಿನ ಬೀದಿಗಳಲ್ಲಿ ಹೋಗುತ್ತಿದ್ದಾಗ ನನ್ನ ಜೀವಮಾನದಲ್ಲೇ ಮೊದಲ ಸಲ 'ಗೊಂಡ' ಎಂಬ ಬಜಾಜರ ಮಾತು ಮಂತ್ರದಂತೆ ನನ್ನ ಕಿವಿಯ ಮೇಲೆ ಬಿತ್ತು. ಅವರು 'ನೀನೇಕೆ ಮಧ್ಯಪ್ರಾಂತಗಳಿಗೆ ಬರಬಾರದು ? ಬಂದು, ಇಲ್ಲಿಯವರೆಗೆ ಯಾರೂ ಮುಟ್ಟದ ಅಲ್ಲಿಯ ಗಿರಿಜನವೊಂದರ ಬಗ್ಗೆ ಒಂದಿಷ್ಟು ಕೆಲಸ ಮಾಡಬಾರದು ?' ಎಂದರು. ಅವರು ಹೇಳಿದ್ದು ನನಗೆ ಹಿಡಿಸಿತು. ಆ ವರ್ಷದ ಕೊನೆಯ ಹೊತ್ತಿಗೆ ನಾನು ಅಲ್ಲಿಗೆ ಹೋಗುವುದೆಂದು ತೀರ್ಮಾನಿಸಿದೆ.

ಈ ಮಧ್ಯೆ ನಾನು ಇಂಗ್ಲೆಂಡಿನಲ್ಲಿದ್ದ ಶಾಮರಾವ್ ಅವರಿಗೆ ಕಾಗದ ಬರೆದಿದ್ದೆ. ನನ್ನ ಯೋಚನೆ ಏನೆಂದೂ ಅದಕ್ಕೆ ಅವರು ಒಪ್ಪುವರೇ ಎಂದೂ ಕೇಳಿದ್ದೆ. ನಾವಿನ್ನೂ ಚರ್ಚಿಗೆ ಸೇರಿದವರಾಗಿದ್ದೆವು. ತಮಗೆ ದೀಕ್ಷೆಕೊಡುವರೆಂಬ ಆಶೆಯನ್ನೂ ಶಾಮರಾವ್ ಇಟ್ಟುಕೊಂಡಿದ್ದರು. ಗೊಂಡ್ ಜನರಿರುವ ಹಳ್ಳಿಯೊಂದರಲ್ಲಿ ಒಂದು ಸಣ್ಣ ಆಶ್ರಮವನ್ನು ಮಾಡಿ ನಾವಿಬ್ಬರೂ ಅಲ್ಲಿರಬೇಕೆಂಬುದು ನಮ್ಮ ಮನಸ್ಸಿನಲ್ಲಿತ್ತು. ನಡೆಯುತ್ತಿದ್ದ ರಾಷ್ಟ್ರೀಯ ಚಳುವಳಿಯಲ್ಲಿ ನಾವು ಸಂಪೂರ್ಣ ಪಾಲ್ಗೊಳ್ಳಬೇಕೆಂದೂ, ಚರ್ಚಿಗೆ ಸೇರಿಕೊಂಡೇ ಇರಬೇಕೆಂದೂ, ಆದರೆ ಮತಬೋಧನೆಯ ಕೆಲಸವನ್ನು ಮಾಡಬಾರದೆಂದೂ, ಯಾರನ್ನೂ ಮತಾಂತರಗೊಳಿಸಬಾರದೆಂದೂ ನಮ್ಮ ಅಭಿಪ್ರಾಯವಾಗಿತ್ತು. ನಮ್ಮ ಆಶ್ರಮದಲ್ಲಿ ಎಲ್ಲ ಪಂಥದವರಿಗೂ ಅವಕಾಶವಿರಬೇಕು; ಅಥವಾ ಯಾರಿಗೂ ಇರಬಾರದು ಎಂದು ನಿರ್ಧರಿಸಿದ್ದೆವು.

ಇಂಥ ಆಲೋಚನೆಗಳಿಗೆ ಇಂಗ್ಲೆಂಡಿನಲ್ಲಿ ಆಸ್ಪದವಿರಲಿಲ್ಲ. ಆದರೆ ಇಂಡಿಯಾದಲ್ಲಿ ಕ್ರೈಸ್ತಮತೀಯನಾದರೂ ಜನಸೇವೆಗೋಸುಗ ಬೇರೊಂದು ಪಂಥದವರೊಡನೆ ಬೆರೆಯುವುದು ತಪ್ಪಾಗುತ್ತಿರಲಿಲ್ಲ. ಬಹಳ ದೀರ್ಘ ಚರ್ಚೆಯ ನಂತರ ಮತ್ತು ಗಾಂಧೀಜಿಯವರ ಸಲಹೆಯಂತೆ, ಶಾಮರಾವ್ ನನಗೆ ಕೇಬಲ್ ಕಳುಹಿಸಿದರು, ತಾವು ವರ್ಷದ ಕೊನೆಯಲ್ಲಿ ನನ್ನನ್ನು ಸೇರಿಕೊಳ್ಳುವುದಾಗಿ. ಆಗ ನನ್ನ ಯೋಜನೆಗಳು ಕಾರ್ಯಗತವಾಗುವ ಹಂತವನ್ನು ಮುಟ್ಟಿದುವು. ನಾನು ಕ್ರೈಸ್ತ ಸೇವಾ ಸಂಘಕ್ಕೆ ರಾಜೀನಾಮೆ ಕೊಟ್ಟೆ. ಇಂಗ್ಲೆಂಡಿಗೆ ಹೋಗಿದ್ದ ಗಾಂಧೀಜಿಯವರ ತಂಡದಲ್ಲಿ ಶಾಮರಾವ್ ಇಂಡಿಯಾಕ್ಕೆ ಹಿಂದಿರುಗಬೇಕೆಂದಾಯಿತು.

ಇದು ಕತ್ತಲೆಯಲ್ಲಿ ಧುಮುಕಿದಂತಾಯಿತು. ನಮ್ಮ ಹೊಸ ಪ್ರಪಂಚ ಎಂಥದು ಎಂಬುದರ ಅರಿವಿರಲಿಲ್ಲ ನನಗೆ. ಗಿರಿಜನರ ವಿಷಯ ನಮಗೇನೂ ತಿಳಿದಿರಲಿಲ್ಲ. ಕೈಯಲ್ಲಿ ದುಡ್ಡಿರಲಿಲ್ಲ ಮತ್ತು ದುಡ್ಡನ್ನು ಹೇಗೆ ಪಡೆಯಬಹುದೆಂಬುದೂ ಗೊತ್ತಿರಲಿಲ್ಲ. ಕೂಡಲೇ ಬೇಕಾದ ಹಣವನ್ನು ಜಮ್ನಾಲಾಲ್ ಬಜಾಜರು ಒದಗಿಸುವುದಕ್ಕೆ ಸಿದ್ಧರಾಗಿದ್ದರು. ಅವರು ಒದಗಿಸಿಯೂ ಒದಗಿಸಿದರು. ಅವರು ಮಾಡಿದ ಉಪಕಾರವನ್ನು ನಾವು ಎಂದೂ ಮರೆಯುವಂತಿಲ್ಲ.

ಒಂದೆರಡು ವರ್ಷಗಳ ಹಿಂದೆ ನಾನು ಕ್ರೈಸ್ತ ಸೇವಾಸಂಘಕ್ಕೆ ಸೇರಿದಾಗ ನನಗೆ ಅದರಿಂದ ಬಿಡುಗಡೆ ಅಸಾಧ್ಯವೆಂದು ಭಾವಿಸಿದ್ದೆ. ಆದರೆ ಅದನ್ನು ವಾಸ್ತವವಾಗಿ ಬಿಡುವಾಗ ಸುಲಭವಾಗಿಯೇ ಬಿಟ್ಟೆ. ಒಂದು ಸಂಸ್ಥೆಯಿಂದ ಅದರ ಒಪ್ಪಿಗೆ ಪಡೆದು ನಿವೃತ್ತನಾದಂತಿತ್ತು. ಹಾಗೆ ಮಾಡಿದ್ದರಿಂದ ನನ್ನ ರೀತಿನೀತಿಗಳನ್ನು ಬದಲಾಯಿಸಿ ಕೊಳ್ಳಬೇಕಾದ ಅವಶ್ಯಕತೆ ಬರಲಿಲ್ಲ. ನಾನು ಮತ್ತು ಶಾಮರಾವ್ ಮುಂದೆಯೂ ಅದೇ ಭಾವನೆಯಿಂದ ಕೂಡಿದವರಾಗಿ ಕೆಲಸ ಮಾಡಬಹುದಾಗಿತ್ತು. ಹೊಸ ಕೆಲಸದಲ್ಲಿ ನಮಗೆ ಹೆಚ್ಚು ಸ್ವಾತಂತ್ರ್ಯವಿತ್ತು. ಅಲ್ಲದೆ ಇದರಲ್ಲಿ ಆ ಮಿಷನರಿ ಭಾವನೆ ಇರಲಿಲ್ಲ. ಚರ್ಚನ್ನು ಬಿಡದೆ ಅದರ ಸೆರಗಿನೊಳಗೆ ಎಲ್ಲೊ ಇರುವುದೆಂದುಕೊಂಡೆವು. ಕ್ರೈಸ್ತ ಮತ್ತು ಹಿಂದೂ ಮತಗಳ ಆಧ್ಯಾತ್ಮಿಕ ಭಾವನೆಗಳ ಸಮ್ಮಿಳನದಲ್ಲಿ ನಮಗಿನ್ನೂ ಆಸಕ್ತಿ ಇತ್ತು.

ಆದರೆ ಸೇವಾಸಂಘವನ್ನು ಬಿಟ್ಟ ಅಂತಿಮ ಪರಿಣಾಮ ತೀರಾ ಬೇರೆಯಾಯ್ತು. ೧೯೩೧ರಲ್ಲಿ ನನ್ನ ಖರ್ಚುವೆಚ್ಚಗಳನ್ನು ವಹಿಸುವ ಸಂಘವೊಂದು ಇಲ್ಲದಂತಾಯ್ತು.

ನಾನು ಕೆಲವು ವಾರಗಳು ಪೂನಾದಲ್ಲಿದ್ದು ಅಡ್ಡಾಡುವ ಕೆಲಸ ಆರಂಭಿಸಿದೆ. ಗಾಂಧೀಜಿಗೆ ಬಹಳ ಪ್ರಿಯವಾದ ವಾರ್ಧಾ ಸೇವಾಗ್ರಾಮಕ್ಕೆ ಮೊದಲು ಹೋದೆ. ವಿಶ್ರಾಂತಿ ಬೇಕೆಂದಾಗ ಗಾಂಧೀಜಿ ಅಲ್ಲಿಗೆ ಹೋಗುತ್ತಿದ್ದರು. ಅದು ಅವರ ಮುಖ್ಯ ಕೇಂದ್ರವೂ ಆಗಿತ್ತು. ಸಬರ್ಮತಿಯಲ್ಲಿ ಇದ್ದಂಥ ಸುಂದರ ನದಿ ಅಲ್ಲಿರಲಿಲ್ಲ. ಮಧ್ಯ ಇಂಡಿಯಾದ ಧೂಳೀಮಯವಾದ ಬಯಲಿನಲ್ಲಿತ್ತು ಸೇವಾಗ್ರಾಮ. ಒಮ್ಮೊಮ್ಮೆ ಬಿಸಿಲ ಧಗೆ ತಡೆಯಲು ಆಗುತ್ತಿರಲಿಲ್ಲ. ಗಾಂಧೀಜಿ ತಮ್ಮ ಬೆಳಗಿನ ಮತ್ತು ಸಂಜೆಯ ಗಾಳಿ ಸವಾರಿಗಾಗಿ ರೈಲು ದಾರಿಯ ಪಕ್ಕದಲ್ಲಿಯೇ ಹೋಗುತ್ತಿದ್ದರು. ಮನಸ್ಸನ್ನು ಆಕರ್ಷಿಸುವ ಯಾವ ವಸ್ತುವೂ ಇಲ್ಲದ ಸ್ಥಳವನ್ನು ಬೇಕಾಗಿಯೇ ಗಾಂಧೀಜಿ ಚುನಾಯಿಸಿದಂತೆ ಕಾಣುತ್ತಿತ್ತು. ತಮ್ಮ ಅನುಯಾಯಿಗಳು ಯಾವುದ ರಿಂದಲೂ ಆಕರ್ಷಿತರಾಗದೆ ಬಡವರ ಸೇವೆಯನ್ನು ಮನಸ್ಸಿಟ್ಟು ಮಾಡಲಿ ಎಂದು ಅವರ ಮನಸ್ಸಿನಲ್ಲಿತ್ತೋ ಏನೋ !

ನಾನು ಕೆಲವು ವೇಳೆ ಸೇವಾಗ್ರಾಮದಲ್ಲಿಯೂ, ಹೆಚ್ಚಾಗಿ ಅದಕ್ಕೆ ಹತ್ತಿರದಲ್ಲಿಯೇ ಇರುತ್ತಿದ್ದ ಬಜಾಜರೊಡನೆಯೂ ಇರುತ್ತಿದ್ದೆ. ಬಜಾಜರು ತುಂಬಾ ಶ್ರೀಮಂತರು. ಭಾರಿ ಆಸ್ತಿಪಾಸ್ತಿ. ಹತ್ತು ವರ್ಷದ ಹಿಂದೆಯೇ ತಮ್ಮ ಅರಮನೆಯನ್ನು ಬಿಟ್ಟು

ಒಂದು ಸಣ್ಣ ಬಂಗಲೆಯಲ್ಲಿ ಇದ್ದರು. ತುಂಬ ಸರಳ ಜೀವನ ನಡೆಸುತ್ತಿದ್ದರು. ಈಗಲೂ ಆಸ್ತಿ ಬೇಕಾದಷ್ಟಿದ್ದರೂ ಅದನ್ನು ಸಾರ್ವಜನಿಕರ ಧರ್ಮದರ್ಶಿಯಾಗಿ ನೋಡಿಕೊಳ್ಳುತ್ತೇನೆಂಬ ಭಾವನೆಯಿತ್ತು ಅವರಲ್ಲಿ. ಅವರ ಆಸ್ತಿಯೆಲ್ಲ ಸಾರ್ವಜನಿಕ ಸೇವೆಗೆ ಮೀಸಲಾಗಿತ್ತು. ಅವರು ಭಾರತದ ರಾಷ್ಟ್ರೀಯ ಚಳುವಳಿಯ ಆದರ್ಶ ವ್ಯಕ್ತಿಯಾಗಿದ್ದರು. ರಾಷ್ಟ್ರೀಯ ಪುನರ್‌ನಿರ್ಮಾಣದ ಮೂಲಕ ಭಾರತಕ್ಕೆ ಸ್ವಾತಂತ್ರ್ಯವನ್ನು ತರುವ ಕೆಲಸಕ್ಕೆ ಅವರು ತಮ್ಮ ಜೀವನವನ್ನೇ ಮುಡುಪಾಗಿ ಇಟ್ಟಿದ್ದರು. ಬಹಳ ಹಿಂದೆಯೇ ಅವರು ನಮ್ಮ ಮನೆತನದ ದೇವಾಲಯವನ್ನು ಅಸ್ಪೃಶ್ಯರಿಗೆ ಮುಕ್ತಗೊಳಿಸಿದ್ದರು. ಬಡವರಿಗೆ ಎಷ್ಟೋ ಅನುಕೂಲವಾಗುತ್ತಿದ್ದ ಖಾದಿಚಳುವಳಿಗೆ ಅವರು ಮುಖಂಡರಾಗಿದ್ದರು. ನಾನು ಅವರೊಡನೆ ಇದ್ದಾಗ ಅಸ್ಪೃಶ್ಯರಿಗಾಗಿ ಬಾವಿಗಳನ್ನು ತೆರೆಯುವ ಕೆಲಸಕ್ಕಾಗಿ ಅನೇಕ ಸಲ ಹೋಗುತ್ತಿದ್ದೆ. ಜಾತಿ ನಿಯಮಗಳಿಂದ ಪಾರುಮಾಡಿಸಿ ಕೆಲವು ದೇವಸ್ಥಾನಗಳನ್ನು ಅಸ್ಪೃಶ್ಯರಿಗೆ ತೆರೆಸಿಕೊಟ್ಟರು. ವಾರ್ಧಾಕ್ಕೆ ಆಗ ಹೆಚ್ಚು ಜನ ಇಂಗ್ಲಿಷಿನವರು ಬರುತ್ತಿರಲಿಲ್ಲ. ಬೇರೆ ಕೆಲವು ಕಾಂಗ್ರೆಸ್ ಮುಂದಾಳುಗಳ ವಿಷಯ ಗೊತ್ತಿದ್ದಂತೆ ಬಜಾಜರ ವಿಷಯ ಇಂಗ್ಲಿಷಿನವರಿಗೆ ತಿಳಿದಿರಲಿಲ್ಲ. ಇದಕ್ಕೆ ಮುಖ್ಯ ಕಾರಣ ಅವರು ಇಂಗ್ಲಿಷಿನಲ್ಲಿ ಹೆಚ್ಚು ಮಾತನಾಡಲು ಹಿಂಜರಿಯುತ್ತಿದ್ದುದು. ಇದು ವ್ಯಸನಕರವಾದ ವಿಷಯವೇ ಸರಿ. ಅವರ ಸರಳತೆ, ಅವರ ನೇರವಾದ ನಡೆನುಡಿ ಇವೆಲ್ಲಾ ಇಂಗ್ಲಿಷಿನವರಿಗೆ ತುಂಬಾ ಹಿಡಿಸುವಂತಿದ್ದುವು. ಅವರ ಸರಳತೆ ಎಷ್ಟು ಎಂದರೆ, ನಾನುಪ್ರತಿ ಸಲವೂ 'ಥ್ಯಾಂಕ್ ಯು' ಎಂದಾಗಲೆಲ್ಲಾ ಅವರು ನನ್ನನ್ನು ಆಕ್ಷೇಪಿಸುತ್ತಿದ್ದರು – ತಾವು ಮಾಡಿದ್ದು ಅದೇನು ಮಹಾ ಎನ್ನುವಂತೆ.

ಎಲ್ಲರಂತೆ ಅವರೂ ಜೈಲಿಗೆ ಹೋದರು. ಒಮ್ಮೆ ಅವರನ್ನು ನೋಡಲು ಧೂಳಿಯಾಕ್ಕೆ ಹೋದೆ. ಅಲ್ಲಿಯ ಜೈಲಿನಲ್ಲಿ 'ಸಿ' ತರಗತಿ ಬಂದಿಯಾಗಿ ಅವರನ್ನು ಕಾಣುತ್ತಿದ್ದ ರೀತಿ ನೋಡಿ ನನ್ನ ಹೃದಯ ಝಲ್ಲೆಂದಿತು. ಅದನ್ನು ನೋಡಿದ ಕೂಡಲೇ ನಾನು ತೀರ್ಮಾನಮಾಡಿದೆ. 'ಇಂಡಿಯಾಕ್ಕೆ ಸ್ವಾತಂತ್ರ್ಯ ಬರುವವರೆಗೂ ನಾನು ಬರಿಗಾಲಿನಲ್ಲಿ ತಿರುಗಾಡುತ್ತೇನೆ' ಎಂದು. ಆದರೆ ಇದು ಜನರಿಗೆ ಬಹಳ ಸ್ಪಷ್ಟವಾಗಿ ಕಾಣಬಾರದೆಂಬ ಉದ್ದೇಶದಿಂದ ಪಟ್ಟಣಗಳಿಗೆ ಹೋದಾಗ ಮಾತ್ರ ಚಪ್ಪಲಿಗಳನ್ನು ಹಾಕಿಕೊಳ್ಳುತ್ತಿದ್ದೆ. ಹದಿನೈದು ವರ್ಷಗಳ ಕಾಲ ನನ್ನ ಪ್ರತಿಜ್ಞೆಯಂತೆ ನಡೆದುಕೊಂಡೆ; ಅದಕ್ಕೆ ಹೊಂದಿಕೊಂಡುಬಿಟ್ಟೆ. ಅದರಿಂದ ಷೂ, ಕಾಲುಚೀಲ ಮತ್ತು ಪಾಲಿಷ್‌ಗಳಿಗಾಗಿ ಖರ್ಚಾಗುತ್ತಿದ್ದ ಹಣ ಬೇಕಾದಷ್ಟು ಉಳಿಯಿತು. ಮತ್ತೊಮ್ಮೆ ಅವನ್ನು ಹಾಕಿಕೊಳ್ಳಬೇಕಾಗಿ ಬಂದಾಗ 'ಯಾಕಪ್ಪಾ ಅವು !' ಎನಿಸಿತು ನನಗೆ.

ಅದೇ ಕಾಲದಲ್ಲಿ ನಾನು ಆಗ್ಗೆ ಸಮಾಜ ಸೇವಕರಲ್ಲಿ ಗಣ್ಯರಾದ ಎ. ವಿ. ಥಕ್ಕರ್ (ಥಕ್ಕರ್ ಬಾಪಾ) ಅವರ ಜೊತೆ ಹತ್ತು ದಿವಸಗಳು ಪ್ರವಾಸಮಾಡಿದೆ. ಅಸ್ಪೃಶ್ಯರಿಗಾಗಿ ಏನು ಕೆಲಸ ನಡೆಯುತ್ತಿದೆ ಎಂಬುದನ್ನು ತಿಳಿದುಕೊಳ್ಳುವ ಅವಕಾಶ ಸಿಕ್ಕಿತು. ಅದರಿಂದ ನನ್ನ ಮನಸ್ಸಿನ ಮೇಲೆ ಹೆಚ್ಚು ಪರಿಣಾಮವಾಯಿತು. ನಾವು

ಮೊದಲು ಬೊಂಬಾಯಿಗೆ ಹೋದೆವು. ಅಲ್ಲಿ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯಲ್ಲಿ ಇಳಿದುಕೊಂಡೆವು. ಕಾರ್ಮಿಕ ಮುಂದಾಳಾದ ಎನ್. ಎಮ್. ಜೋಷಿಯರವರು ನಮ್ಮನ್ನು ಆದರದಿಂದ ನೋಡಿಕೊಂಡರು. ಭಂಗಿ ಜನ ವಾಸಿಸುತ್ತಿದ್ದ ಮನೆಗಳನ್ನು ಸುತ್ತಿದೆವು. ಅವರು ಮುನಿಸಿಪಾಲಿಟಿಯ ನೌಕರರಾಗಿ ಕಕ್ಕಸು ನಿರ್ಮಲಗೊಳಿಸುವ ಕೆಲಸದಲ್ಲಿದ್ದರು. ಮತ್ತು ಮುನಿಸಿಪಾಲಿಟಿಯವರು ಕಟ್ಟಿಸಿಕೊಟ್ಟ ಮನೆಗಳಲ್ಲಿದ್ದರು. ಲಂಡನ್ನಿನ ಅತ್ಯಂತ ಹೊಲಸು ಪ್ರದೇಶಗಳು ಈ ಭಂಗಿಗಳು ವಾಸಿಸುತ್ತಿದ್ದ ಮನೆಗಳಿಗಿಂತ ಸಾವಿರಪಾಲು ಮೇಲಾಗಿದ್ದವು. ಮನುಷ್ಯನ ಪಾಯಖಾನೆಯನ್ನು ಅವಲಂಬಿಸಿ ಹುಳುಹುಪ್ಪಟೆಗಳಂತೆ ಜೀವಿಸುತ್ತಿದ್ದ ಈ ಪ್ರಾಣಿಗಳನ್ನು ನೋಡಿ ಬಹು ಅಸಹ್ಯವಾಯಿತು. ಮಲವನ್ನು ಶೇಖರಿಸಿ ಒಂದು ಕಡೆ ಹಾಕುವ ಸ್ಥಳಕ್ಕೆ ಹೋದೆವು. ಅಬ್ಬಾ! ಆ ವಾಸನೆ ಆ ನೊಣ ! ಅವರ್ಣನೀಯ ಬಿಡಿ !

ಬೊಂಬಾಯಿಂದ ನಾವು ಜಲ್ಗೋಡ್ ಎಂಬ ಊರಿಗೆ ಹೋದೆವು. ಅಲ್ಲಿ ಒಬ್ಬ ಜಮೀನ್ದಾರನ ಮನೆಯಲ್ಲಿ ಇಳಿದುಕೊಂಡೆವು. ಆ ಊರಿನ ಗುಡಿಸುವ ಜನ ಬಜಾಜರನ್ನು ನೋಡಲು ಜಮೀನ್ದಾರನ ಮನೆಯ ಬಳಿಗೆ ಬಂದರು. ಅವರನ್ನು ಮನೆಯೊಳಕ್ಕೆ ಬಿಡಲಿಲ್ಲ. ಅಂಗಳಕ್ಕೆ ಬರಲೂ ಅವಕಾಶಕೊಡಲಿಲ್ಲ. ಬೀದಿಯಲ್ಲಿಯೇ ಕುಳಿತು ಸುರಿಯುತ್ತಿದ್ದ ಮಳೆಯಲ್ಲಿ ಅವರೊಡನೆ ಮಾತನಾಡಬೇಕಾಯಿತು.

ಅನಂತರ ದೋಹಾದ್ ಎಂಬಲ್ಲಿಗೆ ಹೋದೆವು. ಇದು 'ಭಿಲ್' ಎಂಬ ಜನರ ಬಗ್ಗೆ ಥಕ್ಕರ್ ಬಾಪಾ ನಡೆಸುತ್ತಿದ್ದ ಕೆಲಸದ ಕೇಂದ್ರವಾಗಿತ್ತು. ಒಂದು ಬೀದಿಯನ್ನು 'ಥಕ್ಕರ್ ಬೀದಿ' ಎಂದು ನಾಮಕರಣಮಾಡುವ ಗೌರವ ನನಗೆ ದೊರೆಯಿತು.

ಜಮ್ನಾಲಾಲ್ ಬಜಾಜರ ಸಲಹೆಯಂತೆ ನಾನು ಬೆತುಲ್ ಎಂಬ ಊರಿಗೆ ಹೋದೆ. ಇದು ಸಾತ್ಪುರ ಪ್ರಸ್ಥಭೂಮಿಯಲ್ಲಿದ್ದ ಸುಂದರ ಪಟ್ಟಣ. ಅಲ್ಲಿಗೆ ಹೋದ ಉದ್ದೇಶ, ಆ ಪ್ರದೇಶದ ಗಿರಿಜನರ ಮಧ್ಯೆ ಕೆಲಸ ಮಾಡುವ ಅನುಕೂಲವಾದ ಸ್ಥಳವನ್ನು ನೋಡುವುದೇ ಆಗಿತ್ತು. ಅಲ್ಲಿದ್ದ ಶ್ರೀಮಂತ ವರ್ತಕರೂ ಜಮೀನ್ದಾರರೂ ಆದ ಧೀಲಪ್‌ಚಂದ್ ಗೋಧೀ ಎಂಬುವರಿಗೆ ಬಜಾಜರು ಪರಿಚಯಪತ್ರ ಕೊಟ್ಟಿದ್ದರು. ಅವರು ನನ್ನನ್ನು ಅವರ ಮನೆಯಲ್ಲಿಯೇ ನಿಲ್ಲಿಸಿಕೊಂಡು ಆದರದಿಂದ ನೋಡಿಕೊಂಡುದಲ್ಲದೆ, ಯಾವಾವ ಊರುಗಳನ್ನು ತೋರಿಸಬೇಕೋ ಅವನ್ನೆಲ್ಲಾ ತೋರಿಸಿದರು. ಅವರು ಅಷ್ಟು ಶ್ರೀಮಂತರಾಗಿದ್ದರೂ ಅವರ ಬಳಿ ಮೋಟಾರು ಕಾರು ಇರಲಿಲ್ಲ. 'ಕಾರು ಇಟ್ಟುಕೊಂಡರೆ ಸರ್ಕಾರಿ ಅಧಿಕಾರಿಗಳು ಗಂಟುಬೀಳುತ್ತಾರೆ. ಆ ತಾಪತ್ರಯವೇಕೆ, ನಡೆಯುವುದೇ ಸುಖ ಎಂದು ತೀರ್ಮಾನಿಸಿದ್ದೇನೆ' ಎಂದರು ಅವರು.

ರೈಲಿನಲ್ಲಿ ನಾವು ತಪತಿ ನದಿಯ ಬಳಿಗೆ ಹೋದೆವು. ಕಾಲು ನಡಗೆಯಲ್ಲಿ ಕಾಡನ್ನು ಅಲೆದು ಅನೇಕ ಗೊಂಡಾ ಹಳ್ಳಿಗಳನ್ನು ನೋಡಿದೆವು. ಆಮೇಲೆ ಎತ್ತಿನ

ಗಾಡಿಯಲ್ಲಿ 'ಕೊರ್ಕು' ಎಂಬ ಜನರ ನಾಡಿನಲ್ಲಿ ದೀರ್ಘ ಪ್ರಯಾಣಮಾಡಿದೆವು. ಬೆತುಲ್ ನನಗೆ ಹಿಡಿಸಿತು. ಗೊಂಡ್ ಮತ್ತು ಕೊರ್ಕು ಜನರು ನನಗೆ ಮೆಚ್ಚಿಗೆಯಾದರು. ಆದರೆ ನನಗೆ ಆಗಲೇ ಹಳ್ಳಿಯ ಅನುಭವ ಆಗಲಾರಂಭಿಸಿತ್ತು. ನಾನು ಹೋದ ಕಡೆಯಲ್ಲೆಲ್ಲಾ ಪೊಲೀಸರು ನನ್ನನ್ನು ಹಿಂಬಾಲಿಸುತ್ತಿದ್ದರು. ಆಗ ನಾನು ಮದ್ರಾಸಿನವರಂತೆ ಲುಂಗಿ ಸುತ್ತಿಕೊಂಡು ಜುಬ್ಬ ಹಾಕಿಕೊಳ್ಳುತ್ತಿದ್ದೆ. ಅವೆರಡೂ ಖಾದಿ ಬಟ್ಟೆಯವು. ಕೆಲವು ದಿವಸ ಗಾಂಧೀಟೋಪಿಯನ್ನೂ ಹಾಕುತ್ತಿದ್ದೆ. ಆದರೆ ಅದನ್ನು ನೋಡಿದವರಿಗೆಲ್ಲ – ನನಗೆ ಬಹಳ ಪರಿಚಯದವರಿಗೂ ಸಹ – ನಾನೊಬ್ಬ ಕೇಡಿ ಎನ್ನುವ ಭಾವನೆ ಬರುತ್ತಿದ್ದುದರಿಂದ ಅದನ್ನು ಬಿಟ್ಟುಬಿಟ್ಟೆ. ಇಂಗ್ಲಿಷಿನವನೊಬ್ಬ ಈ ರೀತಿಯ ವಿಚಿತ್ರವಾದ ಉಡುಪಿನಲ್ಲಿರುವುದನ್ನು ನೋಡಿದಾಗ ಪೊಲೀಸರು ಸ್ವಾಭಾವಿಕವಾಗಿ ಅನುಮಾನಪಡಬೇಕಾದ್ದೇ ಸರಿ.

ಬೆತುಲ್‌ನಿಂದ ನಾನು ಛಿಂದವಾರಾಕ್ಕೆ ಹೋದೆ. ಅಲ್ಲಿ ದೇವರ ದಯದಿಂದ ನನಗೊಂದು ಕಾರು ಸಿಕ್ಕಿತು. ಪಚ್ಚಮಾರೀ ರಸ್ತೆಯ ಬಳಿಯಲ್ಲಿದ್ದ ತಮಿಯಾ ಎಂಬ ಊರಿಗೆ ಕರೆದುಕೊಂಡು ಹೋದರು. ಆದರೆ ಅಲ್ಲಿ ನೆಲೆಸಲು ಹೋದವರಲ್ಲಿ ನಾನು ಮೊದಲನೆಯವನಾಗಿರಲಿಲ್ಲ. ಅಕ್ಕಪಕ್ಕದಲ್ಲಿ ಆಗಲೇ ಮಿಷನರಿಗಳು ವಾಸವಾಗಿದ್ದರು. ಸರ್ಕಾರಿ ಆಸ್ಪತ್ರೆಯೂ ಡಾಕ್ ಬಂಗಲೆಯೂ ಇದ್ದುವು. ಆದ್ದರಿಂದ ಅಲ್ಲಿ ನೆಲೆಸುವ ಆಲೋಚನೆ ಬಿಟ್ಟುಬಿಟ್ಟೆ.

ವಾರ್ಧಾಕ್ಕೆ ಹಿಂದಿರುಗಿದೆ. ಏನು ಮಾಡುವುದೋ ಗೊತ್ತಾಗಲಿಲ್ಲ. ಶಾಮರಾವ್ ಇಂಗ್ಲೆಂಡಿನಿಂದ ಹಿಂದಿರುಗಿದ ಹೊರತು ಯಾವುದನ್ನೂ ಮಾಡುವಂತಿರಲಿಲ್ಲ. ಆದರೆ ಅವರು ಕ್ರಿಸ್‌ಮಸ್‌ಗೆ ಮುಂಚೆ ಬರುವವರಾಗಿರಲಿಲ್ಲ. ಈ ಕಾರಣ ನಾನು ಮೀರತ್ತಿಗೆ ಹೋಗಿ ಆಚಾರ್ಯ ಕೃಪಲಾನಿಯವರೊಡನೆ ತಂಗಿದೆ. ಅಲ್ಲಿ ಕೆಲವು ದಿನಗಳು ಖಾದಿ ಉದ್ಯೋಗ ಹೇಗೆ ನಡೆಯುತ್ತಿದೆ ಎಂಬುದನ್ನು ನೋಡಿಕೊಂಡು, ಅವರೊಡನೆ ಉತ್ತರ ಪ್ರಾಂತಗಳ ಪ್ರವಾಸ ಹೊರಟೆ. ಕೃಪಲಾನಿಯವರಿಗಿಂತ ನನಗೆ ಉತ್ತಮ ಸಹಪಾಠಿ ಸಿಕ್ಕಲಾರರು ಎನ್ನಿಸಿತು. ದೊಡ್ಡ ಊರುಗಳು ಸಣ್ಣ ಊರುಗಳನ್ನೆಲ್ಲಾ ನೋಡಿದೆವು. ಅವುಗಳಲ್ಲಿ ಮುಖ್ಯವಾದವುಗಳು ಮಥುರಾ, ಬೃಂದಾವನ, ಹರಿದ್ವಾರ, ಹೃಷಿಕೇಶ ಮತ್ತು ಅಯೋಧ್ಯೆ. ಖಾದಿಯ ಬಗ್ಗೆ ಜನಗಳಿಗೆ ತಿಳುವಳಿಕೆ ಕೊಡುವುದೇ ನಮ್ಮ ಉದ್ದೇಶವಾಗಿತ್ತು.

ಈ ಪ್ರವಾಸಕಾಲದಲ್ಲಿ ನನಗೆ ಇಂಡಿಯಾದ ಹಳ್ಳಿಗಳ ಬಡತನದ ಪರಿಚಯ ಸಾಕಷ್ಟು ಆಯಿತು. ಉತ್ತರ ಪ್ರಾಂತಗಳ ಮತ್ತು ಮಧ್ಯಪ್ರಾಂತಗಳ ಹಳ್ಳಿಯ ಜನ ಗುಜರಾತ್ ಮತ್ತು ಮಹಾರಾಷ್ಟ್ರದ ಹಳ್ಳಿಯ ಜನಕ್ಕಿಂತ ಬಡವರು. ಕೃಪಲಾನಿಯವರು ಹೇಳಿದಂತೆ, ಬುದ್ಧಿ ಇರುವ ಯಾರೂ ಇಂಥ ಹಳ್ಳಿಗಳನ್ನು ನೋಡಬಾರದು. ನೋಡಿದರೆ ಸಹಿಸುವುದಕ್ಕಾಗುತ್ತಿರಲಿಲ್ಲ – ಆ ಬಡತನದ ಬೇಗೆಯನ್ನು

ನಮ್ಮ ಪ್ರವಾಸ ಸುಸೂತ್ರವಾಗಿಯೇ ನಡೆಯಿತು. ಆದರೆ ಪೋಲೀಸರು ಮಾತ್ರ ನಮ್ಮನ್ನು ಹಿಂಬಾಲಿಸದೆ ಬಿಡುತ್ತಿರಲಿಲ್ಲ. ಒಮ್ಮೆ ಕಾನ್ಪುರದಲ್ಲಿ ನಾವು ಸಾರ್ವಜನಿಕ ಸಭೆ ನಡೆಸಕೂಡದೆಂದು ತಡೆದರು.

ಇಂಗ್ಲೆಂಡಿನಿಂದ ಬೊಂಬಾಯಿಗೆ ಹಿಂದಿರುಗುತ್ತಿದ್ದ ಗಾಂಧೀಜಿಯವರನ್ನು ನೋಡಲು ನಾವು ಹೊರಟಿದ್ದ ದಾರಿಯಲ್ಲಿ ಸಿಕ್ಕಿದ ಕೊನೆಯ ಊರು ಜಬ್ಬಲ್‌ಪುರ. ಶಾಮರಾವ್ ಕೂಡ ಗಾಂಧೀಜಿಯ ಜೊತೆ ಬರುತ್ತಿದ್ದರು. ಜಬ್ಬಲ್‌ಪುರದಲ್ಲಿ ನಾನು ಮಾಮೂಲು ಭಾಷಣಮಾಡಿದೆ. ಜನರು ಅಹಿಂಸಾಯುತರಾಗಿ ವರ್ತಿಸಬೇಕು, ಶತ್ರುಗಳನ್ನು ಪ್ರೀತಿಸಬೇಕು, ಸ್ವಾತಂತ್ರ್ಯ ಹೋರಾಟದಲ್ಲಿ ಶಾಂತಿಯುತರಾಗಿ ನಡೆದುಕೊಳ್ಳಬೇಕು ಎಂದು. ಆದರೆ ಸ್ಥಳದ ಸಿ.ಐ.ಡಿ. ಪೋಲೀಸರಿಗೆ ನನ್ನ ಇಂಗ್ಲಿಷು ಅರ್ಥವಾಗದೆ ಅವರು ತಮ್ಮ ವರದಿಯಲ್ಲಿ, ನಾನು ಹಿಂಸೆಯನ್ನು ಬೋಧಿಸಿದೆ, ಇತ್ತೀಚೆಗೆ ಗಲ್ಲಿಗೇರಿಸಲ್ಪಟ್ಟಿದ್ದ ಭಗತ್‌ಸಿಂಗರನ್ನು ಹೊಗಳಿದೆ ಎಂದು ವರದಿ ಮಾಡಿಬಿಟ್ಟರು. ನಾನು ನನ್ನ ಭಾಷಣದಲ್ಲಿ 'ಭಗವದ್ಗೀತೆ' ಎಂದು ಹೇಳಿದ್ದನ್ನು ಪೋಲೀಸರು 'ಭಗತ್ ಸಿಂಗ್' ಎಂದು ಭಾವಿಸಿಕೊಂಡು ! ಈ ವರದಿಯನ್ನು ನೋಡಿದ ಕಮೀಷನರು ನನ್ನನ್ನು ಗಡೀಪಾರು ಮಾಡಬೇಕೆಂದು ಮೇಲಕ್ಕೆ ತಿಳಿಸಿದರು.

ಜಬ್ಬಲ್‌ಪುರದಿಂದ ನಾನೂ ಕೃಪಲಾನಿಯವರೂ ಬೊಂಬಾಯಿಗೆ ಹೋದೆವು. ಅವರಿಗೆ ಗಾಂಧೀಜಿಯವರನ್ನು ನೋಡುವ ಕಾತರ. ನನಗೆ ಶಾಮರಾವ್ ಅವರನ್ನು ನೋಡುವ ಆತುರ. ಇಡೀ ಬೊಂಬಾಯಿ ನಗರವೇ ಬಂದಿತ್ತು ಗಾಂಧೀಜಿಯನ್ನು ಎದುರುಗೊಳ್ಳಲು. ಮಾರನೆಯ ದಿನ ನಾನೂ ಶಾಮರಾವ್ ಮತೆರಾನಿಗೆ ಹೋದೆವು – ನಮ್ಮ ಮುಂದಿನ ಮಾರ್ಗ ಆಲೋಚಿಸಲು. ಅಲ್ಲಿ ಮೂರು ದಿವಸಗಳೂ ಇರಲಿಲ್ಲ. ಆಗ ಮಹದೇವ ದೇಸಾಯಿ ಅವರಿಂದ ಟೆಲಿಗ್ರಾಂ ಬಂದಿತು ಬೊಂಬಾಯಿಗೆ ಬರಬೇಕೆಂದು. ನಾವು ಹತ್ತು ನಿಮಿಷಗಳಲ್ಲಿ ಬೊಂಬಾಯಿಗೆ ಹೊರಟೆವು.

ಗಾಂಧೀಜಿ 'ಮಣಿಭುವನ' ಎಂಬ ಮನೆಯಲ್ಲಿ ತಂಗಿದ್ದರು. ನಾವೂ ಅಲ್ಲೇ ಇರುವಂತೆ ಆಹ್ವಾನಿಸಿದರು. ಬೊಂಬಾಯಿ ನಗರದಲ್ಲಿ ಕೋಲಾಹಲ. ಕಾಂಗ್ರೆಸ್ಸಿನ ಶಾಂತಿಹಸ್ತವನ್ನು ವೈಸರಾಯ್ ನಿರಾಕರಿಸಿದ್ದರು. ನೆಹ್ರೂ ಆಗಲೇ ಜೈಲಿನಲ್ಲಿದ್ದರು. ಉಳಿದ ಕಾಂಗ್ರೆಸ್ ನಾಯಕರ ದಸ್ತಗಿರಿ ಯಾವಗಳಿಗೆಯಲ್ಲೆಂದರೆ ಆ ಗಳಿಗೆ ಆಗುವುದರಲ್ಲಿತ್ತು. ಆದರೆ ಮಣಿಭುವನದ ಮೆಟ್ಟಲನ್ನು ಹತ್ತಿ ಮೇಲೆ ಹೋದಾಗ ಹೊರಗಡೆ ಇದ್ದ ಅಶಾಂತಿ ಇಲ್ಲಿ ಕಾಣಲಿಲ್ಲ. ಎಲ್ಲವೂ ಶಾಂತವಾಗಿತ್ತು. ಆಶ್ಚರ್ಯವಾಗುವಷ್ಟರ ಮಟ್ಟಿಗೆ ಅಲ್ಲಿ ಶಾಂತಿ ಇತ್ತು. ಮನೆಯ ಮೇಲ್ಭಾಗ ಬಹು ಸೊಗಸಾದ ಸ್ಥಳ. ಪುಟ್ಟ ಗುಡಾರಗಳನ್ನು ಹಾಕಿದ್ದರು. ಹೂಗಿಡಗಳ ಕುಂಡಗಳನ್ನಿಟ್ಟು ಅಲಂಕರಿಸಿದ್ದರು. ಕನಿಷ್ಠ ಪಕ್ಷ ಇನ್ನೂರು ಜನರಾದರೂ ಅಲ್ಲಿ ಸೇರಬಹುದಿತ್ತು. ಸ್ಥಳ ತಂಪಾಗಿತ್ತು. ರಾತ್ರಿಯಲ್ಲಿ ನಕ್ಷತ್ರಗಳನ್ನು ನೋಡಿ ಆನಂದಿಸಬಹುದಾಗಿತ್ತು.

ಚರಕದಿಂದ ನೂಲುತ್ತಾ ಬಾಪು ಶಾಂತಿಯ ಜೀವಂತಮೂರ್ತಿಯಂತೆ ಕುಳಿತಿದ್ದರು. ಅವರಾಗಲೇ ತಮ್ಮ ಸಾಪ್ತಾಹಿಕ ಮೌನವನ್ನು ಆರಂಭಿಸಿದ್ದರು. ನಾನು ಅವರೊಡನೆ ಮಾತನಾಡುತ್ತಿದ್ದೆ – ನಾನೊಬ್ಬನೇ... ಅವರು ತಮ್ಮ ಪ್ರಶ್ನೆಗಳನ್ನೂ ನಾನು ಕೇಳಿದ ಪ್ರಶ್ನೆಗಳಿಗೆ ಉತ್ತರಗಳನ್ನೂ ಕಾಗದದ ಚೂರೊಂದರ ಮೇಲೆ ಬರೆಯುತ್ತಿದ್ದರು. ಅವರು ಬರೆದ ಕಾಗದದ ಚೂರುಗಳು ಈಗಲೂ ನನ್ನ ಬಳಿ ಇವೆ. ನಾನೇನು ಮಾಡಬೇಕೆಂದು ನನ್ನ ಪ್ರಶ್ನೆ ಆರಂಭಿಸಿದಂತೆ ಜ್ಞಾಪಕ.

ಅವರು ಅದಕ್ಕೆ ಈ ರೀತಿ ಬರೆದರು : 'ಅದಕ್ಕೇ ನಿನ್ನನ್ನು ಬರಹೇಳಿದ್ದು. ನಾನು ಮನಸ್ಸಿನಲ್ಲಿ ಮೆಲುಕುಹಾಕುತ್ತಿದ್ದ ವಿಚಾರವನ್ನೆಲ್ಲ ಮಹದೇವನಿಗೆ ಹೇಳಿದ್ದೇನೆ. ಅವನು ಬಂದಾಗ ನಿನಗೆ ಹೇಳುತ್ತಾನೆ. ನಿನ್ನ ಆರೋಗ್ಯ ಹೇಗಿದೆ ? ನೀನು ಇಲ್ಲೇ ಮಲಗುವಿಯೇನು ? ಹಾಗಿದ್ದರೆ ನಿನಗೆ ಹಾಸಿಗೆ ಸಿದ್ಧವಾಗಿದೆಯೇ ?'

ನಾನು ಶಾಮರಾವೂ ಒಂದು ಸಣ್ಣ ಗುಡಾರದಲ್ಲಿ ಮಲಗಿಕೊಳ್ಳಲು ಹೋದೆವು. ಬಾಪು ನಮ್ಮಿಂದ ಮೂರು ಗಜ ದೂರದಲ್ಲಿ ಮಲಗಿಕೊಂಡರು. ಕಸ್ತೂರಿಬಾ ಮತ್ತು ಮೀರಾಬೆನ್ ತಿನ್ನಲು ನಮಗೆ ಖರ್ಜೂರ, ಹಣ್ಣು ಮುಂತಾದವುಗಳನ್ನು ಕೊಟ್ಟರು. ಅವು ಬಹು ರುಚಿಯಾಗಿದ್ದವು. ನನಗೆ ನಿದ್ದೆ ಬರಲಿಲ್ಲ. ಬಹಳ ಹೊತ್ತು ಜಾಗರಣೆ ಮಾಡಬೇಕೆನಿಸಿತು. ಲಕ್ಷ ನಕ್ಷತ್ರ ಖಚಿತ ಆಕಾಶವನ್ನು ಗಂಟೆಗಟ್ಲೆ ನೋಡುತ್ತಾ ಎಚ್ಚರವಾಗಿದ್ದೆ. ನನ್ನ ಬಳಿಯಲ್ಲಿಯೇ ಬಾಪು ದೇವರ ರಕ್ಷಣೆಯಲ್ಲಿದ್ದ ಮಗುವಿನಂತೆ ಮಲಗಿ ನಿದ್ದೆ ಮಾಡುತ್ತಿದ್ದರು. ಮುಚ್ಚಿದ ಕಣ್ಣಿನಲ್ಲಿ ನಿರ್ಧಾರ ಹಾಗೂ ಧೈರ್ಯ ಕಾಣುತ್ತಿತ್ತು – ಕ್ರೈಸ್ತನ ಆತ್ಮ ನೂರಾರು ಶತಮಾನಗಳನ್ನು ಹಾದು, ಫಳ ಫಳ ಹೊಳೆಯುವ ಖಡ್ಗದ ರೂಪ ಧರಿಸಿ ಅನ್ಯಾಯಗಳನ್ನೂ ಅಪರಾಧಗಳನ್ನೂ ಎದುರಿಸಲು ಹೊರಟಂತೆ. ಅಲ್ಲಿ ಮಲಗಿದ್ದ ಸ್ನೇಹಿತರಲ್ಲಿ – ನಮಗೆ ಅಷ್ಟು ಪ್ರಿಯವಾದ ಧೈರ್ಯದ ನಿರ್ಮಲ ಮನಸ್ಸಿನ ಆ ಜನರಲ್ಲಿ – ಪ್ರೇಮದ ಶಕ್ತಿ ಎದ್ದುಕಾಣುತ್ತಿತ್ತು. ಅದು ಅಜೇಯವಾಗಿತ್ತು.

ಕೊನೆಗೆ ನಾನೂ ಮಲಗಿಕೊಂಡೆ. ಆ ಕಡೆ ಈ ಕಡೆ ಶಾಮರಾವ್ ಮತ್ತು ಬೆರ್ನಾರ್ಡ್ ಮಲಗಿದ್ದರು. ಬಾಪೂ ಪಕ್ಕದಲ್ಲೇ ನಾನು ನೆಲದ ಮೇಲೆ ಹಾಸಿದ ಹಾಸಿಗೆಯ ಮೇಲೆ ಮಲಗಿದೆ. ಆಗ ಇದ್ದಕ್ಕಿದ್ದಂತೆ 'ಪೊಲೀಸರು ಬಂದರು !' ಎಂಬ ಪಿಸುಪಿಸು ಮಾತು ಮತ್ತು ಗಲಿಬಿಲಿ ಕನಸಿನಲ್ಲಿ ಕೇಳಿಸಿದಂತೆ ಕೇಳಿಸಿತು. ನಾವು ಎದ್ದು ಕುಳಿತೆವು. ನಾನು ನೋಡಿದೆ – ನೋಡಿದ್ದನ್ನು ಈಗಲೂ ಮರೆಯಲಾರೆ – ಸಂಪೂರ್ಣ ಸಮವಸ್ತ್ರ ಧರಿಸಿದ ಪೊಲೀಸ್ ಕಮೀಷನರ್ ಬಾಪುವಿನ ಹಾಸಿಗೆಯ ಕೆಳಗೆ ನಿಂತಿದ್ದರು. ಬಾಪು ಆಗತಾನೆ ಎದ್ದು ತಿರುಗಾಡುತ್ತಿದ್ದರು. ಕೊಂಚ ಅಚ್ಚರಿ ಅವರ ಮುಖದ ಮೇಲಿದ್ದಂತಿತ್ತು. ಇನ್ನೂ ನಿದ್ದೆಯ ಜೊಂಪು ಇಳಿದಿರಲಿಲ್ಲ.

'ಮಿಸ್ಟರ್ ಗಾಂಧೀ, ನಿಮ್ಮನ್ನು ದಸ್ತಗಿರಿ ಮಾಡುವುದು ನನ್ನ ಕರ್ತವ್ಯವಾಗಿದೆ' ಎಂದರು ಕಮೀಷನರ್.

ಪೊಲೀಸ್ ಕಮೀಷನರನ್ನು ಆಹ್ವಾನಿಸುವ ಸುಂದರ ನಗುಮುಖಮಾಡಿದರು, ಬಾಪು. ತಾವು ಮೌನವನ್ನಾಚರಿಸುತ್ತಿದ್ದೇವೆಂಬ ಸೂಚನೆ ಮಾಡಿದರು. ಕಮೀಷನರು ಹುಸಿನಕ್ಕು ಬಹು ವಿನಯದಿಂದ 'ಇನ್ನು ಅರ್ಧ ಗಂಟೆಯೊಳಗೆ ತಾವು ಸಿದ್ಧವಾದರೆ ಸಾಕು' ಎಂದರು.

ಆಗ ಮೂರು ಗಂಟೆ ಹೊಡೆದು ಐದು ನಿಮಿಷ ಆಗಿತ್ತು. ಬಾಪು ತಮ್ಮ ಗಡಿಯಾರ ನೋಡಿಕೊಂಡರು. 'ಓಹೋ, ಆ ಹಳಸಾದ ಗಡಿಯಾರ !' ಎಂದು ಗೇಲಿ ಮಾಡಿದರು ಕಮೀಷನರು. ಇಬ್ಬರೂ ಗೊಳ್ಳೆಂದು ನಕ್ಕರು. ಬಾಪು ಒಂದು ಸೀಸದ ಕಡ್ಡಿ ತೆಗೆದುಕೊಂಡು ಬರೆದರು, 'ಇನ್ನು ಅರ್ಧ ಗಂಟೆಯೊಳಗೆ ಹೊರಡಲು ಸಿದ್ಧನಾಗುತ್ತೇನೆ' ಎಂದು.

ದಸ್ತಗಿರಿ ಮಾಡಿದ ಸಂಕೇತಕ್ಕಾಗಿ ಕಮೀಷನರು ಬಾಪು ಭುಜದ ಮೇಲೆ ಕೈಯಿಟ್ಟರು. ಆದರೆ ಅದು ಅವರನ್ನು ಪ್ರೀತಿಯಿಂದ ಅಪ್ಪಿಕೊಳ್ಳುವಂತೆ ಇತ್ತು. ಬಾಪು ಆ ಮೇಲೆ ಹಲ್ಲುಜ್ಜಿಕೊಂಡರು. ಕೊಂಚ ಹೊತ್ತು ಒಳಗೆ ಹೋದರು. ಬಾಗಿಲನ್ನು ಪೊಲೀಸರು ಕಾಯುತ್ತಿದ್ದರು. ಮನೆಯ ಮೇಲಿದ್ದವರೆಲ್ಲ ವೃತ್ತಾಕಾರವಾಗಿ ಕುಳಿತುಕೊಂಡೆವು. ಹೊರಗಡೆ ಬೀದಿಯ ಕಡೆ ನೋಡಿದೆ. ಸಣ್ಣ ಗುಂಪೊಂದು ಸೇರಿತ್ತು. ಆದರೆ ಅದು ಯಾವ ಗಲಾಟೆಯನ್ನೂ ಮಾಡುತ್ತಿರಲಿಲ್ಲ. ಪೊಲೀಸರು ಸಹ ಯಾವ ವಿಶೇಷ ವ್ಯವಸ್ಥೆಯನ್ನೂ ಮಾಡಿರಲಿಲ್ಲ.

ಸಿದ್ಧರಾದ ಮೇಲೆ ಬಾಪು ಬಂದು ನಮ್ಮ ಮಧ್ಯೆ ಪ್ರಾರ್ಥನೆಗೆ ಕುಳಿತರು. ನಾವೆಲ್ಲಾ 'ವೈಷ್ಣವ ಜನತೋ....' ಎಂಬ ಹಾಡು ಹೇಳಿದೆವು. ಅನಂತರ ಬಾಪು ಕಾಗದ ಸೀಸದಕಡ್ಡಿ ತೆಗೆದುಕೊಂಡು ಕೆಲವು ಸಂದೇಶಗಳನ್ನು ಬರೆದರು. ಅದರಲ್ಲಿ ತಮ್ಮ ಅನುಯಾಯಿಗಳಿಗೆ ಕೊನೆಯ ಸಲಹೆಗಳನ್ನಿತ್ತಿದ್ದರು. ಸರದಾರ್ ವಲ್ಲಭಬಾಯಿ ಯವರಿಗೆ ಒಂದು ಚೀಟಿ ಬರೆದರು. ಅದು ಈ ರೀತಿ ಇತ್ತು : 'ದೇವರ ದಯೆ ಅಪಾರವಾದುದು. ಸತ್ಯ ಮತ್ತು ಅಹಿಂಸೆಯನ್ನು ಖಂಡಿತ ಬಿಡಕೂಡದೆಂದು ಜನಗಳಿಗೆ ದಯವಿಟ್ಟು ಹೇಳು. ಕಿಂಚಿತ್ತೂ ತೊಂದರೆ ಮಾಡಕೂಡದು. ಸ್ವರಾಜ್ಯಕ್ಕಾಗಿ ಪ್ರಾಣವನ್ನಾದರೂ ಕೊಡಲು ಸಿದ್ಧರಾಗಬೇಕೆಂದು ಹೇಳು.'

ನನಗೆ ಒಂದು ಚೀಟಿ ಬರೆದುಕೊಟ್ಟರು. ಅದರಲ್ಲಿ ಹೀಗಿತ್ತು : 'ನನ್ನ ಪ್ರೀತಿಯ ಎಲ್ವಿನ್, ನೀನು ಬಂದುದು ಸಂತೋಷವಾಯಿತು. ನಾನು ನನ್ನ ದೇಶದ ಜನರನ್ನು ಪ್ರೀತಿಸುವಂತೆ ನಿನ್ನ ದೇಶದ ಜನರನ್ನೂ ಪ್ರೀತಿಸುತ್ತೇನೆಂದು ನಿನ್ನ ದೇಶದ ಜನರಿಗೆ ನೀನೇ ಹೇಳು. ನಾನು ಯಾವುದನ್ನೂ ದ್ವೇಷಾಸೂಯೆಗಳಿಂದ ಅವರಿಗೆ ಮಾಡಿಲ್ಲ; ದೇವರ ಕೃಪೆಯಿದ್ದರೆ ಮುಂದೆಯೂ ಹಾಗೆ ಮಾಡುವುದಿಲ್ಲ. ಇಂಥ ಸಂದರ್ಭಗಳಲ್ಲಿ ಹಿಂದೆ ನಾನು ನನ್ನ ನೆಂಟರಿಷ್ಟರ ಬಗ್ಗೆ ಹೇಗೆ ವರ್ತಿಸಿದೆನೊ ಅದೇ ರೀತಿ ಅವರ ಬಗ್ಗೆಯೂ ವರ್ತಿಸುತ್ತಿದ್ದೇನೆ. ಬೇರೆ ರೀತಿಯಲ್ಲಿ ಅಲ್ಲ – ಪ್ರೇಮಪೂರ್ವಕವಾಗಿ, ನಿನ್ನ ಎಂ.ಕೆ. ಗಾಂಧಿ'.

ಬಾಪು ಎದ್ದುನಿಂತು ಎಲ್ಲರನ್ನೂ ಬೀಳ್ಕೊಂಡರು. ಅದೊಂದು ಅಪೂರ್ವ ದೃಶ್ಯ. ಪೊಲೀಸರು ಬಾಗಿಲಲ್ಲಿ ಇದ್ದಾರೆ. ಆಗಲೇ ಗಂಟುಕಟ್ಟಿದ್ದ ಸಾಮಾನುಗಳನ್ನು ಹಿಡಿದು ಓಡಾಡುತ್ತಿದ್ದಾರೆ. ಮೀರಾಬೆನ್ ಮತ್ತು ದೇವದಾಸ್ ಬಾಪು ಸುತ್ತಮುತ್ತ ಅವರ ಸ್ನೇಹಿತರಿದ್ದಾರೆ. ಅವರಲ್ಲಿ ಅನೇಕ ಜನ ಕಣ್ಣಲ್ಲಿ ನೀರು ತಂದು ದುಃಖಿಸುತ್ತಿದ್ದಾರೆ. ಕಸ್ತೂರಿ ಬಾ ಧಾರಾಕಾರವಾಗಿ ಹರಿಯುತ್ತಿದ್ದ ಕಣ್ಣೀರಿನಲ್ಲಿ 'ನಿಮ್ಮೊಡನೆ ನನ್ನನ್ನೂ ಕರೆದುಕೊಂಡು ಹೋಗಲಾರಿರಾ ?' ಎಂದು ಕೇಳಿದರು. ಎಲ್ಲರೂ ಬಾಪುವಿನ ಕಾಲು ಮುಟ್ಟಿ ನಮಸ್ಕರಿಸಿದರು. ನಾನು 'ಗುಡ್ ಬೈ' ಎಂದಾಗ ಬಾಪು ನನ್ನ ಕಿವಿ ಎಳೆದು ನಕ್ಕರು. ಬಹಳ ಖುಷಿಯಾಗಿದ್ದರು. ಜೈಲಿಗೆ ಹೋಗುವ ಬದಲು ಹಬ್ಬಕ್ಕೆ ಹೋಗುತ್ತಿರುವಂತೆ ಕಾಣಿಸಿತು.

ಅನಂತರ ಸಮಸ್ತ ಪರಿವಾರ ಸಮೇತ ಕೆಳಗಿಳಿದರು. ನಾನು ಮತ್ತು ಶಾಮರಾವ್ ಮೇಲೆ ನಿಂತೇ ನೋಡುತ್ತಿದ್ದೆವು. ಆ ಪುಟ್ಟ ವ್ಯಕ್ತಿ ಕಾರಿನೊಳಕ್ಕೆ ಹೋಯಿತು. ನಿಂತಿದ್ದ ಜನ ಕಾರಿನ ಸುತ್ತ ಸೇರಿದರು. ಕೇವಲ ಕೆಲವೇ ಪೊಲೀಸರಿದ್ದರು. ಅವರು ಆ ಗುಂಪಿನ ಮಧ್ಯೆ ಯಾವ ಭಯವೂ ಇಲ್ಲದೆ ನಿಂತಿದ್ದುದು ಇಂಡಿಯಾದ ಅಹಿಂಸೆಗೆ ಅನುಪಮ ಮಾದರಿಯಾಗಿತ್ತು. ಅದೇ ಕಾಲಕ್ಕೆ ಒಂದು ಸುದ್ದಿ ಬಂದಿತು, 'ಕಾಂಗ್ರೆಸ್ ಅಧ್ಯಕ್ಷ ಸರದಾರ ವಲ್ಲಭಭಾಯಿ ಅವರ ದಸ್ತಗಿರಿಯೂ ಆಯಿತು' ಎಂದು. ಅದನ್ನು ಕೇಳಿದ ಜನ ಸದ್ದಿಲ್ಲದೆ ಕಾರು ಮುಂದೆ ಹೋಗಲು ಅವಕಾಶ ಮಾಡಿಕೊಟ್ಟರು. ಇಂಡಿಯಾದ ಆತ್ಮವೇ ಆದ ಆ ವ್ಯಕ್ತಿಯನ್ನು ಸಾಗಿಸಿಕೊಂಡು ಕಾರು ಬಿಕೋ ಎನ್ನುತ್ತಿದ್ದ ಬೊಂಬಾಯಿ ಕತ್ತಲು ಬೀದಿಗಳಲ್ಲಿ ಸಾಗಿತು.

ಬಾಪು ಮಹದೇವ ದೇಸಾಯಿಯವರಿಗೆ ಇತ್ತ ಸಂದೇಶಗಳಲ್ಲಿ ನಾನು ಗಡಿನಾಡಿಗೆ ಹೋಗಿಬರುವ ವಿಷಯವೂ ಇತ್ತು. ಅಲ್ಲಿಯ 'ಕೆಂಪು ಅಂಗಿ' (Red Shirt) ಚಳವಳಿಯ ಬಗ್ಗೆ ನಾನಾ ಊಹಾಪೋಹದ ಸುದ್ದಿಗಳು ಬರುತ್ತಿದ್ದವು. ಖಾನ್ ಅಬ್ದುಲ್‌ಖಾನರ ನೇತೃತ್ವದಲ್ಲಿ ಆರಂಭವಾದ ಅಹಿಂಸಾಯುತ ಚಳುವಳಿಯನ್ನು ಸರ್ಕಾರ ಹತ್ತಿಕ್ಕಲು ಹೊರಟಿತ್ತು. ಕೆಂಪು ಅಂಗಿಗಳಿಗೂ ಮಾಸ್ಕೊಗೂ ಏನು ಸಂಬಂಧವಿರಲಿಲ್ಲ. ಒಂದು ದಿನ ಒಬ್ಬ ಹುಡುಗ ನೀರಿನಲ್ಲಿ ಇಟ್ಟಿಗೆಪುಡಿ ಬೆರೆಸಿ ಅದರಲ್ಲಿ ಅದ್ದಿದ ಅಂಗಿ ಹಾಕಿಕೊಂಡು ಪರೇಡಿಗೆ ಬಂದ. ಅದೇ ಎಲ್ಲರ ಸಮವಸ್ತ್ರವಾಯಿತು. ಕೆಂಪು ಅಂಗಿ ಚಳುವಳಿ ವ್ಯವಸ್ಥಿತವಾಗಿ ನಡೆಯಿತು. ಮುಯ್ಯಿಗೆ ಮುಯ್ಯಿ ತೀರಿಸಿಕೊಳ್ಳುವ ಸ್ವಭಾವದ ಜನ ಗಾಂಧೀಜಿಯವರ ಅಹಿಂಸೆಯ ಮರುಳಿಗೆ ಮಾರುಹೋಗಿ ಖಾನರ ನೇತೃತ್ವದಲ್ಲಿ ಅಸಮಾನ ಚಳುವಳಿ ನಡೆಸಿದರು. ಈ ಚಳುವಳಿಗಾರರನ್ನು 'ಖುದಾಯ್ ಖಿದ್ಮತ್‌ಗಾರ'ರೆಂದು ಕರೆದರು. ಈ ಚಳುವಳಿಯನ್ನು ಸರ್ಕಾರ ಹತ್ತಿಕ್ಕಿತು. ಖಾನರಿಂದ ಆದಿಯಾಗಿ ಎಲ್ಲರನ್ನೂ ದಸ್ತಗಿರಿ ಮಾಡಿ ಸೆರೆಮನೆಯಲ್ಲಿಟ್ಟರು. ಆದರೆ ಬೊಂಬಾಯಿಗೆ ಬರುತ್ತಿದ್ದ ಸುದ್ದಿಗಳೇ ಬೇರೆ ಆಗಿದ್ದವು. ಅಲ್ಲಿಗೆ ಹೋಗಿ ಏನು ನಡೆಯುತ್ತಿದೆಯೆಂದು ತಿಳಿದುಕೊಂಡುಬರಲು ನನ್ನನ್ನು ಕಳುಹಿಸಿಕೊಡಬೇಕೆಂದು ಬಾಪು ಬರೆದಿದ್ದರು. ನಾನು ಮತ್ತು ಶಾಮರಾವ್

ಇಬ್ಬರೂ ಪೆಷಾವರಕ್ಕೆ ಹೊರಟೆವು. ಖರ್ಚಿಗೆ ನನ್ನ ಬಳಿಯಾಗಲೀ ಬೇರೆಯವರ ಬಳಿಯಾಗಲೀ ದುಡ್ಡಿರಲಿಲ್ಲ. ದೇವದಾಸ್ ಗಾಂಧಿ ನಮ್ಮನ್ನು ಇಬ್ಬರು ಮೂವರು ಶ್ರೀಮಂತ ವರ್ತಕರ ಬಳಿಗೆ ಕರೆದುಕೊಂಡುಹೋಗಿ ದುಡ್ಡು ಕೊಡಿಸಿದರು. ಮುನ್ನೂರು ರೂಪಾಯಿ ಸಿಕ್ಕಿತು. ಅಷ್ಟು ಸಾಕು ಎಂದು ಭಾವಿಸಿದೆವು.

ಈ ಒಂದು ಘಟನೆ ನನ್ನ ಮನಸ್ಸಿಗೆ ಸದಾ ಸಮಾಧಾನವನ್ನೀಯುತ್ತಾ ಬಂದಿದೆ. ಮೊಟ್ಟಮೊದಲಿಗೆ ಈ ಕೆಲಸಕ್ಕೆ ಕೈಹಾಕಿ ಕೊಂಚ ಅಪಾಯವನ್ನು ಎದುರಿಸಿದೆನೆಂದು ಹೇಳಬೇಕು. ರೋಮಾಂಚನಕಾರಿಯಾದ ಕಾದಂಬರಿಗಳನ್ನು ಓದುವ ಅಭ್ಯಾಸವಿದ್ದ ನನಗೆ ಈ ರೀತಿಯ ಮುಸುಕು ಈಟಿಯ ಸಾಹಸಕ್ಕೆ (Clock and dagger adventure) ಕೈಹಾಕುವ ಅವಕಾಶ ಸಿಕ್ಕಿತು. ಗಾಂಧೀ ಬಟ್ಟೆಯಲ್ಲಿ ಹೋದರೆ ನನ್ನ ದಸ್ತಗಿರಿ ಖಂಡಿತ ಎಂದು ಭಾವಿಸಿದ ನಾನು ಬೆರ್ನಾರ್ಡ್ ಅವರಿಂದ ಲಂಡನ್‌ನಲ್ಲಿ ಹೊಲಿಸಿದ ಸೂಟನ್ನು ಎರವು ತೆಗೆದುಕೊಂಡೆ. ಅದು ನನಗೆ ತುಂಬಾ ಚಿಕ್ಕದಾದರೂ ನೋಡುವುದಕ್ಕೆ ಗೌರವಯುತವಾಗಿತ್ತು. ಇಂಟರ್ ತರಗತಿಯಲ್ಲಿ ಪ್ರಯಾಣಮಾಡಿದೆವು. ಆ ತರಗತಿಯಲ್ಲಿ ಪ್ರಯಾಣಮಾಡಿದರೆ ಜನರ ಕಣ್ಣಿಗೆ ಬೀಳುತ್ತೇವೊ ಏನೊ ಎಂಬ ಭೀತಿ ಇತ್ತು. ಆದರೆ ಅದರಿಂದ ಆದ ಅನುಕೂಲ, ಗಡಿನಾಡು ಕಾಯುತ್ತಿದ್ದ ಪೊಲೀಸಿನವರ ಕಣ್ಣಿಗೆ ಬೀಳದೆ ಇದ್ದುದು. ನಾನು ಪೇಶಾವರಕ್ಕೆ ಹೊರಟಿರುವ ಸುದ್ದಿ ಸರ್ಕಾರಕ್ಕೆ ತಿಳಿದು ನನ್ನ ದಸ್ತಗಿರಿಗೆ ವ್ಯವಸ್ಥೆ ಮಾಡಿತು. ಮೊದಲನೆ ತರಗತಿಯಲ್ಲಿ ಪ್ರಯಾಣಮಾಡುತ್ತೇನೆಂದು ಭಾವಿಸಿದ್ದ ಪೊಲೀಸರು ನನ್ನ ಬದಲು ಏನೂ ತಿಳಿಯದ ಇನ್ನೊಬ್ಬ ಇಂಗ್ಲಿಷ್ ವರ್ತಕರನ್ನು ದಸ್ತಗಿರಿಮಾಡಿದರು. ಆ ವರ್ತಕ ರೇಗಾಡಿ ಗಲಾಟೆ ಮಾಡಿದ. ಆ ಗಲಾಟೆಯಲ್ಲಿ ನಾವು ತಪ್ಪಿಸಿಕೊಂಡೆವು.

ನಾವು ದೆಹಲಿಯಲ್ಲಿ ಕೆಲವು ಗಂಟೆ ಇರಬೇಕಾಯಿತು. ಆಗ ನಾವು ಕೆಂಪು ಕೋಟೆಯ ಮರೆಯಲ್ಲಿ ರೋಮಾಂಚನಕಾರಿಯಾದ ಒಂದು ಭೇಟಿ ಮಾಡಬೇಕಾಯಿತು. ಅದು ಯಾವ ವಿಷಯವಾಗಿ ಎಂಬುದು ಈಗ ಮರೆತುಹೋಗಿದೆ. ಅಂತೂ ಚಿನ್ನಕ್ಕೆ ಸಂಬಂಧಪಟ್ಟ ಒಂದು ವಿಷಯ ಎಂದು ಮಸುಕಾಗಿ ತೋರುತ್ತಿದೆ. ಆಮೇಲೆ ಲಾಹೋರ್ ಸ್ಟೇಷನ್ನಿನಲ್ಲಿ ನಮ್ಮ ಪ್ರೀತಿಯ ಬುಲ್ (ಕೊರ್ಷೆದ್ ನವರೋಜಿ) ಸಿಕ್ಕಿ ಮುಂದೇನಾಗಬಹುದೆಂಬ ಬಗ್ಗೆ ಒಂದಿಷ್ಟು ಸೂಚನೆ ಕೊಟ್ಟರು.

ಪೆಷಾವರ್ ತಲುಪಿದಾಗ ನಾವು ವಿಚಿತ್ರ ಪ್ರಪಂಚದಲ್ಲಿ ಇದ್ದಂತೆ ಭಾಸವಾಯಿತು. ಎಲ್ಲವನ್ನೂ ಬಹಳ ಆತುರದಲ್ಲಿ ಏರ್ಪಡಿಸಿದ್ದಂತೆ ಕಂಡಿತು. ನಾನೆಲ್ಲಿ ಹೋಗಬೇಕು, ಹೇಗೆ ನನ್ನ ಕೆಲಸ ಆರಂಭಿಸಬೇಕು ಎಂದು ಗೊತ್ತಾಗಲಿಲ್ಲ. ದೇವದಾಸ್ ಒಬ್ಬ ವರ್ತಕರ ಹೆಸರು ಹೇಳಿದ್ದರು. ನಾವು ಟಾಂಗಾದಲ್ಲಿ ಅವರ ಮನೆಗೆ ಹೋದೆವು. ಆ ವರ್ತಕ ನಮ್ಮನ್ನು ನೋಡುವುದು ಸೂಕ್ತವೇ ಅಲ್ಲವೇ ಎಂದು ಆಲೋಚಿಸಿ ಹೇಳುವುದಕ್ಕೆ ಒಂದು ಗಂಟೆ ಕಾಯಿಸಿದ. ಕೊನೆಗೆ ನಮ್ಮನ್ನು ಕಂಡ ಆತ ನಮ್ಮ

ಪತ್ರ ಓದಿ ನಡುಗಲಾರಂಭಿಸಿದ. ನಾನು ಆತನಿಂದಲೇ ಆದಷ್ಟು ವಿಷಯಗಳನ್ನು ಸಂಗ್ರಹಿಸಿದೆ. ಮರಾಠಿ ಜನರ ಉಡುಪಿನಲ್ಲಿ ಶಾಮರಾವ್ ಅವರಿಗೆ ಪಠಾಣ್ ಉಡುಪು ಕೊಟ್ಟನು. ಹೆದರಿಕೊಂಡೇ ಅವನು ನಮಗೆ ಬೇಕಾದ ಸಹಾಯ ಮಾಡಿದ. ಸರ್ಕಾರಿ ಅಧಿಕಾರಿಗಳ ಕಣ್ಣಿಗೆಬಿದ್ದರೆ ತನ್ನ ಗತಿ ಮುಗಿಯಿತೆಂದು ಅನ್ನುತ್ತಾ ಭಾರಿ ಎಚ್ಚರವಹಿಸಿದ. ಮೊದಲು ನಾವು ಆತನ ಮನೆಯಲ್ಲಿಯೇ ವರ್ತಕರಂತೆ ತಂಗಬೇಕೆಂದು ಮಾಡಿದ್ದೆವು. ಆದರೆ ಯಾವ ಇಂಗ್ಲಿಷ್ ವರ್ತಕನೂ ಇಂಡಿಯಾವರ್ತಕನ ಮನೆಯಲ್ಲಿ ತಂಗುವುದಿಲ್ಲವಾದ್ದರಿಂದ ಈ ಯೋಚನೆ ಸರಿಯಲ್ಲ ಎಂದುಕೊಂಡು ಕಂಟೋನ್‌ಮೆಂಟ್‌ನಲ್ಲಿದ್ದ ಭಾರಿ ಹೊಟೇಲೊಂದಕ್ಕೆ ಹೋದೆವು. ದಾರಿಯಲ್ಲಿ ಪೊಲೀಸರು ಕಾವಲು ಕಾಯುತ್ತಿದ್ದರು. ಹೊಟೇಲಿನಲ್ಲಿ ಅನೇಕ ಜನ ಇಂಗ್ಲಿಷರೂ ಅಧಿಕಾರಿಗಳೂ ಇಳಿದುಕೊಂಡಿದ್ದರು.

ಹೊಟೇಲ್ ತುಂಬಾ ಅನುಕೂಲವಾಗಿದ್ದರೂ ನಮ್ಮಲ್ಲಿದ್ದ ಜುಜುಬಿ ಹಣದಲ್ಲಿ ಅಲ್ಲಿರಲು ಸಾಧ್ಯವಿರಲಿಲ್ಲ. ಆದ್ದರಿಂದ ಮಾರನೆಯ ದಿನ ನಾವು ಡಾಕ್ ಬಂಗಲೆಗೆ ಹೋದೆವು. ಅಲ್ಲಿ ನನ್ನ ನಿಜವಾದ ಹೆಸರನ್ನೇ ಬರೆದೆ – ನನ್ನನ್ನು ಇಲ್ಲಿಯವರೆಗೂ ಹಿಡಿಯಲು ಸಾಧ್ಯವಾಗದೆ ಹೋದ ಪೊಲೀಸರು ಈಗಲಾದರೂ ಹಿಡಿಯುವರೇ ನೋಡೋಣ ಎಂದು. ಈ ಸಾಹಸದಲ್ಲಿ ನನಗೆ ಸಂಕಟವನ್ನುಂಟುಮಾಡಿದ್ದೇನೆಂದರೆ, ಶಾಮರಾವನ್ನು ನಾನು ನನ್ನ ಸೇವಕನಂತೆ ಕಾಣುವ ನಟನೆ ಮಾಡಬೇಕಾಗಿ ಬಂದುದು. ಆ ಡಾಕ್ ಬಂಗಲೆಯಲ್ಲಿ ನಮಗೆ ಸಿಕ್ಕಿದ್ದು ಒಂದೇ ರೂಮು, ಆದ್ದರಿಂದ ಶಾಮರಾವ್ ಹೊರಗಡೆ ಪಡಸಾಲೆಯಲ್ಲಿ ಚಳಿಯಲ್ಲಿ ನಡುಗುತ್ತಾ ಮಲಗಿಕೊಳ್ಳ ಬೇಕಾಯಿತು. ಇಂಗ್ಲಿಷಿನವನೂ ಇಂಡಿಯಾದವನೂ ಒಂದೇ ಕೋಣೆಯಲ್ಲಿರುವುದು ಆ ಕಾಲದಲ್ಲಿ ಸಾಧ್ಯವಿರಲಿಲ್ಲ. ಹಾಗೇನಾದರೂ ಇದ್ದರೆ ಕೂಡಲೇ ಅನುಮಾನಕ್ಕೆ ಆಸ್ಪದ ಮಾಡಿಕೊಟ್ಟಂತಾಗುತ್ತಿತ್ತು. ನಮಗೆ ಬಿಲ್ಲು ಕೊಟ್ಟಾಗ ಅದರಲ್ಲಿ ಎರಡು ಮುಖ್ಯ ಐಟಂಗಳಿದ್ದುವು – 'ಒಂದು ಸಾಹೇಬರಿಗೆ' ಊಟ, ಇನ್ನೊಂದು 'ಅವನಿಗೆ' ಊಟ. 'ಅವನ' ಊಟಕ್ಕೆ ಅರ್ಧ ಚಾರ್ಜು.

ಎಷ್ಟೇ ತೊಂದರೆಗಳಿದ್ದರೂ ನಾವು ಕೆಲವು ವಿಷಯಗಳನ್ನು ಸಂಗ್ರಹಿಸಲು ಸಾಧ್ಯವಾಯಿತು. ಜನಗಳು ಯಾವ ವಿಷಯಕ್ಕೂ ಬಾಯಿಬಿಡುತ್ತಿರಲಿಲ್ಲ. ನನ್ನನ್ನು ನೋಡಲು ರಾತ್ರಿವೇಳೆ ಮಾತ್ರ ಜುಗ್ಗಾಡಿಕೊಂಡು ಬರುತ್ತಿದ್ದರು.

ಮೂರನೆ ದಿನ ನಾವು ಪೇಷಾವರ್ ಸುತ್ತಮುತ್ತ ಇದ್ದ ಹತ್ತಾರು ಹಳ್ಳಿಗಳಿಗೆ ಹೋಗಿಬಂದೆವು. ಹಳೆಯ ಕಾರೊಂದನ್ನು ಬಾಡಿಗೆಗೆ ತೆಗೆದುಕೊಂಡು ಹಳ್ಳ ದಿಣ್ಣೆಯ ರಸ್ತೆಯಲ್ಲಿ ಪ್ರವಾಸಮಾಡಿದೆವು. ಅಲ್ಲಲ್ಲಿ ನಮ್ಮನ್ನು ಪೊಲೀಸರು ನಿಲ್ಲಿಸುತ್ತಿದ್ದರು. ಒಂದು ಕಡೆ ನಿಲ್ಲಿಸಿ ನಿನ್ನಲ್ಲಿ ಪಿಸ್ತೋಲ್ ಇದೆಯೇ ಎಂದು ಕೇಳಿದರು. ನಾನು ಇಲ್ಲ ಎಂದು ಹೇಳಿದಾಗ ಅವರು ಆಶ್ಚರ್ಯಪಟ್ಟು ಒಂದನ್ನು ಕೊಡಲು ಬಂದರು. ಆದರೆ ಅದನ್ನು ಈಸಿಕೊಳ್ಳುವ ಬದಲು ಸಿಗರೇಟ್ ಹಚ್ಚಿ ಸಾಹೇಬನಂತೆ ನಟಿಸಿದೆ;

ಅವರೂ ಹಾಗೆಯೇ ಭಾವಿಸಿದರು. ಆಗ ನಾನು ಸೇದುತ್ತಿರಲಿಲ್ಲ. ಆದರೆ ಇಂಥ ಸಂದರ್ಭಗಳಲ್ಲಿ ಸೇದುವವನಂತೆ ತೋರಿಸಿಕೊಳ್ಳುತ್ತಿದ್ದೆ.

ನನಗಿಂತ ಹೆಚ್ಚಾಗಿ ಶಾಮರಾವ್ ತುಂಬಾ ಕೆಲಸ ಮಾಡಿದರು. ಅವರು ಊರಿನಲ್ಲಿ ಅಡ್ಡಾಡಿ ಅನೇಕ ವಿಷಯ ತಿಳಿದುಕೊಂಡರು.

ಐದನೆಯ ದಿನ ಖೈಬರ್ ಕಣಿವೆಗೆ ಹೋದೆವು. ಅಲ್ಲಿಯ ಜನರನ್ನು ಕಂಡು ವಿಷಯ ಸಂಗ್ರಹಿಸಿದೆವು. ನಮ್ಮ ಕೆಲಸ ಮುಗಿಯುತ್ತಾ ಬಂದಂತೆ ನಾವು ದಸ್ತಗಿರಿ ಮಾಡಿಸಿಕೊಂಡು ವೀರರಾಗುವುದೊಂದೇ ಬಾಕಿ ಎಂಬ ಭಾವನೆಯಾಯಿತು. ಖೈಬರ್ ಕಣಿವೆಗೆ ಹೋಗುವ ಮುನ್ನ ಡೆಪ್ಯೂಟಿ ಕಮೀಷನರಿಗೆ ಒಂದು ಕಾಗದ ಬರೆದು, ನಾನೇಕೆ ಬಂದಿರುವೆ ಎಂದು ತಿಳಿಸಿ, ಅವರನ್ನು ಭೇಟಿಮಾಡಲು ಅವಕಾಶ ಕೇಳಿದ್ದೆ. ಖೈಬರ್ ಪಾಸ್‌ನಿಂದ ಹಿಂದಿರುಗಿ ಪೆಷಾವರ್ ಸ್ಟೇಷನ್ನಿನಲ್ಲಿ ರೈಲು ಇಳಿದಾಗ ನನ್ನ ಪತ್ರಕ್ಕೆ ಉತ್ತರವನ್ನು ಇಬ್ಬರು ಇಂಗ್ಲಿಷ್ ಪೋಲೀಸ್ ಅಧಿಕಾರಿಗಳೂ ಕೆಲವು ಪೇದೆಗಳೂ ಹಿಡಿದು ನಿಂತಿದ್ದರು. ಅದೇನೆಂದರೆ :

'ಎಮರ್ಜೆನ್ಸಿ ಪವರ್ಸ್ ಆರ್ಡಿನನ್ಸ್‌ನ ೪ (i) (ಸಿ) ಸೆಕ್ಷನ್ ಅಧಿಕಾರ ನಿರ್ವಹಣೆಯಂತೆ ಆ ಆಜ್ಞೆಮಾಡಲಾಗಿದೆ : ರೆವರೆಂಡ್ ವೆರಿಯರ್ ಎಲ್ವಿನ್ ಅವರು ಈ ಕೂಡಲೇ ಗಡಿನಾಡನ್ನು ಬಿಟ್ಟು ಹೊರಡತಕ್ಕದ್ದು. ಮತ್ತು ಮತ್ತೊಮ್ಮೆ ಪ್ರವೇಶ ಮಾಡಕೂಡದು. ಇದಕ್ಕೆ ವಿರೋಧವಾಗಿ ನಡೆದಲ್ಲಿ ಏನಾಗುವುದೆಂಬುದನ್ನು ಮಿಸ್ಟರ್ ಎಲ್ವಿನ್ ಅವರಿಗೆ ವಿವರಿಸಿ ಹೇಳತಕ್ಕದ್ದು – ಓ.ಕೆ. ಕ್ಯರೋ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್, ಪೆಷಾವರ್.'

ನನ್ನನ್ನು ದಸ್ತಗಿರಿ ಮಾಡಿದ ಪೋಲೀಸಿನವ ವಾಸ್ತವವಾಗಿ ತಮಾಷೆಯ ಮನುಷ್ಯ. ಅವನು 'damned sorry' ಎಂದು ಹೇಳುತ್ತಲೇ ಇದ್ದ, ಕೊನೆಯವರೆಗೆ. ನಮ್ಮನ್ನು ಡಾಕ್ ಬಂಗಲೆಗೆ ಕರೆದುಕೊಂಡುಹೋದರು. ಸಾಮಾನುಗಳನ್ನು ಹುಡುಕಿದರು. ಏನೂ ಸಿಕ್ಕಲಿಲ್ಲ. ಬಹಿರಂಗ ದಸ್ತಗಿರಿಯಲ್ಲಿರುವಾಗ ನಾವು ನಮ್ಮ ಕೋಣೆಯಲ್ಲಿರಬಹುದೆಂದು ಹೇಳಿದರು. ಆದರೆ ಕ್ಯರೋ ಅವರು ಹಗಲಿನಲ್ಲಿ ಹೊರಡುತ್ತಿದ್ದ ತುಂಬಾ ಅನಾನುಕೂಲವಾದ ರೈಲಿನಲಿ ಹೊರಡಬೇಕೆಂದು ಆಜ್ಞೆಮಾಡಿದರು. ಮಾರನೆಯ ದಿನ ಬೆಳಗ್ಗೆ ಫ್ರಾಂಟಿಯರ್ ಮೇಲ್‌ನಲ್ಲಿ ಹೊರಡಲು ಅನುಮತಿ ಕೇಳಿ ಸ್ನೇಹಿತನಾದ ಪೋಲೀಸ್ ಇನ್‌ಸ್ಪೆಕ್ಟರ್ ಮೂಲಕ ಕ್ಯರೋ ಅವರಿಗೆ ಕಾಗದ ಬರೆದು ಕಳುಹಿಸಿದೆ. ಜಾಮೀನುಕೊಡಲೂ ಸಿದ್ಧವಾಗಿರುವುದಾಗಿ ಆತ ತಿಳಿಸಿದ. ಆದರೆ ಕ್ಯರೋರಿಂದ ಆರ್ಡರುಬಂತು, ನಾನು ಆ ಕೂಡಲೇ ಹೊರಡ ಬೇಕೆಂದು. ರಾತ್ರಿ ಪ್ರಯಾಣದ ಕಷ್ಟ ಅನುಭವಿಸಲಿ ಎಂದೇ ಅವರು ಆ ರೀತಿ ಆರ್ಡರು ಮಾಡಿರುವುದಾಗಿ ತಿಳಿಸಿದರು. ಆಗ ನನ್ನ ಸ್ನೇಹಿತ ಹೇಳಿದ, 'ಇದನ್ನೇ ಸಾಮ್ರಾಜ್ಯಷಾಹಿ ಎನ್ನುವದು' ಎಂದು.

ಪೊಲೀಸಿನವರ ಜೊತೆ ಒಂದೆರಡು ಸಲ ಕುಡಿದನಂತರ ನಾವು ರೈಲ್ವೆಸ್ಟೇಷನ್ನಿಗೆ ಹೋದೆವು. ಅಲ್ಲಿ ಹತ್ತು ಹನ್ನೆರಡು ಜನ ಸಿ..ಐ.ಡಿ.ಗಳು ನಮ್ಮ ಕಡೆ ಏನೋ ಗುಮಾನಿಯಿಂದ ನೋಡುತ್ತಿದ್ದರು. ಏನಾದರೂ ಕಾಗದ ಪತ್ರ ಸಿಕ್ಕೀತೆ ಎಂದು ಪೋಲೀಸರು ಹುಡುಕಿದರು. ಆದರೆ ನಾನು ಬರೆದುಕೊಂಡಿದ್ದುದನ್ನೆಲ್ಲಾ ಬಚ್ಚಿಟ್ಟಿದ್ದೆ. ಅದರಲ್ಲಿದ್ದ ಕೆಲವು ಕಾಗದಗಳು ಪೊಲೀಸರ ಕೈಗೆ ಸಿಕ್ಕಿದ್ದರೆ ಪೇಷಾರಿನ ಕೆಲವು ಜನಗಳೂ ತೊಂದರೆಗೆ ಸಿಕ್ಕಬೇಕಾಗಿತ್ತು. ಕಾಗದಗಳನ್ನು ಕೋಣೆಯ ಮೇಜಿನಲ್ಲಿದ್ದ ಬೆಳಗಿನ ಊಟಕ್ಕೆ ಉಪಯೋಗಿಸುವ ತಿಂಡಿಯ ಪೊಟ್ಟಣದೊಳಗೆ ಸೇರಿಸಿದ್ದೆ. ಅದು ಎಲ್ಲರಿಗೂ ಕಾಣುತ್ತಿತ್ತು. ಪೊಲೀಸರು ಎಲ್ಲವನ್ನೂ ಹುಡುಕಿದರು. ಆದರೆ ಏನೂ ಕಾಣದಂತೆ ಅಲ್ಲಿ ಕುಳಿತಿದ್ದ ಆ ಪೊಟ್ಟಣವನ್ನು ಮಾತ್ರ ಹುಡಕಲಿಲ್ಲ. ನಾನು ಅದನ್ನು ಹೆಮ್ಮೆಯಿಂದ ಬೊಂಬಾಯಿಗೆ ತೆಗೆದುಕೊಂಡುಹೋಗಿ ಅದರ ಆಧಾರದ ಮೇಲೆ ನನ್ನ ವರದಿಯನ್ನು ಸಿದ್ಧಪಡಿಸಿ ಪ್ರಕಟಿಸಿದೆ. ಅದನ್ನು ಕೂಡಲೇ ಮುಟ್ಟುಗೋಲುಹಾಕಿ ಇಂಗ್ಲೆಂಡ್ ಚಕ್ರವರ್ತಿಗೆ ಸೇರಿದ್ದೆಂದು ಹೇಳಿಬಿಟ್ಟರು. ಲಂಡನ್‌ನಲ್ಲಿ ಅನಂತರ ಅದು ಪುನಃ ಪ್ರಕಟವಾಯಿತು. ಅನೇಕ ವರ್ಷಗಳ ಕಾಲ ನನಗೇ ಅದರ ಒಂದು ಪ್ರತಿ ಸಿಕ್ಕುವುದು ಕಷ್ಟವಾಯಿತು. ಆದರೆ ಅದು ಜಾರ್ಜ್ ಚಕ್ರವರ್ತಿಗೆ ಸೇರಿತಲ್ಲಾ ಎಂದು ನನಗೆ ಸಮಾಧಾನವಾಯಿತು.

ಬೊಂಬಾಯಿಗೆ ಬಂದ ಮೇಲೆ ನಮಗೆ ಮತ್ತೊಂದು ಸಮಸ್ಯೆ ಉದ್ಭವಿಸಿತು. ಇಂಗ್ಲೆಂಡಿನಿಂದ ಶಾಮರಾವ್ ತಮ್ಮ ಉನ್ನತ ವ್ಯಾಸಂಗವನ್ನು ಬಿಟ್ಟು ಹಿಂದಿರುಗಿದ್ದರು – ಗಿರಿಜನರಿಗಾಗಿ ಕೆಲಸಮಾಡಲು. ನಾನೂ ಅದೇ ಆಲೋಚನೆಮಾಡಿದ್ದೆ. ಆದರೆ ಈಗ ಗಾಂಧೀಜಿಯವರ ದಸ್ತಗಿರಿಯಾದ ಮೇಲೆ ಮತ್ತು ನನ್ನನ್ನು ಗಡಿನಾಡಿನಿಂದ ಗಡೀಪಾರು ಮಾಡಿದ ಮೇಲೆ ನಾನು ರಾಜಕೀಯರಂಗವನ್ನು ಪ್ರವೇಶಿಸಬೇಕೆಂಬ ಒತ್ತಾಯ ಹೆಚ್ಚಾಯಿತು. ಆಗ ನಾಲ್ಕಾರು ಜನರನ್ನು ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಒಮ್ಮೆಲೇ ನೇಮಿಸಿ, ಒಬ್ಬರಾದ ಮೇಲೊಬ್ಬರು ಅಧ್ಯಕ್ಷಸ್ಥಾನ ವಹಿಸಬೇಕೆಂಬ ಆಲೋಚನೆ ಇತ್ತು. ಹೀಗೆ ಮಾಡುವಾಗ ಎಲ್ಲಾ ಮತದವರಿಗೂ ಅವಕಾಶ ಕೊಡುವ ಆಲೋಚನೆಮಾಡಿದರು. ಜಮ್ನಾಲಾಲ್ ಬಜಾಜರು ನನ್ನನ್ನು ಕೇಳಿದರು – ಇಂಗ್ಲಿಷಿನವರ ಸರದಿ ಬಂದಾಗ ನೀನು ಕಾಂಗ್ರೆಸ್ ಅಧ್ಯಕ್ಷನಾಗುವುದಕ್ಕೆ ಒಪ್ಪುವೆಯಾ ಎಂದು. ಅಧ್ಯಕ್ಷನಾಗಿ ಹೆಚ್ಚು ದಿವಸ ಇರುವಂತಿರಲಿಲ್ಲ. ಏಕೆಂದರೆ, ಒಂದು ವಾರದಲ್ಲೇ ದಸ್ತಗಿರಿಯಾಗುತ್ತಿತ್ತು. ನಾನು ಆಗಬಹುದು ಎಂದೆ. ಹಾಗೇನಾದರೂ ಆಗಿದ್ದರೆ ಏನಾಗುತ್ತಿತ್ತೊ ಎಂದು ಆಗಾಗ ಆಲೋಚಿಸುತ್ತಿದ್ದೇನೆ.

ನಾನೂ ಶಾಮರಾವೂ ಕುಳಿತು ಆಲೋಚಿಸಿದೆವು. ರಾಜಕೀಯ ನಮ್ಮ ದಾರಿಯಲ್ಲ ಎಂಬ ತೀರ್ಮಾನಕ್ಕೂ ಬಂದೆವು. ಯುರೋಪಿನ ಜನರು ತಮಗೆ ಕರಗತವಾಗದ ರಾಜಕೀಯ ರಂಗದಲ್ಲಿ ಪಾತ್ರವಹಿಸುವುದು ಯಾವಾಗಲೂ ಸೂಕ್ತವಲ್ಲ ಎಂಬುದು ನನ್ನ ಭಾವನೆಯಾಗಿತ್ತು. ಜೈಲಿಗೆ ಹೋಗಲಿಲ್ಲವಲ್ಲಾ ಎಂದು ನಾನು ಸಂಕಟಪಟ್ಟರೂ, ಆ ಸುಯೋಗವನ್ನು ಸರ್ಕಾರ ನನಗೆ ಒದಗಿಸುವುದಿಲ್ಲ ಎಂಬುದು

ಸ್ಪಷ್ಟವಾಗಿತ್ತು. ಏಕೆಂದರೆ, ನನ್ನನ್ನು ಗಡೀಪಾರು ಮಾಡುತ್ತಿದ್ದರೇ ಹೊರತು ಜೈಲಿಗೆ ಹಾಕುತ್ತಿರಲಿಲ್ಲ. ಗಡೀಪಾರು ಮಾಡಿದಲ್ಲಿ ಅದು ಅವಮಾನಕರವಾಗುತ್ತಿತ್ತು. ಹೀಗಾಗಿ, ನಾವು ಮಧ್ಯ ಪ್ರಾಂತದ ಗೊಂಡ್ ನಾಡಿನಲ್ಲಿ ಮೊದಲು ಆಲೋಚಿಸಿದ ಕೆಲಸ ಮಾಡಿಕೊಂಡು ಹೋಗಬೇಕೆಂಬ ತೀರ್ಮಾನಕ್ಕೆ ಬಂದೆವು.

ನನಗೆ ಬೇತುಲ್‌ನಲ್ಲಿ ಭೂಮಿ ಸಿಕ್ಕಲಿಲ್ಲ. ನನ್ನ ಸ್ನೇಹಿತರಲ್ಲಿ ಬಹುಮಂದಿ ಜೈಲಿನಲ್ಲಿದ್ದರು. ಈ ಕಾರಣ ನಾನು ನಾಗಪುರದ ಬಿಷಪ್ಪರ ಸಲಹೆ ಕೇಳಿದೆ. ನಾನಿನ್ನೂ ಇಂಗ್ಲೆಂಡ್ ಚರ್ಚಿನ ಸದಸ್ಯನಾಗಿ ಉಳಿದಿದ್ದೇನೆಂಬ ವಿಷಯವನ್ನು ಈ ಸಂದರ್ಭದಲ್ಲಿ ಮರೆಯಬಾರದು. ಬಿಷಪ್ಪರ ಹೆಸರು ವುಡ್ ಎಂದು. ಅವರು ಧೈರ್ಯಶಾಲಿ. ಗಿರಿಜನರು ಮತ್ತು ಬ್ರಿಟಿಷ್ ಸಾಮ್ರಾಜ್ಯ – ಇವೆರಡರ ಬಗ್ಗೆ ಒಂದೇ ತರಹ ವಿಶ್ವಾಸ ಇಟ್ಟಿದ್ದರು. ಅವರ ಜೀವನ ಚರಿತ್ರೆಯನ್ನು ಬರೆದವನು, 'ಅವರು ಅರಣ್ಯ ಇಲಾಖೆಯ ಅಧಿಕಾರಿಗಳೊಡನೆ ಸ್ನೇಹದಿಂದಿದ್ದರು' ಎಂದು ಹೇಳಿದ್ದಾನೆ. ಅವರು ಸರ್ಕಾರದ ಪ್ರೀತಿಯನ್ನೂ ಗಳಿಸಿದ್ದರು. ಇಂಡಿಯಾಕ್ಕೆ ಬಂದ ಮೂರು ವರ್ಷಗಳೊಡನೆ ಕೈಸರ್–ಇ–ಹಿಂದ್ ಎಂಬ ಮೆಡಲ್ ಪಡೆದಿದ್ದರು. ನಮ್ಮ ಸಂಗಡ ಮಾಡಿದ ವ್ಯವಹಾರದಲ್ಲಿಯೂ ಅವರು ಸರ್ಕಾರದ ನಂಬಿಕೆಗೆ ದ್ರೋಹಮಾಡದಂತೆ ನಡೆದುಕೊಂಡರು. ಮಾಂಡ್ಲಾ ಜಿಲ್ಲೆಯ ಕಾರಂಜಿಯಾ ಎಂಬ ಊರು ನಮ್ಮ ವಾಸಕ್ಕೆ ಸರಿಯಾದದ್ದೆಂದೂ, ಅಲ್ಲಿ ಈ ಹಿಂದೆ ಐದು ಜನ ಯುರೋಪಿಯನ್ನರು ತಂಗಲು ಪ್ರಯತ್ನಪಟ್ಟರೆಂದೂ, ಅದರಲ್ಲಿ ನಾಲ್ಕು ಜನ ಒಂದೇ ವರ್ಷದಲ್ಲಿ ಕಾಲವಾದರೆಂದೂ ತಿಳಿಸಿದರು. ನಮಗೂ ಅವರ ಸಲಹೆ ಚೆನ್ನಾಗಿ ಕಾಣಿಸಿತು.

೧೯೩೨ನೆಯ ಜನವರಿ ೨೮ನೆಯ ದಿನ, ನನ್ನ ಜೀವನದಲ್ಲಿ ಹೊಸ ಅಧ್ಯಾಯ ಆರಂಭವಾದ ಆ ದಿನ, ನಾನೂ ಶಾಮರಾವೂ ಎತ್ತಿನ ಗಾಡಿಯಲ್ಲಿ ೩೩ ಮೈಲಿ ದೂರದಲ್ಲಿದ್ದ ಊರಿಗೆ ಹೊರಟೆವು. ಕೈಯ್ಯಲ್ಲಿ ಹತ್ತಾರು ರೂಪಾಯಿ ಮಾತ್ರ ಇತ್ತು. ಕಾಡು ದಾಟಿ ಮೈಕಲ್ ಗುಡ್ಡಗಳಲ್ಲಿ ದಾರಿಸಾಗಿತು. ಎರಡು ದಿವಸಗಳ ಅನಂತರ ಕಾರಂಜಿಯಾ ಗ್ರಾಮ ಸಿಕ್ಕಿತು. ನಮ್ಮ ಸಾಮಾನು ಸರಂಜಾಮುಗಳು ಹಿಂದೆ ಬರುತ್ತಿದ್ದುವು. ಸುಸ್ತಾಗಿಬಿಟ್ಟಿದ್ದೆವು. ಹೊಟ್ಟೆ ತಾಳಹಾಕುತ್ತಿತ್ತು. ನಮ್ಮ ಹತ್ತಿರಕ್ಕೆ ಯಾರೂ ಬರಲೊಲ್ಲರು. ಕುಡಿಯಲು ಒಂದು ಪಾತ್ರೆ ನೀರೂ ನಮಗೆ ಸಿಕ್ಕಲಿಲ್ಲ. ಶಾಮರಾವ್ ಏನಾದರೂ ಮಾಡೋಣವೆಂದು ಹೋದರು. ನಾನು ದಾರಿಯ ಪಕ್ಕದಲ್ಲಿ ಕಾಯುತ್ತಾ ಕುಳಿತೆ. ಆಗ ನನಗಾದ ವ್ಯಥೆ ಅಷ್ಟಿಷ್ಟಲ್ಲ. ಅದು ಈಗಲೂ ನೆನಪಿದೆ. ನಾನು ತಪ್ಪುದಾರಿ ಹಿಡಿದೆ ಎಂಬ ಭೀತಿ ಉಂಟಾಯಿತು. ನನ್ನ ಮನಸ್ಸು ಆಕ್ಸ್‌ಫರ್ಡ್ ಕಡೆ ಹಾಯಿತು. ಅಲ್ಲಿ ನನಗೆ ಬೇಕಾದ ಸ್ನೇಹಿತರಿದ್ದರು. ಇಲ್ಲಿ ಯಾರಿದ್ದಾರೆ? ಆಕ್ಸ್‌ಫರ್ಡ್‌ನಲ್ಲಿ ಎಲ್ಲಾ ಸೌಲಭ್ಯಗಳೂ ಉಂಟು. ಇಲ್ಲಿ ಅದಾವುದೂ ಇರಲಿಕ್ಕೆ ಸಾಧ್ಯವಿಲ್ಲ. ಬೊಂಬಾಯಿ, ಪೂನಾ, ಸಬರ್ಮತಿ ಮತ್ತು ವಾರ್ಧಾಗಳಲ್ಲಿ ಗೊತ್ತಿದ್ದವರಾದರೂ ಇದ್ದಾರೆ. ಅವರೊಡನೆ ಕೆಲಸಮಾಡಿಕೊಂಡಿರಬಹುದು. ಆದರೆ

ಕಾಣದ ಈ ಪ್ರಾಂತಗಳಲ್ಲಿ, ಈ ಮಾಂಡ್ಲಾ ಜಿಲ್ಲೆಯಲ್ಲಿ ಮತ್ತು ಹೇಳಕೇಳದ ಈ ಪ್ರದೇಶದಲ್ಲಿ, ಹೆದರಿದ ಜನರಿರುವ ಈ ಮೂಲೆಯ ಹಳ್ಳಿಯಲ್ಲಿ ಏನಿದೆ? ಯಾರಿದ್ದಾರೆ? ಯಾರೂ ದಿಕ್ಕಿಲ್ಲವೆಂಬಂತಾಯಿತು. ಎಲ್ಲಕ್ಕಿಂತ ಹೆಚ್ಚಾಗಿ ನಾನು ಯಾವುದಕ್ಕೂ ಉಪಯೋಗವಿಲ್ಲದವನಾಗುತ್ತೇನೆ ಎಂಬ ಭಾವನೆಯೂ ಉಂಟಾಯಿತು. ಗಡೀಪಾರು ಆಗಿದ್ದರೇ ಚೆನ್ನಾಗಿತ್ತು ಎನಿಸಿತು. ಅದೃಷ್ಟದಿಂದ ಜೈಲಿಗೆ ಹಾಕಿದರಂತೂ ಇನ್ನೂ ಚೆನ್ನಾ ಎನಿಸಿತು. ಇಷ್ಟೆಲ್ಲಾ ಏತಕ್ಕೆ? ನಾನೇಕೆ ಬಿಟ್ಟುಬಂದೆ ಆಕ್ಸ್‌ಫರ್ಡ್ ಮತ್ತು ಲಂಡನ್ನಿನ ಆ ಸುಂದರ ಪುಸ್ತಕಗಳನ್ನು ಮತ್ತು ಪುಸ್ತಕ ಭಂಡಾರಗಳನ್ನು?

ಕಾರಂಜಿಯಾದಲ್ಲಿ ಒಂದು ವರ್ಷ ನೆಲೆಸಿದ ಮೇಲೂ ಇಂಗ್ಲೆಂಡಿನಿಂದ ಕಾಗದಗಳ ಮೇಲೆ ಕಾಗದಗಳು ಬರುತ್ತಿದ್ದವು. ಆ ಕಾಗದದಲ್ಲಿ ನಾನು ಇಂಗ್ಲೆಂಡಿಗೆ ಹಿಂದಿರುಗಿ ಏನಾದರೂ ಉತ್ತಮ ಕೆಲಸ ಮಾಡಬೇಕೆಂದೂ, ಮದುವೆಯಾಗ ಬೇಕೆಂದೂ, ಒಳ್ಳೆಯ ಆಹಾರ ತಿನ್ನಬೇಕೆಂದೂ, ವಿಧರ್ಮಿಗಳೊಡನೆ ಸೇರಿಕೊಳ್ಳುವುದು ಬೇಡವೆಂದೂ ಬರೆಯುತ್ತಿದ್ದರು.

ಆ ರಾತ್ರಿಯನ್ನು ನಾವು ಗಲೀಜು ಫಾರೆಸ್ಟ್ ಬಂಗಲೆಯ ಕಿರುಕೋಣೆಯಲ್ಲಿ ಚಳಿಯಿಂದ ನಡುಗುತ್ತಾ ಕಳೆದವು. ಮಾರನೆಯ ದಿನ ಹಳ್ಳಿಗೆ ಭೇಟಿಕೊಡಲು ಹೋದೆವು. ಕಾರಂಜಿಯಾ ಎಂಬ ಅಸಲಿ ಗ್ರಾಮಕ್ಕೆ ಹತ್ತು ಮಜರೆ ಗ್ರಾಮಗಳಿವೆ. ನಮಗೆ ಅತಿ ಸಮೀಪವಾಗಿದ್ದ ಮಜರೆ ಗ್ರಾಮದ ಹೆಸರು ಟಿಕೆರಾ ಟೋಲ ಎಂದು. ಇಲ್ಲಿ ಮೈ ಕೈ ಸವೆದುಹೋದ ಹೈದರ್ ಅಲಿ ಎಂಬ ಮುಸಲ್ಮಾನನೊಬ್ಬ ಸಿಕ್ಕಿದ. ಈತ ಗೊಂಡ್ ಜನಾಂಗದ ಹುಡುಗಿಯನ್ನು ಮದುವೆಯಾಗಿ ಆದಿವಾಸಿಗಳಂತೆ ಜೀವನ ನಡೆಸುತ್ತಿದ್ದ. ಈತ ತನ್ನ ಆಡುಗಳನ್ನು ಕೂಡುತ್ತಿದ್ದ ರೊಪ್ಪವನ್ನು ತಿಂಗಳಿಗೆ ಮೂರು ರೂಪಾಯಿ ಬಾಡಿಗೆಗೆ ಕೊಡಲು ಒಪ್ಪಿದ. ಅದರ ಹತ್ತಿರದ ಒಂದು ಪಡಸಾಲೆಯ ಮೇಲೆ ನಾವು ಅಡಿಗೆ ಮಾಡಿಕೊಳ್ಳಬಹುದೆಂದು ಹೇಳಿದ. ನಮಗೆ ಮಾತುಕೊಟ್ಟ ನಂತರ ಕೂಡಿದ ಆಡುಗಳನ್ನು ರೊಪ್ಪದಿಂದ ಓಡಿಸಿ, ಅದನ್ನು ಗುಡಿಸಿ ಹಸುವಿನ ಸಗಣಿಯಿಂದ ಸಾರಿಸಿಕೊಟ್ಟ. ನೆಲದ ಮೇಲೆ ಬೆಚ್ಚಗೆ ನೆಲ್ಲುಹುಲ್ಲು ಹಾಕಿಕೊಟ್ಟ. ಪಡಸಾಲೆಯ ಮೇಲೆ ಒಂದು ಒಲೆ ಹೂಡಿದರು. ಯಾರೋ ಸೌದೆ ನೀರು ತಂದರು. ಆ ದಿನ ಸಾಯಂಕಾಲ ನಾವು ನಮ್ಮ ಹೊಸಮನೆಗೆ ಹೋದೆವು.

ಆ ಗುಡಿಸಲಿನ ನೆಲದ ಮೇಲೆ ಮಲಗಿಕೊಂಡ ಮೇಲೆ ನನ್ನಲ್ಲಿ ಹುಟ್ಟಿದ್ದ ಸಂದೇಹ ಭೀತಿಗಳು ಮಾಯವಾದುವು. ಅವು ಮತ್ತೊಮ್ಮೆ ನನ್ನ ಬಳಿ ಬರಲೇ ಇಲ್ಲ. ಆ ಚಿಕ್ಕ ಆಡಿನ ರೊಪ್ಪದಲ್ಲಿ ಸಿಕ್ಕಿಕೊಂಡ ನಾನು ಗಿರಿಜನ ಪ್ರಪಂಚದಿಂದ ಎಂದೂ ತಪ್ಪಿಸಿಕೊಳ್ಳಲಾರೆ ಎಂಬುದು ಸ್ಪಷ್ಟವಾಯಿತು. ಒಳ್ಳೆಯದಕ್ಕೋ ಅಥವಾ ಕೆಟ್ಟದಕ್ಕೊ ನಾನು ಅದರಲ್ಲಿ ಸಿಕ್ಕಿಕೊಂಡಿದ್ದೆ. ಆದರೂ ಆ ವೇಳೆಯಲ್ಲಿ ಸುಂದರ ವಾದುದು, ರೋಮಾಂಚಕಾರಿಯಾದುದು ಅಥವಾ ಮನೋಹರವಾದುದು

ಯಾವುದೂ ಕಾಣಲಿಲ್ಲ. ಟಿಕೆರಾ ಟೋಲಾದ ಗೊಂಡ್ ಜನರು ಬಡವರು. ಹೊಲಸುತನ, ಅಂಜುಬುರುಕತನ ಹಾಗೂ ಅಸಹ್ಯವಾದ ಕಾಹಿಲೆ ಕಸಾಲೆಗಳಿಂದ ತೊಳಲುತ್ತಿದ್ದರು. ಆದರೂ ಅವರಲ್ಲಿ ಯಾವುದೋ 'ಹಿಡಿತಕ್ಕೆ ಸಿಕ್ಕದ ನಿಧಿ'ಯೊಂದು ಇದೆ ಎಂದು ನನಗೆ ಅನಿಸಿತು. ಅದನ್ನು ಹುಡುಕಬೇಕು, ನನ್ನ ಇಡೀ ಜೀವಮಾನವೆಲ್ಲಾ ಆ ಕೆಲಸ ಮಾಡಿದರೂ ಚಿಂತೆಯಿಲ್ಲ ಎಂದುಕೊಂಡೆ. ಮೊದಲಿಗೇನೋ ಅನ್ನಿಸಿತು, ಅದನ್ನು ಪತ್ತೆಹಚ್ಚಲು ಹೆಚ್ಚುಕಾಲ ಬೇಕಿಲ್ಲ ಎಂದು. ನಾನು ಮಾಂಡ್ಲಾ ಜಿಲ್ಲೆಯ ಡೆಪ್ಯೂಟಿ ಕಮೀಷನರಿಗೆ ಕಾಗದ ಬರೆದೆ. ಕೂಡಲೇ ಅದಕ್ಕೆ ವಿಚಿತ್ರವಾದ ಜಬಾವು ಬಂದಿತು : 'ಜನವರಿ ೨೯ನೆಯ ತಾರೀಕಿನ ನಿಮ್ಮ ಪತ್ರ ಬಂದಿದೆ. ನಿಮ್ಮ ರಾಜಕೀಯ ದಾಖಲೆಗಳ ಕಾರಣ ನೀವು ಈ ಜಿಲ್ಲೆಯಲ್ಲಿ ಬೇಕಾಗಿಲ್ಲ – ಇತಿ ನಿಮ್ಮವ, ಡಿ.ವಿ. ರಿಗೇ.'

ಈ ಪತ್ರದಂತೆ ನಮ್ಮ ದಸ್ತಗಿರಿ ಯಾವಾಗ ಎಂದರೆ ಆಗ ಆಗಬಹುದೆಂದು ಕೊಂಡೆವು. ವಾಸ್ತವವಾಗಿ ನಾವು ಒಬ್ಬ ಹುಡುಗನನ್ನು ಹತ್ತಿರದ ಗುಡ್ಡವೊಂದರ ಮೇಲೆ ಕಾವಲಿಟ್ಟೆವು, ಪೊಲೀಸರು ಬಂದರೆ ತಿಳಿಸು ಎಂದು. ಹಾಗೇನಾದರೂ ಅವರು ಬರುವುದಿದ್ದರೆ ತಪ್ಪಿಗೆ ಸಿಕ್ಕಿಹಾಕಿಕೊಳ್ಳುವಂತಹ ಕಾಗದಪತ್ರಗಳನ್ನು ನಾಶ ಮಾಡಬೇಕಾಗಿತ್ತು. ಆದರೆ ಹೆಚ್ಚೇನೂ ನಡೆಯಲಿಲ್ಲ. ಒಂದು ದಿನ ಪೊಲೀಸರು ಬಂದು ನಮ್ಮ ಗುಡಿಸಲಿನ ಮೇಲೆ ಧಾಳಿಮಾಡಿ, ನಮ್ಮ ಸಾಮಾನುಗಳನ್ನೆಲ್ಲ ಹುಡುಕಿದರು. ಜಿಲ್ಲೆಯ ಡೆಪ್ಯೂಟಿ ಕಮೀಷನರೇ ಬಂದರು. ಅವರು ಒಳ್ಳೆಯ ವರೆಂದೂ, ಅವರಿಗೆ ಕಾಂಗ್ರೆಸ್ ಚಳುವಳಿ ಬಗ್ಗೆ ಸಹಾನುಭುತಿ ಇದೆಯೆಂದೂ ತಿಳಿಯಿತು. ಆದರೆ ಮೇಲಿನವರ ಅಪ್ಪಣೆಯಂತೆ ಪತ್ರ ಬರೆಯಬೇಕಾಯಿತೆಂದೂ ಅವರು ತಿಳಿಸಿದರು. ಆಮೇಲೆ ಒಂದೆರಡು ಸಲ ಪೋಲೀಸರು ಬಂದು ಶೋಧನೆ ನಡೆಸಿ ಕೆಲವು ಪುಸ್ತಕಗಳನ್ನು ತೆಗೆದುಕೊಂಡು ಹೋದರು. ಆದರೆ ನನಗೆ ತುಂಬಾ ಬೇಕಾಗಿದ್ದ ಪುಸ್ತಕಗಳ ತಂಟೆಗೆ ಹೋಗಲಿಲ್ಲ.

ಇದೆಲ್ಲಾ ಆದದ್ದು ಒಂದು ರೀತಿಯಲ್ಲಿ ಒಳ್ಳೆಯದೇ ಆಯಿತು. ಹಳ್ಳಿಯವರು ನಮ್ಮ ಬಗ್ಗೆ ಒಳ್ಳೆ ಅಭಿಪ್ರಾಯ ಪಡೆದರು. ಅವರಂತೆ ನಾವೂ ಪೊಲೀಸರ ಕೀಟಲೆಗೆ ಒಳಗಾಗಿರುವುದು ಅವರಿಗೆ ಅರ್ಥವಾಗಿ, ನಮ್ಮ ಬಗ್ಗೆ ಸಹಾನುಭೂತಿ ತೋರಿದರು. ಕಾರಂಜಿಯಾದಲ್ಲಿ ಮನೆಮಾಡಿದ ಮೇಲೆ ವಾರ್ಧಾಕ್ಕೆ ಹೋಗಿ ನನ್ನ ಸಾಮಾನುಗಳನ್ನು ತೆಗೆದುಕೊಂಡು ಬಂದೆ. ಆ ಸಾಮಾನುಗಳಲ್ಲಿ ಪಶ್ಚಿಮ ಆಫ್ರಿಕಾಕ್ಕೆ ಎಷ್ಟೋ ಸಲ ಹೋಗಿಬಂದಿದ್ದ ಚರ್ಮದ ಪೆಟ್ಟಿಗೆಯೊಂದಿತ್ತು. ಆ ಪೆಟ್ಟಿಗೆಗೆ ಈ ಸಾಹಸ ಹೊಸದಾಗಿ ಕಾಣಲಿಲ್ಲವೆಂದು ಕಾಣುತ್ತದೆ.

ರೈಲಿನಲ್ಲಿ ಹಿಂದಿರುಗುವಾಗ ಬಿಲಾಸಪುರದಲ್ಲಿ ಕಲ್ಕತ್ತಾ ಮೇಲ್ ಗಾಡಿ ಏಕೋ ನಿಂತಿತು. ಮೂರನೆಯ ತರಗತಿಯಲ್ಲಿ ಪ್ರಯಾಣಮಾಡುತ್ತಿದ್ದ ಕೆಂಪುಮೋರೆಯ ನನ್ನನ್ನು ನೋಡಿ ಪೊಲೀಸರಿಗೆ ಅನುಮಾನವಾಯಿತೆಂದು ಕಾಣುತ್ತದೆ. ನನ್ನನ್ನೂ

ನನ್ನ ಸಾಮಾನನ್ನೂ ಶೋಧಿಸಿದರು. ನನ್ನಲ್ಲಿ ಯಾವುದಾದರೂ ರಾಜದ್ರೋಹದ ಸಾಹಿತ್ಯವಿದೆಯೇ ಎಂದು ಕೇಳಿದರು. ನಾನು ಇದೆ ಎಂದು ಹೇಳಿ ಬೈಬಲ್ ತೆಗೆದು ತೋರಿಸಿದೆ. ಭಾರಿ ಅಲ್ಲೋಲ ಕಲ್ಲೋಲಮಾಡುವಂಥ ಪುಸ್ತಕ ಬೈಬಲ್; ಅದನ್ನು ಎಚ್ಚರಿಕೆಯಿಂದ ಓದಿದರೆ ಕ್ರಾಂತಿ ತಪ್ಪದು ಎಂದು ಪೊಲೀಸರಿಗೆ ಹೇಳಿದೆ.

ನಾನು ಕಾರಂಜಿಯದಲ್ಲಿ ನೆಲೆಸಿದ ಮೊದಲ ತಿಂಗಳುಗಳಲ್ಲಿ ಒಂದು ಪುಸ್ತಕ ಬರೆದೆ. ಅದರ ಹೆಸರು Truth about India' (ಇಂಡಿಯಾ ಬಗ್ಗೆ ಸತ್ಯ ಸಂಗತಿ) ಎಂದು. ನನ್ನ ಬಳಿ ಟೈಪ್‌ರೈಟರ್ ಇತ್ತು. ಗುಡಿಸಲಿನ ನೆಲದ ಮೇಲೆ ಕುಳಿತು ಇಡೀ ಪುಸ್ತಕವನ್ನೆಲ್ಲಾ ಟೈಪುಮಾಡಿದೆ.

೧೯೩೭ನೆಯ ಇಸವಿಯಲ್ಲಿ ಇಂಗ್ಲೆಂಡಿಗೆ ಹೋಗಿರಬೇಕೆಂದು ತೀರ್ಮಾನಿಸಿದೆ. ಹಾಗೆ ಮಾಡಿದ್ದು ಸರಿಯಲ್ಲ ಎಂದು ಆಮೇಲೆ ಅರ್ಥವಾಯಿತು. ಇಂಡಿಯಾದ ಪರಿಸ್ಥಿತಿಯನ್ನು ಅಲ್ಲಿಯ ಜನರಿಗೆ ತಿಳಿಸುವುದಕ್ಕೂ ನನ್ನ ತಾಯನ್ನು ನೋಡುವುದಕ್ಕೂ ಇಂಗ್ಲೆಂಡಿಗೆ ಹೊರಟೆ. ನಾನೂ ಶಾಮರಾವೂ ಬೊಂಬಾಯಿಗೆ ಹೋದೆವು. ಆದರೆ ನನ್ನ ಪಾಸ್‌ಪೋರ್ಟ್ ವಾಯಿದೆ ಮುಗಿಯುತ್ತಾ ಬಂದಿತ್ತು. ಕೇವಲ ಮೂರು ವಾರಗಳು ಮಾತ್ರ ಇತ್ತು. ಅದನ್ನು ಮುಂದುವರಿಸಲು ಬೊಂಬಾಯಿ ಸರ್ಕಾರ ಒಪ್ಪಲಿಲ್ಲ. ಮೂರು ವಾರಗಳಲ್ಲಿ ಇಂಗ್ಲೆಂಡಿಗೆ ಹೋಗುವುದು ಮಾತ್ರ ಸಾಧ್ಯವಿತ್ತು. ಬರುವುದು ಸಾಧ್ಯವಿರಲಿಲ್ಲ. ಆದ್ದರಿಂದ ಇಂಗ್ಲೆಂಡಿಗೆ ಹೋಗುವ ಆಲೋಚನೆ ಬಿಟ್ಟುಬಿಟ್ಟೆ. ಆದರೆ ಇದು ಬೊಂಬಾಯಿ ಕ್ರಾನಿಕಲ್ ಪತ್ರಿಕೆಗೆ ಗೊತ್ತಾಗಿ, ಅದು ಸರ್ಕಾರವನ್ನು ಆಕ್ಷೇಪಿಸಿ ಸಂಪಾದಕೀಯ ಲೇಖನ ಬರೆಯಿತು. ಇದನ್ನು ನೋಡಿದ ಸರ್ಕಾರ ನನ್ನ ಪಾಸ್‌ಪೋರ್ಟನ್ನು ಐದು ವರ್ಷಗಳ ಕಾಲ ಮುಂದುವರಿಸಿತು. ಶಾಮರಾವ್ ತಿರುಪತ್ತೂರ್ ಆಶ್ರಮಕ್ಕೆ ವೈದ್ಯಕೀಯ ಶಿಕ್ಷಣಕ್ಕೆ ಹೊರಟರು. ನಾನು ಅವರಿಂದ ಬೀಳ್ಕೊಂಡು ಇಂಗ್ಲೆಂಡಿಗೆ ಹೊರಟೆ.

ಮಾರ್ಗದಲ್ಲಿ ಇಟಲಿ, ಸ್ವಿಟ್ಜರ್‌ಲ್ಯಾಂಡ್ ಮತ್ತು ಫ್ರ್ಯಾನ್ಸ್ ದೇಶಗಳ ಮೂಲಕ ಹೋದೆ. ಅಲ್ಲಿ ಇಂಡಿಯಾದ ಪರವಾಗಿದ್ದ ವ್ಯಕ್ತಿಗಳೊಡನೆ ವಿಚಾರವಿನಿಮಯ ಮಾಡಿದೆ. ಹಿಂದಿರುಗಿ ಬರುವಾಗ ರೊಮೈನ್ ರೊಲಾಂಡ್ ಮತ್ತು ಅವರ ಸೋದರಿಯನ್ನು ಭೇಟಿಮಾಡಿದೆ. ನಾನು ಲಂಡನ್ ಮುಟ್ಟಿದಾಗ ವಿಕ್ಟೋರಿಯ ಸ್ಟೇಷನ್ನಿನಲ್ಲಿ ನನಗೆ ದೊಡ್ಡ ಸ್ವಾಗತ ದೊರೆಯಿತು. ಸಾರ್ವಜನಿಕ ಸಭೆಯೊಂದರಲ್ಲಿ ಭಾಷಣ ಮಾಡಿದೆ. ಈ ಸಭೆಯ ಅಧ್ಯಕ್ಷತೆಯನ್ನು ಜಾರ್ಜ್ ಲಾನ್ಸ್‌ಬರಿಯವರು ವಹಿಸಿದ್ದರು. 'ಭಾರತಕ್ಕೆ ಸ್ವಯಂ ಆಡಳಿತಕೊಟ್ಟುಬಿಡುವುದೊಳ್ಳೆಯದು. ಹಾಗೆ ಮಾಡಲು ಆಗದಿದ್ದರೆ ಅವರ ಮೇಲೆ ನ್ಯಾಯವಾದ ರೀತಿಯಲ್ಲಿ ಯುದ್ಧ ಮಾಡಬೇಕು. ಮಹಾತ್ಮಾಗಾಂಧಿಯವರ ಗೌರವಯುತ ಕೇಳಿಕೆಯನ್ನು ಇಂಗ್ಲೆಂಡ್ ಒಪ್ಪಿ ಕೊಳ್ಳುವುದೆಂದು ನಾನು ಆಶಿಸುತ್ತೇನೆ. ಹಾಗೆ ಮಾಡಿದಲ್ಲಿ ಪಶುಬಲವೊಂದೇ ಬಲವಲ್ಲ, ಕ್ರೈಸ್ತನು ಬೋಧಿಸಿದ ತತ್ವವನ್ನು ಜನಾಂಗಗಳು ತಮ್ಮ ವ್ಯವಹಾರದಲ್ಲಿ

ಇನ್ನೂ ಅನುಸರಿಸುತ್ತಿವೆ ಎಂಬುದನ್ನು ತೋರಿಸಿಕೊಟ್ಟಂತಾಗುವುದು' ಎಂದು ಭಾಷಣ ಮಾಡಿದೆ.

ಇದೇ ಧಾಟಿಯಲ್ಲಿ ಮತ್ತೊಂದು ಭಾಷಣ ಮಾಡಿದೆ. ಆ ಸಭೆಯ ಅಧ್ಯಕ್ಷತೆಯನ್ನೂ ಸಿ.ಎಫ್. ಅಂಡ್ರೂಸರು ವಹಿಸಿದ್ದರು. ಗಾಂಧೀಜಿಯ ದಸ್ತಗಿರಿಯನ್ನು ಕುರಿತು ಈ ರೀತಿ ಹೇಳಿದೆ 'ಮಹಾತ್ಮನೂ ಪೋಲೀಸ್ ಕಮೀಷನರೂ ಎದುರು ಬದುರಿಗೆ ನಿಂತಾಗ ಮಹಾತ್ಮನ ಬರಿಗೈ ಕಮೀಷನರ ಕೈಗಿಂತ ಹೆಚ್ಚು ಶಕ್ತಿಯುತವಾಗಿತ್ತು ಎಂಬುದರಲ್ಲಿ ಯಾವ ಅನುಮಾನವೂ ಇರಲಿಲ್ಲ. ಇಂಡಿಯಾವನ್ನು ಇಂಗ್ಲೆಂಡ್ ತನ್ನ ಚಕ್ರಾಧಿಪತ್ಯದಿಂದ ಬಿಟ್ಟುಕೊಟ್ಟರೆ ಅಧೀನ ಜನಾಂಗವೊಂದರ ಬಗ್ಗೆ ವರ್ತಿಸುವಾಗ ಗೌರವಯುತವಾಗಿ ವರ್ತಿಸಿದೆವೆಂಬ ಕೀರ್ತಿ ಇಂಗ್ಲೆಂಡಿಗೆ ಬರುತ್ತದೆ.'

ನಾನು ಇನ್ನು ಹಲವಾರು ಸಭೆಗಳಲ್ಲಿ ಭಾಷಣ ಮಾಡಿದೆ. ಸರ್ಕಾರದ ವಕ್ತಾರರನ್ನು ಕಂಡು ಮಾತಾಡಿದೆ. ಅವರಲ್ಲಿ ಲಾರ್ಡ್ ಇರ್ವಿನರೂ ಒಬ್ಬರು. ಲಾರ್ಡ್ ಛಾನ್ಸಲರ್ ಆಗಿದ್ದ ಲಾರ್ಡ್ ಸ್ಯಾಂಕಿಯವರನ್ನು ಭೇಟಿಮಾಡಿದೆ. ಆಗ ಸೆಕ್ರೆಟರಿ ಆಫ್ ಸ್ಟೇಟ್ ಆಗಿದ್ದ ಸ್ಯಾಮುವೆಲ್ ಹೋರರು ನನ್ನನ್ನು ನೋಡಲು ನಿರಾಕರಿಸಿದರು. ನನ್ನ ಬಗ್ಗೆ ತುಂಬಾ ತುಚ್ಛಭಾವನೆಯನ್ನು ಹೊಂದಿದ್ದಾರೆಂದು ಲಾರ್ಡ್ ಇರ್ವಿನರಿಂದ ತಿಳಿಯಿತು.

ನನ್ನ ಪಾಸ್‌ಪೋರ್ಟು ವಾಯಿದೆ ಹೆಚ್ಚಿಸಲು ಅರ್ಜಿ ಹಾಕಿದೆ. ಆದರೆ ಅದನ್ನು ತಿರಸ್ಕರಿಸಿದರು. ಯಾರ್‍ಯಾರ ಮೂಲಕ ಹೇಳಿಸಿದರೂ ನನ್ನ ಕೋರಿಕೆ ಈಡೇರಲಿಲ್ಲ. ಇಂಡಿಯಾಕ್ಕೆ ಹಿಂದಿರುಗಲು ಅವಕಾಶ ಕೊಡುವುದಿಲ್ಲ ಎಂದರು ಸೆಕ್ರೆಟರಿ ಆಫ್ ಸ್ಟೇಟ್. ನನ್ನಂಥವನಿಗೇ ಇಷ್ಟು ಕಷ್ಟವಾದರೆ ಈ ಇಂಗ್ಲಿಷ್ ಸಾಮ್ರಾಜ್ಯಾಧಿಪತಿಗಳಿಂದ ಬೇರೆಯವರಿಗೆ ಇನ್ನೆಷ್ಟು ಕಷ್ಟವಾದೀತು ಎಂಬುದು ಅರ್ಥವಾಯಿತು. ಆದರೂ ಕೆಲವು ಸ್ನೇಹಿತರು ಸರ್ಕಾರವನ್ನು ಒತ್ತಾಯಮಾಡಿ ನಾನು ಇಂಡಿಯಾಕ್ಕೆ ಹಿಂದಿರುಗುವುದಕ್ಕೆ ಅನುಮತಿ ಕೊಡಿಸಿದರು. ಆದರೆ ಕೆಲವು ಶರತ್ತುಗಳನ್ನು ಹಾಕಿದರು. ಅವು ಯಾವುವೆಂದರೆ : 'ನಾನು ಗೊಂಡ್ ಜನರ ಮಧ್ಯೆ ಇದ್ದುಕೊಂಡು ಕೆಲಸಮಾಡಬೇಕೇ ಹೊರತು, ಯಾವ ರಾಜಕೀಯದಲ್ಲಿಯೂ ಭಾಗವಹಿಸಕೂಡದು; ಮತ್ತು ಸರ್ಕಾರದ ವಿರುದ್ಧ ಯಾವ ಲೇಖನ ಮುಂತಾದುವನ್ನು ಬರೆಯಕೂಡದು. ಇದನ್ನು ಅಕ್ಷರಶಃ ಪಾಲಿಸಬೇಕು'.

ಇಂಥ ಶರತ್ತಿಗೆ ಒಪ್ಪಬಾರದೆಂದು ಆಂಡ್ರೂಸರು ಹೇಳಿದರು. ಆದರೆ ಕೃಷ್ಣ ಮೆನನ್ ಅವರು ಹೇಳಿದ ಮೇಲೆ ಒಪ್ಪಿ ರುಜುಮಾಡಿದೆ. ಹೀಗೆ ಮಾಡಿದ್ದು ಸರಿ ಎಂದು ಗಾಂಧೀಜಿ ಮತ್ತು ಜಮ್ನಾಲಾಲ್ ಬಜಾಜರು ಅನಂತರ ಹೇಳಿದರು. ಏಕೆಂದರೆ, ಹಾಗೆ ಮಾಡದಿದ್ದರೆ ಗಿರಿಜನರ ಬಗ್ಗೆ ನನ್ನ ಕೆಲಸ ಅಲ್ಲಿಗೇ ನಿಲ್ಲುತ್ತಿತ್ತು. ಈ ಶರತ್ತಿನ ಕಾರಣವಾಗಿ ನಾನು ರಾಜಕೀಯದಿಂದ ಬೇರೆಯಾದೆ. ಸರ್ ಫ್ರಾನ್ಸಿಸ್ ಯಂಗ್ ಹಸ್‌ಬ್ಯಾಂಡರು ಹೇಳಿದಂತೆ ಸರ್ ಸಾಮ್ಯುಯೆಲ್ ಹೋರ್ ಒಳ್ಳೆಯದನ್ನೇ

ಮಾಡಿದರು. ಏಕೆಂದರೆ, ನಾನು ರಾಜಕೀಯದಿಂದ ಕವಿತೆಯ ಕಡೆಗೆ ತಿರುಗಿದ್ದು ಅವರಿಂದಲೇ.

ರ್‍ಯಾಂಸೆ ಮ್ಯಾಕ್ಡೊನಾಲ್ಡರು ೧೯೩೨ರಲ್ಲಿ ಒಂದು ತೀರ್ಮಾನ (Award) ಕೊಟ್ಟರು. ಅದರ ಪ್ರಕಾರ ಅಸ್ಪೃಶ್ಯರು ಹಿಂದೂಗಳಿಂದ ಬೇರೆ ಎಂದಾಯಿತು. ಇದು ಗಾಂಧೀಜಿಗೆ ಒಪ್ಪಿಗೆಯಾಗಲಿಲ್ಲ. ಉಪವಾಸ ಮಾಡಬೇಕೆಂದು ತೀರ್ಮಾನಿಸಿದರು. ಆದರೆ ಉಪವಾಸ ಆರಂಭಿಸಿದ ಆರು ದಿನಗಳೊಳಗೆ ಅಸ್ಪೃಶ್ಯರು ಮತ್ತು ಇತರ ಮುಂದಾಳುಗಳು ಸೇರಿ ಅದನ್ನು ನಿಲ್ಲಿಸಿದರು. ಆಗ ಮತ್ತು ಮತ್ತೊಮ್ಮೆ ಉಪವಾಸ ಮಾಡಿದಾಗ ಗಾಂಧೀಜಿ ನನಗೆ ಆತ್ಮೀಯವಾದ ಮೂರು ಕಾಗದಗಳನ್ನು ಬರೆದರು. ಅದರಲ್ಲಿ ಒಂದು ಕಾಗದ ಹೀಗಿತ್ತು : 'ನನ್ನ ಪ್ರೀತಿಯ ವೆರಿಯರ್, ನನ್ನನ್ನು ಕೇವಲ ನೋಡುವುದಕ್ಕಾಗಿಯೇ ನೀನು ಬರಬೇಕಾಗಿಲ್ಲ. 'ನೀನು ಬಾ' ಎಂದು ಮನಸ್ಸೇನೋ ಕರೆಯುತ್ತಿದೆ. ಆದರೆ ಅದನ್ನು ತಡೆಯುತ್ತಿದ್ದೇನೆ. ನೀನೇನು ಕೆಲಸ ಮಾಡಬೇಕೆಂಬುದು ಈಗ ನಿರ್ಧಾರವಾಗಿದೆ. ಆ ಕೆಲಸದಲ್ಲಿ ನಿನಗೆ ಅಡ್ಡಿಯಾಗಬಾರದು. ನೀವೆಲ್ಲಾ ಚೆನ್ನಾಗಿದ್ದೀರೆಂದು ಕೇಳಿ ನನಗೆ ಸಂತೋಷವಾಗಿದೆ. ತಾಯಿಗೆ, ಎಲ್ಡಿತ್ತಳಿಗೆ ಮತ್ತು ಇಟಾಲಿಯನ್ ಸಹೋದರಿಯರಿಗೆ ನೀನು ಕಾಗದ ಬರೆದಾಗ ನನ್ನ ಪ್ರೀತಿಯನ್ನು ಕಳುಹಿಸಿಕೊಡು. ನಾನು ಸೊಗಸಾಗಿದ್ದೇನೆ – ಪ್ರೀತಿಯ ಬಾಪು.'

ನನಗೆ ಬಾಪು ಇನ್ನೂ ಅನೇಕ ಕಾಗದಗಳನ್ನು ಬರೆದರು. ಅವುಗಳಲ್ಲಿ ಬಹುಭಾಗ ಅವರೇ ಬರೆದವುಗಳು. ೧೯೩೬ನೆಯ ಜುಲೈನಲ್ಲಿ ನೂಲುವ ಬಗ್ಗೆ ಒಂದು ಕಾಗದ ಬರೆದರು. ಅದರಲ್ಲಿ ನಂಬಿಕೆ ಇಲ್ಲದಿದ್ದರೆ ನೂಲುವುದು ಬೇಡ ಎಂದು ತಿಳಿಸಿದರು. ಇಡೀ ಇಂಡಿಯಾ ಜನಾಂಗವೇ ಅದನ್ನು ಒಪ್ಪದಿದ್ದರೂ ತಾವು ಮಾತ್ರ ನೂಲುವುದು ಮತ್ತು ಅಸ್ಪೃಶ್ಯತಾ ನಿವಾರಣೆಯ ಕೆಲಸ ಮಾಡುವುದನ್ನು ಬಿಡುವುದಿಲ್ಲ; ಅವು ಇಲ್ಲದೆ ಅಹಿಂಸೆಯನ್ನು ಸ್ಥಾಪಿಸುವುದಕ್ಕೆ ಅಥವಾ ಸತ್ಯವನ್ನು ಪ್ರತಿಪಾದಿಸುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದರು.

ಬಾಪು ಯಾರೊಡನೆಯೋ ನಾನು 'ನರಮ್' ಎಂದು ಹೇಳಿದರಂತೆ. ಹಾಗೆಂದರೇನು ಎಂದು ಕೇಳಿದೆ ಅವರನ್ನು. ಅವರು ಅದಕ್ಕೆ ಉತ್ತರವಾಗಿ, ಯಾವ ಸಂದರ್ಭದಲ್ಲಿ ತಾವು ಅದನ್ನು ಹೇಳಿದರೋ ತಿಳಿಯದು, ನರಮ್ ಎಂದರೆ ಮೆತ್ತನೆ ಮನುಷ್ಯ ಎಂದು ಅರ್ಥ, ಅರ್ಥ ಏನೇ ಇರಲಿ ಸತ್ಯಕ್ಕಾಗಿ ಎಂಥಾ ತ್ಯಾಗವನ್ನಾದರೂ ಮಾಡಲು ಸಿದ್ಧನಾದಂಥ ವ್ಯಕ್ತಿ ನಾನು ಎಂದು ತಿಳಿಸಿದರು.

೧೯೩೭ರಲ್ಲಿ ಮತ್ತೊಮ್ಮೆ ಬಾಪುವಿಗೆ ಒಂದು ಪತ್ರ ಬರೆದೆ. ಅದರಲ್ಲಿ ನನ್ನ ನಿರಾಶೆಯನ್ನು ತೋಡಿಕೊಂಡಿದ್ದೆ. ಅದಕ್ಕೆ ಉತ್ತರವಾಗಿ ಈ ರೀತಿ ಪತ್ರ ಬರೆದು ನನ್ನನ್ನು ಎಚ್ಚರಿಸಿದರು. : 'ದೊಡ್ಡ ಸೇವೆಗಾಗಿ ದೇವರು ನಿನ್ನನ್ನು ಉಳಿಸಿದ್ದಾನೆ.

ನಿರಾಶನಾಗಬೇಡ. ನಿರಾಶೆಯೆಂಬುದು ಮನುಷ್ಯನ ನಂಬಿಕೆಯ ಅಭಾವ. ನಿನಗೆಷ್ಟು ತೊಂದರೆ ಕೊಟ್ಟರೆಂದು ನನಗೆ ಗೊತ್ತು. ಆದರೆ ಅದೇ ನಿನಗೆ ಶಕ್ತಿ ಕೊಡುವುದು. ಹಿಮಾಲಯದಂತೆ ನಿನ್ನ ನಂಬಿಕೆ ಅಚಲವಾಗಿರಬೇಕು. ಹಿಮಾಲಯ ಕರಗುತ್ತದೆ. ಆದರೆ ನಿನ್ನ ನಂಬಿಕೆ ಕರಗಬಾರದು. ಖಂಡಿತ ಅದಕ್ಕೆ ಅವಕಾಶ ಕೊಡಬೇಡ. ಮನಸ್ಸಿಗೆ ಹರ್ಷ ತಂದುಕೊ. ಸುಮ್ಮನೆ ಗೋಳಾಡಬೇಡ. ಶಾಮರಾವ್‌ಗೆ ಗಾಡಿಗಟ್ಲೆ ಪ್ರೀತಿ ವಿಶ್ವಾಸಗಳು.'

೧೯೪೦ನೆಯ ದಶಕದಲ್ಲಿ ನನಗೂ ಗಾಂಧೀಜಿಗೂ ಸಂಪರ್ಕ ಕಡಮೆ ಯಾಯಿತು. ಅವರ ಅನುಯಾಯಿಗಳಾಗಿದ್ದ ನನ್ನ ಆತ್ಮೀಯ ಸ್ನೇಹಿತರಾದ ಮಹದೇವ ದೇಸಾಯಿ ಮತ್ತು ಜಮ್ನಾಲಾಲ್ ಬಜಾಜ್ ತೀರಿಕೊಂಡರು. ಪ್ಯಾರೆಲಾಲರನ್ನು ಬಿಟ್ಟರೆ ಉಳಿದವರಿಗೆ ನನ್ನ ಬಗ್ಗೆ ಅಷ್ಟೊಂದು ವಿಶ್ವಾಸವಿರಲಿಲ್ಲ. ಗಾಂಧೀಜಿ ಬಗ್ಗೆ ನನ್ನ ಪ್ರೀತಿ ಕಡಮೆಯಾಗಲಿಲ್ಲ. ಆದರೆ ನಮ್ಮಿಬ್ಬರ ಮಧ್ಯೆ ಇದ್ದ ಭಿನ್ನಾಭಿಪ್ರಾಯಗಳು ಅವರಿಂದ ನಾನು ದೂರವಿರುವಂತೆ ಮಾಡಿದವು. ಖಾದಿ ಕಾರ್ಯಕ್ರಮ ಗಿರಿಜನರಿಗೆ ಸರಿಹೋಗುವುದಿಲ್ಲ ಎಂದು ನಮಗೆ ಅರ್ಥವಾದಾಗ ನನಗೆ ಹೇಗೋ ಆಯಿತು. ನಾನು ಮೊದಲಿನಿಂದಲೂ ಕೈಮಗ್ಗದ ಬಗ್ಗೆ ಅಭಿಮಾನ ಹೊಂದಿದ್ದವನು. ಆದರೆ ನೂಲುವುದು ಬಡವರಿಗೆ, ಅದರಲ್ಲಿಯೂ ಹತ್ತಿ ಬೆಳೆಯುವ ಕಡೆ ಕೃತಕ ಹಾಗೂ ಆರ್ಥಿಕ ದೃಷ್ಟಿಯಿಂದ ಸರಿಯಲ್ಲ ಎನಿಸಿತು.

ಪಾನನಿರೋಧದ ಬಗ್ಗೆ ಗಾಂಧೀಜಿಯ ಖಂಡತುಂಡ ಅಭಿಪ್ರಾಯ ನನಗೆ ಹಿಡಿಸಲಿಲ್ಲ. ಅದರಿಂದ ಆದಿವಾಸಿಗಳಿಗೆ ನಷ್ಟವೆಂದೇ ನನ್ನ ಅಭಿಪ್ರಾಯ. ಸ್ತ್ರೀಪುರುಷರ ಸಂಬಂಧದ ಬಗ್ಗೆ ಅವರ ಅಭಿಪ್ರಾಯ, ಅದರಲ್ಲಿಯೂ ಅವರ ಅನುಯಾಯಿಗಳು ಮಾಡುತ್ತಿದ್ದ ಉತ್ಪ್ರೇಕ್ಷೆ, ನನಗೆ ಹಿಡಿಸಲಿಲ್ಲ. ಅದು ಎಲ್ಲರಿಗೂ ನಷ್ಟವೆಂದೇ ನನ್ನ ಭಾವನೆ. ಆಹಾರದ ಬಗ್ಗೆ ಅವರ ವಿಚಿತ್ರ ವಾದ ನನಗೆ ಎಂದೂ ಹಿಡಿಸಲಿಲ್ಲ.

ಇವೆಲ್ಲಾ ನನಗೂ ಅವರಿಗೂ ಅಂತರವನ್ನು ಹೆಚ್ಚುಮಾಡಿದವು. ಅದಕ್ಕಾಗಿ ನಾನು ಇಂದು ವ್ಯಸನಪಡುತ್ತಿದ್ದೇನೆ. ಗಾಂಧೀಜಿ ತಮ್ಮ ಕೊನೆಗಾಲದಲ್ಲಿ ಔನ್ನತ್ಯದ ಶಿಖರವನ್ನೇರಿದರು. ಅಂಥಾ ವೇಳೆ ನಾನು ಅವರ ಪ್ರೀತಿಗೆ ಪಾತ್ರನಾಗಲಿಲ್ಲವಲ್ಲಾ ಎಂದು ಮತ್ತು ನನ್ನ ಕಷ್ಟಕಾಲದಲ್ಲಿ ಅವರ ಆಶೀರ್ವಾದ ಪಡೆಯಲಿಲ್ಲವಲ್ಲಾ ಎಂದು ನನಗೆ ವ್ಯಸನವಾಗುತ್ತಿದೆ. ಆದರೆ ಸತ್ಯದ ಬಗ್ಗೆ ನನಗಿದ್ದ ಭಾವನೆಯೇ ನಾನು ಅವರ ಬಳಿಗೆ ಹೋಗದಂತೆ ತಡೆಯಿತು. ಈ ದೃಷ್ಟಿಯಿಂದ ನನ್ನ ವರ್ತನೆ ಸರಿ.

೪. ಬಿಷಪ್ಪರೂ ಬಂದೂಕಗಳೂ

ಮುಂದಿನ ಕೆಲವು ವರ್ಷಗಳಲ್ಲಿ ನಾನು ನಿಧಾನವಾಗಿ, ಆದರೂ ಅನಿವಾರ್ಯವಾಗಿ, ಚರ್ಚಿನಿಂದ ದೂರವಾಗುತ್ತ ಧಾರ್ಮಿಕ ಹಾಗೂ ಬೌದ್ಧಿಕ ಸ್ವಾತಂತ್ರ್ಯ ಜೀವನದ ಕಡೆ ಸಾಗಿದೆ. ಇದು ಮನಸ್ಸಿಗೆ ವ್ಯಥೆಯನ್ನುಂಟುಮಾಡಿದ್ದಲ್ಲದೆ ಕಷ್ಟಕರವೂ ಆಗಿತ್ತು. ಮೊದಲಿಗೆ ಕ್ರೈಸ್ತಮತದ ಬಗ್ಗೆ ತುಂಬಾ ಭಕ್ತಿಯನ್ನಿಟ್ಟಿದ್ದೆ. ಇನ್ನೊಬ್ಬರಿಗೆ ನೋವುಂಟುಮಾಡುವುದು ನನಗೆ ಯಾವಾಗಲೂ ಇಷ್ಟವಿರಲಿಲ್ಲ. ದುರದೃಷ್ಟವಶಾತ್ ನಾನು ಸಿಕ್ಕಿಹಾಕಿಕೊಂಡ ವಾದವಿವಾದದಿಂದ ನನ್ನ ಮನೆಯವರಿಗೂ ಮತ್ತು ಹಳೆಯ ಸ್ನೇಹಿತರಿಗೂ ವ್ಯಥೆಯನ್ನುಂಟುಮಾಡಬೇಕಾಯಿತು.

ನನಗೂ ಚರ್ಚಿಗೂ ಎರಡು ಮುಖ್ಯ ವಿಚಾರಗಳಲ್ಲಿ ಭಿನ್ನಾಭಿಪ್ರಾಯ ತಲೆದೋರಿತು. ರಾಜಕೀಯದಲ್ಲಿ ಕ್ರೈಸ್ತರ ಪಾತ್ರ ಏನು ಎಂಬುದು ಒಂದು; ಕ್ರೈಸ್ತರಲ್ಲದವರ ಬಗ್ಗೆ ಕ್ರೈಸ್ತರ ಭಾವನೆ ಏನು ಎಂಬುದು ಇನ್ನೊಂದು. ಕ್ರೈಸ್ತರಿಗೂ ರಾಜಕೀಯಕ್ಕೂ ಏನು ಸಂಬಂಧವಿಲ್ಲವೆಂಬ ವಾದವನ್ನು ನಾನು ಒಪ್ಪುತ್ತಿರಲಿಲ್ಲ. ಗಾಂಧೀಜಿ ಹೇಳುತ್ತಿದ್ದಂತೆ ನಾನೂ ಹೇಳುತ್ತಿದ್ದೆ : ಮತವು ರಾಜಕೀಯದಲ್ಲಿ ಪ್ರಮುಖ ಸ್ಥಾನ ಪಡೆದಿದೆ ಎಂದು ಕ್ರೈಸ್ತ ಜನಾಂಗವು ಕ್ರೈಸ್ತ ಸಂದೇಶವನ್ನು, ಅದರ ಅಂತರ್‌ಧರ್ಮವನ್ನು, ಸಾರ್ವಜನಿಕ ಜೀವನದಲ್ಲಿ ಸಾರುವುದು ಅದರ ಹಕ್ಕು, ಅಷ್ಟೇ ಅಲ್ಲ ಅದರ ಕರ್ತವ್ಯವೂ ಹೌದು ಎಂದು ನಾನು ಒತ್ತಿ ಹೇಳುತ್ತಿದ್ದೆ. ನಿರಂಕುಶ ಪ್ರಭುತ್ವವನ್ನು ಅಥವಾ ಪರಕೀಯ ಆಡಳಿತವನ್ನು ಅಹಿಂಸಾಮಾರ್ಗದಲ್ಲಿ ಹೊರದೂಡುವುದು ಕ್ರೈಸ್ತರ ಹಕ್ಕು ಹಾಗೂ ಕರ್ತವ್ಯವೆಂದು ನಾನು ನನ್ನ ಗ್ರಂಥವಾದ 'ಕ್ರೈಸ್ತ ಮತ್ತು ಸತ್ಯಾಗ್ರಹ' ಎಂಬುದರಲ್ಲಿ ಪ್ರತಿಪಾದಿಸಿದೆ.

ನಾನು ಬೊಂಬಾಯಿ ಬಿಷಪ್ಪರ ಆಡಳಿತದಲ್ಲಿರುವವರೆಗೆ ಚರ್ಚಿಗೂ ನನಗೂ ಅಷ್ಟೇನೂ ಭಿನ್ನಾಭಿಪ್ರಾಯಗಳಿರಲಿಲ್ಲ. ಆದರೆ ನಾನು ಪೆಷಾವರಕ್ಕೆ ಹೋಗಿ ಬಂದದ್ದು ಅಲ್ಲಿಯ ಬಿಷಪ್ಪರಿಗೆ ಹಿಡಿಸಲಿಲ್ಲ. ಆದರೆ ನಾನು ಕಾರಂಜಿಯಾಕ್ಕೆ ಹೋದ ಮೇಲೆ ನನಗೆ ಸ್ನೇಹಿತರೂ ಹೇಳಿಕೇಳುವವರೂ ಇಲ್ಲವಾದರು. ನಾಗಪುರದ ಹೊಸ ಬಿಷಪ್ಪರನ್ನು ನಾನು ಮತ್ತು ಶಾಮರಾವ್ ಬಿಲಾಸ್‌ಪುರದ ಡೆಪ್ಯೂಟಿ ಕಮೀಷನರ ಮನೆಯಲ್ಲಿ ಭೇಟಿ ಮಾಡಿದೆವು. ಪೋಲೀಸರ ವರದಿ ತಿಳಿಯುವವರೆಗೆ ಅವರು ನನ್ನೊಡನೆ ಸ್ನೇಹವಾಗಿಯೇ ಇದ್ದರು. ಆದರೆ ನಾವು ಕಾರಂಜಿಯಾಕ್ಕೆ ಹೋದಮೇಲೆ ಅವರ ಮನಸ್ಸೇ ಬದಲಾಯಿತು. ನಾನು ರಾಜಕೀಯದಲ್ಲಿ ಪಾತ್ರ ವಹಿಸಕೂಡದೆಂದೂ

ರಾಜನಿಷ್ಠೆಯ ಪ್ರಮಾಣವಚನ ಸ್ವೀಕರಿಸಬೇಕೆಂದೂ ಅವರು ನನಗೆ ೧೯೩೨ನೆಯ ಫೆಬ್ರವರಿಯಲ್ಲಿ ಕಾಗದ ಬರೆದರು. ನಾನು ಇದನ್ನು ವಿರೋಧಿಸಿ ಪತ್ರ ಬರೆದೆ. ರಾಜನ ಮುಷ್ಟಿಯಿಂದ ಮುಕ್ತವಾದ ಇಂಡಿಯಾದ ಚರ್ಚಿಗೆ ಸೇರಿದವನಾದ ನಾನು ರಾಜನಿಷ್ಠೆಯ ಪ್ರಮಾಣವಚನ ಸ್ವೀಕರಿಸುವುದಿಲ್ಲ ಎಂದೆ. ಕಾಂಗ್ರೆಸ್ಸಿಗೆ ಸೇರಿದವನು ಚರ್ಚಿಗೆ ಸೇರಲು ಅವಕಾಶವಿಲ್ಲವಾದರೆ ಚರ್ಚೂ ಒಂದು ರಾಜಕೀಯ ಪಕ್ಷವಾದಂತಾಗುತ್ತದೆ. ಹಾಗೆ ಮಾಡಿದಲ್ಲಿ, ಸಂಪನ್ನರಾದ ಇಂಡಿಯಾ ಜನರನ್ನು, ಯಾರ ಕೈಗೆ ಇನ್ನು ಒಂದೆರಡು ವರ್ಷಗಳಲ್ಲಿ ಸರ್ಕಾರದ ಆಡಳಿತವನ್ನು ನಾವು ವಹಿಸಿಕೊಡಬೇಕಾಗಿದೆಯೇ ಅಂಥ ಜನರನ್ನು, ನಾವು ಕಳೆದುಕೊಂಡಂತಾಗುತ್ತದೆ ಎಂದು ತಿಳಿಸಿದೆ.

ಹೀಗೆ ಬರೆದ ಸ್ವಲ್ಪ ದಿನಗಳ ಮೇಲೆ ಬಿಷಪ್ಪರೇ ಬಂದರು ಕಾರಂಜಿಯಾಹಳ್ಳಿಗೆ. ಅವರ ಜೊತೆ ಇಬ್ಬರು ಕ್ರೈಸ್ತ ಮಿಷನರಿಗಳೂ ಇದ್ದರು. ಕುಳಿತುಕೊಳ್ಳುವುದಕ್ಕೆ ಕುರ್ಚಿಗಳಿಲ್ಲದ ನಮ್ಮ ಗುಡಿಸಲಿನಲ್ಲಿ ಅವರು ನೆಲದ ಮೇಲೆ ಷೂ ಹಾಕಿಕೊಂಡೇ ತೊಂದರೆಯಿಂದ ಕುಳಿತುಕೊಳ್ಳಬೇಕಾಯಿತು. ನನಗೂ ಅವರಿಗೂ ದೀರ್ಘ ಚರ್ಚೆಯಾಯಿತು. ನಾನು ಮಹಾತ್ಮರ ಮತ್ತು ಅವರ ಅನುಯಾಯಿಗಳ ಸಂಪರ್ಕ ಇಟ್ಟುಕೊಂಡ ಪಕ್ಷದಲ್ಲಿ ಬಿಷಪ್ಪರಿಗೂ ನನಗೂ ಏನೂ ಸಂಬಂಧವಿರುವುದಿಲ್ಲವೆಂದು ಹೇಳಿದರು. ಗಾಂಧಿ ಆಧುನಿಕ ಇಂಡಿಯಾದಲ್ಲಿ ಕ್ರೈಸ್ತನ ಮಹಾ ಶತ್ರು. ಪಾಪದ ಪಾದ್ರಿಯಾದ ಕಾರಣ ಸಿ.ಎಫ್. ಆಂಡ್ರೂಸರನ್ನು ತೆಗೆದುಹಾಕಬೇಕಾಯಿತು. ಕಾಂಗ್ರೆಸ್ ಮಾಡುತ್ತಿರುವುದು ತಪ್ಪು ಕೆಲಸ. ಅದು ಸತ್ಯಾಗ್ರಹಕ್ಕೆ ಬದಲು ಪಶುಬಲವನ್ನು ಪ್ರಯೋಗಿಸುತ್ತಿದೆ. ಖಾದಿ ಸರಿಯಾದದ್ದಲ್ಲ. ಗೊಂಡಾ ಜನರಲ್ಲಿ ಅದರ ಪ್ರಚಾರ ಮಾಡುವುದಕ್ಕೆ ಅವರು ನನಗೆ ಅನುಮತಿ ಕೊಡುವುದಿಲ್ಲ – ಈ ರೀತಿ ಹೇಳಿ ಬಿಷಪ್ಪರು ಹೊರಡಲು ಎದ್ದುನಿಂತರು. ಅವರ ಜೊತೆ ಬಂದಿದ್ದ ಇಬ್ಬರು ಪಾದ್ರಿಗಳು ಇಂಗ್ಲೆಂಡಿನಿಂದ ಬಂದು ಒಂದು ತಿಂಗಳಾಗಿತ್ತು. ಅವರು ಉರಿಯುವ ಬೆಂಕಿಗೆ ಒಂದಿಷ್ಟು ತುಪ್ಪ ಹಾಕುತ್ತಿದ್ದರು. ಶಾಮರಾವ್ ಕಡೆ ತಿರುಗಿ ಬಿಷಪ್ಪರು, 'ನಿನಗೂ ನನಗೂ ಏನು ಸಂಬಂಧವಿಲ್ಲ' ಎಂದರು.

ನಾಗಪುರಕ್ಕೆ ಹೋದಮೇಲೆ ಬಿಷಪ್ಪರು ಮತ್ತೊಂದು ಕಾಗದ ಬರೆದರು : 'ನೀನು ಬಹಳ ಅಪಾಯಕಾರಿಯಾದ ಮನುಷ್ಯ, ಕಾಂಗ್ರೆಸ್ ಬಿಡಬೇಕು' ಎಂದು. ನನ್ನನ್ನು ನಾಗಪುರ ಪ್ರದೇಶದಿಂದ ಹೊರಗೆ ಕಳುಹಿಸಲು ಕಮೀಷನರಿಗೆ ಹೇಳಿದವರೂ ಅವರೇ. ಅದೇ ವರ್ಷ ನವೆಂಬರ್ ತಿಂಗಳಿನಲ್ಲಿ ಅವರು ಬರೆದ ಕಾಗದದಿಂದ ಅದು ಸ್ಪಷ್ಟವಾಗಿತ್ತು. ಹದಿನೈದು ದಿನಗಳ ನಂತರ ಬಿಷಪ್ಪರಿಗೆ ಕಾಗದ ಬರೆದು ನಾನು ಚರ್ಚಿನ ಸಂಬಂಧವನ್ನು ತ್ಯಜಿಸುವುದಾಗಿಯೂ, ಇನ್ನು ಮುಂದೆ ಪಾದ್ರಿ ಕೆಲಸಮಾಡಲು ಸಾಧ್ಯವಿಲ್ಲವಾಗಿಯೂ ತಿಳಿಸಿದೆ. ಮೂರು ವರ್ಷಗಳ ನಂತರ ನಾನು ನನ್ನ ಪಾದ್ರಿ ಕೆಲಸವನ್ನು ಬಿಟ್ಟಿದ್ದನಲ್ಲದೆ ಚರ್ಚಿನ ಸದಸ್ಯತ್ವವನ್ನೂ ಬಿಟ್ಟುಬಿಟ್ಟೆ.

ಆಮೇಲೆ ಮತ್ತೊಂದು ಕಾಗದ ಬರೆದೆ, ದೀರ್ಘ ವೇದನೆಯಲ್ಲಿ ಒದ್ದಾಡುತ್ತಿದ್ದ ಬಿಷಪ್ಪರಿಗೆ : 'ಇಂಡಿಯಾದ ಚರ್ಚು ಹೆಸರಿಗೆ ಮಾತ್ರ ಸ್ವತಂತ್ರವಾಗಿದ್ದರೂ ಪರ ಸರ್ಕಾರದ ಅಧೀನಕ್ಕೊಳಪಟ್ಟಿದೆ. ಇದಕ್ಕೆ ಕೆಲವು ಉದಾಹರಣೆಗಳನ್ನು ಕೊಟ್ಟರೆ ಅನ್ಯಥಾ ಭಾವಿಸಬೇಡಿ. ನಿಮ್ಮಿಂದ ಬರುವ ಕಾಗದಗಳ ಲಕೋಟೆಗಳ ಮೇಲೆ 'ಇಂಡಿಯಾ ಸರ್ಕಾರ' ಎಂದು ಇರುತ್ತದೆ. ನಿಮ್ಮ ಕಾಗದಗಳ ಮೇಲೆ "On His Majesty's Service' ಎಂಬ ಮುದ್ರೆ ಇರುತ್ತದೆ. ನಿಮಗೆ ಕೊಡುವ ಸಂಬಳ ಸರ್ಕಾರಿ ಖಜಾನೆಯದು. ನ್ಯಾಯವಲ್ಲದಿದ್ದರೂ ಯೂನಿಯನ್ ಜಾಕ್ ಬಾವುಟ ನಿಮ್ಮ ಚರ್ಚಿನ ಮೇಲೆ ಹಾರಾಡುತ್ತದೆ. ನನಗೊಂದು ಪರವಾನಗಿಬೇಕೆಂದು ಕೇಳಿದಾಗ ನೀವು ನನ್ನ ಆಧ್ಯಾತ್ಮಿಕತೆ ಅಥವಾ ಮತಧರ್ಮಶಾಸ್ತ್ರದಲ್ಲಿ ನನ್ನ ಅರ್ಹತೆಗಳೇನು ಎಂದು ಕೇಳಲಿಲ್ಲ; ನೀವು ಕೇಳಿದ್ದು – ಹಾಗೆ ಕೇಳಲು ನಿಮಗೆ ಯಾವ ಹಕ್ಕು ಇಲ್ಲದಿದ್ದರೂ – ಚಕ್ರವರ್ತಿಗೆ ನಾನು ರಾಜಭಕ್ತಿಯನ್ನು ತೋರಿಸ ಬೇಕೆಂದು. ಈ ಹಿಂದೆ ನಮಗೂ ನಿಮಗೂ ಆದ ಭೇಟಿಯ ಸಂದರ್ಭದಲ್ಲಿ ನಾನು ಪೈಶಾಚಿಕ ಕೆಲಸ ಮಾಡುತ್ತಿದ್ದೇನೆಂದು ಹೇಳಿದಿರಿ. ಸೇಠ್ ಜಮ್ನಾಲಾಲ್ ಬಜಾಜರ ಖಾಸಗಿ ಮನೆಯನ್ನು ಮುಟ್ಟುಗೋಲುಹಾಕಿಕೊಂಡು ಪೋಲೀಸರು ವಶಪಡಿಸಿಕೊಂಡಮೇಲೆ ನನಗೊಂದು ನೋಟೀಸು ಬಂದಿತು. ಅದು ಸರ್ಕಾರದ ಗೃಹಖಾತೆಯಿಂದ ಬರುವ ಬದಲು, ನಿಮ್ಮ ಕಛೇರಿಯಿಂದ ಬಂದಿತು.

'ಕಳೆದ ಮೂರು ವರ್ಷಗಳಿಂದ ಈ ದೇಶದಲ್ಲಿ ಆಗುತ್ತಿರುವ ಸ್ವಾತಂತ್ರ್ಯ ಚಳುವಳಿಯನ್ನು ಮಟ್ಟಹಾಕಲು ಸರ್ಕಾರ ಅನುಸರಿಸುತ್ತಿರುವ ಅಮಾನುಷವೂ ಕ್ರೂರವೂ ಆದ ನೀತಿಯನ್ನು ಖಂಡಿಸಿ ನೀವಾಗಲೀ ನಿಮ್ಮ ಇತರ ಸಹೋದ್ಯೋಗಿ ಬಿಷಪ್ಪರು ಗಳಾಗಲೀ ತುಟಿಪಿಟಕ್ಕೆನ್ನಲಿಲ್ಲ. ಅದರ ಬದಲು ಹಾಗೆ ಮಾಡಿದ್ದು ಸರಿ ಎಂದಿರುವಿರಿ. ಅಹಿಂಸಾಯುತ ರಾಜಕೀಯ ಅಪರಾಧಿಗಳನ್ನು ಛಡೀಶಿಕ್ಷೆಗೆ ಗುರಿಮಾಡುವುದು ನ್ಯಾಯವಾದ ಶಿಕ್ಷೆ ಎಂದಿದ್ದೀರಿ. ನೀವು ನನ್ನೊಡನೆ ವರ್ತಿಸುವ ರೀತಿ ತಂದೆಯಂತಿರದೆ ವಿದೇಶಿ ಸರ್ಕಾರದ ಏಜೆಂಟನ ವರ್ತನೆಯಂತಿತ್ತು.

'ಈ ಸರ್ಕಾರಿ – ಧರ್ಮಕ್ಕೂ ನ್ಯೂ ಟೆಸ್ಟಮೆಂಟಿನಲ್ಲಿ ಹೇಳಿರುವ ಧರ್ಮಕ್ಕೂ ಯಾವ ಸಂಬಂಧವಿರುವುದೋ ನಾ ಕಾಣೆ. ನನ್ನ ಆಗುಹೋಗುಗಳೆಲ್ಲ ಇಂಡಿಯಾಕ್ಕೆ ಸೇರಿದವುಗಳು. ಸದ್ಯದಲ್ಲಿ ನಾನು ಸರ್ಕಾರದ ನಿರ್ಬಂಧಕ್ಕೊಳಗಾಗಿ ರಾಜಕೀಯದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿಲ್ಲ. ನಮ್ಮ ಆಶ್ರಮ ರಾಜಕೀಯ ಚಳುವಳಿಯ ಕೇಂದ್ರವಾಗಬೇಕೆಂದು ನಾನೆಂದೂ ಇಚ್ಛಿಸಿರಲಿಲ್ಲ. ಆದರೆ ನಾನು ನಿಮಗೆ ವಿರೋಧಪಕ್ಷ ದಲ್ಲಿರುವುದು ಖಚಿತ. ನಾನು ಸುಮ್ಮನಿದ್ದರೆ ಅದಕ್ಕೆ ಕಾರಣ ನನ್ನ ಹೃದಯ ಪರಿವರ್ತನೆಯಾಗಿದೆ ಎಂದಲ್ಲ. ನಾನು ಸರ್ಕಾರದ ಗೌರವ ಖೈದಿಯಾಗಿರುವುದರಿಂದ ಮತ್ತು ಕೊಟ್ಟ ಮಾತಿನಂತೆ ನಡೆದುಕೊಳ್ಳಬೇಕಾಗಿರುವುದರಿಂದ ನಾನು ಸುಮ್ಮನಿದ್ದೇನೆ. ಆದರೆ ನನ್ನ ಮನಸ್ಸು ಮತ್ತು ಆತ್ಮ ಕ್ರೈಸ್ತ ರೀತಿಯಲ್ಲಿ ಸೆರೆಮನೆಯಲ್ಲಿ ನೋಯುತ್ತಿರುವವರ ಕಡೆಗೆ ಇದೆ. ನಾನು ಪ್ರೀತಿಸುವ ದೇಶದ ಹಿತಗಳಿಗೆ

ವಿರೋಧವಾಗಿ ವರ್ತಿಸುವ ಸರ್ಕಾರದ ಹೆಚ್ಚು ಕಡಮೆ ನೌಕರನಂತಿರುವ ನಿಮಗೆ ಅಧೀನವಾಗಿ ಕೆಲಸಮಾಡುವುದು ಹೇಗೆ ಸಾಧ್ಯ?'

ಕೊನೆಗೆ, ೧೯೩೪ನೆಯ ನವೆಂಬರ್ ತಿಂಗಳಿನಲ್ಲಿ ಕಲ್ಕತ್ತೆಯ ಮೆಟ್ರೊಪಾಲಿಟನಿಗೆ ಈ ರೀತಿ ಕಾಗದ ಬರೆದೆ : 'ಈ ಕಾಗದ ಬರೆದಿರುವ ಉದ್ದೇಶ, ಚರ್ಚ್ ಆಫ್ ಇಂಗ್ಲೆಂಡಿಗೂ ನನಗೂ ಯಾವ ಸಂಬಂಧವಿಲ್ಲ ಎಂಬುದನ್ನು ತಿಳಿಸಲು. ಪಾದ್ರಿಯಾಗಿಯಾಗಲೀ ಚಾರಕನಾಗಿಯಾಗಲೀ ಚರ್ಚಿಗೂ ನನಗೂ ಯಾವ ಸಂಬಂಧವೂ ಇಲ್ಲ. ನನಗೆ ಧರ್ಮೋಪದೇಶ ಮಾಡಿದ ಚರ್ಚನ್ನು ಯಾವ ಕಹಿ ಮನಸ್ಸಿನಿಂದಲಾಗಲೀ ಸೇಡಿನಿಂದಾಗಲಿ ಬಿಡುತ್ತಿಲ್ಲ. ಆದರೆ ಅದರಲ್ಲಿ ಉಳಿಯುವುದು ನನಗೆ ನಾನೇ ದ್ರೋಹ ಮಾಡಿಕೊಂಡಂತಾಗುವುದರಿಂದ ಅದನ್ನು ಬಿಡುತ್ತಿದ್ದೇನೆ'.

ಇಷ್ಟೇ ಸಾಕಾಗಿರಲಿಲ್ಲ, ನಾನು ಚರ್ಚಿನಿಂದ ಸಂಪೂರ್ಣ ಬೇರೆಯಾಗಲು. ೧೯೩೬ನೆಯ ಇಸವಿಯಲ್ಲಿ ಇಂಗ್ಲೆಂಡಿಗೆ ಹೋದಾಗ ಅದೇ ವರ್ಷ ನವೆಂಬರಿನಲ್ಲಿ ಆರ್ಚ್‌ಬಿಷಪ್ ಟೆಂಪಲ್ ಅವರನ್ನು ಕೇಳಿ 'ಮುಕ್ತಿಪತ್ರ' (Deed of Reliquishment) ಬರೆದುಕೊಟ್ಟೆ.

ಈಗ ರಾಜಕೀಯದಲ್ಲಿ ಮತದ ಪಾತ್ರದ ಬಗ್ಗೆ ಮಾತಾಡುವುದು ವಿಚಿತ್ರವಾಗಿ ಕಾಣುತ್ತೆ ನಿಜ. ಏಕೆಂದರೆ ಅದನ್ನು ದೂರವಿಡುವುದೇ ನಮ್ಮ ಈಗಿನ ಮುಖ್ಯ ಕೆಲಸವಾಗಿದೆ. ಆದರೆ ಗಾಂಧೀಜಿ ಹೇಳಿದ ಮತ ಜಾತಿಯ ಮತವಲ್ಲ. ಅವರು ಹೇಳಿದ್ದು ಒಂದು ಧರ್ಮದ ನಿಜವಾದ ತತ್ವ, ಆ ಧರ್ಮ ಕ್ರೈಸ್ತ, ಇಸ್ಲಾಂ, ಹಿಂದೂ ಅಥವಾ ಬೌದ್ಧಧರ್ಮವಾಗಿರಬಹುದು. ಈಗಲೂ, ಹಿಂದೆ ಗಾಂಧೀಜಿಯ ಕಾಲದಲ್ಲಿ ಇದ್ದಂತೆ, ಪ್ರೇಮ ಹಾಗೂ ಪರಸಹಿಷ್ಣುತೆ ಅತ್ಯವಶ್ಯಕವಾಗಿ ಬೇಕು.

ಅಲ್ಲದೆ ನಾನು ಚರ್ಚನ್ನು ಬಿಡುವ ಕಾಲದಲ್ಲಿ ಕಾಂಗ್ರೆಸ್ ಒಂದು ರಾಜಕೀಯ ಪಕ್ಷವಾಗಿರಲಿಲ್ಲ. ಗಾಂಧೀಜಿ ರೌಂಡ್ ಟೇಬಲ್ ಕಾನ್‌ಫೆರೆನ್ಸ್‌ನಲ್ಲಿ ಹೇಳಿದ ಹಾಗೆ ಕಾಂಗ್ರೆಸ್ ಒಂದು ಪಕ್ಷವಾಗಿರಲಿಲ್ಲ; ಅದು ಇಂಡಿಯಾ ರಾಷ್ಟ್ರದ ಪ್ರತಿನಿಧಿಯಾಗಿತ್ತು.

ನನಗೆ ಬಿಷಪ್ಪರುಗಳ ಮೇಲೆ ಅಷ್ಟೊಂದು ಆಕ್ರೋಶವಾಗಲು ಕಾರಣ. ಅವರು ಯುದ್ಧದ ಬಗ್ಗೆ ಹೊಂದಿದ್ದ ಅಭಿಪ್ರಾಯ. ಅವರು ಯುದ್ಧಗಳನ್ನು ಖಂಡಿಸುವ ಬದಲು ಅದಕ್ಕೆ ಸಹಾಯ ಮಾಡುತ್ತಿದ್ದರು.

ನಾನು ಮೇಲ್ಕಂಡ ವಿಚಾರಗಳನ್ನು ಹೇಳಬೇಕಾಗಿರಲಿಲ್ಲ. ಆದರೆ ಅವು ನನ್ನ ಬಾಳಿನ ಅಂಶಗಳಾಗಿದ್ದರಿಂದ ಹೇಳಬೇಕಾಯಿತು. ನನ್ನ ಪತ್ರಗಳಲ್ಲಿ ಕಹಿ ಇಲ್ಲ. ಆದರೆ ಕರುಣೆಯೂ ಇಲ್ಲ. ಶ್ರೀಮಂತರು ಹಾಗೂ ಶಕ್ತಿವಂತರ ಬಗ್ಗೆ ದಯೆ ತೋರಿಸಬೇಕೆಂದು ನಾನೆಂದೂ ಕಲಿತಿರಲಿಲ್ಲ. ನಾನು ಬಿಷಪ್ಪರುಗಳಿಗೆ ತಲೆನೋವಾಗಿದ್ದೆ ಎಂದು ಕಾಣುತ್ತದೆ. ಈಗಿನ ಪರಿಸ್ಥಿತಿ ಆಗ ಇದ್ದಿದ್ದರೆ. ನಾನು ಈ ರೀತಿ ಬರೆಯುತ್ತಿರಲಿಲ್ಲ. ಇಂಡಿಯಾ ಈಗ ಬದಲಾಯಿಸಿದೆ. ಹಾಗೆಯೇ ಇಂಡಿಯಾ ಚರ್ಚು ಕೂಡ.

ಯೂನಿಯನ್ ಜಾಕ್ ಬದಲು ಇಂಡಿಯಾದ ತ್ರಿವರ್ಣ ಧ್ವಜ ಚರ್ಚುಗಳ ಮೇಲೆ ಹಾರಾಡುತ್ತಿದೆ. ಇಂಗ್ಲೆಂಡ್ ಚರ್ಚ್ ಕೂಡ ವಿಶಾಲ ಭಾವನೆಯನ್ನು ತಳೆದಿದೆ.

ಈಗಲೂ ಹಳೆಯ ಸಂಪ್ರದಾಯಕ್ಕೆ ಕಟ್ಟುಬಿದ್ದವರು, ಅದರಲ್ಲಿಯೂ ಹೊಸದಾಗಿ ಕ್ರೈಸ್ತರಾದವರು, ಬಹಳ ಕಟ್ಟುನಿಟ್ಟಾದ ಮಾರ್ಗವನ್ನು ಅನುಸರಿಸುತ್ತಾರೆ. ಅವರಲ್ಲಿ ಮೂಢನಂಬಿಕೆಗಳಿವೆ. ಅವರು ಹೇಳುವ ಧರ್ಮಮಾರ್ಗಕ್ಕೆ ವಿರೋಧವಾಗಿ ಹೋದವರ ಬಗ್ಗೆ ಕ್ರೂರವಾಗಿ ವರ್ತಿಸುತ್ತಾರೆ. ಅಸ್ಸಾಮಿನ ಪ್ರೊಟೆಸ್ಟಂಟ್ ಚರ್ಚುಗಳು ಈಗಲೂ ಯಾರಾದರೂ ಅಕ್ಕಿಬೋಜ ಕುಡಿದರೆ ಅಥವಾ ನೃತ್ಯದಲ್ಲಿ ಭಾಗವಹಿಸಿದರೆ, ಅವರನ್ನು ಹೊರಗೆ ಹಾಕುತ್ತವೆ. ಲೈಂಗಿಕ ಸಂಬಂಧ ಬೆಳೆಸಿದರೆ ಊರಿಗೆಲ್ಲಾ ಗೊತ್ತಾಗುವಂತೆ ಮಾಡಿಬಿಟ್ಟು ಅವಹೇಳನಮಾಡುತ್ತವೆ. ಪದವೀಧರಳಾದ ಒಬ್ಬ ಗಿರಿಜನ ಹುಡುಗಿ ಮದುವೆಯಾಗುವ ಮುನ್ನ ಗರ್ಭಿಣಿಯಾದಳು. ಚರ್ಚಿನ ಕ್ರೈಸ್ತ ಮಹನೀಯರು ಏನು ಅವಹೇಳನ ಮಾಡುವರೋ ಎಂದು ಹೆದರಿ ಆಕೆ ಗರ್ಭಪಾತಮಾಡಿಕೊಳ್ಳಲು ಹೋಗಿ ತನ್ನ ಪ್ರಾಣವನ್ನೇ ಕಳೆದುಕೊಂಡಳು. ಕ್ರೈಸ್ತರು ಈ ಬಗ್ಗೆ ಕೊಂಚ ಅನುಕಂಪ ಹೊಂದಿದ್ದರೆ ಇದು ಆಗುತ್ತಿರಲಿಲ್ಲ. ಪ್ರೇಮವು ಮುಗ್ಗರಿಸಿದ ಕಾರಣಕ್ಕಾಗಿಯಾರೂ ಒಂದಿಷ್ಟು ಹೆಚ್ಚು ಪ್ರೇಮ ತೋರಬಾರದೆ !

ನನಗೂ ಚರ್ಚಿಗೂ ಭಿನ್ನಾಭಿಪ್ರಾಯ ಹುಟ್ಟಿದ್ದು ರಾಜಕೀಯ ವಿಚಾರವಾಗಿ. ಆದರೆ ಈಚೆಗೆ ಆ ಭಿನ್ನಾಭಿಪ್ರಾಯ ಹಾಗೆಯೇ ಮಾಯವಾಯಿತು. ನಾನು ರಾಜಕೀಯದಿಂದ ದೂರವಾಗಿ ಹೆಚ್ಚು ಹೆಚ್ಚಾಗಿ ಸಾಹಿತ್ಯ ಹಾಗೂ ವಿಜ್ಞಾನದ ಕಡೆ ತಿರುಗಿದೆ. ಆದರೂ ರಾಜಕೀಯದ ಬಗ್ಗೆ ನನ್ನ ಅಭಿಪ್ರಾಯ ಬದಲಾವಣೆಯಾಗಿಲ್ಲ. ಗಹನವಾದ ಒಂದು ವಿಚಾರ ಹಾಗೇ ಉಳಿದಿದೆ. ಮತಾಂತರ ಅಥವಾ ಸಾಂಸ್ಕೃತಿಕ ಬದಲಾವಣೆಯ ಸಮಸ್ಯೆ ಪಾದ್ರಿಗೆ ಎಷ್ಟು ಆಸಕ್ತಿಯನ್ನುಂಟುಮಾಡುವುದೋ ಅಷ್ಟೇ ಆಸಕ್ತಿಯನ್ನು ಮಾನವಶಾಸ್ತ್ರಜ್ಞನಲ್ಲಿಯೂ ಉಂಟುಮಾಡಲಾರದೇ ?

ಕ್ರೈಸ್ತ ಮಿಷನರಿಗಳ ಬಗ್ಗೆ ಎಲ್ಲರೂ ತಮ್ಮ ಮೆಚ್ಚಿಗೆಯನ್ನು ತೋರಿಸದಿರಲಾರರು. ಅವರು ಇಂಡಿಯಾಕ್ಕೆ ಸಾಹಸಗುಣವನ್ನೂ ಅರ್ಪಣಾಭಾವನೆಯನ್ನೂ ತಂದಿದ್ದಾರೆ. ಜೀವನದ ಸುಖಸಂತೋಷಗಳನ್ನು ತ್ಯಜಿಸಿ, ನೂರಾರು ಜನ ದೇಶದ ಮೂಲೆ ಮೂಲೆಯಲ್ಲಿ ಸೇರಿಕೊಂಡಿದ್ದಾರೆ. ಕುಷ್ಠರೋಗ ನಿವಾರಣೆಯಲ್ಲಿ ಅವರು ಎತ್ತಿದ ಕೈಯಾಗಿದ್ದಾರೆ. ದೀನದಲಿತರ ಬಗ್ಗೆ ಹೋರಾಡಿದ್ದಾರೆ. ಅಸ್ಪೃಶ್ಯನನ್ನು ಸ್ನೇಹಿತನಂತೆ ಕಂಡಿದ್ದಾರೆ. ಆದಿವಾಸಿಗಳ ಬಗ್ಗೆ ಮುಖ್ಯ ಪಾತ್ರ ವಹಿಸಿದ್ದಾರೆ. ಇಂಡಿಯಾದ ಭಾಷೆಗಳಿಗೆ ಮಹೋಪಕಾರಮಾಡಿದ್ದಾರೆ. ವೈದ್ಯಕೀಯ ಹಾಗೂ ವಿದ್ಯಾಭ್ಯಾಸದ ಬಗ್ಗೆ ಅವರು ಮಾಡಿರುವ ಕೆಲಸ ಆ ವೃತ್ತಿಗಳಿಗೆ ಗೌರವ ತರುವಂಥದ್ದಾಗಿದೆ. ಅಲ್ಲದೆ ಮಕ್ಕಳ ಹಾಗೂ ರೋಗಿಗಳ ಬಗ್ಗೆ ಮಾನವೀಯವಾಗಿ ವರ್ತಿಸುವುದನ್ನು ಕಲಿಸಿದ್ದಾರೆ.

ನನಗೂ ಮಿಷನರಿ ಚಳುವಳಿಗೂ ಆದ ಢಿಕ್ಕಿ ಅದು ಮಾಡಿರುವ ಕೆಲಸದ ಬಗ್ಗೆ ಅಲ್ಲ. ಅದು ನನ್ನ ಆಕ್ಸ್‌ಫರ್ಡ್ ದಿನಗಳಿಂದ ಬೆಳೆದುಬಂದ ಮಾನಸಿಕ ಹಾಗೂ ಬೌದ್ಧಿಕ ಭಾವನೆಗಳ ಕಾರಣದಿಂದ. ಧರ್ಮವೆಂದರೆ ನಮ್ಮನ್ನು ಅಥವಾ ನಮ್ಮ ನೆರೆಹೊರೆಯವರನ್ನು ಪಾಪದಿಂದ ಮುಕ್ತರನ್ನಾಗಿ ಮಾಡುವುದು, ಅಥವಾ ನಮ್ಮ ಧರ್ಮಕ್ಕೆ ಪರಿವರ್ತಿಸುವುದು ಅಲ್ಲ ಎಂದು ನನಗೆ ಆಧ್ಯಾತ್ಮಿಕ ಸಾಹಿತ್ಯಾಭ್ಯಾಸದಿಂದ ತಿಳಿದುಬಂದಿದೆ. 'ಆತ್ಮವು ತನ್ನ ಮುಕ್ತಿಯನ್ನು ಅರಸುವುದೇ ಧರ್ಮ'ವೆಂದು ನನ್ನ ಭಾವನೆ. ಮಿಷನ್‌ಗಳ ಬಗ್ಗೆ ಆಧ್ಯಾತ್ಮಿಕವಾದಿಗಳು ಅಷ್ಟೇನೂ ಆಸಕ್ತಿಯನ್ನು ತೋರದಿರುವುದು ಗಮನಿಸಬೇಕಾದ ವಿಷಯ. ಕಂಡೂ ಕಾಣದಂತೆ ಈ ಭಾವನೆ ನನ್ನ ಮೇಲೆ ಪರಿಣಾಮವನ್ನುಂಟುಮಾಡುತ್ತಾ ಬಂದಿತು. ಹೀಗಾಗಿ ನಾನು ಆಕ್ಸ್‌ಫರ್ಡ್ ಬಿಟ್ಟಾಗ ಧರ್ಮವೆಂದರೆ ಬೇರೆಯವರನ್ನು ತನ್ನ ಮತಕ್ಕೆ ಸೇರಿಸಿಕೊಳ್ಳುವುದು ಎಂಬ ಅರ್ಥ ನನ್ನ ತಲೆಯಲ್ಲಿ ಉಳಿಯಲೇ ಇಲ್ಲ.

ಈ ಕಾರಣ ನಾನು ಮೊದಲು ಮಿಷನರಿಯಾಗಿ ಇಂಡಿಯಾಕ್ಕೆ ಬಂದು ಅನಂತರ ನನ್ನ ಮನಸ್ಸು ಬದಲಾಯಿಸಿದೆ ಎಂದು ಹೇಳುವುದು ತಪ್ಪು. ಸಾಮಾನ್ಯ ಅರ್ಥದಲ್ಲಿ ನಾನೆಂದೂ ಮಿಷನರಿ ಆಗಿರಲಿಲ್ಲ. ನಾನು ಕ್ರೈಸ್ತ ಸಂಘಕ್ಕೆ ಸೇರಿದ್ದರ ಮುಖ್ಯ ಉದ್ದೇಶ ಪಾಂಡಿತ್ಯ ಮತ್ತು ಆಧ್ಯಾತ್ಮಿಕತೆಗಳ ಸಂಪಾದನೆ ಹಾಗು ಪುನರುದ್ಧಾರವೇ ಹೊರತು, ಮತಾಂತರಗೊಳಿಸುವುದಲ್ಲ ಎಂದು ತಿಳಿದುಕೊಂಡ ಕಾರಣ. ಆದರೆ ನಾನು ಸೇರಿದ ಸ್ವಲ್ಪ ಕಾಲದಲ್ಲಿಯೇ ಅದರಲ್ಲಿದ್ದವರಲ್ಲಿ ಭಿನ್ನಾಭಿಪ್ರಾಯಗಳು ತಲೆದೋರಿದುವು.

ನಾನು ಕಾರಂಜಿಯಾಕ್ಕೆ ಹೋದಾಗ ಕ್ರೈಸ್ತಮತ ಬೋಧಿಸುವ ಅಥವಾ ಇನ್ನೊಬ್ಬರನ್ನು ಪರಿವರ್ತಿಸುವ ಭಾವನೆ ನನ್ನಲ್ಲಿ ಇರಲಿಲ್ಲ. ಕ್ರೈಸ್ತ ತತ್ವಗಳನ್ನು ಜೀವನದಲ್ಲಿ ಅನುಷ್ಠಾನಕ್ಕೆ ತರುವುದೇ ನನ್ನ ಉದ್ದೇಶವಾಗಿತ್ತು.

ಈ ಭಾವನೆ ನನ್ನಲ್ಲಿ ಮೂಡಲು ನನ್ನ ಆಕ್ಸ್‌ಫರ್ಡ್ ವಿದ್ಯಾಭ್ಯಾಸದ ಜೊತೆಗೆ ಗಾಂಧೀಜಿಯವರ ಪ್ರಭಾವ ಹಾಗೂ ಇತರ ಮತಗಳ ಬಗ್ಗೆ ನನಗಿದ್ದ ತಿಳುವಳಿಕೆ ಮತ್ತು ಗೌರವಗಳೇ ಕಾರಣವಾಗಿದ್ದುವು. ಎಲ್ಲಾ ಮತಗಳೂ ಒಂದೇ ಎಂಬ ಸುಲಭ ತತ್ವವನ್ನು ನಾನು ಒಪ್ಪದಿದ್ದರೂ, ಅದು ಸರಿ ಇದು ತಪ್ಪು ಎಂದು ಹೇಳುವ ಕೆಲಸಕ್ಕೆ ಹೋಗಲಿಲ್ಲ. ನಮ್ಮ ಅಭಿಪ್ರಾಯಗಳನ್ನು ಇನ್ನೊಬ್ಬರ ಮೇಲೆ, ಅದರಲ್ಲಿಯೂ ಗಿರಿಜನರ ಮೇಲೆ, ಹೇರಬಾರದೆಂಬ ಭಾವನೆ ನನ್ನಲ್ಲಿ ಆಗಲೇ ಬೆಳೆದುಬಂದಿತು. ಬ್ರಾಹ್ಮಣನೊಬ್ಬನ ಜೊತೆ ಮತದ ವಿಚಾರವಾಗಿ ಒಬ್ಬ ಮಿಷನರಿ ಚರ್ಚೆಮಾಡುವುದು ಸರಿಯಾಗಿ ಕಂಡರೂ, ಬಡಪಾಯಿ ಗಿರಿಜನನೊಬ್ಬನ ಬೆನ್ನುಹತ್ತುವುದು ಕುಳಿತ ಹಕ್ಕಿಯನ್ನು ಹೊಡೆದಂತೆ ಎನಿಸಿತು ನನಗೆ.

ಚರ್ಚಿನ ಧರ್ಮಕ್ಕೆ ಪರಿವರ್ತಿಸುವ ಕೆಲಸದಲ್ಲಿ ನಾನು ಸಹಕರಿಸದಿದ್ದುದೇ ನನಗೂ ಚರ್ಚಿಗೂ ಭಿನ್ನಾಭಿಪ್ರಾಯಕ್ಕೆ ಕಾರಣವಾಯಿತು. ಉದಾಹರಣೆಗೆ ಫಾದರ್

ವಿನ್‌ಸ್ಲೋ ಅವರು ತಿಳಿದಂಥ ಹಿಂದೂಗಳನ್ನು ಹಾಗೆಯೇ ಬಿಟ್ಟರೂ, ಗಿರಿಜನರು ಮತ್ತು ಹರಿಜನರನ್ನು ಕ್ರೈಸ್ತಮತಕ್ಕೆ ಸೇರಿಸಿಕೊಳ್ಳುವುದು ಒಳ್ಳೆಯದೆಂದು ಹೇಳುತ್ತಿದ್ದರು. ಸಿ.ಎಫ್. ಅಂಡ್ರೂಸರಂಥವರು ಸಹ ಇದೇ ಧಾಟಿಯಲ್ಲಿ ನನಗೆ ಹಲವಾರು ಸಲ ಬರೆದರು. ೧೯೩೩ನೆಯ ಇಸವಿ ನವೆಂಬರ್ ೧೨ನೆಯ ತಾರೀಕು ಅವರು ಬರೆದ ಪತ್ರ ಹೀಗಿದೆ :

'ನೀನೊಂದು ವಿಷಯ ತಿಳಿದುಕೊಳ್ಳಬೇಕು. ಒಂದು ಕೆಲಸವನ್ನು ಕೈಕೊಂಡರೆ ಅದನ್ನು ಅತಿಯಾಗಿ ಹಚ್ಚಿಕೊಳ್ಳುವುದು ಮತ್ತು ಹಾಗೆ ಹಚ್ಚಿಕೊಂಡು ಸ್ಥಿಮಿತ ಬುದ್ಧಿಯನ್ನು ಕಳೆದುಕೊಳ್ಳುವುದು ತಪ್ಪು. ನಾನು ಇದ್ದದ್ದನ್ನು ಇದ್ದಹಾಗೆ ಹೇಳುತ್ತಿದ್ದೇನೆ. ಆದರೂ ನಾವೆಲ್ಲಾ ಅನುಭವದಿಂದ ಎಷ್ಟೋ ಕಲಿತುಕೊಳ್ಳಬೇಕು. ತಾರತಮ್ಯ ಜ್ಞಾನವನ್ನು ಕಳೆದುಕೊಂಡರೆ ನಾವು ಬಹಳ ಕಳೆದುಕೊಂಡಂತೆಯೇ ಸರಿ. ಉದಾಹರಣೆಗೆ, ನೀನು ಕಾಡುಜನಾಂಗಗಳ ಬಗ್ಗೆ ಹೇಳುವುದು ಸರಿ ಇದ್ದರೂ, ಅವರಲ್ಲಿ ಅನಾಗರಿಕ ಹಾಗೂ ಹೇಯ ನಡತೆಗಳೂ ಇವೆ ಎಂಬುದನ್ನು ಮರೆಯಬಾರದು. ಇವು ವಾಸ್ತವವಾಗಿ ಗೊಂಡಾ ಜನರಲ್ಲಿ ಇಲ್ಲದಿರಬಹುದು. ಆದರೆ ಇಂಥವು ಬೇರೆ ಅನಾಗರಿಕ ಜನರಲ್ಲಿ ಇವೆ ಎಂಬುದನ್ನು ಮರೆಯಬಾರದು.

'ಇಂಥ ಕ್ರೂರ ನಡತೆಗಳನ್ನು ಖಂಡಿಸಬಾರದು ಮತ್ತು ಆ ಜನರನ್ನು ಮತಾಂತರಗೊಳಿಸಬಾರದು ಎಂದು ಬಾಪು ಹೇಳುವುದನ್ನು ನಾನು ಒಪ್ಪಲಾರೆ. ದಕ್ಷಿಣ ಇಂಡಿಯಾದಲ್ಲಿ ಮಾಡುವ ದೆವ್ವದ ಪೂಜೆ ಕ್ರೂರವೂ ಅಮಾನುಷವೂ ಆದುದೆಂದು ನನ್ನ ಭಾವನೆ.'

'ಒಮ್ಮೆ ಮಥುರಾದಲ್ಲಿ ಹಸುವಿನ ಪೂಜೆಮಾಡುತ್ತಿದ್ದುದನ್ನು ಕಂಡೆ. ಆಗ ನನಗಾದ ಅಸಹ್ಯ ಭಾವನೆ ಹೇಳತೀರದು. ಪ್ರಾಣಿಗಳ ಬಗ್ಗೆ ನನಗೆ ಇರುವ ಪ್ರೀತಿಯ ಕಾರಣ ಆ ಪೂಜೆಯನ್ನು ಮೆಚ್ಚುವೆನೆಂದು ಭಾವಿಸಿದ್ದರು. ಆದರೆ ಮನುಷ್ಯರು ಪ್ರಾಣಿಗಳನ್ನು ಪೂಜಿಸುವ ಮಟ್ಟಕ್ಕೆ ಇಳಿಯುವರೆಂದು ನಾನು ಭಾವಿಸಿರಲಿಲ್ಲ.

'ಇದೆಲ್ಲವನ್ನೂ ಏಕೆ ಬರೆಯುತ್ತಿದ್ದೇನೆಂದರೆ, ನನಗೂ ಸಹನೆ ಮೀರಿಹೋಗಿದೆ. ಅದು ನನ್ನ ಅಶಕ್ತತೆಯನ್ನು ತೋರಿಸುವಷ್ಟರ ಮಟ್ಟಿಗೆ ಹೋಗಿದೆ. ಇದೇ ಅಪಾಯ ನಿನಗೂ ಒದಗಬಹುದೇನೋ ಎಂದು ಅನಿಸುತ್ತದೆ.'

'ಈ ಕಾರಣ ನೀನು ಗೊಂಡ್ ಜನರ ಅತ್ಯಂತ ಸುಂದರ ಲಕ್ಷಣಗಳನ್ನು ನಮಗೆ ತೋರಿಸಿಕೊಡುವುದು ಸರಿಯಾದರೂ, ಒಮ್ಮೆ ನಾನು ಹಿಂದೂಧರ್ಮವನ್ನು ಅತಿ ಶ್ರೇಷ್ಠವೆಂದು ಪರಿಗಣಿಸಿದ್ದಂತೆ ನೀನೂ ಗೊಂಡ್ ಜನರಲ್ಲಿರುವುದೆಲ್ಲಾ ಒಳ್ಳೆಯದೆಂದು ಭಾವಿಸುವುದು ತಪ್ಪುಮಾಡಿದಂತಾಗುತ್ತೆ ಎಂದು ನನ್ನ ಭಾವನೆ. ಹಾಗೆ ಭಾವಿಸುವುದರ ಪರಿಣಾಮವನ್ನು ಆಗಲೇ ಹೇಳಿದ್ದೇನೆ ನಿನಗೆ. ನಾನು

ತಪ್ಪು ಮಾಡಿದಾಗ ನಿನ್ನಂತೆಯೇ ಚಿಕ್ಕವನಾಗಿದ್ದೆ. ಚಿಕ್ಕವನಾಗಿದ್ದಾಗ ಪ್ರೀತಿಸಿದುದನ್ನು ಕಳೆದುಕೊಳ್ಳಲು ಇಷ್ಟವಿಲ್ಲದಿದ್ದರು ದೊಡ್ಡವನಾದ ಮೇಲೆ ಬುದ್ಧಿ ವಿಚಕ್ಷಣತೆಗಳನ್ನು ಕಲಿತುಕೊಳ್ಳಬೇಕಾಗಿದೆ'

ಅವರು ೧೯೩೮ನೆಯ ಇಸವಿ ಮಾರ್ಚಿ ೩೧ರಲ್ಲಿ ಬರೆದ ಕಾಗದದಲ್ಲಿಯೂ ಇದೇ ಧಾಟಿ ಇತ್ತು.

ಅಂಡ್ರೂಸರು ಹೇಳಿದ್ದನ್ನು ಯಾರೂ ಕೇಳಲಿಲ್ಲ. ಈ ವಿಚಾರದಲ್ಲಿ ನೆಹ್ರು ಅವರ ಅಭಿಪ್ರಾಯವೇ ಸರಿ ಎನಿಸುತ್ತದೆ ನನಗೆ. ಅವರು ಹೀಗೆ ಹೇಳಿದ್ದಾರೆ; "ಈ ದೇಶದಲ್ಲಿಯೇ ಅಲ್ಲ ಇತರ ದೊಡ್ಡ ದೇಶಗಳಲ್ಲಿಯೂ ಜನರು ತಮ್ಮ ಅಭಿಪ್ರಾಯಗಳನ್ನು ಇನ್ನೊಬ್ಬರ ಮೇಲೆ ಹೇರುವುದಕ್ಕೆ ಪ್ರಯತ್ನಪಡುತ್ತಿರುವುದನ್ನು ನೋಡಿ ನನಗೆ ಭಯವಾಗಿದೆ. ನಮಗೆ ಇಷ್ಟವಾದಂತೆ ನಾವು ನಡೆಯುತ್ತಿದ್ದೇವೆ. ಆದರೆ ಅದನ್ನು ಇನ್ನೊಬ್ಬರ ಮೇಲೆ ಏಕೆ ಹೇರಬೇಕು ? ಈ ಮಾತು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ವಿಚಾರಗಳಿಗೂ ಅನ್ವಯಿಸುತ್ತದೆ. ಇನ್ನೊಬ್ಬರ ಮೇಲೆ, ಇನ್ನೊಂದು ದೇಶದ ಮೇಲೆ, ನಮ್ಮ ಜೀವನ ರೀತಿಯನ್ನು ಹೇರುವುದನ್ನು ಬಿಟ್ಟರೆ ಜಗತ್ತಿನಲ್ಲಿ ಹೆಚ್ಚು ಶಾಂತಿ ಇರುವುದು ಎಂದು ನನ್ನ ಭಾವನೆ".

ನಾನು ಚರ್ಚನ್ನು ಬಿಡುವುದಕ್ಕೆ ಇನ್ನೂ ಆಳವಾದ ಕಾರಣವುಂಟು. ಕೆಲವು ವಿಚಾರಗಳನ್ನು ನಾನು ನಂಬಲಾಗಲಿಲ್ಲ. ಬೈಬಲಿನ ಸತ್ಯತೆ, ಕನ್ನೆಯ ಜನನ, ಪುನರುದ್ಧಾರ ಇವುಗಳಲ್ಲಿ ನನಗೆ ಸಂದೇಹ ಹುಟ್ಟಿ ಬಿಷಪ್ ಗೊರೇ ಎಂಬುವರನ್ನು ಒಮ್ಮೆ ಕೇಳಿದೆ. ಅವರು ಹೀಗೆ ಹೇಳಿದರು : 'ಮಗು, ಇದರಲ್ಲಿ ಏನೂ ಇಲ್ಲ. ಕ್ರೈಸ್ತ ಮತವೇ ಆಗಲಿ, ಇತರ ಮತಗಳೇ ಆಗಲಿ ಇರುವುದೆಲ್ಲಾ ದೇವರ ಮೇಲಿನ ನಂಬಿಕೆಯಿಂದ. ದೇವರಿದ್ದಾನೆ ಎಂದು ನೀನು ನಂಬುವುದಾದರೆ ಉಳಿದೆಲ್ಲವನ್ನೂ ನೀನು ನಂಬಬಲ್ಲೆ.'

ಆದರೆ ಇದನ್ನು ನಂಬಲಾಗದ ಕಾಲವೊಂದು ಬಂದಿತು. ಗಾಂಧೀಜಿಯವರ ಆಶ್ರಮದ ಅನುಭವ ನನಗೆ ಕ್ರೈಸ್ತಮತ ಒಂದನ್ನೇ ನಂಬಬೇಕೆಂಬ ಭಾವನೆಯನ್ನು ಬಿಡುವಂತೆ ಮಾಡಿತು. ಹೀಗಾಗಿ ಅನೇಕ ವರುಷಗಳ ಮನಸ್ಸಿನ ಹೋರಾಟದನಂತರ ಎಲ್ಲವೂ ನನ್ನಿಂದ ಕಳಚಿಬಿತ್ತು; ನಾನು ಸ್ವತಂತ್ರನಾದೆ. ವಿಚಿತ್ರವಾದ ಪರಿವರ್ತನೆ ಯಾಯಿತು. ಆದರೆ ತಿರುಗುಮುರುಗಾಗಿ. ಅದು ನನ್ನನ್ನು ಎಷ್ಟು ಮುಕ್ತನನ್ನಾಗಿ ಮಾಡಿತೆಂದರೆ ಮತ್ತು ನನಗೆ ಎಷ್ಟು ಸ್ವಾತಂತ್ರ್ಯವನ್ನು ಒದಗಿಸಿತೆಂದರೆ, ಆ ಗಳಿಗೆಯನ್ನು ನೆನೆದುಕೊಂಡರೆ ನನಗೆ ಅತ್ಯಂತ ಆನಂದವಾಗುವುದಲ್ಲದೆ ಮನಸ್ಸಿಗೆ ಕಿಂಚಿತ್ ವ್ಯಥೆಯೂ ಆಗುತ್ತಿಲ್ಲ.

೫. ಚಂದಿರನಷ್ಟೇ ಸುಂದರ

ದೆಹಲಿಯ ವೃತ್ತಾಂತ ಪತ್ರಿಕೆಯೊಂದು ಈಚೆಗೆ ನನ್ನನ್ನು ಕುರಿತು ಬರೆಯುತ್ತಾ 'ನಾನೊಬ್ಬ ವಿಚಿತ್ರ ಇಂಗ್ಲಿಷ್ ಮನುಷ್ಯ. ನನ್ನ ವಕ್ರತೆಗಳ ಪ್ರಜ್ವಲತೆಯನ್ನು ಆಕ್ಸ್‌ಫರ್ಡ್ ಕೂಡ ಮಂಕು ಮಾಡಲಾಗಲಿಲ್ಲ' ಎಂದು ಹೇಳಿತು. ಆದರೂ ನಾನು 'ಹೊಸ ಹೊಸ ಜಾಗಗಳಲ್ಲಿ ಕಾವ್ಯವನ್ನೂ ಕಲೆಯನ್ನೂ ಕಂಡೆ' ಎಂಬ ಮಾತನ್ನೂ ಅದು ಹೇಳಿತು. ಈ ವಿಚಿತ್ರ ತೀರ್ಮಾನದ ಬಗ್ಗೆ ನನಗೇನೂ ಸಿಟ್ಟಿಲ್ಲ. ವಕ್ರವಾಗಿರುವುದು ಮೆಚ್ಚಬಾರದ ವಿಚಾರವೇನಲ್ಲ. ಆದರೆ ಹಾಗೆ ನನ್ನ ಬಗ್ಗೆ ಹೇಳುವುದು ಸರಿಯೇ ಎಂದು ನಾನು ಕೇಳುತ್ತೇನೆ. ಈ ದೇಶದ ಅಜ್ಞಾನಿಗಳೂ ಬಡವರೂ ಆದ, ಆದರೂ ಬಹುಮೋಹಕವಾದ ಜನರ ಮಧ್ಯೆ, ಅವರಿರುವ ಸೊಬಗಿನ ಪ್ರಕೃತಿಯ ಮಧ್ಯೆ, ಇರುವುದು ವಕ್ರತೆಯೇನು ? ಒಂದು ದೃಷ್ಟಿಯಲ್ಲಿ, ಗಲಿಬಿಲಿಯ ಧೂಳಿನ ಹಾಗೂ ಅಶಾಂತವಾದ ಪಟ್ಟಣದಲ್ಲಿರುವುದು, ಕ್ಲಬ್ಬುಗಳಲ್ಲಿ ತಮ್ಮ ಕಾಲವನ್ನು ವ್ಯರ್ಥಮಾಡುವುದು, ಇಸ್ಪೀಟು ಎಲೆಗಳಿಂದ ಕೆಲಸಕ್ಕೆ ಬಾರದ ಆಟಗಳನ್ನು ಆಡುವುದು, ಅಥವಾ ಸಣ್ಣ ಚೆಂಡುಗಳನ್ನು ಟೆನ್ನಿಸ್ ಕೋರ್ಟಿನಲ್ಲಿ ಅಥವಾ ಗಾಲ್ಫ್ ಮೈದಾನದಲ್ಲಿ ಆ ಕಡೆಯಿಂದ ಈ ಕಡೆಗೆ ಆಡಿಸುವುದು–ಇವೆಲ್ಲಾ ನನ್ನ ವಕ್ರತೆಗಿಂತ ಹೆಚ್ಚು ವಕ್ರ ಎಂದು ಹೇಳಬಹುದಲ್ಲವೆ ? ನಾಗರಿಕತೆಯ ಬಾಲಿಶ ಹರಟೆ ಮತ್ತು ಬೇಜಾರು ಹಿಡಿಸುವ ಮನರಂಜನೆಯಿಂದ ತಪ್ಪಿಸಿಕೊಂಡು ಹಳ್ಳಿಗೆ ಹೋಗಿ ಜೀವನ ಸಾರ್ಥಕವಾಗುವಂತಹ ಕೆಲಸಮಾಡುವುದಕ್ಕೆ ಕೈಹಾಕುವುದು ಸಾಮಾನ್ಯವಾದ ವಿಷಯವಲ್ಲ' ನಿಜ. ಆದರೆ ಹಾಗೆ ಮಾಡುವುದು ವಕ್ರತೆ ಎಂದು ಹೇಳಿದರೆ ತಪ್ಪಾಗುತ್ತದೆ.

ಆಗಿನ ನನ್ನ ಕೆಲವು ನಡತೆಗಳು ವಿಚಿತ್ರ ಅನ್ನುವುದಕ್ಕಿಂತ ಈಗಲೂ ಒಪ್ಪತಕ್ಕವು ಎಂದು ಹೇಳಬೇಕು. ಅನೇಕ ವರ್ಷಗಳು ನಾನು ಹಳ್ಳಿಗಳಲ್ಲಿ ವಾಸಮಾಡುತ್ತಿದ್ದು ಬರಿಗಾಲಿನಲ್ಲಿಯೇ ಪ್ರಯಾಣಮಾಡುತ್ತಿದ್ದೆ. ಇದರಿಂದ ನಾನು ಬೇಕಾದಷ್ಟು ಹಣ ಉಳಿಸಿದೆ. ನಾನು ಯಾವಾಗಲೂ ಹ್ಯಾಟನ್ನು ಹಾಕಲೇ ಇಲ್ಲ. ಅದರಿಂದ ನನಗೆ ಅನುಕೂಲವಾದುದಷ್ಟೇ ಅಲ್ಲದೆ, ಒಂದಿಷ್ಟು ದುಡ್ಡೂ ಉಳಿಯಿತು. ಈಚೀಚೆಗೆ ಮಾತ್ರ ನಾನು ಕ್ಷೌರಮಾಡಿಕೊಳ್ಳಲು ಕನ್ನಡಿ ಉಪಯೋಗಿಸುತ್ತಿರುವುದು. ಆದರೆ ರೇಜರ್, ಬ್ಲೇಡು ಮತ್ತು ಸೋಪುಗಳಿಗೆ ಆಗುವ ಹಣ ಉಳಿಸಲು ಗಡ್ಡ ಬಿಡುವುದಕ್ಕೆ ಹೋಗಲಿಲ್ಲ. ಪೂರ್ವದೇಶಗಳ ಹವೆ ಮತ್ತು ಇಲ್ಲಿಯ ಸ್ಥಿತಿಗಳನ್ನು ನೋಡಿದರೆ, ವಿಪರೀತ ಬಟ್ಟೆಗಳನ್ನು ಹಾಕಿಕೊಳ್ಳುವುದಕ್ಕಿಂತ ಸರಳವಾದ ಉಡುಪೇ ಬಹಳ ಒಳ್ಳೆಯದೆಂದು ನನ್ನ ಗಾಢ ನಂಬಿಕೆ.

ಇವೆಲ್ಲಾ ಇತರರಿಗೆ ವಕ್ರವಾಗಿ ಕಂಡಿರಬಹುದು. ಆದರೆ ನನಗೆ ತುಂಬ ಸುಖವಾಗಿ ಕಂಡುವು. ಈಚೀಚೆಗೆ ನಾನು ಸಂಪ್ರದಾಯಬದ್ಧವಾಗಿದ್ದೇನೆ. ಆದರೂ ಅದರಲ್ಲಿಯೂ ಅಷ್ಟಷ್ಟೆ; ಹೇಗೆಂದರೆ ಹಾಗೆ. ಒಮ್ಮೆ ಪ್ರವಾಸಮಾಡಿಕೊಂಡು ಹೌರಾ ಸ್ಟೇಷನ್‌ನಲ್ಲಿ ಬಂದಿಳಿದಾಗ ಒಬ್ಬ ಅಬ್ಕಾರಿ ಅಧಿಕಾರಿ ನನ್ನ ಬಳಿಗೆ ಬಂದು ನನ್ನ ಸಾಮಾನಿನಲ್ಲಿ ಏನಾದರೂ ಸುಂಕದ ಮಾಲುಗಳಿವೆಯೇ ನೋಡಬೇಕು ಎಂದ. ಆಗ ನಾನು ಕೇಳಿದೆ 'ನೂರಾರು ಜನ ಬಿಟ್ಟು ನನ್ನೊಬ್ಬನ ಮೇಲೆ ಏಕೆ ಅನುಮಾನಪಟ್ಟಿರಿ ?' ಎಂದು. ಆತ 'ಸ್ವಾಮಿ, ನೀವು ಪಕ್ಕಾ ಇಂಗ್ಲಿಷ್ ಜಂಟ್ಲ್‌ಮನ್ ನಂತೆ ಕಾಣವುದಿಲ್ಲ' ಎಂದು ಹೇಳಿಬಿಟ್ಟ.

ಇದಕ್ಕಿಂತ ಬಹಳ ಹಿಂದೊಮ್ಮೆ ನನ್ನ ಉಡುಪು ತಾಪತ್ರಯ ತಂದುಬಿಟ್ಟಿದ್ದಿತು. ಒಮ್ಮೆ ಸ್ವಾತಂತ್ರ್ಯ ಪೂರ್ವದ ಕಾಲದಲ್ಲಿ ಸಿಮ್ಲಾದಲ್ಲಿ ಸರ್ ಮಾರ್ಟಿಮರ್ ವ್ಹೀಲರ್ ಅವರು ನನ್ನನ್ನು ಭೋಜನಕ್ಕೆ ಕರೆದಿದ್ದರು. ಭಾರಿ ಚಳಿ. ನನ್ನ ಬಳಿ ಕೋಟಿರಲಿಲ್ಲ. ರಗ್ಗು ಹೊದೆದುಕೊಂಡು ಊಟಕ್ಕೆ ಹೋದೆ. ಊಟದ ಹಾಲ್‌ನೊಳಕ್ಕೆ ಹೋದಾಗ ಅದನ್ನು ಅಲ್ಲಿದ್ದ ಬಟ್ಲರನ ವಶಕ್ಕೆ ಕೊಟ್ಟೆ. ಇಂಥ ಮನುಷ್ಯನನ್ನು ಊಟಕ್ಕೆ ಕರೆದದ್ದು ತಪ್ಪೆಂದು ವ್ಹೀಲರ್ ಅವರನ್ನು ಕಮಿಟಿ ತರಾಟೆಗೆ ತೆಗೆದುಕೊಂಡಿತಂತೆ. ಈಗಲೂ ನನ್ನನ್ನು ಊಟಕ್ಕೆ ಕರೆಯಬೇಕಾಗಿ ಬಂದಾಗಲೆಲ್ಲ, 'ಎಲ್ವಿನ್ ಈಗ ಯಾವ ಉಡುಪು ಧರಿಸುತ್ತಾರೆ ?' ಎಂದು ವ್ಹೀಲರ್ ಕೇಳುತ್ತಾರಂತೆ.

ಒಮ್ಮೊಮ್ಮೆ ಅನೇಕ ದಿನಗಳವರೆಗೆ ನಾನು ಗಿರಿಜನರನ್ನಲ್ಲದೆ ಬೇರೆಯವರನ್ನು ನೋಡುವುದೇ ಕಷ್ಟವಾಗುತ್ತಿತ್ತು. ಒಂದು ವರ್ಷ ಪಟಾನ್‌ಘರ್‌ನಲ್ಲಿದ್ದ ಐದು ತಿಂಗಳು ಮಳೆಗಾಲದಲ್ಲಿ ಹೊರಪ್ರಪಂಚದ ಜನರನ್ನು ನೋಡಿದ್ದು ಕೇವಲ ಐದೇ ಮಂದಿ. ಶಾಮರಾವ್ ಇಲ್ಲದೆ ನಾನೊಬ್ಬನೇ ಸಂಚಾರ ಮಾಡಬೇಕಾಗಿ ಬಂದಾಗ, ಮೂರು ನಾಲ್ಕು ವಾರಗಳ ಕಾಲ ಇಂಗ್ಲಿಷಿನ ಒಂದು ಪದವನ್ನೂ ಮಾತನಾಡದ್ದು ಉಂಟು. ಇದು ನನಗೆ ಒಂಟಿತನದ ಬೇಸರವನ್ನುಂಟುಮಾಡಿದರೂ, ಒಂಟಿಯಾಗಿ ಬಾಳುವ ಜನರನ್ನು ಅರ್ಥಮಾಡಿಕೊಳ್ಳುವ ಅವಕಾಶ ಒದಗಿಸಿತು. ಇದರ ಜೊತೆಗೆ, ಬರೆಯಲೂ ಸಂಶೋಧನೆ ಮಾಡಲೂ ಸೊಗಸಾದ ಅವಕಾಶ ಸಿಕ್ಕಿತು. ಯಾವುದೋ ಕೆಲಸಕ್ಕೆ ಬಾರದ ಮಾತುಗಳಲ್ಲಿ ನಾವು ವ್ಯರ್ಥಮಾಡುತ್ತಿರುವ ಕಾಲವನ್ನು ನೆನೆಸಿಕೊಂಡರೆ ನನ್ನನ್ನು ವಕ್ರ ಎಂದು ಕರೆಯುವುದು ತಪ್ಪಷ್ಟೇ ಅಲ್ಲ. ನನ್ನ ಬಗ್ಗೆ ಅಂಥವರು ಹೊಟ್ಟೆಕಿಚ್ಚು ಪಟ್ಟುಕೊಳ್ಳಬೇಕಾಗುತ್ತದೆ ಎಂದು ನನ್ನ ಅಭಿಪ್ರಾಯ.

೧೯೩೧ರಿಂದ ೧೯೫೩ರ ವರೆಗಿನ ಬಹು ಕಾಲವನ್ನು ನಾನು ಹುಲ್ಲು ಗುಡಿಸಲುಗಳಲ್ಲಿ ಕಳೆದೆ. ಮೊದಮೊದಲಿಗೆ ತುಂಬಾ ಚಿಕ್ಕ ಗುಡಿಸಲುಗಳಲ್ಲಿ ಇರುತ್ತಿದ್ದೆ. ಹುಲ್ಲು ಗುಡಿಸಲಿನ ಅನುಕೂಲವೇನೆಂದರೆ, ನಮಗೆ ಸರಿಕಾಣದಾಗ ಒಂದು ಗೋಡೆ ತೆಗೆದು ಬೇಕಾದ ಹಾಗೆ ಬದಲಾಯಿಸಿಕೊಳ್ಳಬಹುದು; ಇಲ್ಲ, ಇಡೀ ಗುಡಿಸಲನ್ನೇ ಕಿತ್ತು ಬೇರೆ ಕಟ್ಟಿಕೊಳ್ಳಬಹುದು. ಮಳೆಗಾಲದಲ್ಲಿ ನೀರು ಅಲ್ಲಲ್ಲಿ

ತೊಟ್ಟಿಕ್ಕಿದರೂ ಬೇಸಗೆಯಲ್ಲಿ ತಣ್ಣಗಿರುತ್ತದೆ. ಅಲ್ಲದೆ ಮಳೆ ಹೊಯ್ಯುವಾಗ ತಗಡಿನ ಮನೆಯಲ್ಲಿ ಆಗುವ ಶಬ್ದ ಆಗುವುದಿಲ್ಲ. ನಾವಿದ್ದ ಗುಡಿಸಲುಗಳ ನೆಲವನ್ನು ದಿನಾ ಅಥವಾ ದಿನ ಬಿಟ್ಟು ದಿನಾ ಹಸುವಿನ ಸಗಣಿಯಿಂದ ಸಾರಿಸುತ್ತಿದ್ದೆವು. ಸಗಣಿಯಿಂದ ಸಾರಿಸದೆ ಇರುವ ಮನೆಗಳಲ್ಲಿರುವವರಿಗೆ ಇದು ವಿಚಿತ್ರವಾಗಿ ಕಾಣುತ್ತದೆ. ಆದರೆ ಸಗಣಿಯಿಂದ ಸಾರಿಸಿದರೆ ಸ್ಥಳ ನಿರ್ಮಲವಾಗುವುದಲ್ಲದೆ, ಮನಸ್ಸಿಗೆ ನೆಮ್ಮದಿಯೂ ಆಗುತ್ತದೆ. ಗಿರಿಜನರು ಇರುವ ಗುಡ್ಡಗಾಡುಗಳಲ್ಲಿ ಇರಬೇಕೆಂದು ಮನಸ್ಸು ಮಾಡಿದಲ್ಲಿ ಈ ರೀತಿ ಇರಬೇಕಾದ್ದು ಅನಿವಾರ್ಯವೂ ಹೌದು, ಒಳ್ಳೆಯದೂ ಹೌದು.

ಪುಟ್ಟ ಹಳ್ಳಿಯಾದ ಕಾರಂಜಿಯಾ ಎಂಬ ಸ್ಥಳ ಎಲ್ಲಿದೆ ಎಂದು ಪ್ರಪಂಚದ ಭೂಪಟದಲ್ಲಿಯೂ ಹುಡುಕುವುದು ಸುಲಭ. ಪಶ್ಚಿಮತೀರದ ಕಡಲಿಗೆ ಬೀಳುವ ನರ್ಮದಾ ನದಿಯ ಮುಖದಿಂದ ಸಾತ್ಪುರ ಗುಡ್ಡಗಳ ಪೂರ್ವದ ತಪ್ಪಲುಗಳಲ್ಲಿ, ಅದು ಹುಟ್ಟುವ ಪವಿತ್ರಸ್ಥಳದಿಂದ ಒಂದು ಕೂದಳೆಲೆಯಷ್ಟು ದೂರದಲ್ಲಿರುವುದೇ ಕಾರಂಜಿಯಾ. ನಾವು ಮೊದಲಿಗೆ ಇದ್ದ ಗುಡಿಸಲಿನ ಬಳಿ ಒಂದು ಗುಡ್ಡ, ಅಂದರೆ 'ಟಿಕೆರಾ' ಇದೆ. ಈ ಗುಡ್ಡದ ಮೇಲೆ ನಿಂತು ನೋಡಿದರೆ ಅಲ್ಲಿಂದ ಹನ್ನೊಂದು ಮೈಲಿ ದೂರದಲ್ಲಿರುವ ಅಮರ ಕಂಟಕ್ ಎಂಬ ಸ್ಥಳಕ್ಕೆ ಹೋಗುವ ದಾರಿ ಕಾಣಿಸುತ್ತದೆ. ಇಲ್ಲಿಯೇ ನರ್ಮದಾ ನದಿ ಹುಟ್ಟುವುದು. ಈ ಗುಡ್ಡದ ಮೇಲೆಯೇ ನಾವು ಮಣ್ಣು, ಬಿದಿರು ಮತ್ತು ಹುಲ್ಲಿನಿಂದ ಪುಟ್ಟ ಪುಟ್ಟ ಗುಡಿಸಲುಗಳನ್ನು ಕಟ್ಟಿದ್ದು. ಅದೇ ನಮ್ಮ 'ಆಶ್ರಮ'. ಆಗ ನಮ್ಮ ಸುತ್ತ ಮುತ್ತ ಅಭೇದ್ಯವಾದ ಕಾಡಿತ್ತು. ರಾತ್ರಿಯಲ್ಲಿ ಆ ಕಾಡಿನ ಮೌನವನ್ನು ಹುಲಿಯ ಗರ್ಜನೆಯೋ ಅಥವಾ ಅರಚುವ ಜಿಂಕೆಯ ಕೂಗೋ ಕಲಕುತ್ತಿತ್ತು.

ನಮ್ಮ ಸುತ್ತಮುತ್ತಣ ಜನ ಬಹುತೇಕ ಗೊಂಡ್ ಜನರು. ಅವರದು ದೊಡ್ಡ ಬುಡಕಟ್ಟು. ಮೂವತ್ತು ಲಕ್ಷ ಸಂಖ್ಯೆಯ ಈ ಜನ ಮಧ್ಯ ಇಂಡಿಯಾದಲ್ಲೆಲ್ಲಾ ಹರಡಿದ್ದಾರೆ. ಅವರನ್ನು ಮಲೇರಿಯಾ ಪೀಡಿತರಾದ ಛಿಂದ್‌ವಾರಾದ ಒಳಪ್ರಾಂತದಲ್ಲಿಯೂ, ಬೇತುಲ್ ನದಿಯ ಅಕ್ಕಪಕ್ಕದ ಮರಗಿಡಗಳ ಮಧ್ಯೆಯೂ, ಸಿಯೋನಿಯಾದ ಸುಂದರ ಗುಡ್ಡಗಳಲ್ಲಿಯೂ, ಬಾಲಾಘಾಟಿನ ಸತತ ಹಸುರುಕ್ಕುವ ಸಾಲ್ ಎಂಬ ಮರಗಳ ಕಾಡುಗಳಲ್ಲಿಯೂ, ಚಾಂದಾ ಎಂಬ ಅವರ ಪುರಾತನ ನಾಡಿನಲ್ಲಿಯೂ, ಬಸ್ತಾರ್ ಮತ್ತು ಆಂಧ್ರಾಗಳಲ್ಲಿಯೂ ಮತ್ತು ಮೈಕಲ್ ಗುಡ್ಡಗಳಲ್ಲಿಯೂ ಕಾಣಬಹುದು.

ಅವರು ಹೇಗೆ ಬಾಳುತ್ತಿದ್ದರೆಂಬುದು ಹದಿನಾಲ್ಕನೆಯ ಶತಮಾನದವರೆಗೂ ಗೊತ್ತಿರಲಿಲ್ಲ. ಗೊಂಡರ ಹೆಸರಾಂತ ಮಂತ್ರಗಾರನಾದ ಪಂಡಬಾಬಾ ಹೇಳುವಂತೆ, ಅವರು ದಕ್ಷಿಣದಿಂದ ಬಹುಶಃ ಗೋದಾವರಿ ನದಿಯ ಮೂಲಕ ಬಂದು ಮಧ್ಯಪ್ರಾಂತ ದಲ್ಲೆಲ್ಲಾ ಹರಡಿಕೊಂಡರು. ಅವರು ತಮಿಳು ಮತ್ತು ಕನ್ನಡ ಎರಡೂ ಸೇರಿದ ಒಂದು ಬಗೆಯ ಭಾಷೆಯನ್ನಾಡುತ್ತಾರೆ. ತಮ್ಮ ಮಕ್ಕಳಿಗೆ ಇಡುವ ವಿಚಿತ್ರ ಹೆಸರುಗಳಲ್ಲಿ

ಬೀರಿಕಟ್ಟೆ ಎಂಬುದೂ ಒಂದು. ಹದಿನಾಲ್ಕನೆಯ ಶತಮಾನದಲ್ಲಿ ಅವರು ಆಗ ಗೊಂಡವನ ಎಂದು ಕರೆಯಲ್ಪಡುತ್ತಿದ್ದ ಮಧ್ಯ ಇಂಡಿಯಾದ ಹಲವಾರು ಪ್ರದೇಶಗಳಲ್ಲಿ ರಾಜರಾಗಿ ಇದ್ದುದಾಗಿ ತಿಳಿದುಬರುತ್ತದೆ. ಅವರ ಆಡಳಿತ ಸುಖಾಶಾಂತಿಯಿಂದ ಕೂಡಿತ್ತೆಂದೂ, ದೇಶ ಸುಭಿಕ್ಷವಾಗಿತ್ತೆಂದೂ, ಕೆರೆ ಕಟ್ಟೆ ಬಾವಿಗಳನ್ನು ತೋಡಿಸಿದ್ದರಿಂದ, ಅರಮನೆಗಳ ತುಂಬ ಐಶ್ವರ್ಯ ತುಂಬಿತ್ತೆಂದೂ ಗೊತ್ತಾಗುತ್ತದೆ. ಚಾರಾಘರ್ ಕೋಟೆಯಲ್ಲಿ ಅಕ್ಬರನಿಗೆ ಚಿನ್ನದ ನಾಣ್ಯಗಳು ತುಂಬಿದ ನೂರು ಪಾತ್ರೆಗಳೂ ಬೇಕಾದಷ್ಟು ಒಡವೆಗಳೂ ಸಾವಿರ ಆನೆಗಳೂ ಸಿಕ್ಕಿದುವು. ಚಾಂದಾದ ರಾಜರುಗಳು ರಾಜೋಚಿತ ಸಮಾಧಿಗಳನ್ನು, ಸರೋವರಗಳನ್ನು ಮತ್ತು ಮನೆಗಳನ್ನು ಕಟ್ಟಿಸಿದರು. ಅವರ ನಗರಕ್ಕೆ ಏಳುಮೈಲಿ ಸುತ್ತ ಕೋಟೆ ಕಟ್ಟಿಸಿದರು. ದನಕರುಗಳು ಸಮೃದ್ಧಿಯಾಗಿದ್ದುವು. ರೈತರು ಸಹ ತಮ್ಮ ತೆರಿಗೆಗಳನ್ನು ಆನೆ ಮತ್ತು ಚಿನ್ನದ ಮೊಹರುಗಳ ರೂಪದಲ್ಲಿ ಕೊಡುತ್ತಿದ್ದರಂತೆ.

ಆದರೆ ಗೊಂಡ್ ರಾಜರುಗಳಲ್ಲಿ ಒಗ್ಗಟ್ಟಿರಲಿಲ್ಲ; ಯುದ್ಧಮಾಡುವ ಶಕ್ತಿ ಇರಲಿಲ್ಲ. ಹೀಗಾಗಿ ಹದಿನೆಂಟನೆಯ ಶತಮಾನದಲ್ಲಿ ಮಹಾರಾಷ್ಟ್ರ ಪಾಳೆಯಗಾರರ ಧಾಳಿಯ ಮುಂದೆ ಅವರು ನಿಲ್ಲಲಾರದೆ ಸೋತು ಹಿಮ್ಮೆಟ್ಟಿ ಕಾಡಿನ ಒಳಭಾಗದಲ್ಲಿ ಸೇರಿಕೊಂಡರು. ಹತ್ತೊಂಬತ್ತನೆಯ ಶತಮಾನದ ಆದಿಯಲ್ಲಿ ಅವರು ಪರಸ್ಪರ ಹೋರಾಡುವ ಗುಂಪುಗಳಾಗಿ ಒಡೆದುಹೋಗಿ, ಪ್ರಯಾಣಿಕರ ತಂಡಗಳನ್ನು ಕೊಳ್ಳೆಹೊಡೆದು ಸಣ್ಣ ಪುಟ್ಟ ಪಟ್ಟಣಗಳಿಗೆ ನುಗ್ಗಿ ಸಿಕ್ಕಿದ್ದನ್ನು ದೋಚಿಕೊಂಡು ಜೀವನ ನಡೆಸುತ್ತಿದ್ದರು. ಬ್ರಿಟಿಷರ ಆಡಳಿತದಲ್ಲಿ ಅವರು ತೆಪ್ಪಗಾಗಿ ಜಮೀನನ್ನು ಉತ್ತು ಬೇಸಾಯಮಾಡುವ ಕಸಬನ್ನು ಅವಲಂಬಿಸಿದರು.

ಅವರ ಈಗಿನ ಜೀವನ ಬೇಸಾಯವಾದರೂ, ಅವರು ಬೇರೊಬ್ಬರ ಶೋಷಣೆಗೆ ಗುರಿಯಾಗಿಬಿಟ್ಟರು. ವರ್ತಕರೂ ಹೆಂಡಮಾರವವರೂ ಅವರ ಮಧ್ಯೆ ಪ್ರವೇಶಿಸಿ, ಅವರಿಗೆ ಇಲ್ಲದ ಚಾಳಿಗಳನ್ನು ಕಲಿಸಿ ಅವರ ಸರಳತನವನ್ನು ತಮ್ಮ ಸ್ವಾರ್ಥಕ್ಕೆ ಉಪಯೋಗಿಸಿಕೊಂಡರು. ಅವರ ಜಮೀನನ್ನು ಕಿತ್ತುಕೊಂಡರು. ಬಡತನ ಅವರನ್ನು ಬೆನ್ನಟ್ಟಿಬಂತು. ಇಂದೂ ಅವರು ಆ ಬಡತನದಲ್ಲಿಯೇ ಬೇಯುತ್ತಿದ್ದಾರೆ.

ಈ ಕಾರಣ ಗೊಂಡಾ ಜನರ ಸಂಸ್ಕೃತಿ ಬಗ್ಗೆ ಏನಾದರೂ ಹೇಳುವುದು ಸುಲಭವಲ್ಲ. ಅದು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ವ್ಯತ್ಯಾಸವಿದೆ. ಈಗ ಏನಿದೆಯೋ ಅದು ಹಿಂದಿದ್ದುದರ ನೆರಳು ಮಾತ್ರ. ಗೊಂಡಾರಲ್ಲಿ ಈಗ ಕುಶಲಕಲೆ ಇಲ್ಲವೆಂದೇ ಹೇಳಬೇಕು. ನೇಯುವುದಿಲ್ಲ; ಮರದಲ್ಲಿ ಚಿತ್ರ ಕೊರೆಯುವುದಿಲ್ಲ. ಅವರ ಮಡಕೆ ಕುಡಿಕೆ, ಮಕ್ಕರಿ ಬುಟ್ಟಿಗಳು ಬೇರೆಯವರು ಮಾಡಿದವುಗಳು. ಅವರು ಬಹುಮಟ್ಟಿಗೆ ತಮ್ಮ ಅಕ್ಕಪಕ್ಕದ ಹಿಂದೂಗಳ ಮತವನ್ನೇ ಆಚರಿಸುತ್ತಾರೆ. ದ್ರಾವಿಡ ಭಾಷೆಯಾದ ಅವರ ನುಡಿಯನ್ನು ಅರ್ಧಕ್ಕಿಂತ ಕಡಮೆ ಜನ ಮಾತನಾಡುತ್ತಿದ್ದಾರೆ.

ಅವರ ಪೂರ್ವದ ಸಂಸ್ಕೃತಿ ಹೇಗಿತ್ತೆಂಬುದನ್ನು ಅವರ ಪುರಾಣ, ಅವರ ಹಿಂದಿನ ರಾಜರು ಹಾಗೂ ಶೂರರ ಪೌರಾಣಿಕ – ಇತಿಹಾಸ ಮತ್ತು ಈಗಲೂ ಇರುವ ಅವರ ಪರಿಣತ ಕುಣಿತ ಹಾಗೂ ಹಾಡಿನಲ್ಲಿ ನೋಡಬಹುದು. ಅವರದೇ ರಾಮಾಯಣ ಇದೆ. ಅದರಲ್ಲಿ ಲಕ್ಷ್ಮಣ ನಾಯಕ. ಇಡೀ ಕಥೆ ಸಂಗೀತದ ಶಕ್ತಿಯ ಸುತ್ತ ಹೆಣೆದುಕೊಂಡಿದೆ. ಲಕ್ಷ್ಮಣನ ಬಳಿ ಅದ್ಭುತವಾದ 'ಕಿಂಜ್ರಿ' (ಕಿಂದರಿ) ಇತ್ತು. ಅದರಿಂದ ಅವನು ಪ್ರೇಮಗೀತೆಗಳನ್ನು ನುಡಿಸುತ್ತಿದ್ದ. ನುಡಿಸುವುದನ್ನು ನಿಲ್ಲಿಸಿ ಕಿಂಜ್ರಿಯನ್ನು ಗೋಡೆಗೆ ನೇತುಹಾಕಿದರೆ ಸಾಕು, ಅದು ಕಣ್ಣೀರು ಸುರಿಸುತ್ತಿತ್ತು. ಆ ಸಂಗೀತಕ್ಕೆ ಮೋಹಿತಳಾಗಿ ಸ್ವರ್ಗದ ಇಂದ್ರಕಮಣಿ ಭೂಮಿಗೆ ಬಂದಳು. ಲಕ್ಷ್ಮಣನನ್ನು ಒಲಿಸಿಕೊಳ್ಳಲು ಎಷ್ಟೇ ಪ್ರಯತ್ನಪಟ್ಟರು ಆಕೆಯಿಂದ ಸಾಧ್ಯವಾಗಲಿಲ್ಲ. ಆದರೆ ರಾಮನಿಗೆ ಅನುಮಾನ ಬಂತು, ಆತ ಸೀತೆಯ ಮೇಲೆ ಕಣ್ಣಿಟ್ಟಿದ್ದಾನೆ ಎಂದು. ಆದ್ದರಿಂದ ರಾಮ, ಲಕ್ಷ್ಮಣನನ್ನು ಕಬ್ಬಿಣದ ಕೊಪ್ಪರಿಗೆಯಲ್ಲಿ ಹಾಕಿ ಬೇಯಿಸುವಂತೆ ಅಪ್ಪಣೆ ಮಾಡಿದ. ಆದರೆ ಕಿಂಜ್ರಿಯನ್ನು ಹಿಡಿದು ಹಾಡುತ್ತ ಕುಳಿತ ಲಕ್ಷ್ಮಣನಿಗೆ ಏನೂ ಆಗಲಿಲ್ಲ. ಎಂಟು ದಿವಸಗಳಾದಮೇಲೆ ಸುಖವಾಗಿ ಹೊರಗೆಬಂದ.

ಇವರಲ್ಲಿ 'ಭೀಮಸೇನ'ರೆಂಬ ಜನರಿದ್ದಾರೆ. ಇವರು ಹಾಡುತ್ತಾ ಕುಣಿಯುತ್ತಾ ಕಾಲ ಕಳೆಯುತ್ತಾರೆ. 'ಟುಮಾ' (ಬಹುಶಃ ಟುಮ್ರಿ) ಎಂಬ ವಾದ್ಯ ಬಾರಿಸುತ್ತಾರೆ. ರಾಮನಿಗೂ ಸೀತೆಗೂ ಒಂದು ಸಲ ಮನಸ್ತಾಪ ಆಯಿತು. ಆಗ ಮಹಾಕಾಯನಾದ ಭೀಮ ತನ್ನ ಮೈ ಕೊಳೆಯಿಂದ ಒಂದು ಸಣ್ಣ ಗೊಂಬೆ ಮಾಡಿದ. ಸೋರೆ ಬುರುಡೆ, ಬಿದಿರು, ಮೇಣ ಮತ್ತು ಬೀವು ಉಪಯೋಗಿಸಿ 'ಟುಮಾ' ಎಂಬ ವಾದ್ಯಮಾಡಿ ಆ ಗೊಂಬೆಗೆ ಕೊಟ್ಟ. ಗೊಂಬೆ ಅದನ್ನು ಬಾರಿಸುತ್ತಾ ಕುಣಿದು ಹಾಡಿತು. ಆ ಗೊಂಬೆಯ ಹಾಡನ್ನೂ ಕುಣಿತವನ್ನೂ ಕೇಳಿ ಸೀತೆಯ ಸಿಟ್ಟು ಇಳಿಯಿತು. ಅಂದಿನಿಂದ ಟುಮಾಕ್ಕೆ 'ಮೋಹನ್ ಬಾಬಾ' ಎಂಬ ಹೆಸರಾಯಿತು. ಆ ಗೊಂಬೆಯೇ ಪುಟ್ಟ ಭೀಮ. ಟುಮಾವೇ ಭೀಮರ ಹೊಲಮನೆ ಎಲ್ಲಾ.

ಒಂದು ಕಥೆಯಿದೆ : ಒಂದಾನೊಂದು ಕಾಲದಲ್ಲಿ ಗೊಂಡ್ ಜನರಲ್ಲಿ ಏಳು ಜನ ಅಣ್ಣತಮ್ಮಂದಿರಿದ್ದರಂತೆ. ಅವರು ತಮ್ಮ ದೇವರಾದ ಬುರಾಪೆನ್ನನ ಹಬ್ಬಮಾಡಿ ದೇವರ ಮುಂದೆ ಬೇಕುಬೇಕಾದ ಎಡೆ ಇಟ್ಟರಂತೆ. ಆದರೂ ದೇವರು ಪ್ರತ್ಯಕ್ಷ ಆಗಲಿಲ್ಲ. ಆಗ ಅವರು ಚಿಕ್ಕವನೊಬ್ಬನಿಗೆ ಹಾಡು ಎಂದು ಹೇಳಿದರು. ಅವನು ಒಪ್ಪಲಿಲ್ಲ. ಅವನಿಗೆ ಬೇಕಾದಷ್ಟು ಒಡವೆ ವಸ್ತುಗಳನ್ನು ಕೊಟ್ಟಾಗ ಒಪ್ಪಿದನು. ಸೋರೆಕಾಯಿ ಬುರುಡೆ, ಒಂದು ತುಂಡಮರ ಮತ್ತು ತನ್ನ ತಲೆಗೂದಲು – ಇಷ್ಟರಿಂದ ಏಕನಾದವನ್ನು ಮಾಡಿ ಆತ ಬಹಳ ಸೊಗಸಾಗಿ ಹಾಡಿದ. ಆಗ ದೇವರು ಮೆಚ್ಚಿ ಪ್ರತ್ಯಕ್ಷನಾಗಿ ಎಡೆಯನ್ನು ತೆಗೆದುಕೊಂಡನಂತೆ.

ಗೊಂಡ್ ಹಾಡುಗಳು ಸರಳ ಹಾಗೂ ಸಾಂಕೇತಿಕವಾಗಿವೆ. ನೆಲ ಆಕಾಶ ಕಾಡು ಬೆಟ್ಟ ನದಿಗಳನ್ನೂ, ಬಂದು ಹೋಗುವ ಋತುಗಳನ್ನೂ, ಮನುಷ್ಯನ ಕಷ್ಟಸುಖಗಳನ್ನೂ, ಮುಚ್ಚುಮರೆಯಿಲ್ಲದ ಮತ್ತು ನಾಚಿಕೆಯಿಲ್ಲದ ಪ್ರೇಮವನ್ನೂ

ಅವರ ಸ್ವಚ್ಛಂದ ಹಾಡುಗಳಲ್ಲಿ ಕಾಣಬಹುದು. ಕುಣಿಯುತ್ತಾ ಹಾಡುವ ಹಾಡುಗಳೇ ಹೆಚ್ಚು ಅವರಲ್ಲಿ. ಅವುಗಳಲ್ಲಿ ತುಂಬಾ ಸೊಗಸಾದುವುಗಳೆಂದರೆ ಅವರ ಕರ್ಮನೃತ್ಯಕ್ಕೆ ಸಂಬಂಧಪಟ್ಟ ಹಾಡುಗಳು. ಈ ಕರ್ಮನೃತ್ಯ ಮಧ್ಯ ಇಂಡಿಯಾದ ಮೂಲ ನಿವಾಸಿಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ವಸಂತ ಋತುವಿನಲ್ಲಿ ಮರಗಿಡಗಳು ಬೆಳೆಯುವುದನ್ನು ಸೂಚಿಸುತ್ತದೆ ಈ ನೃತ್ಯ. ಕೆಲವು ವೇಳೆ ಮರವನ್ನು ಊರಿನಲ್ಲಿ ನೆಟ್ಟು ಅದರ ಸುತ್ತ ಕುಣಿಯುವುದುಂಟು. ಡೋಲುಗಳ ಬಡಿತಕ್ಕೆ ಹೆಂಗಸರೂ ಗಂಡಸರೂ ಹಿಂದಕ್ಕೂ ಮುಂದಕ್ಕೂ ಕಾಲಿಡುತ್ತಾ ಕುಣಿಯುತ್ತಾರೆ. ಅನೇಕ ವೇಳೆ ರಾತ್ರಿಯಲ್ಲಿ ಕುಣಿಯುವುದುಂಟು. ಅಂತೂ ಕುಣಿಯುವುದರಲ್ಲಿ ತಲ್ಲೀನರಾಗಿಬಿಡುತ್ತಾರೆ.

ಇದೊಂದರಲ್ಲಿ ಈ ಜನಗಳಿಗೆ ಭಾರಿ ಆಸಕ್ತಿ. ಕುಣಿಯುವ ಹುಡುಗಿಯನ್ನು ಈ ಗೊಂಡ್‌ಜನ ಪ್ರಕೃತಿಯ ಕಾಣದ ಶಕ್ತಿಗೆ ಚಲಿಸುವ ಸುಂದರಮರಕ್ಕೆ ಹೋಲಿಸುತ್ತಾರೆ .

'ಸುಂದರವಾದ ಮರದ ಮೇಲೆ ಮೌನದ ಹಕ್ಕಿ ಕುಳಿತಿದೆ; ಆ ಮರವನ್ನು ಅಲ್ಲಾಡಿಸಿದರೆ ಹಕ್ಕಿ ಹಾಡುತ್ತದೆ – ಇದ ಹೇಳೊ ಜಾಣ' ಎಂದು ಒಗಟು ಕೇಳಿದರೆ, 'ಕುಣಿಯಲು ಹೋಗುವ ಹುಡುಗಿಯ ಕಾಲಿನ ಕಾಲಂದಿಗೆ ಕಾಣೊ' ಎಂದು ಉತ್ತರ ಬರುತ್ತದೆ.

ಈ ಗೊಂಡರ ಸಂಸ್ಕೃತಿ ಎಂಥದು ಎಂದು ಸುಲಭವಾಗಿ ಹೇಳುವುದಕ್ಕಾಗು ವುದಿಲ್ಲ ಎಂದೆನಷ್ಟೆ! ಆದರೆ ಸಂಸ್ಕೃತಿ ಎಂದರೇನು ? ಅದು ಕಲೆ, ಮತ, ಭಾಷೆ ಮತ್ತು ಸಂಪ್ರದಾಯಕ್ಕಿಂತ ಹೆಚ್ಚಿನದೇನು ? ಮುಖ್ಯವಾಗಿ ಶೀಲವನ್ನು ಅವಲಂಬಿಸುವ ನಿಜವಾದ ಸಂಸ್ಕೃತಿಯುಂಟು. ಈ ದೃಷ್ಟಿಯಲ್ಲಿ ನೋಡಿದರೆ ಗೊಂಡರು ಸುಸಂಸ್ಕೃತ ಜನರು ಎಂದು ಹೇಳಬಹುದು. ಅವರ ನಾಳದಲ್ಲಿ ರಾಜರಕ್ತ ಹರಿಯುತ್ತಿದೆ. ಎಂಥಾ ಬಡವರಾದರೂ ಅವರಲ್ಲಿ ಗಾಂಭೀರ್ಯ, ಹಾಸ್ಯ ಮನೋಭಾವ, ಎಂಥಾ ಆಪತ್ತನ್ನಾದರೂ ಎದುರಿಸುವ ಧೈರ್ಯ ಮುಂತಾದುವನ್ನು ಕಾಣಬಹುದು. ಭೂಮಿತಾಯಿಯ ಮಗನಾದ ರೈತ, ದೇವರು ಕೊಟ್ಟದ್ದನ್ನು ಉಂಡು ಉಳಿಯುವ ಒಕ್ಕಲಿಗ ಈ ದೃಷ್ಟಿಯಲ್ಲಿ ಕುತರ್ಕದ ಮೇಧಾವಿಗಿಂತ ನಿಜವಾದ ಸುಸಂಸ್ಕೃತ.

ಗೊಂಡರಲ್ಲದೆ ತಮ್ಮ ಪುರಾಣ ಕಥೆಗಳನ್ನು ಹಾಡಿನಲ್ಲಿ ಹಾಡಿಕೊಂಡು ಬಂದಿರುವ ಆ ಮನಸೆಳೆಯುವ 'ಪರ್ಧಾನ್' ರೂ, ಅವರಿಗಿಂತ ಕಾಡುಜನರಾದ 'ಬೈಗಾ'ರೂ ಮತ್ತು 'ಅಗರಿಯಾ'ರೂ ಇದ್ದರು. ನಾವಿದ್ದ ಕಡೆ ಇದ್ದವರು ವಿಹಾರಿಗಳು ಹೇಳುವಂಥ ಬಣ್ಣಬಣ್ಣದ ಜನ ಆಗಿರಲಿಲ್ಲ. ಇವರೆಲ್ಲಾ ತಮ್ಮ ಮಾತೃಭಾಷೆಯನ್ನೇ ಕಳೆದುಕೊಂಡಿದ್ದರು. ಪೂರ್ವ ಇಂಡಿಯಾದ ಜನರೊಡನೆ ಹೋಲಿಸಿದರೆ ಇವರನ್ನು ಆದಿವಾಸಿಗಳೆಂದು ಕರೆಯುವಂತಿಲ್ಲ. ಅಲ್ಲದೆ, ಕಾರಂಜಿಯಾದಲ್ಲಿ ನಾನಾ ಬಗೆಯ ಜನರು ಸೇರಿಕೊಂಡಿದ್ದರು. ನಾನಾ ಜಾತಿಯ ಹಿಂದೂಗಳೂ ಕೆಲವು ಮಹಮ್ಮದೀ ಯರೂ ಇದ್ದರು. ಈ ಕಾರಣ ನಾವು ಆರಂಭದಿಂದಲೆ ಗಿರಿಜನರಲ್ಲಿ ಆಸಕ್ತಿವಹಿಸಲಿಲ್ಲ. ಬಡವರೂ ಶೋಷಿತರೂ ಆಗಿದ್ದ ಎಲ್ಲರನ್ನು ನಾವು ನೋಡಿಕೊಳ್ಳಬೇಕಾಗಿತ್ತು.

ನಮ್ಮ ಉದ್ದೇಶ, ಜನರ ಸೇವೆಗಾಗಿ ಸಿದ್ಧರಾಗಿರುವವರ ಒಂದು ತಂಡವನ್ನು ಕಟ್ಟಿ, ಗಾಂಧಿ ಮತ್ತು ಫ್ರಾನ್ಸಿಸ್ಕನ್ ಮಾರ್ಗದಲ್ಲಿ ನಮ್ಮ ಜೀವನವನ್ನು ನಡೆಸಿಕೊಂಡು ಹೋಗಬೇಕೆಂಬುದೇ ಆಗಿತ್ತು. ನಾವು ಬರುಬರುತ್ತಾ ಒಂದು ತಂಡವನ್ನು ಕಟ್ಟಿದೆವು. ಇದರಲ್ಲಿ ಎರಡು ಮೂರು ಜನ ಕ್ರೈಸ್ತರು, ಒಬ್ಬ ಮಹಮ್ಮದೀಯ, ಕೆಲವು ಹಿಂದೂಗಳೂ ಮತ್ತು ಸ್ಥಳದ ಕೆಲವು ಜನ ಗಿರಿಜನರೂ ಇದ್ದರು. ಇವರು ತಮ್ಮ ತಮ್ಮ ಮತವನ್ನು ಆಚರಿಸುವುದಕ್ಕೆ ಯಾವ ಅಡ್ಡಿಯೂ ಇರಲಿಲ್ಲ. ಸಬರ್ಮತಿ ಆಶ್ರಮದ ರೀತಿಯಲ್ಲಿ ನಾವು ದಿನವಹಿ ಪ್ರಾರ್ಥನೆ ನಡೆಸುತ್ತಿದ್ದೆವು. ಈ ಸಂಘವನ್ನು ಮೊದಲು 'ಗೊಂಡ ಸೇವಾ ಮಂಡಲ' ಎಂದು ಕರೆದೆವು. ಅನಂತರ ೧೯೪೯ರಲ್ಲಿ ಇದನ್ನು "Tribal Welfare and Research Unit (Twaru)' (ಗಿರಿಜನ ಕಲ್ಯಾಣ ಮತ್ತು ಸಂಶೋಧನಾ ಕೇಂದ್ರ) ಎಂದು ಬೇರೆ ಹೆಸರಿನಿಂದ ಕರೆದೆವು.

ಈ ಸಂಘದ ಜೀವ ಎಂದರೆ ಶಾಮರಾವ್. ಇವರು ಕಾರಂಜಿಯಾಕ್ಕೆ ಬಂದ ಮೇಲೆ ಬೇರೆ ವ್ಯಕ್ತಿಯಾಗಿಬಿಟ್ಟರು. ತಮ್ಮ ನಡೆನುಡಿಯಿಂದ ಜನರ ಪ್ರೀತಿವಿಶ್ವಾಸಗಳನ್ನು ಗಳಿಸಿದರು. ಜನರು ಇವರನ್ನು 'ಭೋಟಾ ಭಾಯಿ' ಎಂದು ಕರೆಯುತ್ತಿದ್ದರು. ಏನಾದರೊಂದು ತೊಂದರೆ ತಾಪತ್ರಯಗಳಾದರೆ ಭೋಟಾ ಭಾಯಿಯ ಬಳಿಗೆ ಬರುತ್ತಿದ್ದರು. ಶಾಮರಾವ್‌ಗೆ ಯಾವ ಕೆಲಸವೂ ಸಣ್ಣದಾಗಿರಲಿಲ್ಲ; ಯಾರೂ ಸಣ್ಣವರಾಗಿರಲಿಲ್ಲ. ಎಂಥವನೇ ಆಗಲಿ ಅವನನ್ನು ಕರುಣೆಯಿಂದ ಕಂಡು, ಅವನ ಕಷ್ಟವನ್ನು ಅರ್ಥಮಾಡಿಕೊಂಡು ತಮ್ಮ ಕೈಲಾದ ಸೇವೆಮಾಡುತ್ತಿದ್ದರು.

ಕಳೆದ ಎಂಟು ವರ್ಷಗಳಲ್ಲಿ ಅವರೂ ಅವರ ಪತ್ನಿ ಕುಸುಮಳೂ ಕೈಯಲ್ಲಿ ಕಾಸಿಲ್ಲದಿದ್ದರೂ ನಿರಾಶೆ ಆದರೂ ನೂರಾರು ಬಡಬಗ್ಗರಿಗೆ ತಮ್ಮ ಕೈಲಾದ ಸೇವೆ ಸಲ್ಲಿಸಿದ್ದಾರೆ. ಜನರ ಮಧ್ಯೆ ಇದ್ದರೇ ಶಾಮರಾವ್‌ಗೆ ಸಮಾಧಾನ.

ನಮ್ಮ ಆಶ್ರಮದಲ್ಲಿ ಗೊಂಡಾ ರೀತಿಯ ಮನೆಗಳಂಥ ಮನೆಗಳನ್ನು ಕಟ್ಟಿದ್ದೆವು. ಆದರೆ ನಮ್ಮ ಆಶ್ರಮ ಆದರ್ಶರೀತಿಯಲ್ಲಿತ್ತು. ಗುಡಿಸಲುಗಳನ್ನು ಸ್ವಚ್ಛವಾಗಿಟ್ಟಿದ್ದೆವು. ಸಾಕಷ್ಟು ಗಾಳಿ ಬೆಳಕು ಬರುವಂತೆ ಮಾಡಿದ್ದೆವು. ಎಲ್ಲೆಲ್ಲೂ ಹೂವು ಮತ್ತು ಹಣ್ಣಿನ ಗಿಡಗಳಿದ್ದುವು. ದನಕರುಗಳಿಗೆ, ಕೋಳಿಕೊಕ್ಕರೆಗಳಿಗೆ ಬೇರೆ ಜಾಗ. ಕಸಕಡ್ಡಿ ಹಾಕಲು ಬೇರೆ ಗುಂಡಿ. ಆಶ್ರಮಕ್ಕೆ ಬಂದ ಗೊಂಡಾ ಜನರಿಗೆ ತಾವು ತಮ್ಮ ಮನೆಗಳಿಗೇ ಬಂದೆವೆಂಬ ಭಾವನೆ ಬಂದರೂ, ಇಲ್ಲಿ ಕಾಣುತ್ತಿದ್ದ ಅಂದಚೆಂದವನ್ನು ಕಂಡು ಕಲಿತುಕೊಂಡು ಹೋಗಬೇಕೆಂದು ಅನ್ನಿಸುವಂತಿತ್ತು.

ನಮ್ಮ ಆಶ್ರಮವಿದ್ದ ಸ್ಥಳಕ್ಕೆ ಗುಡ್ಡದ ಮೆಟ್ಟಿಲು ಹತ್ತಿ ಬರಬೇಕಾಗಿತ್ತು. ಹಾಗೆ ಬಂದರೆ ಮೊಟ್ಟಮೊದಲು ಸಿಕ್ಕುತ್ತಿದ್ದುದು ಸೆಂಟ್ ಫ್ರಾನ್ಸಿಸ್ ಪ್ರಾರ್ಥನಾಮಂದಿರ. ಇದು ಕ್ರೈಸ್ತ ಜನರ ಪೂಜಾಮಂದಿರ. ಇದನ್ನು ಬಿದಿರು ಮತ್ತು ಮಣ್ಣಿನಿಂದ ಮಾಡಿದ ತಟ್ಟೆಗಳಿಂದ ಕಟ್ಟಿದ್ದೆವು. ಮುಂಭಾಗದಲ್ಲಿ ಕೆಲವು ಕೋಣೆಗಳಿದ್ದುವು. ನಮ್ಮ ಪುಸ್ತಕಗಳನ್ನು ಇಲ್ಲಿ ಇಟ್ಟಿದ್ದೆವು. ನಮ್ಮ ಬಹುಕಾಲವನ್ನು ಇಲ್ಲಿ ಕಳೆಯುತ್ತಿದ್ದೆವು.

ಈ ಪ್ರಾರ್ಥನಾ ಮಂದಿರ ಮತ್ತು ಆವರಣದ ಗೋಡೆಕಟ್ಟಲು ನಮಗೆ ನೂರು ರೂಪಾಯಿ ಆಯಿತು. ಆಗ ಹೆಣ್ಣಾಳಿಗೆ ಎರಡೂವರೆ ಆಣೆ, ಗಂಡಾಳಿಗೆ ಮೂರುವರೆ ಆಣೆ ಕೂಲಿ. ಈ ಕೂಲಿ ದರವನ್ನು ಮೂರಾಣೆ ಮತ್ತು ನಾಲ್ಕಾಣೆಗೆ ಹೆಚ್ಚಿಸಿದೆವು. ಇದು ಸ್ಥಳದ ಅಧಿಕಾರಿಗಳೂ ವರ್ತಕರಿಗೂ ಕಣ್ಣು ಕೆಂಪಗೆ ಮಾಡಿತು. ಆಗ್ಗೆ ಒಂದು ರೂಪಾಯಿಗೆ ಇಪ್ಪತ್ತು ಸೇರು ಬತ್ತ. ಆದ್ದರಿಂದ ಒಂದಾಣೆ ಎಂದರೆ ಇಂದಿಗಿಂತ ಎಷ್ಟೋ ಹೆಚ್ಚು ಬೆಲೆಯಾಗುತ್ತಿತ್ತು.

ಗುಡ್ಡವನ್ನು ಹತ್ತಿ ತಣ್ಣನೆಯ ದಾರಿಯಲ್ಲಿ ಮುಂದೆ ನಡೆದರೆ ನಮ್ಮ ಆಸ್ಪತ್ರೆ– ಹೆಸರು 'ಪ್ರೇಮಯತ್ನ'– ಸಿಕ್ಕುತ್ತಿತ್ತು. ಇಲ್ಲಿ ಸಾಕಾದಷ್ಟು ಔಷಧಿಗಳನ್ನು ಇಟ್ಟಿದ್ದೆವು. ಸುಮಾರು ನಲವತ್ತು ಮೈಲಿ ದೂರದಿಂದ ಹಳ್ಳಿಯವರು ಈ ಆಸ್ಪತ್ರೆಗೆ ಬರುತ್ತಿದ್ದರು. ಎಪ್ಪತ್ತು ಮೈಲಿ ಹೆದ್ದಾರಿಯಲ್ಲಿ ಇದ್ದುದು ಇದೊಂದೇ ಆಸ್ಪತ್ರೆ. ಕೊಂಚ ಒಳಭಾಗಕ್ಕೆ ಹೋದರೆ ಸಿಕ್ಕುವ ಒಂದು ಸರ್ಕಾರಿ ಆಸ್ಪತ್ರೆಯನ್ನು ಬಿಟ್ಟರೆ ಇದ್ದುದು ಇದೊಂದು ಚಿಕಿತ್ಸಾಲಯ.

ಮುಂದೆ ಸಿಕ್ಕುತ್ತಿದ್ದುದು ಅಡಿಗೆ ಮನೆ, ಊಟದ ಮನೆ, ಉಗ್ರಾಣ ಮತ್ತು ತರಕಾರಿ ತೋಟ. ನಮ್ಮ ಮನೆಗಳ ಸುತ್ತೆಲ್ಲಾ ಮಾವು ಬಾಳೆ ಘರಂಗಿ ಕಿತ್ತಳೆ ಅಂಜೂರ ನಿಂಬೆ ಗೋವಾ ಹಣ್ಣುಗಳನ್ನು ಬೆಳೆಸಿದ್ದವು. ಬೀಜಗಳನ್ನೂ ಸಸಿಗಳನ್ನೂ ಹಳ್ಳಿಯವರಿಗೆ ಹಂಚುತ್ತಿದ್ದೆವು. ಅಡಿಗೆ ಮನೆ ಬಳಿ ಅತಿಥಿಗೃಹವಿತ್ತು. ಹೆಸರು 'ಮಿತ್ರಾಲಯ' ಎಂದು.

ಇನ್ನೂ ಸ್ವಲ್ಪ ಮುಂದೆ ಹೋದರೆ ನಮ್ಮ ವಸ್ತುಸಂಗ್ರಹಾಲಯ ಸಿಕ್ಕುತ್ತಿತ್ತು. ಇಲ್ಲಿ ಚಿತ್ರಗಳೂ ಸರಳವಾದ ಪುಸ್ತಕಗಳೂ ಆಟದ ಸಾಮಾನುಗಳೂ ಮತ್ತು ಒಂದು ಆಟದ ರೈಲೂ ಇದ್ದುವು. ಇದು ಎಲ್ಲರಿಗೂ ಭಾರಿ ಮೆಚ್ಚಿಗೆಯಾಗಿತ್ತು. ಇದಾದನಂತರ ಸಿಕ್ಕುತ್ತಿದ್ದುದು ನಮ್ಮ ಶಾಲೆ ಮತ್ತು ವಿದ್ಯಾರ್ಥಿನಿಲಯ. ಈ ಶಾಲೆಯಲ್ಲಿ ನೂರೈವತ್ತು ಹುಡುಗರು ಓದಬಹುದಿತ್ತು. ವಿದ್ಯಾರ್ಥಿನಿಲಯದಲ್ಲಿ ಐವತ್ತು ಹುಡುಗರು ಇರಬಹುದಿತ್ತು. ಬಾಲಕ – ಬಾಲಕಿಯರೆಲ್ಲ ಒಟ್ಟಿಗೆ ಈ ಶಾಲೆಯಲ್ಲಿ ಓದುತ್ತಿದ್ದರು. ಅಲ್ಲಿಯೇ ಒಂದು ಬಡಗಿ ಮನೆ ಮತ್ತು ದರ್ಜಿ ಅಂಗಡಿ ಇದ್ದುವು.

ಇಲ್ಲಿಂದ ಮುಂದೆ ಹೋದರೆ ಕುಷ್ಠರೋಗಿಗಳ ಚಿಕಿತ್ಸೆಗೋಸ್ಕರ ಮೀಸಲಾಗಿದ್ದ ಗುಡಿಸಲು ಇತ್ತು. ಇಲ್ಲಿ ಹದಿನೈದು ಹದಿನಾರು ಕುಷ್ಠರೋಗಿಗಳಿರುತ್ತಿದ್ದರು.

ಇದು ನಮ್ಮ ಕೇಂದ್ರ ಆಶ್ರಮ. ಇದರ ಸುತ್ತಮುತ್ತಣ ಕಣಿವೆ ಕಂದರಗಳಲ್ಲಿ ಎಂಟು ಹತ್ತು ಮೈಲಿ ಸುತ್ತಳತೆಯಲ್ಲಿ ಆಶ್ರಮದ ಎಂಟು ಶಾಖೆಗಳಿದ್ದುವು. ಈ ಪ್ರತಿಯೊಂದು ಶಾಖೆಯಲ್ಲಿಯೂ ಒಬ್ಬ ಕೆಲಸಗಾರನಿರುತ್ತಿದ್ದ. ಪ್ರತಿಯೊಂದು ಆಶ್ರಮದಲ್ಲಿ ಒಂದು ಶಾಲೆ, ಹಿಂದೀ ಪುಸ್ತಕಭಂಡಾರ, ಪುಟ್ಟ ಆಸ್ಪತ್ರೆ ಇರುತ್ತಿದ್ದುವು. ವಾರಕ್ಕೊಂದು ಸಲ ಆಶ್ರಮದಲ್ಲಿದ್ದವರೆಲ್ಲ ಸಭೆ ಸೇರುತ್ತಿದ್ದರು. ಮಾದರಿ ತರಗತಿಗಳನ್ನು

ನಡೆಸುತ್ತಿದ್ದವು. ಮುಂದಿನವಾರ ಏನು ಕೆಲಸ ನಡೆಸಬೇಕೆಂಬ ತೀರ್ಮಾನ ಮಾಡುತ್ತಿದ್ದೆವು. ಈ ಎಲ್ಲಾ ಶಾಲೆಗಳಲ್ಲಿ ಮುನ್ನೂರು ನಾನೂರು ಹುಡುಗರು ಓದುತ್ತಿದ್ದರು.

ಆಗ್ಗೆ ಮಧ್ಯ ಇಂಡಿಯಾದ ಗಿರಿಜನರಲ್ಲಿ ರತಿರೋಗ (venereal disease) ಮನೆಮಾಡಿಕೊಂಡಿತ್ತು. ಮೋಹರೋಗ (syphilis) ತೀರಾ ಕಡಮೆ. ಇದ್ದರೂ ಅಷ್ಟೇನೂ ವಿಪರೀತವಾಗಿ ಜನಗಳನ್ನು ಕಾಡಿಸುತ್ತಿರಲಿಲ್ಲ. ಈ ಜನಗಳು ಮಲೇರಿಯಾ ಕಾಯಿಲೆಯಿಂದ ನರಳುತ್ತಿದ್ದುದರಿಂದ ರತಿರೋಗ ಇಲ್ಲಿ ಉಲ್ಬಣವಾಗಲು ಕಾರಣ ವಾಯಿತು ಎಂದು ಅನ್ನಿಸುತ್ತಿದೆ. ನಮಗೆ ಭಾರಿ ಹೆದರಿಕೆಯನ್ನುಂಟುಮಾಡಿದ್ದು ಮತ್ತೊಂದು ತರದ ಮೋಹರೋಗ (gonorrhoea). ಮೆಚ್ಚಿ ಮದುವೆಯಾಗಿ ಸುಖವಾಗಿ ಬಾಳಬೇಕೆಂದಿದ್ದ ಹೆಣ್ಣು ಗಂಡಿಗೆ ಈ ಕಾಯಿಲೆ ಅಂಟಿಕೊಂಡು ಅವರನ್ನು ಪೀಡಿಸುತ್ತಿತ್ತು. ಈಗಲೂ ಕೆಲವು ಜನ ಹೇಳುತ್ತಾರೆ. ಈ ಕಾಯಿಲೆಗಳು ಬರದಂತೆ ಮಾಡುವುದು ಮತ್ತು ಕಾಯಿಲೆ ಬಂದಮೇಲೆ ಗುಣಪಡಿಸುವುದು– ಇವೆರಡೂ ನೈತಿಕ ದೃಷ್ಟಿಯಿಂದ ತಪ್ಪು ಎಂದು. ಹಾಗೆ ಮಾಡಿದಲ್ಲಿ ಪಾಪ ಸುಲಭವಾಗಿಬಿಡುತ್ತದೆ ಎಂದು ಅವರ ವಾದ. ಆದರೆ ಈ ವಾದವನ್ನು ನಾನು ಒಪ್ಪುವುದಿಲ್ಲ. ನಕ್ಕು ನಲಿಯುವ ಯುವಕ ಯುವತಿಯರು ಸುಖವಾಗಿ ಬಾಳಲು ಈ ಕಾಯಿಲೆಯ ನಿರ್ಮೂಲನೆ ಅತ್ಯಾವಶ್ಯಕವೆಂದು ನನ್ನ ಭಾವನೆ. ಅಂತೂ ನಾವು ಸಾವಿರಾರು ಜನರನ್ನು ಇದರಿಂದ ಗುಣಪಡಿಸಿದೆವು.

ಜನಗಳ ರೋಗರುಜಿನಗಳನ್ನು ವಾಸಿಮಾಡಿ, ಅವರಿಗೆ ತಿಳುವಳಿಕೆ ಕೊಟ್ಟು, ಅವರು ಹೆಚ್ಚು ಸಂಪಾದನೆ ಮಾಡುವ ಮಾರ್ಗಗಳನ್ನು ಹೇಳಿಕೊಡುತ್ತಿದ್ದೆವು. ಇವೆಲ್ಲಕ್ಕಿಂತ ಹೆಚ್ಚಾಗಿ ನಾವು ಅವರ ಮನೋಭಾವನೆಯನ್ನು ಬದಲಾಯಿಸಬೇಕಾಗಿತ್ತು. 'ಅಯ್ಯೋ, ದೇವರು ಇಟ್ಟಂಗೆ ಇದ್ದರಾಯಿತು; ಹುಟ್ಟಿದ ದೇವರು ಹುಲ್ಲು ಮೇಯಿಸೋದಿಲ್ಲ' ಎಂಬ ಭಾವನೆಯನ್ನು ನಾವು ಹೋಗಲಾಡಿಸಬೇಕಾಗಿತ್ತು.

ಬರಬರುತ್ತಾ ಜನ ತಿಳುವಳಿಕೆಯಲ್ಲಿ ಆಸಕ್ತರಾಗುತ್ತಾ ಬಂದರು. ತಮ್ಮ ಹಕ್ಕು ಬಾಧ್ಯತೆಗಳೇನೆಂಬುದನ್ನು ಅರಿಯಲಾರಂಭಿಸಿದರು. ಸ್ವಾತಂತ್ರ್ಯ ಬಂದ ನಂತರ ಒಬ್ಬ ಗೊಂಡಾ ಹೆಂಗಸನ್ನು ಪೊಲೀಸ್ ಸ್ಟೇಷನ್ನಿನಲ್ಲಿ ಸಬ್‌ಇನ್ಸ್‌ಪೆಕ್ಟರ್ ಗದರಿಸಿದಾಗ, ಆಕೆ ಇದು ನಮ್ಮ ಪೊಲೀಸ್ ಸ್ಟೇಷನ್, ನಿಮ್ಮದಲ್ಲ ಎಂದು ಹೇಳಿದಳಂತೆ. ಇನ್ನೊಂದು ಸಲ ಒಬ್ಬ ಬ್ರಾಹ್ಮಣ ರೆವೆನ್ಯೂ ಅಧಿಕಾರಿ ಗೊಂಡಾನೊಬ್ಬನನ್ನು ಕುರಿತು ಮಕ್ಕಳನ್ನು ಓದಿಸುವುದರಿಂದ ಉಪಯೋಗವಿಲ್ಲ ಎಂದು ಹೇಳಿದಾಗ, ಆ ಗೊಂಡಾ 'ನೀವು ಹೇಳಬೇಕಾದ್ದೇ, ಬಿಡಿ ! ನಮ್ಮ ಮಕ್ಕಳು ಓದಿದರೆ ನಿಮ್ಮ ಮಕ್ಕಳ ಕೆಲಸಕ್ಕೆ ಕಲ್ಲು ಬೀಳುತ್ತೆ' ಎಂದು ಜವಾಬು ಕೊಟ್ಟನಂತೆ.

ಕಾರಂಜಿಯಾದ ನನ್ನ ಈ ಆರಂಭದ ಜೀವನವನ್ನು Leaves from the Jungle (ಕಾಡಿನ ಎಲೆಗಳು) ಎಂಬ ಗ್ರಂಥದಲ್ಲಿ ವರ್ಣಿಸಿದ್ದೇನೆ. ಈ ಗ್ರಂಥಕ್ಕೆ

ರೊಮೈನ್ ರೊಲ್ಯಾಂಡರು ಮುನ್ನುಡಿ ಬರೆದರು. ಇದನ್ನು ೧೯೩೬ರಲ್ಲಿ ಜಾನ್ ಮರ್‍ರೆ ಎಂಬುವರು ಪ್ರಕಟಿಸಿದರು.

ನಮಗೆ ಪ್ರಾಣಿಗಳನ್ನು ಕಂಡರೆ ತುಂಬಾ ಇಷ್ಟವಾಗಿತ್ತು. ನಮ್ಮ ಬಳಿ ಚಿಕ್ಕ ಚಿರತೆ ಮರಿ ಇತ್ತು. ಇದನ್ನು ನೋಡಲು ಸ್ಥಳದ ಜನರು ಬಂದುಹೋಗುತ್ತಿದ್ದರು. ಇದಕ್ಕೆ ಬೇರೆ ಒಂದು ಮನೆ ಮಾಡಿದ್ದೆವು. ಇದು ಎಷ್ಟು ಸಾಧುವಾಗಿತ್ತೆಂದರೆ ನಾನು ಇದರ ಮನೆಯೊಳಕ್ಕೆ ಹೋದರೆ ನನ್ನನ್ನು ಅಪ್ಪಿಕೊಳ್ಳುತ್ತಿತ್ತು. ಒಮ್ಮೆ ನಾವು ಎಲ್ಲಿಯೋ ಹೋಗಿದ್ದಾಗ ಇದು ತಪ್ಪಿಸಿಕೊಂಡು ಬಿಟ್ಟು ಕುಷ್ಠರೋಗಿಗಳಿದ್ದ ಕಡೆ ಹೋಗಿ ರೋಗಿಯೊಬ್ಬನ್ನು ಅಪ್ಪಿಕೊಳ್ಳಲು ಹೋಯಿತಂತೆ. ಅಲ್ಲಿದ್ದವರಲ್ಲಿ ಒಬ್ಬನು ಹೆದರಿ ತನ್ನ ಬಳಿ ಇದ್ದ ಬಂದೂಕದಿಂದ ಇದನ್ನು ಸಾಯಿಸಿಬಿಟ್ಟ.

ಇದಲ್ಲದೆ ನಮ್ಮ ಬಳಿ ಹುಲ್ಲೆ ಮತ್ತು ಬೊಗಳುವ ಜಿಂಕೆಗಳು ಇದ್ದುವು. ಪಕ್ಷಿಗಳಲ್ಲಿ ಟರ್ಕಿಕೋಳಿ, ಬಾತು, ಪಾರಿವಾಳ, ಗಿಣಿ, ಕೋಳಿ ಇದ್ದುವು. ಬಾತು ದೊಡ್ಡ ಮೊಟ್ಟೆಯೊಂದನ್ನು ಹಾಕಿದ ಕೂಡಲೆ ಹಾವೊಂದು ಅದನ್ನು ಗೊಳಕ್ಕೆಂದು ನುಂಗಿಬಿಡುತ್ತಿತ್ತು. ಒಂದು ದಿನ ರಾತ್ರಿ ಅದು ಕೋಳಿ ಮನೆಗೆ ನುಗ್ಗಿ ಕೋಳಿಮರಿಗಳನ್ನು ನುಂಗಿ ತಾಯಿಕೋಳಿಯನ್ನು ಕಚ್ಚಿತು. ನಾನು ಎದ್ದು ಕೈಗೆ ಕತ್ತಿ ತೆಗೆದು ಕೊಳ್ಳುವುದರೊಳಗೆ ಅದು ನಾಪತ್ತೆಯಾಯಿತು.

ಮೊಲಗಳನ್ನೂ ಪಾರಿವಾಳಗಳನ್ನೂ ವಿದ್ಯಾರ್ಥಿನಿಲಯದ ಹುಡುಗರಿಗೆ ಸಾಕಲು ಕೊಟ್ಟೆವು. ಆದರೆ ಅವರು ರಾತ್ರಿ ಹೊತ್ತು ಅವನ್ನು ಹಿಡಿದುಕೊಂಡು ಕಾಡಿನೊಳಕ್ಕೆ ಹೋಗಿ ಬೇಯಿಸಿ ತಿಂದುಬಿಡುತ್ತಿದ್ದರು. ಹೀಗೆ ಮಾಡಿ 'ಹುಲಿ ಬಂದು ಮೆಲ್ಲನೆ ಅವನ್ನು ಹಿಡಿದು ತಿಂದಿತು' ಎಂಬ ಸುದ್ದಿ ಹಬ್ಬಿಸುತ್ತಿದ್ದರು. ಆದರೆ ನಮಗೆ ನಿಜಾಂಶ ಗೊತ್ತಾದಾಗ ಅವರಿಗೆ ಕೊಟ್ಟಿದ್ದ ಉಳಿದ ಪ್ರಾಣಿಗಳನ್ನು ವಾಪಸ್ಸು ತೆಗೆದುಕೊಂಡೆವು.

ನಮ್ಮ ಬಳಿ ಬೆಟ್ಟದ ಅಳಿಲು ಮತ್ತು ಕೊಕ್ಕರೆ ಇದ್ದುವು. ಅಳಿಲು ಮರದಿಂದ ಇಳಿದುಬಂದು ಹೆಗಲಮೇಲೆ ಕುಳಿತು ನನ್ನ ಜೊತೆ ಟೀ ಕುಡಿಯುತ್ತಿತ್ತು. ಶಾಮರಾವನನ್ನು ಕಂಡರೆ ಕೊಕ್ಕರೆಗೆ ಇಷ್ಟ. ಒಮ್ಮೆ ಅದು ಆಸ್ಪತ್ರೆಗೆ ಹೋಗಿ ಅಮೋನಿಯಂ ನೈಟ್ರೇಟ್ ತಿಂದುಬಿಟ್ಟಿತು. ಅದರಿಂದ ಅದಕ್ಕೆ ತೊಂದರೆಯಾಗುವ ಬದಲು ಅನುಕೂಲವೇ ಆಯಿತು. ನಾನು ಟೈಪುಮಾಡುತ್ತಿರುವಾಗ ಅದು ಬಂದು ನನ್ನ ಪಕ್ಕದಲ್ಲಿ ನಿಂತುಕೊಳ್ಳುತ್ತಿತ್ತು. ಒಮ್ಮೊಮ್ಮೆ ಅದೂ ಒಂದಿಷ್ಟು ಟೈಪು ಮಾಡುವ ಕೆಲಸ ಮಾಡುತ್ತಿತ್ತು.

ನಮ್ಮ ಬಳಿ ಒಂದು ಕೋತಿ ಇತ್ತು. ಅದು ಸಾಮಾನ್ಯವಾಗಿ ಸರಿಯಾಗಿಯೇ ವರ್ತಿಸುತ್ತಿತ್ತು. ಆದರೆ ಒಂದು ದಿನ ಅದಕ್ಕೆ ಪುಸ್ತಕದ ಮೇಲೆ ಆಸೆಯಾಗಿ ನನ್ನ ಪುಸ್ತಕಗಳನ್ನೆಲ್ಲಾ ಹುಡುಕಿ ಕೊನೆಗೆ, 'Sex Repression in Savage Society' (ಅನಾಗರಿಕ ಸಮಾಜದಲ್ಲಿ ಲೈಂಗಿಕ ವರ್ತನೆ ಹಾಗೂ ಅದರ ದಮನ) ಎಂಬ ಮೆಲಿನೊವಸ್ಕಿಯವರ ಪುಸ್ತಕಗಳನ್ನು ಕೈಗೆ ತೆಗೆದುಕೊಂಡು ನೋಡಿತು. ಚೆನ್ನಾಗಿ

ಕಂಡಿದ್ದರಿಂದ ಅದನ್ನು ತಿನ್ನಲಾರಂಭಿಸಿತು. ತಿಂದಕೂಡಲೆ ಅದು ಹುಚ್ಚುಹುಚ್ಚಾಗಿ ಆಡಲಾರಂಭಿಸಿತು.

ಹಸುವೊಂದು ಒಮ್ಮೆ ನನ್ನಲ್ಲಿದ್ದ ಪುಸ್ತಕದಲ್ಲಿ ಡಾ ॥ ಪಿ. ಜಿ. ವೂಡ್ ಹೌಸರ 'Carry on Jeeves' (ಕ್ಯಾರಿ ಆನ್ ಜೀವ್ಸ್) ಎಂಬ ಪುಸ್ತಕವನ್ನು ಕೆಳಗೆಳೆದು ತಿಂದುಹಾಕಿತು. ಆದರೆ ಅದು ಕಪಾಟಿನಲ್ಲಿದ್ದ ಗಾಲ್ಸ್‌ವರ್ದಿ, ಜೇನ್ ಆಸ್ಟೆನ್ ಮತ್ತು ಟಿ. ಎಸ್ ಇಲಿಯಟ್ ಇವರ ಪುಸ್ತಕಗಳನ್ನು ಮುಟ್ಟದಿದ್ದುದು ಆಶ್ಚರ್ಯವೇ ಸರಿ !

ಸಂಶೋಧನೆಯಲ್ಲಿ ನನಗೆ ಆಸೆ ಹುಟ್ಟಿದ ಮೇಲೆ ೧೯೩೯ರಲ್ಲಿ ಮೊದಲಿದ್ದ ಸ್ಥಳದಿಂದ ಹನ್ನೆರಡು ಮೈಲಿ ದೂರದಲ್ಲಿದ್ದ ಮತ್ತೊಂದು ಸ್ಥಳಕ್ಕೆ ನಮ್ಮ ವಾಸವನ್ನು ಬದಲಾಯಿಸಿದೆವು. ಈ ಹೊಸ ಸ್ಥಳದ ಹೆಸರು ಸನ್ವಾರ್ವಾಚ್ಚಾಪರ ಎಂದು. ಇದಕ್ಕೆ ಸೇರಿದ ಮೂರು ಮಜರೆಗ್ರಾಮಗಳಿದ್ದುವು. ದೊಡ್ಡ ಕಣಿವೆಯಲ್ಲಿ ಈ ಊರಿತ್ತು. ಸಣ್ಣ ನದಿಯೊಂದು ಕಣಿವೆಯಲ್ಲಿ ಹರಿಯುತ್ತಿತ್ತು. ನಮ್ಮ ಹೊಸ ಮನೆ ಮತ್ತು ಇತರ ಕಟ್ಟಡಗಳನ್ನು ತುಂಬಾ ಯೋಚನೆಮಾಡಿ ಕಟ್ಟಿದೆವು. ಬೇಕಾದಷ್ಟು ಭೂಮಿ, ಮರಮುಟ್ಟು ಮತ್ತು ಬಿದಿರು ಇದ್ದುವು. ಕಾರಂಜಿಯಾದಲ್ಲಿ ಇದ್ದಂತೆ ಇಲ್ಲಿ ಜನಸಂಪರ್ಕವಿರಲಿಲ್ಲ. ಹೆದ್ದಾರಿಯಿಂದ ಇಲ್ಲಿಗೆ ನಾವೇ ಒಂದು ರಸ್ತೆ ಮಾಡಿದರೂ ಅದು ಆರು ತಿಂಗಳು ಅನುಯೋಪವಾಗಿಬಿಡುತ್ತಿತ್ತು. ಎರಡು ಮಜರೆ ಗ್ರಾಮಗಳಲ್ಲಿ ಗೊಂಡರೂ ಮತ್ತು ರಾಜಗೊಂಡರೂ ಇದ್ದರು. ಮೂರನೆಯದರಲ್ಲಿ 'ಮೆಹ್ರಾ' ಗಳೆಂಬ ಹರಿಜನರಿದ್ದರು. ಅಲ್ಲದೆ ನಮ್ಮ ಸುತ್ತಮುತ್ತ ಬೈಗಾ ಮತ್ತು ಅಗೇರಿಯಾ ಎಂಬ ಜನರ ಮನೆಗಳೂ ಇದ್ದುವು.

ನಾವು ಇದ್ದುದು ದೊಡ್ಡ ಕಾಡಿನ ಅಂಚಿನಲ್ಲಿ. ಅಲ್ಲಿದ್ದ ಜನ ಕಾಡೆಂದರೆ ಪ್ರೀತಿಸುವ ಜನ. ಬೈಗಾ ಎಂಬ ಜನ ತಾವು ಪಶುಪತಿಗಳು, ಅಂದರೆ ಎಲ್ಲಾ ಕಾಡುಪ್ರಾಣಿಗಳಿಗೆ ಒಡೆಯರು, ಎಂದು ಭಾವಿಸುತ್ತಾರೆ. ಕಾಡನ್ನು ಕಾಯುವುದು ಮತ್ತು ಕಾಡಿನಲ್ಲಿ ಸಿಕ್ಕುವುದರಿಂದ ಜೀವನ ನಡೆಸುವುದು ಅವರ ಕಸುಬಾಗಿತ್ತು. ಆದರೆ ಕಾಡನ್ನು ಸರ್ಕಾರ ಕಾದಿರಿಸಿದ ಕಾರಣ ಅವರಿಗೆ ತೊಂದರೆಯಾಯಿತು. ಅವರು ಬೇಕಾದ ಕಡೆ ಸಾಗುಮಾಡಿ ಎಲ್ಲೆಂದರೆ ಅಲ್ಲಿ ದನಮೇಯಿಸುವುದು ತಪ್ಪಿತು. ಕಾಡಿಗೆ ಸೇರಿದ್ದ ಹಳ್ಳಿಯನಾಗಿದ್ದರೆ ಯಾವಾಗೆಂದರೆ ಆಗ ಬಿಟ್ಟಿ ಕೆಲಸಮಾಡಬೇಕಾಗಿತ್ತು. ಅಲ್ಲದಿದ್ದರೆ, ಕಾಡಿನಲ್ಲಿ ಬೆಳೆದಿದ್ದನ್ನು ತೆಗೆದುಕೊಳ್ಳಬೇಕಾದರೆ ಲೈಸೆನ್ಸ್ ಪಡೆಯಬೇಕಾಗಿತ್ತು. ಹೀಗಾಗಿ ಅವರು ದಿನವಹಿ ಒಂದಲ್ಲ ಒಂದು ತಪ್ಪುಮಾಡುತ್ತಿದ್ದರು. ಅದಕ್ಕೆ ಶಿಕ್ಷೆಯನ್ನೂ ಅನುಭವಿಸುತ್ತಿದ್ದರು.

ಮೆಹ್ರಾಗಳೂ ಗೊಂಡರೂ ವ್ಯಾಜ್ಯಮಾಡುವುದರ ಕಡೆ ವಾಲಿದ್ದರು ಎಂದು ಹೇಳಬೇಕು. ಪೊಲೀಸ್ ಸ್ಟೇಷನ್ ಮತ್ತು ಕೋರ್ಟು ಕಚೇರಿಗಳಿಗೆ ಅಲೆಯುತ್ತಿದ್ದರು. ನೂರಾರು ಮೈಲಿಗಳದೂರ ವಾಜ್ಯಗಳಿಗಾಗಿ ಹೋಗಿ ಬರುತ್ತಿದ್ದರು. ಕಾರಣ ಊರುಗಳಲ್ಲಿ ಲಾಯರುಗಳು, ಪೂಟ್‌ಲಾಯರುಗಳು ಮತ್ತು ಅರ್ಜಿ ಬರೆಯುವವರ

ಕೈಗೂ, ಅವರಿಗೆ ಅರ್ಥವಾಗದ ಕಾನೂನುಗಳ ಕೈಗೂ ಸಿಕ್ಕಿ ನರಳುತ್ತಿದ್ದರು. ನಾನು ಕಂಡ ಒಂದು ಸಣ್ಣ ವಿಷಯ ಹೇಳಬೇಕೆಂದರೆ, ಒಂದು ರಿಜಿಸ್ಟ್ರೇಷನ್ ಕೇಸಿನಲ್ಲಿ ಒಬ್ಬ ನಾಲ್ಕು ಜನ ಸಾಕ್ಷಿಗಳ ಸಮೇತ ಒಟ್ಟು ೩,೭೦೦ ಮೈಲಿ ಅಲೆಯಬೇಕಾಗಿ ಬಂದಿತು.

ನಾವಿದ್ದ ಗ್ರಾಮ ಅಂಗಡಿಗಳಿಂದಲೂ ವ್ಯಾಪಾರಿಗಳ ಶೋಷಣೆಯಿಂದಲೂ ದೂರವಾಗಿತ್ತು. ಆದರೂ ಕೆಲವು ಜನ ಹಳ್ಳಿಯವರು ತಾವು ಪೋಲೀಸ್ ಅಥವಾ ರೆವೆನ್ಯೂ ಅಧಿಕಾರಿಗಳೆಂದು ಹೇಳಿಕೊಂಡು, ಹೆದರಿಸಿ ಬೆದರಿಸಿ ಅರಿಯದ ಈ ಜನರಿಂದ ದುಡ್ಡು ಕಿತ್ತುಕೊಂಡು ತಿನ್ನುತ್ತಿದ್ದರು. ಇದಕ್ಕೆ ಬೇಕಾದಷ್ಟು ಉದಾಹರಣೆಗಳನ್ನು ಹೇಳಬಲ್ಲೆ. ಆದರೆ ಈಗ ಒಂದೆರಡನ್ನಷ್ಟೇ ಹೇಳುತ್ತೇನೆ. ವರ್ತಕನೊಬ್ಬ ಸ್ಥಿತಿವಂತನಾದ ಗೊಂಡಾನಿಂದ ಇನ್ನೂರು ಮುನ್ನೂರು ರೂಪಾಯಿ ದವಸ ಕೊಂಡುಕೊಂಡು, ನೋಟಿಗೆ ಬದಲಾಗಿ ಬಟ್ಟೆ ಬೇಲಿನ ಮೇಲೆ ಅಂಟಿಸಿರುವ ಬಣ್ಣದ ಚೀಟಿಗಳನ್ನು ಕೊಟ್ಟುಹೋದನು. ಓದುಬರಹ ಗೊತ್ತಿಲ್ಲದ ಹಳ್ಳಿಯವನು ಅವನ್ನೇ ನೋಟೆಂದು ಭಾವಿಸಿ ತೆಗೆದುಕೊಂಡು ಪೋಲೀಸ್ ಸ್ಟೇಷನ್ನಿಗೆ ಚಿಲ್ಲರೆಗೆ ಹೋದ. ಆಗ ಗೊತ್ತಾಯಿತು. ಅವು ನೋಟಲ್ಲ ಎಂದು. ಅರ್ಜಿ ಬರೆಯುವವರು ಹೇಗೆ ಈ ಹಳ್ಳಿ ಜನರಿಂದ ದುಡ್ಡು ಕೀಳುತ್ತಾರೆನ್ನುವುದಕ್ಕೆ ಒಂದು ಉದಾಹರಣೆ. ಅರ್ಜಿ ಬರೆಯುವುದಕ್ಕೆ ಸಾಮಾನ್ಯವಾಗಿ ಕೊಡಬೇಕಾದ ದುಡ್ಡಲ್ಲದೆ, ಫೌಂಟನ್‌ಪೆನ್ನಿನಲ್ಲಿ ಬರೆದರೆ ನಾಲ್ಕಾಣೆ ಜಾಸ್ತಿ. ಕೆಂಪು ಲಾ ಪುಸ್ತಕ ನೋಡಿ ಬರೆದರೆ ಎಂಟಾಣೆ ಜಾಸ್ತಿ. ಮತ್ತು ಬರೆಯುವುದರಲ್ಲಿ ಕೊಂಚ ಉಪ್ಪು ಕಾರ ಸೇರಿಸಿ ಬರೆದರೆ ಹತ್ತು ಹನ್ನೆರಡಾಣೆ ಜಾಸ್ತಿ. ಇಷ್ಟೆಲ್ಲಾ ಆದಮೇಲೆ ಬರೆದ ಅರ್ಜಿ ಸರಿಯಾಗಿ ಅಧಿಕಾರಿಗೆ ಮುಟ್ಟುವಂತೆ ನೋಡಿಕೊಳ್ಳಲು ಒಂದೆರಡು ರೂಪಾಯಿ ಬೇರೆ ಕೊಡಬೇಕು.

ಹೀಗೆ ಆ ಬಡ ಜನರ ಸುಲಿಗೆ ನಡೆಯುತ್ತಿತ್ತು. ಆದರೆ ಇದಕ್ಕಿಂತ ಹೆಚ್ಚು ಅಪಾಯಕಾರಿಯಾಗಿದ್ದುದು 'ಸಮಾಜ ಸುಧಾರಣೆ' ಎಂಬ ಹೆಸರಿನಲ್ಲಿ ನಡೆಯುತ್ತಿದ್ದ ಸುಲಿಗೆ. 'ಸಮಾಜ ಸುಧಾರಣಾ ಸಭಾ' ಎಂಬ ಒಂದು ಸಭೆ ಇತ್ತು. ಬೇರೆ ಹಿಂದೂಗಳು ಯಾವ ರೀತಿ ನಡೆದುಕೊಳ್ಳುತ್ತಾರೊ ಆ ರೀತಿ ಗೊಂಡರೂ ನಡೆದು ಕೊಳ್ಳಬೇಕೆಂದು ಆ ಸಭೆಯ ಪ್ರಚಾರಕರು ಒತ್ತಾಯ ಮಾಡುತ್ತಿದ್ದರು. ದನ ತಿನ್ನಬಾರದು, ಹಸುವನ್ನು ನೇಗಿಲಿಗೆ ಕಟ್ಟಬಾರದು, ಹಂದಿ ಕೋಳಿ ಮುಟ್ಟಬಾದರು, ಕುಡಿಯಬಾರದು, ಹೆಂಗಸರು ಕುಣಿಯಬಾರದು, ಅವರು ಪರದಾ ಅನುಸರಿಸಬೇಕು, ಅಸ್ಪೃಶ್ಯತೆಗೆ ಸಂಬಂಧಪಟ್ಟ ನಿಯಮಗಳನ್ನು ಚಾಚೂ ತಪ್ಪದೆ ಪಾಲಿಸಬೇಕು, ಹೆಣ್ಣುಮಕ್ಕಳಿಗೆ ಬೇರೆ ಹಿಂದೂಗಳಂತೆ ಚಿಕ್ಕ ವಯಸ್ಸಿನಲ್ಲಿಯೇ ಮದುವೆ ಮಾಡಬೇಕು – ಈ ಬಗೆಯ ಪ್ರಚಾರ ನಡೆಸುತ್ತಿದ್ದರು. ಪ್ರಚಾರ ಅಷ್ಟೇ ಅಲ್ಲ. ಇದಕ್ಕೆ ವಿರೋಧವಾಗಿ ನಡೆದರೆ ದಂಡವನ್ನೂ ಹಾಕುತ್ತಿದ್ದರು. ಕರ್ಮನೃತ್ಯದಲ್ಲಿ ಭಾಗಹಿಸಿದರೆ ಐವತ್ತು ರೂಪಾಯಿ, ಹಸುವನ್ನು ನೇಗಿಲಿಗೆ ಕಟ್ಟಿದರೆ ಹತ್ತು ರೂಪಾಯಿ – ಈ ರೀತಿ ದಂಡ ಹಾಕುತ್ತಿದ್ದರು. ಒಬ್ಬ ದಡಿಯ ಪೋಲೀಸ್ ಸಬ್ ಇನ್ಸ್‌ಪೆಕ್ಟರೂ ಇದಕ್ಕೆ

ತುಂಬಾ ಸಹಾಯಮಾಡುತ್ತಿದ್ದ. ಅವನೊಂದು ಕಥೆ ಹುಟ್ಟಿಸಿದ : 'ಕಾಗೆ ಕೊಂದದ್ದಕ್ಕೆ ಸರ್ಕಾರ ಗೊಂಡನೊಬ್ಬನಿಗೆ ಐವತ್ತು ರೂಪಾಯಿ ದಂಡ ಹಾಕಿತು. ಆದ್ದರಿಂದ ಅದಕ್ಕಿಂತ ಇನ್ನೂ ಹೆಚ್ಚಿನ ತಪ್ಪು ಮಾಡಿದರೆ ಎಷ್ಟು ದಂಡ ವಿಧಿಸಬಹುದೆಂದು ಯೋಚನೆ ಮಾಡಿ' ಎಂದು ಹೇಳುತ್ತಿದ್ದ.

ಸುಧಾರಣೆಯ ಚಳುವಳಿ ಜಿಲ್ಲೆಯಲ್ಲೆಲ್ಲಾ ಹಬ್ಬಿತು. ನೂರಾರು ಜನ ಗೊಂಡರು ಜನಿವಾರ ಹಾಕಿಕೊಂಡು ನಾಲ್ಕಾಣೆ ಚಂದಾ ಸಲ್ಲಿಸಿದರು. ಹೊಸದಾದ ಈ ಜೀವನ ರೀತಿಯನ್ನು ಅನುಸರಿಸುವುದು ಗೊಂಡರಿಗೆ ಕಷ್ಟವಾಯಿತು. ಕುಡಿದು ಕೊಂಚ ಹಾಯಾಗಿ ಕುಣಿಯುವುದು ತಪ್ಪಿತು. ಅವರಿಗೆ ಶಕ್ತಿಯನ್ನು ನೀಡುತ್ತಿದ್ದ ಒಂದೇ ಒಂದು ವಸ್ತುವೆಂದರೆ ಹೆಂಡ. ಅವರ ಕುಡಿತ ತಪ್ಪಿಹೋಯ್ತು. ಸಾಕಪ್ಪಾ ಅನ್ನಿಸಿಬಿಟ್ಟಿತು. ಈ ಹೊಸಜೀವನ ಮಾರ್ಗ.

ಆದರೆ ಎರಡು ವರ್ಷಗಳಲ್ಲಿ ಆ ಮೋಸದ ಸುಧಾರಕನ ದಸ್ತಗಿರಿಯಾಯಿತು. ಗೊಂಡ ಜನ ತಮ್ಮ ಹಿಂದಿನ ನಡೆನುಡಿಗಳನ್ನು ಆಚರಿಸಲಾರಂಭಿಸಿದರು. ಆದರೆ ಸುಧಾರಕರ ಹಾವಳಿ ಅಲ್ಲಿಗೇ ತಪ್ಪಲಿಲ್ಲ. ಒಬ್ಬರಾದ ಮೇಲೊಬ್ಬರು ಬಂದು ಸುಧಾರಣೆ ಹೆಸರಿನಲ್ಲಿ ಈ ಜನರಿಂದ ಹಣ ಸುಲಿದು ತಿನ್ನುತ್ತಲೇ ಇದ್ದರು. ಆಮೇಲೆ ಬಸ್ತಾರ್‌ನಲ್ಲಿಯೂ ಇದೇ ತರಹ ನಡೆಯುತ್ತಿದ್ದುದನ್ನು ಕಂಡೆ. 'ಸಮಾಜ ಸುಧಾರಣೆ' ಎಂಬ ಈ ಚಳುವಳಿಗೆ ಸರ್ಕಾರವೂ ಬೆಂಬಲ ಕೊಡುತ್ತಿದ್ದುದು ಕಂಡುಬಂದಿತು. ಸರ್ಕಾರದ ಪರವಾಗಿ ಸುಧಾರಕನೊಬ್ಬ ಯಾವಾಗಲೋ ಬಂದು ಬೆತ್ತಲೆ ಇರಬೇಡಿ, ಹೀಗೆ ಮಾಡಿ, ಹಾಗೆ ಮಾಡಬೇಡಿ ಎಂದು ಹೇಳಿಹೋಗುತ್ತಿದ್ದ.

ಒಂದು ವರ್ಷ ಒಂದು ಸುದ್ದಿ ಹಬ್ಬಿಬಿಟ್ಟಿತು : 'ಪೂರ್ವಘಟ್ಟಗಳ ಮೇಲೆ ಒಂದು ದೇವರು ಮೂಡಿ, ಅದು ಕಣ್ಗೆ ಯಾವುದಿದೆಯೋ ಅದನ್ನೆಲ್ಲಾ ಹಾಳುಮಾಡಿ ಎಂದು ಹೇಳಿತು' ಎಂದು. ಅಲ್ಲದೆ, 'ಅಲ್ಯೂಮಿನಿಯಂ ಲೋಹದಿಂದ ಮಾಡಿದ ಯಾವುದನ್ನೂ ಉಪಯೋಗಿಸಕೂಡದು' ಎಂದು. ಸರಿ, ಕರಿ ಆಡು, ಕುರಿ ಕೋಳಿ, ಕರಿ ಹುಂಜ – ಇವನ್ನೆಲ್ಲಾ ರಸ್ತೆಗಳ ಬಳಿ ಬಿಸಾಡಿದರು. ಕಾಸಿಗೊಂದು ಕೊಸರಿಗೆರಡರಂತೆ ಸ್ಥಳದ ವರ್ತಕರು ಅವನ್ನು ತೆಗೆದುಕೊಂಡು ಹೋದರು.

ನಾನು ಸನ್ನದ್ವಾಬ್ಯಾಪರಕ್ಕೆ ಬಂದನಂತರ ನನಗೂ ಸ್ಥಳೀಯ ಅಧಿಕಾರಿಗಳಿಗೂ ಸ್ನೇಹ ಬೆಳೆಯಿತು. ಪೋಲೀಸರು ನನ್ನ ಬೆನ್ನುಹತ್ತುವುದು ಕಡಮೆಯಾಯಿತು. ನನ್ನನ್ನು ಗೌರವ ಮ್ಯಾಜಿಸ್ಟ್ರೇಟ್ ಆಗಿ ನೇಮಿಸಿದರು. ಇದರಿಂದ ನನಗೆ ಒಂದು ರೀತಿಯ ಸಹಾಯವಾಯಿತು. ನಾನು ಇಂಡಿಯಾ ಆಫೀಸಿಗೆ ಬರೆದುಕೊಟ್ಟ ಕರಾರಿನಂತೆ ರಾಜಕೀಯದಲ್ಲಿ ಭಾಗವಹಿಸುವುದನ್ನು ಇದು ತಪ್ಪಿಸಿತು. ಆದರೆ ಇಂಡಿಯಾ ಸ್ವಾತಂತ್ರ್ಯವಾಗಬೇಕೆಂಬ ನನ್ನ ಮನಸ್ಸಿನ ಆಸೆ ಕಡಮೆಯಾಗಲಿಲ್ಲ. ಗಾಂಧೀಜಿ ಬಗ್ಗೆ ನನ್ನ ಗೌರವ ಕುಗ್ಗಲಿಲ್ಲ. ಅವರನ್ನು ಈಚೆಗೆ ನಾನು ನೋಡಲೇ ಇಲ್ಲ. ಒಟ್ಟಿನಲ್ಲಿ ಹೊಸ ರಾಜಕಾರಣಿಗಿಂತ 'ಗಿರಿಜನರ ಮನುಷ್ಯ'ನಾಗಿ ಹೆಚ್ಚು

ಕೆಲಸ ಮಾಡಬಹುದೆಂಬುದು ದೃಢವಾಯಿತು. ನನಗೆ ಗ್ರಿಗ್‌ಸನ್ ಎಂಬುವರು ಹಲವಾರು ಸರ್ಕಾರಿ ಅಧಿಕಾರಿಗಳ ಪರಿಚಯಮಾಡಿಕೊಟ್ಟರು. ಈ ಸರ್ಕಾರಿ ಅಧಿಕಾರಿಗಳಲ್ಲಿ ಆಗ ಛತ್ತೀಸಘರ್‌ನಲ್ಲಿ ಕೆಲಸಮಾಡುತ್ತಿದ್ದ ಸಿ.ಡಿ. ದೇಶಮುಖ್ ಅವರೂ ಒಬ್ಬರು. ಅವರು ಆಮೇಲೆ ಇಂಡಿಯಾದಲ್ಲಿ ಬಹಳ ಹೆಸರಾಂತ ವ್ಯಕ್ತಿಯಾದದ್ದು ಎಲ್ಲರಿಗೂ ಗೊತ್ತಿರುವ ಸಂಗತಿ.

ಮಧ್ಯಪ್ರಾಂತಗಳ ಗೌರ್‍ನರ್ ಸರ್ ಫ್ರಾನ್ಸಿಸ್ ವೈಲಿ ಅವರೊಡನೆ ಒಮ್ಮೆ ಸ್ಪೆಷಲ್ ರೈಲಿನಲ್ಲಿ ಅವರ ಸಲಹೆಗಾರನಾಗಿ ಪ್ರಯಾಣಮಾಡಿದೆ. ವೈಲಿ ಅವರನ್ನು ಕಂಡರೆ ನನಗೆ ತುಂಬಾ ಗೌರವ. ರಾಜಕೀಯ ಭಿನ್ನಾಭಿಪ್ರಾಯಗಳ ಕಾರಣವಾಗಿ ನಾನು ಉದ್ವೇಗಗೊಂಡಾಗ ಅವರು 'ವೆರಿಯರ್, ಪ್ರೇಮೋತ್ಸಾಹಗಳಿಂದ ಏನು ಮಾಡಿದ್ದರೂ ಅದಕ್ಕೆ ನೀನು ನಾಚಿಕೆಪಟ್ಟುಕೊಳ್ಳಬೇಕಾಗಿಲ್ಲ' ಎಂದು ಹೇಳಿದರು.

ನಾವು ಸನ್ಹರ್‍ವಾಚ್ಛಾಪರದಲ್ಲಿ ನಾಲ್ಕುವರ್ಷಗಳಿದ್ದು, ಅನಂತರ ಪಟಾನ್‌ಘರ್‌ಗೆ ಹೋದೆವು. ಅಲ್ಲಿಗೆ ಹೋದುದು ಎರಡು ಕಾರಣಗಳಿಗಾಗಿ : ಒಂದು ಆರೋಗ್ಯ ಸುಧಾರಣೆಗಾಗಿ; ಎರಡನೆಯದು, ಗಿರಿಜನರ ಬೇರೆ ಸ್ಥಳಗಳಿಗೆ ಹೋಗಿ ಬರಲು ಅನುಕೂಲವಾದ ಸ್ಥಳವೊಂದು ಬೇಕಾಗಿ.

ಪಟಾನ್‌ಘರ್ ಮೈಕಲ್ ಪರ್ವತಶ್ರೇಣಿಯ ಗುಡ್ಡವೊಂದರ ಮೇಲಿದ್ದ ಸುಂದರ ಹಳ್ಳಿ, ನರ್ಮದಾ ನದಿ ಕೇವಲ ಅರ್ಧ ಮೈಲಿಯಲ್ಲಿ ಹರಿಯುತ್ತಿದ್ದುದು ಕಾಣಿಸುತ್ತಿತ್ತು. ಸೊಗಸಾದ ಗಾಳಿ ಯಾವಾಗಲೂ ಬೀಸುತ್ತಿತ್ತು. ನಾವು ಹಿಂದೆ ಇದ್ದ ಸ್ಥಳಗಳಿಗಿಂತ ಇದು ತಂಪಾದ ಸ್ಥಳ; ಇಲ್ಲಿಯ ಜನಗಳೂ ಬೇರೆ ಕಡೆಗಿಂತ ಒಳ್ಳೆಯವರಾಗಿದ್ದರು. ಇವರನ್ನು 'ಪರ್ಧಾನ'ರೆಂದು ಕರೆಯುತ್ತಿದ್ದರು. ಪಟಾನ್‌ಘರ್‌ನಲ್ಲಿ ನಾವು ಆಸ್ಪತ್ರೆ, ಶಾಲೆ, ಅಂಗಡಿ, ಅತಿಥಿಗೃಹ, ಕಚೇರಿ, ಕುಷ್ಠರೋಗಿಗಳ ಗುಡಿಸಲು ಇವನ್ನೆಲ್ಲಾ ತೆರೆದೆವು. ಮೊದಲು ಒಂದು ಜಾಗದಲ್ಲಿ ಇವನ್ನೆಲ್ಲಾ ಹಾಕಿದೆವು. ಆದರೆ ಅಲ್ಲಿದ್ದ ಒಂದು ಮರದ ಮೇಲೆ ಠಾಕೂರ್ ದೇವನೂ ಇನ್ನೊಂದು ಮರದ ಮೇಲೆ ಊರುದೇವತೆಯೂ ಇದ್ದಾರೆಂದು ಗೊತ್ತಾಯಿತು. ನಾವಿದ್ದ ಕಡೆಗೆ ಬಿರುಗಾಳಿ ಬೀಸುತ್ತಿತ್ತು. ಹಳ್ಳಿಯವರು ಇದೆಲ್ಲ ಊರುದೇವತೆಯ ಕಾಟ ಎಂದು ಹೇಳಿದರು. ಈ ಕಾರಣ ನಮ್ಮ ಮನೆಗಳನ್ನು ಬೇರೆ ಕಡೆ ಕಟ್ಟಿದೆವು. ಅಲ್ಲಿಯೂ ಒಂದು ದೆವ್ವದ ಕಾಟ ಇದೆ ಎಂದು ಹೇಳಿದರು. ಆದರೆ ಅದಕ್ಕೆ ಹೆದರದೆ ಅಲ್ಲಿ ನೆಲೆಯೂರಿದೆವು. ಹಿಂದಿನ ಸ್ಥಳದಲ್ಲಿದ್ದ ಮನೆಗಳನ್ನು ಕಿತ್ತುತಂದು ಇಲ್ಲಿ ಕಟ್ಟಿದೆವು.

ನಾನು ಮಧ್ಯ ಇಂಡಿಯಾದಲ್ಲಿ ಇದ್ದ ಕಾಲದಲ್ಲೆಲ್ಲಾ ಎರಡನೇ ಯುದ್ಧ ನಡೆಯುತ್ತಿತ್ತು. ಪ್ರತಿ ರಾತ್ರೆ 'ಬ್ಲ್ಯಾಕ್ ಔಟ್' ಮಾಡುತ್ತಿದ್ದರು. ಅಂದರೆ ದೀಪ ಆರಿಸುತ್ತಿದ್ದರು. ಸೊಳ್ಳೆಗಳ ಕಾಟವಂತೂ ಹೇಳತೀರದು. ಆಹಾರ ಸಾಮಗ್ರಿಗಳನ್ನು ರೇಶನ್ ಮೇಲೆ ಕೊಡುತ್ತಿದ್ದರು. ಹಳ್ಳಿಯವರಿಗೆ ಸಾಕಾಗುವಷ್ಟು ಸಿಕ್ಕುತ್ತಿರಲಿಲ್ಲ. ವರ್ಷದಲ್ಲಿ ನಾಲ್ಕು ತಿಂಗಳು ಮಳೆ. ಆಗ ನಾವಿದ್ದ ಹಳ್ಳಿಗೂ ಹೊರಪ್ರಪಂಚಕ್ಕೂ ಸಂಪರ್ಕವೇ ತಪ್ಪಿಹೋಗುತ್ತಿತ್ತು. ಅಷ್ಟೊಂದು ಕೆಸರು, ಊರ ಸುತ್ತಮುತ್ತ.

ಯುದ್ಧದ ಬಗ್ಗೆ ಗೊಂಡರೂ ಬೈಗರೂ ಹೊಂದಿದ್ದ ಅಭಿಪ್ರಾಯ ಸ್ವಾರಸ್ಯ ವಾಗಿತ್ತು. ಒಬ್ಬ ಮುದುಕಿ ಹೀಗೆ ಹೇಳಿದಳು : 'ದೇವರು ಎಲ್ಲಾನು ಯಂಗೆ ಮಟ್ಟಮಾಡ್ತಾನೆ ನೋಡಿ! ನಮ್ಮ ಮಕ್ಕಳು ಚಿಕ್ಕದರಲ್ಲಿಯೇ ಸತ್ತು ಹೋಗ್ತವೆ – ಕಾಯಿಲೆ ಕಸಾಲೆಯಿಂದ. ಹುಲಿ ಚಿರತೆಗೆ ಬೇರೆ ಸಿಕ್ಕಿ ಸಾಯ್ತುವೆ. ಇಂಗ್ಲಿಷಿನೋರ ಮಕ್ಕಳು ಸುಖವಾಗಿ ಬೆಳೆದು ದೊಡ್ಡೋರಾಗ್ತಾರೆ. ಆದರೆ ದೇವರು ಅವರ ತಲೆ ಕೆಡಿಸಿಬಿಡ್ತಾನೆ. ಅವರು ಯುದ್ಧಮಾಡಿ ತಮ್ಮೇ ತಾವು ಹಾಳುಮಾಡಿಕೊಳ್ತಾರೆ. ಅವರಿಗೆಷ್ಟು ಬುದ್ಧಿಯಿದ್ದರೆ ತಾನೆ ಏನಂತೆ? ನಾವೆಲ್ಲಾ ಕೊನೆಗೆ ಒಂದೇ!'

ಗಿರಿಜನರಲ್ಲಿ ಕೆಲವರು ಯುದ್ಧಕ್ಕೆ ಸಹಾಯಮಾಡಲು ಮುಂದೆ ಬಂದರು. ಬೈಗಾ ಜನರ ತಂಡವೊಂದು ಬಂದು ಒಮ್ಮೆ ಅವರ ಬಿಲ್ಲುಬಾಣಗಳನ್ನು ಕೊಟ್ಟು, ಅವನ್ನೇ ಸರ್ಕಾರಕ್ಕೆ ಕಳುಹಿಸಿ ಎಂದು ಹೇಳಿತು. ಅವು ಯುದ್ಧಕ್ಕೆ ಬೇಕಿಲ್ಲ ಎಂದು ಹಿಂದಿರುಗಿ ಕೊಟ್ಟೆ. ನಾನೂ ಯುದ್ಧಕ್ಕೆ ಹೋಗುತ್ತೇನೆಂಬ ಸುದ್ದಿಯೂ ಹಬ್ಬಿಬಿಟ್ಟಿತು. ವಾಸ್ತವವಾಗಿ ನಾನೆಲ್ಲಿಗೋ ಹೋಗಿಬರಬೇಕಾಗಿತ್ತು.

ನಾನು ನೀಫಾಕ್ಕೆ ಹೋಗುವವರೆಗೂ ಪಟಾನ್‌ಘರ್ ನನ್ನ ಕೇಂದ್ರಸ್ಥಳವಾಗಿತ್ತು. ಅದು ನನಗೆ ಬಹಳ ಅಚ್ಚುಮೆಚ್ಚಾದ ಸ್ಥಳ. ಆ ಸ್ಥಳವನ್ನು ಅಲ್ಲಿಯ ಜನರನ್ನೂ ಆಗಾಗ್ಗೆ ನೆನೆಸಿಕೊಳ್ಳುತ್ತೇನೆ. ಹಾಗೆಯೇ ನೆನೆಸಿಕೊಳ್ಳುತ್ತಾಳೆ ನನ್ನ ಮುದ್ದು ಮಡದಿ ಲೀಲಾ. ಅವಳು ಹುಟ್ಟಿದ್ದು ಇಲ್ಲಿ.

ನಾನು ಬಿಟ್ಟುಬಂದ ನಮ್ಮ ಮುಖ್ಯ ಮನೆ ನನಗೆ ಎಲ್ಲಕ್ಕಿಂತ ಹೆಚ್ಚು ಅಚ್ಚುಮೆಚ್ಚಾಗಿತ್ತು. ಅದನ್ನು ಕಟ್ಟಲು ನಾನು ಬಹಳ ಆಸಕ್ತಿವಹಿಸಿದ್ದೆ. ಅದನ್ನು ಮಣ್ಣು ಮತ್ತು ಹುಲ್ಲಿನಿಂದ ಕಟ್ಟಿದ್ದರೂ ಕಟ್ಟುವುದರಲ್ಲಿ ನಾನು ತುಂಬ ಶ್ರದ್ಧೆ ತೆಗೆದುಕೊಂಡಿದ್ದೆ. ಇಡೀ ಕಟ್ಟಡವೇ ಒಂದು ಪ್ರಾಚ್ಯ ವಸ್ತುಸಂಗ್ರಹಾಲಯದಂತಿತ್ತು. ಇಂಡಿಯಾದ ನಾನಾ ಕಡೆಗಳಿಂದ ಸಂಗ್ರಹಿಸಲ್ಪಟ್ಟ ವಸ್ತುಗಳನ್ನು ಗೋಡೆಯೊಳಗೆ ಸೇರಿಸಿದ ಬೀರುಗಳಲ್ಲಿ ಇಟ್ಟಿದ್ದೆ.

ಗೊಂಡರ ಮತ್ತು ಪರ್ಧಾನರ ಕಲೆಯಲ್ಲಿ ಅಳಿದುಳಿದಿದ್ದುದು ಎಂದರೆ ಮನೆಯ ಮಣ್ಣಿನ ಗೋಡೆಗಳ ಮೇಲೆ ಮೂರ್ತಿಗಳನ್ನು ಕೆತ್ತುವುದು. ಈಗಲೂ ಗೂಡುಗಳಂಥ ಅವರ ಮನೆಗಳಲ್ಲಿ ಸ್ವಚ್ಛತೆಯನ್ನು ಬಿಟ್ಟರೆ ಬೇರೆ ಯಾವ ಪೂಜ್ಯಭಾವನೆಯೂ ಇಲ್ಲದ ಆ ಕಿರುಮನೆಗಳಲ್ಲಿ, ಸೊಗಸಾದ ಮೂರ್ತಿಗಳ ಕೆತ್ತನೆಗಳನ್ನು ನೋಡಬಹುದು. ನಮ್ಮ ಸ್ವಂತ ಮನೆಯ ಗೋಡೆಗಳನ್ನು ಈ ಮೂರ್ತಿಗಳಿಂದ ಚಿತ್ರಿಸಬೇಕೆಂದು ತೀರ್ಮಾನಿಸಿ, ಆ ಕೆಲಸ ಮಾಡಲು ನಾವು ವಯಸ್ಸಾದ ಹೆಂಗಸರನ್ನು ನೇಮಿಸಿದೆವು. ಕೆಲಸ ಮುಗಿಸಲು ಆರು ತಿಂಗಳು ಹಿಡಿಯಿತು. ಆದರೆ ಆ ಹೆಂಗಸರು ದುಡ್ಡಿಗಾಗಿ ಅಥವಾ ತೋರಿಕೆಗಾಗಿ ಮಾಡುವ ಜನವಾಗಿರಲಿಲ್ಲ; ಆ ಕೆಲಸವನ್ನು ಮಾಡುವ ಸಂತೋಷಕ್ಕಾಗಿ ಮಾಡುತ್ತಿದ್ದರು. ತಮ್ಮ ಸಂಸಾರದ ತಾಪತ್ರಯವನ್ನು ನೋಡಿ ಕೊಳ್ಳುವುದರ ಜೊತೆಗೆ ಈ ಕೆಲಸವನ್ನೂ ಮಾಡುತ್ತಿದ್ದರು.

ಗೋಡೆಗಳ ಮೇಲೆ ಆದಿವಾಸಿಗಳ ಪ್ರಸಿದ್ಧ ಪುರುಷರು ಹಕ್ಕಿಗಳು ಪ್ರಾಣಿಗಳು ಚೇಳುಗಳು ಚಿಟ್ಟೆಗಳು ಕುಣಿಯುವವರು ಮತ್ತು ಕ್ಷಿಪ್ರವಾಗಿ ಓಡುವುದನ್ನು ತೋರಿಸುವ ಜಿಂಕೆಗಳು – ಇವನ್ನೆಲ್ಲಾ ಕೆತ್ತಿದರು. ನಮ್ಮ ಆಸ್ಪತ್ರೆಯ ಕಟ್ಟಡದ ಗೋಡೆಯ ಮೇಲೆ ಆದಿವಾಸಿಗಳ ಪಂಡಿತರ ಮತ್ತು ಅವರ ಔಷಧಿಗಳ ಚಿತ್ರಗಳನ್ನು ಕೆತ್ತಿ, ಈಗಿನ ಡಾಕ್ಟರುಗಳ ಚಿತ್ರವನ್ನೂ ಹೋಲಿಕೆಗಾಗಿ ಕೆತ್ತಿದರು. ಸ್ನಾನದ ಮನೆಯಲ್ಲಿ ತಲೆಯ ಮೇಲೆ ಬಿಂದಿಗೆಯಲ್ಲಿ ನೀರು ಹೊರುತ್ತಿರುವ ಮೂರಡಿ ಎತ್ತರದ ಹುಡುಗಿಯರ ಚಿತ್ರಗಳನ್ನು ಕೆತ್ತಿದರು.

ಗೊಂಡಾ ಜನರ ಕಲೆ ಕೇವಲ ಸಾಂಕೇತಿಕವಾದುದು. ಇಡೀ ಚಿತ್ರವನ್ನು ಬರೆಯುವ ಬದಲು, ಒಂದು ಭಾಗವನ್ನು ಮಾತ್ರ ಬರೆಯುತ್ತಿದ್ದರು. ರೆಕ್ಕೆಗಳನ್ನು ತೋರಿಸಿದರೆ ಹಕ್ಕಿ ಎಂತಲೂ, ಕಾಲನ್ನು ತೋರಿಸಿದರೆ ನರ್ತಕಿ ಎಂತಲೂ ಭಾವಿಸಬೇಕಾಗಿತ್ತು. ಅಲ್ಲದೆ, ಅವರ ಕಲೆಯಲ್ಲಿ ಹೊಂದಾಣಿಕೆಯಾಗಲೀ ಸರಳರೇಖೆಗಳಾಗಲೀ ಇದ್ದಂತೆ ಕಾಣಲಿಲ್ಲ. ಈ ಬಗ್ಗೆ ಅವರ ಹೆಂಗಸೊಬ್ಬಳನ್ನು ಕೇಳಿದಾಗ ಆಕೆ, 'ಕಾಡಿನಲ್ಲಿ ಮರಗಳು ನೆಟ್ಟಗೆ ಇರುವುದಿಲ್ಲ; ಕೊಂಬೆಗಳು ಆಕಡೆ ಈಕಡೆ ಒಂದೇ ಸಮನಾಗಿ ಬೆಳೆಯುವುದಿಲ್ಲ. ಗೋಡೆಯ ಮೇಲಿನ ಚಿತ್ರ ಕಾಡಿನಂತೆ' ಎಂದಳು. ಅನೇಕ ವೇಳೆ ಈ ಚಿತ್ರಗಳು ಹಾಗೆಯೇ ಇದ್ದುವು. ಅದರ ಪರಿಣಾಮ ಅಷ್ಟೇನು ಅಹಿತವಾಗಿರಲಿಲ್ಲ.

ಒಬ್ಬ ಹನ್ನೆರಡು ವರ್ಷದ ಹುಡುಗ ಮಣ್ಣು ಮತ್ತು ಹೊಟ್ಟು ಕಲೆಸಿ ಅದರಿಂದ ಆನೆ, ಗಣಪತಿ, ಒಂಟೆ, ಮೋಟಾರು ಗಾಡಿ, ಹುಲಿ ಮತ್ತು ಹಾರಿ ಹೋಗುವುವೋ ಎನ್ನುವಷ್ಟು ಸೊಗಸಾದ ಹಕ್ಕಿಗಳನ್ನು ಮಾಡಿದ.

ನಾವು ಇದ್ದ ಮನೆಗಳಿಗೆ ಆದಿವಾಸಿ ಜನಗಳು ಯಾವಾಗ ಎಂದರೆ ಆಗ ಬಂದು ಹೋಗುತ್ತಿದ್ದರು. ತಮ್ಮ ಮನೆ ಎಂಬ ಭಾವನೆ ಆ ಜನಗಳಲ್ಲಿ ಬಂದು ಬಿಟ್ಟಿತ್ತು. ಆದರೆ ಕೆಲವು ಸರ್ಕಾರಿ ನೌಕರರೂ ಇತರರೂ ನಾವು ಇಷ್ಟು ಸಲಿಗೆ ಕೊಟ್ಟಿರುವುದನ್ನು ಒಪ್ಪುತ್ತಿರಲಿಲ್ಲ. ಇಷ್ಟೊಂದು ಸಲಿಗೆ ಕೊಟ್ಟರೆ ತಾವು ಅವರ ಮೇಲೆ ಸವಾರಿಮಾಡಲು ಆಗುವುದಿಲ್ಲ ಎಂಬುದೇ ಅವರ ಮನಸ್ಸಿನಲ್ಲಿದ್ದುದು.

ಜನರು ನಮ್ಮನ್ನು ಊಟಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಆಗೆಲ್ಲಾ ನೃತ್ಯ ನಡೆಯುತ್ತಿತ್ತು. ನಾವೂ ಅವರನ್ನು ಊಟಕ್ಕೆ ಕರೆಯುತ್ತಿದ್ದೆವು. ನಮ್ಮನ್ನು ಊಟಕ್ಕೆ ಕರೆದಾಗ ಅವರು ತಮ್ಮ ಮನೆ ಮಠಗಳನ್ನು ಗುಡಿಸಿ ಸಾರಿಸಿ ಇಡೀ ದಿನವನ್ನು ಅಡಿಗೆ ಮಾಡುವುದರಲ್ಲಿ ಕಳೆಯುತ್ತಿದ್ದರು. ರುಚಿಯಾದ ಅಡಿಗೆಮಾಡಿ ನಮ್ಮನ್ನು ಕರೆಯಲು ಹತ್ತಾರು ಜನ ಬರುತ್ತಿದ್ದರು. ಗಟ್ಟಿಮುಟ್ಟಾದ ಯುವಕರಿಬ್ಬರು ನನ್ನನ್ನೂ ಶಾಮರಾವನ್ನೂ ಬೆನ್ನು ಮೇಲೆ ಹೊತ್ತುಕೊಂಡು ಹೋಗುತ್ತಿದ್ದರು. ಹಿಂದೆ ಹೆಂಗಸರು ಹಾಡು ಹೇಳಿಕೊಂಡು ಬರುತ್ತಿದ್ದರು. ಅನಂತರ ನೀಫಾದಲ್ಲಿ ಇದ್ದಾಗಲೂ ಇದೇ ರೀತಿಯ ಅತಿಥಿಸತ್ಕಾರ ನಡೆಯುತ್ತಿತ್ತು. ಅವರ ಆತಿಥ್ಯವನ್ನು

ಸ್ವೀಕರಿಸಬೇಕೆಂದು ಅವರೆಷ್ಟು ಹಿಂಸೆ ಕೊಡುತ್ತಿದ್ದರಂದರೆ, ನಾನು ಒಂದೊಂದು ದಿನ ಐದಾರು ಮನೆಗಳಲ್ಲಿ ಊಟಮಾಡಬೇಕಾಗಿ ಬರುತ್ತಿತ್ತು. ಈ ಗಿರಿಜನರ ಮನೆಯ ಊಟವೂ ವಿಚಿತ್ರವಾಗಿರುತ್ತಿತ್ತು. ಬೊಂಡೋಗುಡ್ಡದ ವಾಸಿಗಳು ಸುಟ್ಟ ಇಲಿಗಳನ್ನೂ, ಉರಿಯರು ಕೆಂಪಿರುವೆ ಚಟ್ನಿಯನ್ನೂ, ಮರಿಯರು ತಾಳೆ ಮರಗಳಲ್ಲಿ ಸಿಕ್ಕುವ ದಪ್ಪ ದಪ್ಪ ಬಿಳಿ ಹುಳುಗಳನ್ನು ಅವುಗಳ ಕೊಬ್ಬಿನಲ್ಲಿಯೇ ಹುರಿದು ಮಾಡಿದ ವಡೆಗಳನ್ನೂ, ಕುಬಾಯೀ ನಾಗಾಗಳು ನಾಯಿಮಾಂಸ ಮತ್ತು ಕಾಡುಹಕ್ಕಿಗಳಿಂದ ಮಾಡಿದ ಸೊಗಸಾದ ಪಲಾವನ್ನೂ ಬಡಿಸುತ್ತಿದ್ದರು.

ಗಿರಿಜನರ ಮನೆಗಳಲ್ಲಿ ಒಂದೊಂದು ಸಲ ಊಟಮಾಡುವುದು ತುಂಬ ಒಳ್ಳೆಯದೇ. ಏಕೆಂದರೆ, ಹಾಗೆ ಮಾಡುವುದರಿಂದ ಅವರಿಗೆ ನಾವು ದೊಡ್ಡವರು ಅವರು ಚಿಕ್ಕವರು ಎಂಬ ಭಾವನೆ ಹೋಗಿ, ಪ್ರೀತಿ ವಿಶ್ವಾಸ ಬೆಳೆಯಲು ಕಾರಣವಾಗುತ್ತದೆ. ಅವರ ವಿಶ್ವಾಸ ಸಂಪಾದಿಸಿದರೆ ಆ ಜನ ಏನು ಬೇಕಾದರೂ ಮಾಡುತ್ತಾರೆ. ನನಗೊಂದು ಸಲ ಪಟಾನ್‌ಘರ್‌ನಲ್ಲಿದ್ದಾಗ ಭಾರಿ ಕುರು ಎದ್ದು ಕೀವು ಸೋರಲು ಆರಂಭಿಸಿತು. ನನ್ನಲ್ಲಿದ್ದ ಔಷಧಿ ಬೇರೆ ಔಷಧಿಯೊಡನೆ ಸೇರಿಹೋಗಿದ್ದರಿಂದ ಅದರಿಂದ ಅನುಕೂಲ ಕಾಣಲಿಲ್ಲ. ಆಸ್ಪತ್ರೆ ಇದ್ದುದು ಪಟಾನ್‌ಘರ್‌ನಿಂದ ನೂರಾರು ಮೈಲಿ ದೂರದಲ್ಲಿ. ಅಷ್ಟು ದೂರವೂ ಆ ಗಿರಿಜನರು ಒಂದು ತರಹ ಡೋಲಿಯಲ್ಲಿ ನನ್ನನ್ನು ಹೊತ್ತುಕೊಂಡು ಹೋದರು. ದಾರಿಯಲ್ಲಿ ತುಂಬಿ ಹರಿಯುವ ನದಿಗಳು ಸಿಕ್ಕಾಗ ಕುತ್ತಿಗೆಯವರೆಗೂ ಹರಿಯುವ ನೀರಿನಲ್ಲಿ ನನ್ನ ಡೋಲಿಯನ್ನು ಮೇಲಕ್ಕೆತ್ತಿ ನಾನು ಒದ್ದೆಯಾಗದಂತೆ ನೋಡಿಕೊಳ್ಳುತ್ತಿದ್ದರು. ಆಸ್ಪತ್ರೆ ಮುಟ್ಟಿದ ಮೇಲೆ ಡಾಕ್ಟರು ಹೇಳಿದರು. ನಾನು ಇನ್ನು ಒಂದೆರಡು ಗಂಟೆ ತಡಮಾಡಿದ್ದರೆ ಅಪಾಯವಾಗುತ್ತಿತ್ತು ಎಂದು. ಅಂತೂ ಅಲ್ಲಿಗೆ ಹೋಗಿ ಆಪರೇಷನ್ ಮಾಡಿಸಿಕೊಂಡ ಮೇಲೆ ನಾನು ಬದುಕಿಕೊಂಡೆ. ಬದುಕಿಸಿದವರು ನನ್ನ ಗಿರಿಜನ ಬಂಧುಗಳು.

ನಾನು ಇಡೀ ಗಿರಿಜನರ ಗುಂಪುಗಳ ಗೆಳೆತನವನ್ನಷ್ಟೇ ಅಲ್ಲದೆ ಅವರಲ್ಲಿ ಕೆಲವರ ವೈಯಕ್ತಿಕ ಸ್ನೇಹವನ್ನೂ ಸಂಪಾದಿಸಿದೆ.

ಮೊದಮೊದಲಿಗೆ ನಾನು ಶಾಮರಾವೂ ಒಂದೇ ಲೆಕ್ಕದಲ್ಲಿ ಹಣ ಖರ್ಚು ಮಾಡುತ್ತಿದ್ದೆವು. ಆದರೆ ಕಷ್ಟಕಾಲಕ್ಕೆ ನಾವು ಏರ್ಪಾಟು ಮಾಡಿಕೊಳ್ಳಲಿಲ್ಲ. ಉದಾರ ಬುದ್ಧಿಯ ಸ್ನೇಹಿತರಿದ್ದರೂ ದುಡ್ಡಿನದೇ ದೊಡ್ಡ ಪ್ರಶ್ನೆಯಾಗುತ್ತಿತ್ತು. ಸಾಮಾನ್ಯವಾಗಿ ನಾನು ಮಳೆಗಾಲದಲ್ಲಿ ಹೊರಗಡೆ ಹೋಗಿ ಸಭೆ ಸೇರಿಸಿ ಹಣ ಸಂಗ್ರಹಿಸುತ್ತಿದ್ದೆ. ಅನೇಕ ವರ್ಷಗಳು ವರ್ಷೇ ವರ್ಷೇ ಬೊಂಬಾಯಿಗೆ ಹೋಗಿ ಅಲ್ಲಿ ಸಭೆ ಸೇರಿಸಿ ಜನಗಳಿಗೆ ಗಿರಿಜನರ ವಿಷಯ ತಿಳಿಸುತ್ತಿದ್ದೆ. ಜನರೂ ಗಿರಿಜನರಲ್ಲಿ ಆಸಕ್ತಿ ವಹಿಸುತ್ತಿದ್ದರು. ತಾತಾ ಟ್ರಸ್ಟಿನ ಸಹಾಯವಿಲ್ಲದಿದ್ದರೆ ನಾವು ಏನು ಮಾಡಲೂ ಆಗುತ್ತಿರಲಿಲ್ಲ. ಜೆ.ಆರ್. ಡಿ. ತಾತಾ ಮತ್ತು ಅವರ ಪತ್ನಿಯವರು ನಮಗೆ ತುಂಬಾ

ಸಹಾಯಮಾಡಿದರು. ರುಸ್ತುಂ ಚೋಕ್ಸಿ ಹಾಗೂ ಅವರ ಸಹೋದರಿ ಪಿಪ್ಸಿ ವಾಡಿಯಾರಂತೂ ಯಾರು ಏನು ಹೇಳಿದರೂ ನಮ್ಮ ಬಗ್ಗೆ ಅವರ ಅಚಲ ಸ್ನೇಹವನ್ನು ಬಿಡಲಿಲ್ಲ. ಜೆ.ಪಿ. ಪಟೇಲರೆಂಬುವರು ನಮಗೆಷ್ಟು ಸಹಾಯಮಾಡಿದ ರೆಂಬುದನ್ನು ಮುಂದೆ ಹೇಳುತ್ತೇನೆ.

ವಿಕ್ಟರ್ ಸಸ್ಸೂನ್ ಎಂಬುವರು ನಮ್ಮನ್ನು ಕೂಡಿಕೊಂಡ ಮೇಲೆ ಅವರೂ ಬೇಕಾದಷ್ಟು ಹಣ ಕೊಟ್ಟರು. ಹಣಕ್ಕಿಂತ ಹೆಚ್ಚಾಗಿ ಅವರು ಬೇರೆ ರೀತಿಯಲ್ಲಿ ಸಹಾಯಮಾಡಿದರು. ಲಕ್ಷಾಧೀಶರೊಡನಾಗಲೀ ಭಿಕ್ಷುಕರೊಡನಾಗಲೀ ಸಲೀಸಾಗಿ ಓಡಾಡಿಕೊಂಡಿರುತ್ತಿದ್ದ ವ್ಯಕ್ತಿ ಅವರು. ಅವರು ಪಟಾನ್‌ಘರ್‌ಗೆ ಬಂದ ಮೇಲೆ ನಾವು ಅವರಿಗೆ ಒಂದು ಸಣ್ಣಮನೆ ಕಟ್ಟಿಕೊಟ್ಟೆವು.

ನಾನು ಹಳ್ಳಿಗಳಲ್ಲಿ ಇರಲಾರಂಭಿಸಿದ ಮೇಲೆ ಒಂದು ಒಳ್ಳೆಯದಾಯಿತು. ಅದೇನೆಂದರೆ, ಯಾವುದರಲ್ಲಿಯೂ ದುಂದುವೆಚ್ಚ ಮಾಡದೆ ಇರುತ್ತಿದ್ದುದು. ಉದಾಹರಣೆಗೆ, ನೀರನ್ನು ಹಾಳುಮಾಡುವುದೆಂದರೆ ಈಗಲೂ ನನಗೆ ಆಗದು. ಎಷ್ಟೋ ವರ್ಷಗಳ ಕಾಲ ನೀರಿನ ಕಷ್ಟವನ್ನು ಅನುಭವಿಸಿದ ನನಗೆ ನಲ್ಲಿಗಳಲ್ಲಿ ನೀರು ಸಿಕ್ಕಾಪಟ್ಟೆ ಹರಿದುಹೋಗುವುದನ್ನು ಕಂಡರೆ ಆಗುವುದಿಲ್ಲ.

ಮಾಂಡ್ಲಾ ಹಳ್ಳಿಗಳಲ್ಲಿ ನಾವು ಕಳೆದ ಅನೇಕ ವರ್ಷಗಳ ಅನುಭವಗಳ ವಿವರಗಳನ್ನು ಸರಿಯಾಗಿ ಹೇಳಲು ಸಾಧ್ಯವಾಗುವುದಿಲ್ಲ. ನಾನು ದಿನಚರಿ ಬರೆದಿಡುತ್ತಿದ್ದೆ. ಹಳ್ಳಿಯ ಬಾಳಿನಲ್ಲಿ ಅಂಥ ವೈವಿಧ್ಯತೆ ಇರುವುದಿಲ್ಲ. ಎಲ್ಲಾ ದಿನಗಳೂ ಒಂದೇ ತರಹ ಇರುತ್ತಿದ್ದುವು. ಎಲ್ಲೋ ಒಮ್ಮೊಮ್ಮೆ ಏನೋ ಒಂದೊಂದು ವಿಚಿತ್ರವಾದದ್ದು ನಡೆಯುತ್ತಿತ್ತು ಅಷ್ಟೆ. ನಮ್ಮ ಆಸ್ಪತ್ರೆಗೆ ಬರುತ್ತಿದ್ದ ರೋಗಿಗಳು, ಶಾಲೆ, ಕುಷ್ಠರೋಗಿಗಳ ಶುಶ್ರೂಷೆ – ಇವು ನಮ್ಮ ಬೇಸರದ ದಿನಗಳಿಗೆ ವೈವಿಧ್ಯತೆಯನ್ನು ನೀಡುತ್ತಿದುವು. ಇವನ್ನೆಲ್ಲಾ ಹೆಚ್ಚಾಗಿ ಶಾಮರಾವೇ ನೋಡಿ ಕೊಳ್ಳುತ್ತಿದ್ದುದು. ನಾನು ಹೆಚ್ಚು ಕಾಲವನ್ನು ಬರೆಯುವುದರಲ್ಲಿ ಕಳೆಯುತ್ತಿದ್ದೆ. ಜೊತೆಗೆ ಮದುವೆ ಮುಂಜಿ ಹಬ್ಬ ಹರಿದಿನಗಳಿಗೆ ಹೋಗಿಬರುತ್ತಿದ್ದೆ.

ನಾನು ಪಟಾನ್‌ಘರ್‌ನಲ್ಲಿದ್ದಾಗ ಅಲ್ಲಿಗೆ ನನ್ನ ತಂಗಿ ಬಂದುಹೋದಳು. ಅವಳು ಬರೆದ ಹುಚ್ಚು ಗುಳ್ಳೆನರಿ ವಿಷಯವೊಂದನ್ನು ಹೇಳುತ್ತೇನೆ ಕೇಳಿ. ಒಂದು ರಾತ್ರಿ ಹುಚ್ಚು ಗುಳ್ಳೆನರಿಯೊಂದು ಹಳ್ಳಿಗೆ ಬಂದು ಹತ್ತು ಹನ್ನೆರಡು ದನಗಳನ್ನೂ ನಾಲ್ಕಾರು ನಾಯಿಗಳನ್ನೂ ಕಚ್ಚಿಬಿಟ್ಟಿತು. ಅಲ್ಲದೆ ಜಗಲಿಯ ಮೇಲೆ ಮಲಗಿದ್ದ ಏಳು ಜನರನ್ನೂ ಕಚ್ಚಿಬಿಟ್ಟಿತು. ಇಷ್ಟೆಲ್ಲಾ ಬೆಳಕು ಹರಿಯುವುದರೊಳಗೆ ಆಗಿಹೋಯಿತು. ಗಂಟೆಗಳತನಕ ಯಾರೂ ನಮ್ಮ ಬಳಿ ಸುಳಿಯಲಿಲ್ಲ. ಆಮೇಲೆ ಬಂದರು. ಗಾಯಗಳಿಗೆ ಔಷಧಿ ಹಾಕಿದೆವು. ಕಚ್ಚಿಸಿಕೊಂಡವರಿಗೆ ಜಬ್ಬಲ್‌ಪುರದ ಆಸ್ಪತ್ರೆಗೆ ಹೋಗಿ ಹುಚ್ಚುನಾಯಿ ಔಷಧಿ ತೆಗೆದುಕೊಳ್ಳಿ ಎಂದು ತಿಳಿಸಿದೆವು. ಆದರೆ ಯಾರೂ ಹೋಗಲೊಲ್ಲರು. ಬಹಳ ಒತ್ತಾಯ ಮಾಡಿದ ಮೇಲೆ ಮೂರು ಜನ

ಹೊರಟರು. ಊಟ ತಿಂಡಿ, ಹೋಗಿ ಬರುವ ಖರ್ಚು ಎಲ್ಲವನ್ನೂ ನಾವು ವಹಿಸಿಕೊಳ್ಳುತ್ತೇವೆಂದರೂ ಕಚ್ಚಿಸಿಕೊಂಡವರಲ್ಲಿ ನಾಲ್ಕು ಜನ ಹೊರಡಲೇ ಇಲ್ಲ. ಅವರಲ್ಲಿ ಮೂರು ಜನ ಸತ್ತುಹೋದರು. ಆಮೇಲೆ ಇದೇ ರೀತಿ ಹುಚ್ಚುನರಿಯಿಂದ ಕಚ್ಚಿಸಿಕೊಂಡ ಹುಡುಗಿಯೊಬ್ಬಳು ಆಸ್ಪತ್ರೆಗೆ ಹೋಗಲು ಒಪ್ಪಲಿಲ್ಲ.

ಹೀಗೆ ಆಸ್ಪತ್ರೆಗೆ ಹೋಗದಿದ್ದುದಕ್ಕೆ ಇವರಲ್ಲಿದ್ದ ನಾಟಿ ಔಷಧಿಯೇ ಕಾರಣವಾಗಿರಬಹುದು ಎಂದು ಅನ್ನಿಸುತ್ತದೆ. ಈ ಜನರಲ್ಲಿ ಒಂದು ವಿಚಿತ್ರನಂಬಿಕೆ ಇದೆ. ಅದೇನೆಂದರೆ, ಹುಚ್ಚುನಾಯಿ ಮನುಷ್ಯನನ್ನು ಕಡಿದಾಗ ನಾಯಿಯ ಜೊಲ್ಲು ಮನುಷ್ಯನ ರಕ್ತದೊಂದಿಗೆ ಸೇರಿ ಕಡಿಸಿಕೊಂಡವನ ಹೊಟ್ಟೆಯಲ್ಲಿ ನಾಯಿಮರಿಗಳು ಹುಟ್ಟುತ್ತವೆ. ಅವು ಪುನಃ ಮರಿಗಳನ್ನು ಹಾಕಿ ತಮ್ಮ ಸಂತಾನ ಬೆಳೆಸುತ್ತವೆ. ಆ ಮರಿಗಳು ರಕ್ತನಾಳದಲ್ಲಿ ಹರಿದು ಇಡೀ ದೇಹವನ್ನೆಲ್ಲಾ ಆಕ್ರಮಿಸಿಕೊಳ್ಳುತ್ತವೆ. ದೇಹದಲ್ಲೆಲ್ಲಾ ನೂರಾರು ಮರಿಗಳು ನಾಲ್ಕೈದು ವಾರಗಳಲ್ಲಿ ಕಚ್ಚಾಡಲು ಆರಂಭಿಸುತ್ತವೆ. ಅವು ಬೊಗಳುವುದನ್ನು ಸ್ಪಷ್ಟವಾಗಿ ಕೇಳಬಹುದು. ಕೊನೆಗೆ ಆ ಬೊಗಳುವ ದನಿ ಕಚ್ಚಿಸಿಕೊಂಡವನ ಗಂಟಲಿನ ಮೂಲಕ ಹೊರಗೆ ಕೇಳಿಸುತ್ತದೆ. ಅವನು ನಾಯಿಯಂತೆಯೇ ನರಿಯಂತೆಯೋ ಬೊಗಳುತ್ತಾನೆ ಅಥವಾ ಅಳುತ್ತಾನೆ !

ಹೀಗಾಗುವ ಮುಂಚೆಯೇ ಹಳ್ಳಿ ವೈದ್ಯ ಔಷಧಿ ಕೊಡುತ್ತಾನೆ. ಪಟಾನ್‌ಘರ್‌ನಲ್ಲಿ ಕೊಟ್ಟ ಔಷಧಿಯನ್ನು ನಾನೇ ನೋಡಿದೆ. ವೈದ್ಯನು ಕೊಡತಿ ಹುಳುಗಳನ್ನು ಯಾವುದೋ ಹಸುರುಸೊಪ್ಪಿನೊಡನೆ ಅರೆದು ಅದಕ್ಕೆ ಬೆಲ್ಲ ಸೇರಿಸಿ ಉಂಡೆ ಕಟ್ಟಿದ. ದಿನಕ್ಕೊಂದೊಂದು ಗುಳಿಗೆ ನುಂಗಿಸಿದ. ಗುಳಿಗೆ ನುಂಗಿದ ತಕ್ಷಣ ರೋಗಿಗೆ ವಾಂತಿ ಭೇದಿ ಆಯಿತು. ಎರಡು ಮೂರು ದಿನಗಳಲ್ಲಿ ಇಬ್ಬರು ರೋಗಿಗಳಿಗೆ ಹೆರಿಗೆ ನೋವು ಕಾಣಿಸಿಕೊಂಡಿತಂತೆ. ಹೆಂಗಸರಿಗಿಂತ ಹೆಚ್ಚಾಗಿ ಗಂಡಸರಿಗೆ ಹೆರಿಗೆನೋವು ಕಾಣಿಸಿಕೊಳ್ಳುತ್ತದೆಯಂತೆ. ಹೀಗೆ ಹೆರಿಗೆನೋವು ಕಾಣಿಸಿಕೊಂಡು ಹೆರಿಗೆಯಾಯಿತಂತೆ. ಕೆಂಪು ಇರುವೆ ಗಾತ್ರದ ನಾಯಿಮರಿಗಳ ಜನನವಾಯಿತೆಂದೂ, ಈ ಮರಿಗಳು ಚಿಕ್ಕದಾಗಿರುವಾಗ ಕರಿ ತಲೆ ಮತ್ತು ಬಾಲ ಅಲ್ಲದೇ ಏನೂ ಇರುವುದಿಲ್ಲವೆಂದೂ, ಬೆಳೆದಂತೆ ಅವು ಇಲಿ ಮರಿಯ ಹಾಗೆ ಆಗುತ್ತವೆಯೆಂದೂ ಹೇಳಿದರು. ಈ ಮರಿಗಳನ್ನು ನೋಡಲು ನನಗೆ ಅವಕಾಶ ಕೊಡಲೇ ಇಲ್ಲ. ಬಹುಶಃ ನಂಬಿದ ಕಣ್ಣಿಗೆ ಮಾತ್ರ ಅವು ಕಾಣಿಸುತ್ತಿದ್ದುವೆಂದು ಕಾಣುತ್ತೆ. ಆದರೆ ಎಲ್ಲರೂ ಹೇಳುವವರೇ, 'ನಾವು ಕಂಡೆವು' ಎಂದು. ಈ ಮರಿಗಳು ಹೊರಕ್ಕೆ ಬಂದರೆ ಹುಚ್ಚು ಬಿಟ್ಟಂತೆ. ಇಲ್ಲದಿದ್ದರೆ ರೋಗಿಗೆ ಅಪಾಯ.

ನಾನು 'ಸವೋರಾ' ಎಂಬ ಜನರಿರುವ ಕಡೆ ಸಂಚಾರಮಾಡುತ್ತಿರುವಾಗ ನನಗೊಂದು ವಿಚಿತ್ರವಾದ ಹಾಗೂ ಮನಕರಗುವಂಥ ಅನುಭವವಾಯಿತು. ಇದು ನನ್ನ ಅನೇಕ ಅನುಭವಗಳಂತೆ ವಾಸ್ತವವಾಗಿ ನಡೆದುದಕ್ಕಿಂತ ಹೆಚ್ಚು ಸಾಂಕೇತಿಕ ಬೆಲೆಯುಳ್ಳದ್ದಾಗಿತ್ತು. ಗುಡ್ಡದ ಮೇಲಿದ್ದ ಗ್ರಾಮವೊಂದರಲ್ಲಿ ನಾನು ತಂಗಿದ್ದೆ.

ಹೊರಗಿನವರು ಯಾರೂ ಅಲ್ಲಿಗೆ ಬರುತ್ತಿರಲಿಲ್ಲ. ಅಲ್ಲಿ ಮಾಟಮಂತ್ರ ಮಾಡುತ್ತಾರೆಂಬ ಪ್ರತೀತಿ. ವಾಸ್ತವವಾಗಿ ಅಲ್ಲಿ ಕೆಲವು ಖೂನಿ ಹಾಗೂ ಆತ್ಮಹತ್ಯೆಗಳು ನಡೆದಿದ್ದುವು. ಆದರೆ ಈ ಸ್ಥಳ ಸೊಗಸಾಗಿತ್ತು. ಅಲ್ಲಿ ಕಾಣುತ್ತಿದ್ದ ಮನಮೋಹಕ ದೃಶ್ಯಗಳೂ ಆ ಮುದ್ದು ಬಾಲಕರೂ ನನ್ನ ಮನಸ್ಸನ್ನು ಆಕರ್ಷಿಸಿದುವು. ಒಂದು ದಿನ ಅನಾಥ ಬಾಲಕನೊಬ್ಬ ನನ್ನ ಬಿಡಾರಕ್ಕೆ ಬಂದು ನನಗೆ ಅಂಟಿಕೊಂಡುಬಿಟ್ಟ. ಆ ತಬ್ಬಲಿ ಹುಡುಗ ಹೊಟ್ಟೆಗಿಲ್ಲದೆ ಸವೆದುಹೋಗಿದ್ದ. ನಡೆಯುವುದಕ್ಕೇ ಆಗುತ್ತಿರಲಿಲ್ಲ. ನಗುವುದಕ್ಕೂ ಸಾಧ್ಯವಿರಲಿಲ್ಲ. ನನ್ನ ಗುಡಿಸಲಿನಲ್ಲಿಯೇ ಅವನಿಗೆ ಅನ್ನಹಾಕಿ ಇಟ್ಟುಕೊಂಡೆ. ಆತನ ಹೆಸರು ರೈಸಿಂದ ಎಂದು. ಸವೋರಾ ಜನರು ಅವನನ್ನು ಕೊಕ್ಕರಗಾಲ ಎಂಬ ಅಡ್ಡಹೆಸರಿನಿಂದ ಕರೆಯುತ್ತಿದ್ದರು. ಅವನು ಬಹುಶಃ ನ್ಯುಮೋನಿಯಾ ಮತ್ತು ಇತರ ಕಾಯಿಲೆಗಳಿಂದ ನರಳುತ್ತಿದ್ದನೆಂದು ಕಾಣುತ್ತದೆ. ಒಳ್ಳೆಯ ನಡತೆಯ ಮುದ್ದು ಬಾಲಕ ಆತ. ನಿಲ್ಲುವುದಕ್ಕೂ ಶಕ್ತಿ ಇರಲಿಲ್ಲ ಆತನಿಗೆ. ಆದರೂ ಬೆಳಗ್ಗೆ ಎದ್ದಾಗ ಅವನ ಹಾಸಿಗೆ ಅವನೇ ಎತ್ತುತ್ತಿದ್ದ. ಟೀ ಕುಡಿದ ಮೇಲೆ ಅವನೇ ಲೋಟ ತೊಳೆಯುತ್ತಿದ್ದ. ಬಹಳ ಕಾಯಿಲೆಯಿಂದ ನರಳುತ್ತಿದ್ದ ಆ ಹುಡುಗ ಮಲಗಿಕೊಳ್ಳಲು ಆಗುವುದಿಲ್ಲ ಎನ್ನುತ್ತಿದ್ದ. ಮಲಗಿಕೊಂಡರೆ ತನ್ನ ಕಿವಿಯೊಳಕ್ಕೆ ಇರುವೆ ಹೋದಂತೆ ಆಗುತ್ತೆ ಎನ್ನುತ್ತಿದ್ದ. ಮೊದಲು ಬಂದಾಗ ಉಸಿರು ಬಿಟ್ಟರೆ ಗೊರ್ರ ಗೊರ್ರ ಎನ್ನುತ್ತಿದ್ದ. ನಾವು ಔಷಧಿ ಕೊಟ್ಟಮೇಲೆ ಕೊಂಚ ಗೆಲುವಾದ. 'ಪಿಕಾ' ಎಂಬ ಬೀಡಿ ಸೇದಬೇಕೆಂದು ಆ ಹುಡುಗ ಹೇಳುತ್ತಿದ್ದ. ಆ ಬುಡಕಟ್ಟಿನ ಜನರೆಲ್ಲರ ಚಾಳಿ ಅದು. ಅದನ್ನು ತರಿಸಿಕೊಟ್ಟೆ. ಪ್ರತಿದಿನ ಬೆಳಗ್ಗೆ ಹೆಂಡ ಬೇಕೆನ್ನುತ್ತಿದ್ದ. ಅದನ್ನೂ ತರಿಸಿಕೊಟ್ಟೆ. ಹೆಂಡ ಇದ್ದರೆ ಬೇರೆ ಊಟ ಬೇಡ ಎನ್ನುತ್ತಿದ್ದ. ನನ್ನ ತೊಡೆಯಮೇಲೆ ಕುಳಿತುಕೊಳ್ಳುವುದೆಂದರೆ ತುಂಬಾ ಆಸೆ ಆತನಿಗೆ. ಕೊನೆಕೊನೆಗೆ ಅವನಿಗೆ ಬುದ್ಧಿ ಸರಿಯಾಗಿಲ್ಲದಿರುವಾಗ ನನ್ನನ್ನು 'ತಾಯಿ' ಎಂದು ಕರೆಯುತ್ತಿದ್ದ. ಅವನ ಕೊನೆಗಾಲ ಸಮೀಪದಾಗ ಆತ ತಾನು ಸೇದಿದ ಬೀಡಿಗಳನ್ನು ನನ್ನ ಜೇಬಿನೊಳಗೆ ಹಾಕಿದ – ಬೇಕಾದಾಗ ಅವನ್ನು ತೆಗೆದುಕೊಳ್ಳೋಣವೆಂದು. ಸಾಯುವ ಮುನ್ನ ನಿಜವಾಗಿಯೂ ಎರಡು ಸಲ ಹುಸಿನಗೆ ನಕ್ಕ. ಮಲಗಿಕೊಂಡಿರುವಾಗ ಆತ ತೆಪ್ಪಗೆ ಪ್ರಾಣಬಿಟ್ಟ.

ರೈಸಿಂದ ಬದುಕಲು ತುಂಬಾ ಪ್ರಯತ್ನಪಟ್ಟ. ಒಂದು ದಿನ ರಾತ್ರಿ ಒಬ್ಬಮಾಟಗಾತಿ ತನ್ನ ಗುಡಿಸಲಿನಲ್ಲಿ ಮಾಟತಂತ್ರ ಮಾಡುತ್ತಿರುವಂತೆ ನನಗೊಂದು ಕನಸಾಯಿತು. ನಾನು ಕಗ್ಗತ್ತಲೆಯ ಗುಹೆಯಲ್ಲಿ ಇದ್ದೆ. ಸವೋರಾ ಜನರ ಮಾರಮ್ಮನಾದ 'ಜಮ್ಮಾಸಮ್ಮ' ಆ ಹುಡುಗನನ್ನು ಎತ್ತಿಕೊಂಡು ಹೋಗುವುದಕ್ಕೆ ಬಂದಳು. ದೀಪ ಹಚ್ಚಲು ನಾನು ಒದ್ದಾಡಿದೆ. ಎಷ್ಟು ಬೆಂಕಿಕಡ್ಡಿಗಳನ್ನು ಗೀಚಿದರೂ ಅವು ಹತ್ತಲಿಲ್ಲ. ಆಗ ನನಗೆ ಎಚ್ಚರವಾಯಿತು. ಮನಸ್ಸಿನಲ್ಲಿ, 'ಪ್ರೇಮವೇ ನಿಜವಾದ ಅಸ್ತ್ರ; ಪ್ರೇಮವೇ ಉಡುಪು; ಪ್ರೇಮವೇ ನನ್ನ ನಿಧಿ' ಎಂಬ ಮಾತು ಮಿಡಿಯಿತು.

ಆ ದಿನ ಸಂಜೆ ವಿಶ್ವಸಂಸ್ಥೆಯಲ್ಲಿ ಕೊರಿಯಾ ಬಗ್ಗೆ ಆದ ಚರ್ಚೆಯ ಸುದ್ದಿ ಬಂದಿತು. ಆಟಂಬಾಂಬ್ ಉಪಯೋಗಿಸುವ ಬೆದರಿಕೆ ಹಾಕಲಾಗಿತ್ತು. ಆ ಕಾರಣ ಪ್ರೇಮವೇ ನಿಜವಾದ ಅಸ್ತ್ರ. ನನ್ನ ಹಾಸಿಗೆಯ ಒಂದೆರಡು ಬಟ್ಟೆಗಳನ್ನು ಆ ಹುಡುಗನಿಗೆ ಹಾಸಿಕೊಳ್ಳಲು ಕೊಟ್ಟಿದ್ದೆ. ಅದರಿಂದ ನನಗೆ ಚಳಿ ಕಾಣಿಸಲೇ ಇಲ್ಲ. ಆದರೂ ಮೊದಲಿಗಿಂತ ಹೆಚ್ಚು ಹಿತಕರವಾಗಿತ್ತು. ಈ ಕಾರಣ ಪ್ರೇಮವೇ ಉಡುಪು. ದುಡ್ಡಿಗಾಗಿ ನಾನು ಒದ್ದಾಡುತ್ತಿದ್ದೆ. ಅದಕ್ಕಾಗಿ ಕನಸಿನಲ್ಲಿ ನನಗೆ ಬೈಗುಳ. ನಿಜವಾದ ನಿಧಿ ಏನೆಂದು ಕನಸು ಹೇಳಿತು.

ಆ ಸಾಯುವ ಹುಡುಗ ನಮ್ಮ ಬಿಡಾರಕ್ಕೆ ಬಂದು ನಮ್ಮೆಲ್ಲರ ಮನಸ್ಸನ್ನು ಸೆಳೆದುಬಿಟ್ಟಿದ್ದ; ಎಲ್ಲರ ಮನಸ್ಸಿನಲ್ಲಿಯೂ ಕನಿಕರ ಹುಟ್ಟಿಸಿಬಿಟ್ಟಿದ್ದ. ಆಗ ನನ್ನ ದಿನಚರಿಯಲ್ಲಿ ಹೀಗೆ ಬರೆದೆ. 'ಹುಟ್ಟಿದ ಜೀವಿಗೆ ಇಂಥ ಕಷ್ಟ; ಹೊಟ್ಟೆಗಿಲ್ಲ. ಹೇಳಿ ಕೇಳುವವರಿಲ್ಲ. ಅಯ್ಯೋ ಪಾಪ ! ನಿಷ್ಪ್ರಯೋಜಕವಾದ ಈ ಪ್ರಾಣಿ ಈ ಪ್ರಪಂಚಕ್ಕೇಕೆ ಬಂತು ?'

ಇನ್ನೊಂದು ಪ್ರಸಂಗ ನಡೆಯಿತು. ಒಬ್ಬ ಹಿಂದೂ ಸಾಧು ತನ್ನ ಕೊನೆಗಾಲದಲ್ಲಿ ನಮ್ಮ ಬಳಿಗೆ ಬಂದ. ಸಾಯುವವರೆಗೂ ಅವನು ಧೈರ್ಯವಾಗಿದ್ದ. ಆದರೆ ಸತ್ತಾಗ ಯಾರೂ ಹತ್ತಿರ ಬರಲಿಲ್ಲ. ನಾವೇ ಶವವನ್ನು ಹೊರಗಿಟ್ಟು ಮೈತೊಳೆದು ಕಾಡಿನ ಕಣಿವೆಯಲ್ಲಿದ್ದ ಸ್ಮಶಾನಕ್ಕೆ ತೆಗೆದುಕೊಂಡು ಹೋಗಿ ದಹನಮಾಡಿದೆವು. ಹಿಂದಿನ ರಾತ್ರಿಯ ಅವನ ಕಾಯಿಲೆ ಮತ್ತು ಸಾವಿನ ಭೀಕರತೆಗಿಂತ ಹುಟ್ಟಿ ಮೇಲೇರುತ್ತಿದ್ದ ಸೂರ್ಯನನ್ನು ಮುಟ್ಟಲು ಮೇಲೇಳುತ್ತಿದ್ದ ಚಿತೆಯ ಕೆಂಪು ಜ್ವಾಲೆ ಹಾಗೂ ಅದರ ಸುತ್ತಮುತ್ತಣ ಶಾಂತವಾದ ಬೆಟ್ಟಕಾಡು ಎಷ್ಟೋ ಚೆಲುವಾಗಿ ಕಾಣಿಸಿದುವು.

ಒಮ್ಮೆ ಮೇಹರೋಗದಿಂದ ನರಳುತ್ತಿದ್ದ ಹಜಾಮನೊಬ್ಬ ನಮ್ಮ ಬಳಿಗೆ ಬಂದ. ಅವನನ್ನು ನೋಡಿಕೊಳ್ಳುವವರು ಯಾರೂ ಇರಲಿಲ್ಲ – ಅಂಗವಿಕಲನಾದ ತಂದೆಯನ್ನು ಬಿಟ್ಟರೆ. ಅವನಿಗೆ ನಮ್ಮ ಕೈಲಾದ ಔಷಧಿ ಕೊಟ್ಟೆವು. ಆದರೆ ಅವನು ಬದುಕಲಿಲ್ಲ. ಅವನ ಹೊಲಸು ಶವವನ್ನು ಗೊಂಡರು ಯಾರೂ ಮುಟ್ಟಲು ಮುಂದೆ ಬರಲಿಲ್ಲ. ಅವನಿಗೆ ಮೇಹರೋಗ ಇತ್ತು ಎಂಬುದು ಕಾರಣವಾಗಿರಲಿಲ್ಲ. ಅವನು ಹಜಾಮನೆಂಬುದೇ ಕಾರಣವಾಗಿತ್ತು. ಆದರೂ ಇಬ್ಬರು ಮುಂದೆ ಬಂದರು. ಕುಲದಿಂದ ಹೊರಗೆಹಾಕುತ್ತೇವೆಂಬ ಬೆದರಿಕೆ ಹಾಕಿದರೂ ಅವರು ಧೈರ್ಯ ಮಾಡಿದರು. ಅವರಿಬ್ಬರ ಸಹಾಯದಿಂದ ನಾನೂ ಶಾಮರಾವೂ ಹೆಣವನ್ನು ಹೂಳಿಬಂದೆವು.

ಇಂಥ ಸಣ್ಣಪುಟ್ಟ ಕೆಲಸಗಳನ್ನು ಮಾಡಿದಾಗ ಮನಸ್ಸಿಗೆ ಎಷ್ಟೋ ನೆಮ್ಮದಿ ಯಾಗುತ್ತಿತ್ತು. ಹೀಗಿರುವಾಗ ಜನಗಳು ಇಂಥ ಅಲ್ಪಸೇವೆಯನ್ನು ಸಲ್ಲಿಸುವುದಿಲ್ಲವೇಕೆ ಎಂದು ಆಶ್ಚರ್ಯವಾಗುತ್ತದೆ. 'ನಾವು ಒಳ್ಳೆಯದನ್ನು ಮಾಡಿದ ಪಕ್ಷದಲ್ಲಿ ಸಣ್ಣಪುಟ್ಟ

ಒಳಿತನ್ನು ಒಬ್ಬ ವ್ಯಕ್ತಿಗಾಗಿ ಮಾಡಬೇಕು' ಎಂದು ಬ್ಲೇಕ್ (William Blake : ೧೭೫೭–೧೮೨೭) ಹೇಳಿದ ಮಾತು ಸತ್ಯವೆಂದು ಶಾಮರಾವ್ ಒಂದು ಸಲ ತೋರಿಸಿಕೊಟ್ಟರು.

ನಾವು ಕಾರಂಜಿಯಾದಲ್ಲಿರುವಾಗ ಒಬ್ಬ ವಯಸ್ಸಾದ ಪರ್ಧಾನ್ ನಮ್ಮಲ್ಲಿಗೆ ಬಂದ. ಕುಷ್ಠರೋಗ ತಗುಲಿದ ಆತ ಕುರುಡನಾಗಿ ಅಂಗವಿಕಲನಾಗಿಬಿಟ್ಟಿದ್ದ. ಅವನ ಕೈಯಲ್ಲಿ ಯಾವ ಕೆಲಸವೂ ಆಗುತ್ತಿರಲಿಲ್ಲ. ಅವನಿಗೆ ಚಿಕ್ಕ ಹೆಂಡತಿ ಬೇರೆ. ಅವಳ ಹೆಸರು ಸತೂಲ ಎಂದು. ಅವರಿಬ್ಬರನ್ನು ನೋಡಿದ ಮೇಲೆ ಸಂಸಾರಸ್ಥರಲ್ಲಿ ಇರಬಹುದಾದ ಅತ್ಯಂತ ದೊಡ್ಡಗುಣ ಅವರಲ್ಲಿ ಇದೆ ಎನ್ನಿಸಿತು. ಆ ಮುದುಕನನ್ನು ಬಿಟ್ಟು ಆಕೆ ಬೇರೊಬ್ಬನನ್ನು ಮದುವೆಯಾಗಿ ಸುಖವಾಗಿರಬಹುದಿತ್ತು. ಅವಳ ಅಂದಚಂದಕ್ಕೆ ಯಾವ ಯುವಕನಾದರೂ ಮಾರು ಹೋಗುತ್ತಿದ್ದ. ಆದರೂ ಆಕೆ ಆ ಮುದುಕನ ಸೇವೆಯನ್ನು ಅವನು ಸಾಯುವವರೆಗೂ ಮಾಡಿದಳು. ಅಷ್ಟರೊಳಗೆ ಆಕೆಗೂ ಕುಷ್ಠರೋಗ ಅಂಟಿಕೊಂಡಿತು. ಗಂಡ ಸತ್ತ ಹಲವಾರು ವರ್ಷಗಳಲ್ಲಿ ಅವಳೂ ಸತ್ತುಹೋದಳು.

ಅಂದಚೆಂದದ ಯುವಕ ಯುವತಿಯರು ಕುಷ್ಠರೋಗಕ್ಕೆ ಗುರಿಯಾಗುತ್ತಿದ್ದುದನ್ನು ನೋಡಿ ನನಗೆ ತುಂಬಾ ವ್ಯಸನವಾಗುತ್ತಿತ್ತು. ಪ್ರೇಮಸುಧೆಯನ್ನು ಸವಿಯುತ್ತಿರುವ, ಪ್ರೇಮಕ್ಕೆ, ಹಾತೊರೆಯುತ್ತಿರುವ ಆ ಹುಡುಗ ಹುಡುಗಿಯರಿಗೆ ಎಂತಹ ದುರ್ಗತಿ !

ನಾನು ಪಟಾನ್‌ಘರ್‌ನಲ್ಲಿದ್ದಾಗ ಕವನಗಳನ್ನು ಬರೆಯುವ ಹುಚ್ಚು ಹಿಡಿದಿತ್ತು ನನಗೆ. ಆ ಕವನಗಳನ್ನು '೨೮ ಕವನಗಳು' ಎಂಬ ಹೆಸರಿನಲ್ಲಿ ನಾನೇ ಪ್ರಕಟಿಸಿದೆ. ಅದರಿಂದೀಚೆಗೆ ಕವನಗಳನ್ನು ಬರೆಯುವ ಗೋಜಿಗೆ ಹೋಗಲಿಲ್ಲ. ನನ್ನ ಕವನಗಳಲ್ಲಿ ಹಳ್ಳಿ ಮತ್ತು ಹಳ್ಳಿಯ ಜನರ ಬಗ್ಗೆ ನನ್ನ ಅನುತಾಪವನ್ನು ವ್ಯಕ್ತಪಡಿಸಿದೆ. ಒಂದು ಕವನ, ಗಿರಿಜನರ ಯುವತಿಯೊಬ್ಬಳಲ್ಲಿ ಮೊಟ್ಟಮೊದಲು ಕಾಣಿಸಿಕೊಳ್ಳುವ ಕುಷ್ಠ ರೋಗದ ಗುರುತುಗಳನ್ನು ಕುರಿತದ್ದಾಗಿತ್ತು :

ಎಲೆ ಮುದ್ದು ಯುವತಿ, ನಿನಗೆಂಥ ದುರ್ಗತಿ !
ಚಿನ್ನದ ತಗಡು ನಿನ್ನ ಚರ್ಮ ಯುವಕ ಮೆಚ್ಚೆ,
ಅಂಥ ಚರ್ಮದ ಮೇಲೆ ಎಂಥ ಮಚ್ಚೆ !
ಮೋಸಗಾರ ಒಳಗೆ ಇಹನು – ಅಯ್ಯೋ, ಯಾರ ಇಚ್ಛೆ!

ನನ್ನ ತಂಗಿ ಎಲ್ಡಿತಳು ಎರಡನೆಯ ಯುದ್ಧ ಆರಂಭವಾಗುವುದಕ್ಕೆ ಕೆಲವು ತಿಂಗಳ ಮುನ್ನ ಪಟಾನ್‌ಘರ್‌ಗೆ ಬಂದಿದ್ದಳು ಎಂದು ಹೇಳಿದೆನಷ್ಟೆ. ಆಕೆ ಬಂದು ಕೆಲವು ಕಾಲ ನಮ್ಮೊಡನೆ ಇದ್ದಳು. ಜನರಿಗೆ ಅವಳನ್ನು ಕಂಡರೆ ಪ್ರೀತಿ, ಅವಳ ಸಣ್ಣಗುಡಿಸಲಿನ ತುಂಬ ಯಾವಾಗಲೂ ಜನ ತುಂಬಿರುತ್ತಿದ್ದರು. ಪಟಾನ್‌ಘರ್‌ನಲ್ಲಿ

ನಡೆಸಿದ ನಮ್ಮ ಬಾಳಿನ ಬಗ್ಗೆ ಬರೆಯಲು ನನಗೆ ಕಷ್ಟವಾಗಿ ಕಾಣುತ್ತೆ. ಆದ್ದರಿಂದ ಆಕೆ ಬರೆದ ಪತ್ರಗಳಿಂದ ಕೆಲವು ಭಾಗಗಳನ್ನು ಆರಿಸಿಕೊಡುತ್ತೇನೆ.

'ಕುಷ್ಠರೋಗಿಗಳ ಮನೆ ಹತ್ತಿರದಲ್ಲೇ ಇದೆ. ಅದು ತುಂಬಾ ಸೊಗಸಾದ ಸ್ಥಳ. ಆ ಬಿಳಿಯ ಪುಟ್ಟಮನೆಗಳ ಮಧ್ಯೆ ಬಾಳೆ ಮತ್ತು ಹೂವು ಬೆಳೆದಿವೆ. ಶಾಲೆ ಇದೆ, ಆಸ್ಪತ್ರೆ ಇದೆ. ಶಾಮರಾವ್ ಬಂದ ರೋಗಿಗಳಿಗೆ ಇಂಜೆಕ್ಷನ್ ಕೊಟ್ಟು ತಮ್ಮ ಪ್ರೇಮವನ್ನು ಪಸರಿಸುತ್ತಿದ್ದಾರೆ. ಕಾಲು ಊದಿಸಿಕೊಂಡು ಬಂದ ಜನರೊಡನೆ ಅವರು ತಮಾಷೆಯಾಗಿ ಮಾತನಾಡಿ, ವಿಕಾರವಾದ ಮುಖದಲ್ಲಿ ನಗುವನ್ನು ಮೂಡಿಸುತ್ತಿದ್ದಾರೆ. ಕುಷ್ಠರೋಗದ ಐದು ಪುಟ್ಟ ಮಕ್ಕಳು ಅವರ ಬಳಿ ಅಡ್ಡಾಡುತ್ತಿರುತ್ತವೆ. ಚೆಲುವಿನ ಬಾಲಕನೊಬ್ಬನಿಗೂ ಕುಷ್ಠರೋಗ ಈಗತಾನೇ ಕಾಣಿಸಿಕೊಂಡಿದೆ. ಶಾಮರಾವ್ ಆ ಮಗುವಿಗೆ ಮೊಟ್ಟಮೊದಲನೆಯ ಇಂಜೆಕ್ಷನ್ ಕೊಟ್ಟಾಗ ಅದರ ಅಪ್ಪ ಗಟ್ಟಿಯಾಗಿ ಅತ್ತುಬಿಟ್ಟ. ಇಲ್ಲಿ ಕಂಡಹಾಗೆ ದುರಂತ ನಡೆಯುತ್ತಿದೆ. ಆದರೂ ನೋಡಿಕೊಳ್ಳುವವರೊಬ್ಬರಿದ್ದಾರೆ. ಉಡಲು ಬಟ್ಟೆ, ತಿನ್ನಲು ಅನ್ನ ಇವೆ. ಹೇಳಿ ಕೇಳುವವರು ಇದ್ದಾರೆ'.

'ಎತ್ತ ತಿರುಗಿದರತ್ತ ನೋವಿನ ಬೇಗೆ ಕಾಣಿಸುತ್ತಿದೆ. ರೋಗದ ದಾರುಣತೆಯಲ್ಲಿ ನರಳುತ್ತಿದ್ದಾರೆ ಈ ಜನ. ಈ ರೋಗ ಸ್ವಲ್ಪದರಲ್ಲಿ ಗುಣವಾಗುವುದಿಲ್ಲ. ಹೊಟ್ಟೆಗಿಲ್ಲದೆ ಜನ ಬಡಕಲಾಗಿದ್ದಾರೆ, ಆಶ್ರಮದ ಹತ್ತಿರ ಗುಡ್ಡದ ಬಳಿ ಸೇರುವ ಸಂತೆಗೆ ಬಂದವರನ್ನು ನೋಡಿದರೆ ಇದು ಸ್ಪಷ್ಟವಾಗುತ್ತದೆ. ಇನ್ನೂ ಚಿಕ್ಕ ವಯಸ್ಸಿನ ಹೆಂಗಸರು ಆಗಲೇ ಮುದುಕಿಯರಂತೆ ಕಾಣುತ್ತಾರೆ. ಹೆಂಗಸರೆಲ್ಲ ಬಡಕಲು. ಸಂತೆಗೆ ವ್ಯಾಪಾರಕ್ಕಾಗಿ ಕೇವಲ ಸಣ್ಣ ಪುಟ್ಟ ಸಾಮಾನುಗಳು ಬರುತ್ತವೆ. ಮೆಣಸಿನಕಾಯಿ, ಒಣಗಿದ ಮೀನು, ಒಂದಿಷ್ಟು ಸಿಹಿತಿಂಡಿ, ಹೊಗೆಸೊಪ್ಪು, ಬಳೆ ಮತ್ತು ಅಷ್ಟಿಷ್ಟು ಬಟ್ಟೆ. ಇಷ್ಟಾದರೂ ಸಂತೆಗೆ ಬರಲು ಎಲ್ಲರಿಗೂ ಆಸೆ. ಸುತ್ತ ಹತ್ತಾರು ಮೈಲಿಗಳಿಂದ ನಡೆದುಕೊಂಡು ಬರುತ್ತಾರೆ.'

'ಈ ಹಳ್ಳಿಯನ್ನು ನೋಡಬೇಕು ನೀನು. ಬಡವರಾದರೂ ಹಳ್ಳಿಯವರು ತುಂಬಾ ಒಳ್ಳೆಯವರು. ಮುಂದುವರಿಯುವುದೆಂದರೆ ಆಗದು ಇವರಿಗೆ. ಆದರೂ ನಿನ್ನ ಮನಸ್ಸಿನಲ್ಲಿ ಸ್ಥಿರವಾಗಿ ಉಳಿಯುತ್ತಾರೆ. ಅಣ್ಣ ವೆರಿಯರ್ ಮತ್ತು ಶಾಮರಾವ್ ಇಂಥ ಜನರ ಮಧ್ಯೆ ಇದ್ದುಕೊಂಡು, ಏನೇ ಕಷ್ಟ ಬಂದರೂ ಸಹಿಸಿಕೊಂಡು, ಕೈತುಂಬ ಈ ಜನರಿಗೆ ಸಹಾಯಮಾಡುತ್ತಿದ್ದಾರೆ'.

'ಪಟಾನ್‌ಘರ್ ಬಿಡುವಾಗ ನನಗೆ ತುಂಬಾ ಅಳು ಬಂತು. ಹಳ್ಳಿಯವರೂ ಕಣ್ಣಲ್ಲಿ ನೀರು ಸುರಿಸುತ್ತಿದ್ದರು.'

ನಾನೂ ಶಾಮರಾವೂ ನನ್ನ ತಂಗಿಯೊಡನೆ ಇಂಗ್ಲೆಂಡಿಗೆ ಹೊರಟೆವು. ನಾವು ಹೊರಡುವುದಕ್ಕೆ ಕೆಲವು ದಿವಸಗಳ ಮುನ್ನ ಹದಿನಾರು ವರ್ಷದ

ಹುಡುಗಿಯೊಬ್ಬಳು ಚಿಕಿತ್ಸೆಗಾಗಿ ಬಂದಳು. ಆಕೆ ಮೇಹರೋಗ ಪೀಡಿತಳಾಗಿದ್ದಳು. ನಾನೆಷ್ಟೋ ಮೇಹರೋಗಿಗಳನ್ನು ನೋಡಿದ್ದೇನೆ. ಆದರೆ ಆಕೆಯ ರೋಗದಂಥ ರೋಗ ನೋಡಲಿಲ್ಲ. ಎಲ್ವಿತ್ ತನ್ನ ಕೋಣೆಯಲ್ಲೇ ಒಂದು ಹಾಸಿಗೆ ಹಾಕಿಕೊಟ್ಟು ಅವಳ ಶುಶ್ರೂಷೆ ಮಾಡಿದಳು. ಆದರೆ ರೋಗ ಕೈಮೀರಿ ಹೋಗಿತ್ತು. ನಾವು ಹೊರಡುವಾಗ ಆಕೆಯನ್ನು ನಮ್ಮ ಕಾರಿನಲ್ಲಿ ಕರೆದುಕೊಂಡುಬಂದು ಹತ್ತಿರದ ಆಸ್ಪತ್ರೆಗೆ ಸೇರಿಸಿದೆವು. ನಾನು ಆಕೆಯನ್ನು ಮುಂಚೆ ನೋಡಿರಲಿಲ್ಲ; ಆಮೇಲೂ ಆಕೆಯನ್ನು ನೋಡಲಿಲ್ಲ. ಆದರೆ ಆಕೆಯನ್ನು ಎಂದೂ ಮರೆಯಲಾರೆ.

ಮೂರು ತಿಂಗಳು ಇಂಗ್ಲೆಂಡಿನಲ್ಲಿದ್ದು ನಾನು ಹಿಂದಿರುಗಿದೆ. ಹಿಂದಿರುಗಿದಾಗ ಗೊತ್ತಾಯಿತು, ಒಂದು ಸಂಗತಿ. ಆಕೆಯನ್ನು ಎರಡು ವರ್ಷಗಳ ಕಾಲ ನಾನು ಇಟ್ಟುಕೊಂಡಿದ್ದೆ ಎಂದು ಆಗದ ಸ್ಥಳದ ಜನ ಮ್ಯಾಜಿಸ್ಟ್ರೇಟರ ಮುಂದೆ ಆಕೆಯಿಂದ ಹೇಳಿಸಿದ್ದರು. ಕೋರ್ಟು ಈ ಹೇಳಿಕೆಯನ್ನು ನಂಬಲಿಲ್ಲ. ಆದ್ದರಿಂದ ಮುಂದೇನೂ ಆಗಲಿಲ್ಲ.

ಪಟ್ಟಭದ್ರ ಹಿತಗಳನ್ನು ವಿರೋಧಿಸಿ ಹಳ್ಳಿಗಳಲ್ಲಿ ಕೆಲಸಮಾಡುವುದು ನಿಜವಾಗಿಯೂ ಅಪಾಯ ಎಂಬುದು ಈ ಘಟನೆಯಿಂದ ಅರ್ಥವಾಗುತ್ತದೆ. ಇಂಥ ಘಟನೆಗಳಿಂದ ನಿರಾಶನಾಗದಿದ್ದರೆ ಮಾತ್ರ ಹಳ್ಳಿಗಳಲ್ಲಿ ಕೆಲಸ ಮಾಡಬಹುದು. ಇಲ್ಲದಿದ್ದರೆ ಸಾಧ್ಯವಿಲ್ಲ. ಆದರೆ ನಮ್ಮನ್ನು ದ್ವೇಷಿಸುವವರನ್ನು ನಾವು ದ್ವೇಷಿಸದೆ, ದ್ವೇಷಿಸುವವರ ಮಧ್ಯೆ ಗೆಳೆತನವನ್ನು ಬೀರಿ ದ್ವೇಷವಿಲ್ಲದೆ ಬಾಳುವುದಾದರೆ, ನಾವು ದೇವತೆಗಳೇ ಸರಿ. ಅದರಿಂದ ನಮಗೆ ಬರುವುದು ಅಪಾರ ಆನಂದ.

ಗೊಂಡ್ ಗ್ರಾಮಗಳಲ್ಲಿ ನಾನು ಕಳೆದ ಅನೇಕ ವರ್ಷಗಳಲ್ಲಿ ಅನೇಕ ವಿಷಯಗಳನ್ನು ಕಲಿತುಕೊಂಡೆ. ಆದರೆ ಇನ್ನೂ ಜಾಗ್ರತೆಯಾಗಿ ಕಲಿಯಬಹುದಾಗಿತ್ತು. ನನ್ನೀ ಆತ್ಮಚರಿತ್ರೆಯಲ್ಲಿ ಕಷ್ಟಗಳನ್ನು ಬೇಕಾಗಿಯೇ ಹೇಳಿಕೊಂಡಿಲ್ಲ. ಸಿಡ್ನಿ ಸ್ಮಿತ್ ಅವರು ಹೇಳುವಂತೆ ಸುಮ್ಮನೆ ಒದ್ದಾಡುವುದು ಉಪಯೋಗವಿಲ್ಲ. ಒದ್ದಾಡಿದ್ದನ್ನು ಜ್ಞಾಪಿಸಿಕೊಳ್ಳುವುದು ಅಥವಾ ಅದನ್ನು ವರ್ಣಿಸುವುದು ಅಷ್ಟೇ ಉಪಯೋಗವಿಲ್ಲದ್ದು. ಆದರೆ ನೆನಪು ಮಾಡಿಕೊಳ್ಳುವುದು ಒಮ್ಮೊಮ್ಮೆ ಮನುಷ್ಯನಿಗೆ ಒಳ್ಳೆಯದನ್ನು ಮಾಡುತ್ತದೆ. ಮನುಷ್ಯ ವಾಸ್ತವಿಕತೆಯನ್ನು ಹೆಚ್ಚಾಗಿ ಸಹಿಸಲಾರ. ಹಿಂದಿನದನ್ನು ನೆನಸಿಕೊಂಡಾಗ ಅದು ಕೆಟ್ಟದ್ದನ್ನು ಬಿಟ್ಟು ಒಳ್ಳೆಯದನ್ನು ಆರಿಸಿಕೊಳ್ಳುವಂತೆ ಮಾಡುತ್ತದೆ. ಒಟ್ಟಿನಲ್ಲಿ ನನ್ನ ಹಳ್ಳಿಯ ಬಾಳು ಸುಖಮಯವಾಗಿತ್ತು. ಆದರೆ ಎಲ್ಲವೂ ಚೆನ್ನಾಗಿತ್ತೆಂದು ಹೇಳಿದರೆ ತಪ್ಪಾಗುತ್ತದೆ.

ಶಾಮರಾವ್ ಇಲ್ಲದೆ ನಾನು ಏನು ಮಾಡಲೂ ಸಾಧ್ಯವಾಗುತ್ತಿರಲಿಲ್ಲ. ನಾನು ಆಲೋಚಿಸಿದುದನ್ನು ಅವರು ಕಾರ್ಯಗತ ಮಾಡುತ್ತಿದ್ದರು.

ಸಾಂಪ್ರದಾಯಿಕವಾಗಿ ಬಂದ ಮತಧರ್ಮದಿಂದ ಸ್ವಾತಂತ್ರ್ಯ ಪಡೆಯಲು ನಡೆಸಿದ ನನ್ನ ಹೋರಾಟ ಬಹಳ ಕಷ್ಟವಾಗಿತ್ತು. ಮತ್ತೊಬ್ಬರ ಅಭಿಪ್ರಾಯಕ್ಕೆ ಬೆಲೆ

ಕೊಡುತ್ತಿದ್ದ ನನಗೆ ಕಾರಂಜಿಯಾದಲ್ಲಿದ್ದಾಗ ಬರುತ್ತಿದ್ದ ಪತ್ರಗಳನ್ನು ಒಡೆಯಲು ಹೆದರಿಕೆಯಾಗುತ್ತಿತ್ತು. ಮನೋವೇದನೆ ಪಡದೆ ನೀವು ಯಾವುದನ್ನು ಸಾಧಿಸಲು ಸಾಧ್ಯವಾಗುವುದಿಲ್ಲ. ನನಗೆ ಅಂಥ ಮನೋವೇದನೆಯಿಂದ, ಗಿರಿಜನರ ಮತ್ತು ಅವರ ಹಣೇಬರಹವನ್ನು ನೆನಸಿಕೊಂಡು, ಎಷ್ಟೋ ದಿನ ನಿದ್ದೆ ಬರುತ್ತಿರಲಿಲ್ಲ. ಯಾರಾದರೊಬ್ಬ ಜೈಲಿಗೆ ಹೋದರೆ ಅಥವಾ ಜಮೀನು ಕಳೆದುಕೊಂಡರೆ, ಕಾಡಿನಲ್ಲಿ ಅವನಿಗಿದ್ದ ಮೀನು ಹಿಡಿಯುವ ಅಥವಾ ಬೇಟೆಯಾಡುವ ಹಕ್ಕು ಹೋದರೆ ನನಗೆ ಬಹಳ ಸಿಡಿಮಿಡಿಯಾಗುತ್ತಿತ್ತು. ಗಿರಿಜನರ ಶತ್ರುಗಳು ನನ್ನ ಶತ್ರುಗಳಾಗುತ್ತಿದ್ದರು. ಅಂಥ ಸಂದರ್ಭಗಳಲ್ಲಿ ನಾನು ನಿಸ್ಸಹಾಯಕನಾಗಿಬಿಟ್ಟರಂತೂ ನನ್ನ ಸಿಟ್ಟು ಮಿತಿಮೀರುತ್ತಿತ್ತು. ಆ ಕಾಲದಲ್ಲಿ ನನ್ನ ಬಗ್ಗೆ ಅನೇಕ ಜನ ಪತ್ರಿಕೆಗಳಲ್ಲಿ ಬರೆಯುತ್ತಿದ್ದರು. ಮೊದಮೊದಲು ಇದನ್ನು ನೋಡಿ ಸಿಡಿಮಿಡಿಗೊಳ್ಳುತ್ತಿದ್ದೆ. ಆಮೇಲೆ ಬರೆದರೆ ಬರೆದುಕೊಳ್ಳಲಿ ಎಂದು ಸುಮ್ಮನಿದ್ದುಬಿಡುತ್ತಿದ್ದೆ.

ನನ್ನ ಮೊದಲ ಮದುವೆ ನನ್ನ ಅತ್ಯಂತ ದೊಡ್ಡ ಅಪರಾಧವಾಯಿತು. ನಾವು ಪಟಾನ್‌ಘರ್‌ನಲ್ಲಿ ನೆಲಸಿದ ಸ್ವಲ್ಪಕಾಲದಲ್ಲಿಯೇ ನಾನು ಬಹು ರೂಪವತಿಯಾದ ಗೊಂಡಾ ಹುಡುಗಿಯೊಬ್ಬಳನ್ನು ಮದುವೆಯಾದೆ. ಆಕೆಯ ಹೆಸರು ಕೋಸಿ ಎಂದು. ಆಕೆ ಕಾರಂಜಿಯಾಕ್ಕೆ ಹತ್ತಿರದ ಒಂದು ಹಳ್ಳಿಯವಳು. ನನ್ನ ಮೊದಲಿನ ಸುತ್ತಾಟದಲ್ಲಿ ಆಕೆ ನನ್ನೊಡನೆ ಅಲೆದಾಡಿದಳು. ನಮ್ಮಿಬ್ಬರಿಗೆ ಒಂದು ಗಂಡುಮಗು ವಾಯಿತು. ಅದಕ್ಕೆ ಜವಾಹರಲಾಲ್ ಎಂಬ ಹೆಸರಿಟ್ಟೆವು. ಸರನ್‌ಘರ್‌ನ ಗೊಂಡ್ ರಾಜನ ಹೆಸರು ಜವಾಹರ್ ಸಿಂಘ್ ಎಂದು. ಆತ ನನ್ನ ಅಚ್ಚುಮೆಚ್ಚಿನ ಸ್ನೇಹಿತ. ಆತನ ಹೆಸರನ್ನೂ ಜವಾಹರ್‌ಲಾಲ್ ನೆಹ್ರು ಅವರ ಹೆಸರನ್ನೂ ಸೇರಿಸಿ ನಮ್ಮ ಮಗನಿಗೆ ಜವಾಹರ್‌ಲಾಲ್ ಎಂದು ಹೆಸರಿಟ್ಟೆವು. ನಾವು ರೂಢಿಯಾಗಿ ಕರೆಯುತ್ತಿದ್ದುದು ಕುಮಾರ್ ಎಂದು. ದುರದೃಷ್ಟವಶಾತ್ ಈ ಸಂಬಂಧ ಸರಿಯಾಗಲಿಲ್ಲ. ಕೆಲವು ವರ್ಷಗಳ ನಂತರ ನಾನು ನನ್ನ ಹೆಂಡತಿಯಿಂದ ಬೇರೆಯಾದೆ. ಆ ಮದುವೆಯನ್ನು ನೆನಸಿಕೊಂಡರೆ ನನಗೆ ಭಾರೀ ವ್ಯಥೆಯಾಗುತ್ತದೆ; ಅದನ್ನು ಬರೆಯುವುದಕ್ಕೂ ಮನಸ್ಸಾಗುವುದಿಲ್ಲ.

ಅನಂತರ ನಾನು ಪಟಾನ್‌ಘರ್‌ನಲ್ಲಿಯೇ ಇದ್ದ ಪರ್ಧಾನ್ ಹುಡುಗಿ ಲೀಲಾಳನ್ನು ಮದುವೆಯಾದೆ. ಅನಿರೀಕ್ಷಿತವಾಗಿ ಆದ ಆ ಮದುವೆ ನನ್ನ ಬಾಳನ್ನು ಸುಖಮಯವಾಗಿ ಮಾಡಿತು.

'ಹಳ್ಳಿಯ ಬಾಳು ಭಾರಿ ಕಷ್ಟ. ಅಂದವಿಲ್ಲ ಚೆಂದವಿಲ್ಲ'– ಎಂದು ಸಲೀಸಾಗಿ ಮಾತನಾಡುತ್ತೇವೆ. ಆದರೆ ಹಳ್ಳಿಯ ಜನರು ಹಾಯಾಗಿದ್ದಾಗ, ಅದರಲ್ಲಿಯೂ ಗಿರಿಜನರು ತಮ್ಮ ಬಾಳನ್ನು ಎಷ್ಟು ಆದರ್ಶವನ್ನಾಗಿ ಮಾಡಬಲ್ಲರೆಂಬುದಕ್ಕೆ ಗೊಂಡರ ಈ ಜನಪದ ಹಾಡು ಸಾಕು. ಈ ಹಾಡು ನನ್ನ ಅನುಭವವನ್ನೂ ಪ್ರತಿಬಿಂಬಿಸುತ್ತದೆ :

ಭುವಿಯಲೆಲ್ಲ ಸುಖವು ಹಳ್ಳಿಬಾಳು;
ಮನೆಯಲೆಲ್ಲ ಉಳುವ ಎತ್ತು ನೇಗಿಲು;
ನಡೆವರೆಲ್ಲ ಮುದದಿ ನೆಲವನುಳಲು.
ಹೊಲಗೆಯ್ಯುವಾಗ
ಹಬ್ಬದಂಥ ರಾಗ.
ಎಲ್ಲರನ್ನು ಕೇಳಿ ಬಿತ್ತುವರು ಬೆದೆಯ ಹೊಲವ ;
ಮುಳ್ಳುಬೇಲಿ ಹಾಕುವರು ತಡೆಯೆ ನರಿಯ ಕಾಟವ.
ಅಷ್ಟು ಇಷ್ಟು ಹನಿವ ಮಳೆಗೆ,
ಕೆರೆಯು ತುಂಬಿ ಹರಿಯೆ ಭರದಿ ಹೊಳೆಗೆ.
ಸಿಡಿಲು ಗುಡುಗೆ, ಇಳೆಯು ನಡುಗೆ
ಬೆಚ್ಚುತಿಹುದು ಮನವು ;
ಏನುಗತಿಯೆಂದು ಹೆದರುತಿಹುದು ತನುವು.

ದದರಿಯಾ ಹಾಡುತಿಹರು ಕೆಲರು ;
ನುಡಿಸುತಿಹರು ಕೊಳಲ ದನವ ಕಾವ ಬಾಲರು.
ಉತ್ತಮೇಲೆ ಹೊಲದಿ ಮತ್ತೆ ಮಣ್ಣು ;
ಬತ್ತವನ್ನು ಬಿತ್ತಿ ಮುದದಿ ಕುಣಿವರೆಲ್ಲ ಹೆಣ್ಣು.
ಗೆಳೆಯರೆಲ್ಲ ಬೆರೆತು ಆಡುತಿಹರು ಗೇಲಿಮಾಡಿ;
ಮಣ್ಣನೆರಚಿ ಹೋಳಿಯಾಡುತಿಹರದೆಂಥ ಮೋಡಿ !
ಸೇದುತಿಹರು ಕೆಲರು,
ಎಲೆಯ ಜಿಯುತಿಹರು ಹಲರು
ಬರಿದೆ ನೋಡುತಿಹರು
ಕಾಲಕಳೆಯೇ ಇನ್ನು ಹಲರು.
ಭುವಿಯಲೆಲ್ಲ ಸುಖವು ಹಳ್ಳಿಬಾಳು ! *

---

* ಗೊಂಡರನ್ನು ಪರ್ಧಾನರನ್ನೂ ಕುರಿತ ಹೆಚ್ಚು ವಿಷಯಗಳಿಗೆ ಪುಸ್ತಕದ ಕೊನೆಯಲ್ಲಿ ಬರುವ ಟಿಪ್ಪಣಿಗಳನ್ನು ನೋಡಿ.

೬. ಮಾನವ ಪ್ರೇಮಶಾಸ್ತ್ರ

ಒಮ್ಮೆ ಒಂದು ಸಂತೋಷಕೂಟದಲ್ಲಿ ಒಬ್ಬ ಬ್ರಿಟಿಷ್ ಕರ್ನಲನ ಹೆಂಡತಿಗೆ ನಾನೊಬ್ಬ 'ಆಂತ್ರೊಪಾಲೊಜಿಸ್ಟ್' (ಮಾನವಶಾಸ್ತ್ರಜ್ಞ) ಎಂದು ಒಬ್ಬರು ಪರಿಚಯ ಮಾಡಿಕೊಟ್ಟರು. ನನ್ನೊಡನೆ ಒಂದೆ ಸೋಫಾದ ಮೇಲೆ ಕುಳಿತಿದ್ದ ಆಕೆ ಮೆಲ್ಲಮೆಲ್ಲನೆ ದೂರ ಸರಿದು ಕಿರುಗಣ್ಣಿನಲ್ಲಿಯೇ ನನ್ನನ್ನು ನೋಡಿದಳು. ಮೂರು ನಾಲ್ಕು ಲೋಟ ಜಿನ್ ಕುಡಿದು ಧೈರ್ಯ ಬಂದಮೇಲೆ ನನ್ನ ಕಡೆ ತಿರುಗಿ ಮೆಲುದನಿಯಲ್ಲಿ, "ಡಾ॥ ಎಲ್ವಿನ್, ನಿಮ್ಮ ಜಿಲ್ಲೆಯಲ್ಲಿ ಅಂತ್ರೊಪಾಲೊಜಿ ರೋಗ ತುಂಬಾ ಹಬ್ಬಿದೆಯೇನು ?" ಎಂದು ಕೇಳಿದಳು ಆ ಮಾರಾಯಗಿತ್ತಿ !

ನಾನು ಮುಖ್ಯವಾಗಿ ಪಂಡಿತ; ಸಂಶೋಧನೆ ಮಾಡುವ ಮನುಷ್ಯ. ಬರೆದಿದ್ದನ್ನು ಸರಿಯಾಗಿ ಬರೆಯುವುದು ನನ್ನ ಮನಸ್ಸಿಗೆ ತುಂಬಾ ಹಿಡಿಸುತ್ತದೆ. ನನಗೆ ಹತ್ತಿರದಲ್ಲಿ ಯಾವ ಪುಸ್ತಕ ಭಂಡಾರವೂ ಇರಲಿಲ್ಲ. ಆದರೆ ನ್ಯಾಷನಲ್ ಲೈಬ್ರರಿಯನ್ನು ಬಹಳ ಉನ್ನತಮಟ್ಟಕ್ಕೆ ತಂದ ನನ್ನ ಹಳೆಯ ಸ್ನೇಹಿತರಾದ ಬಿ.ಎಸ್. ಕೇಶವನ್ ಮತ್ತು ನ್ಯಾಷನಲ್ ಆರ್ಕೈವಿನ ಪಂಡಿತ ಸರಿನ್‌ರಾಯ್ ಅವರ ಸಹಾಯದಿಂದ ಸಿಕ್ಕದೆ ಇರುವಂಥ ಪುಸ್ತಕಗಳು ನನಗೆ ಸಿಕ್ಕುತ್ತಿದ್ದುವು.

ನಾನು ಕಾಡಿಗೆ ಹೋಗದಿದ್ದ ಪಕ್ಷದಲ್ಲಿ ಬಿಗುಮಾನದ ಪಂಡಿತನಾಗಿಬಿಡುತ್ತಿದ್ದೆ. ಕಾಡಿಗೆ ಹೋದದ್ದರಿಂದ ಹಾಗಾಗಲಿಲ್ಲ. ಅಂತೂ, ನಾನು ಏನು ಬರೆದರೂ ಬಹಳ ಕಟ್ಟಪಟ್ಟು ಬರೆಯುತ್ತಿದ್ದೆ. ಷಿಲ್ಲಾಂಗಿಗೆ ಬರುವವರೆಗೆ ನಾನೇ ಎಲ್ಲವನ್ನು ಬರೆಯುತ್ತಿದ್ದೆ; ಅಥವಾ ಟೈಪು ಮಾಡುತ್ತಿದ್ದೆ. ಅಚ್ಚಿನಮನೆಗೆ ಓಡಿಹೋಗಿ ಏನಾದರೊಂದು ಅಕ್ಷರ ತಪ್ಪಿದ್ದರೂ ತಿದ್ದುತ್ತಿದ್ದ ಅಡಿಸನ್‌ನಂತಿದ್ದ ನಾನು ತಪ್ಪು ಮಾಡುತ್ತಿದ್ದೆ ನಿಜ. ಆದರೆ ತಪ್ಪಾಗದಂತೆ ನೋಡಿಕೊಳ್ಳಲು ಪ್ರಯತ್ನ ಮಾಡುತ್ತಿದ್ದೆ. ನಾನು ಸಂಗ್ರಹಿಸಿದ ವಿಷಯ ಸರಿಯಾಗಿದೆಯೇ ಇಲ್ಲವೇ ಎಂಬುದನ್ನು ಒಂದು ಸಲ, ಅಲ್ಲ, ಎರಡು ಮೂರು ಸಲ ನೋಡುತ್ತಿದ್ದೆ. 'ನಾಗಾಲ್ಯಾಂಡ್' ಎಂಬ ಪುಸ್ತಕವನ್ನು ಒಂದು ಸಲ ಅಲ್ಲ ಹದಿಮೂರು ಸಲ ಪರಿಷ್ಕರಿಸಿದೆ.

ಕಳೆದ ಮೂವತ್ತು ವರ್ಷಗಳಲ್ಲಿ ನಾನು ಮಾನವಶಾಸ್ತ್ರವನ್ನು ಸಾಕಷ್ಟು ಅಭ್ಯಾಸ ಮಾಡಿದೆ. ಆದರೆ ಎಲ್ಲ ಮಾನವಶಾಸ್ತ್ರಜ್ಞರಂತೆ ನಾನು ಮೊದಲು ಆರಂಭಿಸಿದ್ದು ಮಾನವಶಾಸ್ತ್ರವನ್ನಲ್ಲ. ಮಾನವರ ಬಗ್ಗೆ ನನ್ನ ಆಸಕ್ತಿ ಕೆರಳಿದ್ದು ಸಾಹಿತ್ಯದ ಮೂಲಕ. ನನ್ನ ಮೊಟ್ಟಮೊದಲಿನ ಗುರುಗಳು ಜೇನ್ ಆಸ್ಟಿನ್ ಮತ್ತು ಜೊನಾತನ್ ಸ್ವಿಫ್ಟ್,

ಆಸ್ಟಿನಳ Pride and Prejudice (ಪ್ರೈಡ್ ಅಂಡ್ ಪ್ರೆಜುಡೀಸ್) ಮತ್ತು ಸ್ವಿಫ್ಟನ Gullivers Travels (ಗಲಿವರ್ಸ್ ಟ್ರಾವೆಲ್ಸ್)ಗಳಲ್ಲಿ ಸಾಮಾಜಿಕ ವಿಷಯಗಳ ಗಣಿಯೇ ಇದೆ. ಆಮೇಲೆ, ಮತಧರ್ಮಶಾಸ್ತ್ರವನ್ನು ಅಭ್ಯಾಸ ಮಾಡಲಾರಂಭಿಸಿದ ಮೇಲೆ ಮಾನವನ ಬಗ್ಗೆ ಆಸಕ್ತಿ ಹುಟ್ಟಿತು. ಮತಧರ್ಮಶಾಸ್ತ್ರದ ಅಭ್ಯಾಸ ಮಾನವವಿಜ್ಞಾನದ ಕಡೆ ತಿರುಗಿತು. ಕೊಂಚ ಇತಿಹಾಸ, ತತ್ವಶಾಸ್ತ್ರ ಮತ್ತು ಮಾನಸಿಕಶಾಸ್ತ್ರವನ್ನು ಅಭ್ಯಾಸಮಾಡಿದೆ. ಅವೂ ನನ್ನ ಮುಂದಿನ ಕೆಲಸಕ್ಕೆ ದಾರಿ ಮಾಡಿಕೊಟ್ಟವು.

ಪುಣೆಯಲ್ಲಿ ನಾನು ಅಭ್ಯಾಸ ಮಾಡಿದ ಹಿಂದುಮತ ನನಗೆ ಬಹಳ ಸಹಾಯ ಮಾಡಿತು. ಅಸ್ಸಾಂನಲ್ಲಿರುವ ಗಿರಿಜನರನ್ನು ಬಿಟ್ಟರೆ ಉಳಿದ ಕಡೆಯ ಗಿರಿಜನರು ಈ ದೊಡ್ಡಮತದ ಶಕ್ತಿಗೆ ಒಳಗಾಗಿದ್ದಾರೆ. ಹಿಂದೂಮತವನ್ನು ತಿಳಿದುಕೊಳ್ಳದೆ ಆ ಜನರನ್ನು ತಿಳಿದುಕೊಳ್ಳುವುದು ಸಾಧ್ಯವಿಲ್ಲ.

ಮಾನವನನ್ನು, ಇಡೀ ಮಾನವನನ್ನು ಕುರಿತ ವೈಜ್ಞಾನಿಕ ಮಾನವಶಾಸ್ತ್ರ ಬಹಳ ದೊಡ್ಡ ವಿಷಯ, ಅದರ ಅಭ್ಯಾಸಕ್ಕೆ ನಾನಾ ತರಹ ಜನಗಳು ಬೇಕು. ಇತಿಹಾಸಪೂರ್ವ ಕಾಲದ ಅಭ್ಯಾಸ ಮಾಡಿದ ಪಂಡಿತರು ಬೇಕು. ಪ್ರಾಚ್ಯ ಸಂಶೋಧನಾಶಾಸ್ತ್ರ, ಜೀವವಿಜ್ಞಾನಶಾಸ್ತ್ರ ಅಂಕಿಅಂಶ ಸಂಗ್ರಹಣಶಾಸ್ತ್ರ ತಿಳಿದವರಿರ ಬೇಕು. ದೇಹದ ಅಂಗಾಂಗಗಳನ್ನು ಅಳೆಯಬಲ್ಲವರು ಬೇಕು. ಇದರ ಜೊತೆಗೆ ಮನುಷ್ಯ ಸ್ವಭಾವವನ್ನು ಅರಿತವರೂ ಬೇಕು. ಆದರೆ ಇಂಥವರ ಬಗ್ಗೆ ಮಾನವಶಾಸ್ತ್ರಜ್ಞ ತಾತ್ಸಾರ ಭಾವನೆಯನ್ನು ತೋರಿಸುತ್ತಿರುವುದು ದುರದೃಷ್ಟವೇ ಸರಿ. ಮಾನವ ಸ್ವಭಾವವನ್ನು ಅರಿತವನೇ ನಿಜವಾದ ಕೆಲಸಮಾಡುವವನು. ಮಾನವರ ಅಭ್ಯಾಸಮಾಡುವಾಗ ಅವರನ್ನು ಕೇವಲ ಪ್ರಯೋಗಶಾಲೆಯ ವಸ್ತುಗಳನ್ನಾಗಿ ಪರಿಗಣಿಸುವ ಬದಲು, ಮನುಷ್ಯರೆಂದು ಭಾವಿಸಿ ಅವರ ಕಷ್ಟಸುಖದಲ್ಲಿ ಭಾಗಿಯಾಗುವುದು ತಪ್ಪಲ್ಲ. ಮಾನವಶಾಸ್ತ್ರದ ತಿರುಳು ಹಾಗೂ ಕಲೆ ಪ್ರೇಮ. ಅದಿಲ್ಲದೆ, ಯಾವುದೂ ರುಚಿಯಲ್ಲ; ಯಾವುದೂ ಸತ್ಯವಲ್ಲ.

ನನಗೆ ಮಾನವಶಾಸ್ತ್ರವೆಂದರೆ ಹೊರಗಡೆಯ ಕೆಲಸ ಅಷ್ಟೇ ಅಲ್ಲ ; ನನ್ನ ಬಾಳೇ ಅದಾಗಿತ್ತು. ಜನರ ಮಧ್ಯೆ ನೆಲೆಸಿ ಅವರೊಡನೆ ಬಾಳಿ ಹೊರಗಡೆಯವನೊಬ್ಬ ಎಷ್ಟರಮಟ್ಟಿಗೆ ಅವರೊಡನೆ ಬೆರೆಯಬಹುದೋ ಅಷ್ಟರಮಟ್ಟಿಗೆ ಬೆರೆತು, ಹಲವಾರು ಗ್ರಂಥಗಳನ್ನು ಒಟ್ಟಿಗೆ ಬರೆಯುವುದು ನನ್ನ ಕ್ರಮವಾಗಿತ್ತು. ನನ್ನ 'ಬೈಗಾ' ಪುಸ್ತಕ ಬರೆಯಲು ಏಳು ವರ್ಷಗಳಾದುವು. 'ಅಗೇರಿಯಾ' ಬರೆಯಲು ಹತ್ತು ವರ್ಷ. ಮೊಟ್ಟಮೊದಲು ಜನಪದ ಕಥೆಗಳನ್ನು ಸಂಗ್ರಹಿಸಲು ಹತ್ತು ವರ್ಷ ಹಿಡಿಯಿತು. "ಛತ್ತೀಸ್‌ಘರ್ ಜನಪದ ಗೀತೆಗಳು' ಎಂಬುದರಲ್ಲಿರುವ ಹಾಡುಗಳನ್ನು ಸಂಗ್ರಹಿಸಲು ಹದಿನಾಲ್ಕು ವರ್ಷ ಆಯಿತು. ಇವೆಲ್ಲಾ ಒಂದೇ ಸಲ ಸಾಗುತ್ತಿದ್ದುವು. ಇದರಿಂದ ಅರ್ಥವೇನಾಗುತ್ತದೆ ಎಂದರೆ, ನಾನು ಪ್ರಶ್ನೆಗಳನ್ನು ಕೇಳುತ್ತಾ ಸುಮ್ಮನೆ ಇರಲಿಲ್ಲ; ಜನಗಳನ್ನು ಅರ್ಥಮಾಡಿಕೊಂಡಂತೆ ಅವರಲ್ಲಿ ನಾನು ತಲ್ಲೀನನಾಗಿಬಿಡುತ್ತಿದ್ದೆ.

ಜನರನ್ನು ಅರ್ಥಮಾಡಿಕೊಂಡಾಗ ಅವರಿಗೆ ಸಹಾಯ ಮಾಡಬೇಕೆಂಬ ಮನಸ್ಸು ಹುಟ್ಟಿತು. ಅಗೇರಿಯಾ ಜನರ ಅಭ್ಯಾಸ ಮಾಡಿದಾಗ ಅವರು ನಡೆಸಿಕೊಂಡು ಬರುತ್ತಿದ್ದ ಗೃಹಕೈಗಾರಿಕೆ ಹಾಳಾಗದಂತೆ ನೋಡಿಕೊಳ್ಳಬೇಕಾದ ಅವಶ್ಯಕತೆಯ ಅರಿವಾಯಿತು. ಸಂತಾಲರು ಮತ್ತು ಉರಯನರ ಬಗ್ಗೆ ಅಭ್ಯಾಸಮಾಡಿದಾಗ ಅವರಲ್ಲಿರುವ ಕೆಲವು ಕಲೆಗಳನ್ನು ಅಭಿವೃದ್ಧಿಪಡಿಸಬೇಕೆನಿಸಿತು. ಹೊರಗಡೆಯವರನ್ನು ಕಂಡರೆ ಬೊಂಡೋ ಮತ್ತು ಸವೋರಾ ಜನರಿಗೆ ಆಗುತ್ತಿರಲಿಲ್ಲ. ಇದನ್ನು ಕಂಡು ಅಧಿಕಾರ ನಡೆಸುವವರು ಕೊಂಚ ದಿಗ್ಭ್ರಾಂತರಾದರು. ಆದರೆ ಆ ಜನರನ್ನು ಚೆನ್ನಾಗಿ ಅಭ್ಯಾಸ ಮಾಡಿದ ಮೇಲೆಯೇ ನನಗೆ ಅರ್ಥವಾಯಿತು. ಆ ಜನರು ಕೇವಲ ರಕ್ತದಾಸೆಯ ಜನರಷ್ಟೇ ಅಲ್ಲ; ಅವರ ಹೆದರಿಕೆಗೆ ಅವರಲ್ಲಿ ರಕ್ತಗತವಾಗಿರುವ ಧಾರ್ಮಿಕ ಹಾಗೂ ಮಾಂತ್ರಿಕ ಭಾವನೆಗಳೇ ಕಾರಣ ಎಂದು. ಬಿಂಕದ ಪಂಡಿತ ಜನಪದ ಸಾಹಿತ್ಯ ಮತ್ತು ಕಟ್ಟುಕಥೆಗಳನ್ನು ಅಭ್ಯಾಸಮಾಡುವುದು ತಕ್ಕುದಲ್ಲ ಎಂಬ ಭಾವನೆ ಇದೆ. ಆದರೆ ಅವುಗಳ ಅಭ್ಯಾಸ ಆ ಜನರ ಭಯಭೀತಿಗಳನ್ನು ನಾವು ಸರಿಯಾಗಿ ಅರ್ಥಮಾಡಿಕೊಳ್ಳಬೇಕೆಂಬುದನ್ನೂ, ಆ ಭಯಭೀತಿಗಳನ್ನು ಹೆಚ್ಚಿಸದಂತೆ ನಾವು ನೋಡಿಕೊಳ್ಳಬೇಕೆಂಬುದನ್ನೂ ನನಗೆ ಮಂದಟ್ಟುಮಾಡಿಕೊಟ್ಟಿತು.

ಕೇವಲ ಪಂಡಿತರು ಅಭ್ಯಾಸಮಾಡಬಹುದಾದ ಕೆಲವು ವಿಷಯಗಳಿವೆ. ಆದರೆ ಇಂಡಿಯಾದಲ್ಲಿ ದೊಡ್ಡ ಪಂಚವಾರ್ಷಿಕ ಯೋಜನೆಗಳ ಕಾರಣವಾಗಿ ಆದಿವಾಸಿಗಳಲ್ಲಿ ಅಗಾಧ ಬದಲಾವಣೆ ಆಗುತ್ತಿದೆ. ಈ ಬದಲಾವಣೆಯ ಕಾರಣವಾಗಿ ಅವರು ಸಾಮಾನ್ಯ ಸಮಾಜದಲ್ಲಿ ಸೇರಿಕೊಳ್ಳುತ್ತಿದ್ದಾರೆ. ಇದು ಆಗುವ ಮುನ್ನ ಪ್ರತಿಯೊಬ್ಬ ಮಾನವಶಾಸ್ತ್ರಜ್ಞ ಹಾಗೂ ಸಮಾಜಶಾಸ್ತ್ರಜ್ಞನನ್ನು ಆದಿವಾಸಿಗಳ ಅಭಿವೃದ್ಧಿ ಹೇಗೆ ನಡೆಯಬೇಕೆಂಬುದನ್ನು ಹೇಳಲು ಮತ್ತು ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತಮಾಡುವವರಿಗೆ ತಕ್ಕ ಶಿಕ್ಷಣಕೊಡಲು ಉಪಯೋಗಿಸಿಕೊಳ್ಳಬೇಕು. ಹೀಗೆ ಮಾಡಿದರೆ ಸಂಶೋಧನೆಯ ಮಟ್ಟವನ್ನು ತಗ್ಗಿಸಿದಂತೆ ಎಂದು ಭಾವಿಸಬಾರದು; ಅಥವಾ ಯಾವುದೋ ಒಂದು ವಾದದ ಕಡೆ ಒಲಿದಿದ್ದೇವೆಂದು ಭಾವಿಸಲೂಬಾರದು. ವಿಜ್ಞಾನದ ವೈಭವ ಯಾವುದು ? ಸತ್ಯದ ಉಜ್ವಲ ಪ್ರಕಾಶದಿಂದ ಪಾವನ ಜೀವನದ ಕಗ್ಗತ್ತಲೆಯ ಕ್ಷೇತ್ರಗಳ ಮೇಲೆ ಬೆಳಕು ಚೆಲ್ಲಿ ಆ ಕ್ಷೇತ್ರಗಳನ್ನು ಬೆಳಗುವುದೇ ಅಲ್ಲವೇ ?

ಪಂಡಿತರಲ್ಲಿ ನನ್ನ ಬಗ್ಗೆ ತೋರಿಬಂದ ದೊಡ್ಡ ಸಂಶಯವೆಂದರೆ, ನಾನು ಕಾವ್ಯದ ಮೂಲಕ ಮಾನವಶಾಸ್ತ್ರಕ್ಕೆ ಕಾಲಿಟ್ಟುದು. ಇದರಲ್ಲಿ ಏನು ತಪ್ಪು ಎಂಬುದು ನನಗೆ ಗೊತ್ತಾಗುತ್ತಿಲ್ಲ. ಇಲ್ಲಿಯವರೆಗೆ ಮಾನವನನ್ನು ಅಭ್ಯಾಸಮಾಡುವ ವಿದ್ಯಾರ್ಥಿಯ ಮುಖ್ಯ ಸಮಸ್ಯೆ ಎಂದರೆ, ಮೇಲೆ ತೋರಿಕೆಗೆ ಕಾಣುವುದರ ಕೆಳಗೆ ದಾರಿಮಾಡಿ ಕೊಳ್ಳುವುದು. ಅವನು ಜನರನ್ನು 'ಅಗೆ'ಯಬೇಕು. ಬಯಲು ಮಾಡುವುದು, ಪರದೆ ಎತ್ತಿ ತೋರಿಸುವುದು ಕಾವ್ಯದ ಕೆಲಸ. ಮನುಷ್ಯನ ಸೂಕ್ಷ್ಮಬುದ್ಧಿಯನ್ನು ಕೆರಳಿಸಿ, ಅವನ ಊಹೆಯ ಭಂಡಾರವನ್ನು ತೆರೆದು, ಅವನಲ್ಲಿ ಕರುಣೆ ಹಾಗೂ ಅರಿವನ್ನು ಮೂಡಿಸುತ್ತದೆ ಕಾವ್ಯ. ಅದರಲ್ಲಿಯೂ ಅವನ ಅಭ್ಯಾಸಕ್ಕೊಳಪಟ್ಟ ಜನ

ಸ್ವಾಭಾವಿಕವಾಗಿ ಕವಿಗಳೇ ಆಗಿದ್ದರಂತೂ – ಮೈಕಲ್ ಜನ ಅಂಥವರು – ಅವನಿಗೂ ಅವರಿಗೂ ಸಂಪರ್ಕವೇರ್ಪಡುತ್ತದೆ; ಅವರಿಬ್ಬರೂ ಆಡುವುದು ಒಂದೇ ಭಾಷೆ, ಪ್ರೀತಿಸುವುದು ಒಂದೇ ವಸ್ತು ಆಗುತ್ತದೆ.

ನಾನು ಆಕ್ಸ್‌ಫರ್ಡ್ ಬಿಟ್ಟಂದಿನಿಂದ ಕಾವ್ಯ ನನ್ನ ಅಚ್ಚುಮೆಚ್ಚಿನ ಗೆಳೆಯ. ಅದು ನನಗೆ ಕಷ್ಟದ ಕಾಲದಲ್ಲಿ ಮಧುರತೃಪ್ತಿಯನ್ನು ನೀಡಿದೆ. ಬಿರುಗಾಳಿ ಎದ್ದಾಗ ನನಗೆ ಸಮಾಧಾನವಿತ್ತಿದೆ. ನನ್ನ ಒಂಟಿತನದ ಕಾಲವನ್ನು ತುಂಬಿದೆ. ಕತ್ತಲು ತುಂಬಿದ ಜಡಜೀವನಕ್ಕೆ ಬೆಳಕು ನೀಡಿದೆ. ಜಾನ್ ಕೀಟ್ಸ್‌ನಂತೆ Eternal Poetry (ಅಮರ ಕಾವ್ಯ) ಇಲ್ಲದೆ ನಾನು ಬದುಕಲಾರೆ.

ನಾನು ಗಿರಿಜನರ ಗುಡ್ಡಗಳಲ್ಲಿ ನೆಲೆಸಲು ಹೋದಾಗ ನನ್ನ ವರ್ಡ್ಸ್‌ವರ್ತ್, ಇಲಿಯಟ್, ಬ್ಲೇಕ್ ಮತ್ತು ಷೇಕ್ಸ್‌ಪಿಯರ್ – ಇವರು ನನ್ನ ಮಣ್ಣುಗುಡಿಸಲುಗಳಿಗೆ ಹಣತೆಗಳಾದರು. ಹೀಗಿರುವಲ್ಲಿ ನಾನು ಕಾವ್ಯವನ್ನು ಆಶ್ರಯಸಿದ್ದು ತಪ್ಪಾಗುವುದೇ ? ಇದಲ್ಲದೆ, ಆ ಸರಳ ಹಾಗೂ ಭಾವನಾಶೀಲ ಗಿರಿಜನರಲ್ಲಿ ಮಾತುಮಾತಿಗೆ ಕಾವ್ಯ ಹೊರ ಹೊಮ್ಮುತ್ತದೆ. ಎಲ್ಲೆಲ್ಲಿಯೂ ಅವರ ಕಣ್ಣಿನಲ್ಲಿ ತುಟಿಯ ಮೇಲೆ, ಅವರ ಕೆಲಸದಲ್ಲಿ ಕೂಡ ಕಾವ್ಯವನ್ನು ಕಾಣಬಹುದು. ಹೀಗಾಗಿ ಕಾವ್ಯ ನನ್ನ ಒಂದು ಅಂಗವಾಯಿತು; ಅದು ನನ್ನ ಸ್ವಂತ ಆಸ್ತಿಯಾಯಿತು. ಕಾವ್ಯದ ಹೆಸರಿನಲ್ಲಿ ನಾನೇನಾದರೂ ಮಾಡಿದ್ದರೆ ಅದಕ್ಕೆ ಕಾರಣ,. ನಾನು ನನ್ನ ಗಿರಿಜನ ಕವಿಗೆಳೆಯರೊಡನೆ ನಡೆಸಿದ ಕೆಲಸ.

ಜನರ ಮಾತೂ ಕಾವ್ಯಮಯವಾಗಿದ್ದುದನ್ನು ಕಂಡೆ. ಬೆಂಕಿ, ಒಣಗಿದ ಮರ ಹೂ ಬಿಟ್ಟಂತೆ ಎಂದು ಮುದುಕಿಯೊಬ್ಬಳು ಹೇಳುತ್ತಾಳೆ. ಕೊಡೆ, ಒಂಟಿಕಾಲಿನ ನವಿಲಂತೆ. ರಾತ್ರಿ ಹೊತ್ತು ಬೆಂಕಿ ಕಾಯಿಸುತ್ತ ಕುಳಿತ ಹುಡುಗರು ಕಾವ್ಯಮಯವಾದ ಭಾಷೆಯಲ್ಲಿ ಒಗಟುಗಳನ್ನು ಹೇಳುತ್ತಾರೆ. ಮೆಣಸಿನಕಾಯಿಗಳು, ಪೊದೆಯಮೇಲೆ ಕುಳಿತ ಕೆಂಪು ಮತ್ತು ಹಸುರು ಹಕ್ಕಿಗಳಂತೆ. ಲ್ಯಾಂಪು, ಮನೆಯಲ್ಲೆಲ್ಲಾ ಗರಿಗಳನ್ನು ಉದುರಿಸುವ ಪುಟ್ಟಗುಬ್ಬಚ್ಚಿ. ಗರ್ಭಿಣಿಯಾದ ಹೆಂಡತಿಯನ್ನು ಕುರಿತು ಗಂಡ ನನಗೆ ಹೇಳುತ್ತಾನೆ. 'ಆಕೆಯನ್ನು ಹೂವಿನಂತೆ ನೋಡಿಕೊಳ್ಳಬೇಕು. ಇಲ್ಲದಿದ್ದರೆ ಹೂವಿನೊಳಗಿನ ಬೆಳಕು ನಂದಿಹೋಗುತ್ತದೆ' ಎಂದು. ಹುಡುಗ ಹುಡುಗಿಯರು ಹೊಲಗದ್ದೆಗಳಲ್ಲಿ ತಮ್ಮ ಪ್ರೇಮವನ್ನು ಹಾಡಿನ ರೂಪದಲ್ಲಿ ಹಾಡಿ ತಾವೆಂದು ಕೂಡುವುದೆಂದು ಕಾವ್ಯದ ಕಲ್ಪನೆಯಲ್ಲಿ ಹೇಳುತ್ತಾರೆ. ಹೊಲದ ಕಾಳುಕಡ್ಡಿ, ಕಾಡಿನ ಬೇರು ನಾರು–ಇವೆಲ್ಲಾ ಸುಂದರ ಹಾಡಿನಲ್ಲಿ ನೇಯಲ್ಪಡುತ್ತವೆ. ನನ್ನ ಪ್ರೇಯಸಿ ಮಲಗಿರುವ ಬಡಗುಡಿಸಲಿನ ಹಾಸಿಗೆ ಪ್ರೇಮಿಗೆ ಸುವರ್ಣಖಚಿತ ಸುಪ್ಪತ್ತಿಗೆ.

ನಾನು ಮತ್ತು ಶ್ಯಾಮರಾವ್ ಸೇರಿ ಮೊಟ್ಟಮೊದಲು ಬರೆದ ಪುಸ್ತಕ "Songs of the Forest' (ಕಾಡಿನ ಹಾಡುಗಳು) ಎಂಬುದು. ಅದರಲ್ಲಿ ಬರುವ ಹಾಡುಗಳು ಬಹಳ ಸೊಗಸಾಗಿವೆ. ಆಮೇಲೆ Folk songs of the Maikal Hills' (ಮೈಕಲ್

ಗುಡ್ಡದ ಜನಪದ ಹಾಡುಗಳು) ಮತ್ತು 'Folk Songs of the Chattisgarh' (ಛತ್ತೀಸ್‌ಘರ್ ಜನಪದ ಹಾಡುಗಳು) ಇವನ್ನು ೧೯೪೪ ಮತ್ತು ೧೯೪೬ರಲ್ಲಿ ಪ್ರಕಟಿಸಿದೆ.

ನನ್ನ ಭಾಷಾಂತರ ವಿಧಾನ ತುಂಬ ಸರಳವಾದದ್ದು. ಇದ್ದುದಕ್ಕೆ ನನ್ನದೇ ಆದ ಏನನ್ನೂ ಸೇರಿಸುತ್ತಿರಲಿಲ್ಲ. ಇದ್ದುದನ್ನು ಇದ್ದ ಹಾಗೆ ಹೇಳಿದೆ. ಆರ್ಥರ್ ವೊಲಿ ಮತ್ತು ಡಬ್ಲ್ಯೂ.ಜಿ. ಆರ್ಚರ್ ಅವರು ಹಾಕಿಕೊಟ್ಟ ಮೇಲ್ಪಂಕ್ತಿ ಮತ್ತು ವಿಧಾನಗಳನ್ನು ಅನುಸರಿಸಿದೆ. ಅಂದರೆ ಮೂಲದ ಪ್ರಾಸವನ್ನು ಬಿಟ್ಟೆ. ರಚನೆಯಲ್ಲಿಯೂ ಮೂಲದಂತೆ ಇಳಿಸಲಿಲ್ಲ. ಮೂಲವನ್ನು ಸಾಕಷ್ಟು ಸರಳ ರೀತಿಯಲ್ಲಿ ಹೇಳುವ ಪ್ರಯತ್ನಮಾಡಿದೆ. ಹಾಗೆ ಮಾಡುವಾಗ ಕಾವ್ಯದ ರೀತಿನೀತಿಗಳನ್ನು ಗಮನಕ್ಕೆ ತೆಗೆದುಕೊಂಡೆ. ಹೊಸ ಕಲ್ಪನೆಗಳನ್ನು ತಂದುಹಾಕಲಿಲ್ಲ.

ಇಂಥ ಕಾವ್ಯಗಳ ಮೂಲವನ್ನು ಪ್ರಕಟಿಸಲು ಸಾಧ್ಯವಾಗದಿದ್ದುದು ನಿಜವಾಗಿಯೂ ವಿಷಾದಕರ. ಹಾಗೆ ಆಗಲೇ ಮಾಡಿದ್ದರೆ ನಮ್ಮ ಪುಸ್ತಕಗಳು ತೀರಾ ದೊಡ್ಡದಾಗುತ್ತಿದ್ದುವು. ದೇವನಾಗರಿ ಲಿಪಿಯಲ್ಲಿ ಬರೆದ ಆ ಮೂಲ ಹಾಡುಗಳ ದೊಡ್ಡ ಕಟ್ಟುಗಳೇ ಇದ್ದುವು. ಶಾಮರಾವ್ ಅವನ್ನು ಅಚ್ಚಿಗೆ ಸಿದ್ಧಪಡಿಸಿದರು. ಆದರೆ ನಾವೊಮ್ಮೆ ಪ್ರವಾಸದಲ್ಲಿ ತೊಡಗಿದ್ದಾಗ ಬಿರುಗಾಳಿಗೆ ಸಿಕ್ಕಿ ಅವುಗಳಲ್ಲಿ ಬಹುಭಾಗ ಹಾಳಾಗಿಹೋದುವು.

ನನ್ನ ಮೊದಲನೆಯ ದೊಡ್ಡ ಪ್ರಕಟನೆ 'ಬೈಗಾ' ಜನರನ್ನು ಕುರಿತದ್ದು. ಇವರೊಡನೆ ಇರುವುದೆಂದರೆ ಸುಂದರ ಕಥೆಯೊಂದರಲ್ಲಿ ಕಟ್ಟುಬಿದ್ದಂತೆ. ಈ ಜನರ ಭಾವನೆಯಂತೆ ಇವರನ್ನು ಸೃಷ್ಟಿಮಾಡಿದವನು 'ನಂಗಾ ಬೈಗಾ' ಎಂಬುವನು. ತಾವು ಭೂಮಿಯ ಗರ್ಭದಿಂದ ಹುಟ್ಟಿದೆವೆಂಬ ಭಾವನೆ ಇವರಲ್ಲಿ ಬೇರೂರಿತ್ತು. ಈ ಕಾರಣ ತಮ್ಮ ಮಾತೃಭೂಮಿಯನ್ನು ನೇಗಿಲಿನಿಂದ ಉತ್ತರೆ ಎದೆಯನ್ನು ಸೀಳಿದಂತೆ ಎಂಬ ಭಾವನೆ ಇವರಲ್ಲಿ ಮೂಡಿತ್ತು. ಅಲ್ಲದೆ ತಾವು ಪಶುಪತಿಗಳಾದ್ದರಿಂದ, ಅಂದರೆ ಇಡೀ ಪ್ರಾಣಿವರ್ಗದ ಅಧಿಪತಿಗಳಾದ್ದರಿಂದ ತಾವು ಮನಬಂದಂತೆ ಬೇಟೆಯಾಡಬಹುದು, ಅದಕ್ಕೆ ಯಾರು ಅಡ್ಡಿ ಬರಕೂಡದು ಎಂಬ ಭಾವನೆ ಮೂಡಿತ್ತು. ಇಂಥ ಭಾವನೆಗಳಿಗೆ ಸರ್ಕಾರದ ಅರಣ್ಯ ಇಲಾಖೆಯ ಅಧಿಕಾರಿಗಳು ಅಡ್ಡಿಬರುತ್ತಿದ್ದರು.

ಬೈಗಾ ಜನರು ೧೮೬೦ರಿಂದ ಕಳೆದ ಶತಮಾನದ ಅಂತ್ಯದವರೆಗೂ ಅರಣ್ಯ ಇಲಾಖೆಯ ಅಧಿಕಾರಿಗಳ ಕಿರುಕುಳಕ್ಕೆ ಒಳಗಾದರು. ಇವರು ಗಿಡಗಳನ್ನು ಕೊಡಲಿಯಿಂದ ಕಡಿದು ಭೂಮಿಯನ್ನು ಕುಕ್ಕಿ ಬೆಳೆ ತೆಗೆಯುವುದಕ್ಕೆ ಅಡ್ಡಿ ಬಂದರು. ನೇಗಿಲಿನಿಂದ ಉಳಿ ಎಂದು ಇಲಾಖೆಯವರು ಹೇಳಿದರು. ಇದು ಅರಣ್ಯ ಇಲಾಖೆಯವರ ದೃಷ್ಟಿಯಲ್ಲಿ ಸರಿಯೇ ಆದರೂ, ಬೈಗಾ ಜನರು ಬೇಟೆಯಾಡುವುದನ್ನು ನಿಲ್ಲಿಸಿಬಿಡಬೇಕಾಯಿತು. ಕೆಲವರು ತಮ್ಮ ಬಿಲ್ಲುಬಾಣಗಳನ್ನು ಒಂದೆಡೆ ಹಾಕಿ

ಸುಟ್ಟುಬಿಟ್ಟರು. ಅನಿವಾರ್ಯವಾಗಿ ಬೈಗಾ ಜನರು ನೇಗಿಲಿನ ಬೇಸಾಯ ಅನುಸರಿಸಬೇಕಾಯಿತು. ಆದರೆ ಇವರಿಗೆ ನೇಗಿಲನ್ನು ಕಂಡರೆ ಆಗುತ್ತಿರಲಿಲ್ಲ. ಹೀಗಾಗಿ ಇವರು ಬಡವರಾಗಿಬಿಟ್ಟಿದ್ದಾರೆ. ಬಿಲ್ಲುಬಾಣಗಳನ್ನು ಕಳೆದುಕೊಂಡ ಇವರು ಶಿಕಾರಿಯನ್ನು ಬಿಟ್ಟುಬಿಟ್ಟಿದ್ದಾರೆ. ತಮಗೆ ಅತ್ಯಂತ ಆನಂದದಾಯಕವಾದ ಜೀವನರೀತಿಯನ್ನು ಕಳೆದುಕೊಂಡು ಕುಳಿತಿದ್ದಾರೆ.

ಈ ಬೈಗಾ ಜನರಲ್ಲಿ ನನಗೆ ಅನೇಕ ಜನ ಸ್ನೇಹಿತರಿದ್ದರು. ಚೆನ್ನಾದ್ದು ಏನಾದರೂ ನಡೆದರೆ ಅದನ್ನೆಲ್ಲಾ ನನಗೆ ಹೇಳುತ್ತಿದ್ದರು. ಉತ್ತರಕ್ರಿಯೆ, ಮದುವೆ ಮುಂತಾದುವುಗಳಿಗೆ ನನ್ನನ್ನು ಕರೆದುಕೊಂಡು ಹೋಗುತ್ತಿದ್ದರು. ಒಂಬತ್ತು ವರ್ಷಕ್ಕೊಮ್ಮೆ ಜೇನುಹುಳುಗಳಿಗಾಗಿ ನಡೆಯುವ `Honey Festival' ಜೇನು ಹಬ್ಬಕ್ಕೆ ನನಗೆ ಹೇಳಿ ಕಳುಹಿಸುತ್ತಿದ್ದರು. ನಾನಿದ್ದ ಹಳ್ಳಿಗೆ ಬಂದು ಆ ಹಳ್ಳಿಗೆ ಒದಗಿದ ಕಷ್ಟವನ್ನು ಹಳ್ಳಿಯ ಸುತ್ತ ಮೊಳೆಹೊಡೆದು ಕಟ್ಟುಮಾಡಿ ಪರಿಹರಿಸುತ್ತಿದ್ದರು. ಈ ರೀತಿಯ ಮಂತ್ರತಂತ್ರಗಳಿಂದ ಹುಲಿಯನ್ನು ಹತೋಟಿಗೆ ತರಬಲ್ಲರು; ಇನ್ನೂ ಮುಂತಾದ ಕೆಲಸಗಳನ್ನು ಮಾಡಬಲ್ಲರು.

ನನ್ನ ಎರಡನೆಯ ಪುಸ್ತಕಕ್ಕೆ 'ಅಗೆರಿಯಾ' ಎಂಬ ಜನರನ್ನು ಆರಿಸಿಕೊಂಡೆ. ಈ ಜನ ಮಾಂಡ್ಲಾ ಮತ್ತು ಬಿಲಾಸಪುರ ಜಿಲ್ಲೆಗಳಲ್ಲಿ ಅಲ್ಲಲ್ಲಿ ಇದ್ದಾರೆ. ಇವರ ಕಸಬು ಕಮ್ಮಾರಿಕೆ ಮತ್ತು ಚಿನಿವಾರಿಕೆ. ಬೈಗಾರಿಗೆ ಹೋಲಿಸಿದರೆ ಇವರು ಮಂದಮತಿಗಳೆಂದೇ ಹೇಳಬೇಕು. ಇವರ ಮೇಲಿನ ಗ್ರಂಥತಯಾರಿಸಲು ನಾನು ತುಂಬ ಪ್ರವಾಸಮಾಡಬೇಕಾಯಿತು.

ಕಬ್ಬಿಣದ ಬಗ್ಗೆ ನಾನು ಮಾಡಿದ ಅಭ್ಯಾಸದ ಕಾರಣ ಹದಿನೈದು ವರ್ಷಗಳ ನಂತರ ತಾತಾ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ರಜತ ಮಹೋತ್ಸವದ ಸಂದರ್ಭದಲ್ಲಿ The Story of Tata Steel (ತಾತಾ ಉಕ್ಕಿನ ಕಥೆ) ಎಂಬ ಪುಸ್ತಕ ಬರೆಯುವುದಕ್ಕೆ ಆಹ್ವಾನ ಬಂದಿತು. ಇದನ್ನು ಬರೆದದ್ದಕ್ಕೆ ೧೦,೦೦೦ ರೂಪಾಯಿ ಕೊಟ್ಟರು. ಇದೊಂದೇ ಗ್ರಂಥ ನನಗೆ ಕೈತುಂಬ ದುಡ್ಡು ಕೊಟ್ಟಿದ್ದು. ಪುಸ್ತಕವನ್ನೂ ಚೆನ್ನಾಗಿ ಅಚ್ಚುಮಾಡಿಸಿದರು.

ಈ ಮಧ್ಯೆ ನಾನು ಹಲವಾರು ಗ್ರಂಥಗಳನ್ನು ಪ್ರಕಟಿಸಿದೆ. ಜನಪದ ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ನಾಲ್ಕಾರು ಗ್ರಂಥಗಳನ್ನು ಪ್ರಕಟಿಸಿದೆ. ಜೊತೆಗೆ ಎರಡು ಮೂರು ಕಾದಂಬರಿಗಳನ್ನು ಬರೆದೆ. ಇಂಗ್ಲೆಂಡಿನಲ್ಲಿ ಈ ಪುಸ್ತಕಗಳು ಹೆಚ್ಚಾಗಿ ಖರ್ಚಾದವು. ಆದರೆ ಅವನ್ನು ಇಂಡಿಯಾದಲ್ಲಿ ಯಾರೂ ಹೆಚ್ಚಾಗಿ ಓದಿದಂತೆ ಕಾಣಲಿಲ್ಲ. ಇದರಿಂದ ಕೈಗೆ ಹಣ ಬರಲಿಲ್ಲ.

ನಾನು ಬರೆದ 'ಬೈಗಾ' ಎಂಬ ಪುಸ್ತಕ ನನಗೆ ಸಿವಿಲ್ ಸರ್ವೀಸಿನ ಅನೇಕ ಜನ ಸ್ನೇಹಿತರನ್ನು ಮಾಡಿಕೊಟ್ಟಿತು. ಇಂಡಿಯನ್ ಸಿವಿಲ್ ಸರ್ವೀಸಿನ ಜನ ಬಹಳ ಬಿಂಕದ ಜನ, ಜಂಭದ ಕೋಳಿಗಳು – ಎಂಬ ಭಾವನೆ ಇದೆ. ಆದರೆ

ಅದು ಪೂರ್ತಿ ನಿಜವಲ್ಲ. ಡಬ್ಲ್ಯು.ಜಿ.ಬಿಲ್. ಆರ್ಚರ್, ಎನ್. ಆರ್. ಪಿಳ್ಳೆ, ವಿ. ವಿಶ್ವನಾಥನ್ , ಜೆ.ಹೆಚ್. ಹಟ್ಟನ್ ಮತ್ತು ಇನ್ನೂ ಅನೇಕ ಜನ ನನ್ನ ಸ್ನೇಹಿತರಾದರು. ಆರ್ಚರ್ ಅವರು ನನ್ನ ಬೈಗಾ ಪುಸ್ತಕಗಳನ್ನು ಓದಿದಮೇಲೆ ನನ್ನನ್ನೂ ಶಾಮರಾವನ್ನೂ ಬಿಹಾರಿಗೆ ಕರೆಸಿಕೊಂಡರು. ಅಲ್ಲಿ ಅವರು ಸೆನ್ಸಸ್ ಸೂಪರಿಂಟೆಂಡೆಂಟ್ ಆಗಿದ್ದರು. ಅವರೊಡನೆ ಹಲವಾರು ಊರುಗಳನ್ನು ನೋಡುವ ಅವಕಾಶ ಒದಗಿತು. ಆಮೇಲೆ ಅವರು ಸಂತಾಲ್ ಪರ್ಗಣಗಳ ಡೆಪ್ಯೂಟಿ ಕಮಿಷನರಾದನಂತರ ಇನ್ನೂ ಹೆಚ್ಚಾಗಿ ಅವರೊಡನೆ ಸಂಚಾರಮಾಡಿದೆ. ಈ ಸಂಚಾರದ ಕಾರಣವಾಗಿ 'ಮುರಿಯ'ರ ಮೇಲಿನ ನನ್ನ ಪುಸ್ತಕಕ್ಕೆ ಕಳೆ ಬಂದಿತು.

ಬಿಹಾರಿಗೆ ಮೊದಲು ಹೋದ ಸಂದರ್ಭದಲ್ಲಿ ಶರತ್‌ಚಂದ್ರ ರಾಯ್ ಅವರನ್ನು ನೋಡುವ ಅವಕಾಶ ಸಿಕ್ಕಿತು. ಅವರು ಬಿಹಾರಿನ ಗಿರಿಜನರ ಬಗ್ಗೆ ಅನೇಕ ಗ್ರಂಥಗಳನ್ನು ಬರೆದಿದ್ದರಲ್ಲದೆ, ಅವರ ಬಗ್ಗೆ ಕೋರ್ಟು ಕಚೇರಿಗಳಲ್ಲಿಯೂ ಹೊರಗೂ ಹೋರಾಡಿದರು. ರಾಯ್ ಅವರು ತೀರಿಕೊಂಡ ಮೇಲೆ ಬಿಲ್ ಆರ್ಚರ್ ಮತ್ತು ನಾನು, ರಾಯ್ ಅವರ ಮಗ ರಮೇಶರ ಸಹಾಯದಿಂದ "Man in India' ಎಂಬ ಪತ್ರಿಕೆಯನ್ನು ನಮ್ಮ ಕೈಗೆ ತೆಗೆದುಕೊಂಡು ಅದನ್ನು ಅನೇಕ ವರ್ಷಗಳು ನಡೆಸಿಕೊಂಡುಬಂದೆವು.

ಹಿಂದೆ ಮಧ್ಯ ಪ್ರಾಂತಗಳು ಎಂದು ಕರೆಯಲ್ಪಡುತ್ತಿದ್ದ ಪ್ರಾಂತದ ದಕ್ಷಿಣಕ್ಕೆ ಬಸ್ತಾರ್ ಸಂಸ್ಥಾನವಿತ್ತು. ಬಸ್ತಾರ್ ನನ್ನ ಗಮನವನ್ನು ಸೆಳೆದದ್ದು ಸರ್ ಡಬ್ಲ್ಯು.ವಿ.ಗ್ರಿಗ್‌ಸನ್ ಅವರ ಮೂಲಕ. ಅವರು ಇಂಡಿಯಾದ ಗಿರಿಜನರ ಬಗ್ಗೆ ತುಂಬ ಆಸಕ್ತಿ ವಹಿಸಿದವರಾಗಿದ್ದರು. ಅಲ್ಲದೆ ಒಳ್ಳೆಯ ಮನುಷ್ಯರು. ನನ್ನ ಬಗ್ಗೆ ಇದ್ದ ಪೊಲೀಸ್ ವರದಿಗಳು ಇವರ ಮನಸ್ಸನ್ನು ಕೆಡಿಸಿರಲಿಲ್ಲ. ಇವರು ೧೯೨೭ ರಿಂದ ೧೯೩೧ರವರೆಗೆ ಬಸ್ತಾರ್ ಸಂಸ್ಥಾನದ ಆಡಳಿತಗಾರರಾಗಿದ್ದರು. ಅವರ, The Maria Gondas of Bastar' (ಬಸ್ತಾರಿನ ಮರಿಯ ಗೊಂಡರು) ಎಂಬ ಗ್ರಂಥವನ್ನು ನಾನು ಬಹಳ ಆಸಕ್ತಿಯಿಂದ ಓದಿದೆ. ಅವರ ಅನುಮತಿಯಿಂದ ನಾನೂ ಶಾಮರಾವೂ ಬಸ್ತಾರ್ ಸಂಸ್ಥಾನದ ಕೆಲವು ಸ್ಥಳಗಳನ್ನು ನೋಡಿದೆವು.

ಅನಂತರ ಶ್ರೀಮತಿ ಮಾರ್ಗರೇಟ್ ಮಿಲ್‌ವರ್ಡ್ ಎಂಬುವರ ಜೊತೆ ಬಸ್ತಾರಿಗೆ ಹೋಗಿಬಂದೆ. ಆಕೆ ತುಂಬಾ ಚತುರೆಯಾದ ಶಿಲ್ಪಿ. ಅವರು ಮಾಡಿದ ಶಿಲ್ಪಗಳನ್ನು ಇಂಡಿಯಾ ಸರ್ಕಾರ ಕೊಂಡುಕೊಂಡು ಕಲ್ಕತ್ತಾ ಮ್ಯೂಜಿಯಂನಲ್ಲಿ ಇಟ್ಟಿದೆ. ಅವರು ಸಾಯುವ ಮುನ್ನ ನನಗೆ ಗೊಂಡ್ ಹುಡುಗಿಯ ತಲೆಯ ಮಾದರಿಯೊಂದನ್ನು ಮಾಡಿಕೊಟ್ಟರು. ಸಾಯುವಾಗ ಅವರಿಗೆ ೮೦ ವರ್ಷ. ಮಾತಿನಲ್ಲಿ ಸರಸಿಯಾದ ಆಕೆ ತುಂಬಾ ದಪ್ಪ ಆಗಿದ್ದರು. ಅಷ್ಟು ದಪ್ಪದ ಆಕೆಯನ್ನೂ ಆಕೆಯ ಸಿಮೆಂಟ್ ಮತ್ತು ಮಣ್ಣುಗಳನ್ನೂ ನಮ್ಮ ಹಳೆಯ ಕಾರಿನಲ್ಲಿ ಸಾಗಿಸಿಕೊಂಡು ಹೋಗುವುದು ನಮಗೆ ಅಸಾಧ್ಯವಾದ ಕೆಲಸವಾಗುತ್ತಿತ್ತು. ಒಮ್ಮೆ ದಾರಿಯಲ್ಲಿ ಹೋಗುವಾಗ ಕಾರಿನಲ್ಲಿ ತುಂಬಿದ್ದೆಲ್ಲಾ ಅವಳ ಸಮೇತ ಕೆಳಗೆ ಕುಸಿದುಬಿಟ್ಟಿತ್ತು!

ಕೊನೆಯ ಸಲ ನಾನು ೧೯೪೦ನೆಯ ಮೇ ತಿಂಗಳಲ್ಲಿ ಬಸ್ತಾರಿಗೆ ಹೋದೆ. ಅಲ್ಲಿ ನನ್ನನ್ನು ಸೆನ್ಸಸ್ ಆಫೀಸರಾಗಿ ನೇಮಿಸಿದರು. ತಿಂಗಳಿಗೆ ನೂರು ರೂಪಾಯಿ ಸಂಬಳ. ಆಗ ನನಗೆ ಇನ್ನೂ ಪ್ರಪಂಚ ಜ್ಞಾನ ಅಷ್ಟಿರಲಿಲ್ಲ. ಪ್ರಯಾಣ ಭತ್ಯ ಎಷ್ಟು ಕೊಡಬೇಕೆಂಬುದು ಮತ್ತು ಸರ್ಕಾರದ ದೃಷ್ಟಿಯಲ್ಲಿ ಒಬ್ಬರ ಸ್ಥಾನಮಾನ ಏನು ಎಂಬುದು ಸಂಬಳದ ಮೇಲೆ ಹೋಗುತ್ತೆ ಎಂಬ ವಿಷಯ ನನಗೆ ಗೊತ್ತಿರಲಿಲ್ಲ. ಆದರೆ ಬಸ್ತಾರಿಗೆ ಹೋದಮೇಲೆ ನನ್ನ ಸ್ಥಾನಮಾನ ಬದಲಾವಣೆಯಾಯಿತು. ನೋರ್‌ವಾಲ್ ಮಿಚೆಲ್ ಎಂಬುವರು ನನಗೆ ಎಲ್ಲಾ ಸಹಾಯವನ್ನು ಮಾಡಿ, ಸೆನ್ಸಸ್ ಬಗ್ಗೆ ನಾನು ಮಾಡಬೇಕಾದ ಕೆಲಸಕ್ಕೆಲ್ಲಾ ೧,೫೦೦ ರೂಪಾಯಿ ಸಂಭಾವನೆ ಗೊತ್ತು ಮಾಡಿದರು. ನನಗೆ ಬೇಕಾಗಿದ್ದುದು ಸರ್ಕಾರದಲ್ಲಿ ಒಂದು ಸ್ಥಾನಮಾನ. ಏಕೆಂದರೆ ಆಗ ಅದಿಲ್ಲದೆ ದೇಶೀಯ ಸಂಸ್ಥಾನದಲ್ಲಿ ಏನು ಮಾಡಲು ಆಗುತ್ತಿರಲಿಲ್ಲ. ಅನಂತರ ನನ್ನ ಸ್ಥಾನಮಾನ ಮತ್ತಷ್ಟು ಬದಲಾವಣೆಯಾಯಿತು. ನನ್ನನ್ನು ಬಸ್ತಾರಿನ 'Hon. Ethonographer (ಗೌರವ ಮಾನವಕುಲಶಾಸ್ತ್ರಜ್ಞ) ಆಗಿ ನೇಮಿಸಿದರು. ಆದರೆ ಸ್ಥಳದ ಪತ್ರಿಕೆಯೊಂದರಲ್ಲಿ ನಾನು 'Hon Stenographer' (ಗೌರವ ಶೀಘ್ರಲಿಪಿಗಾರ) ಆಗಿ ನೇಮಕವಾಗಿರುವೆನೆಂದು ಪ್ರಕಟವಾಯಿತು.

ನಾನು ಬಸ್ತಾರ್ ಸಂಸ್ಥಾನದಲ್ಲೆಲ್ಲಾ ಸಂಚರಿಸಿ ಗುಡ್ಡದ ಮರಿಯರು. ಕೋಯರು, ಭಟ್ರರು, ದೋರ್ಲರು ಮತ್ತು ಇತರ ಗಿರಿಜನರ ಬಗ್ಗೆ ಬೇಕಾದಷ್ಟು ಟಿಪ್ಪಣಿಗಳನ್ನು ಮಾಡಿಕೊಂಡುದಲ್ಲದೆ, ಅನೇಕ ಫೋಟೋಚಿತ್ರಗಳನ್ನು ತೆಗೆದುಕೊಂಡೆ. ಒಂದು ಗ್ರಂಥವನ್ನೂ ಬರೆದೆ. ಅದರ ಹೆಸರು 'Maria Murder and Suicide' (ಮರಿಯ ಖೂನಿ ಮತ್ತು ಆತ್ಮಹತ್ಯೆ) ಎಂದು. ಅಂತೂ ಬಸ್ತಾರ್‌ನಲ್ಲಿ ನಾನು ಸುಖವಾಗಿ ಕಾಲ ಕಳೆದೆ.

ಮೊಟ್ಟಮೊದಲಿಗೆ ಬಸ್ತಾರಿನಲ್ಲಿಯೇ ನಾನು ಜನಗಳನ್ನು ಆಕರ್ಷಿಸಲು ಗ್ರಾಮಫೋನ್ ಉಪಯೋಗಿಸಲು ಆರಂಭಿಸಿದ್ದು. ಹಳ್ಳಿಯ ಜನರ ಬಗ್ಗೆ ಭಾರಿ ಹುಷಾರಾಗಿರಬೇಕು. ಮರಿಯರಿಗೆ ಸೆನ್ಸಸ್ ಕಂಡರೆ ಆಗುತ್ತಿರಲಿಲ್ಲ. ೧೯೩೧ನೆಯ ಸೆನ್ಸಸ್ ಆದಮೇಲೆ ಕಾಡಿನಲ್ಲಿ ಹುಲಿಗಳು ಹೆಚ್ಚಾದುವೆಂದು ಅವರು ಹೇಳುತ್ತಿದ್ದರು. ಯಾವಾಗಲೂ ಎಣಿಸುವುದು ಮತ್ತು ಅಳೆಯುವುದು ಅಪಾಯ ಎಂದು ಅವರ ಭಾವನೆ. ಜನಗಳಿಗೆ ನಂಬರು ಹಾಕುವುದು ಪಾಪ, ಅದರಿಂದ ಮಕ್ಕಳಾಗುವುದು ಕಡಮೆಯಾಗುತ್ತದೆ ಎಂದು ಅವರ ಹೆದರಿಕೆ. ಈ ಕಾರಣ ೧೯೪೧ನೆಯ ಸೆನ್ಸಸ್ ಆದಮೇಲೆ ಅನೇಕ ಗ್ರಾಮಗಳಲ್ಲಿ ಮನೆಗೆ ತಗುಲಿಸಿದ್ದ ಮನೆ ನಂಬರು ಪ್ಲೇಟುಗಳನ್ನು ತೆಗೆದುಹಾಕಿ ಅವುಗಳಿಗೆ ಹಂದಿಗಳನ್ನು ಬಲಿಕೊಟ್ಟು ಶಾಂತಿಮಾಡಿದರು.

ಮರಿಯಾ ಜನರಲ್ಲಿ ಪ್ರಾಣಿಹತ್ಯೆಯ ಕೃತ್ಯಗಳು ಭಾರಿ ಜಾಸ್ತಿ. ಇದಕ್ಕೆ ಕಾರಣಗಳೇನೆಂದು ಶೋಧಿಸಿದೆ. ಸರ್ಕಾರವೂ ಇದಕ್ಕೆ ಅವಕಾಶ ಕೊಟ್ಟಿತು. ನಾನಾ ಕಾರಣಗಳಿಂದ ಖೂನಿಗಳಾಗುತ್ತವೆ ಎಂದು ಗೊತ್ತಾಯಿತು. ಖೂನಿಗಳಾಗಿ

ಪೊಲೀಸರು ತನಿಖೆಗೆ ಬಂದಾಗ ಊರಿಗೇ ಊರೇ ಅವರ ಸೇವೆಗೆ ನಿಲ್ಲಬೇಕು. ಪೊಲೀಸರು ಹಿಂಸಾಮಾರ್ಗಗಳನ್ನು ಅನುಸರಿಸಿ ಕೇಸಿನ ತನಿಖೆ ನಡೆಸುತ್ತಿದ್ದರು. ಜೈಲಿಗೆ ಹೋದ ಮರಿಯರ ಜೀವನವಂತೂ ಬಹಳ ಕಠಿಣ. ಜೈಲುಗಳ ಸುಧಾರಣೆ ಬಹಳ ಆಗಬೇಕಾಗಿದೆ.

ಮರಿಯ ಜನರಲ್ಲಿ ಸೊಗಸಾದ್ದು ಅಂದರೆ, ಅವರು ಮದುವೆಯಲ್ಲಿ ಕುಣಿಯುವುದು. ಗಂಡಸರು ಕೊಂಬುಗಳನ್ನು ತಲೆಗೆ ಕಟ್ಟಿಕೊಂಡು ಉದ್ದನೆಯ ಡೋಲುಗಳನ್ನು ಬಾರಿಸುತ್ತಾ ಸುತ್ತುತ್ತ ಸುತ್ತಾಗಿ ಕುಣಿಯುತ್ತಿರುವಾಗ, ಹೆಂಗಸರು ಸಾಲಾಗಿ ಬಂದು ಅವರನ್ನು ಸೇರಿಕೊಳ್ಳುತ್ತಾರೆ. ಗಿರಿಜನರ ನೃತ್ಯಗಳಲ್ಲಿ ಬಹುಶಃ ಇದೇ ತುಂಬಾ ಸೊಗಸಾದ್ದು ಎಂದು ಕಾಣುತ್ತದೆ. 'ಕುಣಿಯದವರು ಈ ಬಾಳು ಏನು ಅನ್ನುವುದನ್ನು ಕಾಣರು' ಎಂಬ ಮಾತಿದೆ. ಬಡವರಾದರೂ ಈ ಮರಿಯ ಜನ ತಮ್ಮ ನೃತ್ಯದಲ್ಲಿ ಸ್ವರ್ಗವನ್ನೇ ಸೃಷ್ಟಿಸಿಕೊಳ್ಳುತ್ತಾರೆ.

ಬಸ್ತಾರ್‌ನಲ್ಲಿ ನನ್ನ ಮುಖ್ಯವಾದ ಕೆಲಸ, ಮರಿಯ ಹುಡುಗ ಹುಡುಗಿಯರ ಪ್ರಣಯಮಂದಿರವನ್ನು ನೋಡಿ ಆ ಬಗ್ಗೆ ಬರೆಯುವುದಾಗಿತ್ತು. ಮರಿಯರು ಇರುವ ಕಡೆಯಿಂದ ಉತ್ತರದಲ್ಲಿ 'ಮುರಿಯರು' ವಾಸಮಾಡುತ್ತಾರೆ. ಮದುವೆಯಾಗದ ಯುವಕ ಯುವತಿಯರು ನಿರ್ದಿಷ್ಟವಾದ ಮಂದಿರವೊಂದರಲ್ಲಿ ಸಂಜೆ ಸೇರಿ, ಕುಣಿದು ಮೆರೆದು, ರಾತ್ರಿ ಜೊತೆಜೊತೆಯಾಗಿ ಮಲಗಿ, ಬೆಳಕು ಹರಿಯುವ ಮುನ್ನ ಮನೆ ಸೇರುವುದೇ ಈ ಪ್ರಣಯಮಂದಿರದ ಉದ್ದೇಶ. ಊರಿನ ಯಜಮಾನರೇ ಈ ವ್ಯವಸ್ಥೆ ಮಾಡಿರುತ್ತಾರೆ. ಈ ಪ್ರಣಯಮಂದಿರಗಳನ್ನು ಕುರಿತು ೭೫೦ ಪುಟಗಳ The Muria and their Ghotul (ಮುರಿಯ ಮತ್ತು ಅವರ ಘೋಟುಲ್) ಎಂಬ ದೊಡ್ಡ ಪುಸ್ತಕ ಬರೆದೆ. ಪುಸ್ತಕದ ಆರಂಭದಲ್ಲಿ ನಾನು ಮೂರು ಮಾತುಗಳನ್ನು ಉದ್ಧರಿಸಿದೆ : ಒಂದನೆಯದು, St. Paul (ಸೆಂಟ್ ಪಾಲ್) ಹೇಳಿದ್ದು : ಪವಿತ್ರರಿಗೆ ಎಲ್ಲವೂ ಪವಿತ್ರ : ಅಪವಿತ್ರಿಗೆ ಎಲ್ಲವೂ ಅಪವಿತ್ರ. ಅಪವಿತ್ರರ ಮನಸ್ಸು ಆತ್ಮ ಎರಡೂ ಅಪವಿತ್ರ. ಎರಡನೆಯದು, Hirschfeld, (ಹಿರ್ಷ್‌ಫೆಲ್ಡ್) ಹೇಳಿದ್ದು : ಮಾನವನು ಸಾವಿರಾರು ವರ್ಷಗಳಿಂದ ಪ್ರೇಮಕ್ಕೆ ಸಗಣಿ ಎಸೆದು ಅದನ್ನು ಕಸದ ಗುಡ್ಡೆಗೆ ಹಾಕಿದ್ದಾನೆ. ಅದರಿಂದ ಪ್ರೇಮವನ್ನು ಹೊರತೆಗೆಯಬೇಕಾಗುತ್ತದೆ. ಮೂರನೆಯದು, Westermark (ವೆಸ್ಟರ್‌ಮಾರ್ಕ್) ಹೇಳಿದ್ದು : ವಿಜ್ಞಾನಕ್ಕಿರುವ ಒಂದೇ ಒಂದು ಅಸಭ್ಯ ವರ್ತನೆಯೆಂದರೆ ಸತ್ಯವನ್ನು ಬಚ್ಚಿಡುವುದು. ಈ ರೀತಿ ಬಚ್ಚಿಡುವುದು ಬೆತ್ತಲೆಯ ಶಿಲಾಮೂರ್ತಿಯ ಮೇಲೆ ಬಟ್ಟೆ ಎಸೆದಷ್ಟೇ ಬುದ್ಧಿವಂತಿಕೆ ಯಾಗುತ್ತದೆ.

ಮೇಲೆ ತಿಳಿಸಿದ ಮಹನೀಯರ ಹೇಳಿಕೆಗಳನ್ನು ನನ್ನ ಪುಸ್ತಕದಲ್ಲಿ ಕೊಟ್ಟಿದ್ದರೂ ನನಗೆ ಸಂದೇಹವಿತ್ತು. ನನ್ನ ಪುಸ್ತಕಕ್ಕೆ ಇಂಡಿಯಾದಲ್ಲಿ ಆದರ ಸಿಕ್ಕುವುದೇ ಎಂದು. ಆದರೆ ಆದದ್ದೇ ಬೇರೆ. ಬೊಂಬಾಯಿ ಪ್ರಕಟಣಾಕಾರರೊಬ್ಬರು ಇಡೀ ಆದಿವಾಸಿಗಳ

ಲೈಂಗಿಕ ಜೀವನದ ಬಗ್ಗೆ ಒಂದು ಪುಸ್ತಕ ಬರೆಯಬೇಕೆಂದು ನನ್ನನ್ನು ಕೇಳಿದರು. ಅದಕ್ಕೆ ನಾನು ಒಪ್ಪಲಿಲ್ಲ. ಅಂತೂ ಪುಸ್ತಕ ಫ್ರೆಂಚ್ ಮತ್ತು ಇಟಾಲಿಯನ್ ಭಾಷೆಗಳಿಗೆ ತರ್ಜುಮೆಯಾಯಿತು. ಕೊನೆಗೆ ಬೇಕೆಂದರೂ ಒಂದು ಪ್ರತಿ ಸಿಕ್ಕಲಿಲ್ಲ.

೧೯೪೨ನೆಯ ಡಿಸೆಂಬರ್‌ನಲ್ಲಿ ನಾನು ಮೊಟ್ಟಮೊದಲನೆಯ ಸಲ ಒರಿಸ್ಸಾಕ್ಕೆ ಭೇಟಿಕೊಟ್ಟೆ. ಬೋನಾಯಿ, ಕಿಯೊಂಜ್‌ಹರ್ ಮತ್ತು ಪಾಲ್‌ಲಹರ್ ಎಂಬೀ ಸಂಸ್ಥಾನಗಳ ದರ್ಬಾರುಗಳು ಆ ಸಂಸ್ಥಾನಗಳ ಏಜೆಂಟರಾಗಿದ್ದ ನೊರ್ವಾಲ್ ಮಿಚೆಲ್ ಅವರ ಸಲಹೆಯಂತೆ ಗಿರಿಜನರ ಜೀವನ ಹಾಗೂ ನಡೆನುಡಿಗಳ ಬಗ್ಗೆ ವರದಿ ಮಾಡಬೇಕೆಂದು ನನಗೆ ಆಹ್ವಾನ ಕಳುಹಿಸಿದುವು. ಆಗ್ಗೆ ಅಲ್ಲಿ ತುಂಬಾ ಪ್ರಚಲಿತವಾಗಿದ್ದ ಸ್ಥಳಾಂತರ ಬೇಸಾಯವನ್ನು ನಿಲ್ಲಿಸುವ ಬಗೆ ಹೇಗೆ ಎಂಬ ಸಲಹೆಯನ್ನು ಕೊಡಬೇಕೆಂದು ಹೇಳಿದ್ದರು.

ನನ್ನ ಪ್ರವಾಸ ತುಂಬಾ ಚೆನ್ನಾಗಿತ್ತು. ಮಧ್ಯೆ ಕೆಲವು ಸಲ ಜ್ವರ ಬಂದಿತ್ತು. ನನ್ನ ಉಪಯೋಗಕ್ಕೆ ಆನೆಗಳನ್ನು ಕೊಟ್ಟಿದ್ದರು. ನಾನು ಕೊಟ್ಟ ವರದಿಯೂ ಉಪಯುಕ್ತವಾಗಿತ್ತು. ಆದರೆ ನನ್ನ ಬಗ್ಗೆ ತಪ್ಪು ತಿಳಿದುಕೊಂಡರು. ಹೀಗಾದದ್ದು ಅದೇ ಮೊದಲನೆಯ ಸಲ. ಅವರ ತಪ್ಪುಭಾವನೆಗೆ ಕಾರಣ. ನಾನು ಸ್ಥಳಾಂತರ ಬೇಸಾಯಕ್ಕೆ ವಿರೋಧವಾಗಿರುವೆನೆಂಬುದು ಮತ್ತು ಅವರು ಬೇಸಾಯ ಮಾಡುತ್ತಿರುವ ಜಮೀನನ್ನು ಕಸಿದುಕೊಳ್ಳುವೆವೆಂಬುದೇ ಆಗಿತ್ತು. ಆದರೆ ವಾಸ್ತವವಾಗಿ ನನ್ನ ಶಿಪಾರಸು ಬೇರೊಂದು ರೀತಿಯದಾಗಿತ್ತು.

ನನ್ನ ಬಗ್ಗೆ ನಾನಾ ಬಗೆಯ ಉಹಾಪೋಹಗಳು ಹುಟ್ಟಿದುವು. ಹಿಂದಿನ ವರ್ಷ ಒಬ್ಬ ಇಂಗ್ಲಿಷ್ ಅಧಿಕಾರಿ ಅರಣ್ಯ ಸಲಹೆಗಾರನೊಬ್ಬನೊಡನೆ 'ಭೂಮಿಯಾ ಪಿರ್‍ಹ್' ಎಂಬಲ್ಲಿಗೆ ಹೋಗಿದ್ದನಂತೆ. ಸರಿ, ಅವರು ಕಾಡಿನಲ್ಲಿ ಅವಿತುಕೊಂಡಿರುವ ಫರಂಗಿ ಜನರನ್ನು ಹಿಡಿಯಲು ಬಂದಿದ್ದಾರೆಂದು ಹೇಳಲಾರಂಭಿಸಿದರು. ಜಪಾನರು ಧಾಳಿ ಮಾಡಿದ ಪಕ್ಷದಲ್ಲಿ ನಾನು ಪ್ರಾಣಸಂರಕ್ಷಣೆ ಮಾಡಿಕೊಳ್ಳಲು ಯಾವುದಾದರೂ ಸ್ಥಳ ಹುಡುಕುತ್ತಿದ್ದೇನೆಂದು ಅನೇಕ ಜನರ ಭಾವನೆಯಾಗಿತ್ತು. ಬೊನಾಯಲ್ಲಿ ಒಂದು ಭಾವನೆ ಇತ್ತು. ಯುದ್ಧಕ್ಕಾಗಿ ನಾನು ಹುಡುಗಿಯರನ್ನು ರವಾನೆಮಾಡುತ್ತಿದ್ದೇನೆ ಎಂದು. ಈ ಕಾರಣದಿಂದಾಗಿ ನಾನು ಮಿಲಿಟರಿ ವಯಸ್ಸಿಗೆ ಮೀರಿದ ಹೆಂಗಸರನ್ನು ನೋಡುತ್ತಿರಲೇ ಇಲ್ಲ ಎಂದು ಮಾತನಾಡುತ್ತಿದ್ದರು. ಕಿಯೊಂಜ್‌ಹರ್‌ನ ಜುಯಾಂಗ್ ಗುಡ್ಡಗಳಲ್ಲಿ ಬಿಳೀಮುಖದ ಮನುಷ್ಯನನ್ನೇ ಅವರು ನೋಡಿರಲಿಲ್ಲ. ನನ್ನ ಬಿಳೀಮುಖವನ್ನು ನೋಡಿದಾಗ ನಾನೊಬ್ಬ ಪಿಶಾಚಿ ಎಂದು ಭಾವಿಸಿ, ಕಿರಿಚಿಕೊಂಡು ಕಾಡಿನೊಳಕ್ಕೆ ಓಡಿಹೋಗುತ್ತಿದ್ದರು.

ಈ ಅನುಮಾನಗಳು ಜಾಗ್ರತೆಯಾಗಿ ಮಾಯವಾದವು. ಇದಕ್ಕೆ ಕಾರಣ, ನನ್ನ ಚಿಕ್ಕ ವಯಸ್ಸಿನ ಮಗ ಕುಮಾರ್ ಮತ್ತು ಆನೆಗಳು. ನನ್ನನ್ನು ಋಷಿ ಸಾಹೇಬನೆಂದು ಕರೆಯಲಾರಂಭಿಸಿದರು. ಋಷಿ ಎನ್ನುವುದು ಅವರ ಪುರಾತನ

ಮನುಷ್ಯನೊಬ್ಬನ ಹೆಸರು. ಒಂದು ಸಲ ಸಲಿಗೆಯಾಯಿತೊ ಇಲ್ಲವೊ, ಅವರು ತೀರಾ ಸಲಿಗೆಮಾಡಿಕೊಂಡುಬಿಟ್ಟರು. ನನ್ನ ಗುಡಾರಕ್ಕೆ ಯಾವಾಗೆಂದರೆ ಆಗ ಬಂದು, ನಾನು ಏನೇನು ಮಾಡುತ್ತಿರುವೆನೆಂದು ನೋಡುತ್ತಿದ್ದರು. ಎಲೆಮನೆಯ ನನ್ನ ಸ್ನಾನದ ಕೋಣೆಗೆ ಇಣಕಿ ನೋಡುತ್ತಿದ್ದರು. ಒಟ್ಟಿನಲ್ಲಿ ನಾನೊಂದು ವಸ್ತುಸಂಗ್ರಹಾಲಯದ ಪ್ರಾಣಿಯಾಗಿದ್ದೆ. ಆ ಪ್ರಾಣಿಯ ವಿಚಿತ್ರ ರೀತಿಗಳನ್ನು ಪರೀಕ್ಷಿಸಲು ಬರುವ ತಜ್ಞರಂತಾದರು ಅವರು.

ಒಂದು ದಿನ ವಿಮಾನವೊಂದು ಭಾರಿ ಎತ್ತರದಲ್ಲಿ ಹಾರಾಡುತ್ತಿತ್ತು. ವಿಕ್ಟೋರಿಯಾ ರಾಣಿ ತನ್ನ ರಾಜ್ಯವನ್ನು ನೋಡಲು ಬಂದಿದ್ದಾಳೆ ಎಂದು ಒಬ್ಬ ಗಿರಿಜನರ ಸ್ನೇಹಿತ ಹೇಳಿದ. ಆಕೆ ನಿಜವಾಗಿಯೂ ಆ ವಿಮಾನದಲ್ಲಿದ್ದು ತನ್ನ ಚಕ್ರಾಧಿಪತ್ಯದಲ್ಲಿ ಏನಾಗುತ್ತಿತ್ತು ಎಂಬುದನ್ನು ನೋಡಿದ್ದರೆ, ಅವಳು ವಿಮಾನದಿಂದ ಹೊರಗೆ ಬಿದ್ದುಬಿಡುತ್ತಿದ್ದಳು ಎಂದು ಅನಿಸಿತು ನನಗೆ. ಜನ ವಿಮಾನಗಳ ಬಗ್ಗೆ ಮಾತನಾಡಲಾರಂಭಿಸಿದರು. ಆಕಾಶದಲ್ಲಿ ಹರಡಿದ ಸೂಕ್ಷ್ಮ ತಂತಿಗಳ ಮೇಲೆ ವಿಮಾನ ಹೋಗುತ್ತೆ ಎಂದು ಒಬ್ಬ ಅಂದ. ಮತ್ತೊಬ್ಬ, ಅದರಲ್ಲಿ ಬೇರೆ ತರಹ ಮನುಷ್ಯರಿದ್ದಾರೆಂದೂ, ಅವರು ಬರಿ ಗಾಳಿಯಿಂದಲೇ ಜೀವಿಸುತ್ತಾರೆಂದು ಹೇಳಿದ. ಕೆಲವು ವಿಮಾನವು ಬಿಡುವ ಗಾಳಿಯಿಂದ ಮಕ್ಕಳಿಗೆ ಜ್ವರ ಬರುತ್ತೆ ಎಂದರು.

ಪಾಲ್ ಲಹರ ಸಂಸ್ಥಾನದ 'ಜುಯಾಂಗ್' ಜನ ತೀರಾ ಬಡವರು. ಸ್ಥಳದಿಂದ ಸ್ಥಳಕ್ಕೆ ಹೋಗಿ ಕಾಡು ಕಡಿದು ಬೇಸಾಯ ಮಾಡುವುದನ್ನು ಸರ್ಕಾರ ತಪ್ಪಿಸಿದ್ದರಿಂದ ಅವರು ಬೇಸಾಯವನ್ನು ಬಿಟ್ಟು ಬುಟ್ಟಿ ಹೆಣೆಯುವ ಕೆಲಸ ಮಾಡುತ್ತಿದ್ದರು. ಆದರೆ ಅವರು ಹೆಣೆದ ಬುಟ್ಟಿಗಳನ್ನು ಕಾಸಿಗೊಂದು ಕೊಸರಿಗೆರಡು ಕೇಳುತ್ತಿದ್ದರು. ಹೀಗಾಗಿ ಬಡತನ ಅವರನ್ನು ಹಿಂಡುತ್ತಿತ್ತು.

ಜುಯಾಂಗ್ ಹೆಂಗಸರು, ಕೊರಳಿಗೆ ಮಣಿಗಳ ಸರಗಳನ್ನು ಹಾಕಿಕೊಂಡು ಸೊಂಟಕ್ಕೆ ಎಲೆ ಕಟ್ಟಿಕೊಳ್ಳುತ್ತಿದ್ದರು. ಇದು ಅವರಿಗೆ ಪುರಾತನ ಕಾಲದಿಂದ ಬಂದ ಉಡುಪು. ೧೮೭೧ರಲ್ಲಿ ಅವರ ಉಡುಪನ್ನು ಬದಲಾಯಿಸಬೇಕೆಂದು ಒರಿಸ್ಸಾ ಸರ್ಕಾರ ನಿರ್ಧರಿಸಿತು. ಒಂದು ದಿನ ಜನರನ್ನೆಲ್ಲಾ ಕೂಡಿಸಿ, ಎರಡು ಸಾವಿರ ತುಂಡು ಬಟ್ಟೆಗಳನ್ನು ಹಂಚಿಸಿತು. ಹೊಸ ಬಟ್ಟೆಗಳನ್ನು ಉಟ್ಟಮೇಲೆ ಸೊಂಟಕ್ಕೆ ಕಟ್ಟಿದ್ದ ಎಲೆಗಳನ್ನು ಒಂದು ಕಡೆ ಗುಡ್ಡೆ ಹಾಕಿ ಸುಟ್ಟು ಹಾಕಲಾಯಿತು. ಬಟ್ಟೆ ಉಡಬೇಕೆಂಬ ಪ್ರಚಾರ ಮುಂದುವರಿಯಿತು. ಬಹಳ ಜನ ಜುಯಾಂಗ್ ಹೆಂಗಸರು ಅಂದದ ಮತ್ತು ಆರೋಗ್ಯಕರವಾದ ಎಲೆಯ ಉಡುಪನ್ನು ಬಿಟ್ಟು ಹೊಲಸಾದ ಚಿಂದಿ ಬಟ್ಟೆಗಳನ್ನು ಸುತ್ತಿಕೊಳ್ಳಲಾರಂಭಿಸಿದರು. ತಮ್ಮ ಎಲೆಯ ಉಡುಪನ್ನು ಬಿಟ್ಟಂದಿನಿಂದ ತಮಗೆ ಏನಾದರೊಂದು ಕಾಟ ತಪ್ಪಲಿಲ್ಲವೆಂದು ಜುಯಾಂಗ್ ಜನ ಭಾವಿಸುತ್ತಾರೆ. ಅಂದಿನಿಂದ ದನಗಳಿಗೆ ಹುಲಿಗಳ ಕಾಟ; ಮುನಿದ ಮಣ್ಣಿನಿಂದ ಬರುವ ಬೆಳೆ ಅಷ್ಟಕ್ಕಷ್ಟೆ.

ಈದ ಅದು ವಿಚಿತ್ರವಾಗಿ ಕಾಣಬಹುದು. ಆದರೆ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಿ ಅವರ ಜೀವನವನ್ನು ಉತ್ತಮಪಡಿಸದೆ ಬದಲಾವಣೆ ಮಾಡಲು ಹೋದಲ್ಲಿ ಅದರಿಂದ ಅನಾಹುತವಾಗುತ್ತದೆ. ನಾನು ಈ ಬಗ್ಗೆ ಸರ್ಕಾರಕ್ಕೆ ತುಂಬಾ ಕಠಿಣವಾಗಿಯೇ ಬರೆದೆ. ನವನಾಗರಿಕತೆ ಕಾಡಿಗೆ ಕಾಲಿಟ್ಟರೆ ಅದು ಕಾಡುಜನರ ಕಲಾಪ್ರದರ್ಶನದ ನಾನಾ ಮುಖಗಳನ್ನು ಕೊಲೆಮಾಡಿದಂತೆಯೇ ಸರಿ. ಜುಯಾಂಗರ ಪ್ರಾಣಿಗಳ ನೃತ್ಯ ಅತ್ಯಂತ ಮನೋಹರವಾದದ್ದು ಅದನ್ನು ವರ್ಣಿಸಲು ನನಗೆ ಶಕ್ತಿ ಸಾಲದು. ಅವರ ಆ ನೃತ್ಯಗಳನ್ನು ೧೯೪೩ರಲ್ಲಿ ಪದೇ ಪದೇ ನೋಡಿದೆ. ೧೮೬೬ರಲ್ಲಿ ಡಾಲ್ಟನ್ ತಾನು ನೋಡಿದ್ದೇನೆಂದು ಬರೆದಿದ್ದಾನೆ. ಈಗ (೧೯೬೩)ರಲ್ಲಿ ಆ ನೃತ್ಯಗಳಿವೆಯೋ ಇಲ್ಲವೋ ಕಾಣೆ.

ನನ್ನ ಸಂಚಾರದ ಖರ್ಚು ದಿನೇ ದಿನೇ ಹೆಚ್ಚಾಗುತ್ತಿತ್ತು. ಈಗಂತೂ ಸಂಚಾರ ಜೇಬನ್ನೆಲ್ಲ ಖಾಲಿಮಾಡಿಬಿಡುತ್ತೆ ಅನ್ನಿಸಿ ಸ್ವಂತ ಖರ್ಚಿನಲ್ಲಿ ಸಂಚಾರಮಾಡುವುದು ನನ್ನ ಕೆಲಸಕ್ಕೆ ಹೆಚ್ಚು ಅಡ್ಡಿಯಾಗುತ್ತಿದ್ದುದು ಕಂಡುಬಂತು. ಒರಿಸ್ಸಾ ಸರ್ಕಾರದ ಅಧಿಕಾರಿಗಳಲ್ಲಿ ನನಗೆ ಬೇಕಾದವರು ಕೆಲವರಿದ್ದರು. ಅವರು ಮೊದಮೊದಲು ನನ್ನ ರಾಜಕೀಯ ಅಭಿಪ್ರಾಯಗಳ ಬಗ್ಗೆ ಅನುಮಾನಪಟ್ಟರು. ಆಮೇಲೆ ನಾನು ಅಂತಹ ಕೆಟ್ಟ ಮನುಷ್ಯ ಅಲ್ಲವೆಂದು ಖಚಿತವಾದ ಮೇಲೆ ನನ್ನನ್ನು ಒರಿಸ್ಸಾ ಸರ್ಕಾರದ ಗೌರವ ಮಾನವಶಾಸ್ತ್ರಜ್ಞನಾಗಿ (Hon. Anthropologist) ನೇಮಕ ಮಾಡಿದರು. ನನಗೆ ಕೊಡುತ್ತಿದ್ದ ಸಂಭಾವನೆ ನನ್ನ ಖರ್ಚಿಗೆ ಸಾಕಾಗುತ್ತಿತ್ತು.

ನನ್ನ ಒರಿಸ್ಸಾ ಅಭ್ಯಾಸದ ಫಲವಾಗಿ ಮೂರು ಪುಸ್ತಕಗಳು ಪ್ರಕಟವಾದುವು. ಅವು ಯಾವುವೆಂದರೆ : 'Bondo Highlander' (ಬೊಂಡೋ ಹೈಲ್ಯಾಂಡರ್), The Religion of an Indian Tribe' (ಇಂಡಿಯಾದ ಗಿರಿಜನವೊಂದರ ಮತ) ಮತ್ತು Trible Myths of Orissa' (ಒರಿಸ್ಸಾದ ಗಿರಿಜನರ ದಂತಕಥೆಗಳು). ಜುಯಾಂಗರ ಮೇಲೆ 'Man in India' (ಮ್ಯಾನ್ ಇನ್ ಇಂಡಿಯಾ) ಎಂಬ ಪತ್ರಿಕೆಯ ವಿಶೇಷ ಸಂಚಿಕೆ ಹೊರಡಿಸಿದೆ. ಸರ್ಕಾರಕ್ಕೆ ಅನೇಕ ವರದಿಗಳನ್ನು ಕಳುಹಿಸಿದೆ. ಗಿರಿಜನರ ಅಭಿವೃದ್ಧಿ ಬಗ್ಗೆ ಶಿಫಾರಸುಗಳನ್ನು ಮಾಡಿದೆ. ಸಾಕಷ್ಟು ಶಕ್ತಿ ಇದ್ದರೆ ಇನ್ನೆರಡು ಪುಸ್ತಕಗಳನ್ನು ಪ್ರಕಟಿಸಬಹುದಾಗಿತ್ತು. ಏಕೆಂದರೆ, ನನ್ನ ಬಳಿ **'ಗೊಡಬರು'** ಮತ್ತು **'ಕೊಂಡ'**ರಿಗೆ ಸಂಬಂಧಪಟ್ಟ ಹಾಗೆ ಟಿಪ್ಪಣಿಗಳೂ ಚಿತ್ರಗಳೂ ಬೇಕಾದಷ್ಟಿದ್ದವು.

ಗಿರಿಜನರು ನನ್ನ ಬಾಳಿನ ಹಾಸುಹೊಕ್ಕಾಗಿದ್ದರು. ಅವರಿಂದ ನನ್ನ ಬಾಳಿನಲ್ಲಿ ಆಸಕ್ತಿ ಹಾಗೂ ಆನಂದ ಮೂಡಿತ್ತು. ಬೈಗರು, ಮರಿಯರು, ಬೊಂಡೋಗಳು, ಕೊಂಡರು ಮತ್ತು ಸವೋರಾಗಳು ನನ್ನ ಬಾಳಿನ ಕಥೆಯ ಮುಖ್ಯ ಆಧಾರಗಳು. ಬೈಗರು ಕಗ್ಗಾಡುಗಳಿಗೆ ನನ್ನನ್ನು ಕರೆದುಕೊಂಡು ಹೋದರು. ಕುಟ್ಟಿಯ ಕೊಂಡರು ಮತ್ತು ಮರಿಯರು ಸೌಂದರ್ಯದ ಕಡೆ ನನ್ನ ಮನಸ್ಸನ್ನು ತಿರುಗಿಸಿ ಅದನ್ನು

ಪಕ್ವಮಾಡಿದರು. ಸವೋರಾರನ್ನು ನಾನು ಕಂಡು ಮಾತನಾಡಿದ್ದೇನೆ; ಪ್ರೀತಿಸಿದ್ದೇನೆ; ಮತ್ತು ವರ್ಷಾನುಗಟ್ಟಲೆ ಅವರ ಬಗ್ಗೆ ಆಸಕ್ತಿವಹಿಸಿದ್ದೇನೆ. ಮುರಿಯರ ವಿಚಿತ್ರ ಸಾಮಾಜಿಕ ಪದ್ಧತಿಯ ಕಾರಣವಾಗಿ ಅವರ ಬಗ್ಗೆ ಅಪಾರ ಆಸಕ್ತಿ ಹೊಂದಿದೆ. ಅವರನ್ನು ಸ್ವಲ್ಪ ತಿಳಿದುಕೊಂಡಿರುವವರಿಗೆ ಮಾತ್ರ ನಾನು ಹೇಳುವುದು ಅರ್ಥವಾಗುತ್ತದೆ. ಮನಮೆಚ್ಚಿನ ನೀಫಾ ಜನರ ಜೀವನದ ಬಗ್ಗೆ ನನ್ನ ಧೋರಣೆಯನ್ನು ರೂಢಿಸಿದರು. ಹೀಗೆ ಈ ಗಿರಿಜನರು ಒಬ್ಬೊಬ್ಬರಾಗಿ ನನ್ನ ಬಾಳಿನ ಕೊಡ ತುಂಬಿ ತುಳುಕಾಡುವಂತೆ ಮಾಡಿದ್ದಾರೆ. ಅವರನ್ನು ಬಿಟ್ಟು ಬೇರೆ ಯಾವುದನ್ನೂ ಹೇಳಲಾರೆ ನಾನು. ಅವರೇ ನನ್ನ ಬದುಕು.

ಮೊದಲಿಗೆ ಕುಟ್ಟಿಯ ಕೊಂಡರ ಬಗ್ಗೆ ನಾಲ್ಕು ಮಾತು. ಇವರು ಕಗ್ಗಾಡುಗಳಲ್ಲಿ ತುಂಬ ದೂರವಾಗಿ ವಾಸಮಾಡುವ ಬಹು ಚೆಂದದ ಜನ. ಇವರದು ದೊಡ್ಡ ಬುಡಕಟ್ಟು. ಗೊಂಡರು ಮಾತನಾಡುವ 'ಗೊಂಡಿ' ಭಾಷೆಯಂತಹ ದ್ರಾವಿಡ ಭಾಷೆಯೊಂದನ್ನು ಮಾತನಾಡುತ್ತಾರೆ. ಗೊಂಡರು ಒರಿಸ್ಸಾದಲ್ಲೆಲ್ಲಾ ಹರಡಿದ್ದಾರೆ. ಆದರೆ ಕುಟ್ಟಿಯ ಕೊಂಡರು ಗಂಜಾಂ ಜಿಲ್ಲೆಯ ವಾಯವ್ಯ ದಿಕ್ಕಿನ ಗುಡ್ಡಗಾಡುಗಳಲ್ಲಿ ಮಾತ್ರ ವಾಸಮಾಡುತ್ತಾರೆ. ಇವರು ತುಂಬ ಬಡವರು ಮತ್ತು ಅಂಜುಬುರುಕರು. ಆದರೆ ಲಕ್ಷಣವಾದ ಜನ. ನಂಬಿದರೆ ಕೈ ಬಿಡುವವರಲ್ಲ.

ಎಲ್ಲ ಗಿರಿಜನರಂತೆಯೇ ಈ ಜನರೂ ನಾನಾ ಬಗೆಯಲ್ಲಿ ಶೋಷಣೆಗೊಳಗಾಗಿದ್ದಾರೆ. ನಾನು ಮೊಟ್ಟಮೊದಲು ಈ ಜನರಿರುವ ಕಡೆ ಹೋದಾಗ ನನ್ನ ಟಪಾಲನ್ನು ರೈಲಿಗೆ ಹಾಕಲು ಹೋಗುತ್ತಿದ್ದ ಕೊಂಡನನ್ನು ಹುಲಿಯೊಂದು ತಿಂದುಹಾಕಿತು ! ಮಾರನೆ ದಿನ ನಾವು ಹೋಗಿ ನೋಡಿದಾಗ ಕಂಡದ್ದು ರಕ್ತದ ಮಡು ಮತ್ತು ಕಾಡಿನಲ್ಲಿ ಚೆಲ್ಲಾಪಿಲ್ಲಿಯಾಗಿದ್ದ ನನ್ನ ಕಾಗದಗಳು. ಕಾಡಾನೆಗಳ ಕಾಟ ಇಲ್ಲಿ ಯಾವಾಗಲೂ ಇರುತ್ತಿತ್ತು.

ಬೈಗರಂತೆ ಕೊಂಡರೂ ಕೊಡಲಿ ಕೃಷಿಯನ್ನು (Axe Cultivation) ಅನುಸರಿಸುತ್ತಿದ್ದರು. ತೀರಾ ಕಿರಿದಾದ ಮನೆಗಳಲ್ಲಿ ಇವರ ವಾಸ. ಒಳಕ್ಕೆ ಹೋಗಬೇಕಾದರೆ ಅಂಬೆಗಾಲಿಟ್ಟುಕೊಂಡು ಹೋಗಬೇಕು. ಬಾಗಿಲು ಅಷ್ಟು ಚಿಕ್ಕದು. ಮನೆಗಳನ್ನು ಸಾಲಾಗಿ ಒಂದಕ್ಕೊಂದಕ್ಕೆ ಅಂಟಿಕೊಂಡಿರುವಂತೆ ಅಷ್ಟೊಂದು ಕಿರಿದಾಗಿ ಕಟ್ಟಿರುತ್ತಾರೆ. ಮಧ್ಯದಲ್ಲಿ ಮುಗಿಲು ಮುಟ್ಟುವ ಬಲಿಕಂಬ. ಆ ಕಂಬದ ತುದಿಯಲ್ಲಿ ಕೋಣನ ಕೊಂಬು. ಮೂರು ಕಲ್ಲುಗಳನ್ನು ಜೋಡಿಸಿ ಮಾಡಿದ ಗುಡಿಯೊಳಗೆ ಭೂದೇವಿಯ ಕಲ್ಲು.

೧೯೪೪ರಲ್ಲಿಯೂ ಕೊಂಡರ ಮನಸ್ಸು ನರಬಲಿಯ ಕಡೆ ವಾಲಿತ್ತು. ಈ ಸಂದರ್ಭದಲ್ಲಿ ನೂರುವರ್ಷಗಳ ಹಿಂದೆ ಸರ್ಕಾರ 'ಮೆರಿಹ್ (Merriah) ಬಲಿ'ಗಳನ್ನು ಅಂದರೆ ನರಮನುಷ್ಯನನ್ನು ಭೂದೇವಿಗೆ ಬಲಿಕೊಡುತ್ತಿದ್ದುದನ್ನು ನಿಲ್ಲಿಸಿದ ವಿಷಯ ಜ್ಞಾಪಕಕ್ಕೆ ಬರುತ್ತದೆ. ಇಂಥ ಒಳ್ಳೆಯ ಜನ ನರಬಲಿ ಕೊಡುತ್ತಿದ್ದರು ಮತ್ತು

ಈಗಲೂ ಅದರ ಕಡೆ ಮನಸ್ಸಿದೆ ಎಂಬುದನ್ನು ನಂಬಲು ಸಾಧ್ಯವಿಲ್ಲ. ಆದರೆ ಅದು ನಿಜ. ಪ್ರತಿಯೊಂದು ಗ್ರಾಮದಲ್ಲಿಯೂ ಪೂಜಾರಿಯ ಮನೆಯಲ್ಲಿ ಹಿಂದೆ ನರಬಲಿಗೆ ಉಪಯೋಗಿಸುತ್ತಿದ್ದ ಕತ್ತಿ, ಸರಪಳಿ ಮತ್ತು ರಕ್ತ ಆತುಕೊಳ್ಳುವ ಬೋಗುಣಿ – ಈ ಸಾಮಾನುಗಳನ್ನು ಬಚ್ಚಿಟ್ಟಿದ್ದಾರೆ. ಕೆಲವು ವೇಳೆ ಹುಣ್ಣಿಮೆಯ ದಿನಗಳಲ್ಲಿ ಈ ಸಾಮಾನುಗಳು ತಮಗೆ ರಕ್ತಬಲಿ ಕೊಡಲಿಲ್ಲವೆಂದು ಆಳುತ್ತವೆ ಎಂಬುದಾಗಿ ಪೂಜಾರಿಗಳು ನನಗೆ ಹೇಳುತ್ತಿದ್ದರು. ಈಗಲೂ ಕೊಂಡರ ಮನೆಗಳಲ್ಲಿ ಹಿಂದಿನ ಕಾಲದ ತಲೆಬುರುಡೆ ಮುಂತಾದ ಮನುಷ್ಯರ ಅಂಗಗಳನ್ನು ನೋಡಬಹುದು. ಈಗ ಕೋಣಗಳನ್ನು ಬಲಿಕೊಡುತ್ತಿದ್ದಾರೆ. ಇದನ್ನೂ ನಿಲ್ಲಿಸಬೇಕೆಂಬ ಪ್ರಯತ್ನ ನಡೆಯುತ್ತಿದೆ.

ಚಾರಲ್ಸ್ ಲ್ಯಾಂಬ್ ಹೇಳಿದ ಆ 'ಕೆಟ್ಟ ಕಳೆ' ಎಂಬ ಹೊಗೆಸೊಪ್ಪಿಗೆ ಕೊಂಡರು ತುಂಬಾ ಅಂಟಿಕೊಂಡಿದ್ದಾರೆ. ಸೊಗಸಾದ ಹೊಗೆಬತ್ತಿ ಮಾಡಿ ಸೇದುತ್ತಾರೆ. ಹೊಗೆಸೊಪ್ಪಿಗೆ ಸಂಬಂಧಪಟ್ಟ ಕಥೆ ಗಿರಿಜನರು ಇರುವ ಇಂಡಿಯಾದಿಂದ ಎಲ್ಲಾ ಕಡೆಗಳಿಗೂ ಹಬ್ಬಿ ನೀಫಾದಲ್ಲಿಯೂ ಕೇಳಿಬರುತ್ತಿದೆ. ಆ ಕಥೆ ಕೇಳಿ : ಒಂದಾನೊಂದು ಕಾಲದಲ್ಲಿ ಬಹಳ ಕುರೂಪಿಯಾದ ಹುಡುಗಿಯೊಬ್ಬಳಿದ್ದಳಂತೆ. ಆಕೆಯನ್ನು ಯಾರೂ ಮದುವೆಯಾಗುವುದಕ್ಕೆ ಒಪ್ಪಲಿಲ್ಲ. ಹತಾಶಳಾದ ಆಕೆ ಸೃಷ್ಟಿಕರ್ತನಲ್ಲಿ ಹೋಗಿ ಸಾವನ್ನು ಕೇಳಿಕೊಂಡಳು. ಆದರೆ ಸತ್ತಮೇಲೆ ಗಂಡಸರೆಲ್ಲಾ ಮೆಚ್ಚುವ ಒಂದು ವಸ್ತುವಾಗಿ ಜನ್ಮ ತಾಳುವ ವರ ಬೇಡಿದಳು. ದೇವರು 'ತಥಾಸ್ತು' ಎಂದನು. ಆಕೆಯ ಶರೀರದಿಂದ ಹೊಗೆಸೊಪ್ಪಿನ ಗಿಡ ಹುಟ್ಟಿತು. ಆಗ ಯಾರಿಗೂ ಬೇಡವಾದ ಹುಡುಗಿ ಈಗ ಪ್ರಪಂಚಕ್ಕೇ ಬೇಕಾಗಿದ್ದಾಳೆ.*

ಕುಟ್ಟಿಯ ಕೊಂಡರಲ್ಲಿ ಏನೂ ಇಲ್ಲ; ಆದರೆ ಎಲ್ಲವೂ ಇದೆ. ಇದನ್ನು ನಾನು ಬರೆದ ಹಾಡೊಂದು ಚೆನ್ನಾಗಿ ಹೇಳುತ್ತದೆ :

ಮಾನವ ಮೃತ್ತಿಕೆಯ ಉಸಿರಾಡುವ ಆ ಚೆಂದ ದೇಹ
ಕಾಲ್ಪನಿಕವಾದರೂ ಸುಖಪಡುವುದು ಏನೇ ಕಷ್ಟಬರಲಿ.
ಇವರು ಬಡವರೆ ? ಇಲ್ಲ ಕೊಂಡುಕೊಳ್ಳಲಾಗದ
ಇವರ ಐಸಿರಿಯ ಮುಂದೆ ಕುಬೇರನ ಖಜಾನೆ ಖಾಲಿ !

ಕೆಲವು ವರ್ಷಗಳ ಹಿಂದೆ 'Geographical Magazine' (ಜಿಯೋಗ್ರಾಫಿಕಲ್ ಮ್ಯಾಗಜೀನ್)ಗೆ ಒಂದು ಲೇಖನ ಬರೆಯಬೇಕೆಂದು ಕೇಳಿದರು. ವಿಷಯ : My Worst Journey (ನನ್ನ ಬಹು ಪ್ರಯಾಸದ ಪ್ರವಾಸ) ವನ್ನು ಕುರಿತದ್ದು. ಆಗ

* ಕರ್ನಾಟಕದ ಮೈಸೂರು ವಿಭಾಗದಲ್ಲಿ ಇದೇ ತರಹ ಜನಪದ ಕಥೆ ಇದೆ : ಹೆಳವರು ಹಾಡುವ ಯಮುನಾಳು ದೇವಮ್ಮ ಅಥವಾ ಬೆಟ್ಟದಪುರದ ಮಲ್ಲೇಶ್ವರನ ಜಾನಪದ ಹಾಡಿನಲ್ಲಿ ಒಡಹುಟ್ಟಿದ ಅಣ್ಣನನ್ನೇ ಕೊಲ್ಲಲು ಪ್ರಯತ್ನಿಸಿದ ತಂಗಿಗೆ ನೀನು ಭೂಲೋಕದಲ್ಲಿ ಹೊಗೆಸೊಪ್ಪಾಗಿ ಹುಟ್ಟು ಅದನ್ನು ಹಾಕಿಕೊಂಡ ಜನರೆಲ್ಲ ನಿನ್ನನ್ನು ಉಗಿಯಲಿ ಎಂದು ಶಾಪ ಕೊಟ್ಟ ಕಥೆ ಇದೆ.

ನಾನು ಹೇಳಿದೆ, ಎಂಥ ಕಷ್ಟದ ಪ್ರವಾಸವಾಗಲಿ ಉಪಯೋಗವಾಗದೇ ಹೋಗಲಿಲ್ಲ ಎಂದು. ಒಟ್ಟಿನಲ್ಲಿ ಗಿರಿಜನರಿರುವ ಪ್ರದೇಶದಲ್ಲಿ ಮಾಡಿದ ನನ್ನ ಸಂಚಾರವೆಲ್ಲಾ ತುಂಬಾ ಉಪಯುಕ್ತವಾಗಿತ್ತು. ಅನೇಕ ಸಲ ತೊಂದರೆಗಳಾದುವು, ನಿಜ. ಗುಡ್ಡಗಳನ್ನು ಹತ್ತಿಳಿಯುವುದು, ಜ್ವರದಿಂದ ನರಳುವುದು, ವೈದ್ಯಕೀಯ ಸಹಾಯದ ಕೊರತೆ, ಬೇಕಾದ ಆಹಾರದ ಅಭಾವ– ಈ ತೊಂದರೆಗಳೆಲ್ಲಾ ಇದ್ದುವು. ಆದರೆ ಒಟ್ಟಿನಲ್ಲಿ ಈ ಪ್ರಯಾಣಗಳೆಲ್ಲ ಆನಂದದಾಯಕವಾಗಿದ್ದುವು. ಗ್ರಾಮಾಂತರ ಪ್ರದೇಶದ ಸೊಗಸು, ಸ್ನೇಹಭಾವನೆಯ ಸಂಪರ್ಕ, ವೈಜ್ಞಾನಿಕ ಶೋಧನೆಯ ಆನಂದ, ನಂಬಿಕಸ್ತ ಸಹಾಯಕರ ಬೆಂಬಲ ನಿಜವಾದ ಸ್ನೇಹಿತರ ಪ್ರೀತಿ ವಿಶ್ವಾಸ– ಇವೆಲ್ಲಾ ಕಾಲು ಶತಮಾನದ ನನ್ನ ಜೀವನವನ್ನು ಸುಖಮಯವನ್ನಾಗಿ ಮಾಡಿದುವು.

ತೊಂದರೆಗಳಿಲ್ಲದೆ ಇರಲಿಲ್ಲ. ಆಗಬೇಕಾದ ಕೆಲಸ ನಿಧಾನವಾಗುತ್ತಿದ್ದುದು, ಬೇಜಾರು ಹಿಡಿಸುವ ಅಧಿಕಾರಿಗಳ ವರ್ತನೆಯಿಂದ ಮನಸ್ಸು ಕಿರಿಕಿರಿಯಾಗುತ್ತಿದ್ದುದು, ಮಹಾನೇಮನಿಷ್ಠರೆಂದೆನಿಸಿಕೊಂಡವರು, ಪಾದ್ರಿಗಳು ಮತ್ತು ಪೊಲೀಸರು ಕೆರಳಿಸುತ್ತಿದ್ದುದು, ಎಲ್ಲಾ ಪ್ರಯಾಣಿಕರಂತೆ ನಾನೂ ನಿರಾಶನಾಗುವುದು, ಆಯಾಸಗೊಳ್ಳುವುದು, ಸಾಕಪ್ಪು ಎನ್ನುವುದು – ಇವೆಲ್ಲ ನನಗೂ ಉಂಟಾದುವು. ಆದರೆ ಯಾವೊಂದು ಪ್ರವಾಸವೂ ಫಲದಾಯಕವಾಗದೇ ಇರಲಿಲ್ಲ. ಯಾವ ಸ್ಥಳಕ್ಕೇ ಆಗಲಿ ಮೊಟ್ಟಮೊದಲನೆಯ ಭೇಟಿ ಕಷ್ಟವೆ. ಸ್ಥಳವಾಗಲೀ ಭಾಷೆಯಾಗಲೀ ಗೊತ್ತಿರುವುದಿಲ್ಲ. ದುಭಾಷಿಗಳು ಸಿಕ್ಕುವುದು ಕಷ್ಟ. ಅವರನ್ನು ತರಬೇತಿ ಮಾಡಿದ ಮೇಲೂ ಅವರು ನಿಷ್ಪ್ರಯೋಜಕರಾಗುತ್ತಾರೆ. ಹೊಸಬರ ಬಗ್ಗೆ ಜನಗಳು ಅನುಮಾನಪಡುತ್ತಾರೆ. ನಾವು ಯಾರು ಎಂಬುದನ್ನು ಅವರಿಗೆ ಮಂದಟ್ಟು ಮಾಡುವುದೇ ಕಷ್ಟವಾಗುತ್ತದೆ.

೧೯೪೩ರಲ್ಲಿ ನಾನು ಒರಿಸ್ಸಾದ ಬೊಂಡೋ ಪ್ರದೇಶಕ್ಕೆ ಹೋಗಿದ್ದು ನನ್ನ ಅತ್ಯಂತ ಪ್ರಯಾಸದ ಪ್ರವಾಸವಾಗಿತ್ತೆಂದು ಹೇಳಬಹುದು. ಈ ಜನರ ಸಂಖ್ಯೆ ೧೯೪೧ನೆಯ ಜನಗಣತಿಯ ಪ್ರಕಾರ ೨,೫೬೫ ಇತ್ತು. ಮಚ್ಕುಂಡ್ ನದಿಯ ವಾಯವ್ಯ ದಿಕ್ಕಿನ ಎತ್ತರವಾದ ಹಾಗೂ ಸುಂದರವಾದ ಪ್ರದೇಶದಲ್ಲಿ ಈ ಜನ ವಾಸಿಸುತ್ತಾರೆ. ನಾನು ಅವರನ್ನು ಕಂಡಾಗ ನವನಾಗರಿಕತೆ ಅವರಿಗೆ ಇನ್ನೂ ತಟ್ಟಿರಲಿಲ್ಲ. ಈಗ ಅವರ ಗತಿ ಏನಾಗಿದೆಯೋ ಕಾಣೆ.

೧೯೪೩ನೆಯ ಇಸವಿಯ ಆ ದಿನಗಳು ಬಹಳ ಕಷ್ಟಕರವಾಗಿದ್ದುವು. ಮ್ಯಾಪುಗಳೆಲ್ಲಾ ಮಿಲಿಟರಿಯವರ ಅಧೀನದಲ್ಲಿದ್ದುವು. ರೇಷನ್ ಸಿಕ್ಕುವುದು ಕಷ್ಟವಾಗಿತ್ತು. ಪರ್ಮಿಟ್‌ಗಾಗಿ ಬಹಳ ಹೊತ್ತು ಹಾಳುಸುರಿಯುತ್ತಿದ್ದ ಆಫೀಸುಗಳಲ್ಲಿ ಕಾಯಬೇಕಾಗಿತ್ತು. ಹಾಲಿನ ಪುಡಿಯ ಡಬ್ಬ ನನಗೆ ಬೇಕೇ ಬೇಕಿತ್ತು. ಏಕೆಂದರೆ, ಆದಿವಾಸಿಗಳ ಪ್ರಪಂಚದಲ್ಲಿ ಹಾಲಿಗೆ ನಿಷೇಧ ಇತ್ತು. ಪೆಟ್ರೋಲ್ ಅಂತೂ ಇಲ್ಲವೇ ಇಲ್ಲ.

ಆಕ್ಸ್‌ಫರ್ಡ್‌ನಲ್ಲಿ ನನ್ನ ಸಹಪಾಠಿಯಾಗಿದ್ದ ಒಬ್ಬರು ಈ ಬೊಂಡೋ ಜನರಿದ್ದ ಕೊರಪುಟ್ ಎಂಬ ಸ್ಥಳದ ಮುಖ್ಯಾಧಿಕಾರಿಯಾಗಿದ್ದರು. ನಾನು ಕಲ್ಕತ್ತದಿಂದ ವಿಜಯನಗರಂ ಎಂಬಲ್ಲಿಗೆ ಹೋಗಿ, ಅಲ್ಲಿಂದ ೯೦ ಮೈಲಿ ಪ್ರಯಾಣಮಾಡಿ ಕೊರಪುಟ್ ತಲುಪಿದೆ. ಆದರೂ ಆ ಮುಖ್ಯಾಧಿಕಾರಿ ನನ್ನ ವಸತಿಯ ಬಗ್ಗೆ ಆಸಕ್ತಿ ವಹಿಸಲಿಲ್ಲ. ಎಂಥದೋ ಒಂದು ಹೊಲಸು ಪ್ರವಾಸಿ ಮಂದಿರದಲ್ಲಿ ನಾನು ಇರಬೇಕಾಯಿತು. ಮುರಿದುಹೋದ ಕಿಟಕಿಗಳು, ಇಲಿಗಳ ಓಡಾಟ, ಜಿಗಟಗಳ ಹಾರಾಟಗಳ ಮಧ್ಯೆ ನಾನು ನನ್ನ ಆ ಕಾಲೇಜು ಸಹಪಾಠಿ ಚರಿತ್ರೆಯಲ್ಲಿ ಮೂರನೆಯ ದರ್ಜೆಯಲ್ಲಿ ಕೊನೆಯವನಾಗಿ ಪಾಸಾಗಿದ್ದುದನ್ನು ಜ್ಞಾಪಿಸಿಕೊಂಡೆ !

ಕೊರಪುಟದಿಂದ ನಾವು ಬಸ್ಸಿನಲ್ಲಿ ಗೋವಿಂದಪಲ್ಲಿ ಎಂಬ ಊರಿಗೆ ಹೋಗಬೇಕಾಗಿತ್ತು. ಆಗಿನ ಕಾಲದಲ್ಲಿ ಸರ್ಕಾರಿ ಅಧಿಕಾರಿ, ಶ್ರೀಮಂತ, ಭಾರಿ ಶಿಪಾರಸು ಪಡೆದಿದ್ದವ – ಇವರನ್ನು ಬಿಟ್ಟರೆ ಬೇರೆಯವರಿಗೆ ಬೆಲೆಯನ್ನೇ ಕೊಡುತ್ತಿರಲಿಲ್ಲ. ಒಂದೊಂದು ವೇಳೆ ಹೋಗಲು ಬಸ್ಸೇ ಇರುತ್ತಿರಲಿಲ್ಲ. ಬಸ್ ಮಾಲೀಕನ ಮನೆಯಲ್ಲಿ ಮದುವೆಯಾದರೆ ವಾರಗಟ್ಟಲೆ ಬಸ್ಸು ಕಾದು ನಿಲ್ಲುತ್ತಿತ್ತು. ಆಗ ಎತ್ತಿನಗಾಡಿಗಳಲ್ಲಿ ಪ್ರಯಾಣಮಾಡಬೇಕಾಗಿತ್ತು. ಹೀಗೆ ಪ್ರಯಾಣ ಮಾಡಿ ಬೊಂಡೋ ಗಿರಿಜನರಿರುವ ಊರನ್ನು ಮುಟ್ಟಿದಾಗ ಆ ಜನ ಸುತ್ತ ಮುತ್ತಿ ಕೊಳ್ಳುವವರೇ ಹೊರತು ಒಂದೂ ಕೆಲಸ ಮಾಡಿಕೊಡುತ್ತಿರಲಿಲ್ಲ. ಬೇರೆಯವರ ಸಾಮಾನು ಹೊತ್ತು ಅವರಿಗೆ ಅನುಭವವಿಲ್ಲ; ಶುದ್ಧ ಸೋಮಾರಿಗಳು. ಆದರೂ ಕಷ್ಟಪಟ್ಟು ಹನ್ನೆರಡು ಜನರನ್ನು ಗೊತ್ತುಮಾಡಿದೆ – ಸಾಮಾನುಗಳನ್ನು ಹೊರಲು, ಹೊರಿಸಿಕೊಂಡು ಪ್ರಪಂಚದ ತುಟ್ಟತುದಿಯಲ್ಲಿರುವ 'ದುಮಿರಿಪದ' ಎಂಬ ಸುಂದರ ಹಳ್ಳಿಯನ್ನು ಮುಟ್ಟಿದೆ.

ಮತ್ತೊಂದು ಸ್ಥಳಕ್ಕೆ ಹೋದಾಗ ಜನ ಬಹಳ ಬೆದರಿಬಿಟ್ಟರು. ತಾಯಂದಿರು ತಮ್ಮ ಮಕ್ಕಳನ್ನು ಎಳೆದು ಎತ್ತಿಕೊಂಡು ಮನೆಯೊಳಕ್ಕೆ ಧಾವಿಸಿದರು. ಹುಡುಗಿಯರು ಕಿರುಚುತ್ತಾ ಓಡಿಹೋದರು. ಬಾಗಿಲನ್ನು ಧಡಾ ಧಡಾ ಎಂದು ಮುಚ್ಚಿಕೊಂಡರು. ಒಬ್ಬ ಯುವಕ ಆತುರಾತುರದಿಂದ ಮರ ಹತ್ತಿಬಿಟ್ಟ. ಧೈರ್ಯಮಾಡಿದ ಕೆಲವು ಮುದುಕರು ಮಾತ್ರ ನಮ್ಮ ಬಳಿಗೆ ಬಂದರು. ಆಮೇಲೆ ಗೊತ್ತಾಯಿತು, ನಾನು ಹುಡುಗಿಯರನ್ನು ಯುದ್ಧಕ್ಕೆ ಹಿಡಿದುಕೊಂಡುಹೋಗುವುದಕ್ಕೆ ಬಂದಿದ್ದೇನೆಂಬ ಭಾವನೆಯೇ ಅವರ ಹೆದರಿಕೆಗೆ ಕಾರಣವಾಗಿತ್ತು ಎಂದು. ಅಲ್ಲದೆ, ಮಕ್ಕಳನ್ನು ಹಿಡಿದುಕೊಂಡು ಹೋಗಿ ಅಮೆರಿಕಾಕ್ಕೆ ರವಾನೆ ಮಾಡುತ್ತೇನೆ ಎಂಬ ಭೀತಿ ಬೇರೆ ಇತ್ತಂತೆ. ಇನ್ನೊಂದು ಕಥೆ, ನಾನು ಎಕ್ಸೈಸ್ ಅಧಿಕಾರಿ, ಪಾನ ನಿರೋಧ ಜಾರಿಗೆ ತರಲು ಬಂದಿದ್ದೇನೆ ಎಂದು. ಆಮೇಲೆ ಒಬ್ಬ ಖೂನಿ ಮಾಡಿದವನ ಸಹಾಯದಿಂದ ನನ್ನ ಮೇಲಿನ ಅನುಮಾನವೆಲ್ಲಾ ಪರಿಹಾರವಾಯಿತು. ಆತ ಎರಡು ಸಲ ಜೈಲಿಗೆ ಹೋಗಿಬಂದಿದ್ದ. ಮೂರನೆಯದಕ್ಕೆ ಸಿದ್ಧತೆಮಾಡಿಕೊಳ್ಳುತ್ತಿದ್ದ ಎಂದು ಕಾಣುತ್ತೆ.

ಈ ಕೊಲೆಗಾರರಲ್ಲಿ ಬಹಳ ಜನ ನನಗೆ ಗೊತ್ತಿದ್ದಾರೆ. ಆದರೆ ಅವರೆಲ್ಲಿಯಾದರೂ ನನ್ನ ಮೇಲೆ ತಮ್ಮ ಪ್ರಯೋಗ ಮಾಡಿಬಿಟ್ಟಾರೆಂಬ ಹೆದರಿಕೆಯೂ ಆಗುತ್ತಿತ್ತು.

ಹೆದರಿಕೊಂಡ ಜನರನ್ನು ಒಲಿಸಿಕೊಳ್ಳಲು ಒಂದು ಹಳ್ಳಿಯಲ್ಲಿ ಗ್ರಾಮಾಫೋನ್ ಹಚ್ಚಿದೆ. ಆದರೆ ನಾನು ಹಾಕಿದ ರಿಕಾರ್ಡ್‌ನ್ನು ಕೇಳಿ ಮುದುಕಿಯೊಬ್ಬಳು ಮೂರ್ಛೆ ಹೋದಳು. ಕೆಲವರು ದೇವರಿಗೆ ಅಡ್ಡಬೀಳುವಂತೆ ನೆಲದ ಮೇಲೆ ಮಲಗಿದರು. ಹುಡುಗರೆಲ್ಲಾ ಅರಚುತ್ತಾ ಓಡಿಹೋದರು. ದೊಡ್ಡವರು ಕೆಲವರು ಬಂದು ಆ ಅರಚುವಿಕೆಯನ್ನು ನಿಲ್ಲಿಸಬೇಕೆಂದು ಕೇಳಿಕೊಂಡರು. ನನ್ನ ಗ್ರಾಮಾಫೋನ್ ಪೆಟ್ಟಿಗೆಯೊಳಗೆ ಏನೋ ಸೇರಿಕೊಂಡಿದೆ. ಅದರ ಗೋಜಿಗೆ ಹೋಗುವುದು ಬೇಡ ಎಂದು ಅವರು ಅಂಗಲಾಚಿದರು.

ಮೊದಮೊದಲಿಗೆ ಇನ್ನೊಬ್ಬರ ಮನೆಯಲ್ಲಿ ತಂಗುತ್ತಿದ್ದೆ. ಆಮೇಲೆ ಹುಲ್ಲುಸೊಪ್ಪು ಹೊದಿಸಿ ಕಟ್ಟಿದ ಗುಡಿಸಲುಗಳಲ್ಲಿ ಇರಲಾರಂಭಿಸಿದೆ. ಆದರೆ ರಾತ್ರಿಹೊತ್ತು ದನಗಳು ಬಂದು ಹುಲ್ಲು ಸೊಪ್ಪು ತಿನ್ನುತ್ತಿದ್ದುವು. ಆದ್ದರಿಂದ ನನಗೆ ಒಂದೇ ಸಮನೆ ತಾಪತ್ರಯವಾಗುತ್ತಿತ್ತು. ಆಮೇಲೆ ನನಗೂ ಬೊಂಡೋಗಳಿಗೂ ಚೆನ್ನಾಗಿ ಸ್ನೇಹ ಬೆಳೆಯಿತು. ಒಂದೊಂದು ಸಲ ಶಾಮರಾವ್ ಅವರ ಹೆಂಡತಿ ಮತ್ತು ಸಣ್ಣ ಮಕ್ಕಳಾದ ಸುರೇಶ್ ಮತ್ತು ರಾಮುಲಾ ನಮ್ಮ ಜೊತೆ ಇರುತ್ತಿದ್ದರು. ಕೊನೆಯ ಪ್ರವಾಸದಲ್ಲಿ ವಿಕ್ಟರ್ ಸಸ್ಸೂನ್ ಇದ್ದರು. ಅವರು ಸೊಗಸಾದ ಫೋಟೋ ಚಿತ್ರಗಳನ್ನು ತೆಗೆದುಕೊಂಡರು. ಅವುಗಳಲ್ಲಿ ಕೆಲವನ್ನು 'ಬೊಂಡೋ ಹೈಲ್ಯಾಂಡರ್' ಎಂಬ ಪುಸ್ತಕದಲ್ಲಿ ಹಾಕಿದ್ದೇನೆ.

ನಾನು 'ಸವೋರಾ'ಗಳನ್ನು ಏಳು ವರ್ಷಗಳ ಕಾಲ ಅಭ್ಯಾಸಮಾಡಿದೆ. ಇವರ ಸಂಖ್ಯೆ ಅಪಾರವಾಗಿದೆ. ನಾನು ಕಂಡದ್ದು ಗಂಜಾಂ ಮತ್ತು ಕೊರಪುಟ್ ಬೆಟ್ಟಗಳಲ್ಲಿದ್ದ ಸವೋರಾಗಳನ್ನು. ಇವರು ಮಿಷನರಿಗಳ ಪ್ರಭಾವಕ್ಕೆ ಒಳಗಾಗದೆ ನೂರಾರು ವರ್ಷಗಳ ಹಿಂದೆ ಹೇಗೆ ಇದ್ದರೋ ಈಗಲೂ ಹಾಗೆಯೇ ಇದ್ದಾರೆ. ತುಂಬಾ ಒಳ್ಳೆಯ ಜನ. ನನಗೇನು ಸೌಕರ್ಯಗಳು ಬೇಕೋ ಅವನ್ನು ಒದಗಿಸಿಕೊಡುತ್ತಿದ್ದರು. ಅವರಿಗೆ ಬೇಕಾದ 'ಪಿಕಾ' ಎಂಬ ಚುಟ್ಟಾ ಕೊಟ್ಟರಂತೂ ತುಂಬಾ ಪ್ರೀತಿ ತೋರಿಸುತ್ತಿದ್ದರು. ಟೀ ಕಂಡರೂ ಅವರಿಗೆ ಇಷ್ಟ. ಆಗಾಗ್ಗೆ ಟೀಗೆ ನನ್ನ ಗುಡಿಸಲಿಗೆ ಬರುತ್ತಿದ್ದರು. ಬೆಳಗೆ ಎದ್ದು ನಾನು ಟೀ ಕುಡಿಯುವ ಹೊತ್ತಿಗೆ ಐದಾರು ಜನ ನನ್ನ ಹಾಸಿಗೆಯ ಸುತ್ತ ಹಾಜರಾಗುತ್ತಿದ್ದರು.

ಸವೋರಾಗಳ ಬಗ್ಗೆ ನಾನು ಮುಖ್ಯವಾಗಿ ಅಭ್ಯಾಸಮಾಡಿದ್ದು ಅವರ ಮತ. ನಾನು ನೋಡಿದ ಜನಗಳಲ್ಲೆಲ್ಲಾ ಇವರೇ ಅತ್ಯಂತ ಕಟ್ಟುನಿಟ್ಟಾದ ಮತ ಅನುಸರಿಸುತ್ತಿದ್ದವರು. ನಾನು ಕೇಳಿದ್ದಕ್ಕೆ ಸಿಟ್ಟುಮಾಡಿಕೊಳ್ಳದೆ ಉತ್ತರ ಹೇಳುತ್ತಿದ್ದರು. ತಮ್ಮ ಮನೆಗಳಿಗೆ ಕರೆದುಕೊಂಡು ಹೋಗಿ, ನೆಲದ ಮೇಲೆ ಕುಳ್ಳಿರಿಸಿ, ಅವರ ಪೂಜಾರಿ ಮಾಡುತ್ತಿದ್ದ ಪೂಜಾವಿಧಿಗಳನ್ನೆಲ್ಲಾ ವಿವರಿಸಿ ಹೇಳುತ್ತಿದ್ದರು. ಮಾನವ

ಶಾಸ್ತ್ರಜ್ಞನಿಗೆ ಸವೋರಾದೇಶದಲ್ಲಿ ಬಿಡುವೇ ಇಲ್ಲವೆಂದು ನಾವು ಅಂದುಕೊಳ್ಳುತ್ತಿದ್ದೆವು. ದಿನವೂ ಏನಾದರೊಂದು ನಡೆಯುತ್ತಿತ್ತು. ನಾನು ಮಲೇರಿಯಾ ಕಾಯಿಲೆಬಿದ್ದರೆ ಅಥವಾ ಹಲ್ಲುನೋವಿನಿಂದ ಪೇಚಾಡುತ್ತಿದ್ದರೆ ಪೂಜಾರಿಗಳೂ ಕೆಲವು ವೇಳೆ ಪೂಜಾರಿನಿಯರೂ ಬಂದು ಅವರದೇ ಆದ ಮಂತ್ರ ತಂತ್ರಗಳಿಂದ ವಾಸಿಮಾಡಲು ಪ್ರಯತ್ನಮಾಡುತ್ತಿದ್ದರು.

ಈ ಆನಂದದ ದಿನಗಳಲ್ಲಿ ಆಕ್ಸ್‌ಫರ್ಡಿನಲ್ಲಿ ಅಭ್ಯಾಸ ಮಾಡಿ ಉಪಯೋಗ ವಿಲ್ಲೆಂದುಬಿಟ್ಟಿದ್ದ ದೇವಜ್ಞಾನಶಾಸ್ತ್ರ (Theology) ಈಗ ಉಪಯೋಗಕ್ಕೆ ಬಂದಿತು. ಪ್ರಾರ್ಥನೆಯ ಮೇಲೆ ಬರೆದಿರುವ ಹೀಲರ್ (Heliler) ಅವರ ಹೆಸರಾಂತ ಗ್ರಂಥ, ವಿಧವಿಧಮತೀಯ ಅನುಭವಗಳ ಬಗ್ಗೆ ವಿಲಿಯಂ ಜೇಮ್ಸ್‌ರ ಪುಸ್ತಕ – ಈ ತರಹ ಅನೇಕ ಗ್ರಂಥಗಳು ಸವೋರಾ ಜನರನ್ನೂ ಇನ್ನೂ ಚೆನ್ನಾಗಿ ಅರ್ಥಮಾಡಿಕೊಳ್ಳುವಂತೆ ಮಾಡಿದುವು.

ಆದರೂ ಹೊರಗಡೆಯವರು ಬರುವುದು ಅವರಿಗೇನೂ ಅಷ್ಟು ಹಿಡಿಸುತ್ತಿರಲಿಲ್ಲ. ಏನಾದರೊಂದು ಆಗುವುದೆಂದು ಅದಕ್ಕೆ ಶಾಂತಿ ಮಾಡುತ್ತಿದ್ದರು. ಒಂದು ಕಡೆಯಲ್ಲಿ ಯಾರು ಬಂದರೆ ಯಾವುದನ್ನು ಬಲಿಕೊಡಬೇಕೆಂದು ತೀರ್ಮಾನವಾಗಿಬಿಟ್ಟಿತ್ತು. ಫಾರೆಸ್ಟ್ ಅಧಿಕಾರಿ ಬಂದರೆ ಆಡು, ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಬಂದರೆ ಕೋಳಿ ಮತ್ತು ನನ್ನಂತಹ ಮಾನವಶಾಸ್ತ್ರಜ್ಞ ಬಂದರೆ ಹಂದಿ ಬಲಿಕೊಡುತ್ತಿದ್ದರು. ಇಷ್ಟಾದರು ನಾನು ಗುಡ್ಡಗಾಡಿನಲ್ಲಿದ್ದ ಎಲ್ಲಾ ಸವೋರಾ ಹಳ್ಳಿಗಳನ್ನು ನೋಡಿದೆ. ನಾನು ಅಡ್ಡಾಡಿದ ಕಡೆಯ ಪ್ರಕೃತಿ ಸೌಂದರ್ಯ ಆನಂದದಾಯವಾಗಿತ್ತು. ವರ್ಡ್ಸ್‌ವರ್ತ್ ಚಿಕ್ಕವನಾಗಿದ್ದಾಗ ಯಾವ ರೀತಿ ಪ್ರಕೃತಿ ಬಗ್ಗೆ ಆತ್ಮೀಯಭಾವನೆ ಬೆಳೆಸಿಕೊಂಡಿದ್ದನೋ ಅದೇ ಭಾವನೆ ನಾನು ಚಿಕ್ಕವನಾಗಿದ್ದಾಗ ನನ್ನಲ್ಲಿಯೂ ಬೆಳೆದಿತ್ತು. ಪ್ರಕೃತಿ ಸೌಂದರ್ಯದ ನೆನಹು ನನ್ನನ್ನು ಹೋದೆಡೆಯಲ್ಲೆಲ್ಲಾ ಹಿಂಬಾಲಿಸುತ್ತಿತ್ತು. ಈ ಸೌಂದರ್ಯಪ್ರಿಯತೆ ಬರುಬರುತ್ತ ಮಾನವರನ್ನೂ ಪ್ರೀತಿಸುವ ಮಟ್ಟಕ್ಕೇರಿತು. ಹೀಗಾಗಿ ಒಂದು ಕಡೆ ಹೋಗಿ ಆದಿವಾಸಿಗಳ ಸಂಪರ್ಕ ಬೆಳಸಿದ ಮೇಲೆ ಅವರನ್ನು ಬಿಟ್ಟುಬರಲು ನನಗೆ ಅತೀವ ನೋವಾಗುತ್ತಿತ್ತು.

ಆದಿವಾಸಿಗಳ ಮಧ್ಯೆ ಇಂಥ ಕೆಲಸಮಾಡುವುದಕ್ಕಿಂತ ಹೆಚ್ಚಿನ ಆನಂದ ಬೇರೊಂದಿಲ್ಲ. ಸವೋರಾದಲ್ಲಿಯೇ ಏಕೆ, ಬೇರೆ ಎಲ್ಲಾ ಗಿರಿಜನರಲ್ಲಿಯೂ ಎಲ್ಲವೂ ತನ್ನಷ್ಟಕ್ಕೆ ತಾನೇ ಹೊಂದಿಕೊಂಡು ಹೋಗುವ ಕಾಲವೊಂದು ಬರುತ್ತದೆ. ಆಗ ಜೀವನವು ಹೊಂದಿಕೆಯಾದ ಸಮಷ್ಟಿಯಾಗುವುದನ್ನು ಒಮ್ಮೆಯೇ ಕಾಣುತ್ತೇವೆ; ಅಲ್ಲದೆ ಅದು ಹೇಗೆ ನಡೆಯುತ್ತದೆ ಎಂಬುದನ್ನು ಅರಿಯುತ್ತೇವೆ. ಆದರೆ ಇದು ಹೆಚ್ಚು ಕಾಲ ತೆಗೆದುಕೊಳ್ಳುತ್ತಿತ್ತು.

ನನ್ನ ಸ್ನೇಹಿತರೊಬ್ಬರು ಈ ಪುಸ್ತಕದ ಹಸ್ತಪ್ರತಿ ಓದಿದಾಗ ಕೇಳಿದರು. 'ನೀನು ನಿಮ್ಮ ಒಳ್ಳೆಯತನವನ್ನು ಕೊಂಚ ಹೇಳಿ' ಎಂದರು. ಆಗ ನಾನು ಕೇಳಿದೆ,

'ನನ್ನಲ್ಲಿ ಒಳ್ಳೆಯತನ ಯಾವುದಿದೆ?' ಎಂದು. ಆಗ ಅವರು 'ನಿಮ್ಮ ಒಳ್ಳೆಯ ಗುಣವೆಂದರೆ ಸ್ಥೈರಣೆ' ಎಂದರು. ಈ ಮಾತಿನಲ್ಲಿ ಒಂದಿಷ್ಟು ಸತ್ಯವಿರಬಹುದು. ಏಕೆಂದರೆ ನನಗೆ ಪ್ರತಿಫಲ ಅಥವಾ ಸನ್ಮಾನ ಸಿಕ್ಕಲಿ ಸಿಕ್ಕದಿರಲಿ, ನನ್ನ ಕೆಲಸ ಮಾಡುವುದರಲ್ಲಿ ತೃಪ್ತಿ, ಸತ್ಯಾನ್ವೇಷಣೆಗಾಗಿ ಎಷ್ಟೇ ತೊಂದರೆಯಾದರೂ ಸರಿ, ಎಷ್ಟೇ ಕಾಲವಾದರೂ ಸರಿ, ಪರವಾಯಿಲ್ಲ ಎಂಬುದು ನನ್ನ ಅಭಿಮತ.

ಕೆಲವು ವೇಳೆ ಜನ ನನ್ನ ಬಗ್ಗೆ ಬರೆಯುವಾಗ ಹೇಳುತ್ತಿದ್ದರು, ನಾನು ಆದಿವಾಸಿಗಳ ಪ್ರಪಂಚವನ್ನು ಪ್ರವೇಶಮಾಡಿ ಬಹಳ ತ್ಯಾಗಮಾಡಿದೆ ಎಂದು. ಸವೋರಾ ಗುಡ್ಡಗಳಲ್ಲಿ ಆ ಸೌಂದರ್ಯದಲ್ಲಿ ಅಥವಾ ಪಟಾನ್‌ಘರ್‌ನ ಸನ್ನಿವೇಶದಲ್ಲಿ ಇರುವುದರಲ್ಲಿ ತ್ಯಾಗವೇನು ಬಂತು? ನಾನು ಯಾವ ತ್ಯಾಗವನ್ನೂ ಮಾಡಲಿಲ್ಲ. ನನ್ನ ಕೆಲಸಕ್ಕೆ ಹತ್ತರಷ್ಟು ಪ್ರತಿಫಲ ದೊರಕಿರುವಾಗ ತ್ಯಾಗದ ಮಾತೇಕೆ? ನನ್ನ ಬಗ್ಗೆ ಹೇಳುವುದಾದರೆ :

> ಬಡವರ ಗುಡಿಸಲ ಒಲವನು ಕಂಡೆ,
> ಮರಗಿಡಗಳ ಗುರುಬೋಧನೆಯನುಂಡೆ,
> ತಾರಾಕಾಶದ ಶಾಂತಿಯ ಸವಿದೆ,
> ನಿರ್ಜನ ಕಾನಿನ ನಿದ್ರೆಯನೊಲಿದೆ.

ಬಸ್ತಾರ್ ಮತ್ತು ಒರಿಸ್ಸಾದ ಬಾಳಿನ ಆ ನೆನಪುಗಳು ಆಕ್ಸ್‌ಫರ್ಡ್‌ನ ನೆನಪುಗಳಂತೆ ಅಳಿಸಲಾರದವುಗಳು. ಮುರಿಯರ ಘೋಟುಲ್ ಅಥವಾ ಸವೋರಾದಲ್ಲಿ ನಾನು ಕಂಡುದನ್ನು ಬೇರೆ ಯಾರೂ ಕಾಣಲಾರರು. ನಾನು ಕಂಡು ಮೆಚ್ಚಿದುದನ್ನು ನನ್ನ ಇರುವಿಕೆಯಿಂದಲೇ ಹಾಳುಮಾಡಲು ಸಹಾಯಮಾಡಿದೆನೋ ಎನಿಸುತ್ತದೆ. ಗಿರಿಜನರಿರುವ ಇಂಡಿಯಾ ದೇಶದ ಭಾಗಗಳಲ್ಲಿ ಹಿಂದಿನ ಸ್ವಾತಂತ್ರ್ಯ ಕಣ್ಮರೆಯಾಗುತ್ತಿದೆ. ಆದರೆ ಜೊತೆ ಹಿಂದಿನ ಸುಖವು ಕಣ್ಮರೆಯಾಗುತ್ತಿದೆ. ಬದಲಾವಣೆ ಅನಿವಾರ್ಯ. ಗ್ರಾಮಾಭಿವೃದ್ಧಿಯ ದೊಡ್ಡ ಯೋಜನೆಗಳು ಆಗಲೇ ಜನರಿಗೆ ಕೆಲವು ಅನುಕೂಲತೆಗಳನ್ನು ಒದಗಿಸಿವೆ. ಕಾಲ ಕಳೆದಂತೆ ಅವರಲ್ಲೆಲ್ಲಾ ಅವು ಹೊಸ ಜೀವನವನ್ನೇ ಹುಟ್ಟಿಸುತ್ತವೆ. ಆದರೆ ಇದು ಎಷ್ಟರಮಟ್ಟಿಗೆ ಹಳ್ಳಿಗರಿಗೆ ಸುಖವನ್ನು ನೀಡುವುದೆಂಬುದೇ ವಿಚಾರವಂತರೆಲ್ಲರ ತಲೆಯನ್ನು ಕೆಡಿಸುತ್ತಿರುವ ವಿಚಾರ. *

ಇದು ಹೇಗಾದರಾಗಲಿ, ಒಂದು ವಿಚಾರ ಮಾತ್ರ ಸ್ಪಷ್ಟ : ಹಿಂದಿನ ಆ ಹಿಗ್ಗು, ಆ ಸೊಗಸು ಆ ಸಡಗರದ ದಿನಗಳು ಕಳೆದುಹೋದವು. ಮತ್ತೊಮ್ಮೆ ಅವು

---

* ಈ ಬಗ್ಗೆ ನೆಹರು ಅವರ ಅಭಿಪ್ರಾಯ ಏನೆಂದರೆ : ಗಿರಿಜನರು ಬಾಳುವ ರೀತಿ ಉತ್ತಮವೋ ನಾವು ಬಾಳುವ ರೀತಿ ಉತ್ತಮವೋ ಎಂಬುದು ನನಗಿನ್ನೂ ಮನದಟ್ಟಾಗಿಲ್ಲ. ಕೆಲವು ವಿಷಯಗಳಲ್ಲಿ ಅವರ ಬಾಳು ಉತ್ತಮ ಎಂದು ನನಗೆ ಖಚಿತವಾಗಿದೆ. ಹೀಗಿರುವಾಗ ನಾವು ಅವರನ್ನು ಕಾಣುವಾಗ ಅಥವಾ ಅವರ ಬಗ್ಗೆ ಮಾತಾಡುವಾಗ ಅವರಿಗಿಂತ ನಾವು ಉತ್ತಮ ಎಂದು ಭಾವಿಸುವುದು ತಪ್ಪು. ಅವರನ್ನು ನಮ್ಮ ದ್ವಿತೀಯ ದರ್ಜೆಯ ಪ್ರಜೆಗಳಾಗಿ ಕಾಣುವುದು ಸರಿಯಲ್ಲ.

ಬರುವುದಿಲ್ಲ. ಅವು ಮರೆತ ಮಾತಾಗಿವೆ. ಆದರೆ ಅವನ್ನು ನೆನೆಯದೆ ಇರಲು ಆಗುವುದಿಲ್ಲ.

ಸಂಶೋಧನೆಯಲ್ಲಿ ವಿಶೇಷವಾದ ಹಾಗೂ ಬಹು ಮುಖ್ಯವಾದ ಅಂಶವೆಂದರೆ, ಫೋಟೋ ಚಿತ್ರ. ಫೋಟೋ ಚಿತ್ರ ತೆಗೆಯುವುದಕ್ಕೆ ಹೋಗಿ ನನಗೆ ಅನೇಕ ಅನುಭವಗಳಾದುವು. ಅದರಲ್ಲಿಯೂ ಮೊದಮೊದಲಿಗೆ ಒಳನಾಡಿನಲ್ಲಿ ನನ್ನ ಅನುಭವಗಳು ತೀರಾ ವಿಚಿತ್ರವಾಗಿದ್ದುವು. ಅನೇಕ ಜನ ಆದಿವಾಸಿಗಳಿಗೆ ಕ್ಯಾಮರಾ ಅಚ್ಚರಿಯನ್ನಷ್ಟೇ ಅಲ್ಲ, ಭೀತಿಯನ್ನೂ ಉಂಟುಮಾಡುತ್ತಿತ್ತು. ಅವರ ಕಡೆಗೆ ಮೂತಿ ತಿರುಗಿಸಿಕೊಂಡು ನಿಂತ ಮೂರು ಕಾಲಿನ ಆ ಯಂತ್ರ ಅವರಿಗೆ ಹೆದರಿಕೆಯನ್ನುಂಟು ಮಾಡುತ್ತಿತ್ತು. ಒಮ್ಮೆ ಒಬ್ಬ ಕಮ್ಮಾರನ ಚಿತ್ರವನ್ನು ತೆಗೆಯಬೇಕೆಂದು ಅವನ ಕಡೆಗೆ ಕ್ಯಾಮರಾ ತಿರುಗಿಸಿದೆ. ಹಾಗೆ ಮಾಡಿದೆನೊ ಇಲ್ಲವೊ ಅಲ್ಲಿದ್ದ ಜನರೆಲ್ಲಾ ದಿಕ್ಕಾಪಾಲಾಗಿ ಓಡಲಾರಂಭಿಸಿದರು. ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ ಬಂದು ಶಿಸ್ತಿನಿಂದ ಸಲಾಮು ಮಾಡಿ, 'ನಿಮಗೆ ಬೇಕಾದರೆ ಇನ್ನೂ ಉತ್ತಮನಾದವರನ್ನು ತೋರಿಸಬಲ್ಲೆ' ಎಂದು ಹೇಳಿದ. ಅವನು ಹೇಳಿದ್ದನ್ನು ಅರ್ಥಮಾಡಿಕೊಳ್ಳುವಷ್ಟರಲ್ಲಿ ಸಂತೆಗೆ ಸೇರಿದ್ದ ಜನರೆಲ್ಲಾ ಓಡಲಾರಂಭಿಸಿದರು. ಹೂಡಿದ್ದ ಅಂಗಡಿಗಳನ್ನು ಅಲ್ಲೇ ಬಿಟ್ಟು ತರಕಾರಿ ತುಂಬಿದ ಮಂಕರಿಗಳನ್ನು ಎಸೆದು ಬಟ್ಟೆ ಬೇಲುಗಳನ್ನು ತುಳಿದುಕೊಂಡು ಕಾಡಿನ ಕಡೆ ಪರಾರಿಯಾಗಲಾರಂಭಿಸಿದರು. ಆಮೇಲೆ ನನಗೆ ತಿಳಿದುಬಂತು, ನನ್ನ ಕ್ಯಾಮರಾ ಮಿಲಿಟರಿಗೆ ಸೇರಲು ಅರ್ಹರಾದ ಜನರ ಅಳತೆ ತೆಗೆಯುವ ಯಂತ್ರ ಎಂದು ಆ ಕಾನ್‌ಸ್ಟೇಬಲ್ ಅರ್ಥಮಾಡಿಕೊಂಡ ಎಂದು.

ಒಮ್ಮೆ ನಾನು ಫೋಟೋ ತೆಗೆಯುತ್ತಿರಬೇಕಾದರೆ ಜನ ಸುಮ್ಮನೆ ಗಡಗಡ ನಡುಗಿಬಿಟ್ಟರು. ಆಮೇಲೆ ಹೇಳಿದರು. 'ನಮ್ಮ ಶಕ್ತಿಯನ್ನೆಲ್ಲಾ ಎಳೆದುಕೊಂಡು ಆ ಸಣ್ಣ ಪೆಟ್ಟಿಗೆಯಲ್ಲಿ ಹಾಕಿಕೊಂಡುಬಿಟ್ಟೀದ್ದೀರಿ' ಎಂದು. ಮತ್ತೊಂದು ಸ್ಥಳದಲ್ಲಿ ಕ್ಯಾಮರಾ ಒಂದು ತರಹ ಎಕ್ಸ್–ರೇ ಯಂತ್ರವೆಂದೂ ಆ ಯಂತ್ರ ದೇಹವನ್ನು ಹೊಕ್ಕು ಒಳಗಿರುವ ಈಲಿಯನ್ನು ಹಿಡಿಯಬಲ್ಲದೆಂದೂ ಹೇಳಿದರು. ಮಾಟ ಮಂತ್ರದಲ್ಲಿ ಈಲಿ (liver) ಮುಖ್ಯವಾದದ್ದು. ಮೊದಲು ಈಲಿಗೆ ತೊಂದರೆಮಾಡಿದರೆ ಮುಂದಿನ ಕೆಲಸ ಸುಲಭ.

ಈ ರೀತಿ ನನ್ನ ಅನುಭವಗಳು ವಿಚಿತ್ರವಾಗಿದ್ದುವು. ಜನರ ಮೂಢನಂಬಿಕೆಗಳು ನನ್ನ ಕೆಲಸಕ್ಕೆ ಅಡ್ಡಿತರುತ್ತಿದ್ದುವು. ಚಿತ್ರ ತೆಗೆಸಿಕೊಂಡರೆ ಸತ್ತು ಹೋಗುತ್ತಾರೆಂಬ ಭಾವನೆ ಇತ್ತು. ಇದನ್ನು ಹೋಗಲಾಡಿಸಲು ನಾನು ನನ್ನ ಮತ್ತು ನನ್ನ ಹೆಂಡತಿ ಮಕ್ಕಳ ಫೋಟೊ ತೋರಿಸಿ ನಾವು ಸತ್ತಿಲ್ಲ ಬದುಕಿದ್ದೇವೆಂದು ಹೇಳಿ ಅವರ ಮನಸ್ಸನ್ನು ಒಲಿಸಿಕೊಳ್ಳಬೇಕಾಯಿತು. ಒಮ್ಮೆ ಪುರೋಹಿತನ ಚಿತ್ರ ತೆಗೆದು ಜನರನ್ನು ಸಮಾಧಾನಪಡಿಸಬೇಕಾಯಿತು. ಅವನು ಮೊದಲಿಗೆ ತನ್ನ ಅಗಲವಾದ ಬೆನ್ನು ತೋರಿಸಿದ. ಕಷ್ಟಪಟ್ಟು ಅವನ ಮುಖ ಕ್ಯಾಮರಾ ಕಡೆ ತಿರುಗುವಂತೆ ಮಾಡಿದೆ.

ಆ 'ಮಹಾರಾಜ'ನ ಫೋಟೋ ತೋರಿಸಿ ಜನರನ್ನು ಒಪ್ಪಿಸಿದೆ. ಅಂತೂ ಒಂದೊಂದು ಕಡೆ ಒಂದೊಂದು ಅನುಭವ ಆಯಿತು.

ಪುಸ್ತಕ ಬರೆಯುವುದು ಒಂದು ಕೆಲಸವಾದರೆ, ಅದನ್ನು ಟೈಪುಮಾಡಿ ಅಚ್ಚುಮಾಡಿಸುವುದು ಇನ್ನೊಂದು ಕೆಲಸ. ಷಿಲ್ಲಾಂಗಿಗೆ ಬರುವವರೆಗೆ ಎಲ್ಲಾ ದೊಡ್ಡ ಪುಸ್ತಕಗಳನ್ನು ನಾನೇ ಟೈಪುಮಾಡುತ್ತಿದ್ದೆ. ಮೊದಲು ಕರಡು ಪ್ರತಿ ಟೈಪುಮಾಡಿ, ತಿದ್ದಿ, ಮತ್ತೊಮ್ಮೆ ಟೈಪುಮಾಡಿ ಪ್ರೆಸ್ಸಿಗೆ ಕಳುಹಿಸುತ್ತಿದ್ದೆ. ಇದರಿಂದ ಕೆಲಸವೇನೋ ವಿಪರೀತ ಆಯಿತು. ಇನ್ನೊಬ್ಬರಿಗೆ ಹೇಳಿ ಬರೆಸುವುದಕ್ಕಿಂತ ಸ್ವಂತಃ ಬರೆಯುವುದು ಉತ್ತಮ. ಪ್ರೂಫ್ ಓದುವುದಂತೂ ದೊಡ್ಡ ಕೆಲಸ. ನಾನು ಕಾಗುಣಿತದಲ್ಲಿ ಬಹಳ ತಪ್ಪು ಮಾಡುತ್ತಿದ್ದೆ. ಒಂದು ಪೇಜಿನಲ್ಲಿ ಒಂದು ಕಾಗುಣಿತ ಇದ್ದರೆ ಇನ್ನೊಂದು ಪೇಜಿನಲ್ಲಿ ಮತ್ತೊಂದು ಇರುತ್ತಿತ್ತು. ಇಂಥ ತಪ್ಪುಗಳನ್ನು ಆಕ್ಸ್‌ಫರ್ಡ್ ಪ್ರೆಸ್ಸಿನವರು ತಿದ್ದಿ ನನಗೆ ಹೇಳುತ್ತಿದ್ದರು. ಆದರೆ ಇಂಗ್ಲಿಷು ಬಾರದ ಅನೇಕ ಜನ ಕಂಪಾಜಿಟರುಗಳು ಇದ್ದದ್ದನ್ನು ಇದ್ದ ಹಾಗೆಯೇ ಅಚ್ಚುಮಾಡಿಬಿಡುತ್ತಿದ್ದರು. ಕೆಲವು ಕಂಪಾಜಿಟರುಗಳಿಗೆ 'Sex' ಎನ್ನುವ ಪದ ಹಿಡಿಸದೆ ಅದನ್ನು ತಲೆಕೆಳಗಾಗಿ ಹಾಕಿಬಿಡುತ್ತಿದ್ದರು. ಪ್ರೂಫು ಗಳನ್ನು ಹಲವಾರು ಸಲ ನೋಡಬೇಕಾಗುತ್ತಿತ್ತು. ಒಮ್ಮೊಮ್ಮೆ ಒಂದು ಪುಸ್ತಕ ಅಚ್ಚಾಗುವ ಮುನ್ನ ಪ್ರಿಂಟುಮಾಡುವವರೂ ಸೇರಿ ಎಂಟು ಸಲ ಪ್ರೂಫು ನೋಡಲಾಗುತ್ತಿತ್ತು. ಹೀಗೆ ಮಾಡುತ್ತಿದ್ದುದರಿಂದ ನನ್ನ ಪುಸ್ತಕಗಳಲ್ಲಿ ತಪ್ಪುಗಳು ಇರುತ್ತಿರಲಿಲ್ಲವೆಂದೇ ಹೇಳಬೇಕು.

೭. ಭೂಮಿ ಗುಂಡಾಗಿದೆ

ನಾನು ಷಿಲ್ಲಾಂಗಿಗೆ ಬರುವುದಕ್ಕೆ ಮುನ್ನಿನ ಇಪ್ಪತ್ತೆರಡು ವರ್ಷಗಳನ್ನು ಕಾಡಿನಲ್ಲಿ ಕಳೆದೆ. ಹೊರ ಪ್ರಪಂಚದಿಂದ ದೂರವಾಗಿರಲು ಪ್ರಯತ್ನಪಟ್ಟೆ. ಕಮಿಟಿಗಳು ಮತ್ತು ಕಾನ್‌ಫೆರನ್ಸ್‌ಗಳಿಗೆ ಹೋಗುತ್ತಿರಲೇ ಇಲ್ಲ. ಬೇರೆ ವಿದ್ವಾಂಸರೊಡನೆ ಪತ್ರವ್ಯವಹಾರ ಮಾತ್ರ ಇಟ್ಟುಕೊಂಡಿದ್ದೆ. ಬೊಂಬಾಯಿಗೆ ಮಾತ್ರ ವರ್ಷಕ್ಕೊಮ್ಮೆ ತಪ್ಪದೆ ಹೋಗಿ ಬರುತ್ತಿದ್ದೆ. ಏಕೆಂದರೆ, ನನ್ನ ಕೆಲಸಕ್ಕೆ ಹಣ ಬೇಕಾಗಿತ್ತು. ಪ್ರವಾಸವೆಂದರೆ ಸಂತಸ ವಾಗುತ್ತಿದ್ದುದರಿಂದ ಹೊರದೇಶಗಳಿಗೂ ಕೆಲವು ಸಲ ಹೋಗಿಬಂದೆ.

ಬೊಂಬಾಯಿ ಜನ ತುಂಬಾ ಉದಾರಿಗಳು. ಅಲ್ಲಿ ನನಗೆ ಅನೇಕ ಜನ ಸ್ನೇಹಿತರಿದ್ದರು. ಅವರಲ್ಲಿ ಜಹಾಂಗೀರ್ ಪಟೇಲ್ ಎಂಬುವರು ನನ್ನ ಮುಖ್ಯ ಸ್ನೇಹಿತರು. ಮೊದಲಿಗೆ ಹತ್ತಿ ವ್ಯಾಪಾರ ಮಾಡುತ್ತಿದ್ದರು. ಆಮೇಲೆ ಗಾಂಧೀಜಿಯ ಸಂಪರ್ಕ ಬೆಳೆಸಿದರು. ನಾವು ಪಟಾನ್‌ಘರ್‌ನಲ್ಲಿ ಇದ್ದಾಗ ನಮಗೆ ಸಹಾಯ ಮಾಡುವುದರ ಜತೆಗೆ ಅನೇಕ ವನ್ಯ ಸಹಕಾರ ಸಂಘಗಳನ್ನೂ ಶಾಲಾ ಆಸ್ಪತ್ರೆಗಳನ್ನು ತೆರೆದರು. ಇಷ್ಟೆಲ್ಲಾ ಸಾಲದು ಎಂದು ಸೋಫಿ ಎಂಬ ಒಬ್ಬ ಸ್ಪ್ಯಾನಿಷ್ ಹೆಣ್ಣನ್ನು ಮದುವೆಯಾಗಿಬಿಟ್ಟರು. ಕಳೆದ ಹದಿನೈದು ವರ್ಷಗಳಲ್ಲಿ ಅವರು ನನಗೆ ನಾನಾ ರೀತಿಯಲ್ಲಿ ಸಹಾಯ ಮಾಡಿದ್ದಾರೆ. ಹಣ ಸಹಾಯವಷ್ಟೇ ಅಲ್ಲದೆ ಅನೇಕ ಜನ ಸ್ನೇಹಿತರ ಪರಿಚಯವನ್ನೂ ಮಾಡಿಕೊಟ್ಟಿದ್ದಾರೆ. ಅವರ ಬುದ್ಧಿಮಾತು ನನಗೆ ತುಂಬಾ ಸಹಾಯಮಾಡಿತು.

ನನಗೆ ಬೊಂಬಾಯಿಯಲ್ಲಿ ಮೊಟ್ಟಮೊದಲು ಸ್ನೇಹಿತರಾದವರು ಶ್ರೀ ಮತ್ತು ಶ್ರೀಮತಿ ಮಕ್ಲೀನರು. ಮತ್ತೊಬ್ಬ ಸಿ.ಜೆ.ಷಾ ಎಂಬುವರ ಪರಿಚಯವು ಆಯಿತು. ಅವರು ಗುಜರಾತಿಗೆ ನಮ್ಮೊಡನೆ ಬಂದಿದ್ದರು. ನಮ್ಮಿಬ್ಬರಿಗೂ ಮೂವತ್ತು ವರ್ಷದ ಸ್ನೇಹ. ಕಾರಂಜಿಯಾಕ್ಕೆ ಹೋದಮೇಲೆ ಡೇವಿಡ್ ದಂಪತಿಗಳು, ಹಿರಿಯ ಮೇಯರ್ ವಿಲ್‌ಫ್ರಿಡ್ ಫ್ಲೋರೆನ್ಸ್, ಅವರ ತಾಯಿ ಶ್ರೀಮತಿ ಡೇವಿಡ್ – ಇವರ ಸ್ನೇಹ ಲಭ್ಯವಾಯಿತು. ಇವರೆಲ್ಲಾ ನನ್ನ ಬಗ್ಗೆ ತುಂಬಾ ಪ್ರೀತಿ ವಿಶ್ವಾಸಗಳನ್ನು ತೋರಿಸಿ ಧೈರ್ಯವಿತ್ತು ಮುನ್ನಡೆಸಿದರು.

ಬೊಂಬಾಯಲ್ಲಿ ನನಗೆ ಹಲವಾರು ರಾಜಕೀಯ ಮುಖಂಡರ ಪರಿಚಯವೂ ಆಯಿತು. ಎಂ.ಆರ್. ಜಯಕರ್, ಭೂಲೂಭಾಯಿ ದೇಸಾಯಿ, ಕೆ.ಎಫ್. ನಾರಿಮನ್, ಪುರುಷೋತ್ತಮ ದಾಸ್ ತ್ರಿವಿಕ್ರಮದಾಸ್, ಬಿ.ಜಿ. ಖೇರ್ – ಇವರು ಮುಖ್ಯರಾದವರು.

ಪತ್ರಿಕೋದ್ಯಮಿಗಳಲ್ಲಿ ಆಕ್ಸ್‌ಫರ್ಡಿನಿಂದಲೇ ಪರಿಚಯವಾಗಿದ್ದ ಡಿ.ಎಫ್. ಕಾರಕ, ಟೈಮ್ಸ್ ಆಫ್ ಇಂಡಿಯಾದ ಶಾಮಲಾಲ್, ಇಲ್ಲಸ್ಟ್ರೇಟೆಡ್ ವೀಕ್ಲಿಯ ಷೌನ್ ಮಂಡಿ, ಇವರಿಗಿಂತ ಮೇಲಾಗಿ ಫ್ರಾಂಕ್ ಮತ್ತು ಬೆರಿಲ್ ಮೊರಾಯೆಸ್.

ಬೊಂಬಾಯಿಗೆ ಹೋದರೆ ಹಿಲ್ಲಾ ವಕೀಲರನ್ನು ನೋಡದೆ ಬರುತ್ತಿರಲಿಲ್ಲ. ಹಾಗೆಯೇ ವಾಸಂತ್ ವೆಲಿಂಕರರನ್ನು ನೋಡದೆ ಇರುತ್ತಿರಲಿಲ್ಲ. ವೆಲಿಂಕರ್ ಅವರ ಸರಸ ಸಂಭಾಷಣೆ ಎಂದರೆ ಅದೊಂದು ರಸದೂಟ. ಇವರಲ್ಲದೆ ಬೊಂಬಾಯಿ ಹೌಸಿಗೆ ಸೇರಿದ ಪಿಲ್ಲೂವೆಸೊಗರ್, ಜೆಮ್‌ಷಡ್ ಭಾಭಾ, ಅವರ ಹೆಂಡತಿ ಬೆಟ್ಟಿ, ಹೋಮಿ ಭಾಭಾ, ಕೆ.ಎ.ಡಿ. ನವರೋಜಿ, ಹೋಮಿಮೋಡಿ, ಅರ್ದೇಶಿರ್ ದಲಾಲ್, ಎಂ.ಸಿ. ಚಾಗ್ಲಾ ಇವರ ಪರಿಚಯವೂ ಆಯಿತು. ಕೈಲಾಸವಾಸಿಗಳಾದ ಜಾನ್ ಮಥಾಯಿ, ಜೆ.ಎ.ಡಿ. ನವರೋಜಿ, ಸೋನಾ ಬಾಟ್ಲಿವಾಲಾ ಇವರು ನನ್ನ ಮೆಚ್ಚಿನ ಸ್ನೇಹಿತರಾಗಿದ್ದರು.

ನಾನು ಬೊಂಬಾಯಿಗೆ ಹೋದಾಗ ಅನೇಕ ವರ್ಷಗಳ ಕಾಲ ನನ್ನ ಪುಸ್ತಕ ಗಳನ್ನು ಪ್ರಕಟಿಸುತ್ತಿದ್ದ ರಾಯ್ ಹಾಕಿನ್ಸರ ಮನೆಯಲ್ಲಿ ಇಳಿದುಕೊಳ್ಳುತ್ತಿದ್ದೆ. ಅವರು ನಾನು ಹೇಳುತ್ತಿದ್ದುದನ್ನೆಲ್ಲಾ ಸಾವಧಾನದಿಂದ ಕೇಳುವ ದೊಡ್ಡಗುಣ ಪಡೆದಿದ್ದರು. ನನ್ನ ಪುಸ್ತಕಗಳ ಬಗ್ಗೆ ಬಂದ ಟೀಕೆಗಳನ್ನು ಅವರು ನನಗೆ ಕಳುಹಿಸಿಕೊಡುತ್ತಿದ್ದರು. ಬಹಳ ಕಟುವಾದ ಟೀಕೆಗಳನ್ನು ಕೆಂಪು ಪೆನ್ಸಿಲ್‌ನಲ್ಲಿ ಗುರುತುಮಾಡುತ್ತಿದ್ದರು.

ಮೊಟ್ಟಮೊದಲಿಗೆ ಬೊಂಬಾಯಲ್ಲಿ ನನ್ನ ಪರಿಚಯವರೆಂದರೆ, ಎವೆಲಿನ್‌ವುಡ್ ಮತ್ತು ಅವರ ಮೊದಲನೆಯ ಹೆಂಡತಿ. ಆಕೆ ೧೯೪೨ರಲ್ಲಿ ನನ್ನ ಚಿತ್ರವನ್ನು ಬರೆದಳು.

ಆಮೇಲೆ ಕಲ್ಕತ್ತೆಯಲ್ಲಿಯೂ ಒಂದಿಷ್ಟು ಕಾಲ ಇರಬೇಕಾಯಿತು. ಇಂಡಿಯಾ ಸರ್ಕಾರದವರು ಆಂತ್ರೊಪಾಲೊಜಿ ಇಲಾಖೆಯನ್ನು ಸ್ಥಾಪಿಸಿದರು. ಅದರ ಮೊದಲನೆ ಡೈರೆಕ್ಟರ್ ಡಾ|| ಬಿ.ಸಿ. ಗುಹಾ ಅವರು ತಮ್ಮ ಸಹಾಯಕ್ಕೆ ನನ್ನನ್ನು ಕರೆದರು. ಮೊದಲು ಬನಾರಸಿಗೆ ಹೋದೆ. ಅಲ್ಲಿದ್ದ ಒಂದು ವರ್ಷದಲ್ಲಿ ನಾನು ನೋಡಿದ್ದು ಜಗಳ ಮತ್ತು ಅಸೂಯೆಗಳನ್ನು ಮಾತ್ರ. ಬರಿ ಪುಸ್ತಕದ ಬದನೆಕಾಯಿ ಮೇಲಿನ ಚರ್ಚೆ. ಆಮೇಲೆ ಕಲ್ಕತ್ತಾಕ್ಕೆ ಹೋದೆ. ಒಂದು ವರ್ಷ ಅಲ್ಲಿದ್ದೆ. ಆ ಸಮಯದಲ್ಲಿ ಒರಿಸ್ಸಾ, ದಕ್ಷಿಣ ಇಂಡಿಯಾ ಮತ್ತು ಅಸ್ಸಾಂಗಳಿಗೆ ಹೋಗಿಬಂದೆ. ನನ್ನ ವಾಯಿದೆ ಮುಗಿದ ಮೇಲೂ ಗುಹಾ ಅವರು ನನ್ನನ್ನು ಇರುವಂತೆ ಹೇಳಿದರು. ಆದರೆ ನನಗೆ ಆ ಇಲಾಖೆಯ ವಾತಾವರಣ ಹಿಡಿಸಲಿಲ್ಲ. ಹಳ್ಳಿಗೆ ಹಿಂದಿರುಗಬೇಕೆಂದು ಆಸೆಯಾಯಿತು. ಎರಡು ಮೂರು ವರ್ಷಗಳ ನಂತರ ಆ ಇಲಾಖೆಯ ಡೈರೆಕ್ಟರಾಗುವಂತೆ ಸರ್ಕಾರದಿಂದ ಆಹ್ವಾನ ಬಂದಿತು. ಆದರೆ ಅದು ನನ್ನ ಕೆಲಸ ಅಲ್ಲ ಎನಿಸಿತು. ಈಗಲು ಹಾಗೆ ಮಾಡಿದ್ದೇ ಸರಿ ಎನಿಸುತ್ತಿದೆ.

ಕಲ್ಕತ್ತಾ ನನಗೆ ಕೆಲವು ಪ್ರಾಣಾಪ್ತಸ್ನೇಹಿತರನ್ನು ದೊರಕಿಸಿಕೊಟ್ಟಿತು. ವಿಕ್ಟರ್ ಸಸ್ಸೂನರಂಥ ಸ್ನೇಹಿತರು ಸಿಕ್ಕುವುದು ಅಪರೂಪ. ನನ್ನ ಜೀವನಕ್ಕೆ ವೈಶಾಲ್ಯತೆಯನ್ನು ನೀಡಿದವರು ಅವರು. ಅವರಿಂದಲೇ ನಾನು ಯುರೋಪು, ಆಫ್ರಿಕಾಗಳನ್ನು ನೋಡಿಕೊಂಡುಬರಲು ಸಾಧ್ಯವಾಯಿತು. ಒಮ್ಮೊಮ್ಮೆ ಒಳ್ಳೆಯ ಊಟ ಸಿಕ್ಕುತ್ತಿದ್ದುದೂ ಅವರಿಂದಲೇ. ಅವರ ಸಹೋದರ ಜೋ ಅವರೂ ಮತ್ತೊಬ್ಬ ಒಳ್ಳೆಯ ಸ್ನೇಹಿತರು. ಮಿಡ್ಲ್‌ಟನ್ ಬೀದಿಯಲ್ಲಿನ ಸಸ್ಸೂನರ ಸುಂದರವಾದ ಮನೆ ನನ್ನ ಸ್ವಂತ ಮನೆಯಂತೆ ಇತ್ತು. ಕಲ್ಕತ್ತೆಯಲ್ಲಿ ಇನ್ನೂ ಅನೇಕರ ಸ್ನೇಹ ದೊರೆಯಿತು. ಸ್ಟೇಟ್ಸ್‌ಮನ್ ಪತ್ರಿಕೆಯ ಎಮರ್ಸನ್ ಮತ್ತು ಅವರ ಪತ್ನಿ ಮಿನ್ನಿ, ಮಿನ್ನಿಯವರ ತಂಗಿ ಕಲೆಗಾತಿ ಶೀಲಾ, ಅವಳನ್ನು ಮದುವೆಯಾದ ಜಾನ್ ಆಡೆನ್, ಅತ್ಯುತ್ತಮ ಫೋಟೋಗ್ರಾಫರ್ ಸುನಿಲ್ ಜನಾಹ್, ಜಮಿನಿರಾಯ್, ಗೋಪಾಲ್ ಘೋಷ್, ರತಿನ್ ಮೊಯಿತ್ರ. ಕವಿ ಬಿಷ್ಣು ಡೇ, ಸುಧೀನ್ ದತ್ತಾ, ಅವರ ಹೆಂಡತಿ ರಾಜೇಶ್ವರಿ, ಅವರ ತಮ್ಮ ಸುಬುಲ್ – ಇವರ ಪರಿಚಯವಾಯಿತು.

ಕಲ್ಕತ್ತಾದಲ್ಲಿರುವಾಗ ನಾನು ಏಷ್ಯಾಟಿಕ್ ಸೊಸೈಟಿ ಕೌನ್ಸಿಲಿನ ಸದಸ್ಯನಾದೆ. ಆಗ್ಗೆ ಅದನ್ನು 'ಬಂಗಾಳದ ರಾಯಲ್ ಏಷ್ಯಾಟಿಕ್ ಸೊಸೈಟಿ' ಎಂದು ಕರೆಯುತ್ತಿದ್ದರು. ಅಲ್ಲದೆ, ಅದರ ಫೆಲೋ ಆಗಿ ಚುನಾಯಿತನಾದೆ. ಇದು ಸಾಮಾನ್ಯ ಗೌರವವಲ್ಲ. ಇದರಿಂದ ನನಗೆ ಅನೇಕ ಜನ ಇಂಡಿಯಾದ ವಿದ್ವಾಂಸರ ಪರಿಚಯವಾಯಿತು. ಮುಖ್ಯವಾಗಿ, ವಿದ್ವಾಂಸರಲ್ಲಿ ವಿದ್ವಾಂಸರಾದ ಸುನೀತಿ ಚಟರ್ಜಿಯವರ ಸಂಪರ್ಕ ದೊರೆಯಿತು. ನಾನು 'ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸಸ್ ಇನ್ ಇಂಡಿಯಾ' ಎಂಬ ಸಂಸ್ಥೆಯ ಫೆಲೋ ಆಗಿ ಎರಡು ಸಲ ಚುನಾಯಿಸಲ್ಪಟ್ಟೆ. ಎರಡು ಸಲ ಅದರ ಕೌನ್ಸಿಲಿನ ಸದಸ್ಯನಾಗಿದ್ದೆ.

ಆದರೆ ಷಿಲ್ಲಾಂಗಿಗೆ ಬಂದ ಮೇಲೆ ಕಲ್ಕತ್ತದ ಸಂಬಂಧ ಕಡಮೆಯಾಯಿತು. ಹೊಸ ಸ್ನೇಹಿತರನ್ನು ಸಂಪಾದಿಸಲು ಸಾಧ್ಯವಾಗಲಿಲ್ಲ. ಆದರೂ ಕೆಲವು ಸ್ನೇಹಿತರು ದೊರಕಿದರು. ಅವರಲ್ಲಿ ಮುಖ್ಯರಾದವರು. ಬಾಬ್ ಮತ್ತು ಮರ್ಗೋಟ್ ಗಿಲ್ಕಿ ಮತ್ತು ಅವರ ಮಕ್ಕಳು ಡೇವಿಡ್, ಜಾನ್ ಮತ್ತು ಶಾರದಾ. ಬಾಬ್ ಅವರು ಯು.ಎಸ್.ಐ.ಎಸ್. ನಲ್ಲಿದ್ದರು. ಒಳ್ಳೆ ವಿದ್ವಾಂಸರು. ಅವರ ಹೆಂಡತಿ ಮರ್ಗೋಟ್ ಕವಿತೆಗಳನ್ನು ಬರೆಯುತ್ತಿದ್ದರು. ಒಳ್ಳೆಯ ಹೃದಯ ಹಾಗೂ ಮನಸ್ಸು. ಇವೆರಡರ ಜೊತೆಗೆ ನಿಟ್ಟುಸಿರು ಬರಿಸುವಂತಹ ಸೌಂದರ್ಯ. ನಾನು ಮತ್ತು ಲೀಲಾ ವಾಯುಹಿತವಾದ ಅವರ ಮನೆಯಲ್ಲಿ ತಂಗಿದ್ದೆವು. ಅವರೂ ನನ್ನೊಡನೆ ತಂಗಿದ್ದರು. ನಮ್ಮ ಮಕ್ಕಳಂತೂ ಅವರಿಗೆ ಅಚ್ಚುಮೆಚ್ಚಾಗಿಬಿಟ್ಟಿದ್ದರು. ಈಗ ಅವರು ಹೊರಟು ಹೋಗಿದ್ದಾರೆ – ಸರ್ಕಾರಿ ನೌಕರಿಯಲ್ಲಿರುವವರೆಲ್ಲಾ ಹೋಗುವಂತೆ.

೧೯೪೯ನೆಯ ಏಪ್ರಿಲ್ ತಿಂಗಳಿನ ಕೊನೆಯಲ್ಲಿ ನಾನು ಆಂತ್ರೊಪಾಲೊಜಿ ಇಲಾಖೆಗೆ ನಮಸ್ಕಾರ ಹೊಡೆದು ಒಂದು ವಾರದನಂತರ ವಿಕ್ಟರ್ ಜೊತೆ

ಯೂರೋಪು, ಆಫ್ರಿಕಾ ಪ್ರವಾಸ ಹೊರಟೆ. ಮೊದಲು ನಾವು ಬ್ರಸೆಲ್ಸ್‌ಗೆ ಹೋಗಿ, ಅನಂತರ ಪ್ಯಾರಿಸ್, ವೆನೀಸ್, ರೋಮ್‌ಗಳನ್ನು ಒಂದು ವಾರದವರೆಗೆ ನೋಡಿಕೊಂಡು, ಇಂಗ್ಲೆಂಡಿಗೆ ಹೋದೆವು. ಅಲ್ಲಿ ನಾನು ನನ್ನ ತಾಯಿ ಮತ್ತು ತಂಗಿಯರೊಡನೆ ಒಂದೆರಡು ತಿಂಗಳು ಇದ್ದೆ. ಆಗಸ್ಟ್ ತಿಂಗಳ ಮೊದಲಿನಲ್ಲಿ ವಿಕ್ಟರ್ ಮತ್ತು ನಾನು ಫ್ರೆಂಚ್ ವೆಸ್ಟ್ ಆಫ್ರಿಕಾಕ್ಕೆ ಹೋದೆವು.

ಆಫ್ರಿಕಾಕ್ಕೆ ಹೋಗುವ ಮುನ್ನ ಸಾಕಷ್ಟು ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗಿತ್ತು. ಆ ಸಿದ್ಧತೆಗಳನ್ನು ಮಾಡಿಕೊಂಡು ಹಲವಾರು ಮಹನೀಯರಿಂದ ಪರಿಚಯ ಪತ್ರಗಳನ್ನು ಪಡೆದ ಮೇಲೆ ಆಫ್ರಿಕಾಕ್ಕೆ ವಿಮಾನದಲ್ಲಿ ಪ್ರಯಾಣಮಾಡಿ ಬೊಬೊ–ಡಿಯುಲಸ್ಸೋ ಎಂಬಲ್ಲಿಗೆ ಹೋದೆವು. ಅಲ್ಲಿದ್ದ ಒಂದೇ ಒಂದು ಹೊಟೇಲಿನಲ್ಲಿ ತಂಗಿದ್ದು ಒಂದು ವಾರದಷ್ಟು ಕಾಲ ಸುತ್ತಮುತ್ತಣ ಸ್ಥಳಗಳನ್ನೆಲ್ಲಾ ನೋಡಿದೆವು. ಅನಂತರ ಐವೊರಿ ಕೋಸ್ಟ್, ಲಾಗೋಸ್, ಬ್ರಿಟಿಷ್ ನೈಜೀರಿಯಾ ಮುಂತಾದ ಸ್ಥಳಗಳನ್ನು ನೋಡಿಕೊಂಡು, ವಿಚಿತ್ರ ಬಗೆಯ ಅನುಭವಗಳನ್ನು ಪಡೆದು ಪ್ಯಾರಿಸ್ಸಿಗೆ ಹಿಂದಿರುಗಿ, ಅಲ್ಲಿಂದ ನೇರವಾಗಿ ಕಲ್ಕತ್ತಾಕ್ಕೆ ಹಾರಿ ಪಟಾನ್‌ಘರ್‌ನಲ್ಲಿದ್ದ ಮನೆಗೆ ಬಂದೆವು.

ನಾವು ಫ್ರೆಂಚ್ ವೆಸ್ಟ್ ಆಫ್ರಿಕಾದಲ್ಲಿರುವಾಗ ಎಲ್ಲಿಯೂ ನನಗೆ ಟೀ ಸಿಕ್ಕಲಿಲ್ಲ. ಟೀ ಎಂದರೆ ಏನು ಎಂಬ ವಿಷಯ ಅಲ್ಲಿಯ ಜನಗಳಿಗೆ ಗೊತ್ತಿರಲಿಲ್ಲ. ಅದರ ಬದಲು ಯಾತಕ್ಕೂ ಬಾರದ ಕಾಫಿ ಕೊಡುತ್ತಿದ್ದರು. ಟೀ ಕುಡಿಯುವ ಚಟ ಇದ್ದ ನನಗೆ ಅದಿಲ್ಲದೆ ಬಹಳ ಒದ್ದಾಟ ಆಯಿತು. ಕೊನೆಗೆ ಒಂದು ಊರಿನ ಅಂಗಡಿಯ ಯಾವುದೋ ಮೂಲೆಯಲ್ಲಿ ಬಿಸಾಡಿದ್ದ ಹುಳುತಿಂದ ಟೀ ಪೊಟ್ಟಣ ಸಿಕ್ಕಿತು. ಅದರಿಂದ ನನ್ನ ಚಟ ತೀರಿಸಿಕೊಂಡೆ.

ಟೀ ಕಾಫಿ ಬಿಟ್ಟರೆ ನನಗೆ ಹಿಡಿಸುವುದು ಇಂಡಿಯಾದ ಸರಳವಾದ ಶಾಕಾಹಾರ. ಬೇಳೆಸಾರು ಅನ್ನದ ಊಟಕ್ಕಿಂತ ಬೇರೆ ಊಟ ಇಲ್ಲ. ಶಾಕಾಹಾರದಲ್ಲಿ ಗುಜರಾತಿನ ಆಹಾರ ಅತ್ಯುತ್ತಮವಾದದ್ದು. ನನ್ನ ಯುರೋಪು ಮತ್ತು ಆಫ್ರಿಕಾ ಪ್ರವಾಸ ಕಾಲದಲ್ಲಿ ವಿಧವಿಧವಾದ ಭಕ್ಷ್ಯ ಭೋಜ್ಯಗಳ ರುಚಿ ನೋಡಿದೆ. ಸಸ್ಸೂನ್ ವಿಕ್ಟರ್ ಒಳ್ಳೊಳ್ಳೆಯ ಹೊಟೇಲಿಗೆ ನನ್ನನ್ನು ಕರೆದುಕೊಂಡು ಹೋಗುತ್ತಿದ್ದರು.

ಇಪ್ಪತ್ತು ವರ್ಷದ ಹಿಂದೆ ಪಟಾನ್‌ಘರ್‌ನಲ್ಲಿ ನಡೆದ ಒಂದು ಸಂಗತಿ ಜ್ಞಾಪಕಕ್ಕೆ ಬರುತ್ತದೆ. ಆಗ ನನ್ನ ಬಳಿ ಒಬ್ಬ ಅಡಿಗೆಯವನಿದ್ದ. ಇಂಗ್ಲಿಷ್ ಅಡಿಗೆಯೂ ಅವನಿಗೆ ಬರುತ್ತಿತ್ತು. ಒಂದು ದಿನ ಅವನು ಊಟಕ್ಕೆ ಕರೆಯುತ್ತಾ 'ಬಟಕ್ಸ್ ಸೇವರ್ ಮಾಡಿದ್ದೇನೆ' ಎಂದ. ಸೇವರ್ ಎಂದರೆ ಭಕ್ಷ್ಯ. ಡಕ್ಸ್ (ಬಾತುಕೋಳಿ) ಎನ್ನುವ ಬದಲು ಬಟಕ್ಸ್ (ಅಂಡುಗಳು) ಎಂದುಬಿಟ್ಟ, ಅಷ್ಟೆ.

ಒಂದು ದಿನ ಹಳ್ಳಿಯಲ್ಲಿ ಒಂದು ಮಾತು ಬಂತು, ನಾನು ಎಂಥಾ ಸಾಹೇಬ ಎಂದು. ಅದಕ್ಕೆ ಮುಂಚೆ ಕಮೀಷನರು ಬಂದು ಹೋಗಿದ್ದರು. ಅವರ ಬಗ್ಗೆ

ಯಾವ ಅನುಮಾನವೂ ಇರಲಿಲ್ಲ. ಅವರು 'ಪಕ್ಕಾ ಸಾಹೇಬರು'. ಅವರ ಜೊತೆ ಸ್ಥಳದ ಸಣ್ಣ ಅಧಿಕಾರಿಯೊಬ್ಬ ಬಂದಿದ್ದ. ಅವನು 'ದಾಲ್‌ಭಾತ್ ಸಾಹೇಬ'. ನಾನೆಂಥವನು ? ನಮ್ಮ ಅಡಿಗೆಯವ ಈ ಒಗಟನ್ನು ಬಿಡಿಸಿದ. 'ಇವರು ಸೇವರ್ ಸಾಹೇಬರು' ಎಂದ.

ಮಾರನೆಯ ವರ್ಷ, ಅಂದರೆ ೧೯೫೦ರಲ್ಲಿ, ನಾನು ಮತ್ತು ವಿಕ್ಟರ್ ಪುನಃ ಆಫ್ರಿಕಾಕ್ಕೆ ಹೋಗಿ ಬೆಲ್ಜಿಯನ್ ಕಾಂಗೋ ಮತ್ತು ಫ್ರೆಂಚ್ ಈಕ್ವಟೋರಿಯಲ್ ಆಫ್ರಿಕಾ ನೋಡಿಕೊಂಡು ಬಂದೆವು. ಅಕೋಲಿ ಎಂಬ ಜನರ ಸೊಗಸಾದ ನೃತ್ಯ ನೋಡಿದೆವು. ಅಟಿಯಕ್ ಎಂಬ ಊರಿನಲ್ಲಿದ್ದ ಒಬ್ಬ ಗುಜರಾತಿ ವರ್ತಕರ ಮನೆಯಲ್ಲಿ ಪೂರಿ, ಮಾವಿನಕಾಯಿ ಚಟ್ನಿ ಮತ್ತು ಇತರ ಭಕ್ಷ್ಯಗಳನ್ನು ತಿಂದೆವು. ಪೂರ್ವ ಆಫ್ರಿಕಾದಲ್ಲಿ ಇಂಡಿಯಾದ ವರ್ತಕರು ಭಾರಿ ವ್ಯಾಪಾರ ಸಾಪಾರ ನಡೆಸುತ್ತಿದ್ದಾರೆ.

ಉಗಾಂಡಾದಲ್ಲಿದ್ದಾಗ ಸಂತೆಗಳಿಗೆ ಹೋಗಿದ್ದೆ. ಅಲ್ಲಿದ್ದ ಸಾಮಾನುಗಳು ಸಾಮಾನ್ಯವಾಗಿ ಇಂಡಿಯಾದ ಸಂತೆಗಳಲ್ಲಿ ಕಾಣುವಂಥ ಸಾಮಾನುಗಳೇ. ಆದರೆ ಒಂದು ಮಾತ್ರ ಅಲ್ಲಿ ವಿಶೇಷ. ಅದೇ ಬೀರ್, ಸಾಟಿ ವ್ಯಾಪಾರವೇ ಹೆಚ್ಚು. ಕೆಲವು ವೇಳೆ ಹಣ ಉಪಯೋಗಿಸುತ್ತಿದ್ದರು. ಆದರೆ ಫ್ರೆಂಚ್ ವೆಸ್ಟ್ ಆಫ್ರಿಕಾದಂತೆ ಇಲ್ಲಿ ಕವಡೆಗಳನ್ನು ಉಪಯೋಗಿಸುತ್ತಿರಲಿಲ್ಲ. ಸಂತೆಗೆ ಬಂದಿದ್ದ ಜನ ಬಹಳ ಸಲಿಗೆಯಿಂದ ವರ್ತಿಸುತ್ತಿದ್ದರು. ನಗುಮುಖದ ಆ ಜನರನ್ನು ಕಂಡು ನನಗೆ ಆನಂದವಾಗುತ್ತಿತ್ತು. ಅವರು ತಮ್ಮ ಫೊಟೋ ತೆಗೆಯಬೇಕೆಂದು ಪೀಡಿಸಿದರು. ಆದರೆ ಎಷ್ಟೊಂದು ತೆಗೆಯುವುದು ! ಸುಮ್ಮನೆ ಕ್ಯಾಮರಾ ಅವರ ಕಡೆ ತಿರುಗಿಸಿ ಫೋಟೋ ತೆಗೆದುಕೊಳ್ಳುವಂತೆ ನಟಿಸಿದೆ.

ಸಿಲೋನಿಗೆ ಬರಬೇಕೆಂದು ನನ್ನ ಸ್ನೇಹಿತರು ಕರೆದರು. ಅಲ್ಲಿಗೆ ಹೋಗಿ ಮೂರು ವಾರಗಳನ್ನು ಕಳೆದು ನೋಡಬೇಕಾದ ಸ್ಥಳಗಳನ್ನು ನೋಡಿ ಆನಂದಪಟ್ಟೆ. ಮಹಿಂತಲೇ ಎಂಬ ಪುರಾತನ ನಗರವನ್ನು ನೋಡಿದ ಮೇಲೆ ಪುರಾತನ ಬೌದ್ಧಮತ ನನ್ನ ಮೇಲೆ ಮಹತ್ಪರಿಣಾಮವನ್ನುಂಟು ಮಾಡಿತು. ಸಿಲೋನಿನ ವೆಡ್ಡರ ಬಗ್ಗೆ ಅಲ್ಲಿಯ ಸರ್ಕಾರ ಏನೂ ಮಾಡದಿರುವುದನ್ನು ಬಹಳ ಕಟುವಾಗಿ ಟೀಕಿಸಿದೆ. ಕೂಡಲೇ ಸರ್ಕಾರ ಅವರ ಅಭಿವೃದ್ಧಿಯ ಬಗ್ಗೆ ಕ್ರಮ ತೆಗೆದುಕೊಂಡಿತು. ಸಾರ್ವಜನಿಕ ಸಭೆಗಳಲ್ಲಿ ಭಾಷಣಮಾಡಬೇಕಾಯಿತು. ನಾನು ತೆಗೆದುಕೊಂಡ ಫೋಟೋಗಳ ಪ್ರದರ್ಶನಮಾಡಿದೆ. ಸಾವಿರಾರು ಜನ ಬಂದು ನೋಡಿದರು.

ನನ್ನ ಆಕ್ಸ್‌ಫರ್ಡ್ ಸ್ನೇಹಿತನೊಬ್ಬ ಥೈಲಾಂಡಿನ ಬಾಂಕಾಂಕ್‌ನಲ್ಲಿ ಯೂನಿವರ್ಸಿಟಿ ಪ್ರೊಫೆಸರಾಗಿದ್ದ. ಆತನ ಆಹ್ವಾನದ ಮೇಲೆ ನಾನು ಮತ್ತು ಶಾಮರಾವ್ ಬಾಂಕಾಕಿಗೆ ಹೋಗಿ ಒಂದು ತಿಂಗಳು ಬಹು ಆನಂದಕರವಾದ ಪ್ರವಾಸ ಮಾಡಿದೆವು. ಥೈಲಾಂಡಿನಲ್ಲಿ ನಿಮಗೆ ನಿಜವಾದ ರಜೆ ಸಿಕ್ಕುತ್ತದೆ. ನಿಮ್ಮ ಮನಸ್ಸನ್ನು ಕಿರಿಕಿರಿಗೊಳಿಸುವುದು ಯಾವುದೂ ಇಲ್ಲ ಅಲ್ಲಿ. ಆಫ್ರಿಕಾದಲ್ಲಿ ಬಣ್ಣದ

ಜನಾಂಗದ ಪ್ರಶ್ನೆ ಇದೆ. ಸಿಲೋನಿನಲ್ಲಿ ಯಾರೂ ಕೇಳದ ವೆಡ್ಡರಿದ್ದಾರೆ. ಇಂಡಿಯಾದಲ್ಲಂತೂ ಯಾರಿಗೂ ಬಿಡುವಿಲ್ಲ. ಆದರೆ ಥೈಲಾಂಡ್‌ನಲ್ಲಿ ಸನ್ನಿವೇಶಕ್ಕೆ ಹೊಂದಿಕೊಂಡ ಸಂತೃಪ್ತ ಜನರಿದ್ದಾರೆ ಎನಿಸಿತು ನನಗೆ. ಅಲ್ಲೊಂದು ಇಲ್ಲೊಂದು ತಪ್ಪಾದರೂ ಆ ಜನ ತಮ್ಮ ಸುಖದಲ್ಲಿ ಅದನ್ನು ಮರೆತುಬಿಡುತ್ತಾರೆ.

ಉತ್ತರದ ಥೈಲಾಂಡಿನ ಸೊಗಸನ್ನು ನೋಡಿ ಆನಂದಿಸುವ ಅವಕಾಶಸಿಕ್ಕಿತು. ಅಲ್ಲಿಯ ಸೈಯಾಮೀಸ್ ಜನರ ಮತಕ್ಕೂ ಇಂಡಿಯಾ ಮತಕ್ಕೂ ಬಹಳ ಸಂಬಂಧವಿದೆ. ರಾಮಾಯಣದ ಕಥೆ ಅಲ್ಲಿಯ ಜನರ ನಾನಾ ಕ್ಷೇತ್ರದಲ್ಲಿ ತನ್ನ ಪ್ರಭಾವವನ್ನು ಬೀರಿದೆ. ಆದರೆ ಇಂಡಿಯಾದಲ್ಲಿರುವಂತೆ ಸಯಾಮಿನಲ್ಲಿ ಮತ ಅಷ್ಟು ಆಳವಾಗಿಲ್ಲ. ಇಲ್ಲಿಯಷ್ಟು ಕಠಿಣವಾದ ರೀತಿಯಲ್ಲಿ ಮತ ಅಲ್ಲಿಯ ಸಾರ್ವಜನಿಕ ಜೀವನವನ್ನು ಪ್ರವೇಶಿಸಿಲ್ಲ. ಸಯಾಮಿಗಳ ಬೌದ್ಧಮತದ ಮುಖ್ಯ ಗುರಿ ಸುಖ. ನನಗೆ ಮೊದಲು ಕೇಳಿದ ಪ್ರಶ್ನೆ : 'ನೀವು ಸುಖವಾಗಿದ್ದೀರಾ ?' ಎಂದು. 'ಚೆನ್ನಾಗಿದ್ದೀರಾ ?' 'ಆರೋಗ್ಯವಾಗಿದ್ದೀರಾ ?' 'ಸಂಪಾದನೆ ಹೇಗಿದೆ ?' 'ಬಡ್ತಿ ಸಿಕ್ತಾ ಇದೆಯಾ ?' – ಈ ತರದ ಪ್ರಶ್ನೆಗಳನ್ನು ಕೇಳಲಿಲ್ಲ ಅಲ್ಲಿ. 'ನೀವು ಸೌಖ್ಯವೇ ?' ಎಂದು ಕೇಳಿದರು. ಸಯಾಂ ಭಾಷೆಯಲ್ಲಿ ಸುನುಕ್ ಎಂಬ ಪದ ಇದೆ. ಅದರ ಅರ್ಥ, ಆಹ್ಲಾದ ಸುಖ ಇತ್ಯಾದಿ ಎಂದು.

ನಾವು ಥೈಲಾಂಡಿಗೆ ಹೋದದ್ದರ ಒಂದು ಪರಿಣಾಮವೆಂದರೆ, ವಿಕ್ಟರ್ ಸಸ್ಸೂನರು ಇಂಡಿಯಾ ಬಿಟ್ಟೇಬಿಟ್ಟು ಥೈಲಾಂಡಿನಲ್ಲಿ ನೆಲಸಿದ್ದು. ನಾವು ಅಲ್ಲಿಂದ ಬರೆದ ಉತ್ತೇಜನಕರವಾದ ಪತ್ರಗಳನ್ನು ನೋಡಿ ಅವರು ಬಾಂಕಾಕಿನ ಯೂನಿವರ್ಸಿಟಿಯ ಇಂಗ್ಲಿಷ್ ಪ್ರೊಫೆಸರರಾಗಿ ಸೇರಿಕೊಂಡುಬಿಟ್ಟರು.

೧೯೨೮ರಿಂದೀಚೆಗೆ ನಾನು ನಾಲ್ಕು ಸಲ ಯೂರೋಪಿಗೆ ಹೋಗಿ ಬಂದಿದ್ದೇನೆ. ಒಂದೊಂದುಸಲ ಸುಮಾರು ಎರಡು ತಿಂಗಳು ಕಳೆದಿರಬಹುದು. ಮೂವತ್ತುನಾಲ್ಕು ವರ್ಷಗಳಲ್ಲಿ ಎಂಟು ತಿಂಗಳು ಹೆಚ್ಚಲ್ಲ. ಇದರ ಪರಿಣಾಮವಾಗಿ ನನಗೂ ಆಕ್ಸ್‌ಫರ್ಡಿಗೂ ಸಂಬಂಧ ತಪ್ಪಿಹೋಯಿತು. ಹಳೆಯ ಸ್ನೇಹಿತರ ಸಂಪರ್ಕ ಕಡಮೆಯಾಯಿತು. ಎಲ್ಲಕ್ಕಿಂತ ಹೆಚ್ಚಾಗಿ ನಾನು ನನ್ನ ತಾಯಿಯನ್ನು ನೋಡಿಕೊಳ್ಳಲಾಗಲಿಲ್ಲ. ವಾರಕ್ಕೊಂದು ಕಾಗದವನ್ನೇನೊ ಬರೆಯುತ್ತಿದ್ದೆ. ಆದರೆ ಅವಳನ್ನು ನೋಡಿಕೊಳ್ಳಲಾಗದೆ ಹೋದದ್ದು ಅನಿವಾರ್ಯವಾಯಿತು. ಅವಳು ಕೆಲವು ವರ್ಷಗಳ ಹಿಂದೆ ತನ್ನ ೮೯ನೆಯ ವಯಸ್ಸಿನಲ್ಲಿ ಕಾಲವಾದಳು.

ಆದರೆ ನನಗೆ ಕೆಲವು ಸ್ನೇಹಿತರ ಸಂಪರ್ಕ ತಪ್ಪಲಿಲ್ಲ. ಇವರಲ್ಲಿ ಅತ್ಯಂತ ಆತ್ಮೀಯರೆಂದರೆ ಲಾರೆನ್ಸ್ ಹೌಸ್‌ಮನ್. ನಾನು ಗಾಂಧೀಜಿಗೋಸ್ಕರ ಕೆಲಸ ಮಾಡುತ್ತಿದ್ದ ಪ್ರಾರಂಭದಲ್ಲಿ ಅವರು ನನಗೆ ತುಂಬಾ ಸಹಾಯಮಾಡಿದರು. ಆ ಮೇಲೆ ಎರಡನೆಯ ಮಹಾಯುದ್ಧದ ಆರಂಭದಲ್ಲಿ ನನ್ನನ್ನೂ ಶಾಮರಾವನ್ನೂ ಇಂಗ್ಲೆಂಡಿಗೆ ಅವರ ಖರ್ಚಿನಲ್ಲಿ ಕರೆಸಿಕೊಂಡರು. ಅನೇಕ ವರ್ಷಗಳ ಕಾಲ ಅವರೊಡನೆ ನಾನು ಬಿಸಿಬಿಸಿ

ಪತ್ರವ್ಯವಹಾರ ಮಾಡುತ್ತಿದ್ದೆ. ಅವರು ಸಾಯುವುದಕ್ಕೆ ಸ್ವಲ್ಪ ಮುನ್ನ ನನಗೆ ಬರೆದ ಕೊನೆಯ ಕಾಗದ ಈ ರೀತಿ ಇದೆ : 'ಈ ಪ್ರಪಂಚದ ಭವಿಷ್ಯದ ಬಗ್ಗೆ ನನಗೆ ಭಾರಿ ನಿರಾಶೆಯಾಗಿ ಬಿಟ್ಟಿದೆ. ತಪ್ಪನ್ನು ತಿದ್ದಲು ಯುದ್ಧವನ್ನು ಅಂಗೀಕರಿಸಿದ ಪರಿಣಾಮವಾಗಿ ಹೈಡ್ರೋಜನ್ ಬಾಂಬಿನ ತಯಾರಿಕೆಯಾಯಿತು. ಇನ್ನೊಂದು ಯುದ್ಧ ಆದರೆ ಅದರಿಂದ ಆತ್ಮಹತ್ಯೆ ತಪ್ಪುವುದಿಲ್ಲ. ಅದರಲ್ಲಿ ಶತ್ರುಮಿತ್ರರೆಲ್ಲ ಆಹುತಿ. ನೆಹರೂ ಅವರನ್ನು ಬಿಟ್ಟರೆ ರಾಜಕೀಯ ಪ್ರಪಂಚದಲ್ಲಿ ನನಗೆ ಯಾರನ್ನೂ ನಂಬಲಿಕ್ಕಾಗುವುದಿಲ್ಲ. ನನಗೆ ತೋರುತ್ತೆ, ನೆಹರೂ ಜೀವಿಸಿರುವ ವ್ಯಕ್ತಿಗಳಲ್ಲಿ ಅತ್ಯಂತ ದೊಡ್ಡ ವ್ಯಕ್ತಿ ಎಂದು. ನೀನೂ ಅವರನ್ನು ಗೌರವಿಸುತ್ತೀ ಎಂದು ಭಾವಿಸಿದ್ದೇನೆ.'

ಈ ಎಲ್ಲಾ ಕಾಲದಲ್ಲಿಯೂ ನನ್ನ ತಂಗಿ ಎಲ್ಡಿತಳು ತಾಯಿಯೊಡನೆಯೇ ಇದ್ದಳು. ಅವಳು ಈ ಜೀವನ ಕೊಡಬಹುದಾದುದನ್ನು ಕಳೆದುಕೊಂಡಿದ್ದಳು. ಆದರೆ ಆಕೆ ಅದನ್ನು ಒಪ್ಪಿಕೊಳ್ಳುತ್ತಿರಲಿಲ್ಲ, ಅನ್ನಿ. ಆಕೆಯಷ್ಟು ನಿಸ್ವಾರ್ಥ ಜೀವಿಯನ್ನು ನಾನೆಂದೂ ನೋಡಿಲ್ಲ. ಇನ್ನೊಬ್ಬರಿಗೋಸ್ಕರ ಆಕೆ ಇಡೀ ಜೀವನವನ್ನು ಕಳೆದಳು. ಲಂಡನ್ ಅಥವಾ ಅಕ್ಕಪಕ್ಕದಲ್ಲಿ ಇರುತ್ತಿದ್ದಾಗ ತಾಯಿ ಬದುಕಿರುವವರೆಗೂ ಆಕೆ ಚರ್ಚ್ ಮಿಷನರಿ ಸೊಸೈಟಿಯ ಒಬ್ಬ ಕಾರ್ಯದರ್ಶಿನಿಯಾಗಿ ತನಗೆ ಹಿತವಾದ ಕೆಲಸದಲ್ಲಿ ತೊಡಗಿದ್ದಳು. ಆ ಕೆಲಸವನ್ನು ಈಚೆಗೂ ಮಾಡಿಕೊಂಡು ಬರುತ್ತಿದ್ದಾಳೆ. ಯುದ್ಧಕ್ಕೆ ಮುಂಚೆ, ಅಂದರೆ ೧೯೩೯ರಲ್ಲಿ, ಆಕೆ ಪಟಾನ್‌ಘರ್‌ಗೆ ಬಂದಿದ್ದಳು. ಆಮೇಲೆ ಮತ್ತೆ ಷಿಲ್ಲಾಂಗಿಗೆ ಬಂದು ಎರಡು ತಿಂಗಳು ನಮ್ಮೊಡನೆ ಇದ್ದಳು. ಆಗ ಬಂದದ್ದು ಮಿಷನರಿ ಆಸ್ಪತ್ರೆಗಳು ಮತ್ತು ಇತರ ಸಂಸ್ಥೆಗಳನ್ನು ನೋಡುವುದಕ್ಕಾಗಿ. ಅಧಿಕೃತ ಸಂಚಾರಮಾಡಿ ಆಕೆ ಇಡೀ ಇಂಡಿಯಾ ಸುತ್ತಾಡಿದಳು. ಗಾಂಧೀಜಿ ಹೇಳಿದ ಈ ಕೆಳಗಿನ ಮಾತು ಎಲ್ಡಿತಳಿಗೆ ಒಪ್ಪುತ್ತದೆ : 'ನಿಜವಾದ ಪ್ರೇಮ ಸಾಗರದಂತೆ ವಿಶಾಲವಾದುದು. ಆ ಸಾಗರ ಏರುತ್ತಾ ಉಬ್ಬುತ್ತಾ ಉರುಳುರುಳಿ ಇಡೀ ವಿಶ್ವವನ್ನೇ ಆವರಿಸುತ್ತದೆ.'

ನನ್ನ ತಮ್ಮ ಬೆಸಿಲ್ ಶಾಲಾ ಉಪಾಧ್ಯಾಯನಾದ. ಕೆಲವು ಕಾಲ ಹೆಸರಾಂತ ಚೀಮ್ ಶಾಲೆಯಲ್ಲಿ ಉಪಾಧ್ಯಾಯನಾಗಿದ್ದ. ಈಗ ಡ್ಯೂಕ್ ಆಫ್ ಎಡಿನ್‌ಬರೋ ಆಗುವವರು ಒಮ್ಮೆ ಅವನ ವಿದ್ಯಾರ್ಥಿಗಳಲ್ಲಿ ಒಬ್ಬರಾಗಿದ್ದರು. ಈಚೆಗೆ ಅವನು ಎರಡು ಮೂರು ಶಾಲೆಗಳಲ್ಲಿ ಉಪಾಧ್ಯಾಯನಾಗಿ ಕೆಲಸ ಮಾಡಿದ್ದಾನೆ. ಹೆಲೆನ್ ಎಂಬ ಹೆಸರಿನ ಬಹು ಸುಂದರ ಹುಡುಗಿಯನ್ನು ಮದುವೆಯಾದ. ಚಂದದ ಮೂರು ಮಕ್ಕಳಿದ್ದಾರಂತೆ. ನಾನು ಒಬ್ಬಳನ್ನು ಇನ್ನೂ ಮಗುವಿರುವಾಗ ನೋಡಿದ್ದೆ. ನಾನು ಬೆಸಿಲ್‌ನೊಡನೆ ಹೆಚ್ಚು ಪತ್ರವ್ಯವಹಾರ ಇಟ್ಟುಕೊಂಡಿಲ್ಲ. ಒಮ್ಮೊಮ್ಮೆ ಭೇಟಿಯಾದಾಗ ಅಣ್ಣ ತಮ್ಮಂದಿರಂತೆ ಪ್ರೀತಿ ವಿಶ್ವಾಸದಿಂದ ನಡೆದುಕೊಳ್ಳುತ್ತೇವೆ.

೮. ನೀಫಾಕ್ಕೆ ಪ್ರಯಾಣ

ಬಸ್ತಾರ್ ಮತ್ತು ಒರಿಸ್ಸಾದಲ್ಲಿ ನಾನು ಕಳೆದ ಸಂಶೋಧನೆಯ ದಿನಗಳು ಬಹು ಸುಖದಾಯಕವಾಗಿದ್ದುವು; ಹಾಗೆಯೇ ಉಪಯುಕ್ತವೂ ಆಗಿದ್ದುವು. ಆದರೂ ಅನೇಕ ದಿನಗಳಿಂದ ಅಸ್ಸಾಮಿಗೆ ಹೋಗಬೇಕೆಂದು ಆಲೋಚಿಸುತ್ತಿದ್ದೆ. ಅಲ್ಲಿ ಸಂಶೋಧನೆಗೆ ಇರುವ ಅವಕಾಶದ ಬಗ್ಗೆ ಡಾ. ಜೆ. ಹೆಚ್. ಹಟ್ಟನ್ ಅವರು ನಲವತ್ತನೆಯ ದಶಕದಲ್ಲೇ ವಿವರವಾದ ಪತ್ರ ಬರೆದಿದ್ದರು. ೧೯೪೭ನೆಯ ಜೂನ್ ತಿಂಗಳಲ್ಲಿ, ಅಂದರೆ ಸ್ವಾತಂತ್ರ್ಯಕ್ಕೆ ಮುನ್ನ, ಬಿಹಾರಿನಿಂದ ನಾಗಾ ಗುಡ್ಡಗಳಿಗೆ ವರ್ಗಾಯಿಸಲ್ಪಟ್ಟ ಬಿಲ್ ಆರ್ಚರ್ ಅವರು ಮೊಕೊಕ್‌ಚೊಂಗ್ ಎಂಬಲ್ಲಿಗೆ ನಾನು ಬರಬೇಕೆಂದೂ, ನಾಕಚಾರಿ ಎಂಬ ರೈಲ್ವೆ ಸ್ಟೇಷನ್ನಿನಲ್ಲಿ ಇಳಿಯಬೇಕೆಂದೂ, ತಾವು ಯಾರನ್ನಾದರೂ ಸ್ಟೇಷನ್ನಿಗೆ ಕಳುಹಿಸುವುದಾಗಿಯೂ ಪತ್ರ ಬರೆದರು. ಬಿಲ್ ಆರ್ಚರ್ ಅವರು ಕವಿ. ಮೊಕೊಕ್‌ಚೊಂಗ್ ಎಲ್ಲಿದೆ ಎಂದು ಹೇಳಬೇಕೆಂದು ಅವರು ಭಾವಿಸಲಿಲ್ಲ.

ಶಾಮರಾವ್ ಮತ್ತು ನಾನು ರೈಲು ಮಾರ್ಗವಾಗಿ ಹೊರಟೆವು. ಆಗಿನ್ನೂ ಏರೋಪ್ಲೇನ್ ಸರ್ವೀಸ್ ಇರಲಿಲ್ಲ. ಅಸ್ಸಾಮಿಗೆ ಹೋಗಬೇಕಾದರೆ ಬಹು ದೀರ್ಘಕಾಲ ಪ್ರಯಾಣ ಮಾಡಬೇಕು. ಬಿಸಿಲಂತೂ ಹೇಳತೀರದು. ಒಂದೇ ಸಮನೆ ಪ್ರಮಾಣಮಾಡಿ ನಾಕಚಾರಿ ಸ್ಟೇಷನ್‌ನಲ್ಲಿ ಇಳಿದೆವು ಇಬ್ಬರು ನಾಗಾ ಮನುಷ್ಯರು ನಮ್ಮನ್ನು ಎದುರುಗೊಂಡರು. 'ಆರ್ಚರ್ ಅವರ ಬಂಗಲೆಗೆ ಕರೆದುಕೊಂಡು ಹೋಗಿ' ಎಂದೆ, ಅವರ ಬಂಗಲೆ ಸ್ಟೇಷನ್ನಿನಿಂದ ಒಂದೆರಡು ಮೈಲಿ ದೂರದಲ್ಲಿರಬಹುದೆಂದು ಭಾವಿಸಿ. ಅದಕ್ಕೆ ಅವರು 'ಮೊಕೊಕ್‌ಚೊಂಗ್ ಇಲ್ಲಿಗೆ ನಲವತ್ತೇಳು ಮೈಲಿ ದೂರದಲ್ಲಿದೆ' ಎಂದು ಹೇಳಿದರು! ಇದರಿಂದ ಅಧೀರನಾಗದ ನಾನು 'ಕಾರೆಲ್ಲಿದೆ?' ಎಂದೆ. ಅದಕ್ಕೆ ಆ ನಾಗಾಗಳಲ್ಲಿ ಒಬ್ಬ 'ಕಾರಿನಿಂದೇನು ಉಪಯೋಗ? ರಸ್ತೆಯೇ ಇಲ್ಲ; ನಡಕೊಂಡೇ ಹೋಗಬೇಕು. ನಾಲ್ಕು ದಿವಸ ಅಗುತ್ತೆ' ಎಂದ.

ನಡಕೊಂಡೇ ಹೊರಟೆವು. ಆ ಬಿಸಿಲಿನಲ್ಲಿ ಹೋಗುವುದೆಂದರೆ ತುಂಬ ಕಷ್ಟವಾಯಿತು. ಆದರೆ ಅಲ್ಲಲ್ಲಿ ಡಾಕ್ ಬಂಗಲೆಗಳಿದ್ದುವು. ಬಿಲ್ ತಮ್ಮ ಬೆಟ್ಟದಿಂದ ಇಳಿದುಬಂದು ಕೊನೆಯ ಪ್ರವಾಸಿ ಬಂಗಲೆಯಲ್ಲಿ ನಮ್ಮನ್ನು ಎದುರುಗೊಂಡರು.

ಕೆಲವು ದಿವಸ ಮೊಕೊಕ್‌ಚೊಂಗ್‌ನಲ್ಲಿದ್ದು. ಸುತ್ತಮುತ್ತಲ ಹಳ್ಳಿಗಳನ್ನು ನೋಡಿಕೊಂಡು, ಆಮೇಲೆ ಕೋಹೀಮಾಕ್ಕೆ ಹೋದೆವು. ಅಲ್ಲಿ ಹೆಸರಾಂತ ಸರ್‌ಚಾರ್ಲ್ಸ್ ಪಾಸೀ ಎಂಬುವರನ್ನು ಭೇಟಿಮಾಡಿದೆವು. ಒಬ್ಬ ನಾಗಾ ಅಧಿಕಾರಿ – ತುಂಬ ಒಳ್ಳೆಯವ ಹಾಗೂ ದಕ್ಷ– ನಮ್ಮನ್ನು ಕರೆದುಕೊಂಡು ಅನೇಕ ನಾಗಾ ಹಳ್ಳಿಗಳನ್ನು ತೋರಿಸಿದ. ಆದಿವಾಸಿಗಳ ಕಲೆಯ ಬಗ್ಗೆ ಪುಸ್ತಕ ಬರೆಯಲು ನಾನು ಆಗಲೇ ವಿಷಯಗಳನ್ನು ಸಂಗ್ರಹಿಸುತ್ತಿದ್ದೆ. ಈಗ ಹಳ್ಳಿಗಳ ಹಳೆಯ ಹೆಬ್ಬಾಗಿಲುಗಳ ಫೋಟೋ ತೆಗೆದುಕೊಂಡೆ. ಫಿಜೊ ಅವರನ್ನೂ ಭೇಟಿ ಮಾಡಿದೆ. ಅವರಾಗಲೇ ಅವರ ಜನಗಳಿಗೆ ಕೆಟ್ಟ ಹೆಸರು ತರುವಂತಹ ಹಾಗೂ ತೊಂದರೆಗೀಡುಮಾಡುವ ದುಷ್ಕೃತ್ಯದಲ್ಲಿ ತೊಡಗಿದ್ದರು.

ಇದಾದ ನಂತರ ಶಾಮರಾವ್ ಪಟಾನ್‌ಘರ್‌ಗೆ ಹಿಂದಿರುಗಿದರು. ನಾನು ಬಿಲ್ ಅವರನ್ನು ನೋಡಲು ವಾಖ್‌ಚೊಂಗ್‌ಗೆ ಹೋದೆ. ಅವರಿಗೆ ಸರ್ಕಾರಿ ಕೆಲಸವೇ ತುಂಬ ಹೆಚ್ಚಾಗಿತ್ತು. ಆದರೂ ಅವರನ್ನು ನೋಡಲು ಬಂದ ಕೋನ್ಯಕ್ ಮತ್ತು ಘೋಮ್ ಮುಖಂಡರುಗಳ ಮೂಲಕ ಕೆತ್ತನೆ ಸಾಮಾನುಗಳು, ಹ್ಯಾಟು ಮುಂತಾದ ವಸ್ತುಗಳನ್ನು ಸಂಗ್ರಹಿಸಿದೆ.

ನಾವು ಮತ್ತೆ ಮೇಲೆ ಹತಿತ್ಮೊಕೊಕ್‌ಚೊಂಗಿಗೆ ಹೋಗುವಾಗ ನಾಗಾಗಳು ಮನುಷ್ಯನ ಕಿವಿಯೊಂದನ್ನು ಪಡೆದಾಗ ಆನಂದದಲ್ಲಿ ಕುಣಿಯುವ ದೃಶ್ಯವೊಂದನ್ನು ಕಂಡೆವು. ನಾಗಾ ಜನರು ಮೊದಲಿಗೆ ಮನುಷ್ಯರ ಬೇಟೆಯಾಡುತ್ತಿದ್ದರು. ಆದರೆ ಅದನ್ನು ಸರ್ಕಾರ ನಿಷೇಧಿಸಿದ್ದರಿಂದ ಅದರ ಬದಲು ಕೋತಿಯ ಬೇಟೆ ಯಾಡುತ್ತಿದ್ದರು. ಆದರೆ ಕಾಲರಾ ತಲೆದೋರಿದ್ದರಿಂದ ಕೋತಿ ಬೇಟೆ ಉಪಯೋಗ ವಿಲ್ಲ. ಮನುಷ್ಯನ ಬೇಟೆಯೇ ಆಗಬೇಕೆಂದು ತೀರ್ಮಾನಿಸಿದರು. ಮನುಷ್ಯನ ತಲೆ ಸಿಕ್ಕದಿದ್ದರೆ ಪರವಾಯಿಲ್ಲ, ಕಿವಿಯಾದರೂ ಸಿಕ್ಕಿದರೆ ಸಾಕೆನ್ನುವ ತೀರ್ಮಾನಕ್ಕೆ ಬಂದಿದ್ದರು. ನಾವು ಹೋದಾಗ ಕಿವಿ ಬೇಟೆಯಾದುದರ ಹಬ್ಬ ಆಚರಿಸುತ್ತಿದ್ದರು. ಆ ಕುಣಿತ ನೋಡಬೇಕು ! ಅವರೇ ಅವರಾಗಿ ಕುಣಿಯುತ್ತಿದ್ದರು ! ಹೀಗೆ ತಲೆಯ ಬೇಟೆ ಅಥವಾ ಕಿವಿ ಬೇಟೆ ಮಾಡಿದರೆ ಅದಕ್ಕೆ ಬಿಲ್ ಅವರು ಬಾರಿ ಜುಲ್ಮಾನೆ ಹಾಕಬಹುದಿತ್ತು. ಆದರೆ ಈಗ ಹಾಗೆ ಮಾಡಲಿಲ್ಲ. 'ಹೋಗಲಿ ಬಿಡಿ, ಅವರಿಗೆ ಒಳ್ಳೆಯ ಬೆಳೆಯಾಗುತ್ತೆ ಮತ್ತು ಉತ್ತಮವಾದ ಮಕ್ಕಳು ಹುಟ್ಟುತ್ತವೆ' ಎಂದು ಸುಮ್ಮನಾದರು.

ಮೊಕೊಕ್‌ಚೊಂಗ್‌ನಿಂದ ನಾನು ನನ್ನ ಸಹಾಯಕ ಸುಂದರಲಾಲ್ ಮತ್ತು ಅತ್ಯುತ್ತಮ ನಾಗಾ ದುಭಾಷಿಯೊಡಗೂಡಿ ಕೋನ್ಯಕ್ ನಾಡಿಗೆ ಹೋದೆ. ನಾವು ಹೋದ ಹಳ್ಳಿಗಳಿಗೆ ಮಿಷನರಿಗಳಿನ್ನೂ ಹೋಗಿರಲಿಲ್ಲ. ನೂರಾರು ವರ್ಷಗಳಿಂದ ಹೇಗೆ ನಡೆದು ಬಂದಿತ್ತೋ ಹಾಗೆ ಈಗಲೂ ನಡೆಯುತ್ತಿತ್ತು. ನಾವು ನೀಡಿದ್ದೇ ಕೊನೆ ಎಂದು ಕಾಣುತ್ತೆ. ನನ್ನ ಯಾತ್ರೆ ಬಹು ರೋಮಾಂಚಕಾರಿಯಾಗಿತ್ತು.

ಅಸ್ಸಾಮಿಗೆ ನನ್ನ ಮತ್ತೊಂದು ಭೇಟಿ ೧೯೫೨ರಲ್ಲಿ. ಆಗ ಅಲ್ಲಿಯ ಗೌರ್ನರರಾಗಿದ್ದ ಜಯರಾಮ್‌ದಾಸ್ ದೌಲತ್‌ರಾಯ್ ಅವರು ನನ್ನನ್ನು ಆಹ್ವಾನಿಸಿದ್ದರು. ಪಟಾನ್‌ಘರ್‌ನಿಂದ ನಾನೂ ಶಾಮರಾವೂ ಕಾರಿನಲ್ಲೇ ಷಿಲ್ಲಾಂಗಿಗೆ ಹೋದೆವು. ಆಗ ರಸ್ತೆಗಳು ಚೆನ್ನಾಗಿರಲಿಲ್ಲ. ದೋಣಿಯಲ್ಲಿ ಗಂಗಾನದಿ ದಾಟಬೇಕಾದರೆ ಇಪ್ಪತ್ತುನಾಲ್ಕು ಗಂಟೆ ಹಿಡಿಯಿತು. ಗೌರ್ನರ್ ಅವರನ್ನು ಭೇಟಿಮಾಡಿದೆ. ಆಮೇಲೆ ಗಿರಿಜನ ಪ್ರದೇಶಗಳಿಗೆ ಸಲಹೆಗಾರರಾಗಿದ್ದ ಎನ್. ಕೆ. ರುಸ್ತುಂಜೀ (ನಾರೀ) ಅವರನ್ನು ಕಂಡೆ. ಅವರಿಗೆ ನೀಫಾನೂ (North - East Frontier Agency) ಸೇರಿತ್ತು. ನಾನು ಅವರನ್ನು ಕಂಡಾಗ ಮೊಟ್ಟಮೊದಲ ಮಾತು, ನನಗೆ ನೀಫಾ ಪ್ರವೇಶಮಾಡುವುದಕ್ಕೆ ಅವಕಾಶವಿಲ್ಲ ಎಂದು. ಏಕೆಂದರೆ, ನಾನಿನ್ನೂ ಸರ್ಕಾರಿ ಕಾನೂನು ಪ್ರಕಾರ ಇಂಡಿಯಾದ ಪ್ರಜೆಯಾಗಿರಲಿಲ್ಲ. ಹೊರಗಿನವರಿಗೆ ನೀಫಾಕ್ಕೆ ಹೋಗಲು ಅವಕಾಶವರಿಲಿಲ್ಲ. ಈಗ ಅದನ್ನು ನೆನೆಸಿಕೊಂಡರೆ ನನಗೂ ಶಾಮರಾವ್‌ಗೂ ನಗುಬರುತ್ತದೆ.

ವಾಸ್ತವವಾಗಿ ಮಣಿಪುರಕ್ಕೆ ಹೋಗಬೇಕೆಂದು ನಮ್ಮ ಯೋಜನೆಯಾಗಿತ್ತು. ಷಿಲ್ಲಾಂಗಿನಿಂದ ಹೊರಟು ಇಂಫಾಲಿಗೆ ಹೋದೆವು. ಅಲ್ಲಿದ್ದುದು ಒಂದೇ ಒಂದು ಡಾಕ್ ಬಂಗಲೆ. ಅದರ ತುಂಬ ಜನ ಸೇರಿಕೊಂಡು ಸಂತೆ ಮಾಡಿದ್ದರು ಅದನ್ನು. ಅಲ್ಲಿ ಹೊಟೇಲು ಇರಲಿಲ್ಲ. ಡೆಪ್ಯೂಟಿ ಕಮೀಷನರನ್ನ– ಅವರ ಹೆಸರು ಎಂ. ಎನ್. ಘುಕನ್ ಎಂದು – ನೋಡಲು ಹೋದೆವು. ಅವರ ತೋಟದಲ್ಲಿ ಒಂದು ಗೆಸ್ಟ್ ಹೌಸು ಇತ್ತು. ಅಲ್ಲಿ ಇರಲು ಅನುಮತಿಕೊಟ್ಟು ನಮಗೆಲ್ಲಾ ಸೌಕರ್ಯಗಳನ್ನು ಒದಗಿಸಿದರು. ಆ ಪ್ರದೇಶದ ಕಣಿವೆಗಳಲ್ಲಿ ಅಡ್ಡಾಡಿದೆವು. ಶಾಮರಾವ್ ವಾಪಸು ಹೋದರು. ನಾನು ನಡೆದುಕೊಂಡೇ ಕಬೂಯಿ ಗುಡ್ಡಗಳಲ್ಲಿ ನೂರಾರು ಮೈಲಿ ಅಲೆದಾಡಿದೆ.

ಕುಬಾಯಗಳು ಸಮಸ್ತ ಗಿರಿಜನರಲ್ಲಿ ಅತ್ಯಂತ ಸುಂದರವಾದ ಜನ. ಅವರು ಮಾಡಿದ ಸೊಗಸಾದ ನೃತ್ಯ ನೋಡಿದೆ. ನನ್ನೊಡನೆ ಬಂದ ಸುಂದರ ಲಾಲನಿಗೆ ಕೈಕಾಲು ಹಿಡಿದುಕೊಂಡುಬಿಟ್ಟವು. ಈ ಕಾರಣ ಇಂಫಾಲಿಗೆ ಹಿಂದಿರುಗಿ ಅವನನ್ನು ಆಸ್ಪತ್ರೆಗೆ ಸೇರಿಸಿದೆ. ಘುಕನ್ ಅವರು ತಂಗ್‌ಖುಲ್ ನಾಡಿನ ಕಡೆ ಪ್ರವಾಸ ಹೊರಟಿದ್ದರು. ಅವರ ಜೊತೆ ನಾನೂ ಹೊರಟು ಊಖ್ರುಲ್‌ವರೆಗೂ ಹೋದೆ. ಆ ಮೇಲೆ ನನ್ನ ಪಾಡಿಗೆ ನಾನು ಹೋದೆ. ಘುಕನ್‌ರೊಡನೆ ನಡೆಯುವುದು ನನಗೆ ಸಾಧ್ಯವಾಗಲಿಲ್ಲ. ಅವರಷ್ಟು ಜೋರಾಗಿ ನಡೆಯುವವರನ್ನು ನಾನು ಕಂಡಿಲ್ಲ. ನನ್ನ ಸಹಾಯಕನಾಗಿ ಒಬ್ಬ ಕ್ರೈಸ್ತ ಯುವಕನಿದ್ದ. ಅವನೊಡನೆ ಅಡ್ಡಾಡಿ ಷಿರೋಹಿ ಪರ್ವತಗಳ ಶಿಖರವನ್ನು ಏರಿದೆ. ಅಮೇರಿಕಾ ತರಹದ ಬುಷ್‌ಕೋಟು ಮತ್ತು ಜಾಕಿಟೋಪಿ ಹಾಕಿದ್ದ ಆತ. ಆದರೆ ತುಂಬಾ ಸಹಾಯಕನಾಗಿದ್ದ. ಹೀಗಿದ್ದರೂ ಆತನ ಮಾತು ಹೆಚ್ಚಾಗಿ ಆತ್ಮಮುಕ್ತಿಯನ್ನು ಕುರಿತದ್ದಾಗಿತ್ತು. ಆಗ ನನಗೆ ಅನ್ನಿಸುತ್ತಿತ್ತು. ಗತಿಸಿದ ನನ್ನ ಯೌವನದ ಪಿಶಾಚಿಯ ಜೊತೆ ನಡೆಯುತ್ತಿರುವೆನೊ ಎಂದು.

ಪಟಾನ್‌ಫರ್‌ಗೆ ಹಿಂದಿರುಗಿದೆ. ಎಲ್ಲದರ ಬೆಲೆಯು ಜಾಸ್ತಿ ಆಗುತ್ತಿತ್ತು. ಖಾಸಗಿ ಮನುಷ್ಯನೊಬ್ಬ ಸಂಶೋಧನೆಯಲ್ಲಿ ತೊಡಗುವುದು ಅಸಾಧ್ಯವಾಗುತ್ತ ಬಂದಿತ್ತು. ಹೀಗಿರುವಾಗ ಇದ್ದಕ್ಕಿದ್ದಂತೆ ಡಿಸೆಂಬರ್ ತಿಂಗಳ ಆರಂಭದಲ್ಲಿ ಸುದ್ದಿಯೊಂದು ಬಂದಿತು – ಸ್ವರ್ಗದಿಂದ ಬಂದ ಸಂದೇಶವೋ ಎಂಬಂತೆ. ಅದೇ ಹೊಸ ದಿಲ್ಲಿಯಿಂದ ಬಂದ ರಹಸ್ಯಗರ್ಭಿತವಾದ ತಾರು Foreign (ಫಾರಿನ್) ಎಂಬ ಸಹಿ ಇತ್ತು. ನೀಫಾಕ್ಕೆ ಬೇಕಾದ ಜನರನ್ನು ಆರಿಸಿಕೊಳ್ಳಲು ಯಾವುದೋ ಒಂದು ಆಯ್ಕೆಯ ಮಂಡಲಿಯಲ್ಲಿ ಕುಳಿತುಕೊಳ್ಳಬೇಕಾಗಿದೆ. ಆದ್ದರಿಂದ ಕೂಡಲೇ ಬರಬೇಕೆಂದು ಅದರಲ್ಲಿ ಇತ್ತು. ದಿಲ್ಲಿಯ ವಿಷಯ ನನಗೇನೂ ಗೊತ್ತಿರಲಿಲ್ಲ. ನೀಫಾ ವಿಷಯವೂ ತಿಳಿದಿರಲಿಲ್ಲ. ಏಕೆಂದರೆ ಅಲ್ಲಿ ನನಗೆ ಪ್ರವೇಶವಿರಲಿಲ್ಲ. ತಾರು ಒಂದು ವಾರ ತಡವಾಗಿ ಬಂದಿತ್ತು. ಇನ್ನು ವಿಳಂಬಮಾಡಬಾರದೆಂದು ಲೀಲಾ ಮತ್ತು ಶಾಮರಾವ್ ಅವರೊಡನೆ ಆಲೋಚನೆ ಮಾಡಿ ಹೊರಡುವುದೆಂದು ತೀರ್ಮಾನಿಸಿದೆ. ಲೀಲಾನೂ ನನ್ನ ಜೊತೆ ಬಂದಳು. ಆದಷ್ಟು ಜಾಗ್ರತೆ ದಿಲ್ಲಿ ಮುಟ್ಟಿದೆವು.

ಕಾನ್‌ಸ್ಟಿಟ್ಯೂಷನ್ ಹೌಸ್‌ನಲ್ಲಿ ಇಳಿದುಕೊಳ್ಳುವುದಕ್ಕೆ ಜಾಗ ಸಿಕ್ಕಿತು. ಹೊರಗೆ ನೋಡಲು ಸೊಗಸಾಗಿ ಕಾಣುವ ಈ ಭವನದ ರೂಮುಗಳಿಗೆ ಬೇರೆ ಬೇರೆ ಸ್ನಾನದ ಕೋಣೆಗಳಿರಲಿಲ್ಲ. ಎರಡು ರೂಮುಗಳಿಗೆ ಒಂದೇ ಸ್ನಾನದ ಕೋಣೆ. ಒಂದು ರೂಮಿನಿಂದ ಒಳಗೆ ಹೋದವರು ಇನ್ನೊಂದು ರೂಮಿಗೆ ಹೋಗುವ ಬಾಗಿಲನ್ನು ಹಾಕಿಕೊಂಡಿದ್ದು ಹೊರಗೆ ಬಂದಾಗ ಆ ಬಾಗಿಲನ್ನು ತೆರೆದು ಬರಬೇಕಾಗಿತ್ತು. ಸ್ನಾನಕ್ಕೆ ಹೋಗಿದ್ದ ಲೀಲಾ ಆ ಬಾಗಿಲು ತೆರೆದು ಬರುವುದನ್ನು ಮರೆತುಬಿಟ್ಟಳು. ಇದರಿಂದ ನಮ್ಮ ಪಕ್ಕದ ರೂಮಿನಲ್ಲಿದ್ದ ಒಬ್ಬ ಗಲಾಟೆಯ ಯುವಕ ಪತ್ರಿಕೋದ್ಯೋಗಿ ಭಾರಿ ಸಿಡಿಮಿಡಿಯಾಗಿಬಿಟ್ಟ. ಕೆಲವು ದಿನಗಳ ನಂತರ ಪ್ರಧಾನಮಂತ್ರಿಯವರು ನಮ್ಮನ್ನು ಬೆಳಗಿನ ಉಪಾಹಾರಕ್ಕೆ ಕರೆಸಿದರು. ನಮ್ಮ ಮೇಲೆ ಸೇಡುತೀರಿಸಿಕೊಳ್ಳುವುದಕ್ಕೆ ಇದೇ ಸರಿಯಾದ ಸಮಯವೆಂದು ಆ ಪತ್ರಿಕೋದ್ಯೋಗಿ ಸ್ನೇಹಿತ ಮನಸ್ಸುಮಾಡಿಬಿಟ್ಟಿದ್ದ. ಉಪಾಹಾರ ಎಂಟೂವರೆ ಗಂಟೆಗೆ ಇತ್ತು. ಆದ್ದರಿಂದ ನಾವು ಐದುಗಂಟೆಗೇ ಎದ್ದು ಸ್ನಾನದ ಬಾಗಿಲು ತೆಗೆಯುತ್ತೇವೆ ಬಾಗಿಲು ಭದ್ರಮಾಡಿಬಿಟ್ಟಿದ್ದಾನೆ ! ಎಷ್ಟು ತಟ್ಟಿದರೂ ಜುಮ್ಮೆನ್ನಲಿಲ್ಲ. ನಾವು ಚಡಪಡಿಸಲಾರಂಭಿಸಿದೆವು. ಪ್ರಧಾನಮಂತ್ರಿಯವರೊಡನೆ ಉಪಾಹಾರ ದಿನಾ ಸಿಕ್ಕುವುದಿಲ್ಲ. ಲೀಲಾ ಎಷ್ಟು ಚೆನ್ನಾಗಿ ಕಾಣಬೇಕೊ ಅಷ್ಟು ಚೆನ್ನಾಗಿ ಸಿದ್ಧತೆ ಮಾಡಿಕೊಳ್ಳಬೇಕಾಗಿತ್ತು. ಮತ್ತಾವುದಾದರೂ ಸ್ನಾನದ ಮನೆ ಸಿಕ್ಕೀತೆ ಎಂದು ಅಲ್ಲೆಲ್ಲಾ ಓಡಾಡಿದೆವು. ಎಲ್ಲಾ ಭರ್ತಿ ! ಏಳುಕಾಲು ಗಂಟೆಯವರೆಗೆ ಎಲ್ಲೂ ಜಾಗ ಸಿಕ್ಕಲಿಲ್ಲ. ನಾನು ಬಹು ನಮ್ರತೆಯಿಂದ ಆ ನನ್ನ ನೆರೆಯವನ ಕ್ಷಮಾಪಣೆ ಕೇಳಿಕೊಂಡಾಗ ಆತ ಬಾಗಿಲು ತೆರೆಯಲು ಒಪ್ಪಿಕೊಂಡ.

ಇದನ್ನು ಸುಮ್ಮನೆ ಹೇಳಿದೆ ಬಿಡಿ. ನಾವು ದಿಲ್ಲಿಗೆ ಹೋದ. ಮಾರನೆಯದಿನ ರಹಸ್ಯಗರ್ಭಿತವಾದ ಸ್ನೇಹಿತ 'ಘಾರಿನ್' ಅವರಿಂದ ಕರೆಬಂದಿತು. ಆ ಘಾರಿನ್ ಮತ್ಯಾರೂ ಅಲ್ಲ, ವಿದೇಶಾಂಗ ಸಚಿವಾಲಯದ ಟಿ.ಎನ್. ಕೌಲ್. ಟಿಕ್ಕಿ ಕೌಲ್ ಎಂಥ ಮನುಷ್ಯರೆಂದರೆ ಕಂಡ ತಕ್ಷಣ ಹೊಂದಿಕೊಳ್ಳುವಂಥವರು. ಐದು ನಿಮಿಷಗಳಲ್ಲಿ ನಾನೂ ಅವರೂ ಚಿರಪರಿಚಿತರಂತಾದೆವು. ಇಂಡಿಯನ್ ಫ್ರಾಂಟಿಯರ್ ಅಡ್‌ಮಿನಿಸ್ಟ್ರೇಟೀವ್ ಸರ್ವೀಸ್ (I.F.A.S) ಹೊಸ ನೌಕರಿ ಶ್ರೇಣಿಯನ್ನು (Cadre) ಮಾಡಬೇಕೆಂದಿದ್ದೇವೆ, ಅದಕ್ಕೆ ಜನರನ್ನು ಆರಿಸಬೇಕು. ಆ ಆಯ್ಕೆಯ ಸಮಿತಿಯಲ್ಲಿದ್ದು ಆಯ್ಕೆಗೆ ಸಹಾಯಮಾಡಬೇಕು ಎಂದು ಹೇಳಿದರು. ಅಲ್ಲದೆ ನಾನು ನೀಫಾ ಆಡಳಿತ ಸೇರಿ ಆದಿವಾಸಿಗಳ ಸಮಸ್ಯೆಗಳ ಬಗ್ಗೆ ಸಲಹೆಗಾರನಾಗಿರಬೇಕೆಂದು ನೆಹರೂ ಅವರ ಆಸೆಯೆಂದೂ ತಿಳಿಸಿದರು.

ಈ ವಿಷಯ ನನಗೆ ಹೊಸದಾಗಿದ್ದರಿಂದ ಏನು ಹೇಳುವುದೊ ಗೊತ್ತಾಗಲಿಲ್ಲ. ಒಂದು ಚೂರು ರೊಟ್ಟಿ ಕೇಳಿದಾಗ ಕೊಡದೆ ಆಮೇಲೆ ಮೃಷ್ಟಾನ್ನ ಭೋಜನಕ್ಕೆ ಕರೆದಂತಾಯಿತು. ಸರ್ಕಾರದ ಆದೇಶದಂತೆ ನಡೆದರೆ ಪಟಾನ್‌ಘರ್ ಬಿಡಬೇಕಾಗಿ ಬರುತ್ತಿತ್ತು. ಆದರೆ ನೀಫಾಕ್ಕೆ ಹೋಗುವುದರಿಂದ ನನ್ನ ಸಂಶೋಧನೆಗೆ ಹೊಸ ಕ್ಷೇತ್ರವೊಂದು ಸಿಕ್ಕಿದಂತಾಗುವುದೂ ಮನಸ್ಸಿಗೆ ಹೊಳೆಯಿತು. ತಾರು ಕೊಟ್ಟು ಶಾಮರಾವನ್ನು ಕರೆಸಿಕೊಂಡೆ. ಅವರು, ಲೀಲಾ ಮತ್ತು ನಾನು ಸೇರಿ ಆಲೋಚಿಸಿ ಸರ್ಕಾರದ ಆಹ್ವಾನ ಒಪ್ಪಬೇಕೆಂದು ತೀರ್ಮಾನಿಸಿದೆವು. ಪಟಾನ್‌ಘರ್‌ನಲ್ಲಿ ತಮ್ಮ ಕೆಲಸವನ್ನು ಒಬ್ಬರೇ ಮುಂದುವರಿಸಬೇಕಾಗಿ ಬಂದರೂ ಆ ನಿಸ್ವಾರ್ಥ ಬುದ್ಧಿಯ ಶಾಮರಾವ್ ಒಪ್ಪಿದರು.

ನೀಫಾಕ್ಕೆ ಹೋಗುವುದೆಂದರೆ ನಾನು ಇಲ್ಲಿಯವರೆಗೂ ಕಂಡಂತಹ ಬಡತನ ಹಾಗೂ ಶೋಷಣೆಯ ವಾಸ್ತವಿಕ ಪ್ರಪಂಚದಿಂದ ಸುಖದಮೇಲೆ ಪ್ರಪಂಚಕ್ಕೆ ಹೋದಂತಾಗುತ್ತಿತ್ತು. ಆದರೆ ನನ್ನ ಸ್ವಾತಂತ್ರ್ಯ ಕಳೆದುಕೊಳ್ಳಬೇಕಾಗಿತ್ತು. ಯಾರಿಗೆ ಯಾವುದು ಇಷ್ಟ ಎಂದು ಯಾರೂ ಹೇಳಲಾರರು. ಸರ್ಕಾರದ ಕಾರ್ಯಕ್ರಮದಂತೆ ಕೆಲಸ ಮಾಡಬೇಕು. ಜೊತೆಗೆ ನಿಯಮಗಳ ಹಿಡಿತ ಬೇರೆ. ಒಟ್ಟಿನಲ್ಲಿ ಇದು ನನ್ನ 'ವಕ್ರತೆ'ಯ ಅವನತಿ ಎಂತಲೇ ಹೇಳಬೇಕು. ಅಂತೂ ನೀಫಾಕ್ಕೆ ಹೋದೆ. ಅಲ್ಲಿ ನನ್ನ ಸಂಶೋಧನೆಗೆ ಒಳ್ಳೆಯ ಅವಕಾಶ ಸಿಕ್ಕಿತು. ಅನೇಕ ವ್ಯಕ್ತಿಗಳ ಪರಿಚಯವಾಯಿತು. ನನ್ನ ಮೇಲಿದ್ದ ಹತೋಟಿ ಹಾಗೂ ಶಿಸ್ತು ನನಗೊಳ್ಳೆಯದನ್ನೇ ಮಾಡಿದುವು.

ದಿಲ್ಲಿ ಆಯ್ಕೆಯ ಮಂಡಳಿಯಲ್ಲಿ ಕುಳಿತು ಐ.ಎಫ್.ಎ.ಎಸ್. ಅಧಿಕಾರಿಗಳನ್ನು ಆರಿಸುವುದಕ್ಕೆ ಸಹಾಯಮಾಡಿದೆ. ಕಳೆದ ಎಂಟು ವರ್ಷಗಳಲ್ಲಿ ಇಂಥ ಅನೇಕ ಆಯ್ಕೆಯ ಮಂಡಳಿಗಳಲ್ಲಿ ಕೆಲಸಮಾಡಿದ್ದೇನೆ. ಅವು ಹೆಸರಿಗಿಂತ ಎಷ್ಟೋ ಚೆನ್ನಾಗಿರುತ್ತವೆ. ಅಲ್ಲದೆ ಹಾಸ್ಯದಾಯಕವೂ ಆಗಿರುತ್ತವೆ. ಆದರೆ ಒಬ್ಬ ಮನುಷ್ಯನ ಇಡೀ ಜೀವನಕ್ಕೆ ಸಂಬಂಧಪಟ್ಟ ತೀರ್ಮಾನವನ್ನು ಹದಿನೈದು ನಿಮಿಷದ

ಸಂದರ್ಶನದಲ್ಲಿ ಮಾಡಿ ಮುಗಿಸುತ್ತೇವೆಂಬುದು ನನಗೇಕೋ ಸಂದೇಹದ ವಿಚಾರ. ಇಂಥ ಆಯ್ಕೆಯ ಮಂಡಳಿಗಳಲ್ಲಿ ಬೇಕಾದಷ್ಟು ಕೆಲಸಮಾಡಿದ್ದ ಇಂಗ್ಲೆಂಡಿನಿಂದ ಬಂದ ಒಬ್ಬ ಅಧಿಕಾರಿ ಹೇಳಿದರು, ಸರಿಯಾಗಿ ಲೆಕ್ಕಾಚಾರಮಾಡಿದ್ದರಲ್ಲಿ ನಾವು ಮಾಡಿದ ಆಯ್ಕೆಗಳಲ್ಲಿ ನೂರಕ್ಕೆ ಮೂವತ್ತು ತಪ್ಪಾಗಿದ್ದವು ಎಂದು.

ಒಂದುಸಲ ಒಬ್ಬ ಉಮೇದುವಾರ ಇಂಟರ್‌ವ್ಯೂಗೆ ಬಂದ. ಅವನಿಗೂ ಗೋರಿಲ್ಲಾ ಕಪಿಗೂ ಹೋಲಿಕೆಯಲ್ಲಿ ಏನೂ ವ್ಯತ್ಯಾಸವಿರಲಿಲ್ಲ. ಮುಂದಕ್ಕೆ ಚಾಚಿದ ದೊಡ್ಡ ದವಡೆ. ಕುರ್ಚಿಯ ಮೇಲೆ ಕುಳಿತಾಗ ನೆಲಮುಟ್ಟುತ್ತಿದ್ದ ಕೈಗಳು. ಅವನ ಯೋಗ್ಯತೆಗಳ ಬಗ್ಗೆ ಪ್ರಶ್ನೆ ಹಾಕಿದೆವು. ತಾನು ಒಳ್ಳೆಯ ಜಟ್ಟಿಯೆಂದೂ, ಭಾರ ಎತ್ತುವುದರಲ್ಲಿ ನಿಸ್ಸೀಮನೆಂದೂ ಹೇಳಿದ. ವಿದ್ಯೆಯ ಅರ್ಹತೆಗಳೇನು ಎಂದು ನಾನು ಕೇಳಿದಾಗ, ಗಡಿಯಲ್ಲಿ ಅದರ ಅವಶ್ಯಕತೆ ಇದ್ದಂತೆ ಕಾಣುವುದಿಲ್ಲ ಎಂದು ಉತ್ತರಕೊಟ್ಟ. ಆ ಭೂಪ !

ಗಡಿನಾಡಿಗೆ ಉಮೇದುವಾರರನ್ನು ಆರಿಸುವಾಗ ನೋಡಬೇಕಾದ ಅರ್ಹತೆಗಳಲ್ಲಿ ಮುಖ್ಯವಾದದ್ದು ಆದಿವಾಸಿಗಳ ಬಗ್ಗೆ ಅವರ ಭಾವನೆ ಎಂಥದು ಎಂದು. ಕೆಲವು ವೇಳೆ ಸಂದರ್ಶಕರು ಗಿರಿಜನ ಹುಡುಗಿಯನ್ನು ಮದುವೆ ಯಾಗುವೆಯಾ ಎಂಬ ಪ್ರಶ್ನೆ ಕೇಳುತ್ತಾರೆ. ಒಮ್ಮೆ ಹಾಗೆ ಕೇಳಿದಾಗ ಒಬ್ಬ ಓಹೋ, ಸರಿಯಾದ ಹುಡುಗಿ ಮುಂದೆ ಬಂದರೆ ಆಗಬಹುದು ಎಂದು ಉತ್ತರಕೊಟ್ಟ.

ನೀಫಾಕ್ಕೆ ಆದಷ್ಟು ಜಾಗ್ರತೆ ಹೋಗಬೇಕೆಂದು ಮನಸ್ಸುಮಾಡಿದ್ದ ನಾನು ದೆಹಲಿಯಿಂದ ಪಟಾನ್‌ಘರ್‌ಗೆ ಹಿಂದಿರುಗಿ, ನನ್ನ ಸಾಮಾನು ಸರಂಜಾಮುಗಳನ್ನು ಕಟ್ಟಿ ಕಲ್ಕತ್ತೆಗೆ ಹೋದೆ. ಅಲ್ಲಿ ನನ್ನನ್ನು ವಿಕ್ಟರ್ ಸಸ್ಸೂನ್ ಕೂಡಿಕೊಂಡರು. ನಾವಿಬ್ಬರೂ ವಿಮಾನದಲ್ಲಿ ಹೊರಟು ಷಿಲ್ಲಾಂಗಿಗೆ ಹೋದೆವು. ೧೯೫೪ನೆಯ ಜನವರಿ ಒಂದನೆಯ ತಾರೀಖು ನಾನು ಗೌರ್‍ನರ್ ಮತ್ತು ರುಸ್ತುಂಜೀ ಅವರನ್ನು ಕಂಡು ನನ್ನ ಹೊಸ ಬಾಳನ್ನು ಆರಂಭಿಸಿದೆ.

ನೀಫಾ ಆಡಳಿತವನ್ನು ಷಿಲ್ಲಾಂಗಿನಿಂದಲೇ ನಡೆಸಲಾಗುತ್ತಿತ್ತು. ಮೊದಲು ನನ್ನನ್ನು 'ಮಾನವಶಾಸ್ತ್ರ ಸಲಹೆಗಾರ' (Anthropological Cnonsultant) ಎಂದು ಕರೆದರು. ಒಂದು ವರ್ಷದ ನಂತರ 'ಗಿರಿಜನರಿಗೆ ಸಂಬಂಧಪಟ್ಟ ಸಲಹೆಗಾರ' (Advisor for Tribal Affairs) ಎಂಬ ಸರಿಯಾದ ಹೆಸರು ಕೊಟ್ಟರು. ನಾನು ಕ್ರಮವಾದ ಸರ್ಕಾರಿ ನೌಕರನಾಗಿರಲಿಲ್ಲ. ಗೌರವ ಸಂಭಾವನೆ ಕೊಡುತ್ತಿದ್ದರು. ಮೊದಲು ಮೂರು ವರ್ಷದ ಕರಾರು ಆಯಿತು. ಅದು ಮುಗಿದಮೇಲೆ ಐದು ವರ್ಷಕ್ಕೆ ಹೆಚ್ಚಿಸಿದರು. ಪೆನಷನ್ ಇಲ್ಲ. ಒಂದಲ್ಲ ಒಂದು ದಿನ ನೀಫಾ ಬಿಡಬೇಕಾಗಿದ್ದರೂ ನಿವೃತ್ತಿ ಎಂಬುದು ಇರಲಿಲ್ಲ ನನಗೆ.

ನಾರಿ ರುಸ್ತುಂಜೀ ಬಹು ಒಳ್ಳೆಯವರು. ಗಿರಿಜನರ ಬಗ್ಗೆ ಅಪಾರ ಆಸಕ್ತಿ ಇತ್ತು. ಅವರು ಮೊಟ್ಟಮೊದಲನೆಯ ದಿನವೇ ಏನೇನು ಮಾಡಬೇಕಾಗಿದೆ ಎಂಬುದನ್ನು ವಾಕಿಂಗ್ ಹೋದಾಗ ಹೇಳಿಬಿಟ್ಟರು. ಅವರ ತಾಯಿ ಮಮ್ಮಿ ರುಸ್ತುಂಜೀನೇ ಮನೆಕಡೆ ನೋಡಿಕೊಳ್ಳುತ್ತಿದ್ದರು. ಈಚೆಗೆ ಈ ಪುಸ್ತಕ ಅಚ್ಚಾಗುತ್ತಿರುವಾಗ ಮನಮೋಹಿಸುವ ಅವಿದಲಾಲ್ ಎಂಬುವಳನ್ನು ರುಸ್ತುಂಜೀ ಮದುವೆಯಾದರು.

ನೀಫಾದಲ್ಲಿ ನಾನು ಕಳೆದ ಮೊದಲ ಕೆಲವು ವರ್ಷಗಳಲ್ಲಿ ನನ್ನ ಮೇಲೆ ಪ್ರಭಾವ ಬೀರಿದವರು ಗೌರ್ನರ್ ಜಯರಾಮದಾಸ್ ದೌಲತ್‌ರಾಯ್ ಅವರು. ನಮ್ಮಿಬ್ಬರಿಗೂ ಅಭಿಪ್ರಾಯ ಭೇದಗಳಿದ್ದರೂ ಗಿರಿಜನರ ಸಮಸ್ಯೆಗಳ ಬಗ್ಗೆ ಇಬ್ಬರೂ ಒಮ್ಮತ ಹೊಂದಿದ್ದೆವು. ಗೌರ್ನರ್ ಮಲಗುತ್ತಿದ್ದುದು ರಾತ್ರಿ ಎರಡು ಗಂಟೆಗೆ. ಎಲ್ಲಾ ವರದಿಗಳನ್ನೂ ಪ್ರವಾಸ ದಿನಚರಿಗಳನ್ನೂ ಚಾಚೂತಪ್ಪದೆ ಓದುತ್ತಿದ್ದರು. ಓದುವಾಗ ಅಲ್ಲಲ್ಲಿ ಹಸಿರು ಶಾಯಿಯಿಂದ ಟಿಪ್ಪಣಿ ಬರೆದುಕೊಳ್ಳುತ್ತಿದ್ದರು. ನನಗೆ ನೀಫಾ ಬಗ್ಗೆ ಒಂದು ದೊಡ್ಡ ಪುಸ್ತಕ ಬರೆಯಬೇಕೆಂಬ ಆಸೆಯಿತ್ತು. ಮೊದಮೊಲಿಗೆ ಗೌರ್ನರ್ ಮತ್ತು ನಾರಿಯವರ ಜೊತೆ ದಿನವೂ ಚರ್ಚೆಮಾಡುವುದೊಂದು ಬಿಟ್ಟರೆ ನನಗೆ ಬೇರೆ ಕೆಲಸವೇ ಇರಲಿಲ್ಲ. ನನ್ನನ್ನು ಏನು ಮಾಡಬೇಕೆನ್ನುವುದೇ ಅವರಿಗೆ ಸಮಸ್ಯೆಯಾಗಿತ್ತು. ಓದಲಿಕ್ಕೆ ಯಾವ ಸಾಹಿತ್ಯವೂ ಇರಲಿಲ್ಲ. ಓದಲು ಗೌರ್ನರ್ ಅವರು ತಮ್ಮ ಪ್ರವಾಸದ ಹಳೆಯ ದಿನಚರಿಗಳನ್ನು ಕೊಟ್ಟರು.

ನನ್ನ ಸ್ಟೆನೋಗ್ರಾಫರ್ (ಶೀಘ್ರಲಿಪಿಗಾರ) ಆಗುವುದಕ್ಕೆ ಯಾರಿಗೂ ಇಷ್ಟವಿರಲಿಲ್ಲ. ನನಗೊಬ್ಬ ಸೇವಕನೂ ಸಿಕ್ಕಲಿಲ್ಲ. ವಿಕ್ಟರ್ ನನ್ನ ಜೊತೆಯಲ್ಲಿಲ್ಲದಿದ್ದರೆ ನಾನೇನು ಮಾಡುತ್ತಿದ್ದೆನೊ ಕಾಣೆ. ಮುಖ್ಯವಾಗಿ ಬೇಕಾಗಿದ್ದು ಒಂದು ಮನೆ ಮತ್ತು ಕಾರು. ಮನೆಗಾಗಿ ಬಹಳ ಬೇಟೆಯಾಡಿದೆವು. ಕೊನೆಗೆ ಗುಡ್ಡದ ಮೇಲೆ ಕಾಡಿನ ಮಧ್ಯೆ ಇದ್ದ ಒಂದು ಮನೆಸಿಕ್ಕಿತು. ಮನೆಯ ಮಾಲೀಕರು ಕಲ್ಕತ್ತೆಯಲ್ಲಿದ್ದರು. ವಿಕ್ಟರ್ ಅಲ್ಲಿಗೆ ಹೋಗಿ ಬಾಡಿಗೆ ನಿರ್ಧರಿಸಿಕೊಂಡು ಬಂದರು. ಮನೆ ದೊಡ್ಡದಾಗಿದ್ದರಿಂದ ನನ್ನ ವಸ್ತುಸಂಗ್ರಹಾಲಯವನ್ನು ಅಲ್ಲೇ ಮಾಡಿಕೊಳ್ಳಬಹುದಿತ್ತು. ಒಂದು ಕಾರನ್ನು – ಹಳೆಯ ರೋವರ್ ಕಾರು–ಕೊಂಡುಕೊಂಡು ಬಂದರು ವಿಕ್ಟರ್. ಇದೇ ಕಾರಿನಲ್ಲಿ ಲೀಲಾ ಮತ್ತು ಮಕ್ಕಳು ಷಿಲ್ಲಾಂಗಿಗೆ ಬಂದರು.

ಅಂತೂ ಜನವರಿ ಕೊನೆಯ ಹೊತ್ತಿಗೆ ನನಗೆ ಮನೆ, ಕಾರು, ಸಂಸಾರ ಸಿದ್ಧವಾದುವು. ಟೆಲಿಫೋನೂ ಸಿಕ್ಕಿತು. ನಮ್ಮ ಟೆಲಿಫೋನಿನ ನಂಬರು ೪೨೦. ಇಂಡಿಯನ್ ಪೀನಲ್ ಕೋಡಿನಲ್ಲಿ ೪೨೦ನೆಯ ಸೆಕ್ಷನ್ ಮೋಸ, ದಗಾ ಇಂತಹ ಅಪರಾಧಗಳನ್ನು ತಿಳಿಸುತ್ತದೆ. ಷಿಲ್ಲಾಂಗಿನಲ್ಲಿ ಫೋನ್‌ಪಡೆದಿರುವವರ ನಂಬರುಗಳೆಲ್ಲಾ ಮೂರು ಅಂಕಿಯ ನಂಬರುಗಳಿಗೂ ಇಂಡಿಯನ್ ಪೀನಲ್ ಕೋಡಿನ ಒಂದಲ್ಲ ಒಂದು ಸೆಕ್ಷನ್ನಿಗೂ ಸಂಬಂಧ ಇದ್ದೇ ಇತ್ತು. ನಮಗೊಂದು ಸಮಾಧಾನ, ನಮ್ಮ ನಂಬರು ೩೦೨ (ಖೂನಿ) ಅಥವಾ ೩೯೭ (ವ್ಯಭಿಚಾರ) ಇದಕ್ಕೆ ಸಂಬಂಧ

ಪಡಲಿಲ್ಲವಲ್ಲ ಅಂತ! ಒಬ್ಬ ಪಾದ್ರಿ ಹೇಳಿದಂತೆ, ನಮ್ಮ ಕಾರು ನಂಬರು ೬೬೬ ಅಲ್ಲದಿದ್ದುದು ನಮ್ಮ ಅದೃಷ್ಟ.

ಬಹಳ ದಿನದಿಂದ ನಾನು ಇಂಡಿಯಾದ ಪ್ರಜೆಯಾಗಲು ಪ್ರಯತ್ನಪಡುತ್ತಿದ್ದೆ. ಈಗ ಅದು ದೊರೆಯಿತು. ನಾನು ಇಂಡಿಯಾದ ಪ್ರಜೆ ಎಂಬ ಆರ್ಡರನ್ನು ಅಸ್ಸಾಂ ಸರ್ಕಾರ ಹೊರಡಿಸಿತು. ಆದ್ದರಿಂದ ನಾನು ಅಸ್ಸಾಂ ಪ್ರಜೆ ಮಾತ್ರವೆ ? ಎಂಬ ಪ್ರಶ್ನೆ ನನ್ನ ಸ್ನೇಹಿತರನ್ನು ಪೀಡಿಸುತ್ತಿತ್ತು. ನಾನು ಅಸ್ಸಾಂ ಪ್ರಜೆ ಅಷ್ಟೇ ಅಲ್ಲ, ಇಂಡಿಯಾದ ಪ್ರಜೆ. ಪ್ರಪಂಚದ ಪ್ರಜೆಯಾದರೆ ಇನ್ನೂ ಸಂತೋಷವೇ. ಹೇಗೆ ಆಗಲಿ ನನಗೂ ಅಸ್ಸಾಮಿಗೂ ಬಾಂಧವ್ಯ ಹೆಚ್ಚಾಯಿತು. ಒಳ್ಳೆಯವರೂ ಸ್ನೇಹಪರರೂ ಆದ ಅಸ್ಸಾಂ ಜನರನ್ನು ಕಂಡರೆ ನನಗೆ ತುಂಬ ಪ್ರೇಮ. ಅಸ್ಸಾಂ ಮತ್ತು ನೀಫಾ ಎರಡೂ ಸೌಹಾರ್ದದಿಂದ ಬಾಳುವುದು ಎಲ್ಲಾ ದೃಷ್ಟಿಯಿಂದಲೂ ಒಳ್ಳೆಯದು ಎನಿಸಿತು.

ಜನವರಿ ಕೊನೆಯ ಹೊತ್ತಿಗೆ ನಾನು ನನ್ನ ಆಫೀಸು ಕೆಲಸ ಆರಂಭಿಸಿದೆ. ಅಡುಗೆಯವನೊಬ್ಬ ಸಿಕ್ಕಿದ. ನನ್ನ ಸ್ವಂತ ಸ್ಟೆನೋ ಆಫೀಸಿಗೆ ಕುರ್ಚಿ ಟೇಬಲ್ಲುಗಳನ್ನು ತಂದುಹಾಕಿದ. ಆಫೀಸು ಗಡಿಯಾರವೂ ಬಂತು. ಮೊಟ್ಟಮೊದಲನೆಯ ಸಲ ನಾನು ನನ್ನ ಜೀವನದಲ್ಲಿ ಫೈಲುಗಳನ್ನು ನೋಡಲಾರಂಭಿಸಿದೆ.

ರುಸ್ತುಂಜೀ ಅವರನ್ನು ಸಿಕ್ಕಿಂಗೆ ದಿವಾನರನ್ನಾಗಿ ವರ್ಗಾಯಿಸಿ ಅವರ ಸ್ಥಾನದಲ್ಲಿ ಕೆ.ಎಲ್. ಮೆಹ್ತಾ ಅವರನ್ನು ಹಾಕಿದರು. ಸಿಕ್ಕಿಂನಲ್ಲಿ ಐದುವರ್ಷಗಳಿದ್ದು ರುಸ್ತುಂಜೀ ಮತ್ತೆ ಷಿಲ್ಲಾಂಗಿಗೆ ಸಲಹೆಗಾರರಾಗಿ ಬಂದರು. ಅವರು ೧೯೬೩ರವರೆಗೆ ಅದೇ ಕೆಲಸದಲ್ಲಿದ್ದರು. ಕೆ.ಎಲ್. ಮೆಹ್ತಾರವರಿಗೆ ಗಿರಿಜನರ ವಿಷಯ ಮೊದಮೊದಲಿಗೆ ಏನೂ ಗೊತ್ತಿರಲಿಲ್ಲ. ಆದರೆ ಅವರ ಮೇಧಾಶಕ್ತಿ ಮತ್ತು ಶ್ರದ್ಧೆ ಸಮಸ್ಯೆಗಳನ್ನು ಕ್ಷಿಪ್ರವಾಗಿ ಅರ್ಥಮಾಡಿಕೊಳ್ಳುವಂತೆ ಮಾಡಿತು. ನಾವಿಬ್ಬರು ಸೌಹಾರ್ದದಿಂದ ನಡೆದುಕೊಳ್ಳುವುದಕ್ಕೆ ಅವರ ಸೌಜನ್ಯತೆ ಸಹಾಯಮಾಡಿತು. ನನ್ನ “A Philosophy for NEFA' (ನೀಫಾಕ್ಕೊಂದು ತತ್ವ) ಎಂಬ ಗ್ರಂಥ ಬರೆಯುವುದು ಅವರ ಸಹಾಯದಿಂದ ಸಾಧ್ಯವಾಯಿತು. ಅವರ ಪತ್ನಿಯೂ ತುಂಬ ಒಳ್ಳೆಯವರು. ಆಕೆ ಷಿಲ್ಲಾಂಗಿನಲ್ಲಿದ್ದ ಐದು ವರ್ಷಗಳ ಕಾಲ ಯಾರಿಗೂ ಒಂದು ಮಾತು ಅನ್ನಲಿಲ್ಲ. ಆಡಲಿಲ್ಲ. ಆಡಳಿತದ ಅನೇಕ ಸೂತ್ರಗಳನ್ನು ಸೇರಿಸಿ ಹಿಡಿಯುವ ಸಾಮರ್ಥ್ಯ ಆಕೆಯಲ್ಲಿತ್ತು.

೧೯೬೩ರಲ್ಲಿ ರುಸ್ತುಂಜೀ ಭೂತಾನಿಗೆ ಹೋದಮೇಲೆ ಪ್ರಾನ್‌ಲುತ್ರ ಎಂಬುವರು ಅವರ ಸ್ಥಳಕ್ಕೆ ಬಂದರು. ಇವರು ತುಂಬಾ ದಕ್ಷರು. ಎಲ್ಲರಿಂದಲೂ ಕೆಲಸ ತೆಗೆದುಕೊಂಡು ತಮ್ಮ ಕೈ ಕೆಳಗಿನವರ ಬಗ್ಗೆ ಒಳ್ಳೆಯವರಾಗಿದ್ದರು. ಸಿಡ್ನಿ ಸ್ಮಿತ್ತರು ಯಾರನ್ನೊ ವರ್ಣನೆ ಮಾಡುತ್ತಾ 'ಶರಾಯಿ ಹಾಕಿದ ಸ್ಟೀಮ್ ಎಂಜಿನ್' ಎಂದು ಹೇಳಿದ ಮಾತು ನನಗೆ ಇವರನ್ನು ನೋಡಿದಾಗ ಜ್ಞಾಪಕಕ್ಕೆ ಬರುತ್ತದೆ. ಇವರು ಬೌದ್ಧಮತದ ಬಗ್ಗೆ ತುಂಬಾ ಅಭಿಮಾನವಿಟ್ಟಿದ್ದರು. ನನ್ನ ಮನಸ್ಸು ಆ ಕಡೆ ವಾಲಿತ್ತು. ಇವರ ಪತ್ನಿ ಇಂದಿರಾ ಅಷ್ಟೇ ಒಳ್ಳೆಯವರು. ಈಕೆ ಕೊಹೀಮಾದಲ್ಲಿ

ಗೃಹ ಕೈಗಾರಿಕೆಯನ್ನು ಪುನರುಜ್ಜೀವನಗೊಳಿಸಲು ಭಾರಿ ಆಸಕ್ತಿ ವಹಿಸಿದ್ದರು. ದಿಲ್ಲಿಯಲ್ಲಿ ಒಂದು ವಸ್ತುಪ್ರದರ್ಶನ ಏರ್ಪಡಿಸಿದ್ದರು. ಅದರ ಪ್ರಾರಂಭೋತ್ಸವ ಮಾಡುವ ಅದೃಷ್ಟ ನನಗೆ ಸಿಕ್ಕಿತ್ತು. ಆಗ ನನ್ನ ಮಾನ್ಯ ಸ್ನೇಹಿತೆಯಾದ ಕಮಲಾದೇವಿ ಚಟ್ಟೋಪಾಧ್ಯಾಯರು ಅಧ್ಯಕ್ಷತೆ ವಹಿಸಿದ್ದರು.

ಅಸ್ಸಾಮಿನಲ್ಲಿ ನಾನು ಅನೇಕ ಸ್ನೇಹಿತರನ್ನು ಗಳಿಸಿಕೊಂಡೆ. ಅವರಲ್ಲಿ ಡಿ.ಎಂ. ಸೇನ್, ಮೇಜರ್ ಜನರಲ್ ಅಜಿತ್ ಗುರಯ ಮತ್ತು – ಡಿಯಿಂಗ್ ಎರಿಂಗ್ – ಇವರ ಹೆಸರನ್ನು ಹೇಳದೆ ಬಿಡಲಾರೆ.

ನಾನು ಮನೆಗೆ ಹೋದಮೇಲೆ ಕೆಲಸ ಸಾಕಷ್ಟು ಒದಗಿತು. ನನಗೆ ಇದ್ದ ಕೆಲಸದಲ್ಲಿ ಹೊಸದಾಗಿ ನೇಮಿಸಿಕೊಂಡ ಪೊಲಿಟಿಕಲ್ ಆಫೀಸರುಗಳಿಗೆ ಶಿಕ್ಷಣ ಕೊಡುವುದು ಒಂದಾಗಿತ್ತು. ಆದಿವಾಸಿಗಳ ಸಂಪರ್ಕ ಹೇಗೆ ಬೆಳೆಸುವುದು ಎಂಬ ಬಗ್ಗೆ ನಾನು ನಾಲ್ಕು ಭಾಷಣ ಮಾಡಬೇಕಾಗಿತ್ತು. ಅವರೆಲ್ಲ ನಾನು ಹೇಳಿದ್ದನ್ನು ಆಸಕ್ತಿಯಿಂದ ಕೇಳುವಂತೆ ಕಂಡಿತು. ಅವರಲ್ಲಿ ಒಬ್ಬನು ಮಾತ್ರ ನಾನು ಹೇಳಿದ್ದನ್ನು ತುಂಬಾ ಗಮನಿಸಿ ಟಿಪ್ಪಣಿಮಾಡಿ ಕೊಳ್ಳುತ್ತಿದ್ದುದನ್ನು ಕಂಡು ನನಗೆ ಭಾರಿ ಸಮಾಧಾನವಾಯಿತು. ಭಾಷಣಗಳೆಲ್ಲ ಮುಗಿದಮೇಲೆ ಇದನ್ನು ಆತನಿಗೆ ತಿಳಿಸಿದಾಗ ಆತ 'ವಾಸ್ತವವಾಗಿ ತಾನು ಹಾಸ್ಯದ ಪದ್ಯಗಳನ್ನು ಬರೆಯುತ್ತಿದ್ದೆ' ಎಂದುಬಿಟ್ಟ!

ಇದಲ್ಲದೆ ಗುಡ್ಡಗಳ ಮತ್ತು ಬೈಲುಗಳ ಹಬ್ಬ ಆಯಿತು. ಈ ಹಬ್ಬಕ್ಕೆ ಹೆಚ್ಚು ಕಡಮೆ ಎಲ್ಲಾ ಗಿರಿಜನರು ಬಂದು ಸಂತೋಷವಾಗಿ ಕುಣಿದು ಕುಪ್ಪಳಿಸಿದರು. ರಾಜ್ಯಪಾಲರೂ ಅವರೊಡನೆ ನೆಲದಮೇಲೆ ಕುಳಿತುಕೊಂಡು ಹಬ್ಬದಲ್ಲಿ ಭಾಗವಹಿಸಿದರು.

ಜನವರಿ ತಿಂಗಳ ಕೊನೆಯಲ್ಲಿ ಕೆ.ಎಲ್. ಮೆಹ್ತಾ ಮತ್ತು ನಾನು ಎರಡು ದಿನಗಳ ಕಾಲ ವಿಮಾನದಲ್ಲಿ ಹಾರಾಡಿ ನೀಫಾ ನೋಡಿಕೊಂಡು ಬಂದೆವು. ನಮ್ಮ ವಿಮಾನದಲ್ಲಿ ಒಂದು ಹಂದಿಯೂ ಇತ್ತು. ಏಕೆಂದರೆ ಸಾಮಾನು ಸಾಗಿಸುವುದಕ್ಕೂ ಈ ವಿಮಾನಗಳನ್ನು ಉಪಯೋಗಿಸುತ್ತಿದ್ದರು. ವಿಮಾನದಲ್ಲಿ ನೀಫಾ ಮೇಲೆ ಹಾರಾಡುವುದೆಂದರೆ ನನಗೆ ಭಾರಿ ಹೆದರಿಕೆಯಾಗುತ್ತಿತ್ತು. ಮೊಟ್ಟಮೊದಲು ನಾನು ವೈಕೌಂಟ್ ಒಂದರಲ್ಲಿ ಹೋದೆ. ಅಕಸ್ಮಾತ್ ಸಂಭವಿಸುವ ಸಾವಿನ ಸಮಸ್ಯೆಗಳ ಬಗ್ಗೆ ಪುಸ್ತಕ ಓದುತ್ತಾ ಸೀಟಿನಲ್ಲಿ ಕುಳಿತಿದ್ದೆ. ಓದುವ ಕನ್ನಡಕ ಹಾಕಿಕೊಂಡಿದ್ದೆ. ಸ್ವಲ್ಪ ದೂರದಲ್ಲಿ ಏನಿದೆ ಎಂಬುದು ನನಗೆ ಗೊತ್ತಾಗುತ್ತಿರಲಿಲ್ಲ. ಅರ್ಧ ಗಂಟೆ ವಿಮಾನ ಹಾರಿದ ಮೇಲೆ ಕಿತ್ತಳೆ ಬಣ್ಣದ ದೀಪ ಹಾಕಿದಂತೆ ಕಂಡಿತು. ಆ ದೀಪ ಹಾಕಿದರೆ ಸೀಟಿನ ಬೆಲ್ಟನ್ನು ಬಿಗಿದುಕೊಳ್ಳಬೇಕೆಂದು ಅರ್ಥ. ಹಾಗೆ ಮಾಡಿ ಸೀಟಿನಮೇಲೆ ಹಿಂದಕ್ಕೆ ಒರಗಿಕೊಂಡೆ. ಕೊಂಚ ಹೊತ್ತಿನಲ್ಲಿ ದೀಪ ಆರಿಹೋಯಿತು. 'ಎಂಥ ದಕ್ಷ ನಮ್ಮ ಚಾಲಕ! ಸದ್ಯ ಅಪಾಯ ತಪ್ಪಿಸಿದ!' ಎಂದು ನನಗೆ ನಾನೇ ಅಂದುಕೊಂಡೆ. ಹತ್ತು ನಿಮಿಷ ಆಗಿಲ್ಲ. ಮತ್ತೆ ದೀಪ ಹತ್ತಿಕೊಂಡಿತು. ಮತ್ತೆ ಬೆಲ್ಟ್

ಬಿಗಿದುಕೊಂಡು ಸೀಟು ಒರಗಿ ನನ್ನ ಹೆಂಡತಿಮಕ್ಕಳ ಗತಿ ಏನಪ್ಪ ಎಂದು ಆಲೋಚನೆಮಾಡುತ್ತಿದ್ದೆ. ಕೆಲವು ನಿಮಿಷಗಳಲ್ಲಿ ದೀಪ ಮತ್ತೆ ಆರಿತು. ಅಂತೂ ಎಲ್ಲಾ ಸರಿಯಾಯಿತು ಎಂದುಕೊಂಡು ಓದುವ ಕನ್ನಡಕ ತೆಗೆದು ದೂರಕ್ಕೆ ನೋಡುವ ಕನ್ನಡಕ ಹಾಕಿಕೊಂಡೆ. ಕೆಲವು ನಿಮಿಷಗಳನಂತರ ದೀಪ ಮತ್ತೆ ಹತ್ತಿಕೊಂಡಿತು. ಕಿತ್ತಳೆ ಹಣ್ಣಿನ ಬಣ್ಣದ ದೀಪ ಹತ್ತಿದ ಕಡೆ ಬರೆದಿದ್ದುದು Engaged (ಒಳಗಿದ್ದಾರೆ) ಎಂದು.

ಅಲ್ಲಿಂದೀಚೆಗೆ ನಾನು ನನ್ನ ಕಾಲವನ್ನು ಪ್ರವಾಸ, ಸಂಶೋಧನೆ ಮತ್ತು ನೀತಿಯ ನಿರ್ದೇಶನ (Evolution of policy) ಈ ಬಗ್ಗೆ ಸಮನಾಗಿ ಹಂಚಿಕೊಂಡು ಆ ರೀತಿ ಮಾಡುತ್ತ ಬಂದೆ. ಸಾಹಿತ್ಯ ಚಟುವಟಿಕೆಯಲ್ಲಿ ತೀರ ಹೊಸರೀತಿ ಇರುವುದು ಕಾಣಿಸಿತು. ಅದ್ಯಾವುದೆಂದರೆ, ಫೈಲುಗಳ ಮೇಲೆ ನೋಟು ಮಾಡುವುದು. ಇದರಲ್ಲಿಯೂ ಸ್ವಾರಸ್ಯವಿದೆ. ಆದರೆ ಹುಟ್ಟು ಬರಹಗಾರನಿಗೆ ಇದರಿಂದ ತೊಂದರೆ. ಒಬ್ಬಿಬ್ಬರಿಗಾಗಿ ಮಾತ್ರ ಬರೆಯುವುದು ಆಗುತ್ತಿರಲಿಲ್ಲ. ಅದರಲ್ಲಿಯೂ ನೋಟು 'ಗುಟ್ಟು' ಅಥವಾ 'ಒಳಗುಟ್ಟು' ಆಗಿರಬೇಕಾದಾಗ ಇನ್ನೂ ಕಷ್ಟವಾಗುತ್ತಿತ್ತು.

ನನಗೆ ತುಂಬಾ ಹಿಡಿಸುತ್ತಿದ್ದುದು ಪ್ರವಾಸಮಾಡುವ ಕೆಲಸ. ಅದನ್ನು ಆಮೇಲೆ ಹೇಳುತ್ತೇನೆ. ಸಂಶೋಧನೆ ಮಾಡಲು ಈ ಮೊದಲಿನಷ್ಟು ವೇಳೆ ಸಿಕ್ಕುತ್ತಿರಲಿಲ್ಲ. ಆದರೂ ಮೂರರಿಂದ ಆರು ವಾರಗಳ ತನಕ ಸಂಚಾರ ಮಾಡಿ ಆ ವೇಳೆಯಲ್ಲಿ ಸಂಗ್ರಹಿಸಿದ ವಿಷಯಗಳ ಬಗ್ಗೆ ಆಡಳಿತಾಧಿಕಾರಿಗೆ ವರದಿಗಳನ್ನು ಕಳುಹಿಸುವ ಕೆಲಸ ಮಾಡಿದೆ.

ನಾನು ರಾಜ್ಯಪಾಲರ ಸಲಹೆಯಂತೆ ಬರೆದ ಮೊದಲ ಪುಸ್ತಕ ಗಾಂಧೀಜಿಯರವನ್ನು ಕುರಿತದ್ದು. ಅದನ್ನು ಗಿರಿಜನರಿಗಾಗಿ ಬರೆದೆ. ಹಲವಾರು ವರ್ಷಗಳು ನನ್ನ ಸಂಚಾರ ಕಾಲದಲ್ಲಿ ಜನಪದ ಕಥೆಗಳನ್ನು ಸಂಗ್ರಹಿಸಿದೆ. ಸಾಕಷ್ಟು ಸಂಗ್ರಹಿಸಿದ ಮೇಲೆ Myths of NEFA (ನೀಫಾದ ಕಟ್ಟುಕಥೆಗಳು) ಎಂಬ ಪುಸ್ತಕ ಪ್ರಕಟಿಸಿದೆ. ಇದರಲ್ಲಿ ನಾನೂರು ಸಣ್ಣ ಕತೆಗಳಿವೆ. *ಹಳೆಯ ಸಾಹಿತ್ಯದಲ್ಲಿ ನೀಫಾ ಬಗ್ಗೆ ಏನಿದೆ ಎಂಬುದನ್ನು ತೆಗೆದು India's North-East Frontier in the 19th Centrury (೧೯ನೆಯ ಶತಮಾನದಲ್ಲಿ ಇಂಡಿಯಾದ ಈಶಾನ್ಯ) ಎಂಬ ಒಂದು ಪುಸ್ತಕ ಪ್ರಕಟಿಸಿದೆ. ೧೮೦೦ರಿಂದ ೧೯೦೦ರ ವರೆಗೆ ಪ್ರವಾಸಿಗಳು, ಮಿಷನರಿಗಳು ಮತ್ತು ಆಡಳಿತಗಾರರು ಹೇಳಿದ ವಿನೋದ ಹಾಗೂ ಸ್ವಾರಸ್ಯವಾದ ವಿಚಾರಗಳು ಇದರಲ್ಲಿವೆ. ಓದುಗರಿಗೆ ತುಂಬಾ ಹಿಡಿಸಿತು ಈ ಗ್ರಂಥ. ಈಚೆಗೆ ಇಂಥದೇ ಒಂದು ಸಂಗ್ರಹಮಾಡಿದೆ. The Nagas of 19th Centurey (೧೯ನೆಯ ಶತಮಾನದ

* ಎಲ್ವಿನರು ಅವರಿವರು ಹೇಳಿದ್ದನ್ನು ಕಣ್ಣುಮುಚ್ಚಿಕೊಂಡು ಪ್ರಕಟಿಸುತ್ತಿರಲಿಲ್ಲ. ಆದಿವಾಸಗಳ ಹಟ್ಟಿಗಳಿಗೆ ಅವರೇ ಹೋಗಿ ಗಂಟೆಗಟ್ಟಲೆ ಕಥೆಗಳನ್ನು ಕೇಳಿ ಸರಿಯಾದುದನ್ನು ಮಾತ್ರ ಒಪ್ಪಿಕೊಳ್ಳುತ್ತಿದ್ದರು. ಅವರ ಅಭಿಪ್ರಾಯದಲ್ಲಿ 'Folk songs and tales which are oral literatures are of

ನಾಗರು) ಎಂಬ ಗ್ರಂಥ ಇನ್ನೇನು ಪ್ರಕಟವಾಗುವುದರಲ್ಲಿದೆ. ಗಿರಿಜನರ ಕಲೆಯ ಬಗ್ಗೆ ಇನ್ನೊಂದು ಗ್ರಂಥ ಬರೆದೆ. ಅದಕ್ಕೆ ಹೇರಳವಾದ ಸಾಮಗ್ರಿ ನೀಫಾದಲ್ಲಿ ಸಿಕ್ಕಿತು. The Art of NEFA (ನೀಫಾದ ಕಲೆ) ಎಂಬ ಪುಸ್ತಕ ಪ್ರಕಟವಾಯಿತು. ಇದು ಸೊಗಸಾದ ಪುಸ್ತಕ. ಸರ್ಕಾರವೇ ಭಾರಿ ಹಣ ಖರ್ಚುಮಾಡಿ ಇದನ್ನು ಪ್ರಕಟಿಸಿತು.

ಬಹಳ ಜನ ಓದಿದ ಪುಸ್ತಕ ಎಂದರೆ ನನ್ನ A Philosophy for NEFA ಎಂಬ ಪುಸ್ತಕ. ಇದು ಮೂರನೆಯ ಮುದ್ರಣ ಕಂಡಿದೆ. ಆಮೇಲೆ ನಾಗಾಲ್ಯಾಂಡ್ ಕುರಿತು ನೂರು ಪೇಜಿನ ಸಣ್ಣ ಪುಸ್ತಕ ಬರೆದೆ. ಇದು ನಾಗಾಲ್ಯಾಂಡಿನ ಇತಿಹಾಸ ಹಾಗೂ ರಾಜಕೀಯ ಕುರಿತದ್ದು. ಪ್ರಕಟಣೆಯ ದೃಷ್ಟಿಯಿಂದ ಇದಕ್ಕೆ ರಾಷ್ಟ್ರಾಧ್ಯಕ್ಷರ ಬಹುಮಾನ ಬಂದಿತು.

ಕಾಲ ಕಳೆದಂತೆ ನನ್ನ ಕೆಲಸದ ಕ್ಷೇತ್ರ ವಿಶಾಲವಾಗುತ್ತ ಬಂದಿತು. ಅಸ್ಸಾಂ ರಾಜ್ಯದಲ್ಲಿ ಆದಿವಾಸಿಗಳ ಸಂಶೋಧನಾಲಯವನ್ನು ಸ್ಥಾಪಿಸುವುದರಲ್ಲಿ ನಾನು

---

immense value as they reflect the power of imagination of the narrators veering alternately from reality to fantasy. Truely, he felt, folk tales are like a mirror through which one could find gamut of their entire culture.

His association with the tribal people in whom he found truth and beauty, gradually drew him away from the traditional Christian path to the field of Buddhism. He found in its philosophy a profound truth that by building up of inner strength, equipping the soul like a well guarded frontier fort by gentleness, compassion and love that extend to all world, makes it possible for a man to tread the path of Liberation.

It was Elwin who could see beneath the surface and reveal to the world the poetry of the tribal and their lives and culture. What he stressed always was that tribal society had its own inbuilt sanctions which if respected and adhered to, will keep them on the clear and steady path.

Those who critisised Elwin suggest that if given the chance and opportunity, tribals are as corrupt as anybody else. But Elwin had firm conviction that the sanctions of the tribal's own society offered less chance and opportunity for corruption and that it is the abrupt break-down of such sanction brought about by an alien system of governce and an alien standard of values that has resulted in the evils that are seen to be multiplying all round. What he wanted was that the change should be affected at a pace that allows for a smooth adjustment that is not harmful to society's basic structure. This is what happened in the case of a large tribe like Gond. They lost many of their once rich culture along with their dialects in which they spoke for hundreds of years. It was natural for a humanist like Dr. Elwin to ensure that no such misfortune befall the tribal people of NEFA. (The Last Days, from the book Verrier Elwin, The Man with a Mission by Tarun Bhatta Chargi- 1999)

ದೊಡ್ಡ ಪಾತ್ರ ವಹಿಸಿದೆ. ಮಣಿಪುರ ಮತ್ತು ತ್ರಿಪುರಗಳಿಗೆ ನನ್ನನ್ನು ಆದಿವಾಸಿಗಳ ಗೌರವ ಸಲಹೆಗಾರನಾಗಿ ನೇಮಿಸಿದರು. ಇವೆಲ್ಲ ಕಾರಣಗಳಿಂದ ನನ್ನ ಮಿತ್ರ ಮಂಡಲಿ ವಿಶಾಲವಾಯಿತು; ದೊಡ್ಡ ದೊಡ್ಡವರ ಪರಿಚಯವಾಯಿತು.

೧೯೫೯ರಲ್ಲಿ ಗೃಹಮಂತ್ರಿ ಪಂಡಿತ್ ಜಿ.ಬಿ. ಪಂತರು ನನ್ನನ್ನು ಒಂದು ಸಮಿತಿಯ ಅಧ್ಯಕ್ಷನನ್ನಾಗಿ ನೇಮಿಸಿದರು. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಗಿರಿಜನರಿರುವ ಸಿಡಿ. ಬ್ಲಾಕುಗಳಿಗೆ (ಸಾಮೂಹಿಕ ಅಭಿವೃದ್ಧಿ ಕ್ಷೇತ್ರಗಳಿಗೆ) ಒಂದೊಂದು ಬ್ಲಾಕಿಗೆ ಇಪ್ಪತ್ತೈದು ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದರು. ಇದು ಸರಿಯಾಗಿ ಖರ್ಚಾಗುತ್ತಿಲ್ಲ. ಕೆಲವು ವೇಳೆ ಖರ್ಚೇ ಆಗುತ್ತಿಲ್ಲ ಎಂಬ ಟೀಕೆಗಳಿದ್ದುವು. ಇದನ್ನೆಲ್ಲಾ ನೋಡಿ ವರದಿ ಮಾಡಲು ಸಮಿತಿ ನೇಮಕವಾಯ್ತು. ಆದಿವಾಸಿಗಳಿರುವ ಪ್ರದೇಶಗಳಿಗೆಲ್ಲ ಹೋಗಬೇಕಾಗಿಬಂದುದರಿಂದ ನಾನು ಮೊಟ್ಟಮೊದಲನೆಯ ಸಲ ಆಂಧ್ರಪ್ರದೇಶ, ಬೊಂಬಾಯಿಯ ಚಾಂದಾ ಮತ್ತು ಮೊಕದ ತಲರಸಿ, ಅಸ್ಸಾಮಿನ ಗುಡ್ಡಗಾಡುಗಳು ಮತ್ತು ರಾಜಾಸ್ಥಾನಗಳಿಗೆ ಹೋಗಿಬಂದೆ. ವರದಿ ಸಿದ್ಧಮಾಡುವುದಕ್ಕೆ ಸರಿಯಾದ ಸ್ಥಳ ದೆಹಲಿಯೆಂದು ತೀರ್ಮಾನಮಾಡಿದೆ. ಸೆಕ್ರೆಟೇರಿಯೇಟ್‌ನಲ್ಲಿ ನನಗೊಂದು ಸೊಗಸಾದ ಕೋಣೆ ಸಿಕ್ಕಿತು. ಲೀಲಾ ಮತ್ತು ಮಕ್ಕಳನ್ನು ಕರೆಸಿಕೊಂಡೆ. ಖೇಮಲಾಲ್‌ರತಿಯವರ ಮನೆಯಲ್ಲಿ ನಾವೆಲ್ಲ ಇಳಿದುಕೊಂಡೆವು. ಇವರು ನೀಫಾ ಆಡಳಿತದ ಹಣಕಾಸಿನ ಸಲಹೆಗಾರರಾಗಿದ್ದರು. ಭಾರಿ ಒಳ್ಳೆ ಮನುಷ್ಯರು. ನನ್ನ ಬಾಳಿನ ಮೇಲೆ ಮಹತ್ಪರಿಣಾಮವನ್ನು ಬೀರಿದ್ದಾರೆ. ನಮ್ಮಿಬ್ಬರ ಮಕ್ಕಳು ಮರಿಗಳಿಗೆ ಬಹು ಪ್ರೀತಿ ವಿಶ್ವಾಸ. ಲೀಲಾ ಅಂತು ಶ್ರೀಮತಿ ರತಿ ಅವರ ಅಚ್ಚುಮೆಚ್ಚಿನ ಗೆಳತಿ.

ದೆಹಲಿಯಲ್ಲಿ ಕೆಲಸ ಮಾಡುತ್ತಿರುವಾಗ ನನ್ನ ವರದಿಯಲ್ಲಿ ಸೇರಿಸಲಿಕ್ಕೆ ಷೇಕ್ಸ್‌ಪಿಯರ್ ಅವರ ಕಿಂಗ್ ಲಿಯರ್ ಎಂಬ ನಾಟಕದಿಂದ ಒಂದು ಮಾತು ಬೇಕಾಗಿತ್ತು. ಸೆಕ್ರೆಟೇರಿಯಟ್ ಪುಸ್ತಕ ಭಂಡಾರಕ್ಕೆ ನನ್ನ ಸಹಾಯಕರೊಬ್ಬರನ್ನು ಕಳುಹಿಸಿಕೊಟ್ಟೆ. ಆತ ಹೋಗಿ ಆ ಪುಸ್ತಕ ಕೇಳಿದಾಗ ಪುಸ್ತಕ ಭಂಡಾರಿ ಕಠಿಣವಾಗಿ ಅಂದನಂತೆ, 'ಗೃಹಸಚಿವ ಶಾಖೆಗೂ ಷೇಕ್ಸ್‌ಪಿಯರನಿಗೂ ಕಚೇರಿ ವೇಳೆಯಲ್ಲಿ ಓದಲಿಕ್ಕೆ ಏನು ಸಂಬಂಧ ? ಪುಸ್ತಕ ಕೊಡೋದಿಲ್ಲ' ಎಂದು. 'ಡಾ॥ ಎಲ್ವಿನರಿಗೆ ಬೇಕು' ಎಂದಾಗ ಆತ, 'ಓಹೋ, ಡಾ॥ ಎಲ್ವಿನರೇ ! ಅವರು ಅಂಥ ಪುಸ್ತಕಗಳನ್ನು ಓದುತ್ತಾರೆ ಎಂದು ಗೊತ್ತು. ಒಳ್ಳೇದು, ತಕ್ಕೊಂಡುಹೋಗಿ' ಎಂದು ಹೇಳಿ ಪುಸ್ತಕ ತೆಗೆದುಕೊಟ್ಟನಂತೆ.

ವಿಷಯಗಳನ್ನು ಬರೆಯುವುದು ಹೇಗೆ ಎಂಬ ಸಮಸ್ಯೆ ಹುಟ್ಟಿಕೊಂಡಿತು. ಸಾಮೂಹಿಕ ಅಭಿವೃದ್ಧಿ ಇಲಾಖೆಯಲ್ಲಿ ಕೆಲಸಮಾಡುವ ಜನರಿಗೆ ಆಸಕ್ತಿ ಬುದ್ಧಿ ಎರಡೂ ಇವೆ. ಆದರೆ ಒಂದೇ ಒಂದು ತಾಪತ್ರಯವೆಂದರೆ ಅವರು ಏನು ಹೇಳುತ್ತಾರೆ ಎನ್ನುವುದು ಅರ್ಥವಾಗುವುದಿಲ್ಲ. ಇದಕ್ಕಿಂತ ಹೆಚ್ಚು ತಾಪತ್ರಯ ವಾದುದೆಂದರೆ, ನಾನು ಹೇಳುವುದು ಅವರಿಗೆ ಅರ್ಥವಾಗದಿರುವುದು. ಉದಾಹರಣೆಗೆ,

'ಹೇಗೆ ಮಾಡ್ತೀರಿ ಅದನ್ನು?' ಎಂದು ನಾನು ಕೇಳಬಹುದಾದ್ದನ್ನು ಅವರು, `What is your methodological approach ?' ಎಂದು ಕೇಳುತ್ತಾರೆ. ಒಮ್ಮೆ ಒಂದು ಫೈಲಿನ ಮೇಲೆ ನಾನು, 'When tribal girls go to the towns, they sometimes becomes tart' (ಗಿರಿಜನ ಹುಡುಗಿಯರು ಪಟ್ಟಣಗಳಿಗೆ ಹೋದಾಗ ಅವರು ಕೆಲವು ವೇಳೆ ಕೆಟ್ಟ ಚಾಳಿ ಕಲಿಯುತ್ತಾರೆ) ಎಂದು ಬರೆದೆ. ಟಾರ್ಟ್ ಎಂಬ ಪದ ತಾಪತ್ರಯಕ್ಕಿಟ್ಟುಕೊಂಡಿತು. ಸರ್ಕಾರಿ ಕಾಗದ ಪತ್ರಗಳಲ್ಲಿ ಆ ಪದ ಉಪಯೋಗಿಸಿದ್ದಕ್ಕಾಗಿ ನನ್ನನ್ನು ದೊಡ್ಡವರೊಬ್ಬರು ತರಾಟೆಗೆ ತೆಗೆದುಕೊಂಡರು. ನಾನು ಬರೆದ ವಾಕ್ಯವನ್ನು ತಿದ್ದಿ ಹೀಗೆ ಬರೆಯಬೇಕೆಂದು ಹೇಳಿದರು : 'When females belonging to the Seheduled Tribes become occultured to the Socio-Economic conditions of urban society, they become phychologically maladjusted and adopt anti-social practices.'

ಇದೇ ಆಗಬೇಕಾಗಿರುವುದು ! ಇದನ್ನೇ ಜನ ಅರ್ಥಮಾಡಿಕೊಳ್ಳುವುದು !!

ಕೊನೆಗೆ ನನ್ನ ಇಂಗ್ಲಿಷ್ ಭಾಷೆಯನ್ನು ಹತೋಟಿಗೆ ತಂದು ೫೫೦ ಪುಟದ ವರದಿ ಸಿದ್ಧಪಡಿಸಿದೆ. ಸದಸ್ಯರೆಲ್ಲರೂ ರುಜು ಹಾಕಿದರು. ೧೯೬೦ನೆಯ ಮಾರ್ಚ್ ತಿಂಗಳಲ್ಲಿ ನಾನು ವರದಿಯನ್ನು ಪಂಡಿತ ಜಿ.ಬಿ. ಪಂತರಿಗೆ ಒಪ್ಪಿಸಿದೆ. ನಮ್ಮ ವರದಿ ಗಿರಿಜನರ ಅಭಿವೃದ್ಧಿಯ ನಾನಾ ಮುಖಗಳನ್ನು ಕುರಿತು ಸಲಹೆ ಮಾಡಿತು. ಸಿಬ್ಬಂದಿ, ಅದರ ತರಬೇತಿ, ಭೂಮಿ, ಕಾಡು ಮತ್ತು ಬೇಸಾಯ, ಅದರಲ್ಲಿಯೂ ಬಹು ಚರ್ಚಾಸ್ಪದವಾದ ಸ್ಥಳಾಂತರ ಬೇಸಾಯ ಕ್ರಮ, ದನಕರು ಸಾಕುವಿಕೆ, ಸಂಚಾರ ವ್ಯವಸ್ಥೆ, ಆರೋಗ್ಯ, ವಿದ್ಯಾಭ್ಯಾಸ, ಸ್ತ್ರೀಯರಿಗೆ ಸಂಬಂಧಪಟ್ಟ ಕಾರ್ಯಕ್ರಮ, ಕಲೆ ಮತ್ತು ಕೈಗಾರಿಕೆ, ಗೃಹ ನಿರ್ಮಾಣ ಸಹಕಾರ ಮತ್ತು ಸಂಶೋಧನೆ – ಇವುಗಳ ಬಗ್ಗೆ ಸಮಿತಿ ಸಲಹೆ ಮಾಡಿತು. ಇಪ್ಪತ್ತು ಬ್ಲಾಕುಗಳ ವಿವರವಾದ ಲೆಕ್ಕಪತ್ರಗಳನ್ನೂ ಒದಗಿಸಿದೆವು.

ಈ ವರದಿಯಲ್ಲೆಲ್ಲಾ ಪೀಠಿಕಾರೂಪವಾಗಿ ಬರೆದ The Fundamentals to an Approach to the Tribes (ಗಿರಿಜನರನ್ನು ಒಲಿಸಿಕೊಳ್ಳಲು ಬೇಕಾದ ಮೂಲತತ್ವಗಳು) ಎಂಬ ಪ್ರಕರಣ ಬಹಳ ಮುಖ್ಯವೆಂದು ನನ್ನ ಭಾವನೆ. ಏಕೆಂದರೆ ನಾವು ಅವರಿಗೆ ಏನು ಮಾಡುತ್ತೇವೆ ಎನ್ನುವುದಕ್ಕಿಂತ, ಅಥವಾ ಅವರಿಗಾಗಿ ಎಷ್ಟು ಹಣ ವೆಚ್ಚಮಾಡುತ್ತೇವೆ ಎನ್ನುವುದಕ್ಕಿಂತ, ಅದನ್ನು ಹೇಗೆ ಮಾಡುತ್ತೇವೆ ಎನ್ನುವುದು ಮುಖ್ಯ. ಅವರ ಬಗ್ಗೆ ತಾಳುವ ಮನೋಭಾವನೆ ಬಹಳ ಮುಖ್ಯ. ನಾವು ಅವರನ್ನು ನಮ್ಮ ದೃಷ್ಟಿಕೋನದಿಂದ ನೋಡದೆ ಅವರ ದೃಷ್ಟಿಕೋನದಿಂದ ನೋಡಬೇಕು. ಅವರ ಜೀವನದ ಆಗುಹೋಗು ಯಾವುದರಿಂದ ಎಂಬುದನ್ನು ಗಮನಿಸಬೇಕು. ಅವರನ್ನು ಶೋಷಿಸುತ್ತಿರುವ ಜನರಿಂದ ಅವರನ್ನು ಉಳಿಸಬೇಕು. ಅವರು ಯಾವ ಕೆಲಸವನ್ನೇ ಅಗಲಿ ಯಾವ ರೀತಿ ಮಾಡುತ್ತಾರೆಂಬುದನ್ನು ತಿಳಿದು ನಾವು ಅದನ್ನು ಒಪ್ಪಿ ಗೌರವಿಸಬೇಕು. ಅದು ಅವರ ಮಾರ್ಗ ಎಂಬುದರಿಂದ ಅದಕ್ಕೆ ನಾವು ಬೆಲೆ

ಕೊಡಬೇಕೇ ಹೊರತು, ಅದು ಹಳೆಯದು ಅಥವಾ ನೋಡಲು ಸೊಗಸಾಗಿದೆ ಎಂಬ ಕಾರಣದಿಂದಲ್ಲ. ಇಂಡಿಯಾದಲ್ಲಿ ಬೇರೆಯವರಿಗೆ ಎಷ್ಟು ಹಕ್ಕಿದೆಯೋ ಅಷ್ಟೇ ಹಕ್ಕು ಗಿರಿಜನರಿಗೂ ಅವರ ಸಂಸ್ಕೃತಿ ಹಾಗೂ ಮತಧರ್ಮದ ಬಗ್ಗೆಯೂ ಇದೆ. ಈ ಕಾರಣ ನಾವು ಅವರ ಭಾಷೆಯನ್ನು – ಮಾತಾಡುವ ಭಾಷೆ ಅಷ್ಟೇ ಅಲ್ಲ, ಅವರ ಹೃದಯದ ಭಾಷೆಯನ್ನು – ಅರ್ಥಮಾಡಿಕೊಳ್ಳಬೇಕು. ತಮ್ಮ ಹಿಂದಿನದರ ಬಗ್ಗೆ ಅವರು ಅಸಹ್ಯಪಡುವಂತೆ ಮಾಡಿ ಅದನ್ನು ಬಿಡುವಂತೆ ಮಾಡಬಾರದು. ಹಿಂದಿನದರ ಮೇಲೆ ಹೊಸದನ್ನು ಕಟ್ಟುವುದಕ್ಕೆ ಪ್ರೋತ್ಸಾಹಕೊಟ್ಟು, ಅದು ತನ್ನಷ್ಟಕ್ಕೆ ತಾನೇ ಬೆಳೆಯುವಂತೆ ಮಾಡಬೇಕು. ಹೀಗೆಂದ ಮಾತ್ರಕ್ಕೆ ಇದ್ದುದನ್ನು ಮಾತ್ರ ಉಳಿಸಿಕೊಂಡು ಬರುವುದಲ್ಲ. ಅಭಿವೃದ್ಧಿ ಆಗುತ್ತಲೇ ಇರಬೇಕು. ಬದಲಾವಣೆ ಆಗುತ್ತಲೇ ಇರಬೇಕು. ಈ ಬದಲಾವಣೆ ಕಾಲಾಂತರದಲ್ಲಿ ನಾವು ನಂಬಲು ಸಾಧ್ಯವಿಲ್ಲದಷ್ಟು ಶ್ರೀಮಂತಿಕೆಯನ್ನು ದೊರಕಿಸಿಕೊಡುತ್ತದೆ. ಇಂಡಿಯಾದ ಜೀವನ ಹಾಗೂ ಸಂಸ್ಕೃತಿಯ ಮಹಾನದಿಯಲ್ಲಿ ಅದು ಮಿಲನವಾಗಿಯೇ ಆಗುತ್ತದೆ.

ಗಿರಿಜನರ ಬ್ಲಾಕುಗಳಿಗಾಗಿಯೇ ಮೂವತ್ತು ಕೋಟಿ ರೂಪಾಯಿಗಳ ಯೋಜನೆಯನ್ನು ಸರ್ಕಾರದ ಮುಂದಿಟ್ಟೆವು. ಆದರೆ ಇಷ್ಟೊಂದು ಹಣ ಖರ್ಚು ಮಾಡಿದಲ್ಲಿ ಅವರ ಅಭಿವೃದ್ಧಿ ಅತಿ ವೇಗವಾಗಿಬಿಡುವುದಲ್ಲದೆ, ಯೋಜನೆ ಬಹಳ ಸಿಕ್ಕಾಗಿಬಿಡುತ್ತದೆ ಮತ್ತು ಅನನುಭವಿ ಸಿಬ್ಬಂದಿಗಳ ನೇಮಕವಾಗಿಬಿಡುತ್ತದೆ – ಎಂಬ ಅಭಿಪ್ರಾಯವನ್ನು ಕೆಲವರು ವ್ಯಕ್ತಪಡಿಸಿದರು. ಆದರೆ ಹಾಗೆ ಆಗಬೇಕಾಗಿಲ್ಲ. 'ನಿಧಾನವಾಗಿ ತ್ವರೆಮಾಡಬೇಕು' (Hasten slowly) ಎಂಬ ಮಾತನ್ನು ಒಪ್ಪೋಣ : ಎಚ್ಚರಿಕೆಯಿಂದ ಮುಂದುವರಿಯೋಣ; ಹೊಸ ಪ್ರಪಂಚಕ್ಕೆ ಹೊಂದಿಕೊಳ್ಳುವುದಕ್ಕೆ ಆದಿವಾಸಿಗಳಿಗೆ ಒಂದಿಷ್ಟು ಪುರಸೊತ್ತು ಕೊಡೋಣ – ಇವೆಲ್ಲಾ ಒಪ್ಪುವ ಮಾತುಗಳೇ. ನಾವೇನು ಮಾಡಿದರೂ ಆ ಪ್ರಪಂಚ ಅವರ ಮೇಲೆ ಅವಿತುಕೊಳ್ಳುತ್ತದೆ. ಅದಕ್ಕೆ ಅವರು ಸಿದ್ಧರಾಗಬೇಕು. ಹಸಿವು, ಕಾಯಿಲೆ, ಶೋಷಣೆ, ಅಜ್ಞಾನ, ಒಂಟಿತನ – ಇವಕ್ಕೆ ಕೂಡಲೇ ಔಷಧಿ ಕೊಡಬೇಕು. ಅದನ್ನು ನಿಧಾನಮಾಡುವಂತಿಲ್ಲ. ಪ್ರತಿಯೊಬ್ಬನೂ ಅವನ ಸೋದರನ ಸಂರಕ್ಷಕ. ಅವರನ್ನು ನಾವು ಬಹಳ ದಿನ ಕಡೆಗಣಿಸಿದ್ದಕ್ಕಾಗಿ ಮತ್ತು ನಾವು ಅವರ ಬಗ್ಗೆ ತಪ್ಪು ಭಾವನೆ ಹೊಂದಿದ್ದಕ್ಕಾಗಿ ನಾವೆಲ್ಲಾ ಪ್ರಾಯಶ್ಚಿತ್ತಮಾಡಿಕೊಳ್ಳಲೇಬೇಕು. ಮಾನವ ಕುಲವೆಲ್ಲಾ ಒಂದು : ಗಿರಿಜನರು ಆ ಕುಲದ ಒಂದು ಅಮೂಲ್ಯ ಭಾಗ.

ನಮ್ಮ ಈ ವರದಿಗೆ ಒಳ್ಳೆಯ ಸ್ವಾಗತ ದೊರೆಯಿತು. ಅನೇಕ ಸಭೆ ಸಮ್ಮೇಳನಗಳಲ್ಲಿ ಇದನ್ನು ಚರ್ಚಿಸಿದರು. ಇಂಡಿಯಾ ಸರ್ಕಾರ ನಾವು ಮಾಡಿದ ಆಡಳಿತಕ್ಕೆ ಸಂಬಂಧಪಟ್ಟ ಕೆಲವು ಸಲಹೆಗಳನ್ನು ಒಪ್ಪಲಿಲ್ಲ. ಅದು ಬಿಟ್ಟರೆ ಹೆಚ್ಚು ಕಡಮೆ ಉಳಿದ ಸಲಹೆಗಳನ್ನೆಲ್ಲಾ ಒಪ್ಪಿತು. ಗಿರಿಜನರ ಅಭಿವೃದ್ಧಿ ಬಗ್ಗೆ ನಮ್ಮ ಮೂಲ ಅಭಿಪ್ರಾಯಗಳೇನಿದ್ದುವೋ ಅವಕ್ಕೆ ಸರ್ವಸಾಮಾನ್ಯ ಮನ್ನಣೆ ದೊರೆಯಿತು.

ಈ ಸಮಿತಿಯ ಕೆಲಸ ನನ್ನನ್ನು ಬಹಳ ದಿನ ನೀಫಾದಿಂದ ದೂರಮಾಡಿಬಿಟ್ಟಿತು. ನನ್ನ ಕೆಲಸಕ್ಕೆ ಹಿಂದಿರುಗಬೇಕೆನ್ನುವಷ್ಟರಲ್ಲಿ, ಅಂದರೆ ೧೯೬೦ನೆಯ ಏಪ್ರಿಲ್‌ನಲ್ಲಿ, ಮತ್ತೊಂದು ಕಮಿಷನ್ ನೇಮಕವಾಯಿತು. ದೇಭರ್ ಅವರ ಅಧ್ಯಕ್ಷತೆಯಲ್ಲಿ ನೇಮಕವಾದ ಹರಿಜನ ಗಿರಿಜನರ ಕಮಿಷನ್‌ನಲ್ಲಿ ನಾನೂ ಒಬ್ಬ ಸದಸ್ಯನಾದೆ. ಆದಿವಾಸಿಗಳ ಅಭಿವೃದ್ಧಿಯ ಬಗ್ಗೆ ಈ ಕಮಿಷನ್ ಒಳ್ಳೊಳ್ಳೆಯ ಸಲಹೆಗಳನ್ನು ಮಾಡಿತು. ದೇಭರ್ ತುಂಬ ಒಳ್ಳೆಯ ಮನುಷ್ಯರು. ನಾನು ೧೯೬೧ರಲ್ಲಿ ಕಾಯಿಲೆ ಮಲಗಿ ಓಡಾಡುವುದಕ್ಕೆ ಅವಕಾಶವಿಲ್ಲದಾಗ ಅವರೇ ವರದಿಯನ್ನು ನನ್ನ ಬಳಿಗೆ ತಂದು ಚರ್ಚೆಮಾಡಿಕೊಂಡು ಹೋದರು. ನನ್ನ ಸಲಹೆಗಳನ್ನು ಕೊಡಲು ನನಗೆ ಸಾಕಷ್ಟು ಸಿಬ್ಬಂದಿ ಒದಗಿಸಲಾಯಿತು. ವರದಿ ಸಿದ್ಧವಾದ ಮೇಲೆ ಅದನ್ನು ದಿಲ್ಲಿಯಿಂದ ಒಬ್ಬರು ವಿಮಾನದಲ್ಲಿ ತಂದು ಷಿಲ್ಲಾಂಗ್‌ನಲ್ಲಿ ರುಜುಮಾಡಿಕೊಂಡು ಹೋದರು.

೧೯೬೧ರಲ್ಲಿ ನನಗೊಂದು ಆಹ್ವಾನ ಬಂದಿತು. ಸರ್ದಾರ್ ವಲ್ಲಭಭಾಯಿ ಪಟೇಲರ ಸ್ಮಾರಕ ಭಾಷಣ ಮಾಡಬೇಕೆಂದು ಆಲ್ ಇಂಡಿಯಾ ರೇಡಿಯೋ ಕೇಳಿತು. ನನಗೆ ಮುಂಚೆ ಶ್ರೀ ರಾಜಗೋಪಾಲಾಚಾರಿ, ಡಾ॥ ಜೆ.ಬಿ. ಎಸ್. ಹಾಲ್ಡೇನ್, ಡಾ॥ ಎಂಎಸ್. ಕೃಷ್ಣನ್ ಮತ್ತು ಡಾ॥ ಜಕೀರ್ ಹುಸೇನ್ ಭಾಷಣ ಮಾಡಿದ್ದರು. ನನಗೆ ಆಹ್ವಾನ ಬಂದಾಗ ಬಹು ಸಂತೋಷವಾಯಿತು. ಅದಕ್ಕೆ ಎರಡು ಕಾರಣ : ಒಂದು, ನಾನು ಆರಿಸಿದ The philosophy of love (ಪ್ರೇಮದ ತತ್ವ) ಎಂಬ ವಿಷಯ. ಈ ವಿಷಯ ಆರಿಸಿಕೊಂಡ ಕಾರಣ ನಾನು ಹಿಂದೆ ಓದಿಬಿಟ್ಟದ್ದನ್ನು ಮತ್ತೆ ಓದಬೇಕಾಗಿ ಬಂದಿತು. ಡಾಕ್ಟರ ಸಲಹೆಯ ಮೇಲೆ ನಾನು ಮನೆಯಲ್ಲಿಯೇ ಇದ್ದುದರಿಂದ ನನಗೆ ಓದುವುದಕ್ಕೂ ಬಹಳ ಸಹಾಯವಾಯಿತು. ಇದರಿಂದ ಒಳ್ಳೆಯದೂ ಆಯಿತು. ಅಹಿಂಸೆಯ ಬಗ್ಗೆ ಗಾಂಧೀಜಿಯ ಭಾವನೆಗಳನ್ನು ಪುನಃ ಓದಿ ಅವುಗಳ ಅಂದಚೆಂದ ಹಾಗೂ ಗಂಭೀರತೆಗಳನ್ನು ತಿಳಿದುಕೊಳ್ಳುವಂತಾಯಿತು. ಅದು ನನ್ನಲ್ಲಿ ಪ್ಲೇಟೊ ಮತ್ತು ಆಗಸ್ಟೈನರ ಬಗ್ಗೆ ಹಳೆಯ ಬೆಂಕಿಯನ್ನು ಮತ್ತೆ ಹೊತ್ತಿಸಿದಂತಾಯಿತು. ಸಿ.ಎಸ್. ಲೇವಿಸ್ ಮತ್ತು ಫಾದರ್ ಎಂ.ಸಿ. ಡಾರ್ಸಿ (D'Arcy) ಅವರ ಗ್ರಂಥಗಳನ್ನು ಮತ್ತೆ ಓದಿದೆ. ನನ್ನ ಸಂತೋಷಕ್ಕೆ ಮತ್ತೊಂದು ಕಾರಣ, ಸರ್ದಾರ್ ಬಗ್ಗೆ ನನಗಿದ್ದ ಗೌರವ. ಅವರು ನನ್ನ ಬಾಳಿನ ಮೇಲೆ ಗಮನಾರ್ಹವಾದ ಪರಿಣಾಮವನ್ನುಂಟುಮಾಡಿದ್ದರು. ನಾನು ಗಿರಿಜನರ ಇಂಡಿಯಾಕ್ಕೆ ಹೋಗಬೇಕೆಂದು ಒತ್ತಾಯಮಾಡಿದವರು ಅವರೇ.

ಭಾಷಣ ಮಾಡುವುದೆಂದರೆ ನನಗೆ ಆಗುವುದಿಲ್ಲ. ಭಾಷಣಕ್ಕೆ ಮುಂಚೆ ಒಂದು ತರಹ ಹೆದರಿಕೆಯಾಗುತ್ತದೆ ಆಮೇಲೆ ನನ್ನ ಬಗ್ಗೆ ನನಗೇ ಅಸಹ್ಯಹುಟ್ಟುತ್ತದೆ. ನಾನು ಯಾವಾಗಲೂ ಬರೆದ ಭಾಷಣ ಮಾಡುವುದಿಲ್ಲ. ಬರೆಯದೇ ಭಾಷಣ ಮಾಡಿದರೆ ಅದರಲ್ಲಿ ಒಂದು ಚಂದ ಇರುತ್ತದೆ. ಆದರೆ ರೇಡಿಯೋದವರು ಬರೆಯಲೇಬೇಕೆಂದು ಒತ್ತಾಯಮಾಡಿದ್ದರಿಂದ ಹಾಗೆ ಮಾಡಬೇಕಾಯಿತು.

ಪ್ರೇಮದ ಬಗ್ಗೆ ನನ್ನ ಪುಸ್ತಕಗಳಲ್ಲಿ ಸ್ಪಷ್ಟವಾಗಿ ಹೇಳಿರುವ ಕೆಲವು ಅಂಶಗಳ ಮೇಲೆ ಮಾತಾಡುತ್ತೇನೆಂದು ಆಕಾಶವಾಣಿಯಲ್ಲಿ ಸೇರಿದ್ದ ಸಭೆ ನಿರೀಕ್ಷಣೆ ಮಾಡಿತ್ತು. ಮೊದಲನೆಯ ದಿನದ ಭಾಷಣಕ್ಕೆ ಎರಡು ಲಾರಿ ತುಂಬಾ ಸ್ತ್ರೀ ಸಮಾಜಶಾಸ್ತ್ರಜ್ಞೆಯರು ಬಂದಿದ್ದರಂತೆ. ಆದರೆ ಯಾವಾಗ ಅವರು ಪ್ರೇಮದ ಬಗ್ಗೆ ನನ್ನ ಬಾಯಿಂದ ದೊಡ್ಡ ದೊಡ್ಡ ಮಾತುಗಳನ್ನು ಕೇಳಿದರೊ ಇಲ್ಲವೋ ಮತ್ತೊಮ್ಮೆ ಬರಲಿಲ್ಲ. ಲೈಂಗಿಕ ವಿಷಯದ ಬಗ್ಗೆ ಅಷ್ಟಿಷ್ಟು ಹೇಳಿದ್ದುಂಟು. ಆದರೆ ಅರ್ಧ ಅರ್ಧ ಗಂಟೆಯ ಆರು ವಾರಗಳ ಭಾಷಣದಲ್ಲಿ ಹೆಚ್ಚಾಗಿ ಹೇಳಲಾಗಲಿಲ್ಲ. ಹೀಗಿದ್ದರೂ ದೆಹಲಿಯ ಒಂದು ಪತ್ರಿಕೆ ದಪ್ಪ ಅಕ್ಷರದ ಸುದ್ದಿ ಪ್ರಕಟಿಸಿತು. Elwin says carnal love is good (ಲೈಂಗಿಕ ಪ್ರೇಮ ಒಳ್ಳೆಯದೆಂದು ಎಲ್ವಿನರು ಹೇಳುತ್ತಾರೆ) ಎಂದು. ಇರುವುದೂ ಹಾಗೆಯೆ. ಆದರೆ ನಾನು ಅದನ್ನು ಅಷ್ಟು ಒರಟಾಗಿ ಹೇಳಲಿಲ್ಲ.

ನಾನು ದಿಲ್ಲಿಗೆ ಹೆಚ್ಚಾಗಿ ಹೋಗುವುದಿಲ್ಲ. ಆದರೆ ಹೋದಾಗ ನನಗೆ ಸಂತೋಷವಾಗುತ್ತದೆ. ಸಿಂಹದ ಬೇಟೆ ಆಡಬಹುದು ಅಲ್ಲಿ. ಅಲ್ಲಿಗೆ ಹೋದಾಗ ಕೆಲವು ವೇಳೆ ಪ್ರಧಾನ ಮಂತ್ರಿಗಳು ಹೇಳಿಕಳುಹಿಸುತ್ತಾರೆ. ಅವರೊಡನೆ ಅನೇಕ ಸಲ ಮಾತನಾಡಿದ್ದೇನೆ. ಒಮ್ಮೆ ಅವರನ್ನು ನೋಡಿ ಮಾತಾಡಬೇಕಾದ್ದೇನೂ ಇರಲಿಲ್ಲ. ಆದ್ದರಿಂದ ನನ್ನ ಪಾಡಿಗೆ ನಾನು ಸುಮ್ಮನಿದ್ದೆ. ಒಂದು ದಿನ ಬೆಳಗ್ಗೆ ವಿದೇಶಾಂಗ ಸಚಿವ ಶಾಖೆಯಲ್ಲಿ ಯಾರನ್ನೋ ನೋಡಲು ಹೋಗಿದ್ದೆ. ಇದ್ದಕ್ಕಿದ್ದಂತೆ ಮೂತ್ರ ವಿಸರ್ಜನೆ ಮಾಡಬೇಕಾಗಿ ಬಂದಿತು. ಪಡಸಾಲೆಯಲ್ಲಿದ್ದ ವಿ.ಐ.ಪಿ. ಶೌಚಗೃಹಕ್ಕೆ ಹೋಗಿ ಹೊರಗೆ ಬರುವಾಗ ನಾನು ಪ್ರಧಾನಮಂತ್ರಿಗಳಿಗೇ ಡಿಕ್ಕಿ ಹೊಡೆಯುವುದರಲ್ಲಿದ್ದೆ. ಅವರು 'ಹಲೋ ! ಇಲ್ಲೇನು ಮಾಡ್ತಾ ಇದ್ದೀರಿ' ಎಂದು ಕೇಳಿದರು. ನಾನು ಏನು ಮಾಡ್ತಾ ಇದ್ದೆ ಎಂದು ಹೇಳಲಿಕ್ಕೆ ಇಷ್ಟಪಡಲಿಲ್ಲ. ಆದರೆ ಅವರು 'ನಾಳೆ ಬಂದು ನೋಡಿ' ಎಂದು ಹೇಳಿಹೋದರು.

ನಾನು ಆಗತಾನೆ India's North - East Frontier in the 19th century) ೧೯ನೆಯ ಶತಮಾನದಲ್ಲಿ ಇಂಡಿಯಾದ ಈಶಾನ್ಯ ಗಡಿ ಎಂಬ ಪುಸ್ತಕ ಪ್ರಕಟಿಸಿದ್ದೆ. ನನ್ನ ಸ್ನೇಹಿತರು ಹೇಳಿದರು, ಈ ಪುಸ್ತಕವನ್ನು ನೆಹ್ರೂ ಅವರಿಗೆ ಕೊಡಿ ಎಂದು. ನಾನು ದಿಲ್ಲಿಯ ಪುಸ್ತಕದ ಅಂಗಡಿಗಳನ್ನು ಹುಡುಕಿ ಒಂದು ಪುಸ್ತಕ ತೆಗೆದುಕೊಂಡು ಹೋಗಿ ಮಾರನೆಯ ದಿನ ನೆಹ್ರೂ ಅವರಿಗೆ ಕೊಟ್ಟೆ. ಅದನ್ನು ಈಸಿಕೊಂಡು ಕೆಲವು ಪುಟಗಳನ್ನು ತಿರುವಿಹಾಕಿ ಸ್ವಲ್ಪ ಗುರುಗುಟ್ಟಿ ನನ್ನ ಕಡೆ ನೋಡುತ್ತಾ 'ಲೋಲಿತಾ' ಎಂಬ ಪುಸ್ತಕದ ಬಗ್ಗೆ ನಿಮ್ಮ ಅಭಿಪ್ರಾಯವೇನು ?' ಎಂದು ಕೇಳಿದರು. ಈಗ ಸಾಹಿತ್ಯ ಕ್ಷೇತ್ರದಲ್ಲಿ ಇರುವ ಸ್ಪರ್ಧೆಯನ್ನು ಗಮನಿಸಿದರೆ ಆ ಮಾತನ್ನು ಮುಂದುವರಿಸಿಕೊಂಡು ಹೋಗುವುದು ಉಪಯೋಗವಿಲ್ಲ ಎಂದು ಅನಿಸಿತು ನನಗೆ.

ಮಾಲ್ಕೋಮ್ ಮ್ಯಾಕ್‌ಡೊನಾಲ್ಡರು ಬರೆದ Borneo People (ಬೋರ್ನಿಯೋ

ಜನ) ಎಂಬ ಪುಸ್ತಕ ಪ್ರಕಟವಾದಾಗ ಅದು ನನಗೆ ಬಹಳ ಮೆಚ್ಚಿಗೆಯಾಯಿತೆಂದು ಅವರಿಗೆ ಒಂದು ಪತ್ರ ಬರೆದೆ. ಮ್ಯಾಕ್ ಡೋನಾಲ್ಡರು ಇಂಡಿಯಾದಲ್ಲಿ ಬ್ರಿಟಿಷ್ ಹೈಕಮೀಷನರಾಗಿದ್ದರು. ನನ್ನ ಪತ್ರ ನೋಡಿ ಅವರು ನಾನು ದಿಲ್ಲಿಗೆ ಬಂದಾಗ ನೋಡಬೇಕೆಂದು ಹೇಳಿದ್ದರು. ಅದರಂತೆ ನಾನು ಹೋದಾಗ ಆಫೀಸಿಗೆ ಫೋನು ಮಾಡಿದೆ. ಮಧ್ಯಾಹ್ನದ ಭೋಜನಕ್ಕೆ ಬನ್ನಿ ಎಂದು ಆಹ್ವಾನಿಸಿದರು.

ಊಟದ ಸಮಯಕ್ಕೆ ಸರಿಯಾಗಿ ಒಂದು ಟ್ಯಾಕ್ಸಿ ಮಾಡಿಕೊಂಡು ಹೈ ಕಮೀಷನರ ನಿವಾಸದ ಬಳಿಗೆ ಹೋಗಿ ಒಳಗೆ ಕಾಲಿಟ್ಟೆ. ಮ್ಯಾಕ್‌ಡೊನಾಲ್ಡರನ್ನು ನಾನು ಮುಂಚೆ ನೋಡಿರಲಿಲ್ಲ. ಅವರು ಹೇಗಿದ್ದಾರೆ ಎಂಬುದನ್ನು ತಿಳಿದು ಕೊಂಡಿರಲಿಲ್ಲ. ಒಳಗೆ ಹೋದಾಗ ಬಹು ಗಂಭೀರವಾದ ಹಾಗೂ ದೊಡ್ಡ ಮನುಷ್ಯನಂತಹ ವ್ಯಕ್ತಿ ನನ್ನನ್ನು ಎದುರುಗೊಂಡರು. ನಾನು ಅವರ ಕೈಕುಲಕಿ ಪುಸ್ತಕ ತುಂಬಾ ಚೆನ್ನಾಗಿದೆ ಎಂದೆ. ಈ ಮಾತಿಗೆ ಸರಿಯಾದ ಮಾರುತ್ತರ ಬರಲಿಲ್ಲ. ಅವರು ಮ್ಯಾಕ್‌ಡೊನಾಲ್ಡರ ಸೆಕ್ರಟರಿ ಎಂದು ಗೊತ್ತಾಯಿತು. ಅವರು ನನ್ನನ್ನು ಬೈಠಕ್ ಕೋಣೆಗೆ ಕರೆದುಕೊಂಡು ಹೋಗಿ ಕುಳ್ಳಿರಿಸಿದರು. ಅಲ್ಲಿ ಇಂಗ್ಲಿಷ್ ಹೆಂಗಸೊಬ್ಬಳು ಜಿನ್ ಕುಡಿಯುತ್ತಾ ಕುಳಿತಿದ್ದಳು. ನನಗೂ ಆ ಹರ್ಷದಾಯಕ ಪಾನೀಯದ ಸೇವನೆಯ ಸೌಭಾಗ್ಯ ಸಿಕ್ಕಿತು. ಕೊಂಚ ಹೊತ್ತಿನಲ್ಲಿಯೇ ಸೊಗಸಾದ ಉಡುಪು ಧರಿಸಿದ ಎತ್ತರದ ಇಂಗ್ಲಿಷ್ ಮನುಷ್ಯನೊಬ್ಬ ಬೈಠಕ್ ಕೋಣೆಗೆ ತಮ್ಮ ಮನೆಯೋ ಎಂಬಂತೆ ಬಂದರು. ಕುಳಿತಿದ್ದ ನಾನು ಥಟ್ಟನೆ ಎದ್ದುನಿಂತು ಅವರ ಕೈಹಿಡಿದು ಪುಸ್ತಕ ತುಂಬಾ ಚೆನ್ನಾಗಿದೆ ಎಂದೆ. ಆ ಮಾತು ಕೇಳಿ ಅವರಿಗೆ ಕೊಂಚ ಅಚ್ಚರಿಯಾಯಿತು. ಆ ವಿಷಯ ಬಿಟ್ಟು ಬೇರೆ ವಿಷಯ ಮಾತನಾಡಲಾರಂಭಿಸಿದರು. ಐದು ನಿಮಿಷಗಳ ಮೇಲೆ ಮತ್ತೊಬ್ಬ ಉದ್ದನೆಯ ಇಂಗ್ಲಿಷ್ ಮನುಷ್ಯ ಬಂದರು. ಪುನಃ ನಾನು ಥಟ್ಟನೆ ಎದ್ದುನಿಂತು ಕೈ ಹಿಡಿದು 'ನೀವು ಬೋರ್ನಿಯೋ ಮೇಲೆ ಬರೆದ ಪುಸ್ತಕ ಭಾರಿ ಸೊಗಸಾಗಿದೆ' ಎಂದೆ. ಆ ದೊಡ್ಡಮನುಷ್ಯ 'ನಾನಲ್ಲಿಗೆ ಹೋಗಿರಲೇ ಇಲ್ಲ' ಎಂದು ಹೇಳಿ ಜಿನ್ ಬಾಟಲಿದ್ದ ಕಡೆಗೆ ಧಾವಿಸಿದ.

ಇಷ್ಟು ಹೊತ್ತಿಗೆ ನನಗೆ ಅರ್ಥವಾಯಿತು, ನಾನು ಯಾವುದೋ ಮನೆಗೆ ಬಂದು ಬಿಟ್ಟಿದ್ದೀನಿ; ಅಲ್ಲದೆ, ಯಾವಾಗಲೂ ವಿನಯಿಗಳಾದ ಈ ಇಂಗ್ಲಿಷ್ ಜನ ಈ ಪಿಶಾಚಿ ಯಾರು ಎಂದು ಅಚ್ಚರಿಪಟ್ಟು ಅದನ್ನು ಬಾಯಿಬಿಟ್ಟು ಹೇಳಲಾರದೆ ಸುಮ್ಮನಿದ್ದಾರೆ ಎಂದು. ಆದರೆ ಕೊನೆಗೆ ಮ್ಯಾಕ್‌ಡೊನಾಲ್ಡ್‌ರೇ ಬಂದರು. ಕುಳ್ಳಾಗಿದ್ದ, ಬಟ್ಟೆ ಬರೆಗಳಲ್ಲಿ ಎದ್ದುಕಾಣದ ಆ ಬಹು ಆಕರ್ಷಕ ವ್ಯಕ್ತಿ ಒಳಗೆ ಬಂದು ಹೊತ್ತಾದುದಕ್ಕೆ ನನ್ನ ಕ್ಷಮೆ ಕೇಳಿದರು. ಐದು ನಿಮಿಷಗಳಲ್ಲಿ ನಾನು ಅವರೂ Iban Textiles (ಐಬಾನ್ ಬಟ್ಟೆಯ) ಪರೀಕ್ಷೆಮಾಡುತ್ತಾ ನನಗೂ ಅವರಿಗೂ ಗೊತ್ತಿದ್ದ Head hunters (ಬುರುಡೆ ಷಿಕಾರಿಗಳ) ಬಗ್ಗೆ ಮಾತಾಡುತ್ತಾ ಕುಳಿತೆವು.

೧೯೫೬ರಲ್ಲಿ ದಿಲ್ಲಿಗೆ ಬಂದ ದಲಾಯಿ ಮತ್ತು ಪಂಚೆನ್ ಲಾಮ ಅವರ

ಗೌರವಾರ್ಥವಾಗಿ ರಾಷ್ಟ್ರಾಧ್ಯಕ್ಷರು ರಾಷ್ಟ್ರಪತಿ ಭವನದಲ್ಲಿ ಭೋಜನ ಏರ್ಪಡಿಸಿದ್ದರು. ನನಗೂ ಆಹ್ವಾನ ಬಂತು. ಸರಿಯಾದ ಬಟ್ಟೆಬರೆ ಒದಗಿಸಿಕೊಳ್ಳುವುದಕ್ಕೆ ಕಾಲಾವಕಾಶ ಇರಲಿಲ್ಲ. ನನ್ನಲ್ಲಿದ್ದ ಒಂದೇ ಒಂದು ಜೊತೆ ಕಾಲುಚೀಲಗಳು ಅಷ್ಟು ಚೆನ್ನಾಗಿರಲಿಲ್ಲ. ಅಲ್ಲದೆ ಅವು ಹಿಮ್ಮಡಿಯ ಬಳಿ ಹರಿದು ದೊಡ್ಡ ತೂತು ಮಾಡಿಕೊಂಡಿದ್ದುವು. ಷೂ ಹಾಕಿಕೊಂಡಾಗ ಆ ತೂತೇನೊ ಮುಚ್ಚಿಕೊಳ್ಳುತ್ತಿತ್ತು. ಹೇಗೆ ಆಗಲಿ ರಾಷ್ಟ್ರಪತಿ ಭವನದಲ್ಲಿ ಟೇಬಲ್ ಮುಂದೆ ಕುಳಿತುಕೊಂಡೋ ಅಥವಾ ಬಫೆ ತರವೋ ಊಟ ಮಾಡುವುದರಿಂದ ಚಿಂತೆ ಇಲ್ಲ ಎಂದುಕೊಂಡು ಹೋದೆ. ನನ್ನೊಡನೆ ಖೇಮ್‌ಲಾಲ್ ರತೀ ಅವರೂ ಇದ್ದರು. ಆ ವೈಭವಯುತ ಕೋಣೆಗಳಲ್ಲಿ ಅಡ್ಡಾಡುತ್ತಾ ಹಸಿವುಂಟು ಮಾಡಿದ ಟೊಮ್ಯಾಟೊ ರಸ ಕುಡಿದೆವು. ನಾನು ಒಬ್ಬಿಬ್ಬರ ಜೊತೆ ಮಾತನಾಡಿದೆ. ಎಲ್ಲಾ ತುಂಬಾ ಸೊಗಸಾಗಿಯೇ ಇತ್ತು. ಆದರೆ ಊಟದ ಮನೆಗೆ ಹೋದಾಗ ನನ್ನ ಎದೆ ಧಸಕ್ಕೆಂದಿತು. ಇತಿಹಾಸದಲ್ಲೇ ಮೊಟ್ಟಮೊದಲನೆಯ ಸಲ ಮಣೆಯ ಮೇಲೆ ಕುಳಿತು ಊಟಮಾಡುವ ವ್ಯವಸ್ಥೆಮಾಡಲಾಗಿತ್ತು. ಒಬ್ಬೊಬ್ಬರಿಗೂ ಒಂದೊಂದು ಆಸನ ಹಾಕಿ ಹೂವುಗಳಿಂದ ಅಲಂಕರಿಸಿ ಎಷ್ಟು ಸೊಗಸಾಗಿ ಮಾಡಿದ್ದರು ಅಂತೀರಿ ! ನೆಲದ ಮೇಲೆ ಕುಳಿತು ಊಟಮಾಡಬೇಕಾದರೆ ಷೂ ತೆಗೆಯಲೇ ಬೇಕಷ್ಟೆ. ಬಾಗಿಲ ಬಳಿ ಷೂ ತೆಗೆದು ಒಳಕ್ಕೆ ಹೋದೆ. ಊಟಕ್ಕೆ ಕುಳಿತಾಗ ಒಂದು ಕಾಲುಚೀಲದ ತೂತನ್ನು ಇನ್ನೊಂದು ಕಾಲಿನಿಂದ ಮುಚ್ಚಿಕೊಂಡು ಊಟ ಮುಗಿಸಿದೆ. ಊಟದ ಸೊಗಸಿನಲ್ಲಿ ಯಾರೂ ನನ್ನ ತಾಪತ್ರಯ ಗಮನಿಸಲಿಲ್ಲ ಎಂದು ಕಾಣುತ್ತೆ.

ಗಣರಾಜ್ಯವಾದ ಮೇಲೆ ಇಂಡಿಯಾ ಎಲ್ಲಾ ಬಿರುದುಗಳನ್ನು ತೆಗೆದು ಹಾಕಿಬಿಟ್ಟಿತು. ಅದರ ಬದಲು ಭಾರತರತ್ನ, ಪದ್ಮಭೂಷಣ ಮತ್ತು ಪದ್ಮಶ್ರೀ ಎಂಬ ಬಿರುದುಗಳನ್ನು ಕೊಡಲಾರಂಭಿಸಿತು. ೧೯೬೧ನೆಯ ಜನವರಿ ೨೬ನೆಯ ತಾರೀಖು ನಾನು ಆಲೊಂಗ್‌ನಲ್ಲಿ ಗಿರಿಜನರ ಕಮೀಷನ್ ಜೊತೆ ಇದ್ದೆ. ಯಾರ ಹತ್ತಿರವೊ ಟ್ರಾನ್ಸಿಸ್ಟರ್ ರೇಡಿಯೋ ಇತ್ತು. ಅದರಲ್ಲಿ ನನಗೆ 'ಪದ್ಮಭೂಷಣ' ಎಂಬ ಪ್ರಶಸ್ತಿ ಯನ್ನಿತ್ತಿರುವ ಸಂತಸದ ಸುದ್ದಿ ಕೇಳಿದೆ !

ಮೂರು ತಿಂಗಳನಂತರ ದೆಹಲಿಯಲ್ಲಿ ಪ್ರಶಸ್ತಿ ಪ್ರದಾನಮಾಡುವ ಸಮಾರಂಭ ನಡೆಯಿತು. ನಾನು ಖಾದಿ ಶರಾಯಿ ಹಾಕಿಕೊಂಡು ಕರಿಯಬಣ್ಣದ ತುಂಡನೆಯ ಕಾಲರ್ ಇಲ್ಲದ ಕೋಟು ತೊಟ್ಟುಕೊಂಡು ಹೋಗಿದ್ದೆ. ಪ್ರಶಸ್ತಿ ಪಡೆದವರನ್ನು ಎರಡು ಸಾಲಿನಲ್ಲಿ ಕುಳ್ಳಿರಿಸಿದ್ದರು. ಭಾರತರತ್ನ ಪಡೆದ ಡಾ|| ಬಿ.ಸಿ. ರಾಯ್ ಅವರ ಹಿಂದೆ ನಾನು ಕುಳಿತಿದ್ದೆ. ನನ್ನ ಪಕ್ಕದಲ್ಲಿ ಹೆಸರಾಂತ ಕಾಂಗ್ರೆಸ್ ಮನುಷ್ಯ ರೊಬ್ಬರು ಬಣ್ಣ ಬಣ್ಣ ಶರಟು ಮತ್ತು ಬಿಳಿ ಪಂಚೆ ಉಂಟುಕೊಂಡು ಕುಳಿತಿದ್ದರು. ಅವರು ಮೊದಲಬಾರಿಗೆ ಬಾಯಿಬಿಟ್ಟು ನನ್ನನ್ನು ಕುರಿತು, 'ಏಕೆ ಈ ಉಡುಪು ಹಾಕಿಕೊಂಡು ಬಂದಿದೀರಿ ?' ಎಂದರು.

ನಾನೇನೋ ಗೊಣಗುಟ್ಟಿದೆ. ಅದಕ್ಕೆ ಅವರು, 'ನಾನು ಪದ್ಮಭೂಷಣ ಸಂಪಾದಿಸುವುದಕ್ಕೆ ಕೆಲಸ ಮಾಡುತ್ತಿದ್ದಾಗಲೂ ಇದೇ ಉಡುಪಿನಲ್ಲಿದ್ದೆ. ಅದನ್ನು ಪಡೆಯುವಾಗಲೂ ಅದೇ ಉಡುಪಿನಲ್ಲಿದ್ದೇನೆ. ಇವರಿಗೆ ಇಷ್ಟವಿಲ್ಲದಿದ್ದರೆ ನನ್ನನ್ನು ಹೊರಕ್ಕೆ ಕಳುಹಿಸಲಿ' ಎಂದರು. ಇಷ್ಟು ಹೇಳಿ 'ನೀವು ಇಂಗ್ಲಿಷ್‌ಮನ್ ಏನು ?' ಎಂದು ಕೇಳಿದರು.

ಅದಕ್ಕೆ ನಾನು 'ಹಿಂದೆ ಆಗಿದ್ದೆ' ಎಂದೆ.

'ಹಾಗಿದ್ದರೆ ನಿಮಗೆ ಅರ್ಥ ಆಗುತ್ತೆ. ಇಂಗ್ಲೆಂಡಿನಲ್ಲಿ ನನಗೆ ಪದ್ಮಭೂಷಣ ಬಿರುದು ಕೊಟ್ಟರೆ ನಾನು ಲಾರ್ಡ್ ಆಗುತ್ತೇನೆ.'

'ಅಲ್ಲ, ಹಾಗಲ್ಲ.'

'ಕನಿಷ್ಠಪಕ್ಷ ನಾನು ಸರ್ ಆದರೂ ಆಗುತ್ತೇನೆ. ನನ್ನ ಹೆಂಡತಿ ಲೇಡಿ ಆಗುತ್ತಾಳೆ.'

'ಹೆಚ್ಚು ಕಡಿಮೆ ಹಾಗೆ ಅನ್ನಿ.'

'ಇದು ಇಂಡಿಯಾ ಆದ್ದರಿಂದ ಹಾಗಾಗುವುದಿಲ್ಲ.'

'ಹೌದು, ಹಾಗೆ ಆಗೋದಿಲ್ಲ.'

ಭಾರತರತ್ನ ಪ್ರಶಸ್ತಿ ಪದಕ ದೊಡ್ಡದಾಗಿತ್ತು. ಇದನ್ನು ಕಂಡ ನನ್ನ ಸ್ನೇಹಿತೆ, 'ಡಾ॥ ರಾಯ್ ಅವರಿಗೆ ನನಗಿಂತ ದೊಡ್ಡ ಬಿರುದೇಕೆ ಕೊಟ್ಟರು ?' ಎಂದು ಕೇಳಿದರು. ಏಕೆ ಎಂದು ಹೇಳಿದೆ ಅವರಿಗೆ. ಸಾಂಪ್ರದಾಯಕವಾದ ಭಾರತೀಯ ತತ್ವದಲ್ಲಿ ತಲ್ಲೀನರಾದ ಅವರು, 'ಹೋಗಲಿ ಬಿಡಿ, ಅದರಿಂದ ಆಗೋದೇನು ?' ಎಂದರು. ಅಷ್ಟಕ್ಕೇ ಸುಮ್ಮನಾಗದೆ, 'ಡಾ॥ ರಾಯ್ ಅವರ ಅಗಲವಾದ ಬೆನ್ನಿನ ಕಡೆ ದೃಷ್ಟಿಮಾಡಿ, 'ನಾಲ್ಕಾರು ವರ್ಷಗಳು ಕಳೆದ ಮೇಲೆ ಈ ಪ್ರಶಸ್ತಿಗಳಿಗೆ ಬೆಲೆ ಇರುತ್ತದೆಯೇ ?' ಎಂದು ಹೇಳಿ ಮತ್ತೊಂದು ಸಲ ರಾಯ್ ಅವರ ಕಡೆ ನೋಡುತ್ತಾ, 'ನಮಗೆ ಕೊಟ್ಟರೂ ಒಂದೆ, ಲಕ್ಷಾಂತರ ಜನಕ್ಕೆ ಕೊಡದಿದ್ದರೂ ಒಂದೆ' ಎಂಬ ತೀರ್ಮಾನಕ್ಕೆ ಬಂದರು. ಆಮೇಲೆ ಕಾಲೆರಿಜ್ ಕವಿಯ, 'Full many a gem of purest ray serene' ಎಂಬ ಕವನದ ಸಾಲನ್ನು 'Full many a gem of purest ray serene wastes its sweetness on the desert air' ಎಂದು ಹೇಳಿದರು ! ಮುಂದುವರಿಯುತ್ತಾ, 'ನಮ್ಮ ಅದೃಷ್ಟ ! ಯಾರದೋ ಕಣ್ಣು ಬಿತ್ತು ನಮ್ಮ ಮೇಲೆ. ಸಿಕ್ಕಿತು ಇದು' ಎಂದು ಹೇಳಿ, ಮತ್ತೆ ಮಾತು ಮುಂದುವರಿಸಿ, 'ನಾನು ಈ ಗೌರವ ಯಾವತ್ತೂ ಕೇಳಿದೋನು ಅಲ್ಲ, ಅದಕ್ಕೆ ಕೈಒಡ್ಡಿದೋನೂ ಅಲ್ಲ. ದೇವರಲ್ಲಿ ನನ್ನ ಮೊರೆ ಏನು ಅಂದರೆ, ನನ್ನ ಆಸೆ ಏನು ಅಂದರೆ, ದೇವರೇ ನೀನು ಹೇಗಾದರೂ ಮಾಡಪ್ಪ – ನಿನ್ನ ಪಾದಸೇವೆ ಸಿಕ್ಕಿದರೆ ಸಾಕು !' ಎಂದು ಹೇಳಿ ಸುಮ್ಮನಾದರು.

ಪದ್ಮಭೂಷಣ ಪ್ರಶಸ್ತಿ ದೊರೆತ ಮೇಲೆ ನನಗೆ ಹೋದ ಕಡೆಯಲ್ಲೆಲ್ಲಾ ಅಭಿನಂದನೆಗಳ ಸುರಿಮಳೆ ಆರಂಭವಾಯಿತು. ಇದರಿಂದಾಗಿ ಎಲ್ಲಿಗೆ ಹೋದರೂ

ಅಭಿನಂದನೆಗಳು ದೊರೆಯುತ್ತವೆ ಎಂಬ ನಿರೀಕ್ಷೆ ಮಾಡಿದೆ ಅಂತ ಕಾಣುತ್ತೆ. ಒಂದು ದಿನ ಸಿನಿಮಾಕ್ಕೆ ಹೋದೆ. ಟಿಕೆಟ್ ಮಾರುತ್ತಿದ್ದವನು ನನ್ನ ಸ್ನೇಹಿತ. ಟಿಕೆಟ್ ಕೊಟ್ಟ ಮೇಲೆ ಆತನು ತನ್ನ ಕೈಯನ್ನು ಹೊರಕ್ಕೆ ಚಾಚಿದ. ಅದನ್ನು ನಾನು ಭದ್ರವಾಗಿ ಹಿಡಿದುಕೊಂಡು 'Thank you so very much' (ನಿಮಗೆ ತುಂಬಾ ವಂದನೆ) ಎಂದೆ. ಆದರೆ ಅವನು ಕೈಚಾಚಿದ್ದು ಟಿಕೇಟಿಗೆ ಹನ್ನೆರಡು ಪೈಸೆ ಸಾಲದ್ದು ಕೊಡಿ ಅಂತ.

ಹೌಸ್‌ಮನ್ ಎಂಬುವರು ತಮಗೆ ಕೊಟ್ಟಂಥ ಬಿರುದನ್ನೇ ಗಾಲ್ಸ್‌ವರ್ದಿ ಎಂಬುವರಿಗೆ ಕೊಟ್ಟ ಕಾರಣ ಅದು ಬೇಡ ಎಂದರು. ನನಗೆ ಅಂಥ ದುರಾಸೆ ಇಲ್ಲ. ಪದ್ಮಭೂಷಣಕ್ಕೆ ನಾನು ಅರ್ಹನೆಂದು ನಾನು ಎಂದೂ ಭಾವಿಸಿರಲಿಲ್ಲ. ವಿದ್ವತ್ತಿಗೆ ಸಂಬಂಧಪಟ್ಟ ಹಾಗೆ ಏನಾದರೂ ಕೊಟ್ಟಾರೆಂದುಕೊಂಡಿದ್ದೆ. ಆದರೆ ಪದ್ಮಭೂಷಣ ಬಂದಾಗ ನನಗೆ ನಿಜವಾಗಿಯೂ ಸಂತೋಷವಾಯಿತು. ನೀಫಾದ ಗಿರಿಜನರ ಬಗ್ಗೆ ನನ್ನ ಧೋರಣೆಯನ್ನು ಒಪ್ಪಿ ಪ್ರಶಸ್ತಿ ಕೊಟ್ಟರೆಂದು ನನ್ನ ಭಾವನೆ.

ಈ ಧೋರಣೆ ೧೯೬೨ನೆಯ ಅಕ್ಟೋಬರ್ ತಿಂಗಳಿನಲ್ಲಿ ಅತ್ಯಂತ ಕಠಿಣ ಪರೀಕ್ಷೆಗೊಳಗಾಯಿತು. ಬಹು ದಿನಗಳಿಂದ ಏಳಬೇಕಾಗಿದ್ದ ಬಿರುಗಾಳಿ ಎದ್ದು ನೀಫಾ ಬೆಟ್ಟಗುಡ್ಡಗಳನ್ನು ಅಲ್ಲಾಡಿಸಿಬಿಟ್ಟಿತು. ಚೀನೀಯರು ಬಹು ಸಂಖ್ಯೆಯಲ್ಲಿ ಆ ಗಡಿಯ ಮೇಲೆ ಧಾಳಿಮಾಡಿದರು. ನಾವು ಮಾಡಿಕೊಂಡಿದ್ದ ರಕ್ಷಣೆ ಕಮೆಂಗ್, ಸಿಯಾಂಗ್ ಮತ್ತು ಲೋಹಿತ್‌ಗಳಲ್ಲಿ ಮುರಿದುಬಿತ್ತು. ಮೊದಲು ಅವರ ಕೈವಶವಾದದ್ದು ತವಾಂಗ್. ನಾನೂ ಲೀಲಾನೂ ಆರು ವರ್ಷಗಳ ಹಿಂದೆ ಅಲ್ಲಿಗೆ ಯಾತ್ರೆ ಹೋಗಿಬಂದಿದ್ದೆವು. ಅನಂತರ ಧಾಳಿಕಾರರು ಬಾಂಬ್ದಿಲಾ ಆಕ್ರಮಿಸಿ ತೇಜ್‌ಪುರದ ಕಡೆಗೆ ಬಂದರು. ಲೋಹಿತ್‌ನಲ್ಲಿ ವಲ್ಲೋಗ್ ಅವರ ಕೈವಶವಾಯಿತು. ಉತ್ತರ ಸಿಯಾಂಗ್ ಕಡೆ ಹೊರಟು, ಸುಂದರವಾದ ಮೆಚುಕಾ ಕಣಿವೆಗೆ ಧಾಳಿಮಾಡಿ, ನಾನು ಹಿಂದೆ ತಂಗಿದ್ದ ಕೆಲವು ಸಣ್ಣ ಹಳ್ಳಿಗಳನ್ನು ಆಕ್ರಮಿಸಿಕೊಂಡರು. ಈ ಸ್ಥಳಗಳಲ್ಲಿ ಅನೇಕವು ನನಗೆ ಗೊತ್ತಿದ್ದವಾದ್ದರಿಂದ ಇವೆಲ್ಲ ನನ್ನ ಕಣ್ಣಿಗೆ ಕಟ್ಟಿದಂತಾಯಿತು. ತವಾಂಗ್ ಬಿದ್ದಮೇಲೆ ನನ್ನ ರಕ್ತದ ಒತ್ತಡ ಇಪ್ಪತ್ತೈದು ಪಾಯಿಂಟ್ ಏರಿತು; ಶಾಂತವಾದಾಗ ಇಳಿಯಿತು. ಬಾಂಬ್ದಿಲಾ ಚೀನೀರ ಕೈವಶವಾದಾಗ ಮತ್ತೆ ಮೂವತ್ತು ಪಾಯಿಂಟ್ ಏರಿತು. ಇದು ಹೆದರಿಕೆ ಅಥವಾ ಭೀತಿಯಿಂದಲ್ಲ. ಈ ಹೋರಾಟದ ಅಂತಿಮ ಫಲಿತಾಂಶದ ಬಗ್ಗೆ ನನಗೆ ಸಂಪೂರ್ಣ ಭರವಸೆ ಇತ್ತು. ನನ್ನ ರಕ್ತದ ಒತ್ತಡ ಏರಿದ್ದು ನನಗುಂಟಾದ ದುಃಖದಿಂದ. ನನ್ನ ಅಂಗಗಳನ್ನು ಕಿತ್ತುಹಾಕುತ್ತಿದ್ದಂತೆ ನನಗೆ ಭಾಸವಾಯಿತು. ನೀಫಾದ ಸಂಪರ್ಕ ಪಡೆದಿದ್ದ ಯಾರೇ ಆಗಲಿ ಆ ದುರ್ದಿನಗಳನ್ನು ಮರೆಯುವಂತಿಲ್ಲ.

ಷಿಲ್ಲಾಂಗ್‌ನಲ್ಲಿ ಜನ ಸ್ವಲ್ಪ ಹೆದರಿದರು. ಕೆಲವರು ತಮ್ಮ ಸಂಸಾರಗಳನ್ನು ಅಲ್ಲಿಂದ ಸಾಗಿಸಿದರು. ಅನೇಕ ಜನ ಸ್ನೇಹಿತರು ಲೀಲಾಗೂ ಒತ್ತಾಯ ಮಾಡಿದರು,

ಮಕ್ಕಳ ಸಮೇತ ಊರುಬಿಟ್ಟು ಹೋಗು ಅಂತ. ಆದರೆ ನಾನು ಹೇಳಿಬಿಟ್ಟೆ, 'ನಾವು ಗಿರಿಜನರಿಗೆ ಸೇರಿದ ಜನ; ಅಂತೆಯೇ ಅಸ್ಸಾಮಿಗೂ ಸೇರಿದವರು. ಇಡೀ ಜನರನ್ನು ಬೇರೆ ಕಡೆ ಸಾಗಿಸುವುದು ಅಸಾಧ್ಯವಾದ್ದರಿಂದ ನಾವ ಇದ್ದಲ್ಲಿಯೇ ಇರುತ್ತೇವೆ' ಎಂದು. ನಾನು ಹೇಳಿದ್ದು ಅನಂತರ ನಿಜವಾಯಿತು. ಯುದ್ಧ ನಿಂತಿತು; ಚೀನೀಯರು ವಾಪಸು ಹೋದರು. ಆಮೇಲೆ ಅಕ್ರಮಣಕ್ಕೊಳಗಾಗಿದ್ದ ಪ್ರದೇಶಗಳಲ್ಲಿ ಆಡಳಿತವನ್ನು ಪುನಃ ಸ್ಥಾಪಿಸುವ ಮತ್ತು ಜನಗಳಲ್ಲಿ ಭರವಸೆಯನ್ನುಂಟುಮಾಡುವ ಕೆಲಸ ನಡೆಯಿತು. ಅತ್ಯುತ್ತಮವಾದ ಅನೇಕ ಗಡಿ ಅಧಿಕಾರಿಗಳು ದೊರೆತರು ಆ ಕೆಲಸಕ್ಕೆ. ಕೊಂಚ ಕಾಲದಲ್ಲಿಯೇ ಆ ಕೆಲಸ ಆಯಿತು. ಜನ ತಮ್ಮ ನಿತ್ಯಜೀವನದಲ್ಲಿ ತೊಡಗಿದರು.

೯. ನೀಫಾ ಮಲೆನಾಡುಗಳಲ್ಲಿ ಪ್ರವಾಸ

ನೀಫಾದಲ್ಲಿ ಪ್ರವಾಸ ಮಾಡುವುದು ಬೇರೆ ಕಡೆಗಳಿಗಿಂತ ಭಿನ್ನವಾದುದು. ಒಂದು ಕಡೆಯಿಂದ ಇನ್ನೊಂದು ಕಡೆಗೆ ವಿಪರೀತ ದೂರ. ಬಹುತೇಕ ನಡೆದುಕೊಂಡೇ ಹೋಗಬೇಕು. ನಾನು ಮೊದಲೆಂದೂ ಕಾಣದಿದ್ದಷ್ಟು ಎತ್ತರದ ಪರ್ವತಗಳು! ಈ ಮೊದಲಿಗೆ ಯಾರೂ ಹೋಗದೆ ಇದ್ದಂತಹ ಸ್ಥಳಗಳು! ಸ್ಥಳದ ಪತ್ರಿಕೆಯೊಂದು ಸಂಶೋಧನೆಗೆ ಇರುವ ಸಾಧ್ಯತೆಗಳನ್ನು ಒಮ್ಮೆ ಚರ್ಚಿಸುತ್ತಾ 'ಪ್ರಪಂಚದ ಎಲ್ವಿನರಂಥವರಿಗೆ ಹೊಸ ನೆಲದ ಮಹಾ ಪ್ರದೇಶ ನೀಫಾ' ಎಂದು ಬರೆಯಿತು. ನೀಫಾದ ಯಾವ ಭಾಗಕ್ಕೇ ಹೋಗಲಿ ಅಲ್ಲಿಯ ಜನ ತೋರಿಸುತ್ತಿದ್ದ ಪ್ರೀತಿ ವಿಶ್ವಾಸಗಳನ್ನು ಬೇರೆಲ್ಲಿಯೂ ಕಾಣಲಿಲ್ಲ. ಭಾರಿ ಕಷ್ಟಗಳೇನೋ ಇದ್ದುವು. ಆದರೆ ಆ ನಾಡಿನ ಸೊಗಸು, ಆ ಜನರ ಅಂದಚಂದ ಮನಮೋಹಕವಾಗಿದ್ದುವು.

ನಾನು ಪ್ರವಾಸ ಮಾಡುವಾಗ ನನಗೆ ಬೇಕಾದ ಸಾಮಾನು ಸರಂಜಾಮುಗಳನ್ನೆಲ್ಲಾ ತೆಗೆದುಕೊಂಡೇ ಹೋಗುತ್ತಿದ್ದೆ. ಗುಡಾರ ಹಾಕುತ್ತಲೇ ಇರಲಿಲ್ಲ. ಗಂಡಸರು ಮಲಗುವ ಮನೆಗಳಲ್ಲೋ ಅಥವಾ ಇನ್ನೊಬ್ಬರ ಮನೆಯಲ್ಲೋ ನಿದ್ದೆಮಾಡುತ್ತಿದ್ದೆ. ನನ್ನ ಜೊತೆ ಒಂದು ಗ್ರಾಮೋಫೋನ್ ಇರುತ್ತಿತ್ತು. ಜನರನ್ನು ಆಕರ್ಷಿಸುವುದಕ್ಕೆ ಇದು ತುಂಬ ಸಹಾಯಕವಾಗುತ್ತಿತ್ತು. ಸಿಹಿಡಬ್ಬಗಳಿದ್ದರೆ ಸಾಕು ಮಕ್ಕಳನ್ನು ಒಲಿಸಿಕೊಳ್ಳಬಹುದಿತ್ತು. ನನ್ನ ಬಳಿ ಇದ್ದ ಆಟದ ಸಾಮಾನುಗಳನ್ನು ಅಂಜುವ ಅಥವಾ ಅನುಮಾನಪಡುವ ಮಕ್ಕಳನ್ನು ಹತ್ತಿರ ಬರಮಾಡುತ್ತಿದ್ದುವು.

ಜೀಪಿನಲ್ಲಿ ಪ್ರಯಾಣಮಾಡಿದರೆ ಜನರ ವಿಷಯ ಏನೇನೂ ತಿಳಿಯುವುದಿಲ್ಲ. ಹಳ್ಳಿಯಿಂದ ಹಳ್ಳಿಗೆ ನಡೆದುಕೊಂಡು ಹೋದರೇನೇ ಜನರನ್ನು ಅರಿತುಕೊಳ್ಳುವ ಅವಕಾಶ ಸಿಕ್ಕುತ್ತದೆ. ಕೆಲವು ಪ್ರವಾಸಗಳ ವೇಳೆ ವಾರಗಟ್ಟಲೆ ಯಾವ ಸರ್ಕಾರಿ ನೌಕರನ ಮುಖ ನೋಡದೇ ಇದ್ದುದುಂಟು. ನಾನು ಯಾರ ಸಹಾಯವನ್ನೂ ಪಡೆಯದೆ ಪ್ರವಾಸ ಮಾಡುತ್ತಿದ್ದೆ. ನನ್ನ ಅನುಭವದಿಂದ ಹೇಳುವುದಾದರೆ, ವಾಸ್ತವವಾಗಿ ಯಾರ ಸಹಾಯವೂ ಬೇಕಿಲ್ಲ.

ಪ್ರವಾಸಮಾಡುವುದು ಹಿಡಿಸಿದರೂ ಗುಡ್ಡ ಹತ್ತುವಾಗ ಅದು ನನಗೆ ಏದು ಉಬ್ಬಸ ಬರುವಂತೆ ಮಾಡುತ್ತಿತ್ತು. ನಾನು ಏದುವುದನ್ನು ನೋಡಿ ಗಿರಿಜನರು ತಮಾಷೆ ಮಾಡುತ್ತಿದ್ದರು. ಏದುತ್ತಾ ಹೋಗುತ್ತಿದ್ದ ನನ್ನನ್ನು ಏರೋಪ್ಲೇನಿಗೆ

ಹೋಲಿಸುತ್ತಿದ್ದರು. ಒಮ್ಮೆ ಸುಂದರವಾದ ಕಾಡಿನಲ್ಲಿ ಕುದುರೆಯ ಮೇಲೆ ಹೋಗುತ್ತಿದ್ದೆ. ಇದ್ದಕ್ಕಿದ್ದಂತೆ ನಿಷ್ಕಾರಣವಾಗಿ ಕುದುರೆ ಮೇಲಕ್ಕೆ ನೆಗೆದು ನನ್ನನ್ನು ಕೆಳಕ್ಕೆ ಬೀಳಿಸಿತು. ಆಗ ನಾನು ಚುಟ್ಟಾ ಸೇದುತ್ತಿದ್ದೆ. ಕೆಳಕ್ಕೆ ಬಿದ್ದಾಗಲೂ ಚುಟ್ಟಾ ಬಾಯಲ್ಲಿಯೇ ಇತ್ತು. ಕೈಕಾಲು ಯಾವುದೂ ಮುರಿದುಹೋಗಿರಲಿಲ್ಲ. ಆದರೆ ಮಂಡಿ ಮಾತ್ರ ಚೆನ್ನಾಗಿ ತರಚಿಹೋಗಿತ್ತು.

'ಕುದುರೆ ಏತಕ್ಕೆ ಬೆದರಿತು ?' ಎಂದು ಜನರನ್ನು ಕೇಳಿದಾಗ, ಅವರು, 'ನೀವು ಬಂದ ದಾರಿಯಲ್ಲಿರುವ ಮರದ ಮೇಲೆ ದೆವ್ವ ಇದೆ. ಆ ಮರದ ಕೆಳಗೆ ಕುದುರೆಯ ಮೇಲೆ ಬಂದವರನ್ನೆಲ್ಲಾ ಅದು ಕೆಳಕ್ಕೆ ಎಸೆಯುತ್ತದೆ' ಎಂದು ಹೇಳಿದರು.

'ಹಾಗಿದ್ದರೆ ಅದನ್ನು ಮೊದಲೇ ನನಗೆ ಹೇಳಬಹುದಾಗಿತ್ತಲ್ಲ ?'

'ನಿಮ್ಮನ್ನೂ ಹೆದರಿಸುವುದೆ ನೋಡೋಣ ಅಂತ ಸುಮ್ಮನಿದ್ದೆವು' ಎಂದರು.

ಆಮೇಲೆ ನಾನು ಬಿದ್ದ ಸ್ಥಳಕ್ಕೆ Elwin's Fall (ಎಲ್ವಿನ್ ಬಿದ್ದಸ್ಥಳ) ಎಂದು ಹೆಸರು ಕೊಡೋಣ ಎಂಬ ಸಲಹೆ ಬಂದಿತು. ಆದರೆ ಅದು ಬೇರೆ ಅರ್ಥಕ್ಕೆ ಎಡೆ ಕೊಡುತ್ತದೆ ಎಂದು ನಾನು ಒಪ್ಪಲಿಲ್ಲ.

ಒಮ್ಮೆ ನಾನೂ ಲೀಲಾನೂ ಪಸಿಘಾಟಿಗೆ ವಿಮಾನದಲ್ಲಿ ಹಾರಿಹೋದೆವು. ವಿಮಾನ ಇಳಿಯುತ್ತಿದ್ದಾಗ ದೊಡ್ಡ ಜನಸಮೂಹ ಸೇರಿತ್ತು. ಅವರೆಲ್ಲಾ ನಮಗಾಗಿ ಕಾಯುತ್ತಿದ್ದಾರೆ ಎಂದು ತಿಳಿದು ನಮಗೆ ಆನಂದವಾಯಿತು. ಕೆಳಕ್ಕೆ ಇಳಿದೆವು. ಇಳಿದು ಸ್ಥಳದ ಅಧಿಕಾರಿಗಳೂ ಉತ್ಸಾಹಭರಿತ ಜನರೂ ಇದ್ದ ಕಡೆಗೆ ನಡೆದೆವು. ನಮ್ಮನ್ನು ನೋಡಿದ ಕೂಡಲೇ ಅವರ ಉತ್ಸಾಹವೆಲ್ಲಾ ತಣ್ಣಗಾಯಿತು. 'ಯಾರ್ಕ್‌ಸ್ಟೈರ್ ಹಂದಿಗಳ ಒಂದು ಲೋಡ್ ಬರುತ್ತೆ ಎಂದು ಭಾವಿಸಿದ್ದೆವು' ಎಂದು ಆ ಜನ ಹೇಳಿಬಿಟ್ಟರು.

ನಾನೂ ಲೀಲಾನೂ ೧೯೫೬ನೆಯ ಮೇ ತಿಂಗಳಿನಲ್ಲಿ ತವಾಂಗ್‌ನಲ್ಲಿದ್ದ ಬೌದ್ಧ ಸಂಘಾರಾಮಕ್ಕೆ ಹೋಗಿಬಂದೆವು. ಭೂತಾನಿಗೂ ಟಿಬೆಟಿಗೂ ಮಧ್ಯೆ ಒಂದು ಮೂಲೆಯಲ್ಲಿದೆ ತವಾಂಗ್. ನಮಗೆ ಮುಂಚೆ ದಲಾಯಿ ಲಾಮಾ ಆ ದಾರಿಯಲ್ಲಿ ಅಲ್ಲಿಂದ ಬಂದಿದ್ದರು. ನಾವು ನೀಫಾಮೂಲಕ ಮನೋಹರವಾದ ಪ್ರಕೃತಿ ಸೌಂದರ್ಯವುಳ್ಳ ದಾರಿಯಲ್ಲಿ ನಡೆದುಕೊಂಡೊ ಅಥವಾ ಕುದುರೆಯ ಮೇಲೋ ದಾರಿ ಸಾಗಿಸಿದೆವು. ದಾರಿಯುದ್ದಕ್ಕೂ ಜನ ತಮ್ಮ ಆದರಾತಿಥ್ಯಗಳಿಂದ ನಮ್ಮ ಮನಸ್ಸನ್ನು ಸೂರೆಗೊಂಡರು. ದೂರದಲ್ಲಿ ಹಿಮಾಚ್ಛಾದಿತ ಪರ್ವತಗಳು, ಝುಳು ಝುಳು ಬೀಳುವ ಝುರಿಗಳು, ಬಣ್ಣಬಣ್ಣದ ಹೂಗಿಡಗಳು. ಸ್ವರ್ಗವೇ ಭೂಮಿಗೆ ಇಳಿದುಬಂದಂತಿತ್ತು!

ಬೌದ್ಧ ದೇವಸ್ಥಾನಗಳನ್ನು ಸಂದರ್ಶಿಸಿದೆವು. ಬೌದ್ಧ ಸಂನ್ಯಾಸಿಗಳ ಆದರ ಪೂರ್ವಕ ಆತಿಥ್ಯವನ್ನು ಸ್ವೀಕರಿಸಿದೆವು. ಬೌದ್ಧಮತದಲ್ಲಿ ಮತ ಬೇರೆ ಮತ್ತು

ಜೀವನ ಬೇರೆ ಅಲ್ಲ. ಮತ ಜೀವನದ ಒಂದು ಭಾಗ. ದಾರಿಯುದ್ದಕ್ಕೂ ಬೆಣ್ಣೆಯ ಟೀ ಕೊಡುತ್ತಿದ್ದರು. ಟೀ, ಉಪ್ಪು ಮತ್ತು ಬೆಣ್ಣೆ ಹಾಕಿ ಮಾಡಿದ ಟೀಗೆ 'ಬೆಣ್ಣೆಯ ಟೀ' ಎಂದು ಕರೆಯುತ್ತಾರೆ. ಅವರು ಎಷ್ಟೊಂದು ಪ್ರೀತಿಯಿಂದ ಅತಿಥಿಗಳಿಗೆ ಇದನ್ನು ಕೊಡುತ್ತಾರೆಂದರೆ, ಇದನ್ನು ಕುಡಿಸಲು ಬರುವ ಹುಡುಗಿ ಅತಿಥಿಯ ತೊಡೆಯ ಮೇಲೆ ಕುಳಿತು ಕುಡಿಸುವುದುಂಟಂತೆ ! ಅಂಥ ಸಂಧರ್ಭದಲ್ಲಿ ಹಳ್ಳಿಯ ಅತ್ಯಂತ ಸುಂದರಿಯಾದ ಯುವತಿ ಈ ಕೆಲಸ ಮಾಡುವಳಂತೆ ! ಆದರೆ ನನಗೆ ಅಂಥ ಭಾಗ್ಯ ಒದಗಲಿಲ್ಲ. ಲೀಲಾ ನನ್ನ ಜೊತೆ ಇದ್ದುದರಿಂದ ಮುದುಕಿಯರೇ ನನಗೆ ಟೀ ಕುಡಿಸಿದರು.

ಹೀಗೆ ನಾನೂ ಲೀಲಾನೂ ಪ್ರಯಾಣಮಾಡಿ ಬುದ್ಧನು ಜನ್ಮವಾದ ೨೫೦೦ ನೆಯ ವರ್ಷದ ಬುದ್ಧಪೂರ್ಣಿಮೆಯ ದಿನ, ಅಂದರೆ ಮೇ ೨೪ನೆಯ ತಾರೀಖು, ತವಾಂಗ್ ಮುಟ್ಟಿ ನಮ್ಮ ಪೂಜೆ ಸಲ್ಲಿಸಿದೆವು. ಈ ಪ್ರವಾಸ ಮಾಮೂಲಿ ಸರ್ಕಾರಿ ಪ್ರವಾಸಕ್ಕಿಂತ ಭಿನ್ನವಾಗಿತ್ತು. ನನಗೆ ಬೌದ್ಧ ಮತದಲ್ಲಿ ಮೊದಲಿನಿಂದಲೂ ಆಸಕ್ತಿ ಇತ್ತು. ಅದರ ಬೋಧನೆಗಳು ನನಗೆ ಹಿಡಿಸುತ್ತಿದ್ದುವು. ಈಗ ನನಗೆ ಆ ಮತ ಅಂಗೈಮೇಲಿನ ನೆಲ್ಲಿಕಾಯಿಯಂತೆ ಆಯಿತು. ತವಾಂಗಿಗೆ ಪ್ರವಾಸಮಾಡಿಬಂದ ಆ ಕೆಲವು ವಾರಗಳು ನನ್ನ ಬಾಳನ್ನು ಕಂಡಹಾಗೆ ಬದಲಾಯಿಸಿದುವು. ಆಧ್ಯಾತ್ಮಿಕ ಸಾಧನೆಯಲ್ಲಿ ಒಂದು ಹೆಜ್ಜೆ ಮುಂದೆ ಇಟ್ಟಂತಾಯಿತು.

ನೀಫಾದಲ್ಲಿ ಹಲವಾರು ಸಲ ಸುಮಾರು ಎರಡುಸಾವಿರ ಮೈಲಿಗಳಷ್ಟು ದೂರ ಸಂಚಾರವಮಾಡಿ ಅಲ್ಲಿಯ ಅಂದಚಂದಗಳನ್ನು ಕಷ್ಟಸುಖಗಳನ್ನೂ ಅನುಭವಿಸಿದ್ದೇನೆ. ಒಮ್ಮೊಮ್ಮೆ ಲೀಲಾ ನನ್ನೊಡನೆ ಬರುತ್ತಿದ್ದಳು. ಅವಳು ಬಂದಾಗಲೆಲ್ಲಾ ಅವಳಿಗೆ ಹಿತವಾದ ಮಕ್ಕಳ ಮೈತೊಳೆಯುವ ಕೆಲಸ ಮಾಡುತ್ತಿದ್ದಳು. ಅದು ಅವಳ ಜೀವನದ ಆಸೆ. ಐವತ್ತರ ಮೇಲಾದ ನನಗೆ ಆಯಾಸವಿಲ್ಲದೆ ಇರುತ್ತಿರಲಿಲ್ಲ. ನಾನು ನನ್ನ ಮೂವತ್ತನೆ ವಯಸ್ಸಿನಲ್ಲಿಯೇ ನೀಫಾಕ್ಕೆ ಬಂದಿದ್ದರೆ ಚೆನ್ನಾಗಿತ್ತೆನಿಸುತ್ತಿತ್ತು.

ಈ ದೀರ್ಘ ಪ್ರವಾಸದಲ್ಲಿ ಒಮ್ಮೊಮ್ಮೆ ಹೆಂಡತಿ ಮಕ್ಕಳನ್ನು ಬಹಳ ದಿನ ಅಗಲಿ ಇರಬೇಕಾಗುತ್ತಿತ್ತು. ಆದರೆ ಅದು ಅನಿವಾರ್ಯ. ನನ್ನ ಒಂಟಿತನದಲ್ಲಿ ನಾನು ಇನ್ನೊಬ್ಬರ ಮನನೋಯಿಸುವ ಕೆಲಸ ಮಾಡುತ್ತಿರಲಿಲ್ಲ. ನನ್ನ ಪ್ರವಾಸಗಳಿಂದ ಒಂದು ಪಾಠ ಕಲಿತೆ. ಅದೇನೆಂದರೆ, ಒಬ್ಬ ಫಾರೆಸ್ಟ್ ಅಧಿಕಾರಿ ಹೇಳಿದಂತೆ, 'ಪ್ರವಾಸ ಮಾಡುವಾಗ ಜೊತೆಯಲ್ಲಿರುವ ಯಾರನ್ನೂ ಬಯ್ಯಬೇಡ; ಒಂಟಿಯಾಗಿ ಇರುವಾತನ ಮನಸ್ಸಿಗೆ ಬೇಜಾರುಮಾಡಬೇಡ, ಎಂಬುದು. ಆಡಳಿತ ನಡೆಸುವ ಅಧಿಕಾರಿ ತನ್ನ ಕೆಳಗಿನ ನೌಕರರ ಬಗ್ಗೆ ಏನಾದರೂ ಹೇಳುವುದಿದ್ದರೆ ಅವರು ಸಂಚಾರದಿಂದ ಹಿಂದಿರುಗುವವರೆಗೂ ಕಾಯುವುದೊಳ್ಳೆಯದು ಒಂಟಿತನ ಎಲ್ಲವನ್ನೂ ಅಸಹ್ಯವಾಗಿ ಮಾಡಿಬಿಡುತ್ತದೆ.'

ಒಟ್ಟಿನಲ್ಲಿ ನಾನು ನೀಫಾ ಪ್ರವಾಸಗಳಲ್ಲಿ ಅಪಾರ ಆನಂದಪಟ್ಟೆ. ಅವುಗಳಿಂದ ಬೇಕಾದಷ್ಟು ಕಲಿತೆ. ತವಾಂಗಿಗೆ ಹೋಗುವ ದಾರಿಯಲ್ಲಿ ಪರ್ವತಗಳ ಸೌಂದರ್ಯ ದರ್ಶನದಿಂದ ಪವಿತ್ರನಾಗಿ ಮತ್ತಷ್ಟು ಶಕ್ತನಾದೆ. ಜನರ ಮೃದುವರ್ತನೆ ಹಾಗೂ ಅವರ ಸದ್ದಿಲ್ಲದ ಜೀವನದಿಂದ ಪ್ರಭಾವಿತನಾಗಿ ಮತ್ತಷ್ಟು ಉಜ್ವಲನಾದೆ. ಆದರೆ ತಗಿನ್ ಎಂಬ ಗಿರಿಜನರು ನನ್ನ ಮೇಲೆ ಮಹತ್ಪರಿಣಾಮವನ್ನುಂಟುಮಾಡಿದರು. ಅವರನ್ನು ಹಿಂಡುತ್ತಿದ್ದ ಬಡತನ ಹಾಗೂ ಬೋಳುಬಾಳು ನನ್ನ ಮನಸ್ಸಿಗೆ ತುಂಬಾ ವ್ಯಥೆಯನ್ನುಂಟುಮಾಡಿದುವು. ಗಾಂಧೀಜಿ ಬಡವರನ್ನು ದರಿದ್ರನಾರಾಯಣ ಎಂದು ಕರೆಯುತ್ತಿದ್ದರು. ಆದರೆ ತಗಿನ್ ಜನರು ಹೊಟ್ಟೆಗಿಲ್ಲದ ಬುದ್ಧನ ರೂಪದಲ್ಲಿ ಅಥವಾ ಇಸಯನ ನರಳುವ ಸೇವಕನ (Suffering Servant of Isaiah)* ರೂಪದಲ್ಲಿ ನನಗೆ ಕಾಣಿಸಿದರು.

ಭಾವನಾಸಾಮ್ರಾಜ್ಯದಲ್ಲಿ ವಿಹರಿಸುವ ನಮ್ಮಂಥವರು ಕಲಿಯಬೇಕಾದದ್ದು ಎಷ್ಟಿದೆ! ಈ ಪ್ರಪಂಚದಲ್ಲಿ ಶ್ರೀಮಂತರಿದ್ದಾರೆ; ಜೀವನದಲ್ಲಿ ಜಯಭೇರಿ ಹೊಡೆದವರಿದ್ದಾರೆ. ಅವರಿಗೆ ಸುಖ ಎನ್ನುವುದಿಲ್ಲ. ಅಂಥವರ ಬಗ್ಗೆ ಕರುಣೆ ತೋರಬೇಕಾಗುತ್ತದೆ. ವಕ್ರವೂ ಸೋಮಾರಿಯೂ ಆದವನ ಹಿರಿತನವನ್ನು ನಾವು ಒಪ್ಪಬೇಕಾಗುತ್ತದೆ. ನನಗೆ ಇದೊಂದು ಕಠಿಣ ಪಾಠವಾಗಿತ್ತು. ಏಕೆಂದರೆ, ಕಾವ್ಯಮಯವಾದ ನನ್ನ ಆತ್ಮ ಅಚ್ಚರಿಯೂ ಹೊಸದೂ ಆದುದರಲ್ಲಿ ಆನಂದ ಗೊಳ್ಳುತ್ತದೆ. ಸೌಂದರ್ಯವಿದ್ದರೆ ಆಯಿತು, ಒಂದು ಕೂದಲೆಳೆ ಸಾಕು ನನ್ನನ್ನು ಎಳೆದುಕೊಂಡುಹೋಗಲಿಕ್ಕೆ.

---

* Isaiah ಇಸಯ ಕ್ರಿ.ಪೂ. – ಎಂಟನೆಯ ಶತಮಾನದ ಒಬ್ಬ ಯಹೂದಿ ಪ್ರವಾದಿ.

೧೦. 'ದರ್ಶನ'ದ ಬೆಳವಣಿಗೆ

ನಾನು ಮತ್ತು ಶಾಮರಾವ್ ಮೊಟ್ಟಮೊದಲಿಗೆ ಮೈಕಲ್ ಬೆಟ್ಟಗಳಲ್ಲಿ ಇರಲು ಹೋದಾಗ ನಮ್ಮ ಬಳಿ ಮತ್ತೊಬ್ಬರಿಗೆ ಸಹಾಯಮಾಡುವ ಯಾವ ಸಾಧನಗಳೂ ಇರಲಿಲ್ಲ. ಶಾಮರಾವ್‌ಗೆ ಮಾತ್ರ ಸ್ವಲ್ಪ ವೈದ್ಯ ಬರುತ್ತಿತ್ತು. ಮೊದಮೊದಲಿಗೆ ನಮ್ಮ ಭಾವನೆ ಗಿರಿಜನರ ಮಧ್ಯ ಇದ್ದು, ಅವರಂತೆ ಬಾಳಿ, ಅವರ ಮನಸ್ಸನ್ನು ತಿದ್ದಿದರೆ ಸಾಕು, ಅವರ ಆರ್ಥಿಕ ಸ್ಥಿತಿಯ ಕಡೆ ಗಮನಕೊಡುವುದು ಅಗತ್ಯವಿಲ್ಲ ಎಂದಿತ್ತು. ಕಾಲ ಕಳೆದಂತೆ ನಮಗೆ ಅನ್ನಿಸಿತು, ಇಷ್ಟು ಮಾಡಿದರೆ ಸಾಲದು, ಮತ್ತೇನಾದರೂ ಮಾಡಬೇಕು ಎಂದು. ಇದರ ಪರಿಣಾಮವಾಗಿ ನಾವು ಶಾಲೆಗಳನ್ನು ತೆರೆದೆವು; ಆಸ್ಪತ್ರೆಗಳನ್ನು ಸ್ಥಾಪಿಸಿದೆವು. ಔಷಧಿ ಕೊಡುವುದರಲ್ಲಿ ಶಾಮರಾವ್ ಹೆಸರುವಾಸಿಯಾದರು. ಐವತ್ತು ನೂರು ಮೈಲಿಗಳಿಂದ ರೋಗಿಗಳು ಬರುತ್ತಿದ್ದರು ಅವರಿಂದ ಔಷಧಿ ಪಡೆಯಲು. ಜನರಲ್ಲಿ ಬಂದ ಮನಸ್ತಾಪಗಳನ್ನು ನಾವು ರಾಜೀಮಾಡಿ ಪರಿಹರಿಸಲು ಪ್ರಯತ್ನಪಟ್ಟೆವು. ಕುಷ್ಠರೋಗ ಜನರನ್ನು ವಿಪರೀತ ಪೀಡಿಸುತ್ತಿತ್ತು. ನಾವು ಕುಷ್ಠರೋಗಿಗಳಿಗಾಗಿ ಗೃಹಗಳನ್ನು ತೆರೆದು ರೋಗಿಗಳ ಶುಶ್ರೂಷೆ ಮಾಡಲಾರಂಭಿಸಿದೆವು.

ಮೊದಮೊದಲು ನಾವು ಜನರ ಹಕ್ಕುಗಳೇನು ಎಂಬುದನ್ನು ತಿಳಿಸಿ ಕೊಡಬೇಕಾಯಿತು. ಹೀಗೆ ಮಾಡಿದ್ದರಿಂದ ನಾವು ಪೊಲೀಸ್ ಮತ್ತು ಫಾರೆಸ್ಟ್ ನೌಕರರನ್ನೂ ವರ್ತಕರನ್ನು ಎದುರಿಸಬೇಕಾಗಿ ಬಂದಿತು. ನಾವು ಹೋರಾಡುವುದರ ಜೊತೆಗೆ ಜನರೇ ತಮ್ಮ ಹಕ್ಕುಗಳಿಗಾಗಿ ಹೋರಾಡುವುದನ್ನು ಕಲಿಸಬೇಕಾಯಿತು. ಈ ಕಾರಣ ಗಿರಿಜನರಲ್ಲದವರಿಗೆ ನಾವು ಬೇಡವಾದೆವು. ಅವರು ನಮ್ಮ ಬಗ್ಗೆ ಇಲ್ಲಸಲ್ಲದ ವಿಷಯಗಳನ್ನು ಹರಡಲು ಆರಂಭಿಸಿದರು. ಎಲ್ಲಕ್ಕಿಂತ ಅಪಾಯಕರವಾದ ಅಪಪ್ರಚಾರವೆಂದರೆ ನಮ್ಮ ಔಷಧಿಗಳು ಡೊಂಗಿ, ಅವಕ್ಕೆ ಅಸ್ಪೃಶ್ಯರು ಮುಟ್ಟಿದ ನೀರನ್ನು ಹಾಕುತ್ತಾರೆ, ಜನರನ್ನು ಕ್ರೈಸ್ತಮತಕ್ಕೆ ಸೇರಿಸಿಕೊಳ್ಳಲು ಕಳುಹಿಸಿಬಿಡುತ್ತಾರೆ ಎಂಬುವುಗಳು. ಆದೆ ನಮ್ಮ ಅದೃಷ್ಟದಿಂದ ಒಬ್ಬ ಪೊಲೀಸ್ ಸಬ್‌ಇನ್‌ಸ್ಪೆಕ್ಟರಿಗೇನೇ ಮೇಹಜಾಡ್ಯ ಅಂಟಿಕೊಂಡಿತು. ಶಾಮರಾವ್ ಆ ಜಾಡ್ಯವನ್ನು ವಾಸಿಮಾಡಿದರು. ಇದರಿಂದಾಗಿ ಸರ್ಕಾರಿ ನೌಕರರು ಮೆಲ್ಲಗೆ ದಾರಿಗೆ ಬರಲಾರಂಭಿಸಿದರು.

ನಾನು ಮೊಟ್ಟಮೊದಲು, ಅಂದರೆ ೧೯೪೩ರಲ್ಲಿ, ಮಾಡೆರ್ನ್‌ರೆವ್ಯೂ ಎಂಬ ಪತ್ರಿಕೆಯಲ್ಲಿ ಆದಿವಾಸಿ ಬೈಗರ ಬಗ್ಗೆ ಬರೆಯುತ್ತಾ 'ಕಿತ್ತು ತಿನ್ನುತ್ತಿರುವ ಬಡತನ, ರೋಗರುಜಿನ, ಅಜ್ಞಾನ ಇವುಗಳ ನಿವಾರಣೆಯಾಗದ ಹೊರತು ನಮಗೆ ನಿದ್ದೆ

ಬರುವುದಿಲ್ಲ. ಹಾಗೆ ಮಾಡದಿದ್ದಲ್ಲಿ ನಾವು ಎಂಥ ಮಹಾಪರಾಧ ಮಾಡುತ್ತೇವೆ ಎಂಬುದನ್ನು ಆಲೋಚಿಸಬೇಕು' ಎಂದು ಹೇಳಿದೆ.

ಬಡತನ ಮತ್ತು ರೋಗರುಜಿನಗಳ ನಿವಾರಣೆಯ ಜೊತೆಗೆ, ನಾನಾ ರೀತಿಯಲ್ಲಿ ಆಗುತ್ತಿದ್ದ ಜನರ ಶೋಷಣೆಯನ್ನು ತಡೆಗಟ್ಟಬೇಕಾಯಿತು. ಸೊಗಸಾದುದು ಮತ್ತು ಸ್ವತಂತ್ರ್ಯವಾದುದೆಲ್ಲವನ್ನೂ ರಕ್ಷಿಸಬೇಕೆಂದು ನನಗೆ ಮನಸ್ಸಾಯಿತು. ಸರಳಜೀವಿಗಳಾದ ಆ ಗಿರಿಜನರ ಹೆಣ್ಣು ಗಂಡಿನ ಪ್ರೇಮ ಹಾಗೂ ಆನಂದಕ್ಕೆ ಯಾರೂ ಅಡ್ಡಿಬರದಂತೆ ನೋಡಿಕೊಳ್ಳಬೇಕಾದ್ದು ಆವಶ್ಯಕವಾಗಿ ಕಂಡಿತು. ಅವರ ಒಂದು ತುತ್ತು ಅನ್ನಕ್ಕೆ ಯಾರೂ ಅಡ್ಡಿ ಬರಬಾರದೆಂದು ನನ್ನ ಆಸೆಯಾಗಿತ್ತು. ಆದರೆ ಜನ ಇದನ್ನು ತೀರಾ ತಪ್ಪು ತಿಳಿದುಕೊಂಡುಬಿಟ್ಟರು. ಕವಿಗಳೂ ಕಲಾವಂತರೂ ಯಾವಾಗಲೂ ನನ್ನ ಕಡೆ ಇದ್ದರು. ಡಬ್ಲ್ಯು. ಜಿ. ಅರ್ಚರ್ ಅವರು ನನ್ನ ಬಗ್ಗೆ ಮೆಚ್ಚುಗೆಯ ಹಾಡನ್ನೇ ಕಟ್ಟಿದರು.

ನಾನು ಮಾಡಿದ ಮತ್ತೊಂದು ಕೆಲಸವೆಂದರೆ, ಈ ಆದಿವಾಸಿ ಜನರ ಬಗ್ಗೆ ಹೆಚ್ಚು ವಿಚಾರಗಳನ್ನು ಪ್ರಪಂಚಕ್ಕೆ ತಿಳಿಯಪಡಿಸಿದ್ದು. ಮೊದಲಿಗೇನೆ ಮುನ್ನುಗ್ಗಿ ಕೆಲಸ ಮಾಡಿದ ಕೆಲವು ಮಾನವಶಾಸ್ತ್ರಜ್ಞರು ಈ ಆದಿವಾಸಿಗಳ ಬಗ್ಗೆ ಅಷ್ಟಿಷ್ಟು ಹೇಳಿದ್ದರು. ಆದರೆ ಅವರು ಹೇಳಿದ್ದನ್ನು ಓದಿದವರು ಬಹಳ ಕಡಮೆ. ಆದಿವಾಸಿಗಳೆಂದರೆ ತೊಂದರೆ ಕೊಡುವ ಕ್ರೂರ ಜನ ಅಥವಾ ಲೈಂಗಿಕ ವರ್ತನೆಗಳಲ್ಲಿ ತೊಡಗಿದ, ನರಬಲಿ ಕೊಡುವ, ತಲೆಬುರುಡೆ ಬೇಟೆಯಾಡುವ ಬಣ್ಣಬಣ್ಣದ ಜನ ಎಂಬ ಭಾವನೆ ಇತ್ತು. ಹೀಗಾಗಿ ಅವರೇ ಒಂದು ತರಹ ಮನುಷ್ಯರು, ಅವರು ಒಂದಿಷ್ಟು ಕರುಣೆಗೆ ಅರ್ಹರೇ ಹೊರತು, ಗೌರವಕ್ಕೆ ಪಾತ್ರರಲ್ಲ ಎಂಬ ಸಾಮಾನ್ಯ ತಿಳುವಳಿಕೆ ಇತ್ತು. ನನಗನ್ನಿಸಿತು, ಆ ಆದಿವಾಸಿಗಳ ಅಭಿವೃದ್ಧಿಯಾಗಬೇಕಾದರೆ ದೇಶದ ಇತರ ಜನ ಇವರ ಬಗ್ಗೆ ಸರಿಯಾಗಿ ವರ್ತಿಸಬೇಕು. ಮತ್ತು ಇವರನ್ನು ಗೌರವ ವಿಶ್ವಾಸಗಳಿಂದ ಕಾಣಬೇಕು ಎಂದು.

ಗಿರಿಜನರ ರಕ್ಷಣೆಯ ಬಗ್ಗೆ ನನ್ನ ಅಭಿಪ್ರಾಯಗಳು ಸಾಕಷ್ಟು ಗಲಿಬಿಲಿಯನ್ನುಂಟುಮಾಡಿದುವು. ಗಿರಿಜನರನ್ನು ಇದ್ದಂತೆಯೇ ಇಡಬೇಕೆಂದು ನಾನು ಹೇಳುತ್ತೇನೆಂದು ನನ್ನ ಮೇಲೆ ಅನೇಕ ವರ್ಷಗಳ ಕಾಲ, ಅಷ್ಟೇ ಅಲ್ಲ ಇಲ್ಲಿಯವರೆಗೂ ಅಪವಾದ ಹೊರಿಸಿದರು. ಅವರು ಅಭಿವೃದ್ಧಿಯಾಗಬಾರದು, ಅವರನ್ನು ಮಾನವ ಶಾಸ್ತ್ರಜ್ಞರ ಅನುಕೂಲಕ್ಕಾಗಿ ವಸ್ತುಸಂಗ್ರಹಾಲಯದ ಮಾದರಿಯಾಗಿ ಇಡಬೇಕೆಂದು ನನ್ನ ಅಭಿಪ್ರಾಯ ಎಂದು ಪ್ರಚಾರ ಮಾಡಿದರು. ಇದೆಲ್ಲ ಶುದ್ಧ ತಿಳಿಗೇಡಿತನ. ನನ್ನನ್ನು ಟೀಕಿಸಿದವರು ನಾನು ವಾಸ್ತವವಾಗಿ ಬರೆದದ್ದನ್ನು ಓದುವ ತೊಂದರೆ ತೆಗೆದುಕೊಳ್ಳಲಿಲ್ಲ. ನಾನು ಹೇಳಿದ್ದು ಇಷ್ಟೆ : ಗಿರಿಜನರ ಅಭಿವೃದ್ಧಿ ಕಾಲಕಾಲಕ್ಕೆ ಎಷ್ಟು ಆಗಬೇಕೋ ಅಷ್ಟೂ ಆಗಬೇಕು; ಅವರಲ್ಲಿರುವ ಜೀವನ ರೀತಿಯನ್ನು ಹಾಳುಮಾಡುವುದು ಬೇಡ; ಹಳೆಯದನ್ನು ಪೂರ್ತಿ ಬಿಟ್ಟು ಹೊಸದನ್ನು ಅನುಸರಿಸುವುದು ಬೇಡ ಎಂದು.

ಸ್ವಾತಂತ್ರ್ಯಕ್ಕೆ ಪೂರ್ವ ಗಿರಿಜನರ ಭವಿಷ್ಯದ ಬಗ್ಗೆ ಬೇಕಾದಷ್ಟು ಅವಾಸ್ತವಿಕ ಪಾಂಡಿತ್ಯದ ಚರ್ಚೆ ಆಗಿದ್ದರೂ, ಅವರ ಬಗ್ಗೆ ತಾಳಬೇಕಾದ ಧೋರಣೆಗಳಿಗಾಗಲೀ ತತ್ವಜಿಜ್ಞಾಸೆಗಳಿಗಾಗಲೀ ಅಷ್ಟು ಅವಕಾಶವಿರಲಿಲ್ಲ. ಇದಕ್ಕೆ ಕಾರಣ ಗಿರಿಜನರಿಗೆ ಸಂಬಂಧಪಟ್ಟ ಯೋಜನೆ ದೇಶದ ಅಭಿವೃದ್ಧಿಗೆ ಹಾಕಿದ ಸಮಗ್ರ ಯೋಜನೆಗಳನ್ನು ಅನುಸರಿಸಬೇಕಾಗಿತ್ತು. ಸ್ವಾತಂತ್ರ್ಯಕ್ಕೆ ಪೂರ್ವ ಯಾರನ್ನೂ ಕೇಳುತ್ತಿರಲಿಲ್ಲ. ಬಹುತೇಕ ಹಳ್ಳಿಗಳು ಅಜ್ಞಾನದಲ್ಲಿ ಬಡತನದ ಕೂಪದಲ್ಲಿ ಒದ್ದಾಡುತ್ತಿದ್ದುವು. ಯಾವ ಸೌಕರ್ಯವೂ ಅವರಿಗಿರಲಿಲ್ಲ. ಗಿರಿಜನರಂತೆಯೇ ಅವರನ್ನೂ ನಾಗರಿಕ ಸಮಾಜವು ಶೋಷಣೆಮಾಡುತ್ತಿತ್ತು. ಗಿರಿಜನರಲ್ಲಿ ಸ್ವಾತಂತ್ರ್ಯ ಚಳುವಳಿ ಹಬ್ಬಬಾರದೆಂದು ಬ್ರಿಟಿಷ್ ಸರ್ಕಾರದ ಅಭಿಲಾಷೆಯಾಗಿತ್ತು. ಕಾಂಗ್ರೆಸ್ ಕಾರ್ಯಕರ್ತರು ಗುಡ್ಡಗಾಡುಗಳಲ್ಲಿ ಹೋಗುವುದಕ್ಕೆ ಅನೇಕ ವೇಳೆ ಅವಕಾಶ ಕೊಡುತ್ತಿರಲಿಲ್ಲ. ಮೊಟ್ಟಮೊದಲು ಗಿರಿಜನರ ಬಗ್ಗೆ ನಾನು ಕೆಲಸ ಮಾಡಲು ಹೋದಾಗ ಪೊಲೀಸರು ನನ್ನ ಮೇಲೆ ಉಸ್ತುವಾರಿ ಇಟ್ಟುಕೊಂಡಿದ್ದರು.

ಸ್ವಾತಂತ್ರ್ಯ ಬಂದಿತು. ಅದರ ಜೊತೆ ಜನಜಾಗೃತಿಯೂ ಬಂದಿತು. ಗಿರಿಜನರಿಗೂ ಭೂಪಟದಲ್ಲಿ ಜಾಗ ಸಿಕ್ಕಿತು. ಅವರೂ ಸುದ್ದಿಗೆ ಅರ್ಹರಾದರು. ಭಾರಿ ಅಭಿವೃದ್ಧಿ ಯೋಜನೆಗಳು ಹಾಕಲ್ಪಟ್ಟವು. ಪಂಚವಾರ್ಷಿಕ ಯೋಜನೆಗಳಲ್ಲಿ ಗಿರಿಜನರ ಅಭಿವೃದ್ಧಿಯ ಬಗ್ಗೆ ಹೇರಳವಾದ ಹಣ ಒದಗಿಸಲಾಯಿತು. ಅವರ ಜೀವನದಲ್ಲಿ ಬದಲಾವಣೆಯಾಗಬೇಕೆಂದು ನಾನೂ ಹೇಳಿದೆ. ಆ ಬದಲಾವಣೆ ಅವರ ಒಳ್ಳೆಯದಕ್ಕೆ ಆಗಬೇಕೇ ಹೊರತು, ಅವರ ದುಸ್ಥಿತಿಗೆ ಅಥವಾ ಅವರ ಅವನತಿಗೆ ಆಗಬಾರದು ಎಂದು ಹೇಳಿದೆ. ಅವರೂ 'ನಾಗರಿಕ' ರಾಗಬೇಕು. ಅವರು ಹಿಂದಿನಂತೆ ಯಾರಿಗೂ ತಿಳಿಯದಂತಿರಲು ಸಾಧ್ಯವಿಲ್ಲ. ಭಾರತದ ಇತರ ಜನರಂತೆ ಅವರ ಬಾಳೂ ಹಸನಾಗಬೇಕು. ಬಯಲಿನ ಜನ ಗುಡ್ಡದ ಜನರಿಂದ ಬೇರೆ ಇರಲು ಸಾಧ್ಯವಿಲ್ಲ. ಇಬ್ಬರೂ ಪರಸ್ಪರ ವಿನಿಮಯ ಮಾಡಿಕೊಳ್ಳಬೇಕಾದ್ದು ಬಹಳ ಇದೆ.

ಗಿರಿಜನರ ಅಭಿವೃದ್ಧಿಗೆ ಕೈಹಾಕುವಾಗ ಅವರ ಬಗ್ಗೆ ನಾವು ಯಾವ ರೀತಿ ವರ್ತಿಸಬೇಕೆಂಬುದೂ ಬಹಳ ಮುಖ್ಯ. ಅವರನ್ನು ಹೀನಾಯವಾಗಿ ಕಾಣುವು ದಾಗಲೀ, ನಾವು ತಿಳಿದವರು ಅವರು ದಡ್ಡರು ಎಂಬ ದೊಡ್ಡಸ್ತಿಕೆಯ ಭಾವನೆಯಾಗಲೀ ಸಲ್ಲದು. ಅದಲ್ಲದೆ ಅವರ ಸಂಸ್ಕೃತಿಯನ್ನು ಹಾಳುಮಾಡುವ ಯಾವುದನ್ನೂ ಮಾಡಬಾರದು.

ನೆಹರು ಅವರು ಹೇಳಿದಂತೆ, ಇಂಡಿಯಾ ಒಂದು ಭವ್ಯವಾದ ಹಾಗೂ ವೈವಿಧ್ಯಯುತವಾದ ಪರದೆ. ಅದರಲ್ಲಿ ಆದಿವಾಸಿಗಳ ಸೊಗಸಾದ ಚಿತ್ರವೂ ಇದೆ. ಅದನ್ನು ಹಾಳುಮಾಡಬಾರದು. ಒಟ್ಟಿನಲ್ಲಿ ಗಿರಿಜನರ ಅಭಿವೃದ್ಧಿಯನ್ನು ಅವರ ಸಂಪ್ರದಾಯದಂತೆಯೇ ಮತ್ತು ಅವರ ಮನೋಧರ್ಮಕ್ಕನುಸರಿಸಿಯೇ

ಮಾಡುವುದೊಳ್ಳೆಯದು. ನೆಹ್ರೂ ಅವರ ಈ ಸೂತ್ರ ನಾನು ಹೇಳುವುದನ್ನು ಸ್ಪಷ್ಟವಾಗಿ ಹೇಳಿದೆ. ನನ್ನ ಅಭಿಪ್ರಾಯವನ್ನು ನಾರಿ ರುಸ್ತುಮ್‌ಜೀಯವರೂ ಒಂದಲ್ಲ ಹಲವಾರು ಸಲ ವ್ಯಕ್ತಪಡಿಸಿದ್ದಾರೆ.

ಗಿರಿಜನರ ಅಭಿವೃದ್ಧಿಯ ಬಗ್ಗೆ ನಾನು ರೂಢಿಸಿದ ತತ್ವಜಿಜ್ಞಾಸೆ A Philosophy for NEFA (ನೀಫಾಕ್ಕೆ ಒಂದು ತತ್ತ್ವಜಿಜ್ಞಾಸೆ) ಎಂಬ ಪುಸ್ತಕರೂಪದಲ್ಲಿ ಪ್ರಕಟವಾಯಿತು. ಅದಕ್ಕೆ ನೆಹ್ರೂ ಅವರು ತಮ್ಮ ಪ್ರೋತ್ಸಾಹಕರವಾದ ಮುನ್ನುಡಿ ಬರೆದರು. ಅದರಲ್ಲಿ ಅವರು ಹೇಳಿದ್ದು ಹೀಗೆ : 'ಆದಿವಾಸಿಗಳು ತಮ್ಮದೇ ಆದ ಬಾಳನ್ನು ಸಂಪೂರ್ಣ ಸ್ವಾತಂತ್ರ್ಯದಿಂದ ಬಾಳುವಂತೆ ಮಾಡುವುದು ಮತ್ತು ಅವರನ್ನು ಅವರ ಸಂಪ್ರದಾಯ ಹಾಗೂ ಮನೋಧರ್ಮಕ್ಕನುಗುಣವಾಗಿ ಅಭಿವೃದ್ಧಿಪಡಿಸುವುದು ಆದಿವಾಸಿಗಳ ಸಮಸ್ಯೆಯಾಗಿದೆ. ಭಾರತವೆಂದರೆ ಅವರಿಗೆ ಅದೊಂದು ರಕ್ಷಣೆಯ ಶಕ್ತಿ ಅಷ್ಟೇ ಅಲ್ಲ, ಬಿಡುಗಡೆಯ ಶಕ್ತಿಯೂ ಆಗಿದೆ ಎಂಬ ಭಾವನೆ ಬರಬೇಕು. ಇಂಡಿಯಾ ತಮ್ಮನ್ನು ಆಳುತ್ತಿದೆ ಎಂಬ ಭಾವನೆ ಅವರಿಗೆ ಬರಬಾರದು; ಅಥವಾ ಅವರಿಗೆ ಅಪರಿಚಿತವಾದ ಬೇರೆಯವರ ನಡೆನುಡಿಗಳನ್ನು ಅಥವಾ ಪದ್ಧತಿಗಳನ್ನು ತಮ್ಮ ಮೇಲೆ ಹೇರುತ್ತಿದ್ದಾರೆ ಎಂಬ ತಪ್ಪು ಅಭಿಪ್ರಾಯವೂ ಉಂಟಾಗಬಾರದು. ಹಾಗೇನಾದರೂ ಮಾಡಿದರೆ ನಾವು ಅವರನ್ನು ದೂರಮಾಡಿದಂತೆಯೇ ಸರಿ.'

ನಾನು ರೂಢಿಸಿದ ತತ್ವಜಿಜ್ಞಾಸೆ ಟೀಕೆಗಳಿಗೆ ಒಳಗಾಯಿತು. ರಾಂಚಿಯಲ್ಲಿ ನಡೆದ ಸಮ್ಮೇಳನವೊಂದರಲ್ಲಿ ಒಬ್ಬ ಡೆವಲಪ್‌ಮೆಂಟ್ ಕಮೀಷನರು ಎದ್ದುನಿಂತು, ಆದಿವಾಸಿಗಳ ಮನೋಧರ್ಮವೆಂಬುದೇ ಇಲ್ಲದಿರುವಾಗ ಆ ಮನೋಧರ್ಮಕ್ಕನು ಸರಿಸಿ ಅವರನ್ನು ಅಭಿವೃದ್ಧಿಮಾಡುವುದು ಹೇಗೆ ? ಎಂದು ಕೇಳಿದರು ! ಕೆಲವು ಜನ ಆದಿವಾಸಿಗಳು ತಮ್ಮ ಹಳೆಯ ಸಂಪ್ರದಾಯವನ್ನೆಲ್ಲ ಕಳೆದುಕೊಂಡಿದ್ದಾರೆ ನಿಜ. ಆದರೆ ಅದನ್ನು ಉಳಿಸಿಕೊಂಡು ಬಂದಿರುವವರೂ ಅನೇಕ ಜನರಿದ್ದಾರೆ. ಅದನ್ನು ಅನುಸರಿಸಿ ಅವರ ಅಭಿವೃದ್ಧಿಯಾಗಬೇಕು.

ಮತ್ತೊಂದು ಅಭಿಪ್ರಾಯವೇನೆಂದರೆ, ಆದಿವಾಸಿಗಳನ್ನು ಬೇರೆ ಇಡುವುದು ಸರಿಯಲ್ಲ, ಅವರನ್ನು ಬೇರೆಯವರೊಡನೆ ಬೆರೆಸಿಬಿಡಬೇಕು ಎಂದು. ಇದರಲ್ಲಿ ಒಂದು ತಪ್ಪು ಭಾವನೆ ಇದೆ. ಇಂಡಿಯಾದ ಇತರ ಜನರೆಲ್ಲ ಒಂದೇ ತರಹ ಇಲ್ಲ. ಅವರಲ್ಲಿಯೂ ವೈವಿಧ್ಯತೆ ಇದೆ. ಹೀಗಿರುವಾಗ ಗಿರಿಜನರನ್ನು ಉಳಿದವರಂತೆ ಮಾಡಬೇಕೆನ್ನುವುದರಲ್ಲಿ ಅರ್ಥವಿಲ್ಲ. ನಾವು ಬೇಡ ಎಂದರೂ ಇದು ಕಾಲಾಂತರದಲ್ಲಿ ಆಗಿಯೇ ಆಗುತ್ತದೆ. ಅದನ್ನು ನಾವೇ ಆಗಿ ಆತುರಪಟ್ಟು ಮಾಡುವುದು ಬೇಡ.

ಇನ್ನೂರೈವತ್ತು ಲಕ್ಷ ಗಿರಿಜನರನ್ನೆಲ್ಲಾ ಕುರಿತು ಅವರ ಬಗ್ಗೆ ನನ್ನ ಅಭಿಪ್ರಾಯ ಏನೆಂಬುದನ್ನು ಸಂಕ್ಷೇಪವಾಗಿ ಹೇಳಿಬಿಡುತ್ತೇನೆ. ದೇಶದ ಬಹುಮುಖ ಅಭಿವೃದ್ಧಿ ಯೋಜನೆಗಳನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ ಐದು ವಿಷಯಗಳನ್ನು ಆದಿವಾಸಿಗಳ ಬಗ್ಗೆ ಗಮನಿಸಬೇಕು :

೧. ಅವರ ಭೂಮಿ ಅವರಿಗೆ ಉಳಿಯಬೇಕು; ಹೊರಗಡೆಯವರಿಗೆ ಅದನ್ನು ಪರಭಾರೆ ಮಾಡುವುದನ್ನು ನಿಲ್ಲಿಸಬೇಕು.

೨. ಕಾಡಿನಲ್ಲಿ ಅವರಿಗೇನು ಹಕ್ಕುಬಾಧ್ಯತೆಗಳಿವೆಯೋ ಅವನ್ನು ಮೊಟಕು ಮಾಡಬಾರದು. ಇಡೀ ಇಂಡಿಯಾದಲ್ಲಿ ಅರಣ್ಯ ಇಲಾಖೆ ಅವರ ಬಗ್ಗೆ ಹೊಸ ಧೋರಣೆ ತಾಳಬೇಕು.

೩. ಗಿರಿಜನರಲ್ಲಿರುವ ಸಾಲದ ಸಮಸ್ಯೆಯನ್ನು ಕಾನೂನು ರೀತಿಯಲ್ಲಿಯೋ ಇಲ್ಲವೆ ಸರಕಾರ ನೇರವಾಗಿಯೋ ಅಥವಾ ಸಹಕಾರಿ ಸಂಘಗಳ ಮೂಲಕ ಹಣ ಒದಗಿಸಿಯೋ ಬಗೆಹರಿಸಬೇಕು.

೪. ಗಿರಿಜನರಿರುವ ಪ್ರದೇಶದ ಕೈಗಾರಿಕಾಭಿವೃದ್ಧಿಗೆ ಹೆಚ್ಚು ಆಸಕ್ತಿ ಅಗತ್ಯ. ಜನರು ಎಲ್ಲಿ ಜಮೀನು ಕಳೆದುಕೊಂಡು ಬೇರೆ ಕಡೆ ವಲಸೆ ಹೋಗಿದ್ದಾರೋ ಅಲ್ಲಿ ಅವರಿಗೆ ಉದಾರವಾದ ಹಾಗೂ ಬುದ್ಧಿವಂತಿಕೆಯ ಪರಿಹಾರವನ್ನೊದಗಿಸುವ ಕಾರ್ಯ ಹಾಕಿಕೊಳ್ಳಬೇಕು.

೫. ಬಹಳ ಕಾಲದಿಂದ ಇದ್ದಂತೆ ಅವರನ್ನು ಬೇರೆ ಇಡುವುದು ನಿಲ್ಲಬೇಕು. ಅವರನ್ನು ಎಲ್ಲೆಲ್ಲಿಯೂ ಸಂತೋಷದಿಂದಲೂ ಪ್ರೀತಿಯಿಂದಲೂ ಸ್ವಾಗತಿಸಬೇಕು; ಸರಿಸಮಾನರನ್ನಾಗಿ ಕಾಣಬೇಕು. ಅವರಿಗೆ ಸರ್ಕಾರಿ ಹುದ್ದೆಗಳಲ್ಲಿ ಎಲ್ಲಾ ಅವಕಾಶಗಳನ್ನೂ ಒದಗಿಸಬೇಕು.

ನಾನು ಈ ಐದು ಅಂಶಗಳನ್ನು ಏಕೆ ಒತ್ತಿಹೇಳುತ್ತೇನೆಂದರೆ, ಇವುಗಳಿಗೆ ಕಳೆದ ಹತ್ತು ವರ್ಷಗಳಲ್ಲಿ ಏನೇನೂ ಬೆಲೆ ಕೊಟ್ಟಿಲ್ಲ. ಅಲ್ಲದೆ ಇವು ಸರಳವೂ ಆವಶ್ಯಕವೂ ಆಗಿವೆ; ಮನಸ್ಸು ಮಾಡಿದರೆ ಕೇಂದ್ರ ಸರ್ಕಾರವೂ ರಾಜ್ಯ ಸರ್ಕಾರಗಳೂ ಮಾಡಬಹುದಾದಂಥವುಗಳು.

ಇವಲ್ಲದೆ ಇನ್ನೂ ಐದು ಅಂಶಗಳಿವೆ. ಇವು ಹೆಚ್ಚು ತೊಡಕಿನವು :

೧. ಗಿರಿಜನರು ತಮ್ಮ ಹಿಂದಿನದನ್ನು ಬಿಡದೆ ಅದನ್ನು ಅಳವಡಿಸಿಕೊಂಡು, ತಮ್ಮ ಇಂದಿನದನ್ನೂ ಮುಂದಿನದನ್ನೂ ಬೆಳೆಸಿಕೊಳ್ಳುವಂತೆ ಮಾಡುವುದು.

೨. ಹಿಂದುಳಿದವರಿಗೆಂದು ಸರ್ಕಾರದವರು ಕೊಡುವ ಆರ್ಥಿಕ ಸೌಕರ್ಯಗಳ ಕಾರಣಕ್ಕಾಗಿ ಅವರ ಹಣೆಗೆ ಗಿರಿಜನರು ಅಥವಾ ಹಿಂದುಳಿದವರು ಎಂಬ ಪಟ್ಟಿಯನ್ನು ಕಟ್ಟಬಾರದು. ಅರಿಯದ ಕಾರುಣ್ಯವರ್ತನೆ ಅರಿತ ಶೋಷಣೆಯಷ್ಟೇ ಅಪಾಯಕಾರಿಯಾಗಬಹುದು.

೩. ಗಿರಿಜನರು ಕೀಳೆಂಬ ಭಾವನೆಯನ್ನುಂಟುಮಾಡುವುದನ್ನು ತಪ್ಪಿಸಬೇಕು. ಹೀಗೆ ಆಗಬೇಕಾದರೆ ಅವರ ಮೇಲೆ ನಮ್ಮ ಭಾವನೆಗಳನ್ನು ಹೊರಿಸಕೂಡದು. ಅವರು ತಿದ್ದುಕೊಳ್ಳಲಾರದ ಮತ್ತು ಅನುಸರಿಸಲಾರದ ಕಾನೂನು ಕಟ್ಟಳೆಗಳನ್ನು

ಅವರ ಮೈಮೇಲೆ ಹೇರಿ ತಾವು ತಪ್ಪಿತಸ್ಥರು ಎಂಬ ಭಾವನೆಯನ್ನುಂಟುಬಾರದು ಬೆದರಿಕೆ ಮತ್ತು ಭೀತಿಯಲ್ಲಿ ಅವರನ್ನಿಡಬಾರದು. ಅವರು ತಮ್ಮ ಸ್ವಾಭಾವಿಕ ರೀತಿಯಲ್ಲಿ ಬಾಳುವುದರಲ್ಲಿ ಅವರಿಗೆ ನಾಚಿಕೆಯಾಗುವಂತೆ ಮಾಡಬಾರದು.

೪. ಗಿರಿಜನರಿಂದ ನಮಗೇನಾದರೂ ಸಹಾಯವಾದೀತೆ ಎಂಬ ಬಗ್ಗೆ ನಾವು ಹೆಚ್ಚು ಗಮನ ಕೊಡಬೇಕು. ಈಗ ನಮ್ಮ ಗಮನವೆಲ್ಲ ನಾವು ಅವರಿಗೆ ಸಹಾಯಮಾಡುವುದರ ಕಡೆಗೆ ಇದೆ. ಅವರ ಸಂಸ್ಕೃತಿ, ಅವರ ಕಲೆ ಬಹು ಮೌಲ್ಯವಾದುವುಗಳು, ಅವುಗಳನ್ನು ನಾವು ಮೆಚ್ಚುತ್ತೇವೆ, ಅವು ನಮಗೆ ಬೇಕು– ಎಂಬುದನ್ನು ಅವರಿಗೆ ಹೇಳೋಣ. ತಾವು ಈ ದೇಶಕ್ಕೆ ಕೊಡಬೇಕಾದ ಕೊಡುಗೆ ಇದೆ ಎಂಬ ಭಾವನೆ ಅವರಿಗೆ ಬಂದಾಗ ಅವರು ಈ ದೇಶದ ಒಂದು ಭಾಗ ಎಂದು ತಿಳಿಯುತ್ತಾರೆ. ಸಮರಸದಲ್ಲಿ ಇದು ಬಹಳ ಮುಖ್ಯವಾದಂಥ ಅಂಶ.

೫. ಗಿರಿಜನರು ತಮ್ಮ ಸ್ವತಂತ್ರರೀತಿಯ ಬಾಳನ್ನು ಬಿಡುವ ಅಥವಾ ಬಾಳಿನ ಆನಂದವನ್ನು ಕಳೆದುಕೊಳ್ಳುವ ಯಾವುದನ್ನೂ ನಾವು ಮಾಡಬಾರದು. ಅದನ್ನು ಉಳಿಸಿಕೊಳ್ಳುವುದಕ್ಕೆ ಸಹಾಯಮಾಡಬೇಕು. ಒಂದು ಮಾತಿನಲ್ಲಿ ಹೇಳುವುದಾದರೆ, ಹುಟ್ಟಿದ ಪ್ರಾಣಿಗೆ ಕಟ್ಟುನಿಟ್ಟಿಲ್ಲದೆ ಕುಣಿವ ಭಾಗ್ಯಕ್ಕಿಂತ ಬೇರೆ ಸೌಭಾಗ್ಯವುಂಟೆ ?

ನಾನು ಮೇಲೆ ಹೇಳಿದ ಅಂಶಗಳು ಮೂವತ್ತು ವರ್ಷಗಳ ಚಿಂತನೆಯಲ್ಲಿ ಅಡಗಿದ್ದರೂ, ನನಗೆ ಅನುಭವ ಬಂದಂತೆ, ಇಡೀ ದೇಶದಲ್ಲಿ ಆದ ಬದಲಾವಣೆಯಂತೆ ಅವುಗಳ ಕಡೆಗೆ ಹೆಚ್ಚು ವಾಲಿದ್ದೇನೆ. ಕಾಲ ಕಳೆದಂತೆ ನಾನು ಗಿರಿಜನರ ಸಂಸ್ಕೃತಿಯ ರಕ್ಷಣೆ ಮತ್ತು ಅಭಿವೃದ್ಧಿಯ ಕಡೆ ಹೆಚ್ಚು ಗಮನಕೊಟ್ಟೆ. ಒಂದು ಕಡೆ, ಅನ್ನ, ಆರೋಗ್ಯ, ಸಂಚಾರ ಸೌಲಭ್ಯ, ಹಾಗೂ ತಿಳುವಳಿಕೆ ; ಮತ್ತೊಂದು ಕಡೆ ಅವರ ಸಂಸ್ಕೃತಿಯ ರಕ್ಷಣೆ ಹಾಗೂ ಪ್ರೋತ್ಸಾಹ – ಇವೆರಡು ಗುರಿಗಳ ಸಾಧನೆ, ಅಂದರೆ ಹಾಳುಮಾಡದಂತೆ ಅಭಿವೃದ್ಧಿಮಾಡುವುದು, ಸುಲಭದ ಕೆಲಸವಲ್ಲ. ಆದರೆ ಮಾಡಲು ಸಾಧ್ಯ ಎಂದು ನನ್ನ ನಂಬಿಕೆ.

೧೧. ಅಂತಿಮ ಆಸೆ

ಕಳೆದ ಒಂಬತ್ತು ವರ್ಷಗಳಿಂದ ನಾವು ಷಿಲಾಂಗ್‌ನಲ್ಲಿ ಇದ್ದೇವೆ. ನಾನು ಬಹಳ ಕಾಲ ಪ್ರವಾಸದಲ್ಲಿದ್ದರೂ ಷಿಲ್ಲಾಂಗ್ ನನ್ನ ನಿಜವಾದ ಮನೆಯಾಗಿದೆ. ಕುಮಾರನು ಅಸ್ಸಾಮ್ ರೈಫಲ್ಸ್ (Assam Rifles) ಸೇರಿಕೊಂಡಿದ್ದಾನೆ. ಅವನು ಈಗ ನಮ್ಮ ಬಳಿ ಇಲ್ಲ. ಉಳಿದ ಹುಡುಗರಿಗೆ ಸಂಸಾರದಲ್ಲಿ ಸೊಗಸು ತುಂಬುವ ವಯಸ್ಸಾಗಿದೆ.

ಮಕ್ಕಳು ಬೇರೆ ಬೇರೆ ಮತವನ್ನು ಆಚರಿಸುತ್ತಾರೆ. ಅಥವಾ ಬೇರೆ ಬೇರೆ ಮತಕ್ಕೆ ಸೇರಿದ್ದೇವೆಂದು ಹೇಳಿಕೊಳ್ಳುತ್ತಾರೆ. ಹದಿನೇಳು ವರ್ಷ ವಯಸ್ಸಾಗಿ ಸ್ವಬುದ್ಧಿ ಬಂದಮೇಲೆ ಕುಮಾರ್ ರೋಮನ್ ಕ್ಯಾಥೊಲಿಕ್ ಆದ. ವಸಂತ್ ತಾನು ಹಿಂದು ಎಂದು ಹೇಳಿಕೊಂಡು ಹಸು ತಿನ್ನುವುದಿಲ್ಲ ಎನ್ನುತ್ತಾನೆ. ನಕುಲ್ ತಾನು ಯಾವುದಕ್ಕೂ ಸೇರದ ವಿಧರ್ಮಿ (Pagan) ಎಂದು ಸಾರುತ್ತಾನೆ. ಅಶೋಕ್ ಬೌದ್ಧಮತಾವಲಂಬಿ. ಪವಿತ್ರ ಗೀತೆಗಳನ್ನು ಹಾಡುತ್ತಾನೆ. ದೇವರ ಮನೆಗೆ ಹೋಗಿ ಹೂವು ಹಾಕುತ್ತಾನೆ. ಲೀಲಾ ಮತ್ತು ನಾನು ಇಂಥಾ ಮತಕ್ಕೇ ಸೇರಿದ್ದೇವೆಂದು ಹೇಳಿಕೊಳ್ಳುವುದಿಲ್ಲ. ಆದರೆ ನಮ್ಮ ಮನಸ್ಸು ಬೌದ್ಧಧರ್ಮದ ಕಡೆ ಹೆಚ್ಚು ವಾಲಿದೆ.

ಈ ಮನೆಯ ಕೇಂದ್ರ ಬಿಂದು ಲೀಲಾ; ಬೀಗದಕೈ ಲೀಲಾ; ಸುಖದ ಉಗ್ರಾಣ ಲೀಲಾ; ನಮಗೆಲ್ಲಾ ದೇವರು ಕೊಟ್ಟ ಉತ್ಕೃಷ್ಟ ಬಹುಮಾನ ಲೀಲಾ. ಕಾಂಗ್ರೇವರ ಮಾತಿನಲ್ಲಿ ಹೇಳುವುದಾದರೆ, ಆಕೆ ಚಂದ್ರ, ನಾನು ಚಂದ್ರವಾಸಿ ಮಾನವ. ಆಕೆಯ ಬಗ್ಗೆ ನಾನಿನ್ನೂ ಕೊಂಚ ತಿಕ್ಕಲಾಗಿಯೇ ಇದ್ದೇನೆ. ಮೊದಲು ಆಕೆಯನ್ನು ಕಂಡಾಗ ಪ್ರೀತಿಸಿದ್ದಕ್ಕಿಂತ ಹೆಚ್ಚು ಪ್ರೀತಿಸುತ್ತಿದ್ದೇನೆ ಈಗ. ಆರ್ಥರ್ ಕೊಯೆಸ್ಲೆರ್ (Arthur Koestler) ಹೇಳುವ The normal, neutralising effect of habituation (ಅತಿ ಪರಿಚಯದಿಂದ ಹುಟ್ಟುವ ಅವಜ್ಞೆ) ನಮ್ಮ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡಲಿಲ್ಲ.

ಮದುವೆ ಮತ್ತು ಸಂಸಾರ – ಇವು ಇಂಡಿಯಾದ ಜೀವನದ ಜೀವಾಳ. ಆದರೆ ಇಂಡಿಯಾದ ಕೆಲವು ಆಧ್ಯಾತ್ಮಿಕ ಕ್ಷೇತ್ರದ ಮುಖಂಡರು ಮದುವೆಯ ಬಗ್ಗೆ ಅಷ್ಟೇನೂ ಒಪ್ಪಬಹುದಾದಂಥ ಅಭಿಪ್ರಾಯಗಳನ್ನು ತಿಳಿಸಿಲ್ಲ. ಒಬ್ಬರು ಹೇಳುತ್ತಾರೆ, 'ಹೆಂಡತಿ ಮಕ್ಕಳ ಮೇಲಿನ ಪ್ರೇಮ ಕೇವಲ ಪಶುಪ್ರೇಮ' ಎಂದು. ಇನ್ನೊಬ್ಬರು,

'ಮನುಷ್ಯನ ಪ್ರೇಮ ತಳಬುಡವಿಲ್ಲದ್ದು' ಎಂದು ಮತ್ತೊಬ್ಬರು ಹೇಳುತ್ತಾರೆ, 'ಸಾಮಾನ್ಯ ಪ್ರೇಮ ಪಶು ಪ್ರೇಮ; ಮದುವೆಯಲ್ಲಿ ಕಾಮ ಪ್ರವೇಶಿಸುವುದು ಸೂಕ್ತವಲ್ಲ' ಎಂದು. ದೊಡ್ಡ ಮಹಾತ್ಮರೆಂದು ಹೆಸರಾದವರೊಬ್ಬರು ಹೇಳುತ್ತಾರೆ, 'ಹೆಂಡತಿ ಗಂಡನ ಬಗ್ಗೆ ತೋರಿಸುವ ಭಾವನೆ ಪ್ರೇಮವಲ್ಲ. ಏಕೆಂದರೆ, ಅದು ಸ್ವಾರ್ಥದಿಂದ ಕೂಡಿದೆ. ಹೆಂಡತಿ ಗಂಡನನ್ನು ಪ್ರೀತಿಸುವುದು ಆತ ಆಕೆಯ ಆಸ್ತಿಯಾಗಿರುವುದರಿಂದ' ಎಂದು.

ಆದರೂ ಸಂಭೋಗಾಕಾಂಕ್ಷೆ (lust) ಶಯನದ ಸುಪ್ಪತ್ತಿಗೆಗೆ ಬರದಂತೆ ಮಾಡುವುದು ಹೋಗಲಿ, ಕಾಮೋದ್ರೇಕ (passion) ಆಧುನಿಕ ಮದುವೆಗೆ ಅದು ಬೇಕೇಬೇಕು. ಅದಿಲ್ಲದಿರುವುದರಿಂದಲೇ ಅನೇಕ ಮದುವೆಗಳು ಮುರಿದು ಬೀಳುವುದು. ಕಲೆ, ತಂತ್ರ (technique), ಸಾಹಸ, ಕಾಮೋದ್ರೇಕ – ಇವು ಸುಖದ ಸಾಮಗ್ರಿಗಳು. ಲೈಂಗಿಕ ವರ್ತನೆ ಒಳ್ಳೆಯದಷ್ಟೇ ಅಲ್ಲ, ಅದು ಚಂದವಾದದ್ದೂ ಹೌದು. ಅದರ ಬಗ್ಗೆ ಕವಿಗಳು ಇಲ್ಲಿಯ ತನಕ ಎಷ್ಟು ವರ್ಣನೆ ಮಾಡಿದ್ದರೂ ಅದರ ಅಂದಚೆಂದ ಸುಖಸಂತಸಗಳನ್ನೂ ಆನಂದವನ್ನೂ ಹೇಳಿರುವುದು ಇನ್ನೂ ಸಾಲದು. ಅದರಲ್ಲಿ ಮುಖ್ಯವಾಗಿರುವುದು, ಅದು ಕೊಡುವ ಸುಖವಷ್ಟೇ ಅಲ್ಲ (ಆ ಸುಖದಲ್ಲಿ ನಾನು ಸಂತೃಪ್ತಿಪಟ್ಟಿದ್ದೇನೆ), ಇನ್ನೊಬ್ಬರೊಡನೆ ಐಕ್ಯವಾಗುವುದಿದೆಯಲ್ಲ ತನ್ನಿಂದ ಹೊರಹೋಗಿ ಇನ್ನೊಬ್ಬರಲ್ಲಿ ಬೆರೆಯುವುದಿದೆಯಲ್ಲ ಅದು ಮುಖ್ಯವಾದದ್ದು. ಟಾಗೂರರು ಹೇಳುತ್ತಾರೆ, 'ಪ್ರೇಮ ನಮ್ಮಿಂದ ಹೊರಗಿದ್ದರೂ ನಮ್ಮಲ್ಲಿ ಬೇರೂರಿ ಮತ್ತು ನಮ್ಮ ಇರುವಿಕೆಯನ್ನೇ ನಮಗುಂಟು ಮಾಡಿಕೊಟ್ಟು ಏನೋ ಒಂದಕ್ಕೆ ಪುಷ್ಟಿಕೊಡುತ್ತದೆ; ಅದು ಅದರ ಉದ್ದೇಶಗಳನ್ನು (Objects) ಪ್ರಕಾಶಮಾಡಿ ಪ್ರಕಟಿಸುತ್ತದೆ' ಎಂದು.

ಲೀಲಾ ಚಿಕ್ಕವಯಸ್ಸಿನ ಹಾಗೂ ಚೆನ್ನದಂಥ ಹೆಂಡತಿಯಾಗಿ ನನ್ನನ್ನು ಯುವಕನನ್ನಾಗಿ ಇಟ್ಟುಕೊಂಡಿರುವುದು ನನ್ನ ಅದೃಷ್ಟವೆಂದೇ ಹೇಳಬೇಕು. ಆಕೆ ನನ್ನನ್ನು ತನ್ನ ಆಸ್ತಿ ಎಂದು ಭಾವಿಸುವುದಾದರೆ ಅದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ಸುಖ ಸಂಸಾರದ ಅನರ್ಘ್ಯ ರತ್ನಗಳಲ್ಲಿ ನಿಸ್ವಾರ್ಥ ಸ್ವಾಮಿತ್ವದ (selfless possession) ಪರಸ್ಪರ ಭಾವನೆಯೂ ಒಂದು.

ಗಿರಿಜನರ ಹುಡುಗಿಯನ್ನು ಮದುವೆಯಾದವರೊಬ್ಬರು ಹೇಳಿದರು, ತಾವು ಹಾಗೆಮಾಡಿದ್ದು ರಾಷ್ಟ್ರೀಯ ಸಂಘಟನೆಯ ಕಾರಣಕ್ಕಾಗಿ ಎಂದು. ಕೆಲವು ರಾಜಕೀಯ ಜನ ಹೇಳುತ್ತಾರೆ. ಗಿರಿಜನರೂ ಇಂಡಿಯಾದ ಬೇರೆ ಜನರೂ ಹತ್ತಿರ ಹತ್ತಿರ ಬರಬೇಕಾದರೆ ಅವರಲ್ಲಿ ಮದುವೆ ಸಂಬಂಧ ಬೆಳೆಯಬೇಕು ಎಂದು. ನಾನು ಲೀಲಾಳನ್ನು ಮದುವೆಯಾದದ್ದು ಯಾವ ವಾದಕ್ಕಾಗಲೀ ಪುಷ್ಟಿ ಕೊಡುವ ಕಾರಣದಿಂದ ಅಲ್ಲ. ಆಕೆಯನ್ನು ಮೆಚ್ಚಿ ಮದುವೆಯಾದೆ ಅಷ್ಟೆ. ಇಂಥ ಮದುವೆಗಳೆಲ್ಲ

ಸುಖದಾಯಕವಾಗಿರುತ್ತವೆ ಎಂದು ಹೇಳುವುದಕ್ಕಾಗುವುದಿಲ್ಲ. ವ್ಯಸನಕರವಾದ ನನ್ನ ಮೊದಲನೆಯ ಮದುವೆಯೇ ಇದಕ್ಕೆ ಉದಾಹರಣೆ. ಆದರೆ ಲೀಲಾಳ ಮದುವೆಯಿಂದ ನಾವಿಬ್ಬರೂ ತುಂಬ ಸುಖವಾಗಿದ್ದೇವೆ. ನಮ್ಮಿಬ್ಬರ ಹಿನ್ನೆಲೆ, ವಿದ್ಯಾಭ್ಯಾಸ ಹಾಗೂ ಮನೋಗುಣ ಬೇರೆಬೇರೆಯಾಗಿದ್ದರೂ ನಾವು ಹೇಗೆ ಸುಖವಾಗಿ ಬಾಳುವುದಕ್ಕೆ ಸಾಧ್ಯವಾಯಿತು ಎಂದು ಕೆಲವು ಸ್ನೇಹಿತರು ಅಚ್ಚರಿ ಪಡುತ್ತಾರೆ. ಆದರೂ ಲೀಲಾಳ ಸ್ನೇಹ ಸತ್ಯವಾದದ್ದು. ಎಜ್ರಾ ಪೌಂಡ್ ಅವರ ಸಂಕೇತಾರ್ಥವನ್ನೂ ಅಥವಾ ಟಾಯನ್‌ಬೀ ಅವರ ಇತಿಹಾಸವಾದವನ್ನು ಚರ್ಚಿಸುವಂಥ ಹೆಂಡತಿಯನ್ನು ಪಡೆಯುವುದು ಆನಂದದಾಯಕವಾಗಿ ಕಂಡರೂ, ಲೀಲಾಳ ಪತಿಭಕ್ತಿ, ಪ್ರೇಮ ಹಾಗೂ ನನ್ನನ್ನು ಅರ್ಥಮಾಡಿಕೊಳ್ಳುವ ಅಪರೂಪ ಶಕ್ತಿ ಅಮೂಲ್ಯವಾದದ್ದು.

ನಮ್ಮಿಬ್ಬರಲ್ಲಿ ವ್ಯತ್ಯಾಸದ ಭಾವನೆಯೇ ಇಲ್ಲ. ವಾಸ್ತವವಾಗಿ ಜೀವನದಲ್ಲಿ ಮುಖ್ಯವಾದದ್ದನ್ನೆಲ್ಲಾ ನಾವು ಸರಿಸಮಾನರಾಗಿ ಹಂಚಿಕೊಂಡು ಬಾಳಬಹುದೆಂದು ನಮಗೆ ಅನ್ನಿಸಿದೆ. ನನಗಿಂತ ಅವಳಿಗೆ ಕಷ್ಟ ಹೆಚ್ಚು. ನಾನು ಅನೇಕ ಸಲ ಆನಂದವನ್ನು ಉಂಟುಮಾಡುವ ಕಾರ್ಯಭಾರದ ಮೇಲೆ ಹೋಗುತ್ತಿದ್ದೆ. ಕೆಲವು ತುರ್ತು ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ತೊಡಗುತ್ತಿದ್ದೆ. 'ಕಛೇರಿ' ಕೆಲವು ವೇಳೆ ಆಕೆಯ ಮೇಲೆ ಪ್ರತಿಸ್ಪರ್ಧಿಸಿದ್ದುಂಟು. ಆದರೆ ಆಕೆ ಅದಕ್ಕೆ ಹೊಂದಿಕೊಂಡು ಹೋಗುತ್ತಿದ್ದಾಳೆ. ನಡೆಯುತ್ತಿರುವುದರಲ್ಲೆಲ್ಲಾ ತುಂಬಾ ಆಸಕ್ತಿ ವಹಿಸುತ್ತಾಳೆ. ಗಂಡಹೆಂಡಿರ ಪ್ರೇಮ ಸದಾ ಅವರ ಮಕ್ಕಳಲ್ಲಿ ಮರುಹುಟ್ಟುತ್ತದೆ; ಆನಂದದಲ್ಲಿ ಹೊಸದಾಗುತ್ತದೆ; ಕಳವಳ ಮತ್ತು ದುಃಖದಲ್ಲಿ ಮತ್ತಷ್ಟು ಶಕ್ತಿ ಪಡೆಯುತ್ತದೆ. 'ಮೆಚ್ಚಿದ ಮದುವೆ' ಈ ಭೂಮಿಯಲ್ಲಿ ಸ್ವರ್ಗಸುಖವನ್ನೇ ತಂದುಕೊಡುತ್ತದೆ. ಆದರೆ ಆ ಮೆಚ್ಚು ಗಾಢವಾಗಿರಬೇಕು ಅಷ್ಟೆ.

ಒಂದು ಕಷ್ಟ ಇತ್ತು. ಏನೆಂದರೆ, ನಾವಿಬ್ಬರೂ ಕಾನೂನು ರೀತಿ ಗಂಡ ಹೆಂಡಿರೇ ಎಂಬುದನ್ನು ಜನ ನಂಬುತ್ತಿರಲಿಲ್ಲ. ಮಿನ್ನೀ ಎಮ್ಮರ್‌ಸನ್ ಅವರು ಹೇಳಿದಂತೆ, 'ಬೆದರಿದ ಕಾಡಿನ ಜಿಂಕೆಯಂತೆ ಕಾಣುತ್ತಿದ್ದ ಆ ಚಿಕ್ಕ ಹುಡುಗಿ ತೂರಾಡುವ ತರಕಟಾಲ್ ಮುದಿ ಕರಡಿಯನ್ನು ಮದುವೆಯಾಗುವುದು ಸಾಧ್ಯವೇ ?' ಎಂದು ಜನ ಅಂದುಕೊಳ್ಳುತ್ತಿದ್ದರು. ಮತ್ತೆ ಕೆಲವರು ನಾನು ಆಕೆಯನ್ನು ಮದುವೆ ಮಾಡಿಕೊಂಡದ್ದು ಕಾಮತೃಪ್ತಿಗಾಗಿ ಎನ್ನುತ್ತಿದ್ದರು. ಆದರೆ ಅದಕ್ಕೆ ಉತ್ತರವಾಗಿ ನಾನು ಕೇಳುತ್ತಿದ್ದೆ. 'ನಾನು ಯಾವ ಹೆಂಗಸರನ್ನು ಮೆಚ್ಚುತ್ತೇನೋ ಅದೇ ಹೆಂಗಸರು ಈಕೆಯನ್ನು ಮೆಚ್ಚುತ್ತಾರಲ್ಲ. ಇದಕ್ಕೇನು ಕಾರಣ ?' ಎಂದು. ಸರ್ ಅಕ್ಬರ್ ಹೈದರಿಯವರ ಮಗಳಾದ ಅಮೀನ ಜಯಾಳ್ ಎಂಬವಳು ಇಂಥವರಲ್ಲಿ ಒಬ್ಬಳು. ಈಕೆ ಮೊದಲ ಗಂಡನನ್ನು ಬಿಟ್ಟು ನಳಿನಿ ಜಯಾಲ್ ಎಂಬ ಹಿಂದೂವನ್ನು ಮದುವೆಯಾದಳು. ಮೊದಲ ಗಂಡನಿಗೆ ಮೂರು ಜನ ಮಕ್ಕಳಿದ್ದರು. ಮದುವೆ

ಷಿಲ್ಲಾಂಗಿನ ನಮ್ಮ ಮನೆಯಲ್ಲಿಯೇ ಆಯಿತು. ನಾನು ಹೆಣ್ಣಿನ ತಂದೆಯಾಗಿ ಹೆಣ್ಣು ಕೊಟ್ಟೆ. ಲೀಲಾಳ ಸ್ನೇಹಿತರು ಹಲವಾರು ಜನ ಬಂದಿದ್ದರು.

ಸಮಯಕ್ಕೆ ತಕ್ಕಂತೆ ಅನುಸರಿಸಿಕೊಳ್ಳುವ ಶಕ್ತಿ ಇದೆ ಲೀಲಾಗೆ. ಅವಳು ಯಾವುದೋ ಮೂಲೆಯ ಗಿರಿಜನ ಹಳ್ಳಿಯೊಂದರಿಂದ ನೇರವಾಗಿ ಷಿಲ್ಲಾಂಗಿಗೆ ಬಂದಳು. ಆದರೂ ಮೂರು ತಿಂಗಳಿನಲ್ಲಿ ಎಂಥ ಪಾರ್ಟಿಯಲ್ಲಿಯು ಸಹ ಅಚ್ಚುಮೆಚ್ಚಿನ ರೀತಿಯಲ್ಲಿ ಅತಿಥಿಗಳನ್ನು ಸತ್ಕರಿಸುತ್ತಿದ್ದಳು. ಕೆಲವು ಬಹು ಪ್ರಾಮುಖ್ಯರಾದವರು (V.I.P.ಗಳು) ಬಂದಾಗಲೂ ಆಕೆ ಸ್ವಲ್ಪವೂ ಅಧೀರಳಾಗಲಿಲ್ಲ– ನಾನು ಆದರೂ.

ಆದರೆ ನನಗೊಂದು ಸಂತೋಷ, ಆಕೆ ಏನೇ ಆದರೂ ಹಳ್ಳಿಯ ಸರಳತೆಯನ್ನು ಬಿಡಲಿಲ್ಲ ಎಂಬುದು. ಏನಾದರೊಂದು ಬೆಳೆಸುವುದು, ಪ್ರಾಣಿಗಳನ್ನು ಸಾಕುವುದು ಅವಳಿಗೆ ತುಂಬ ಇಷ್ಟ. ಮನೆಯಲ್ಲಿ ತುಂಬ ಕೆಲಸ ಬೊಗಸೆ ಹಚ್ಚಿಕೊಳ್ಳುತ್ತಾಳೆ. ಹೆಣಿಗೆಯಲ್ಲಂತೂ ಪ್ರವೀಣೆಯಾಗಿದ್ದಾಳೆ. ಅವಳದು ದೃಢನಿರ್ಧಾರದ ಮನಸ್ಸು. ಬಹುತೇಕ ಆದಿವಾಸಿಗಳಂತೆ ಅವಳು ಬೂಟಾಟಿಕೆ ಹಾಗೂ ನಟನೆಯನ್ನು ಕೂಡಲೇ ಪತ್ತೆಹಚ್ಚಿಬಿಡುತ್ತಾಳೆ. ಜನರನ್ನು ನೋಡಿದಮೇಲೆ ಅವರು ಹೇಳಿದ್ದನ್ನೆಲ್ಲಾ ನಂಬುವುದು ನನ್ನ ಸ್ವಭಾವ. ಆದರೆ ಆಕೆ ಹಾಗಲ್ಲ; ಹುಷಾರಾಗಿರುತ್ತಾಳೆ. ಆಕೆ ಬಹು ದಯಾಪರಳು. ಜನಗಳ ಬಗ್ಗೆ ಕಟ್ಟುನಿಟ್ಟಾಗಿ ವರ್ತಿಸಿದರೂ, ಯಾರಾದರೂ ತೊಂದರೆಪಡುವುದನ್ನು ಕಂಡರೆ ಕಣ್ಣೀರು ಕರೆಯುತ್ತಾಳೆ. ನಮಗೆ ಬೇಕಾದವರು ಯಾರಾದರೂ ಹೊಟ್ಟೆತುಂಬ ಉಂಡಿಲ್ಲ ಎಂದು ಗೊತ್ತಾದರೆ ಅವರಿಗೆ ಉಣಿಸುವವರೆಗೂ ಅವಳು ಊಟ ಮಾಡುವುದಿಲ್ಲ.

ಪ್ರಪಂಚದಲ್ಲೆಲ್ಲಾ ಅತ್ಯಂತ ಆನಂದದಾಯಕವಾದುದೆಂದರೆ ಮಕ್ಕಳೊಡನೆ ಆಟ. ಅದರಲ್ಲೂ ಆದಿವಾಸಿಗಳ ಮಕ್ಕಳನ್ನು ಮೀರಿಸುವವರು ಯಾರೂ ಇಲ್ಲ. ನನ್ನ ಜೀವನದಲ್ಲಿ ಬೇಜಾರಾಗಿ ಸತ್ತುಸುಣ್ಣವಾದಾಗ ನನಗೆ ಸಂತಸವನ್ನುಂಟು ಮಾಡುವವರೆಂದರೆ ಮಕ್ಕಳು. ಪಟಾನ್‌ಘರ್‌ನಲ್ಲಿದ್ದಾಗ ಮನೆ ತುಂಬ ಮಕ್ಕಳು. ಅವರು ಯಾವಾಗ ಅಂದರೆ ಆಗ ನನ್ನ ಮನೆಗೆ ಬಂದು ಆಟ ಆಡಿದ್ದೂ ಆಡಿದ್ದೆ. ಬಾಯಲ್ಲಿದ್ದ ಸಿಗಾರ್ ಕಿತ್ತುಕೊಂಡು ಒಂದೆರಡು ದಮ್ಮು ಸೇದಿ ಹಿಂದಿರುಗಿ ಕೊಡುತ್ತಿದ್ದವು. ನನ್ನನ್ನು ನಾಲ್ಕು ಕಾಲಿನ ಪ್ರಾಣಿಯಾಗಿ ಆಡಿಸುತ್ತಿದ್ದುವು. ಮೊದಲು ಕುದುರೆಯಾಗಿದ್ದೆ. ಆಮೇಲೆ ಒಂದು ಸ್ವಲ್ಪ ದಪ್ಪ ಆದಮೇಲೆ ಆನೆಯಾದೆ. ನನ್ನ ಮಗ ಕುಮಾರ್ ನಾನೊಂದು ನೀರಾನೆ ಎಂದು ನಾಮಕರಣ ಮಾಡಿಯೇಬಿಟ್ಟ ಭೂಪತಿ !

ನನ್ನ ಮಕ್ಕಳ ಬಗ್ಗೆ ಹೇಳಬೇಕಾದರೆ ಹಿರಿಯವನಾದ ಕುಮಾರ್ ಚಿಕ್ಕ ಹುಡುಗನಾಗಿದ್ದಾಗ ತುಂಬ ಚೆನ್ನಾಗಿದ್ದ. ದೊಡ್ಡವನಾದ ಮೇಲೆ ನನ್ನ ಸಹಪಾಠಿಯಾಗಿ

ನನ್ನೊಡನೆ ಎರಡು ಸಲ ದೀರ್ಘ ಪ್ರವಾಸಮಾಡಿದ. ಎಂಟು ಒಂಬತ್ತು ವರ್ಷವಾಗಿದ್ದಾಗ ವಸಂತ ನನ್ನೊಡನೆ ಹೊರಗಡೆ ಎರಡು ಸಲ ಬಂದಿದ್ದ. ನಾವೆಲ್ಲಾ ಸುಂದರವಾದ ಲುಷಾಯಿ ಬೆಟ್ಟಗಳಿಗೆ ಹೋದಾಗ ನಕುಲನೂ ಅಶೋಕನೂ ಬಂದಿದ್ದರು.

ವಿಮಾನದಲ್ಲಿ ಮಕ್ಕಳನ್ನು ಕರೆದುಕೊಂಡು ಹೋಗುವುದು ಒಂದು ತರಹ ತಮಾಷೆ. ಮೋಡಗಳನ್ನು ಕಂಡು ನಾನು ಬೆದರಿದಾಗ ವಸಂತ, 'ಡ್ಯಾಡಿ, ಮೋಡಗಳು ದೇವತೆಗಳಂತಿವೆ. ಹೆದರಿಕೊಳ್ಳಬೇಕಾಗಿಲ್ಲ' ಎನ್ನುವನು. ವಿಮಾನ ಅವುಗಳೊಳಕ್ಕೆ ನುಗ್ಗಿ ನಮ್ಮನ್ನು ಎತ್ತಿ ಎತ್ತಿ ಹಾಕಿದಾಗ ಮತ್ತು ಹಳದಿ ಬಣ್ಣದ ದೀಪ ಹತ್ತಿಕೊಂಡಾಗ ನಕುಲ, 'ವಿಮಾನ ಬಿದ್ದುಬಿಡುತ್ತಾ!' ಎಂದು ಕಳವಳದಿಂದ ಕೇಳುವನು. ಆಮೇಲೆ 'ನೀನು ಹೆದರಿಕೊಂಡೆಯಾ ?' ಎಂದು ಕೇಳಿದಾಗ, 'ಏ ಇಲ್ಲಪ್ಪಾ, ನಾನ್ಯಾಕೆ ಹೆದರಿಕೊಳ್ಳಿ ! ಬೆಲ್ಟು ಭದ್ರವಾಗಿ ಕಟ್ಟಿಕೊಂಡಿಲ್ವಾ!' ಎನ್ನುವನು.

ನನ್ನ ಮಕ್ಕಳು ಅವರದೇ ಆದ ಶಬ್ದಕೋಶವನ್ನು ಸೃಷ್ಟಿಮಾಡಿಕೊಂಡಿದ್ದಾರೆ. ಅವರಲ್ಲೆಲ್ಲಾ ಅಶೋಕ ಎತ್ತಿದಕ್ಕೈ `You, nonsense' ಎನ್ನುತ್ತಾನೆ. ಅವನು ಕೇಳಿದ ನಾಲ್ಕಾಣೆ ಕೊಡದೆಹೋದರೆ `Get out, you fat English' (ಹೊರಟುಹೋಗು ದಡಿಯ ಆಂಗ್ಲ) ಎಂದು ಮೇಲೆ ಬೀಳುತ್ತಾನೆ. ಅವನಿನ್ನೂ ಮೂರು ವರ್ಷದವನಾಗಿರುವಾಗ ನನ್ನ ತಂಗಿ ಎಲ್ಡಿತ್ ನಮ್ಮೊಡನೆ ಇರಲು ಬಂದಳು. ಅವಳು ಬಂದ ಕೆಲವು ದಿನಗಳಲ್ಲಿ ಯಾವುದೋ ವಿಚಾರವಾಗಿ ಅವಳೊಡನೆ ಅಶೋಕ್ ಮನಸ್ತಾಪಮಾಡಿಕೊಂಡು, ಅವಳನ್ನು ಹಿಂದಿಯ ನಾಲ್ಕು ಅಕ್ಷರದ ತೊದಲು ಮಾತಿನಲ್ಲಿ ತರಾಟೆಗೆ ತೆಗೆದುಕೊಂಡುಬಿಟ್ಟ.

'ಏನು ಆ ತುಂಟ ಮಾತಾಡ್ತಾ ಇರೋದು?' ಎಂದು ಕೇಳಿದಳು ನನ್ನ ತಂಗಿ. 'ಅವನು ನಿನ್ನ ಮೇಲಿನ ಪ್ರೀತಿಯಿಂದ ಹೊಗಳಿಕೆಯ ಮಾತಾಡ್ತಿದ್ದಾನೆ' ಎಂದು, ನನ್ನ ಸಮಾಧಾನ.

ನಾಲ್ಕು ವರ್ಷದ ನಕುಲ ನನ್ನ ತಂಗಿಯ ತೋಳನ್ನು ಅದುಮಿ 'Very good meat' ಒಳ್ಳೆಯ ಮಾಂಸ ಎಂದು ಹೇಳಿಬಿಟ್ಟ.

ನನ್ನ ಪಟೇಲ್ ಸ್ಮಾರಕ ಭಾಷಣದಲ್ಲಿ 'A Philosophy of Love' ಎಂಬ ರೇಡಿಯೋ ಭಾಷಣದ ಅಲ್ಲೊಂದು ಇಲ್ಲೊಂದು ಮಾತು ಕೇಳಿ ಅಶೋಕ್ ತನ್ನ ಅಮೋಘ ಅಭಿಪ್ರಾಯವನ್ನು ಕೊಟ್ಟುಬಿಟ್ಟ. 'ನಾನು ದೊಡ್ಡೋನಾದಮೇಲೆ ಚಂದದ ಹುಡುಗೀನ ಮದುವೆಯಾಗೋದಿಲ್ಲ. ಹಾಗಾಗಿಬಿಟ್ರೆ ನೂರಾರು 'Mens' (ಗಂಡಸರು) ಆಕೆಯ ಹಿಂದೆ ಓಡಾಡ್ತ ನನ್ನತ್ರ ಬಾ, ನನ್ನತ್ರ ಬಾ ಅಂತ ಪೀಡಿಸ್ತಾರೆ' ಎಂದು.

ಚಿಕ್ಕಹುಡುಗರಲ್ಲಿ ವಸಂತ ಬಹು ಸೂಕ್ಷ್ಮ ಹಾಗೂ ಮುದ್ದಾದವನು. ನಕುಲ ಬುದ್ಧಿವಂತ; ಕಷ್ಟಪಡುತ್ತಾನೆ. ಸ್ಕೂಲಿನಲ್ಲಿ ಎಲ್ಲರಿಗೂ ಬೇಕಾಗಿದ್ದಾನೆ. ಕಾಯಿಲೆಬಿದ್ದಾಗ ತೊಂದರೆ ಕೊಡದೆ ಅನುಭವಿಸುತ್ತಾನೆ. ಅಶೋಕನ ತಲೆಯ ತುಂಬ ಏನೇನೋ ವಿಚಾರಗಳು. ವ್ಯಾಪಾರದಲ್ಲಿ ಎಲ್ಲರನ್ನೂ ಮೀರಿಸುತ್ತಾನೆ.

ವಸಂತನಿಗೂ ಏನಾದರೊಂದು ಆಗುತ್ತಾ ಇತ್ತು. ಒಂದು ದಿವಸ ಪುಸ್ತಕ ತುಂಬಿದ ಬೀರು ಅವನ ಮೇಲೆ ಮಗುಚಿಕೊಂಡುಬಿಟ್ಟಿತು. ಒಮ್ಮೆ ನಾವೆಲ್ಲ ದಿಲ್ಲಿಗೆ ಗಣರಾಜ್ಯದಿನೋತ್ಸವ ನೋಡಲು ಹೋಗಿದ್ದೆವು. ಲಕ್ಷಾಂತರ ಜನ ಸೇರಿದ್ದರು. ವಸಂತ, ಆಗ ಅವನಿಗೆ ಎಂಟು ವರ್ಷ, ಆ ಜನದಲ್ಲಿ ತಪ್ಪಿಸಿಕೊಂಡುಬಿಟ್ಟ. ಮಕ್ಕಳನ್ನು ಹಿಡಿದುಕೊಂಡುಹೋಗುತ್ತಾರೆ ಎಂಬ ಹೆದರಿಕೆಯ ಕಥೆಗಳನ್ನು ಕೇಳಿದ್ದೆವು. 'ಯಾವಳೋ ಭಿಕ್ಷೆಬೇಡೋ ಹೆಂಗಸಿನ ಜತೆ ಆತ ಹೋಗ್ತಾ ಇದ್ದದ್ದ ನೋಡಿದೆ' ಎಂದು ಅಶೋಕ ಬೇರೆ ಹೇಳಿಬಿಟ್ಟ. ಅದರಿಂದ ನಮ್ಮ ಭೀತಿ ಇನ್ನೂ ಹೆಚ್ಚಾಯಿತು. ಏನು ಮಾಡುವುದೋ ಗೊತ್ತಾಗಲಿಲ್ಲ. ಅಲ್ಲಲ್ಲಿ ಪೋಲೀಸರು ತಪ್ಪಿಸಿಕೊಂಡ ಮಕ್ಕಳನ್ನು ಇಟ್ಟುಕೊಂಡಿದ್ದರು. ಅಲ್ಲಿ ಹೋಗಿ ಯಾರ ಮುಖ ನೋಡಿದರೂ ವಸಂತನ ಮುಖಕಾಣಲಿಲ್ಲ. ನಮಗೆ ಗೊತ್ತಿದ್ದವರೆಲ್ಲ ಒಂದೊಂದು ದಿಕ್ಕಿನಲ್ಲಿ ಹುಡುಕಲಾರಂಭಿಸಿದರು. ಸಂಜೆ ಐದೂವರೆಗಂಟೆವರೆಗೂ ಅವನ ಪತ್ತೆ ಆಗಲಿಲ್ಲ. ಲೀಲಾ ಹುಚ್ಚಳಂತೆ ಆಡತೊಡಗಿದಳು. ಮಗುವನ್ನು ಕದ್ದುಕೊಂಡುಹೋಗಿದ್ದಾರೆ ಎಂಬುದರಲ್ಲಿ ಅನುಮಾನವಿಲ್ಲ ಎಂದಾಯಿತು. ಅದಕ್ಕೆ ಮುಂಚೆ ಒಬ್ಬ ಜ್ಯೋತಿಷ್ಯದವನನ್ನು ಕೇಳಿದ್ದೆವು. ಅವನು ಲೆಕ್ಕ ಹಾಕಿನೋಡಿ ವಸಂತ ಸುಮಾರು ಐದುಗಂಟೆ ಹೊತ್ತಿಗೆ ಹಿಂದಿರುಗಿ ಬರುತ್ತಾನೆ ಎಂದು ಹೇಳಿದ್ದ. ಐದೂವರೆ ಆದರೂ ವಸಂತ ಬರಲಿಲ್ಲ. ನಾವು ಕಂಗೆಟ್ಟುಬಿಟ್ಟೆವು. ಅಷ್ಟರಲ್ಲಿ ನಾವು ಹುಡುಕಲು ಕಳುಹಿಸಿದ್ದ ತಾಪನ್ ಕುಮಾರ್ ಎಂಬುವನು ವಸಂತನನ್ನು ಒಂದು ಕಾರಿನಲ್ಲಿ ಕರೆದುಕೊಂಡುಬಂದ ! ನನ್ನ ಜೀವನದಲ್ಲಿ ಮೊಟ್ಟಮೊದಲನೆಯ ಸಲ ಕಣ್ಣಿನಲ್ಲಿ ಗಳಗಳ ನೀರು ಸುರಿಸಿಬಿಟ್ಟೆ. ಅಷ್ಟೊಂದು ಭಾರ ಕಳೆಯಿತು ನನ್ನ ತಲೆಯ ಮೇಲಿಂದ. ವಸಂತ ದಾರಿಯಲ್ಲಿ ಹಾಯಾಗಿ ಅಡ್ಡಾಡುತ್ತಾ ಇರುವಾಗ ಒಬ್ಬ ಪೋಲೀಸಿನವನು ಅವನಿಗೆ ಬಿಸ್ಕತ್ತು ಕೊಟ್ಟು ಕರೆದುಕೊಂಡುಹೋಗಿ ಇಟ್ಟುಕೊಂಡಿದ್ದ ನಂತೆ. ನಾನು ಈ ಘಟನೆಯಿಂದ ಚೇತರಿಸಿಕೊಂಡರೂ, ಲೀಲಾ ಮಾತ್ರ ಬಹಳ ಕಾಲ ಅದರಿಂದ ಚೇತರಿಸಿಕೊಳ್ಳಲಾಗಲಿಲ್ಲ.

ನಾನೇನಾದರೂ ಕಾಯಿಲೆ ಬಿದ್ದರೆ ವಸಂತ ತುಂಬ ವಿಚಾರಿಸಿಕೊಳ್ಳುತ್ತಾನೆ. ಹಿಂದಿಯಲ್ಲಿ 'ನೆನ್ನೆ' ಮತ್ತು 'ನಾಳೆ' ಎರಡಕ್ಕೂ ಒಂದೇ ಪದ 'ಕಲ್' ಎಂದು ಅದನ್ನು Tomorrow ಎಂದು ಇಂಗ್ಲಿಷಿಗೆ ತರ್ಜುಮೆಮಾಡಿ ವಸಂತ ನನ್ನನ್ನು, `Are you better than you were tomorrow, Daddy?' ಎಂದು ಕೇಳುತ್ತಾನೆ.

ಅಶೋಕ್ ನಮ್ಮ ಮನೆಯ ಪಕ್ಕಾ ಮಾರ್ವಾಡಿ. ಅವನಿಗಿನ್ನೂ ನಾಲ್ಕು ವರ್ಷ ಆಗಿರಲಿಲ್ಲ ಆಗಲೇ ಅವನು, 'ಅಪ್ಪ, ನನಗೆ ದುಡ್ಡು ಅಂದರೆ ಇಷ್ಟ' ಎಂದು ಹೇಳಲಾರಂಭಿಸಿದ್ದ. ಉಳಿದ ಹುಡುಗರು ಸಿನೆಮಾಕ್ಕೆ ಹೋದರೆ ಅವನು ಹೋಗುವುದಿಲ್ಲ. ಅದರ ಬದಲು ದುಡ್ಡುಕೊಡು ಎಂದು ಕೇಳುತ್ತಾನೆ. ಇಂಜೆಕ್ಷನ್ ತಕ್ಕೋ ಅಂದರೆ 'ದುಡ್ಡು ಕೊಟ್ಟರೆ ತಕ್ಕೊಳ್ತೀನಿ' ಅಂತಾನೆ. ಸಣ್ಣದೊಂದು ಅಂಗಡಿ ಹೂಡಿ ಎಲ್ಲರಿಗೂ ಸಾಮಾನು ಮಾರುತ್ತಾನೆ. ಅಂಚೆಚೀಟಿಗಳನ್ನು ಸಂಗ್ರಹಿಸಿ ಅವುಗಳಿಂದ ಭಾರಿ ಸಂಪಾದನೆ ಮಾಡಲು ಹೋಗುತ್ತಾನೆ. ಮೆಡಲುಗಳಲ್ಲಿ ಬಹು ಆಸಕ್ತಿ ಅವನಿಗೆ.

ಒಳ್ಳೆಯ ತಂದೆಯಾಗುವಷ್ಟು 'ಭಯಂಕರತೆ' (Ferociousness) ನನ್ನಲ್ಲಿ ಇಲ್ಲ. ಮಕ್ಕಳ ಬಗ್ಗೆ ನನ್ನ ಮನೋಭಾವ ಥಾಮಸ್ ಮೋರ್ ಎಂಬುವರು 'To His Sweetest Children' (ತನ್ನ ಮುದ್ದು ಮಕ್ಕಳಿಗೆ) ಎಂಬ ಕವನದಲ್ಲಿ ಹೇಳಿದಂತಿದೆ :

ಮುದ್ದಿಸಿಹೆ ಮಕ್ಕಳೆ ನಿಮ್ಮ ಮನದಣಿವತನಕ;
ಹೊಡೆದಿಲ್ಲ ನಿಮ್ಮ; ಅಪ್ಪಿತಪ್ಪಿ ಹೊಡೆದರೂ
ನವಿಲುಗರಿಯ ಚಾಟಿ ಏಟು ಅಷ್ಟೆ

ನನ್ನ ಸಂಸಾರಕ್ಕೇ ಸೇರಿದಂತಿರುವ ನನ್ನ ಸ್ವಂತ ಸಿಬ್ಬಂದಿಯ ಬಗ್ಗೆ ಒಂದು ಮಾತು ಹೇಳಬೇಕು. ಅಂಥ ಸಿಬ್ಬಂದಿಯನ್ನು ಪಡೆದದ್ದು ನನ್ನ ಭಾಗ್ಯವೇ ಸರಿ. ನನ್ನ ಸ್ಟೆನೋಗ್ರಾಫರ್ ಸೋಮೇಶ್ವರ ಲಹರಿ ಎಂಟು ವರ್ಷದಿಂದ ನನ್ನ ಬಳಿ ಇದ್ದಾನೆ. ಒಳ್ಳೆ ನಂಬಿಕಸ್ತ ಮತ್ತು ಕೆಲಸಗಾರ. ನನ್ನ ಖಾಸ ಟೈಪಿಸ್ಟುಗಳಾದ ಹೈಯರ್ ಲ್ಯಾಂಡ್ ಸೀಮ್ಲಿಯೆ (Syeimlieh) ಮತ್ತು ಲಾಕ್‌ಹಾರ್ಟ್ ಜಿರ್ವಾ (Lockhart Jyrwal) ಅವರೂ ಅಷ್ಟೆ. ನನ್ನ ಫೀಲ್ಡ್ ಅಸಿಸ್ಟೆಂಟ್ ಸುಂದರಲಾಲ್ ನಂದಾ ನನ್ನ ಬಳಿ ಮೂವತ್ತು ವರ್ಷಗಳಿಂದ ಇದ್ದಾರೆ. ಸುಂದರಲಾಲ್ ನನ್ನ ಪ್ರವಾಸಗಳಲ್ಲೆಲ್ಲಾ ನನ್ನ ಜೊತೆ ಬಂದಿದ್ದಾನೆ. ಹೋದಕಡೆಯಲ್ಲೆಲ್ಲಾ ಚೆನ್ನಾದ ವ್ಯವಸ್ಥೆಮಾಡುತ್ತಾನೆ. ನಾನು ಸಾಮಾನ್ಯವಾಗಿ ಸಂಚಾರ ಹೊರಟಾಗ ಸುಂದರಲಾಲ್ ಮತ್ತು ಭಜನ್‌ರನ್ನು ಮುಂದೆ ಕಳುಹಿಸುತ್ತೇನೆ. ಅವರು ನನಗಿಂತ ಎರಡರಷ್ಟು ವೇಗವಾಗಿ ನಡೆಯಬಲ್ಲರು. ಅವರು ಮುಂದೆ ಹೋಗಿ ಬಿಡಾರ ಸಿದ್ಧಮಾಡುತ್ತಾರೆ. ಹರಿಚರಣ ನನ್ನ ಜೊತೆ ಬರುತ್ತಾನೆ. ಸೇತುವೆಗಳನ್ನು ದಾಟಬೇಕಾದಾಗ ಮತ್ತು ಕಡಿದಾದ ಸ್ಥಳಗಳಲ್ಲಿ ನನ್ನನ್ನು ಮೇಲಕ್ಕೆ ಎಳೆಯಬೇಕಾದಾಗ ನನಗೆ ಸಹಾಯ ಮಾಡುತ್ತಾನೆ. ನಾನು ಬಿಡಾರ ಮುಟ್ಟುವುದರೊಳಗೆ ಒಂದು ಸಣ್ಣ ಗುಡಿಸಲು ಸಿದ್ಧವಾಗಿರುತ್ತದೆ. ಅಲ್ಲಿ ನನ್ನ ಸಾಮಾನುಗಳನ್ನು ಜೋಡಿಸಿ ಇಟ್ಟಿರುತ್ತಾರೆ. ಬಿಸಿಬಿಸಿ ಊಟ ಹೆಚ್ಚುಕಡಮೆ ಸಿದ್ಧವಾಗಿರುತ್ತದೆ. ಅಡುಗೆ ಹೇಗೆ ಮಾಡುತ್ತಾರೋ ಗೊತ್ತಿಲ್ಲ. ಅಂತೂ ಅಷ್ಟು ಸೊಗಸಾಗಿ ಮಾಡುತ್ತಾರೆ. ಎಂಥ ಕಷ್ಟದ ಸ್ಥಳದಲ್ಲಿಯಾದರೂ

ಸರಿ, ಹೇಗೆ ಮಾಡುತ್ತಾರೆ ಎಂಬುದು ನನಗೆ ಒಡೆಯಲಾರದ ಒಗಟಾಗಿದೆ ಇಲ್ಲಿಯವರೆಗೂ.

ಹರಿಚರಣ ಮತ್ತು ಭಜನ್ ಪರ್ಧಾನ್ ಜಾತಿಯ ಗಿರಿಜನರು. ಸುಂದರಲಾಲ್ ಗಿರಿಜನ ಅಲ್ಲ.

ನಾನು ಷಿಲ್ಲಾಂಗಿಗೆ ಬಂದಾಗ ಅನೇಕ ಚಿತ್ರಗಳನ್ನೂ ನಾನು ಅಲ್ಲಲ್ಲಿ ಸಂಗ್ರಹಿಸಿದ್ದ ನೆನಪಿನವಸ್ತುಗಳನ್ನೂ (trophies) ತಂದೆ. ಈ ವಸ್ತುಗಳು ಹಲವಾರು ದೊಡ್ಡ ಪೆಟ್ಟಿಗೆಗಳಲ್ಲಿ ತುಂಬುವಷ್ಟಿದ್ದುವು. ಇವುಗಳನ್ನು ತಂದ ಉದ್ದೇಶ, ನನ್ನ ಸುತ್ತಮುತ್ತ ಗಿರಿಜನರ ಜೀವನದ ಆವರಣ ಸೃಷ್ಟಿಮಾಡಿಕೊಳ್ಳಬೇಕೆಂದು. ಉದಾಹರಣೆಗೆ, ಸಂತಾಲ್ ಜನರ ಅಂದದ ಮರಗೆಲಸಗಳು, ಬಿಹಾರದಿಂದ ಜದುಪಟುವಾ ಚಿತ್ರಾಲಂಕಾರಗಳು, ಗೊಂಡ್ ಮತ್ತು ಮರಿಯರ ಮುಖವಾಡಗಳು, ನಾಗಾ ಜನರಿಗೆ ಸಂಬಂಧಪಟ್ಟ ಕೆಲವು ವಸ್ತುಗಳು – ಇವು ನನ್ನ ಬಳಿ ಇದ್ದುವು. ನಾನಿದ್ದ ಮನೆ ದೊಡ್ಡದು. ಬೀರುಗಳನ್ನು ಮಾಡಿಸಿ ವಸ್ತುಗಳನ್ನು ಅವುಗಳಲ್ಲಿ ಜೋಡಿಸಿದೆ. ನೀಫಾಕ್ಕೆ ಹೋದಾಗ ತಂದ ಸಾಮಾನುಗಳನ್ನೆಲ್ಲಾ ಅದರಲ್ಲಿ ಶೇಖರಿಸಿದೆ. ಒಂದೊಂದು ವಸ್ತುವನ್ನು ಶೇಖರಿಸಿದ ಅನುಭವದ ಬಗ್ಗೆ ಒಂದೊಂದು ಪ್ರಕರಣವನ್ನೇ ಬರೆಯಬಲ್ಲೆ. ಆದರೆ ಇಲ್ಲಿ ಅದಕ್ಕೆ ಸ್ಥಳವಿಲ್ಲ.

ಈ ವಸ್ತುಗಳನ್ನೆಲ್ಲಾ ಸಂಗ್ರಹಿಸಿ ಇಟ್ಟಮೇಲೆ ಅದನ್ನು ನೋಡಲು ಅನೇಕ ಜನ ಬರಲಾರಂಭಿಸಿದರು. ಅವರಲ್ಲಿ ಮೊದಲಿಗೆ ಬಂದವರಲ್ಲಿ ನೆಹರೂ ಒಬ್ಬರು. ನೆಹರೂ ಬರುವುದಕ್ಕೆ ಗಂಟೆಗಳ ಮುಂಚೆಯೇ ಪೊಲೀಸ್ ಮತ್ತು ಸಿ.ಐ.ಡಿ. ಕಾಣಿಸಿಕೊಂಡರು. ನಮ್ಮ ಮನೆ ಒಂಟಿಯಾಗಿದ್ದು, ಅದರ ಸುತ್ತಮುತ್ತ ಮರಗಿಡಗಳಿದ್ದುದರಿಂದ ಕೊಲೆಗಾರರು ಅವಿತುಕೊಳ್ಳಲು ಒಳ್ಳೆಯ ಸ್ಥಳವಾದ ಕಾರಣ ಪ್ರಧಾನ ಮಂತ್ರಿಗಳು ಬರಬಹುದೇ ಬೇಡವೇ ಎಂದು ಪೋಲೀಸರು ಯೋಚನೆಮಾಡಲಾರಂಭಿಸಿದರು. ಅಂತೂ ಮೂವತ್ತೈದು ಜನ ಸಾಮಾನ್ಯ ಉಡುಪಿನ ಪೊಲೀಸರು ಮನೆಯೊಳಗೆ ಮತ್ತು ಮನೆಯ ಸುತ್ತ ಅಡ್ಡಾಡತೊಡಗಿದರು. ಅಡುಗೆಮನೆ ಮತ್ತು ಮಲಗುವ ಮನೆಯಲ್ಲೂ ಸೇರಿಕೊಂಡರು. ಅವರಿಗೆಲ್ಲಾ ಲೀಲಾ ಟೀ ಮತ್ತು ಸಿಹಿ ತಿಂಡಿ ಕೊಟ್ಟು ಸತ್ಕರಿಸಿದಳು.

ನೆಹ್ರೂ ಬರುವುದಕ್ಕೆ ಮುನ್ನ ಮುಖ್ಯವಾಗಿ ಉದ್ಭವಿಸಿದ ಪ್ರಶ್ನೆ ಎಂದರೆ, ಅವರಿಗೆ ಉಪಾಹಾರಕ್ಕೆ ಏನು ಕೊಡಬೇಕು ಎಂಬುದು. ಗಿರಿಜನರಲ್ಲಿ ಪಾನವಿರೋಧ ತರುವ ಬಗ್ಗೆ ನೆಹರೂ ಅವರ ಅಭಿಪ್ರಾಯ ಏನೆಂಬುದು ನನಗೆ ಗೊತ್ತಿತ್ತು. ಮೈ ಶಾಖಮಾಡುವಂಥಾದ್ದು ಏನಾದರೂ ಕುಡಿದರೊಳ್ಳೆಯದೆಂದು ನೆಹ್ರೂ ಅವರ ಅಭಿಪ್ರಾಯ. ನಾವು ಅವರಿಗೆ ಆ ತರಹ ಪಾನೀಯಕೊಡುವುದು ಸೂಕ್ತವಲ್ಲವೆಂದು ಕೊಂಡು, ಕೊನೆಗೆ ಒಂದು ತೀರ್ಮಾನಕ್ಕೆ ಬಂದು ಒಂದು ಸೀಶೆ ಒಳ್ಳೆಯ ಷೆರ್ರಿಯನ್ನು

ತಟ್ಟೆಯಲ್ಲಿಟ್ಟು ಎರವು ತಂದ ಲೋಟಗಳ (glass) ಸಮೇತ ಮ್ಯೂಸಿಯಂ ರೂಮುಗಳ ಪಕ್ಕದಲ್ಲಿನ ಸ್ನಾನದ ಮನೆಯಲ್ಲಿ ಇರಿಸಿದೆವು. ಇದಲ್ಲದೆ ಮ್ಯೂಸಿಯಂ ಕೋಣೆಯಲ್ಲಿಯೇ ಎಲ್ಲರಿಗೂ ಕಾಣುವಂತೆ ಕಾಫಿ ಮತ್ತು ಕಪ್ಪುಗಳನ್ನೂ ಇಟ್ಟೆವು.

ನೆಹರು ಅವರು ಗೌರ್ನರ್ ಜಯರಾವ್‌ದಾಸ್ ದೌಲತ್‌ರಾವ್ ಅವರೊಡಗೂಡಿ ಬಂದು ಅಡ್ಡಾಡಿ ಮ್ಯೂಸಿಯಂ ನೋಡಿದರು. ಬಹು ಆಸಕ್ತಿಯಿಂದ ಎಲ್ಲವನ್ನೂ ನೋಡಿ ಆಗಾಗ್ಗೆ ತಮ್ಮ ಅಭಿಪ್ರಾಯಕೊಡುತ್ತಿದ್ದರು. ಆ ಅಭಿಪ್ರಾಯಗಳು ನನ್ನ ಭಂಡಾರ. ನನಗೆ ಹೆದರಿಕೆ ಇದ್ದದ್ದು ನೆಹರೂ ಅವರು ಬಂದಿದ್ದಾರೆ ಅಂಥ ಅಲ್ಲ. ಅವರು ಯಾವಾಗಲೂ ಬಹು ಹರುಷದ (delightful) ವ್ಯಕ್ತಿ. ನನಗೆ ಇದ್ದ ಹೆದರಿಕೆ ಎಂದರೆ ಹೊರಗಡೆ ಸೇರಿದ್ದ ಜನ ಎಲ್ಲಿ ಗೇಟು ಮುರಿದು ಒಳಗೆ ನುಗ್ಗಿ ಗಲಾಟೆಮಾಡಿಬಿಡುತ್ತಾರೊ ಎಂದು. ನನ್ನ ಮನಸ್ಸಿನ ಈ ಹೆದರಿಕೆಯಲ್ಲಿ ನೆಹರು ಅವರನ್ನು 'Sir, will you have a cup of sherry?' (ಒಂದು ಕಪ್ಪು ಷೆರ್ರಿ ತೆಗೆದುಕೊಳ್ಳುತ್ತೀರಾ?) ಎಂದು ಕೇಳಿಬಿಟ್ಟೆ. ಅವರು ಮಿಂಚಿನಷ್ಟು ವೇಗದಲ್ಲಿ 'No, I think I will make do with a glass of coffee' (ಒಂದು ಲೋಟ ಕಾಫಿ ಆದರೆ ಸಾಕು ಅಂತ ಕಾಣುತ್ತೆ) ಎಂದು ಜವಾಬು ಕೊಟ್ಟರು.

ನಮ್ಮ ಮ್ಯೂಸಿಯಂ ನೋಡಲು ಬಂದ ಮತ್ತೊಬ್ಬ ಗಣ್ಯವ್ಯಕ್ತಿ ಎಂದರೆ ಪಂಡಿತ ಜಿ.ಬಿ. ಪಂತ್ ಅವರು. ಅವರು ಅದನ್ನು ನೋಡಿ ನನ್ನ ಕೆಲಸದ ಬಗ್ಗೆ ಈ ಅಮೋಘವಾದ ಮಾತುಗಳನ್ನು ಬರೆದುಕೊಟ್ಟರು : 'ಗಿರಿಜನರ ಬಗ್ಗೆ ಸಾರ್ವತ್ರಿಕವಾದ ಒಳ್ಳೆಯ ಅಭಿಪ್ರಾಯ ಬರುವಂತೆ ಇಡೀ ಇಂಡಿಯಾದಲ್ಲಿ ದೊಡ್ಡ ಕೆಲಸ ಮಾಡಿದವರು ಡಾ॥ ಎಲ್ವಿನ್ ಅವರು. ಆದಿವಾಸಿಗಳು ಕೇವಲ ಹಿಂದುಳಿದವರಲ್ಲ, ಅವರಲ್ಲಿಯೂ ಕಲೆ ಸಂಸ್ಕೃತಿ ಇವೆ ಎಂಬುದನ್ನು ಅವರು ತೋರಿಸಿಕೊಟ್ಟಿದ್ದಾರೆ. ಅವರು ಹೀಗೆ ಮಾಡಿದ್ದು ಇಡೀ ದೇಶದ ಧೋರಣೆಯನ್ನು ರೂಢಿಸಿದಂತಾಯಿತು'.

ಪಂಡಿತ ಪಂತರು ಯಾವಾಗಲೂ ನನ್ನ ಬಗ್ಗೆ ಪ್ರೀತಿ ವಿಶ್ವಾಸಗಳನ್ನು ತೋರಿಸುತ್ತಿದ್ದರು. ಅವರ ಪರಿಚಯವಾದುದಕ್ಕಾಗಿ ಮತ್ತು ಅವರಿಗೋಸ್ಕರ ಕೆಲಸ ಮಾಡುವ ಅವಕಾಶ ಸಿಕ್ಕಿದ್ದಕ್ಕಾಗಿ ಅವರಿಗೆ ನಾನು ಯಾವಾಗಲೂ ಋಣಿಯಾಗಿದ್ದೇನೆ.

ಅಸ್ಸಾಮಿನ ಮುಖ್ಯಮಂತ್ರಿ ಬಿ.ಪಿ. ಛಾಲಿಹಾ ಅವರೂ ಬಂದು ನನ್ನ ಮ್ಯೂಸಿಯಂ ನೋಡಿದರು. ಅವರಿಗೆ ಆದಿವಾಸಿಗಳ ಬಗ್ಗೆ ತುಂಬಾ ಪ್ರೇಮ. ಅವರು ಒಮ್ಮೆ ಹೇಳಿದರು, 'ಆದಿವಾಸಿಗಳ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಕೊಂಚ ತಾಳ್ಮೆ, ಅವರ ಬಗ್ಗೆ ನಿಜವಾದ ಗೌರವ ಮತ್ತು ತುಂಬಾ ಪ್ರೀತಿ – ಇವು ಬೇಕು. ಅವು ಇದ್ದರೆ ಎಂಥ ಮಾನವರ ಮನಸ್ಸನ್ನೂ ಒಲಿಸಿಕೊಳ್ಳಬಹುದು' ಎಂದು.

ಕೆಲವು ವರ್ಷಗಳ ಹಿಂದೆ ಆರ್ಥರ್ ಕೊಯೆಸ್ಲರ್ (Arthur Koestler) ಎಂಬುವರು ಷಿಲ್ಲಾಂಗಿಗೆ ಬಂದು ನಮ್ಮೊಡನೆ ಒಂದು ವಾರ ಇದ್ದರು. ಅವರು

ಸರಿಪಡಿಸಲಾಗದ ವಾದಗ್ರಸ್ತ ಮನುಷ್ಯ. ಹೋದೆಡೆಯಲ್ಲೆಲ್ಲಾ ಪತ್ರಿಕಾಕರ್ತರು ಅವರ ಬೆನ್ನುಹತ್ತುತ್ತಿದ್ದರು. ಕಮ್ಯೂನಿಸ್ಟರಂತೂ ಅವರ ಕಡೆ ಗುರುಗುಟ್ಟಿದ್ದೂ ಗುಟ್ಟಿದ್ದೆ. ಆರ್ಥರ್ ಅವರಿಗೆ ನಾಲ್ಕು ದಿವಸದ ವಿಶ್ರಾಂತಿ ಬೇಕಾಗಿತ್ತು. ಅದನ್ನು ನಮ್ಮ ಮನೆಯಲ್ಲಿ ಪಡೆದರು. ಅವರು ಹೋದ ಮೇಲೆ ನಮಗೆ ಅನಿಸಿತು ಒಬ್ಬ ಮಹಾಸಾಧು ನಮ್ಮೊಡನೆ ಇದ್ದರೋ ಎಂದು. ವಿನೋಬಾ ಭಾವೆಯವರನ್ನು ಕುರಿತು ಆರ್ಥರ್, 'ಅವರ ಹತ್ತಿರ ಹೋದವರಿಗೆ ಶಾಂತಿಯನ್ನು ನೀಡುವ ಶಕ್ತಿ ಇದೆ. ಆ ಶಾಂತಿ ನಿಮ್ಮ ಕೈಮುಟ್ಟಿದರೆ ಹೇಗೊ ಹಾಗೆ ನಿಮ್ಮ ದೇಹವನ್ನೂ ತಟ್ಟುತ್ತದೆ. ಅವರ ಬಳಿ ಯಾರು ಹೋದರೂ ಅವರು ಶ್ರೀಮಂತರಾಗುತ್ತಾರೆ' ಎಂದು ಹೇಳಿದರು. ಆರ್ಥರ್ ಅವರು ಅದಕ್ಕಿಂತ ಭಿನ್ನವಾದ ಮನುಷ್ಯರಾದರೂ, ನನ್ನ ಮೇಲೆ ಅವರು ಉಂಟು ಮಾಡಿದ ಪರಿಣಾಮ ವಿನೋಬಾ ಉಂಟುಮಾಡುವ ಪರಿಣಾಮದಂತೆಯೇ ಇತ್ತು.

ಆರ್ಥರ್ ಅವರು ಇಂಡಿಯಾ ಮತ್ತು ಜಪಾನುಗಳಿಗೆ ಯಾತ್ರೆ ಬಂದದ್ದು ಯೂರೋಪಿನ ಸಿಕ್ಕುಸಿಕ್ಕಾದ ಸಮಸ್ಯೆಗಳಿಗೆ ಪೌರ್ವಾತ್ಯ ಏನಾದರೂ ಪರಿಹಾರ ಕೊಡಬಲ್ಲುದೆ ಎಂಬುದನ್ನು ತಿಳಿದುಕೊಳ್ಳಲು. ಅವರು ಹಿಂದುಮುಂದು ನೋಡದೆ ಹೇಳಿಬಿಟ್ಟರು, 'ಯೋಗ, ಜೆನ್ ಅಥವಾ ಏಷ್ಯಾದ ಮತ್ಯಾವ ಯೋಗರಹಸ್ಯವೂ ಯಾವ ಪರಿಹಾರವನ್ನೂ ಕೊಡಲಾರದು' ಎಂದು. The Lotus and the Robot (ತಾವರೆ ಮತ್ತು ಕೀಲುಗೊಂಬೆ) ಎಂಬ ಪುಸ್ತಕ ಬರೆದು ಅದನ್ನು ನನಗೆ ಅರ್ಪಿಸಿದರು. ಅವರ ಪುಸ್ತಕದಲ್ಲಿ ಬರೆದ ವಿಚಾರಗಳು ಅನೇಕ ಜನರಿಗೆ, ಅದರಲ್ಲಿಯೂ ಕಂದಾಚಾರದ ಹಿಂದೂಗಳಿಗೆ, ಹಿಡಿಸಲಿಲ್ಲ. ಆರ್ಥರ್ ಅವರು ಹೇಳಿದ್ದೆಲ್ಲಾ ಸರಿಯಾಗಿರಲೂ ಇಲ್ಲ. ಅವರು ಹಿಂದೂಗಳ ಕೆಲವು ಆಚಾರ ವ್ಯವಹಾರಗಳ ಬಗ್ಗೆ ತಪ್ಪು ಅಭಿಪ್ರಾಯಕ್ಕೆ ಬಂದಿದ್ದರು. ಆದರೆ ಅವರು ಬರೆದಂಥ ಪುಸ್ತಕಗಳು ನಮಗೆ ಬೇಕು. ಅವು ನಾವು ಯೋಚನೆಮಾಡುವಂತೆ ನಮ್ಮನ್ನು ತಿವಿಯುತ್ತವೆ. ನೆಹರೂ ಒಮ್ಮೆ ಬೇರೊಂದು ಸಂದರ್ಭದಲ್ಲಿ, 'ಹೆಸರಾಂತ ಬರಹಗಾರರೊಬ್ಬರು ಜನಸಾಮಾನ್ಯರ ಅಭಿಪ್ರಾಯಕ್ಕಿಂತ ಭಿನ್ನವಾದ ಅಭಿಪ್ರಾಯವನ್ನು ಹೇಳಿದರೂ ಅದಕ್ಕೆ ಮನ್ನಣೆ ಕೊಡಬೇಕು; ಆ ಅಭಿಪ್ರಾಯ ಏನು ಎಂಬುದನ್ನು ಜನರು ತಿಳಿದುಕೊಳ್ಳುವಂತಾಗಬೇಕು' ಎಂದು ಹೇಳಿದರು.

ನಾನು ಮೊದಲಿಗೆ ಮಧ್ಯ ಇಂಡಿಯಾದಲ್ಲಿದ್ದಾಗ ಆಗಾಗ್ಗೆ ಕಾಯಿಲೆ ಬೀಳುತ್ತಿದ್ದೆ. ಆದರೆ ಷಿಲ್ಲಾಂಗಿಗೆ ಬಂದಮೇಲೆ ಆರೋಗ್ಯ ತುಂಬಾ ಚೆನ್ನಾಯಿತು. ಹಾಗೆಯೇ ಲೀಲಾ ಮತ್ತು ಮಕ್ಕಳೂ ಸೊಗಸಾದ ಆರೋಗ್ಯ ಅನುಭವಿಸುತ್ತಿದ್ದಾರೆ.

ನಾನು ಪೂರ್ವ ಆಫ್ರಿಕಾಕ್ಕೆ ಹೋದಾಗ ನನಗೆ ಏನೋ ಒಂದು ವಿಚಿತ್ರವಾದ ನೋವು ಕಾಣಿಸಿಕೊಳ್ಳುತ್ತಿತ್ತು. ಆ ಕಾರಣ ನೈರೋಬಿಯ ಆಸ್ಪತ್ರೆಗೆ ಹೋಗಿ ಪರೀಕ್ಷೆ ಮಾಡಿಸಿಕೊಂಡೆ. ಅಲ್ಲಿ ನನ್ನನ್ನು ಡಾಕ್ಟರು ಸಾಮಾನ್ಯ ಅವಮಾನಗಳಿಗೆ ಗುರಿಮಾಡಿದ

ಮೇಲೆ ಈ ರೀತಿ ವರದಿಕೊಟ್ಟರು : The stomach is of high transverse type. Its mucosal pattern is coarse, particularly in the distal third where it appears almost polypoid.'

ಆಗ ನಾನು ಕೊಂಚ ದಪ್ಪ ಆಗುತ್ತಿದ್ದೆ. ಮೇಲ್ಕಂಡ ವರದಿ ನೋಡಿ ಹೆದರಿ ಊಟ ಮಿತಿಮಾಡಿದೆ. ಆದರೆ ಇದು ತಾಪತ್ರಯಕ್ಕಿಟ್ಟುಕೊಂಡಿತು. ಅಲೆಕ್ಸಾಂಡರ್ ವುಲ್‌ಕಾಟ್ (Alexander Woolcott) ಒಮ್ಮೆ ಹೇಳಿದ್ದರು. ನಿಮಗೆ ನಿಜವಾಗಿಯೂ ಇಷ್ಟವಾಗಿದ್ದುದೆಲ್ಲಾ ನೀತಿಗೆಟ್ಟಿತ್ತು, ಕಾನೂನಿಗೆ ವಿರುದ್ಧವಾಗಿತ್ತು ಅಥವಾ ಕೊಬ್ಬಿಸುತ್ತಿತ್ತು ಎಂದು.

ಮತ್ತೊಂದು ಪರೀಕ್ಷೆಯಿಂದ ಗೊತ್ತಾದದ್ದು ನನಗೆ ಎರಡು ಪಿತ್ತಕೋಶಗಳಿವೆ ಎಂಬುದು. ಒಂದನ್ನು ಆಪರೇಷನ್ ಮಾಡಿ ತೆಗೆಯಬೇಕೆಂದು ನನ್ನ ನೈರೋಬಿ ಡಾಕ್ಟರು ಹೇಳಿದರು. ಆದರೆ ಅದಕ್ಕೆ ನಾನು ಒಪ್ಪದೆ ಕೇವಲ ಗುಳಿಗೆಗಳನ್ನು ತೆಗೆದುಕೊಳ್ಳುತ್ತಾ ಬಂದೆ. ಅವು ಆಗ ನನಗೇನೂ ತಾಪತ್ರಯಕೊಡುತ್ತಿರಲಿಲ್ಲ. ಇಡೀ ವೈದ್ಯ ಇತಿಹಾಸದ ಪ್ರಕಾರ ಎರಡು ಪಿತ್ತಕೋಶಗಳಿದ್ದವರಲ್ಲಿ ನಾನು ಇಪ್ಪತ್ತೆಂಟನೆಯವನಂತೆ !

೧೯೬೧ನೆಯ ಜೂನ್ ತಿಂಗಳಲ್ಲಿ ನನಗೆ coronary insufficiency (ರಕ್ತನಾಳದ ಕೊರತೆ) ಕಾಣಿಸಿಕೊಂಡದ್ದರಿಂದ ಮಿಲಿಟರಿ ಆಸ್ಪತ್ರೆಗೆ ತೆಗೆದುಕೊಂಡು ಹೋದರು. ಹತ್ತು ದಿವಸ ಯಾರೂ ನೋಡಕೂಡದೆಂದು ಕಟ್ಟಾಜ್ಞೆಯಾಗಿತ್ತು. ಆಗ ನಾನೊಬ್ಬ ದೊಡ್ಡ ಮನುಷ್ಯ ಎಂಬ ಭಾವನೆ ಬಂದುಬಿಟ್ಟಿತು ನನಗೆ. ಲೀಲಾ ಮತ್ತು ನಾರಿ ರುಸ್ತುಂಜೀ ಬಂದು ಹೋಗುತ್ತಿದ್ದರು. ರುಸ್ತುಂಜೀಯವರು ಸೊಮೆರ್‌ಸೆಟ್ ಮೌಘಾಮರ ಕಥೆಗಳನ್ನೆಲ್ಲಾ ತಂದುಕೊಟ್ಟರು. ಆದರೆ ಯಾಕೋ ಕಾಣೆ ನಾನು ಒಂದನ್ನೂ ಓದಲಿಲ್ಲ. ಇದಕ್ಕೆ ಆರು ತಿಂಗಳಿಗೆ ಮುಂಚೆ ರಕ್ತದ ಒತ್ತಡ ಕಾಣಿಸಿಕೊಂಡಿತ್ತು.

ಡಾಕ್ಟರು ಹೇಳಿದರು, ದಿನಕ್ಕೆ ಒಂದು ಪೆಗ್ ಜಿನ್ ಮಾತ್ರ ತೆಗೆದುಕೊಳ್ಳಬೇಕೆಂದು, ಜಿನ್ ಹೃದಯದ ರೋಗಕ್ಕೆ ಒಳ್ಳೆಯದಂತೆ. ಆದರೆ ಅವರು ಹೇಳುವಾಗ ದೊಡ್ಡ ಪೆಗ್ಗೋ ಸಣ್ಣ ಪೆಗ್ಗೋ ಎಂದು ಹೇಳುವುದನ್ನು ಮರೆತುಬಿಟ್ಟರು. ಅವರು ಹೇಳಿದಂತೆ ಮಾಡಲಿಲ್ಲ. ಬಹಳ ದಿನಗಳಿಂದ ಜಿನ್ ಕುಡಿಯುವುದನ್ನು ಕಡಮೆ ಮಾಡಿದ್ದೇನೆ. ಆದರೆ ಬೇರೆ ಮದ್ಯ ಕುಡಿಯುವುದನ್ನು ಮಾತ್ರ ಬಿಟ್ಟಿಲ್ಲ. ಸೇದುವುದಂತೂ ನನ್ನನ್ನು ಪಟ್ಟಾಗಿ ಹಿಡಿದುಬಿಟ್ಟಿದೆ. ಇರೋ ವಿಚಾರ ಏನಪ್ಪ ಅಂದರೆ, ನನಗೆ ಹೊಗೆಸೊಪ್ಪಿನಲ್ಲಿ ಪೂರ್ಣನಂಬಿಕೆ. ಅದು ನನ್ನನ್ನು ಉತ್ತಮ ಮನುಷ್ಯನನ್ನಾಗಿ ಮಾಡಿದೆ.

ಸ್ಯಾಮುಯಲ್ ಬಟ್ಲರ್ ಅವರ ಬಗ್ಗೆ ಇರುವ ಒಂದು ಕಥೆ ನನಗೆ ಇಷ್ಟ. ಅದೇನೆಂದರೆ, ಬಿಷಪ್ ಮೆಂಡಲ್ ಅವರು ಬಟ್ಲರ್ ಅವರನ್ನು ಪೀಟರ್ ಬರೋಗೆ ಬರುವಂತೆ ಆಹ್ವಾನಿಸಿದರು. ಹೋಗಬೇಕೊ ಬೇಡವೊ ಎಂದು ಬಟ್ಲರ್ ಅವರ

ಗುಮಾಸ್ತ ಆಲ್ಫ್ರೆಡ್‌ನನ್ನು ಕೇಳಿದರು. ಆತ, 'ನಿಮಗೆ ಬಂದಿರುವ ಕಾಗದ ನೋಡೋಣ ಕೊಡಿ' ಎಂದ. ಬಟ್ಲರ್ ಕಾಗದ ಕೊಟ್ಟರು. ಅದನ್ನು ನೋಡಿ ಆತ, 'ಈ ಕಾಗದದೊಳಗೆ ಒಂದು ಚೂರು ಹೊಗೆಸೊಪ್ಪಿದೆ, ನೀವು ಹೋಗಬಹುದು ಎಂದು ಕಾಣುತ್ತೆ' ಎಂದನಂತೆ. ಈ ಒಳ್ಳೆಯ ಶಕುನ ನೋಡಿ ಬಟ್ಲರ್ ಹೋದರು. ಬಹು ಸಂತೋಷದಿಂದ ಬಿಷಪ್ಪರೊಡನೆ ಕಾಲ ಕಳೆದರು.

ಟ್ರೈಬಲ್ ಕಮೀಷನ್ ಮೀಟಿಂಗುಗಳಾಗುತ್ತಿದ್ದಾಗ ನಾನು ಮತ್ತು ಜಯಪಾಲ್ ಸಿಂಗ್ ಇಬ್ಬರೂ ಟೇಬಲಿನ ಕೊನೆಯಲ್ಲಿ ಒಟ್ಟಿಗೆ ಕುಳಿತುಕೊಂಡು ಸಿಗಾರ್ ಸೇದುತ್ತಾ, ಸೇದದೆ ಇದ್ದ ಇತರ ಒಂಬತ್ತು ಜನರ ಮೇಲೆ ಹೊಗೆ ಬಿಡುತ್ತಿದ್ದೆವು. ಅವರಲ್ಲಿ ಕೆಲವರು ತಕರಾರುಮಾಡಿದರು. ಆದರೆ ನಮ್ಮ ಚೇರ್ಮನ್ ದೇಭರ್ ಅವರು ಇಂಥ ವಿಚಾರಗಳಲ್ಲಿ ಬೇಜಾರುಪಟ್ಟುಕೊಳ್ಳುತ್ತಿರಲಿಲ್ಲ. ಅವರು ತಮ್ಮ ಬಳಿ ಇದ್ದ ಶಾಯಿಕುಡಿಕೆ ಇಟ್ಟ ಕಾಗದದ ಪೆಟ್ಟಿಗೆಯನ್ನು ನನ್ನ ಕಡೆಗೆ ಕೊಟ್ಟರು ಬೂದಿಹಾಕಲು.

ಇಲ್ಲಿಯವರೆಗೂ ತಮಾಷೆ ಮಾತು ಆಯಿತು. ಈಗ ಒಂದಿಷ್ಟು ಗಂಭೀರವಾಗಿ ಹೇಳುತ್ತೇನೆ ಕೇಳಿ. ನೋವು (ಕಷ್ಟ) ಎನ್ನುವುದು ಸಂಸಾರದಲ್ಲಿ ಒಂದು ರೀತಿ ಒಳ್ಳೆಯದೆ. ಲೀಲಾ ಒಂದು ಸಲ ಮೂತ್ರಕೋಶದ ಕಲ್ಲಿನ ತೊಂದರೆಯಿಂದ, ಮತ್ತೊಂದು ಸಲ ಅಪೆಂಡಿಸೈಟಿಸ್‌ನಿಂದ ಒದ್ದಾಡಿದಳು. ಆಸ್ಪತ್ರೆ ಸೇರಿದಳು. ಅವಳು ಆಸ್ಪತ್ರೆಯಲ್ಲಿದ್ದಾಗ ನಮಗೆ ಅರ್ಥವಾಯಿತು ಅವಳನ್ನು ನಾವೆಷ್ಟು ಪ್ರೀತಿಸುತ್ತಿದ್ದೇವೆ ಎಂದು. ನಾನೇ ಒಂದು ಸಲ ಆಸ್ಪತ್ರೆಗೆ ಸೇರಿದಾಗ ಲೀಲಾ ಮತ್ತು ಮಕ್ಕಳು ನನ್ನನ್ನು ಎಷ್ಟು ಪ್ರೀತಿಸುತ್ತಾರೆ ಎಂದು ಗೊತ್ತಾಯಿತು. ಕಾಯಿಲೆಯಲ್ಲಿರುವಾಗ ಪ್ರೇಮ ಮತ್ತು ಅದರಿಂದ ಹೊರಹೊಮ್ಮುವ ಇತರ ಸುಂದರ ವಿಚಾರಗಳು ಕಾಯಿಲೆಯನ್ನು ಸಹಿಸುವಂತೆ ಮಾಡುತ್ತವೆ; ಅಲ್ಲದೆ ಕಾಯಿಲೆ ಗುಣವಾಗುವುದಕ್ಕೆ ಎಷ್ಟು ಸಹಾಯಮಾಡುತ್ತವೆ ಎಂದು ಅರ್ಥವಾಗುತ್ತದೆ.

ಸಂಗೀತವೂ ಕಾಯಿಲೆಯನ್ನು ಸಹಿಸುವುದಕ್ಕೂ ಗುಣಪಡಿಸುವುದಕ್ಕೂ ತುಂಬ ಸಹಾಯಮಾಡುತ್ತದೆ.

ಡಾಕ್ಟರು ಹೇಳಿದರು, 'ನೀನು ಉಣ್ಣುವುದು ತಿನ್ನುವುದರಲ್ಲಿ ಕ್ರಮದಿಂದ ಇರಬೇಕು; ಹುಷಾರಾಗಿರಬೇಕು' ಎಂದು. ಆದರೆ ಇದು ಮಾತ್ರ ನನ್ನಿಂದ ಸಾಧ್ಯವಿರಲಿಲ್ಲ. ಚರ್ಚು ಬಿಟ್ಟೆ. ನನ್ನ ದೇಶವನ್ನೇ ಬಿಟ್ಟೆ. ಆದರೆ ಡಾಕ್ಟರುಗಳು ಹೇಳಿದಂತೆ ಅದನ್ನು ಬಿಡುವುದು ಇದನ್ನು ಬಿಡುವುದು ಮಾತ್ರ ನನ್ನಿಂದ ಸಾಧ್ಯವಾಗಲಿಲ್ಲ.

ಆಸ್ಕರ್ ವೈಲ್ಡ್ (Oscar Wilde) ಹೇಳುತ್ತಾನೆ. 'ವಯಸ್ಸಿನ ದುರಂತ ಅನ್ನೋದು ನಾವು ಮುದುಕರಾಗಿರೋದಲ್ಲ, ಯುವಕರಾಗಿರೋದು' ಎಂದು.

ಸ್ವಲ್ಪಮಟ್ಟಿಗೆ ಕಾಯಿಲೆಯ ದುರಂತ ನಾವು ರೋಗಪೀಡಿತರಾಗಿರೋದಲ್ಲ, ಆರೋಗ್ಯವಾಗಿರೋದು. ನನ್ನ ಆರೋಗ್ಯ ಚೆನ್ನಾಯಿತು, ಕೆಲಸಮಾಡುವುದಕ್ಕೆ ಸಾಕಾದಷ್ಟು ಶಕ್ತಿ ಎಂದು ಹೇಳುವಷ್ಟರಲ್ಲಿಯೇ ಬೇರೊಂದು ಕೆಲಸ ಕೈಗೆ ಹಚ್ಚಿಕೊಳ್ಳುತ್ತೇನೆ. ಆದರೆ ಮೊದಲಿನಂತೆ ದೊಡ್ಡ ಪರ್ವತಗಳನ್ನು ಹತ್ತಲಾರೆ; ಅಥವಾ ಕಾರಿನಲ್ಲಿ ಅಲೆಯಲಾರೆ ಎಂದು ಕಾಣುತ್ತೆ. ಹಾಗೇನಾದರೂ ಆದ ಪಕ್ಷದಲ್ಲಿ ಅದಕ್ಕಿಂತ ದೊಡ್ಡ ಪೆಟ್ಟು ಬೇರೊಂದಿಲ್ಲ. ಏಕೆಂದರೆ ನಾನು ಮೆಚ್ಚುವುದು ದೂರದ್ದು, ಏಕಾಂತವಾದದ್ದು, ಮತ್ತು ತಿಳಿಯದೆ ಇರುವುದು.

ಆದರೂ ನಾನೂ ಇತರ ಸಾವಿರಾರು ಜನರೂ ಅದನ್ನು ಸ್ವೀಕರಿಸಲೇಬೇಕು ; ಅದರೊಡನೆ ಬಾಳಬೇಕು. ಹೇಗೆ ಆದರೂ ಅದರಲ್ಲಿಯೇ ಸುಖಶಾಂತಿಯನ್ನು ಕಾಣಬೇಕು. ಬಹುಶಃ ಅದರ ಮೂಲಕವೇ ಸುಖವನ್ನು ಕಾಣಬೇಕೆಂದು ಕಾಣುತ್ತೆ.

ಮನುಷ್ಯನ ನಿಜವಾದ ಬಾಳು, ಯಾರೂ ಕಸಿದುಕೊಳ್ಳಲಾಗದೆ ಬಾಳು, ಒಳಗಿದೆ ಆತ ತನ್ನ ಆತ್ಮವನ್ನು ರಕ್ಷಿಸಲು ಕಲಿತಿದ್ದರೆ ಬಡತನ, ನಿರಾಶೆ, ಪರಿಸ್ಥಿತಿಯ ಬದಲಾವಣೆ – ಇವು ಯಾವುವೂ ಅವನಿಗೆ ತೊಂದರೆ ಕೊಡಲಾರವು.

೧೨. ಕೈಗೆ ಸಿಕ್ಕದ ನಿಧಿ

ಮಾನವನ ಬಾಳು, ದೇವರು ಮತ್ತು ಅನಂತತೆಯ ಬಗ್ಗೆ ನನ್ನ ಅಭಿಮಾನದ ಸಾರಾಂಶವೇನೆಂದು ನನ್ನ ಅರುವತ್ತು ವರ್ಷದ ಚಿಕ್ಕ ವಯಸ್ಸಿನಲ್ಲಿ ಹೇಳುವುದಕ್ಕೆ ಹೋಗುವುದು ಬಹು ಧೈರ್ಯದ ಮಾತಾಗುತ್ತದೆ. ಇಷ್ಟು ಹೊತ್ತಿಗೆ ಆ ವಿಚಾರದಲ್ಲಿ ನನ್ನ ಅಭಿಪ್ರಾಯ ರೂಢಿಸಿಕೊಂಡಿರಬೇಕಾಗಿತ್ತೊ ಏನೊ. ಬಾಳಿನ ಈ ಘಟ್ಟದಲ್ಲಿಯೇ ಮನುಷ್ಯ ನಿಜವಾಗಿಯೂ ಕಲಿಯಲು ಆರಂಭಿಸುವುದು. ಈಗ ನಾನೆಷ್ಟು ಜಾಗ್ರತೆಯಾಗಿ ಕಲಿಯುತ್ತಾ ಇದ್ದೇನೆಂದರೆ ನಾನು ಈ ಕೊನೆಯ ಪ್ರಕರಣದಲ್ಲಿ ಏನು ಹೇಳುತ್ತೇನೊ ಅದೆಲ್ಲಾ ತಾತ್ಕಾಲಿಕವೆಂದೇ ಭಾವಿಸಬೇಕು.

ನನ್ನ ಬಾಳನ್ನು ಅವಲೋಕಿಸಿದರೆ ಮತ್ತು ನಾನು ಈ ಪುಸ್ತಕದಲ್ಲಿ ಬರೆದಿರುವುದನ್ನು ನೋಡಿದರೆ ನಾನು ಸಂಘಯೋಗ್ಯ ಮನುಷ್ಯನಲ್ಲದಿದ್ದರೂ ಜನಗಳೇ ನನ್ನ ಬಾಳಿನ ಆಗುಹೋಗುಗಳಾಗಿದ್ದಾರೆ. ನನ್ನ ಸ್ನೇಹಿತರ ಕಥೆ ಹೇಳಿದರೆ ನನ್ನ ಬಾಳಿನ ಕಥೆ ಹೇಳಿದಂತೆ. ನನ್ನ ಇಡೀ ಬಾಳಿನನ್ನೆಲ್ಲಾ ಒಂದಲ್ಲ ಒಂದನ್ನು ಪ್ರೀತಿಸುತ್ತಾ ಬಂದಿದ್ದೇನೆ. ಅದು ಒಂದು ಧ್ಯೇಯವಾಗಿರಬಹುದು, ಒಂದು ಗಿರಿಜನ ಪಂಗಡವಿರಬಹುದು, ಅಥವಾ ಒಬ್ಬ ಮನುಷ್ಯನಿರಬಹುದು. ನಾನು ಅಭ್ಯಾಸಮಾಡಿದ ಪ್ರತಿಯೊಂದು ಗಿರಿಜನ ಪಂಗಡವನ್ನೂ ನಾನು ಪ್ರೀತಿಸುತ್ತೇನೆ. ಒಟ್ಟಿನಲ್ಲಿ ಈ ಪ್ರಪಂಚವು ಬಹು ಪ್ರೀತಿಯೋಗ್ಯ ಸ್ಥಳ. ಮತ್ತು ಇಲ್ಲಿರುವ ಜನರೂ ಒಂದು ಸಲ ತಿಳಿದುಕೊಂಡರೆ ಸಾಕು, ಪ್ರೀತಿಗೆ ಯೋಗ್ಯರು.

ಕೆಲವರನ್ನು ಹೆಚ್ಚು ಆತ್ಮೀಯವಾಗಿ ಪ್ರೀತಿಸಿದ್ದೇನೆ. ಲೈಂಗಿಕ ವಿಷಯದ ಬಗ್ಗೆ ಸಾಕಷ್ಟು ವಿವರವಾಗಿಯೂ ಹೆಚ್ಚಾಗಿಯೂ ಬರೆದಿದ್ದೇನೆ. ಇದನ್ನು ನೋಡಿ, ನಾನು ಮುರಿಯರ ಪ್ರಣಯ ಜೀವನದ ವರ್ಣನೆಯನ್ನು ನನ್ನ ಸ್ವಂತ ಅನುಭವದಿಂದ ಬರೆದಿರಬೇಕೆಂದು ಭಾವಿಸುತ್ತಾರೆ. ಒಬ್ಬ ಹೆಸರಾಂತ ಮಾನವಶಾಸ್ತ್ರಜ್ಞ ಒಂದು ಕಡೆ ಹೇಳಿದ : 'ಸಂಶೋಧಕನಿಗೂ ಅವನು ಅಭ್ಯಾಸಮಾಡಬೇಕಾದ ಗಿರಿಜನರ ಪಂಗಡಕ್ಕೂ ಇರುವ ಅಡ್ಡಿ ಆತಂಕಗಳು ಹೋಗಬೇಕಾದರೆ ಅವರ ಭಾಷೆ ಕಲಿಯಬೇಕು, ಅವರ ಅನ್ನ ತಿನ್ನಬೇಕು, ಮತ್ತು ಅವರ ಹೆಂಗಸರೊಡನೆ ಮಲಗಬೇಕು' ಎಂದು. ನನ್ನ ಅನುಭವದಿಂದ ಹೇಳಬೇಕಾದರೆ, ಎಲ್ಲೋ ಒಂದೊಂದು ಸಲ ಅವರ ಪ್ರೀತಿ ವಿಶ್ವಾಸ ಸಂಪಾದನೆಗೆ ಅವರು ತಿನ್ನುವ ಅನ್ನ ತಿನ್ನಬಹುದು. ಆದರೆ ಹಾಗೆ ಮಾಡದೆ ಯಾವಾಗಲೂ ಅದನ್ನೇ ತಿಂದರೆ ಆರೋಗ್ಯ ಕೆಟ್ಟುಹೋಗುತ್ತದೆ. ಗಿರಿಜನರ

ಗುಟ್ಟು ಗಿರಿಜನ ಹುಡುಗಿಯ ಸಹವಾಸ ಬೆಳೆಸಿದರೆ ತಿಳಿಯುತ್ತೆ ಎನ್ನುವುದೂ ಶುದ್ಧ ತಪ್ಪು. ಹುಡುಗಿಯರ ಸಹವಾಸ ಬೆಳೆಸುವುದು ಮಾನವಶಾಸ್ತ್ರೀಯ (anthropological) ಅನುಭವವಲ್ಲ. ಹಾಗೆ ಮಾಡುವುದರಿಂದ ಸಾಂಪ್ರದಾಯಿಕವಾಗಿ ಬಂದ ಲೈಂಗಿಕತಂತ್ರವನ್ನು ಸಹ ಅರಿಯುವುದು ಸಾಧ್ಯವಿಲ್ಲ.

ಕಸಬುದಾರ ಸಂಶೋಧಕ ತನ್ನ ಸಂಚಾರ ಕಾಲದಲ್ಲಿ ಬಹಳ ಕಟ್ಟುನಿಟ್ಟಾದ ಜೀವನ ನಡೆಸಬೇಕು. ಮರಿಯರು, ಕೊನ್ಯಾಕರು, ಕುಟ್ಟಿಯಾಕೊಂಡರು, ಮತ್ತು ಮಿಷ್ಮಸರಲ್ಲಿ ಮತ್ತು ಆಫ್ರಿಕಾದ ಕಬ್ರಿಯಾಸರಲ್ಲಿ ಅತ್ಯಂತ ಸುಂದರಿಯರಾದ ಹಾಗೂ ಮನಮೋಹಿಸುವ ಹುಡುಗಿಯರಿದ್ದಾರೆ. ಆ ಜನರು ತಮ್ಮ ಇಡೀ ತಂಡವನ್ನೇ ನನ್ನ ಮುಂದೆ ನಿಲ್ಲಿಸಿದರು. ಆದರೆ ಅವರನ್ನು ದೂರದಿಂದಲೇ ನೋಡಿ ಆನಂದಿಸಿದೆ.

ಜನ ಅನೇಕ ಸಲ ಹೇಳುತ್ತಾರೆ, ಏಕೆ ಬರ್ನಾಡ್‌ಷಾನೂ ಹೇಳಿದ್ದಾರೆ, ನಗ್ನತೆಗಿಂತ ಉಡುಪು ಹೆಚ್ಚು ಕೆರಳಿಸುತ್ತದೆ ಎಂದು. ಆದರೆ ನನಗೆ ಹಾಗಲ್ಲ. ಸಂಪೂರ್ಣ ನಗ್ನತೆ, ಅದರ ಸೌಂದರ್ಯ ಹಾಗೂ ಸ್ವಚ್ಛಂದತೆಗಳು ನನ್ನನ್ನು ಭಾವಪರವಶನನ್ನಾಗಿ ಮಾಡಿವೆ. ಮರಿಯರು, ಕೊಂಡರು ಮತ್ತು ಸವೋರಾರ ಅರ್ಧನಗ್ನತೆಯೂ ಸೌಂದರ್ಯ ಹಾಗೂ ನೀತಿಯ ದೃಷ್ಟಿಯಿಂದ ಸರಿಯೆಂದು ಕಂಡಿದೆ. ಸ್ತ್ರೀಯ ಸ್ತನಗಳು ಲೈಂಗಿಕ ಸಂಕೇತಕ್ಕಿಂತ ಮರುಕದ ಸಂಕೇತ ಎಂದು ಒಮ್ಮೊಮ್ಮೆ ಭಾವಿಸುತ್ತಾರೆ. ಸ್ತನಗಳನ್ನು ಕೇವಲ ಮುಗ್ಧ ಭಾವನೆಯಿಂದ ಧೈರ್ಯವಾಗಿ ತೋರಿಸಿದ್ದನ್ನು ನೋಡಿ ನನಗೆ ಮಹದಾನಂದವಾಗಿದೆ. ವಿಷಯ ಲಂಪಟತೆಯ ಕಾರಣ ನನಗೆ ಹಾಗೆ ಆಗುತ್ತಿತ್ತು ಎಂದಲ್ಲ. ಅದರಿಂದ ಹಾಗೆ ಆಗುತ್ತಿರಲಿಲ್ಲ ಎಂದು ಹೇಳಿಕೊಳ್ಳುವ ಬೂಟಾಟಿಕೆ ನನ್ನಲ್ಲಿಲ್ಲ. ಆ ಸ್ತನಗಳು ಸ್ವಾತಂತ್ರ್ಯ, ಆರೋಗ್ಯ ಹಾಗೂ ಆಕೃತ್ರಿಮ ವರ್ತನೆಗಳನ್ನು ತೋರಿಸುತ್ತವೆ ಎಂಬ ಕಾರಣದಿಂದ ನನಗೆ ಆನಂದವನ್ನುಂಟುಮಾಡಿವೆ.

ಮನುಷ್ಯನು ತನ್ನ ಪ್ರಥಮ ಪ್ರೇಮದ ಆ ಮೋಹಕ ಅನುಭವವನ್ನು ಯಾವಾಗಲೂ ಮರೆಯುವುದಿಲ್ಲ ಎಂದುಕೊಂಡಿದ್ದೇನೆ. ನನ್ನ ಬಗ್ಗೆ ಹೇಳುವುದಾದರೆ, ಆ ಪ್ರಥಮ ಪ್ರೇಮ ಕಂಡುಕೊಂಡದ್ದು ಕಳ್ಳತನದ್ದಾಗಿರಲಿಲ್ಲ. ಹಾಗೆ ಹೇಳಲು ನನಗೆ ಸಂತೋಷವೂ ಆಗುತ್ತದೆ. ಅದು ದೀರ್ಘವಾದ ಸಾಹಸದ ಕೊನೆಯ ಸಿದ್ಧಿ. ಅದು ಫಲಕದಾಯಕವಾಗದೇ ಉಳಿಯಲೂ ಇಲ್ಲ. ಕಾಡು ಎಷ್ಟು ಸೊಗಸೋ, ಅಷ್ಟೇ ಸೊಗಸಾಗಿದ್ದಳು ನಾ ಮೆಚ್ಚಿದ ಆ ಹುಡುಗಿ.

ಸಿದ್ಧಿಸದ ಯಾವ ಪ್ರೇಮವನ್ನು ಮಧ್ಯಯುಗದ ವೈದ್ಯರು ಹುಚ್ಚು, ಉನ್ಮಾದ ಮುಂತಾಗಿ ಕರೆದರೋ ಅಂಥ ಒಂದು ತಡೆಯಲಸಾಧ್ಯವಾದ ಅನುಭವ ನನಗಾಯಿತು. ಅದರಿಂದಾದ ಹಿಂಸೆ ಹಾಗೂ ಅಚ್ಚರಿ ಬಾಳಿಗೊಂದು ಬೆಲೆಕೊಟ್ಟಿತು. ಅಂಥ ಅನುಭವವನ್ನು ಹಿಂದಾಗಲೀ ಈಚೆಗಾಗಲೀ ನಾನು ಅನುಭವಿಸಿಲ್ಲ. ಅದು ನನ್ನ ಇಂದ್ರಿಯಗ್ರಹಣಶಕ್ತಿಗಳನ್ನು ಪ್ರಬಲಗೊಳಿಸಿತು. ನಾನು ಪುಸ್ತಕದಲ್ಲಿ ಮಾತ್ರ ತಿಳಿದ

ಎಷ್ಟೋ ವಿಚಾರಗಳನ್ನು ನಿಜವೆಂದು ತೋರಿಸಿಕೊಟ್ಟಿತು. ತೀರಾ ಸಮಾನಾಂತರವೂ ಅನಂತವೂ ಆದ ಬಾಳುಗಳು ಎಂದೂ ಬೆರೆಯಲಾಗದೇ ಹೋದವು. ಮನ ಒಂದಾದರೂ ವಿಧಿ ಅಡ್ಡಬಂದಿತು. ಆದರೂ ಸಾಮಾನ್ಯ ತರಹ ಪ್ರೇಮವನ್ನು ಮನಮುಟ್ಟುವ ಅಮೂಲ್ಯವಾದ ಹಾಗೂ ಪ್ರತಿಫಲವನ್ನಿತ್ತ ಪ್ರೇಮವನ್ನು ನಾನು ಅನೇಕ ಸಲ ಕಂಡಿದ್ದೇನೆ. ಅಂಥವನ್ನು ನನ್ನ ಜೀವನದ ಅತ್ಯುತ್ತಮ ರಸನಿಮಿಷಗಳೆಂದು ಭಾವಿಸುತ್ತೇನೆ. ಅದಕ್ಕೆ ನಾನು ನಾಚಿಕೆಪಟ್ಟುಕೊಳ್ಳುವುದಿಲ್ಲ. ಅವುಗಳನ್ನು ಅನುಭವಿಸುವ ಶಕ್ತಿ ನನಗಿತ್ತಲ್ಲ ಎಂದು ನಾನು ಹೆಮ್ಮೆಪಡುತ್ತೇನೆ.

ಈಗ, ಅಲ್ಲದೆ ಕಳೆದುಹೋದ ಎಷ್ಟೋ ವರ್ಷಗಳಿಂದ ನನ್ನ ಹಳೆಯ ಪ್ರೇಮಗಳೆಲ್ಲ ನನ್ನ ಮೆಚ್ಚಿನ ಮಡದಿಯಲ್ಲಿ ಕೇಂದ್ರೀಕೃತವಾಗಿವೆ. ಅವಳಲ್ಲಿ ಆ ಎಲ್ಲಾ ಪ್ರೇಮಗಳ ಛಟ್ಟಿಯಿದೆ. ಆ ಅನುಭವಗಳಿಂದ ನಾನು ಇನ್ನೂ ಉತ್ತಮ ಪ್ರೇಮಿಯಾಗಿದ್ದೇನೆ.

ಹೀಗೆ ನಾನು ಮೆಚ್ಚಿದ ವ್ಯಕ್ತಿಗಳ ಕಾಮೋತ್ತೇಜಿತ ಹಾಗೂ ಮೈಮರೆಸುವ ಪ್ರೇಮದಿಂದ ಮುನ್ನಡೆಯುತ್ತ – ಹಿಗ್ಗುತ್ತಾ ಮೇಲಕ್ಕೇರುತ್ತಾ ಎಂದು ನಾನು ಹೇಳಲಾರೆ–ಜನಸಾಮಾನ್ಯರ ಬಗ್ಗೆ ನಾನು ವಿಶಾಲವಾದ ಪ್ರೇಮವನ್ನು ಬೆಳೆಸಿ ಕೊಂಡಿದ್ದೇನೆ. ಪ್ರೇಮದ ಬಗ್ಗೆ – ಆ ಪ್ರೇಮ ಲೈಂಗಿಕ ಪ್ರೇಮವಾಗಿರಲಿ, ಆಧ್ಯಾತ್ಮಿಕ ಪ್ರೇಮವಾಗಿರಲಿ, ಜಗಳ ಹಾಗೂ ಯುದ್ಧಗಳ ಬದಲು ತೋರಬೇಕಾದ ಪ್ರೇಮ ವಾಗಿರಲಿ – ನಾನು ಅಪಾರ ಶ್ರದ್ಧೆ ವಹಿಸುತ್ತೇನೆ. ಮುಂದೆ ನಾನು ಕೊನೆಯಲ್ಲಿ ಹೇಳುವಂತೆ ಅದೇ ನಮ್ಮ ಸಮಸ್ಯೆಗಳಿಗೆ ಅಂತಿಮ ಪರಿಹಾರ.

ಒಬ್ಬನು ತನ್ನ ರಾಷ್ಟ್ರೀಯತ್ವವನ್ನು (nationality) ಬದಲಾಯಿಸುವುದು ದುರದೃಷ್ಟವಶಾತ್ ಇನ್ನೂ ಕಷ್ಟ. ಆದರೆ ನನ್ನ ವಿಷಯದಲ್ಲಿ ಹೇಳಬೇಕಾದರೆ, ನಾನು ಮಾಡಬೇಕಾಗಿದ್ದುದು ಇಪ್ಪತ್ತೈದು ವರ್ಷಗಳಿಂದ ನನ್ನಲ್ಲಿ ಬೆಳೆದುಬಂದ ಸಮೀಕರಣತೆಯ ಅತೀವ ಭಾವನೆಗೆ ಕಾನೂನಿನ ಮುದ್ರೆ ಒತ್ತುವುದಷ್ಟು ಆಗಿತ್ತು. ಮೆಚ್ಚಿದ ವ್ಯಕ್ತಿಯೊಡನಾಗಲೀ, ಮೆಚ್ಚಿದ ಗಿರಿಜನರೊಡನಾಗಲೀ ಅಥವಾ ಮೆಚ್ಚಿದ ದೇಶದೊಡನಾಗಲೀ ಬೆರೆಯಬೇಕೆಂದು ನನ್ನ ಮನಸ್ಸಿಗೆ ಯಾವಾಗಲೂ ಅನ್ನಿಸುತ್ತಿತ್ತು. ಸುಮ್ಮನೆ ನೋಡುತ್ತಾ ಕುಳಿತುಕೊಳ್ಳುವುದು ನನ್ನಿಂದ ಸಾಧ್ಯವಿರಲಿಲ್ಲ. ನಡೆಯುತ್ತಿರುವುದರಲ್ಲಿ ನಾನು ಭಾಗವಹಿಸಬೇಕು ಎಂದೆನಿಸುತ್ತಿತ್ತು. ಈ ಕಾರಣ ನಾನು ಇಂಡಿಯಾದ ನಾಗರಿಕನಾದದ್ದು ಒಂದು ಆಧ್ಯಾತ್ಮಿಕ ಅನುಭವ. ಅದರಲ್ಲಿ ನನ್ನ ಸರ್ವಾಂಗವೂ ಭಾಗವಹಿಸಿದುವು – ಮೆಚ್ಚಿದ ಮದುವೆಯಂತೆ.

ಯಾವುದೋ ಸಿಟ್ಟಿನ ಭರದಲ್ಲಿ ನಾನು ನನ್ನ ಬ್ರಿಟಿಷ್ ರಾಷ್ಟ್ರೀಯತ್ವವನ್ನು ಬಿಡಲಿಲ್ಲ. ಬ್ರಿಟನ್ ಬಗ್ಗೆ ನನಗೆ ಯಾವಾಗಲೂ ಪ್ರೇಮವೂ ಗೌರವವೂ ಉಂಟು. ಮೂವತ್ತನೆಯ ದಶಕದಲ್ಲಿ ಬ್ರಿಟಿಷರ ಸಾಮ್ರಾಜ್ಯಶಾಹೀ ಮನೋಭಾವನೆಯಿಂದ, ಅದರಲ್ಲಿಯೂ ಇಂಡಿಯಾದಲ್ಲಿ ಅವರು ನಡೆದುಕೊಂಡ ರೀತಿಯಿಂದ, ನನ್ನ

ಮನಸ್ಸಿಗೆ ವ್ಯಸನವಾದದ್ದು ನಿಜ. ಗಾಂಧೀಜಿಯ ಅನುಯಾಯಿಗಳನ್ನು, ಅಷ್ಟೇ ಏಕೆ ಗಾಂಧೀಜಿಯನ್ನೇ ಕಂಡ ರೀತಿ, ಈಗ ಹಳೆಯ ಕಥೆ. ಅದನ್ನು ಈಗ ಸ್ಮರಿಸಿಕೊಳ್ಳುವುದು ನನಗೆ ಸುತರಾಂ ಇಷ್ಟವಿಲ್ಲ. ಆಧುನಿಕ ಇಂಡಿಯಾದಲ್ಲಿ ಕಾಣುವ ಅತ್ಯಂತ ಹೆಚ್ಚಿನ ವಿಷಯವೆಂದರೆ ಅದು ಹಿಂದಿನದನ್ನೆಲ್ಲಾ ಮರೆತಿರುವುದು ಹಾಗೂ ಮನ್ನಿಸಿರುವುದು. ಆದರೆ ಆಗ ಅದು ಕಣ್ಣಿಗೆ ಕಟ್ಟಿದಂತಿತ್ತು. ಸರ್ಕಾರ ಮತ್ತು ಚರ್ಚುಗಳು ಒಂದೆರಡು ಸಂದರ್ಭಗಳಲ್ಲಿ ಬಿಟ್ಟರೆ ಬೇರೆ ಸಂದರ್ಭಗಳಲ್ಲಿ ತೋರಿಸಿದ ಮಹಾ ಬಿಂಕ ನನ್ನ ದೇಶದವರೊಡನೆ ಹಾಯಾಗಿ ಇರುವುದಕ್ಕೆ ಎಡೆಗೊಡಲಿಲ್ಲ. ಆ ಕಾರಣದಿಂದ ನಾನು ಇಂಡಿಯಾದ ನಾಗರಿಕನಾಗಲಿಲ್ಲ. ಗಾಂಧೀಜಿಯವರ ಬಳಿ ಇದ್ದಾಗ ನಾನು ಇಂಡಿಯಾ ದೇಶವನ್ನು ಪ್ರೇಮಿಸಿದೆ. ಗಾಂಧೀಜಿ ನನ್ನನ್ನು ಸ್ವೀಕರಿಸಿದರು. ಆಮೇಲೆ ಇಂಡಿಯಾದ ಗಿರಿಜನರ ಕಾರಣ ಆ ಪ್ರೇಮ ಬಲಿತು, ಬೆಳೆದು, ಹೂವಾಯಿತು.

ನಾನೊಮ್ಮೆ ಇಂಗ್ಲಿಷಿನವನಾಗಿದ್ದೆ ಎಂಬ ಭಾವನೆ ಅನೇಕ ವರ್ಷಗಳಿಂದ ನನ್ನಲ್ಲಿ ಇಲ್ಲವೇ ಇಲ್ಲ. ಯಾರಾದರೂ ಜ್ಞಾಪಕಮಾಡದೆಹೋದರೆ ಅದು ನನ್ನ ನೆನಪಿಗೆ ಬರುವುದೇ ಇಲ್ಲ. ಆದರೆ ಹಾಗೆ ನೆನಪಾದಾಗ ನನ್ನ ಮನಸ್ಸಿಗೆ ತಲ್ಲಣವಾಗುತ್ತದೆ. ನಾನು ಈ ದೇಶದ ಚಿತ್ರದ ಒಂದು ಅಂಗ ಎಂದು ನನ್ನ ಇಂಡಿಯಾದ ಸ್ನೇಹಿತರು ಭಾವಿಸುತ್ತಾರೊ ಹೇಗೋ ಕಾಣೆ. ಆದರೆ ನನ್ನ ಮಟ್ಟಿಗೆ ಹೇಳುವುದಾದರೆ, ನಾನು ಇಂಡಿಯಾದ ಚಿತ್ರದ ಒಂದು ಭಾಗ. ಈ ಭಾವನೆ ಅನೇಕ ವರ್ಷಗಳಿಂದ ನನ್ನಲ್ಲಿದೆ. ಹೀಗಿರುವುದರಿಂದ ಅದು ಇರುವುದು ನನಗೇ ಗೊತ್ತಾಗುತ್ತಿಲ್ಲ ನಾನು ಇಲ್ಲಿದ್ದೇನೆ. ಎಲ್ಲಾ ಸ್ವಾಭಾವಿಕವಾಗಿ ಕಾಣಿಸುತ್ತದೆ. ನನ್ನ ಮನೆಮಠ ಇಂಡಿಯಾದ್ದು. ನನ್ನ ಮಕ್ಕಳೆಲ್ಲ ತಾವು ಇಂಡಿಯಾದವರೆಂದು ಭಾವಿಸುತ್ತಾರೆ. ಅಷ್ಟೇ ಅಲ್ಲ, ಅವರಿಗೆ ಇಂಡಿಯಾದವರೆಂಬ ಹೆಮ್ಮೆಯೂ ಇದೆ. ಚೀನಾದ ಧಾಳಿಯ ಕಾಲದಲ್ಲಿ ಒಂದು ದಿನ ವಸಂತ್ ನನ್ನ ಬಳಿಗೆ ಬಂದು 'ಅಪ್ಪ, ನಮ್ಮ ರಾಷ್ಟ್ರದ ಬಗ್ಗೆ ನಿನ್ನಲ್ಲಿ ಒಂದಿಷ್ಟು ಮಾತಾಡಬೇಕಾಗಿದೆ!' ಎಂದು ಬಿಗುಮಾನವಾಗಿಯೆ ಹೇಳಿದ. ದಿಲ್ಲಿಯ ಪತ್ರಿಕೆಯೊಂದು ನನ್ನನ್ನು ಕುರಿತು 'ಬ್ರಿಟಿಷ್ ಜನ್ಮ ಪಡೆದ ಇಂಡಿಯಾದವನು' ಎಂದು ಹೇಳಿತು. ಇದು ಸರಿಯಾದ ಮಾತು.

ನಾನು ಪರಿಚಯಕ್ಕೆ ಅರ್ಹನಾದಂತಹ ವ್ಯಕ್ತಿ ಅಲ್ಲ ಎಂದು ನನ್ನ ಹಿಂದಿನ ದೇಶದ ಜನರು ಮೊದಲಿಗೆ ಭಾವಿಸಿದರು. ಸ್ವಾತಂತ್ರ್ಯ ಬಂದಮೇಲೆ ಏನೋ ಪಾಪ ಇನ್ನೇನು ಮಾಡೋದು ಎಂಬ ಮನೋಭಾವನೆ ತಳೆದಿದ್ದಾರೆ. ಆಗಾಗ್ಗೆ ನನಗೆ ಕೆಲವರು ಸಿಕ್ಕುತ್ತಾರೆ. ಹಾಗೆ ಸಿಕ್ಕಾಗ ಅವರಿಗೆ ತಾಪತ್ರಯವೇ. ಒಂದು ದಿನ ಕಲ್ಕತ್ತಾದಲ್ಲಿ ದಕ್ಷಿಣ ಆಫ್ರಿಕಾದವರೊಬ್ಬರು ನನಗೆ ಸಿಕ್ಕಿ 'ನಿಮ್ಮ ಅಭಿಪ್ರಾಯ ಎಷ್ಟೇ ಅಸಾಧಾರಣವಾಗಿರಲಿ, ನಿಮ್ಮಿಂದ ಬೇರ್ಪಡಿಸಲಾರದ್ದು ಒಂದಿದೆ ನಿಮ್ಮಲ್ಲಿ. ಅದೇನೆಂದರೆ, ನಿಮ್ಮ ರಕ್ತ ಬಿಳೀದು' ಎಂದು ವಾದಿಸಿದರು. ಅಮೆರಿಕಾದ

ಟೆಕ್ಸಾಸ್‌ನಿಂದ ಬಂದ ನೀಗ್ರೋ ವಿರೋಧಿಯೊಬ್ಬ ನಾನೇನೇ ಹೇಳಲಿ ನಾನು ಆಕ್ಸ್‌ಫರ್ಡ್ ಮನುಷ್ಯ ಎಂದರು. ಹೋಗಲಿ ಬಿಡಿ. ಇಂಡಿಯಾದಲ್ಲಿಯೇ ಹುಟ್ಟಿದ ಎಷ್ಟೋ ದೊಡ್ಡ ಮನುಷ್ಯರು ನನಗಿಂತ ಹೆಚ್ಚು 'ಆಕ್ಸ್‌ಫರ್ಡ್' ಆಗಿದ್ದಾರೆ.

ಅಂತೂ ಒಂದು ವಿಚಾರ ಸ್ಪಷ್ಟ. ಇಂಡಿಯಾದ ನಾಗರಿಕನಾಗಿ ನಾನು ಯೂರೋಪಿನ ಸಂಬಂಧವನ್ನು ತ್ಯಜಿಸಲಿಲ್ಲ. ನನ್ನ ಸಂಸ್ಕೃತಿಯ ಬೇರುಗಳು ಅಲ್ಲಿವೆ ಎಂಬುದು ನನಗೆ ಗೊತ್ತು. ಹಿಂದೂ ಅಥವಾ ಬೌದ್ಧ ಸಂಸ್ಕೃತಿಯನ್ನು ನಡೆ ನುಡಿಯಲ್ಲಿಯೂ ಯೋಚನೆಯಲ್ಲಿಯೂ ರಕ್ತಗತವಮಾಡಿಕೊಳ್ಳಬಲ್ಲ ಕೆಲವು ಯೂರೋಪಿಯನ್ನರಂಥ ವ್ಯಕ್ತಿ ನಾನಲ್ಲ. ಕಾಡಿನಲ್ಲಿ ಅನೇಕ ವರ್ಷಗಳ ಕಾಲ ನಾನು ಒಂದು ರೀತಿಯ ವಿಚಿತ್ರ ಬಾಳುವೆ ಮಾಡುತ್ತಿದ್ದೆ. ಹಾಗೆ ಮಾಡಲು ನಾನು ಇಂಡಿಯನ್ ಆಗಿದ್ದೆ ಎಂಬುದು ಕಾರಣವಲ್ಲ; ಅದು ನನಗೆ ಹಿಡಿಸಿದ್ದು ಕಾರಣ. ನಾನು ಇಂದು ಇಂಡಿಯಾದ ತಿಂಡಿ ತೀರ್ಥಗಳನ್ನು ತೆಗೆದುಕೊಳ್ಳುತ್ತಿದ್ದರೆ ಅದಕ್ಕೆ ಕಾರಣ ನನ್ನ ಬೂಟಾಟಿಕೆಯಲ್ಲ. ನನಗೆ ನಿಜವಾಗಿಯೂ ಇಂಡಿಯಾದ ಅನ್ನ ಹುಳಿ ಸಾರು ಮತ್ತು ಸಿಹಿತಿಂಡಿ ಹಿಡಿಸಿವೆ. ಇಂಡಿಯಾದ ವೇದಾಂತ, ಕಲೆ ಹಾಗೂ ಸಾಹಿತ್ಯಗಳಿಂದ ನಾನು ಬಹಳ ಕಲಿತಿದ್ದೇನೆ. ಅವು ಹೊಸ ಪ್ರಪಂಚದ ಬಾಗಿಲನ್ನೇ ತೆರೆದುಕೊಟ್ಟಿವೆ. ಅದರ ಕೆಳಗೆ, ತಳದಲ್ಲಿ, ಯೂರೋಪಿನ ಸಂಸ್ಕೃತಿಯ ಆಸ್ತಿಭಾರವಿದೆ. ಅದು ಚಂದ, ಇದು ಚಂದಲ್ಲ ಎಂದು ನಾನು ಹೇಳುವುದಿಲ್ಲ. ಅಂತು ಇರುವುದಂತೂ ಹೀಗೆ. ಮತ್ತು ಒಪ್ಪಿಕೊಂಡಿದ್ದರಿಂದ ಹೊರಗೆ ಹಾಕಿತು. ನನ್ನ ಮತಧರ್ಮವನ್ನು ನಿರ್ಮೂಲಮಾಡಿ ಬೇಕಾದ ಮತವನ್ನು ಕೊಟ್ಟಿತು.

ಇಂಡಿಯಾ ನನಗೆ ಎಂತೆಂಥಾ ಸ್ನೇಹಿತರನ್ನೂ ಕೊಟ್ಟಿದೆ ! ವಿದ್ವಾಂಸರುಗಳು, ಆಡಳಿತಗಾರರು, ಪತ್ರಿಕೋದ್ಯಮಿಗಳು, ಕವಿಗಳು, ಕಲಾವಂತರು ಹಾಗೂ ಅನೇಕ ಒಳ್ಳೆಯ ಜನಸಾಮಾನ್ಯರನ್ನು ಕೊಟ್ಟಿದೆ. ಪ್ರೀತಿಸಿದರೆ ಪ್ರತಿಯಾಗಿ ಪ್ರೀತಿಸುವ ಜನ ಇಂಡಿಯಾದವರು. ಕೂಡಲೇ ಸ್ನೇಹ ಬೆಳೆಸುವ ಜನ ಇವರು. ಸಹೃದಯದ, ಪ್ರೀತಿಯ ಮತ್ತು ಆಲೋಚನೆಯ ಜನ. ವೋಲ್ಟೈರ್ ಬಹಳ ಹಿಂದೆ ಬರೆದ 'ಇಂಗ್ಲೆಂಡಿನಲ್ಲಿಯೂ ದಡ್ಡರಿಲ್ಲದೆ ಇಲ್ಲ' ಎಂದು. ಇಂಡಿಯಾದಲ್ಲಿಯೂ ಇದ್ದಾರೆ ಅಂಥವರು.

ಇಂಡಿಯಾಕ್ಕೆ ಒಳ್ಳೆಯ ಭವಿಷ್ಯವಿದೆಯೆಂದು ನನ್ನ ಗಾಢ ನಂಬಿಕೆ. ಈ ದೇಶದ ಸಿಟ್ಟೆದ್ದ ಯುವಕರೂ, ತಬ್ಬಿಬ್ಬಾಗಿರುವ ಮುದುಕರೂ ತುಂಬಾ ಟೀಕೆ ಮಾಡುತ್ತಾರೆ ; ಸಿಡಿಮಿಡಿಗೊಳ್ಳುತ್ತಾರೆ. ಇಲ್ಲಿ ಕೊಂಚ ಲಂಚರುಷುವತ್ತು ಮತ್ತು ಬಹಳ ಅದಕ್ಷತೆ ಇವೆ ನಿಜ. ಬೇಕಾದ್ದಕ್ಕಿಂತಲೂ ಹೆಚ್ಚು ಬೂಟಾಟಿಕೆಯೂ ಇದೆ. ಆದರೆ ಜಮಾ ಲೆಕ್ಕದಲ್ಲಿ ಎಷ್ಟಿದೆ ನೋಡಿ ! ಎಷ್ಟೇ ತೊಂದರೆಗಳು ಬಂದರೂ ಹೊಸ ದೇಶವನ್ನು ಕಟ್ಟುವ ಮಹಾಕಾರ್ಯದಲ್ಲಿ ತೊಡಗಿರುವ ರಾಷ್ಟ್ರದವನಾಗಿರುವುದು ಎಂತಹ ರೋಮಾಂಚಕಾರಿ ಅನುಭವ.

ಒಮ್ಮೆ ನಾಗಾಲ್ಯಾಂಡಿನ ಒಂದು ಹಳ್ಳಿಗೆ ಹೋದಾಗ ಅಲ್ಲಿಯ ಚರ್ಚಿಗೆ ನನ್ನನ್ನು ಕರೆದರು. 'ಡಾ॥ ಎಲ್ವಿನ್ ಅವರು ಬೋಧನೆ ಮಾಡುತ್ತಾರೆ' ಎಂದು ಪ್ರಕಟನೆ ಮಾಡಿದ್ದರು. ಇದು ನನಗೆ ಅಚ್ಚರಿಯನ್ನುಂಟುಮಾಡಿತು. ಮುಂಚೆ ನನಗೆ ಈ ವಿಷಯ ತಿಳಿಸಲಿಲ್ಲ. ಆದ್ದರಿಂದ ನಾನು ಏನು ಹೇಳಬೇಕೋ ಗೊತ್ತಾಗಲಿಲ್ಲ. ಬೋಧನೆ ಮಾಡುವ ಬದಲು, ಅಲ್ಲಿ ನೆರೆದ ನಾಲ್ಕು ಸಾವಿರ ಜನಕ್ಕೆ, ಬೇರೆ ದೇಶದಿಂದ ಬಂದಂಥ ನಾನು ಹೇಗೆ ಆ ದೇಶದವನಾಗಿ ಆ ದೇಶದಲ್ಲಿ ಎಷ್ಟು ಸುಖವಾಗಿದ್ದೇನೆಂದು ಹೇಳಿದೆ. ಕೆಲವು ನಾಗಾ ಮುಖಂಡರು ತಾವು ಇಂಡಿಯಾ ದವರಲ್ಲ ಎಂದು ಹೇಳಿಕೊಂಡಿದ್ದರು. ನಾನು ಏತಕ್ಕೆ ಇಂಡಿಯಾದವನಾದೆ ಎಂದು ಹೇಳುವಾಗ ಅವರಿಗೆ ಹೀಗೆ ತಿಳಿಸಿದೆ : 'ಇಂಡಿಯಾದಲ್ಲಿ ತಾವು ನಮ್ಮ ಇಷ್ಟ ಬಂದ ರೀತಿಯಲ್ಲಿ ಬಾಳಬಹುದು. ಇಷ್ಟು ಸ್ವಾತಂತ್ರ್ಯ ಪ್ರಪಂಚದ ಬೇರೆ ಯಾವ ದೇಶದಲ್ಲಿಯೂ ಇಲ್ಲ. ಕೆಲವು ಕಿರುಕುಳಗಳು ಇವೆ. ನಿಜ. ಅವು ಎಲ್ಲಿಯೂ ಇದ್ದೇ ಇರುತ್ತವೆ. ಆದರೆ ಅವು ಮನಸ್ಸಿಗೆ ನೋವುಂಟುಮಾಡುವಂಥವುಗಳಲ್ಲ. ಡಾ॥ ರಾಧಾಕೃಷ್ಣನ್ ಅವರು ಈಚೆಗೆ ಒಂದು ಕಡೆ ಹೇಳಿದರು : 'ಕಾನೂನುಗಳನ್ನು ಮಾಡುವುದಕ್ಕಿಂತ ಸತ್ಯ ಹಾಗೂ ಸೌಂದರ್ಯಗಳ ಅನ್ವೇಷಣೆ ಮಾಡುವ ವ್ಯಕ್ತಿಯ ಸ್ವಾತಂತ್ರ್ಯವನ್ನು ಕಾಪಾಡುವುದು ಹೆಚ್ಚು ಮುಖ್ಯ' ಎಂದು.

ಇಂಡಿಯಾದಲ್ಲಿ ಮತಾಚರಣೆಗೆ ನಿಜವಾದ ಸ್ವಾತಂತ್ರ್ಯವಿದೆ. ಒಮ್ಮೆ ನಾಗಾ ಜನರಲ್ಲಿ ಒಂದು ಪ್ರಚಾರ ಹಬ್ಬಿತು : ಅವರು ಮತಕ್ಷೇತ್ರವನ್ನು ಬಿಟ್ಟು ಹಿಂದೂಗಳಾಗ ಬೇಕಾಗುತ್ತದೆ ಎಂದು. ಅದು ತಪ್ಪು ಭಾವನೆ ಎಂಬುದನ್ನು ನಾನವರಿಗೆ ಮನವರಿಕೆ ಮಾಡಿಕೊಟ್ಟೆ.

ಇಂಡಿಯಾದ ಎಲ್ಲಾ ಕ್ಷೇತ್ರಗಳಲ್ಲಿಯೂ ಪ್ರೇಮದ ಕಾವನ್ನು ಕಾಣಬಹುದು. ಅಹಿಂಸೆ, ಕರುಣೆ ಮತ್ತು ಮೈತ್ರಿ – ಇವುಗಳಲ್ಲಿ ಇಂಡಿಯಾದವರಿಗೆ ಗಾಢ ನಂಬಿಕೆ ಇದೆ. ಇದರ ಕಾರಣವೇ ಇವರು ಇನ್ನೊಬ್ಬರ ಮತ ಹಾಗೂ ನಡೆನುಡಿಗಳ ಬಗ್ಗೆ ಉದಾರಭಾವನೆ ತಳೆದಿರುವುದು. ಒಂದಾಗಿ ಬಾಳಬೇಕೆಂಬ ಉದಾತ್ತ ಧ್ಯೇಯ ಇವರಲ್ಲಿ ರಕ್ತಗತವಾಗಿದೆ. ಎಷ್ಟರಮಟ್ಟಿಗೆ ಈ ಪ್ರೇಮ – ಶಕ್ತಿ ಇಂಡಿಯಾದ ನಾಗರಿಕತೆಯನ್ನು ಪೋಷಿಸುವುದು ಎಂಬುದು ಅದರ ಭವಿಷ್ಯವನ್ನು ಅವಲಂಬಿಸಿ ರುತ್ತದೆ. ಪ್ರೇಮದ ಮೂಲಕ ಮಾತೃಭಾಷೆ, ಜನಾಂಗ ಹಾಗೂ ಪದ್ಧತಿಗಳ ಕಟ್ಟುಕಟ್ಟಳೆ ಗಳನ್ನು ಮೀರಿಹೋಗುವುದು ಸಾಧ್ಯ.

ನನ್ನ ಜೀವನದ ಅತಿ ಮುಖ್ಯ ಮೌಲ್ಯಗಳೆಂದರೆ, ನಾನು ಗಿರಿಜನರೊಡನೆ ಪಡೆದ ಸಂಪರ್ಕದಿಂದ ಹುಟ್ಟಿ ಬೆಳೆದವುಗಳು. ನಾನು ಆ ಜನರ ಮೇಲೆ ಪ್ರಭಾವ ಬೀರಿದುದಕ್ಕಿಂತ ಹೆಚ್ಚಾಗಿ ಅವರು ನನ್ನ ಮೇಲೆ ಪ್ರಭಾವ ಬೀರಿದ್ದಾರೆ. ಸುಖ ಹಾಗೂ ಸರಳತೆಗಳ ಹಿರಿಮೆಯನ್ನು ನಾನು ಅವರಿಂದ ಕಲಿತಿದ್ದೇನೆ. ವರ್ಣಮಯ ಹಾಗೂ ಸಾಮರಸ್ಯದ ಜೀವನದ ಬಗ್ಗೆ ಅವರಿಗಿರುವ ಆಸಕ್ತಿ ನನ್ನ ಮನಸ್ಸಿನ ಮೇಲೆ ಒಮ್ಮೆಲೇ ಪರಿಣಾಮವನ್ನುಂಟುಮಾಡಿತು.

ಯಾವ ರೀತಿಯ ಸಾಮ್ರಾಜ್ಯಶಾಹಿ ಅಥವಾ ವಸಾಹತುಶಾಹಿ ಭಾವನೆಯೇ ಆಗಲಿ ಅದಕ್ಕೆ ನನ್ನ ವಿರೋಧವೆಂಥದೆಂಬುದನ್ನು ಈ ಗ್ರಂಥದ ಆರಂಭದಲ್ಲಿಯೇ ಸ್ಪಷ್ಟವಾಗಿ ಹೇಳಿದ್ದೇನೆ. ನನ್ನ ಜೀವಿತಕಾಲದಲ್ಲಿಯೇ ಈ ಪ್ರಪಂಚದಲ್ಲಿ ಆದ ಬದಲಾವಣೆ ಅದ್ಭುತವಾಗಿದೆ. ನನ್ನ ತಂದೆ ಬಿಷಪ್ಪರಾಗಿ ಧರ್ಮಾಧಿಕಾರ ನಡೆಸುತ್ತಿದ್ದ ಪುಟ್ಟ ಸಿಯೆರ್ರಾ ಲಿಯೋನ್ ಕೂಡ ಸ್ವಾತಂತ್ರ್ಯ ಪಡೆದಿದೆ. ಇದೆಷ್ಟು ಆಶ್ಚರ್ಯ! ಆದರೆ ನಡೆಯಬೇಕಾದ ದಾರಿ ಬಹಳ ಇದೆ. ಇನ್ನೂ ಕೆಲವು ದೊಡ್ಡ ರಾಷ್ಟ್ರಗಳು ತಮ್ಮ ಭಾವನೆಗಳನ್ನು, ಏನಿಲ್ಲದಿದ್ದರೂ ತಮ್ಮ ಆರ್ಥಿಕ ಅಧಿಪತ್ಯವನ್ನು ಬೇರೆಯವರ ಮೇಲೆ ಹೇರುವ ಸೂಚನೆಗಳನ್ನು ತೋರಿಸುತ್ತಿವೆ.

ಆಕ್ಸ್‌ಫರ್ಡಿಗೆ ಹೋದಂದಿನಿಂದಲೂ ನಾನು ಶಾಂತಿವಾದಿ. ಮಾನವರಲ್ಲಿ ಬರುವ ಭಿನ್ನಾಭಿಪ್ರಾಯಗಳನ್ನು ಶಕ್ತಿಯ ಉಪಯೋಗದಿಂದ ಪರಿಹರಿಸಿಕೊಳ್ಳುವುದು ಅಸಾಧ್ಯ ಎಂಬುದು ನನ್ನ ಖಂಡಿತಾಭಿಪ್ರಾಯವಾಗಿದೆ. ಈ ಮಾತು ಗಿರಿಜನ ಪ್ರದೇಶಗಳ ಬಗ್ಗೆ ಇನ್ನೂ ಸತ್ಯ. ಅವರನ್ನು ಬೇರೆಯವರೊಡನೆ ಬೆರೆಸಬೇಕಾದರೆ ಪ್ರೀತಿವಿಶ್ವಾಸದಿಂದ ಮಾತ್ರ ಸಾಧ್ಯ. ಪ್ರೇಮ ಈ ಪ್ರಪಂಚದ ಮೂಲೆಮೂಲೆಗಳಲ್ಲಿಯೂ ತನ್ನ ತನಿಬೆಳಕನ್ನು ಬೀರಬೇಕು.

ಗಿರಿಜನರ ತಪ್ಪಿಗೆ ಶಿಕ್ಷೆ ವಿಧಿಸುವುದು, ಮುಯ್ಯಿಗೆ ಮುಯ್ಯಿ ತೀರಿಸಿಕೊಳ್ಳುವುದು ಮತ್ತು ಮರಣದಂಡನೆಗೆ ಅವರನ್ನು ಗುರಿಮಾಡುವುದು – ಇವಕ್ಕೆ ನಾನು ಸಂಪೂರ್ಣ ವಿರೋಧಿ. ಎಷ್ಟೋ ಮಾನವೀಯ ವಿಚಾರಗಳಲ್ಲಿ ಪ್ರಪಂಚಕ್ಕೆ ಮಾದರಿಯಾಗಿರುವ ಇಂಡಿಯಾ, ಮರಣದಂಡನೆಯನ್ನು ತ್ಯಾಜ್ಯಮಾಡದಿರುವುದು ವಿಷಾದಕರ. ಆತ್ಮಹತ್ಯೆಯ ಪ್ರಯತ್ನವನ್ನು ಅಪರಾಧವೆಂದು ಪರಿಗಣಿಸುವುದು ತಪ್ಪು. ಆತ್ಮಹತ್ಯೆಗೆ ಪ್ರೇರಣೆಗಳಾದ ಬಡತನ ಹಾಗೂ ರೋಗರುಜಿನಗಳು ಇರುವ ತನಕ ಅದಕ್ಕೆ ಶಿಕ್ಷೆ ವಿಧಿಸುವುದು ಸರಿಯಲ್ಲ.

ನಮ್ಮ ಜೈಲುಗಳ ಸುಧಾರಣೆ ಆಗಬೇಕು. ಈ ದೇಶದ ನಾಯಕರನೇಕರು ಜೈಲಿನಲ್ಲಿ ಇದ್ದವರಾದರೂ ಆ ಬಗ್ಗೆ ಅಷ್ಟು ಗಮನಕೊಟ್ಟಿಲ್ಲ.

ನಾನು ಸ್ಕೂಲಿನಲ್ಲಿರುವಾಗ ನಮ್ಮನ್ನು ಮಾಸ್ತರುಗಳು ಬೆತ್ತದಿಂದ ಹೊಡೆಯುತ್ತಿದ್ದರು. ಅಂಥ ಶಿಕ್ಷೆ ನನ್ನ ಮೇಲೆ ಬಹಳ ಕೆಟ್ಟ ಪರಿಣಾಮವನ್ನುಂಟು ಮಾಡುತ್ತಿದ್ದಿತು, ಶಾಲೆಯಲ್ಲಿಯೇ ಆಗಲಿ, ಬೇರೆ ಕಡೆಯೇ ಆಗಲಿ ಇಂಥ ಶಿಕ್ಷೆ ಕೊಡುವುದನ್ನು ನಿಲ್ಲಿಸಬೇಕು.

ವಿದ್ಯಾಭ್ಯಾಸದ ಬಗ್ಗೆ ನಾನು ಹೆಚ್ಚು ಹೇಳಲಿಚ್ಛಿಸುವುದಿಲ್ಲ. ಅದೊಂದು ಮುಗಿಯದ ವಿಷಯ. ಇಷ್ಟು ಹೇಳಬಯಸುತ್ತೇನೆ : ಮಕ್ಕಳ ಮೇಲೆ ಯಾವುದೋ ಕಾಲದ ಮತೀಯ ಭಾವನೆಗಳನ್ನು ಹೇರಬಾರದು. ಮಾನವ ಜನಾಂಗವೇ ತ್ಯಜಿಸಿದ ಭಾವನೆಗಳ ಬೋಧನೆಯನ್ನು ಬಿಟ್ಟು ಯುದ್ಧ ಎಷ್ಟು ಅಪಾಯಕರವಾದುದೆಂದು ಮಕ್ಕಳಿಗೆ ತಿಳಿಸಬೇಕು.

ಗಿರಿಜನರು ಸೌಂದರ್ಯದ ಕಡೆ ನನ್ನ ಮನಸ್ಸನ್ನು ಸೆಳೆದರು. ಸೌಂದರ್ಯ ಯೌವನದ ಒಂದು ಅಂಗ. ಶೋಷಣೆ ಮಾಡುವವನ ದೊಡ್ಡ ಅಪರಾಧವೆಂದರೆ ಆತ ಜನರನ್ನು ಮುದುಕರನ್ನಾಗಿ ಮಾಡಿಬಿಡುವುದು. ಇಂಡಿಯಾದ ರೈತನ ತಲೆಗೂದಲು ಬೆಳ್ಳಗಾಗುವುದು ಮತ್ತು ಅವನ ಬೆನ್ನು ಬಗ್ಗುವದು ಕಾಯಿಲೆ ಮಾತ್ರವಲ್ಲ; ಬಡತನದ ಬೇಗೆಯಿಂದ. ನನ್ನ ಹಳೆಯ ದಿನಚರಿಗಳನ್ನು ತಿರುವಿ ಹಾಕಿದಾಗ ಯಾವಾಗಲೂ ನನ್ನ ಬೆನ್ನುಹತ್ತುತ್ತಿದ್ದ ವಿಚಾರವೆಂದರೆ, ಹೇಗೆ ಜನಗಳನ್ನು ಯುವಕರನ್ನಾಗಿ ಇಡುವುದು ಎಂಬುದು. ಒಮ್ಮೆ ನನ್ನ ದಿನಚರಿಯಲ್ಲಿ ಹೀಗೆ ಬರೆದಿದ್ದೆ : 'ಒಂದು ವಿಚಾರದಲ್ಲಿ ನಾವು ಸೋತರೆ ಎಲ್ಲಾ ವಿಚಾರಗಳಲ್ಲಿಯೂ ಸೋತಂತೆ ಅಲ್ಲ. ನಿರಾಶೆ ನಮ್ಮನ್ನು ಮುದುಕರಾಗುವುದನ್ನು ತಪ್ಪಿಸುವಂತೆ ನೋಡಿಕೊಳ್ಳಬೇಕು. ಎಲ್ಲರ ದೊಡ್ಡ ಸಮಸ್ಯೆ ಎಂದರೆ ಯುವಕರಾಗಿಯೇ ಇರುವುದು ಹೇಗೆ ಎಂಬುದು. ನಮ್ಮ ನಿಜವಾದ ಶತ್ರು ಅಪವಾದ, ಬಡತನ ಅಥವಾ ಕಷ್ಟವಲ್ಲ. ನಮ್ಮ ದುರ್ನಡತೆಗಳೂ ಮುಪ್ಪಿಗೆ ಕಾರಣವಲ್ಲ. ಕಾಲವೇ ನಮ್ಮ ಮುಪ್ಪಿಗೆ ಕಾರಣ. ಪ್ರೇಮ ಮಾತ್ರ ಈ ಕಾಲವನ್ನು ತಡೆದು ನಿಲ್ಲಿಸಬಲ್ಲುದು'.

ಗಿರಿಜನರು ಇರುವುದು ಸ್ವಾಭಾವಿಕ ಸನ್ನಿವೇಶದಲ್ಲಿ. ಅಲ್ಲಿ ಸೊಗಸು ಹೊರಹೊಮ್ಮುತ್ತಿರುತ್ತದೆ. ಆದರೆ ಅವರು ಸೊಗಸಾದ ಅನೇಕ ಸಾಮಾನುಗಳನ್ನು ಮಾಡುವುದಿಲ್ಲ. ಅವುಗಳಿಗಾಗಿ ನಾನು ದೂರದ ಹಳ್ಳಿಗಳನ್ನೂ ಪುಟ್ಟ ಗುಡಿಸಲು ಗಳನ್ನೂ ಹುಡುಕಿದ್ದೇನೆ. ಮೂವತ್ತು ವರ್ಷದ ಶೋಧನೆ ಕೂಡಾ ನನಗೆ ಸಾಕಷ್ಟು ದೊರಕಿಸಿಕೊಟ್ಟಿಲ್ಲ. ಎಷ್ಟು ಸಿಕ್ಕಿತೊ ಅಷ್ಟೇ ಒಳ್ಳೆಯದು.

'ಸೌಂದರ್ಯವೆನ್ನುವುದು ಎಷ್ಟು ಅಪರೂಪ ;
ನನ್ನ ಚಿಲುಮೆಯಲ್ಲಿ ಕುಡಿಯುವವರು ಅತ್ಯಲ್ಪ.'

ದುರದೃಷ್ಟವಶಾತ್ ಬ್ರಿಟಿಷರ ಕೊನೆಯ ಆಡಳಿತ ಕಾಲದಲ್ಲಿ ಇಡೀ ಇಂಡಿಯಾದ ಮೇಲೆ ವಕ್ರತೆಯ ಅಲೆ ಹರಿದುಬಿಟ್ಟಿತು. ಟಾಗೂರರು ಮತ್ತು ಗಾಂಧೀಜಿಯವರು ಎಷ್ಟು ವಿರೋಧಿಸಿದರೂ ಬಹು ಅಗ್ಗದ ವಿದೇಶಿ ಸಾಮಾನುಗಳನ್ನು ಇಂಡಿಯಾ ದೇಶಕ್ಕೆ ತಂದುಹಾಕಲಾಯಿತು. ಹರ್ಬರ್ಟ್ ರೀಡ್ ಅವರು ಹೇಳುತ್ತಾರೆ : 'ಪಾಶ್ಚಾತ್ಯ ಪ್ರಪಂಚ ಅಗಾಧವೂ ಸರ್ವವ್ಯಾಪಕವೂ ಆದ ಅಸಹ್ಯ ನಾಗರಿಕತೆಯನ್ನು ಬೆಳೆಸಿದೆ. ಆ ನಾಗರಿಕತೆಗೆ ಮರ್ಯಾದೆಯ ಮುಖವಿಲ್ಲ' ಎಂದು. ಮತ್ತೂ ಹೇಳಿದ್ದಾರೆ : 'ಪಾಶ್ಚಾತ್ಯ ಪ್ರಪಂಚದ ವ್ಯಾಪಾರ ಮನೋವೃತ್ತಿ ಇಂಡಿಯಾಕ್ಕೆ ನಿತ್ಯಬಳಕೆಯ ಯಾವ ವಸ್ತುವಿನ ತಯಾರಿಕೆಯಲ್ಲಿಯೂ ಬಡತನದ ಹಾಗೂ ಕೀಳುತನದ ಶಿಲ್ಪವಿದ್ಯೆಯನ್ನು ಕೊಟ್ಟಿತು' ಎಂದು.

ಇದು ಇಂಡಿಯಾದ ಜೀವನದ ಯಾವ ಅಂಗವನ್ನೂ ಬಿಡಲಿಲ್ಲ. ಹಾರ್ಮೋನಿಯಂ ಇಂಡಿಯಾದ ಸಂಗೀತವನ್ನು ಹಾಳುಮಾಡಿತು. ಪಾಶ್ಚಾತ್ಯ ಸಂಪ್ರದಾಯಗಳು ಇಂಡಿಯಾದ ಚಿತ್ರಕಲೆ ಮತ್ತು ಶಿಲ್ಪವನ್ನು ಕಲಕಿದುವುದು. ರಾಶಿಗಟ್ಟಲೆ

ತಯಾರುಮಾಡಿದ ಗಿರಣಿ ಬಟ್ಟೆಗಳು ಇಂಡಿಯಾ ಕೈಮಗ್ಗದ ಕೈಗಾರಿಕೆಯನ್ನು ಹೆಚ್ಚು ಕಡಮೆ ಸಾಯಿಸಿಯೇ ಬಿಟ್ಟುವು. ಪುನಃ ಆ ಕೈಗಾರಿಕೆ ಚೇತರಿಸಿಕೊಂಡಾಗ ಅದರಲ್ಲಿ ಉಳಿದದ್ದು ತೀರಾ ಕೆಳಮಟ್ಟದ ಮಾದರಿಗಳು; ಅಥವಾ ನಿತ್ಯ ಪ್ರಯೋಜನದ ದೃಷ್ಟಿಯಿಂದ ತಯಾರಾದವುಗಳು ಮಾತ್ರ. ಇಂಡಿಯಾದಲ್ಲಿ ಕಟ್ಟುವ ಮನೆಗಳು ಬಲ್ಹಾಮ್ ಅಥವಾ ಟೊಟಿಂಗ್ ಬೆಕ್‌ನ (Balham or Tooting Bec) ಮನೆಗಳ ಕೀಳ್ತರಗತಿಯ ಕಾಪಿ ಮಾಡಿದಂತಾದುವುದು. ಹಿಂದಿನ ಸೌಂದರ್ಯ ಕಣ್ಮರೆಯಾಯಿತು. ಇಂಡಿಯಾದ ಗ್ರಾಮಾಂತರ ಪ್ರದೇಶದಲ್ಲಿ ನಮ್ಮ ಸಾಮೂಹಿಕ ಅಭಿವೃದ್ಧಿಯ ಚಳುವಳಿಯ ಕಾರಣವಾಗಿ ಬಹು ಅಸಹ್ಯವಾದ ಮನೆಗಳು ಕಾಣಿಸಿಕೊಳ್ಳುತ್ತಿವೆ. ಹಳ್ಳಿಗಳಲ್ಲಿ ಕಟ್ಟುವ ಸರ್ಕಾರಿ ಕಟ್ಟಡಗಳು ಪೋಲೀಸ್ ಲೈನಿನಂತಿವೆ. ಅನೇಕ ವೇಳೆ ಸಾರ್ವಜನಿಕ ಕಕ್ಕಸುಗಳಂತೆ ಕಾಣುತ್ತವೆ. ನಾವು ಕಟ್ಟುವ ಮನೆಗಳಲ್ಲಿ ಕಲೆಯಾಗಲೀ ಕಲ್ಪನೆಯಾಗಲೀ ಇಲ್ಲ. ಗ್ರಾಮೀಣ ಸನ್ನಿವೇಶಕ್ಕೆ ತಕ್ಕಂತೆ ಹೊಂದಿಕೊಳ್ಳುವ ಪ್ರಯತ್ನ ನಡೆದಿಲ್ಲ.

ಯಾವುದನ್ನು ಮರೆತರೂ ಸೌಂದರ್ಯವನ್ನು ಮರೆಯಬಾರದು. ಸೌಂದರ್ಯ ಪ್ರತಿಯೊಂದು ಪೀಳಿಗೆಯಲ್ಲಿಯೂ ಉತ್ತೇಜಿತಗೊಳ್ಳಬೇಕು. ವ್ಯಾಪಾರದೃಷ್ಟಿ ಅಥವಾ ಕೆಟ್ಟರುಚಿ ಅದರಲ್ಲಿ ಪ್ರವೇಶಿಸಬಾರದು. ಪ್ರಪಂಚದಲ್ಲಿ ಸೌಂದರ್ಯ ಬಹು ಮುಖ್ಯವಾದದ್ದು. ಅದೇ ಕೊನೆಗೆ ಗೆಲ್ಲಬೇಕು. ಇಂಡಿಯಾದ ಗುಡ್ಡಗಾಡಿನ ಜನರ ಜೀವನದಲ್ಲಿ ಈಗಲೂ ಸೌಂದರ್ಯವಿದೆ. ಅದು ಹಾಳಾಗದಂತೆ ನೋಡಿಕೊಳ್ಳಬೇಕು. ಆದರೆ ಹಾಗೆ ಮಾಡುವಾಗ ಆ ಗುಡ್ಡಗಾಡು ಜನ ಈ ಆಧುನಿಕ ಪ್ರಪಂಚದಲ್ಲಿ ಮುಂದುವರಿಯಬಾರದೆಂದು ನನ್ನ ಅಭಿಪ್ರಾಯವಲ್ಲ. ಅವರಿಂದ ಈ ಆಧುನಿಕ ಪ್ರಪಂಚಕ್ಕೆ ಒಂದು ಪ್ರೇರಣೆ ಆಗಬೇಕು ಎಂದು ನನ್ನ ಅರ್ಥ.

ನನ್ನ ಆಕ್ಸ್‌ಫರ್ಡ್ ದಿನಗಳಿಂದಲೂ ನಾನು ಸತ್ಯಕ್ಕೆ ಮಾರುಹೋಗಿದ್ದೇನೆ. ಸತ್ಯವೇ ದೇವರೆಂದು ಗಾಂಧೀಜಿ ಒತ್ತಿಹೇಳಿದ್ದು ನನಗೆ ಬಹಳ ಹಿಡಿಸಿತು. ನಾನೊಬ್ಬ ಮಾನವ ಪ್ರೇಮಿಯಾಗಿ ಗಿರಿಜನರ ಬಗ್ಗೆ ಸತ್ಯವನ್ನು ಹೇಳಬೇಕೆಂದು ಹೊರಟೆ. ಅವರ ಬಗ್ಗೆ ಸತ್ಯವನ್ನು ಹೇಳಿದ ಪಕ್ಷದಲ್ಲಿ ಮಾನವ ಜನಾಂಗಕ್ಕೆ ನಾವು ನಮ್ಮ ಕಾಣಿಕೆಯನ್ನು ಕೊಟ್ಟಂತೆ. ಆ ಸತ್ಯವೇ ಅವರ ಬಗ್ಗೆ ನಾವು ಸರಿಯಾದ ರೀತಿಯಲ್ಲಿ ನಡೆದುಕೊಳ್ಳುವಂತೆ ಮಾಡುವುದು.

ಇಂಡಿಯಾದಲ್ಲಿ ಸೌಂದರ್ಯದ, ಅಷ್ಟೇ ಅಲ್ಲ, ಸತ್ಯದ ಮುಖ್ಯ ಶತ್ರುವೆಂದರೆ, ಅದರಲ್ಲಿಯೂ ಗುಡ್ಡಗಾಡುಗಳಲ್ಲಿ, ಮಹಾನೇಮಿಷ್ಠತೆ (puritanism). ಇದು ತುಂಬ ಮುಖ್ಯವಾದುದರಿಂದ ಈ ವಿಚಾರವಾಗಿ ನಾಲ್ಕು ಮಾತು ಹೆಚ್ಚು ಆಡಲೇಬೇಕು. ಮನೋಧರ್ಮದಿಂದಲೇ ಆಗಲಿ, ಐತಿಹಾಸಿಕ ಅಥವಾ ಸಾಂಪ್ರದಾಯಕವಾಗಿಯೇ ಆಗಲಿ ಇಂಡಿಯಾ ಮಹಾನೇಮಿಷ್ಠವಾದ ದೇಶವಲ್ಲ. 'ಅಲ್ಲ' ಎಂದು ಒತ್ತಿಹೇಳುತ್ತೇನೆ. ಈ ಮಹಾನೇಮಿಷ್ಠತೆ ಬಂದದ್ದು ಪಶ್ಚಿಮದಿಂದ; ಕೊಂಚಮಟ್ಟಿಗೆ ಪ್ರೊಟೆಸ್ಟಂಟ್

ಪಾದ್ರಿಗಳಿಂದ. ಈ ಪಾದ್ರಿಗಳು ಗಾಂಧೀಜಿಯ ಮೇಲೆ ಅವರಿಗೆ (ಗಾಂಧೀಜಿಗೆ) ಅರಿವಾಗದಂತೆಯೇ ಪ್ರಭಾವವನ್ನು ಬೀರಿದ್ದಾರೆ ಎಂದು ನನಗೆ ಸಂದೇಹ. ಈಗ ಈ ದೇಶದಲ್ಲಿ ಸ್ವಾಭಿಮಾನದ ಹಾಗೂ ಸ್ವಧರ್ಮಾಭಿಮಾನದ ಮಹಾನೇಮಿಷ್ಠತೆ ಇದೆ. ಇದು ಜೀವನದ ಎಷ್ಟೋ ಸೌಂದರ್ಯೋಪಾಸನಾ ಸಂಬಂಧವಾದ ಮೌಲ್ಯಗಳಿಗೆ ಕುಠಾರಪ್ರಾಯವಾಗಿದೆ. ಹಳ್ಳಿಯ ಜನಸಾಮಾನ್ಯರ ದೃಷ್ಟಿಯಲ್ಲಿ ನೋಡಿದರೆ ಇದು ಅವರ ಸುಖಕ್ಕೇ ಹುಳಿಹಿಂಡುತ್ತಿದೆ.

ಮಹಾನೇಮಿಷ್ಠನ ತಪ್ಪುಗಳಲ್ಲಿ ದೊಡ್ಡದು ಯಾವುದೆಂದರೆ, ಮೌಲ್ಯಗಳ ಬಗ್ಗೆ ಆತನಿಗಿರುವ ಸುಳ್ಳು ಭಾವನೆ. ಜಿ.ಕೆ. ಚೆಸ್ಟರ್‌ಟನ್ ಹೇಳುತ್ತಾರೆ, 'ಮಹಾನೇಮಿಷ್ಠ ಯಾರು ಎಂದರೆ ತಪ್ಪು ವಿಚಾರಗಳ ಬಗ್ಗೆ ಧರ್ಮಶೀಲವಾಗಿಯೇ ರೇಗಾಡುವವನು' ಎಂದು. ಮಹಾನೇಮಿಷ್ಠ ಇನ್ನೊಬ್ಬರಿಗೆ ಯಾವಾಗಲೂ ಒಳ್ಳೆಯದನ್ನು ಮಾಡಬೇಕೆನ್ನುತ್ತಾನೆ. ಹಾಗೆ ಏನಾದರೂ ಮಾಡದಿದ್ದರೆ ಅವನಿಗೆ ನೆಮ್ಮದಿಯೇ ಇಲ್ಲ.

ಮಹಾನೇಮಿಷ್ಠತೆಗೂ ಸನ್ಯಾಸತ್ವಕ್ಕೂ ಬಹು ಸೂಕ್ಷ್ಮವಾದ ವ್ಯತ್ಯಾಸವಿದೆ. ಮಹಾನೇಮಿಷ್ಠ ಇಂದ್ರಿಯಗಳ ವೇದನೆಗಳನ್ನು ದಮನಮಾಡಲು ಯತ್ನಿಸಲಿಲ್ಲ. ಮನಸ್ಸಿನ ಅನಾಸಕ್ತಿಯನ್ನಾಗಲೀ ಅಥವಾ ಈ ಪ್ರಪಂಚದಿಂದ ದೂರವಾಗುವುದ ನ್ನಾಗಲೀ ಪಡೆಯಲಿಲ್ಲ. ಕ್ರೇನ್ ಬ್ರಿಂಟನ್ ಹೇಳಿದಂತೆ ಅವನು. ' ಈ ಪ್ರಾಪಂಚಿಕ ಸುಖಗಳಲ್ಲಿ ಯಾವುವು ತನ್ನನ್ನು ಮುಕ್ತಿಮಾರ್ಗದಲ್ಲಿ ಮುನ್ನಡೆಸುವುವೋ ಅವನ್ನು ಆರಿಸಿದ ; ಯಾವುವು ಅದಕ್ಕೆ ಅನುಕೂಲವಾಗಲಿಲ್ಲವೋ ಅವನ್ನು ದಮನಿಸಿದ.' 'ಮಾನವ ಜನಾಂಗಕ್ಕೆ ಅಂಟಿಕೊಂಡಿದ್ದ ಲಘುಸಂಗೀತ, ನೃತ್ಯ, ಜೂಜು, ಅಂದದ ಬಟ್ಟೆ, ಪಾನ ಹಾಗೂ ನಾಟಕ – ಇವೆಲ್ಲ ಸೈತಾನನಿಗೆ ಪ್ರೀತಿಯಾದವುಗಳಾದ್ದರಿಂದ ಅವನ್ನು ಬಿಡಬೇಕು' ಎಂದು ಮಹಾನೇಮಿಷ್ಠನ ವಾದ. ಆದರೆ ಈ ಶರೀರವನ್ನು ಕ್ಯಾಥೋಲಿಕ್ ಸನ್ಯಾಸಿಗಳಂತೆ ಅಥವಾ ಹಿಂದೂಸಾಧುಗಳಂತೆ ದಮನ ಮಾಡುವುದರ ಬಗ್ಗೆ ಆತನಿಗೆ ನಂಬಿಕೆ ಇರಲಿಲ್ಲ. ಚೆನ್ನಾಗಿ ಉಣಬೇಕು, ಸುಖವಾಗಿ ಮಲಗಬೇಕು, ಇರುವುದಕ್ಕೆ ಬೆಚ್ಚನೆಯ ಮನೆ ಬೇಕು – ಹೀಗೆಂದು ಆತ ಆಶಿಸಿದ.

ಈ ಮಹಾನೇಮಿಷ್ಠರು ಇಂಡಿಯಾದಲ್ಲೆಲ್ಲಾ ಬಿತ್ತಿರುವ ವಿಚಾರಗಳಲ್ಲಿ ಒಂದೆಂದರೆ, ಶರೀರದ ಸೌಂದರ್ಯದ ಬಗ್ಗೆ ಭೀತಿ, ಇದು ಎಲ್ಲರಿಗಿಂತ ಹೆಚ್ಚಾಗಿ ಗಿರಿಜನರಿಗೆ ತೊಂದರೆ ಮಾಡಿದೆ. ಈ ಜನ ಹಿಂದೆ ಯಾವ ಕೃತಕ ಸಂಯಮ ಪ್ರವೃತ್ತಿಗಳಿಗೂ ಕಟ್ಟುಬಿದ್ದವರಲ್ಲ. ಅವರು ಅಷ್ಟಿಷ್ಟು ಬಟ್ಟೆ ಹಾಕಿದರೆ ಹಾಕಿದರು. ಇಲ್ಲದಿದ್ದರೆ ಇಲ್ಲ. ಹೀಗಿರುವಾಗ ಅವರು ಬಹು ಚೆನ್ನಾಗಿ ಕಾಣುತ್ತಿದ್ದರು. ಈಗ ಕೆಲವು ರಾಜ್ಯ ಸರ್ಕಾರಗಳು ಅವರಿಗೆ ಬಟ್ಟೆ ತೊಡಿಸಬೇಕೆಂಬ ಚಳುವಳಿಯನ್ನೇ ಹೂಡಿವೆ. ಒಂದು ಸರ್ಕಾರ ಬಸ್ತಾರಿನ ಚೆಂದದ ಚೆಲುವೆಯರಿಗೆ ಬಿಳಿ ಬಟ್ಟೆ ಉಡಿಸಬೇಕೆಂಬ ಉದ್ದೇಶದಿಂದ ಅಪಾರ ಹಣ ಕೊಟ್ಟಿದೆ. ರಾಜಾಸ್ಥಾನ ಬಣ್ಣಗಳ

ತೌರುಮನೆ. ಒಬ್ಬ ಫೋಟೋಗ್ರಾಫರ್ ಒಮ್ಮೆ ಅರ್ಧನಗ್ನ ಭಿಲ್ ಹುಡುಗಿಯರ ಚಿತ್ರಗಳನ್ನು ತೆಗೆದು ಪ್ರಕಟಿಸಿದ. ಆ ರಾಜ್ಯ ಸರ್ಕಾರ ಅದನ್ನು ಕಂಡು ಭಿಲ್ ಹುಡುಗಿಯರಿಗೆ ಬಿಳಿ ಸೀರೆಗಳನ್ನು ಹಂಚಿಸಿ, ಅವರ ಅಸಹ್ಯದ ಅರ್ಧ ನಗ್ನತೆಯನ್ನು ಮುಚ್ಚುತ್ತೇವೆ ಎಂಬ ಯೋಚನೆಮಾಡಿತು. ಇದರ ಪರಿಣಾಮವಾಗಿ ಮೊದಲಿಗೆ ಬಣ್ಣಬಣ್ಣದ ಉಡುಪುಗಳನ್ನು ಧರಿಸಿ ಅಂದಚಂದವಾಗಿ ಕಾಣುತ್ತಿದ್ದ ಹುಡುಗಿಯರು ಈಗ ಹಿಂದೂ ವಿಧವೆಯಂತೆ ಕಾಣುತ್ತಿದ್ದಾರೆ.

ಮಹಾನೇಮಿಷ್ಠತೆ ಸಿನೆಮಾ ಬಗ್ಗೆ ವಿಶೇಷ ಆಸಕ್ತಿವಹಿಸಿದೆ. ದೊಡ್ಡವರು ನೋಡಬಹುದಾದ ವಾಸ್ತವ ಚಿತ್ರಗಳನ್ನು ಈಗ ನೋಡುವುದಕ್ಕೆ ಸೆನ್ಸಾರ್‌ಷಿಪ್ ಅಡ್ಡಿಬರುತ್ತದೆ. ಚಲನಚಿತ್ರಗಳಲ್ಲಿ ಚುಂಬನ, ಆಲಿಂಗನ ಮತ್ತು ಅಸಹ್ಯ ಸಂಭಾಷಣೆ ಹಾಗೂ ಹಾಡುಗಳದೇ ಮೇಲುಗೈ; ಆದ್ದರಿಂದ ಚಲನಚಿತ್ರಗಳನ್ನು ನೋಡುವವರು ಪ್ರೇಮದ ನೂರು ಮಾರ್ಗಗಳನ್ನು ನೋಡುವುದಲ್ಲದೆ ಬೇರೆ ಮಾರ್ಗವಿಲ್ಲ ಎಂಬ ಅಪಾದನೆ ಇತ್ತೀಚೆಗೆ ಹೊರಟಿದೆ. ಇದು ಚಲನಚಿತ್ರ ಕೈಗಾರಿಕೆಯ ಬಗ್ಗೆ ಇರುವ ತಪ್ಪು ತಿಳುವಳಿಕೆಯ ಒಂದು ಚಿಹ್ನೆ. ಏಕೆಂದರೆ, ಹಾಗೆಲ್ಲ ಇದೆ ಎನ್ನುವುದು ಸತ್ಯವಲ್ಲ. ಸಿನೆಮಾದಲ್ಲಿ 'ನೂರು ವಿಧದ ಪ್ರೇಮವನ್ನು ತೋರಿಸುತ್ತಾರೆ' ಎಂಬುದೂ ಸುಳ್ಳು. ಏಕೆಂದರೆ, ಕಾಮಸೂತ್ರದ ಗ್ರಂಥಕರ್ತನು ಸಹ ಎಷ್ಟು ಪ್ರಯತ್ನಪಟ್ಟರೂ ಎಂಭತ್ತು ನಾಲ್ಕು ವಿಧಗಳಿಗಿಂತ ಹೆಚ್ಚು ವಿಧಗಳನ್ನು ಹೇಳಲಾಗಲಿಲ್ಲ.

ಪುಸ್ತಕಗಳಿಗೆ, ಚಲನಚಿತ್ರಗಳಿಗೆ ಅಥವಾ ಬರೆದ ಚಿತ್ರಗಳಿಗೆ ಕತ್ತರಿಪ್ರಯೋಗ ಮಾಡುವುದು, ಅದರಲ್ಲಿಯೂ ಸಾರ್ವಜನಿಕ ರುಚಿಯನ್ನು ಶುಚಿಮಾಡುವ ಆಸಕ್ತಿ ಇಲ್ಲದಿರುವಾಗಲಂತೂ, ವ್ಯರ್ಥವಷ್ಟೇ ಅಲ್ಲದೆ ಅವಮರ್ಯಾದೆ ಮಾಡಿದಂತೆ ಆಗುತ್ತದೆ. ಶುಚಿಯಾದ ರುಚಿ ಯಾವುದು ಎಂಬುದರ ಕಡೆಗೆ, ಅಂದರೆ ಸಾಹಿತ್ಯದ ಅಥವಾ ನೀತಿಯ ಸೂಕ್ಷ್ಮ ಗುಣಗಳ ಅಭಿವೃದ್ಧಿ ಮಾಡುವುದರ ಕಡೆಗೆ, ನಮ್ಮ ವಿಶ್ವವಿದ್ಯಾನಿಲಯಗಳು ಗಮನಕೊಡುತ್ತಿಲ್ಲ. ಸಾರ್ವಜನಿಕಾಭಿಪ್ರಾಯವನ್ನು ಸರಿಯಾದ ರೀತಿಯಲ್ಲಿ ರೂಢಿಸಿದರೆ ಸಾಧ್ಯವಾಗಬಹುದಾದನ್ನು ತೊಡಕಿನ ಹಾಗೂ ಅಸ್ಪಷ್ಟ ಕಾನೂನುಗಳ ಮೂಲಕ ಪಡೆಯಲು ಯತ್ನಿಸುತ್ತಿದ್ದೇವೆ.

ಈಚೆಗೆ ಅನೀತಿಯುತವೆಂದು ಹೇಳಲಾದ ಸಿನೆಮಾ ಚಿತ್ರಗಳ ಬಗ್ಗೆ ವ್ಯರ್ಥ ಚಳುವಳಿಯೊಂದು ನಡೆಯಿತು. ನಾನು ಕಲ್ಕತ್ತಾಕ್ಕೆ ಹೋದೆ, ಅವು ಎಂಥಾ ಪಟಗಳು ಎಂದು ನೋಡಲು, ನನಗಂತೂ ಅವುಗಳಲ್ಲಿ ಏನೇನೂ ತಪ್ಪುಕಾಣಲಿಲ್ಲ. ಇನ್ನೊಮ್ಮೆ ಒಂದು ಚಳವಳಿ ಆರಂಭವಾಗಿತ್ತು. ಖಜುರಾವೋ ಮತ್ತು ಕೊನಾರಕ್‌ಗಳಲ್ಲಿರುವ ಆ ಅದ್ಭುತ ಶಿಲ್ಪವಿಗ್ರಹಗಳನ್ನು ನಾಶಮಾಡಬೇಕೆಂಬುದೇ ಆ ಚಳುವಳಿ. ಪ್ರಮುಖ ಕಾಂಗ್ರೆಸ್ ಮನುಷ್ಯರೊಬ್ಬರು ಒಮ್ಮೆ ಗಾಂಧೀಜಿಗೆ ಸಲಹೆ ಮಾಡಿದರು, ಕೊನಾರಕ್‌ನಲ್ಲಿರುವ ಅಶ್ಲೀಲ ವಿಗ್ರಹಗಳನ್ನು ತೆಗೆಸಿ ಅವುಗಳ ಬದಲು ರಾಷ್ಟ್ರದ ಮುಖಂಡರ ಶಿಲಾಪ್ರತಿಮೆ ಗಳನ್ನು ಇರಿಸಬೇಕು ಎಂದು.

ಪಾನನಿರೋಧವು ಕೂಡ ಮಹಾನೇಮಿಷ್ಠತೆಯ ಕಾರಣವೆಂದು ಹೇಳುತ್ತಾರೆ. ಆದರೆ ಇದನ್ನು ಖಂಡಿತವಾಗಿ ಹೇಳಲಾರೆ. ಅಂತೂ ಮಹಾನೇಮಿಷ್ಠರೇ ಪಾನ ನಿರೋಧಕ್ಕೆ ತೀವ್ರ ಆಸಕ್ತಿ ವಹಿಸುತ್ತಿರುವುದು. ನಾನು ಪಾನನಿರೋಧವನ್ನು ವಿರೋಧ ಮಾಡುವುದಕ್ಕೆ ಕಾರಣ ಇಷ್ಟೆ : ಯಾವುದನ್ನೂ ಒತ್ತಾಯವಾಗಿ ಜನಗಳ ಮೇಲೆ ಹೇರಬಾರದು. ಈ ಅಭಿಪ್ರಾಯವನ್ನು ನಾನು ಮೊದಲಿನಿಂದಲೂ ಹೇಳುತ್ತಾ ಬಂದಿದ್ದೇನೆ. ಇಂಗ್ಲೆಂಡಿನಲ್ಲಿ ಪಾನ ನಿರೋಧಮಾಡಬೇಕೆಂಬ ಸಲಹೆ ಬಂದಾಗ ಬಿಷಪ್ ಮ್ಯಾಗೀ (Bishop Magee) ಏನು ಹೇಳಿದರೋ ಅದಕ್ಕೆ ನನ್ನ ಸಂಪೂರ್ಣ ಒಪ್ಪಿಗೆ ಇದೆ. ಆಗ ಅವರು ಏನು ಹೇಳಿದರು ಎಂದರೆ : 'ಇಂಗ್ಲೆಂಡು ಅಮಲೇರದ ದೇಶವಾಗಿರುವುದಕ್ಕಿಂತ ಸ್ವತಂತ್ರವಾದ ದೇಶವಾಗಿರುವುದು ಮೇಲು. ಸ್ವಾತಂತ್ರ್ಯವಿದ್ದರೆ ಒಂದಲ್ಲ ಒಂದು ದಿವಸ ಸ್ಥಿಮಿತತೆ ಬರುತ್ತದೆ. ಹಾಗಿಲ್ಲದಿದ್ದರೆ ಸ್ವಾತಂತ್ರ್ಯ ಮತ್ತು ಸ್ಥಿಮಿತತೆ ಎರಡನ್ನೂ ಕಳೆದುಕೊಳ್ಳುತ್ತೇವೆ.' ಈಚೆಗೆ ಅಮೇರಿಕಾದ ಅಧ್ಯಕ್ಷರು ನೆಹರೂ ಅವರಿಗಿಂತ ಹೆಚ್ಚಾದ ಸ್ವಾತಂತ್ರ್ಯಪ್ರೇಮಿ ಇಲ್ಲವೆಂದು ಹೇಳಿದರು. ಹೀಗಿರುವ ನೆಹರೂ ಅವರು ತಾವೇ ಆಗಿ ಈ ಪಾನನಿರೋಧಕ್ಕೆ ಬೆಂಬಲಕೊಡುತ್ತಾರೆಂದು ನಾನು ನಂಬುವುದಿಲ್ಲ. ನಾನು ಈ ಸಮಸ್ಯೆಯನ್ನು ಗಿರಿಜನರ ದೃಷ್ಟಿಯಿಂದ ನೋಡುತ್ತೇನೆ. ಅವರು ತಯಾರಿಸುವ ಅಕ್ಕಿಭೋಜ ಶಕ್ತಿದಾಯಕವಷ್ಟೇ ಅಲ್ಲ. ಆನಂದದಾಯಕವೂ ಆಗಿದೆ. ಅದರ ತಯಾರಿಕೆಗೆ ಹೆಚ್ಚು ಹೆಚ್ಚು ಪ್ರೋತ್ಸಾಹ ಕೊಡಬೇಕೆಂಬುದು ನನ್ನ ಅಭಿಪ್ರಾಯ. ನನಗೇನಾದರೂ ಅಧಿಕಾರ ಇದ್ದಿದ್ದರೆ, ಲೈಸೆನ್ಸು ಪಡೆದ ಮದ್ಯದ ಅಂಗಡಿಗಳನ್ನು ಮುಚ್ಚಿಸಿ ಸಾಮೂಹಿಕ ಅಭಿವೃದ್ಧಿ ಸಚಿವಶಾಖೆಯಲ್ಲಿ ಬೀರು ತಯಾರಿಸುವ ವಿಶೇಷ ಶಾಖೆಯನ್ನೇ ತೆರೆಯುತ್ತಿದ್ದೆ.

ಸ್ವಾತಂತ್ರ್ಯದ ಬಳಿಕ ಈ ಮಹಾನೇಮಿಷ್ಠರ ಪ್ರತಾಪ ಹೆಚ್ಚಾಗಿದೆ. ಉದಾಹರಣೆಗೆ, ಇಂಡಿಯಾದ ಹೆಂಗಸರು ಗಂಡಸರ ಕೈಕುಲುಕಬಾರದು ಎಂದು ಅವರು ಹಾರಾಡಿದರು. ಏಕೆಂದರೆ, ಪಾಣಿಗ್ರಹಣ ಮದುವೆಯ ಸಂಕೇತ ಎಂದು ಅವರ ವಾದ. ನಮ್ಮ ರಾಷ್ಟ್ರದ ಮುಖಂಡರು, ಅದರಲ್ಲಿಯೂ ಕಾಂಗ್ರೆಸ್ ಮುಖಂಡರು, ಜನರನ್ನು ಕುರಿತು ಒಳ್ಳೆಯವರಾಗಿ ನಡೆದುಕೊಳ್ಳಿ ಎಂದು ಬೋಧಿಸತೊಡಗಿದರು. ಆದರೆ ಒಳ್ಳೆಯದು ಯಾವುದು ಎನ್ನುವುದರ ಬಗ್ಗೆ ಅವರಲ್ಲಿಯೇ ಭಿನ್ನಾಭಿಪ್ರಾಯವಿದೆ. ಅನೇಕ ವೇಳೆ ಅವರು ಹೆಂಗಸರು ಒಡವೆ ಹಾಕಿಕೊಳ್ಳಬಾರದು, ತುಟಿಗೆ ರಂಗು ಹಚ್ಚಿಕೊಳ್ಳಬಾರದು, ಸಿಗರೇಟ್ ಸೇದಬಾರದು ಎಂದು ಹೇಳುತ್ತಾರೆ. ರಾಜ್ಯಾಂಗ ಸಭೆಯಲ್ಲಿ ಪಾನನಿರೋಧದ ಮೇಲೆ ಚರ್ಚೆಯಾದಾಗ ಸೇದುವುದು ಕುಡಿಯುವುದನ್ನು ಸಂಪೂರ್ಣ ನಿಲ್ಲಿಸಬೇಕೆಂದು ಕೆಲವರು ವಾದಮಾಡಿದರು.

೧೯೫೦ರಲ್ಲಿ ಪ್ರಕಟಿಸಿದ ಪಾರ್ಲಿಮೆಂಟಿನ 'Who's Who' (ಯಾರ್‍ಯಾರು) ಎಂಬ ಪುಸ್ತಕದಲ್ಲಿ ಈ ಸ್ವಾಭಿಮಾನದ ಒಳ್ಳೆಯತನದ ಉದಾಹರಣೆಗಳನ್ನು ನೋಡಬಹುದು. ವಿನೋದ ಅಥವಾ ವಿಹಾರವೆಂದರೆ ಬಡಬಗ್ಗರೊಡನೆ ಕೂಡಿ ಅವರ ಜೀವನವನ್ನು ಸಹಕಾರಿ ಪ್ರಯತ್ನದ ಮೂಲಕ ಉತ್ತಮಗೊಳಿಸಿರುವುದು

ಎಂದು ಒಬ್ಬ ಎಂ.ಪಿ. ಹೇಳಿದ್ದಾರೆ. ಮತ್ತೊಬ್ಬರು ತಮ್ಮ ಕೆಲಸ ಏನು ಅಂದರೆ 'ಜನಸಾಮಾನ್ಯರ ಉದ್ಧಾರ' ಎಂದಿದ್ದಾರೆ.

ಗಿರಿಜನರಲ್ಲಿ ಏನು ಸಿಗುವುದೊ ಅದನ್ನು ಕಸಿದುಕೊಳ್ಳಲು ತಮ್ಮ ಇಡೀ ಜೀವವನ್ನು ಮುಡುಪಾಗಿಟ್ಟು ಸಮಾಜದಲ್ಲಿ ದೊಡ್ಡಮನುಷ್ಯರೆನಿಸಿಕೊಂಡ ಅನೇಕ ಜನರಿದ್ದಾರೆ ನಮ್ಮಲ್ಲಿ. ಅವರು ಗಿರಿಜನರನ್ನು ಶಾಕಾಹಾರಿಗಳನ್ನಾಗಿ ಮಾಡಲು ಹೋಗಿ ಮಾಂಸಹಾರದ ಬದಲು ಬೇರೆ ಯಾವುದನ್ನೂ ಅವರಿಗೆ ಕೊಡಲಿಲ್ಲ. ಪಾನನಿರೋಧವನ್ನು ಜಾರಿಗೆ ತಂದು ಅವರಿಗೆ ಮದುವೆ ಮುಂಜಿಗಳಲ್ಲಿ ಆನಂದವೀಯುವ ಬೇರೊಂದನ್ನು ನೀಡಲಿಲ್ಲ. ಅವರ ಸರಳ ಉಡುಪು ಅಸಹ್ಯ ವೆಂದು ಹೇಳಿ ಅವರ ಮೇಲೆ ಹೊಸ ಆರ್ಥಿಕ ಹೊರೆಯನ್ನು ಹೊರೆಸಿದ್ದಾರೆ. ಯುವಕಯುವತಿಯರ ಪ್ರೇಮಸುಖಕ್ಕೆ ಅಡ್ಡಿಬಂದಿದ್ದಾರೆ. ಬಡಜನರಿಂದ ಬಣ್ಣ, ಅಂದಚಂದ ಮತ್ತು ಸ್ವಾತಂತ್ರ್ಯವನ್ನು ಕಸಿದುಕೊಳ್ಳುವುದು ಕಂಡಮಾರ್ಗಗಳಲ್ಲಿ ಶೋಷಣೆಮಾಡುವುದರಷ್ಟೇ ಕೆಟ್ಟದ್ದು.

ಇಷ್ಟಾದರೂ ಮಹಾನೇಮಿಷ್ಠತೆ ನನ್ನ ಬಗ್ಗೆ ದಯೆ ತೋರಿದೆ ಎಂದೇ ಹೇಳಬೇಕು. ನನ್ನ The Baiga (ಬೈಗಾ) ಮತ್ತು The Muria and Their Ghotul (ಮುರಿಯರು ಮತ್ತು ಅವರ ಘೋಟುಲ್) ಎಂಬ ಪುಸ್ತಕಗಳ ಮೇಲೆ ಇಂಡಿಯಾದಲ್ಲಿಯೇ ಅಷ್ಟು ಟೀಕೆ ಆಗಲಿಲ್ಲ. ನಾನು ಬರೆದ ಲೈಂಗಿಕ ವಿಷಯಗಳ ಬಗ್ಗೆ ಇಂಗ್ಲೆಂಡಿನ ಸಂಪ್ರದಾಯಸ್ಥರು ಟೀಕೆ ಮಾಡಿದರು. ನನ್ನ ರಾಜಕೀಯ ವಿಚಾರದ ಬಗ್ಗೆ ದಕ್ಷಿಣ ಆಫ್ರಿಕಾದಲ್ಲಿ ಟೀಕೆ ಮಾಡಿದರು. ಆದರೆ ಇಂಡಿಯಾದ ಜನ ಮತ್ತು ಸರ್ಕಾರ ನನ್ನ ಅಭಿಪ್ರಾಯಗಳ ಬಗ್ಗೆ, ನಾನು ಪ್ರಕಟಿಸಿದ ಚಿತ್ರಗಳ ಬಗ್ಗೆ ಸಹಾನೂಭೂತಿ ತೋರಿಸಿದರು.

ಮಹಾನೇಮಿಷ್ಠತೆ ಇಂಡಿಯಾದಲ್ಲಿ ಹುಟ್ಟಿ ಬೆಳೆದದ್ದಲ್ಲ. ಅದು ಇಲ್ಲಿಯ ದೊಡ್ಡ ದೊಡ್ಡ ವ್ಯಕ್ತಿಗಳ ಮನಸ್ಸಿಗೆ ವಿರೋಧವಾಗಿದೆ. 'ಪಾಶ್ಚಿಮಾತ್ಯ' ಲೋಲುಪ್ತತೆಗಳೆಂದು ಹಲವು ವಿಚಾರಗಳ ಬಗ್ಗೆ ತಪ್ಪು ಭಾವನೆ ಇರುವ ಜನರು ಅದಕ್ಕೆ ವಿರೋಧವಾಗಿದ್ದಾರೆ ಅಷ್ಟೆ ಅವರಲ್ಲಿ ತಮಗಿಂತ ಕೊಂಚ ವಿಶಾಲವಾದ ವಿದ್ಯಾವಂತರ ಬಗ್ಗೆ, ಹೆಚ್ಚು ನವೀನರಾದ ಜನರ ಬಗ್ಗೆ, ಅಂತರಾಳದಲ್ಲಿ ಅಸೂಯೆ ಇದೆ. ಇಂಥ ಅಶ್ಲೀಲ ಭಾವನೆಗಳಲ್ಲಿ ಆಸಕ್ತವಾದ ಹೊಲಸು ಪ್ರಭಾವ ಈ ಸಹನಾಶೀಲವಾದ, ಸೌಂದರ್ಯಪ್ರೇಮಿಯಾದ ಹಾಗೂ ಮೊದಲಿನಿಂದಲೂ ಸುಖವನ್ನು ಅನುಭವಿಸಿದ ಈ ನಾಡಿನ ಮೇಲೆ ಮಾಯದ ಗಾಯಗಳನ್ನು ಮಾಡದಿರಿ. ಸ್ವತಂತ್ರ ಇಂಡಿಯಾದ ಪ್ರಥಮ ಭಾರತೀಯ ಗೌರ್ನರ್ ಜನರಲ್ (ಶ್ರೀ ರಾಜಗೋಪಾಲಚಾರಿಯವರು) ಹೇಳಿದರು. 'ಒಂದು ರಾಷ್ಟ್ರಕ್ಕೆ ಅನ್ನ ಮತ್ತು ಜ್ಞಾನ ಬೇಕಾದಂತೆ ಆನಂದವೂ ಬೇಕು' ಎಂದು.

ನನ್ನ ಮೇಲೆ ಪರಿಣಾಮವನ್ನುಂಟುಮಾಡಿದವುಗಳಲ್ಲಿ ಹಾಗೂ ನನ್ನ ಜೀವನವನ್ನು ರೂಪಿಸಿದುವುಗಳಲ್ಲಿ ಮೊಟ್ಟಮೊದಲನೆಯ ಸ್ಥಾನ ಕಾವ್ಯಕ್ಕೆ

ದೊರೆಯುತ್ತದೆ. ಪಾಶ್ಚಾತ್ಯ ಸಂಗೀತ ಅಷ್ಟಿಷ್ಟು ನನ್ನನ್ನು ತಿದ್ದಿದೆ. ಚಿತ್ರಕಲೆ ಮತ್ತು ಶಿಲ್ಪಗಳನ್ನು ಹೆಚ್ಚಾಗಿ ನೋಡಲು ನನಗೆ ಅವಕಾಶವಾಗಲಿಲ್ಲ. ಕಾವ್ಯದ ಅನುಕೂಲತೆ ಯೆಂದರೆ ಅದನ್ನು ಎಲ್ಲಿಗೆ ಬೇಕಾದರೂ ಒಯ್ಯಬಹುದು. ಹೀಗಾಗಿ ಕವಿಗಳು ನನ್ನ ಗುರುಗಳಾಗಿದ್ದಾರೆ. ನನ್ನ ಹೃದಯದ ಗುಪ್ತ ಜಾಗಗಳನ್ನು ನೋಡಲು ಅವರು ಅವಕಾಶಮಾಡಿಕೊಟ್ಟರು. ಸ್ಪಷ್ಟವಾದ ಕಣ್ಣುಗಳಿಂದ ನನ್ನ ಗಿರಿಜನರನ್ನು ನೋಡಲು ಅವರು ಕಿಟಕಿಯನ್ನು ತೆರೆದುಕೊಟ್ಟರು.

ಕ್ರೈಸ್ತಮತದ ಕೆಲವು ವಿಚಾರಗಳು ಮೊಟ್ಟಮೊದಲಿಗೆ ನನ್ನನ್ನು ಹಿಡಿದಿದ್ದುವು. ಆದರೆ ಈಗ ಅವುಗಳಲ್ಲಿ ಹೆಚ್ಚು ಯಾವುವೂ ಉಳಿದಿಲ್ಲ.

ನನ್ನ ಜೀವನದ ಐದು ವರ್ಷಗಳ ಕಾಲ ಸಂನ್ಯಾಸಿಯಾಗಬೇಕೆಂದು ಆಲೋಚಿಸುತ್ತಿದ್ದೆ ಎಂದು ಹೇಳಿದರೆ ಯಾರೂ ಅರ್ಥಮಾಡಿಕೊಳ್ಳಲಾರರು. ಯಾರೇಕೆ, ನಾನೇ ನನ್ನನ್ನು ಅರ್ಥಮಾಡಿಕೊಳ್ಳಲಾರೆ.

ಮೌನವೆಂದರೆ ಈಗಲೂ ನನಗೆ ಪ್ರೀತಿ. ಹಳ್ಳಿಯಲ್ಲಿಯೂ ಮೌನ ದೊರೆಯುವುದು ಕಷ್ಟ. ಆದರೆ ಎತ್ತರವಾದ ಪರ್ವತಗಳಲ್ಲಿ ಮತ್ತು ಕೆಲವು ವೇಳೆ ಇಲ್ಲಿ, ಈ ಷಿಲ್ಲಾಂಗಿನ ಮನೆಯಲ್ಲಿ, ರಾತ್ರಿವೇಳೆ ಅದು ದೊರೆಯುತ್ತದೆ. ಆ ಮೌನ ಮನಸ್ಸಿಗೆ ಬಹಳ ಚೈತನ್ಯವನ್ನುಂಟುಮಾಡುತ್ತದೆ. ಧೈರ್ಯವಿದ್ದರೆ ಗಾಂಧೀಜಿಯವರಂತೆ ವಾರಕ್ಕೊಂದು ದಿನ ಅಥವಾ ದಿನದಲ್ಲಿ ಕೆಲವು ಗಂಟೆಗಳಾದರೂ ಮೌನವನ್ನು ಆಚರಿಸಬೇಕೆನಿಸುತ್ತದೆ.

ಧಾರ್ಮಿಕ ಜೀವನದ ಮುಖ್ಯ ಪ್ರತಿಜ್ಞೆಗಳೆಂದರೆ : ಬ್ರಹ್ಮಚರ್ಯ, ಸರಳ ಜೀವನ ಮತ್ತು ವಿಧೇಯತೆ. ನಾನು ಯಾವಾಗಲೂ ಬ್ರಹ್ಮಚರ್ಯದ ಬಗ್ಗೆ ವಿಶೇಷ ಆಸಕ್ತಿವಹಿಸಿದವನಲ್ಲ. ಆದರೆ ಬಡತನ ನನ್ನ ಮನಸ್ಸಿಗೆ ಹಿಡಿಸಿತು; ಅನೇಕ ವರ್ಷಗಳ ತನಕ ಈ ಧ್ಯೇಯವನ್ನು ಅನುಸರಿಸಿದೆ. ಆದರೆ ಈಗ ಸನ್ನಿವೇಶಗಳು ಅದನ್ನು ಬಿಡುವಂತೆ ಮಾಡಿವೆ. ಅಂತೂ ನನ್ನ ಜೀವನದಲ್ಲೆಲ್ಲಾ ಭೋಗಜೀವನಕ್ಕಿಂತ ಸರಳ ಜೀವನದಲ್ಲಿ ತೃಪ್ತಿ ದೊರೆತಿದೆ. ನಿಮಗೆ ಬೇಕಾದ್ದನ್ನು ಪಡೆಯುವುದು ಸ್ವಲ್ಪ ಸಾಮಾನ್ಯವಾದ ವಿಷಯವೆ. ಬೇಕಾದ್ದು ಇಲ್ಲದಿದ್ದರೂ ಕಾಲಹಾಕುವುದು ಆತ್ಮಕ್ಕೆ ಬಲವನ್ನೀಯುತ್ತದೆ. ವಿಧೇಯತೆಯಲ್ಲಿ, ಕನಿಷ್ಠಪಕ್ಷ ಅದರ ವಿಶಾಲ ಅರ್ಥದಲ್ಲಿ, ನನಗೆ ನಂಬಿಕೆಯುಂಟು.

ಕ್ರೈಸ್ತಮತದನಂತರ ನನ್ನ ಮೇಲೆ ಗಾಂಧೀಜಿ ಪ್ರಭಾವ ಬೀರಿದರು. ಎಲ್ಲರಂತೆ ನಾನೂ ಗಾಂಧೀಜಿ ಹೇಳಿದ್ದರಲ್ಲಿ ಅನುಕೂಲವಾದದ್ದು ಇಟ್ಟುಕೊಂಡೆ ; ಉಳಿದುದನ್ನು ಬಿಟ್ಟುಬಿಟ್ಟೆ. ಇಂಡಿಯಾದಲ್ಲಿ ಗಾಂಧೀಜಿಯ ತತ್ವದ ತಿರಸ್ಕಾರ ಅವರ ಜೀವನಮಾನದಲ್ಲಿಯೇ ಪ್ರಾರಂಭವಾಯಿತು. ಈ ತಿರಸ್ಕಾರದ ಸಂಕೇತವೆಂದರೆ, ಅವರು ಸತ್ತಾಗ ಅವರ ದೇಹವನ್ನು ಆಯುಧವಾಹನದ ಮೇಲೆ ಸಾಗಿಸಿದ್ದು.

ಗಾಂಧೀತತ್ವಗಳಲ್ಲಿ ನನಗೆ ಒಪ್ಪಿಗೆಯಾಗದವು ಅನೇಕ ಇವೆ; ಅದರಲ್ಲಿಯೂ ಅವರ ಮಹಾನೇಮಿಷ್ಠ ವಿಚಾರಗಳು. ಆದರೆ ತುಂಬಾ ಪ್ರೇರಕವಾದಂಥವುಗಳು ಅವರ ಬೋಧನೆಯಲ್ಲಿ ಎಷ್ಟೋ ಇವೆ. ಸತ್ಯ, ಪ್ರೇಮ ಹಾಗೂ ಶಾಂತಿ ಮತ್ತು ಸರಳ ಜೀವನ ಜೀವನ ನನಗೆ ಬಹಳ ಹಿಡಿಸಿದುವು. ಆ ಅದ್ಭುತ ವ್ಯಕ್ತಿತ್ವವನ್ನು ನಾನು ಎಂದೂ ಮರೆಯಲಾರೆ. ಅವರು ನನಗೆ ತೋರಿಸಿದ ಪ್ರೀತಿ ವಿಶ್ವಾಸಗಳಿಗೆ ನಾನು ಅರ್ಹನಾಗಿರಲಿಲ್ಲ. ಈಗಲೂ ಅವರ ಹೆಸರು ನೆನೆಸಿಕೊಂಡರೊ ಹೆಮ್ಮೆ ಮತ್ತು ಆನಂದ ಉಕ್ಕಿಬರುತ್ತವೆ ನನ್ನಲ್ಲಿ.

ಆಕ್ಸ್‌ಫರ್ಡ್ ದಿನದಿಂದಲೂ ನನ್ನ ಮೇಲೆ ಟಾಗೂರರು ಪ್ರಭಾವ ಬೀರಿದರು. ಆದರೆ ಅವರನ್ನು ನಾನು ಕಾಣಲಿಲ್ಲ. ವಿಚಿತ್ರವಾದ ವಿಷಯವೆಂದರೆ, ಅವರ ಕಡೆಗೆ ನನ್ನ ಮನ ಸೆಳೆದದ್ದು ಅವರ ಗೀತಾಂಜಲಿ ಅಲ್ಲ, ಅವರು ಭಾಷಾಂತರಿಸಿದ ಕಬೀರರ ಹಾಡುಗಳು. ನಾನು ಮೊಟ್ಟಮೊದಲು ಕಂಡ ಪೌರ್ವಾತ್ಯ ಕಾವ್ಯವೆಂದರೆ ಇದೆ.

ನನ್ನಲ್ಲಿ ಯಾವಾಗಲೂ ಎರಡು ಪಕ್ಷಗಳಿವೆ : ಒಂದು ಗಾಂಧೀಜಿಯವರ ಪ್ರಪಂಚತ್ಯಾಗ; ಮತ್ತೊಂದು, ಟಾಗೂರರ ಪ್ರಪಂಚದ – ಸುಖ . ಟಾಗೂರರ ಸೌಂದರ್ಯ, ಪ್ರಾಸ ಮತ್ತು ಪ್ರೇಮ ನನಗೆ ಮೆಚ್ಚಿಗೆಯಾದುವು. ಪ್ರೇಮವೆಂದರೆ ಇಂಡಿಯಾದಲ್ಲಿ ಬಹು ಜನ ಹೆದರುತ್ತಿದ್ದಾಗ ಅವರು ಹೆದರದೆ ಇದ್ದುದು ಅವರ ಬಗ್ಗೆ ನನ್ನಲ್ಲಿ ತುಂಬಾ ಆಸಕ್ತಿಯನ್ನು ಕೆರಳಿಸಿತು. 'ಒಳ್ಳೆಯದನ್ನು ಮಾಡಬೇಕೆನ್ನುವವನು ಬಾಗಿಲನ್ನು ತಟ್ಟುತ್ತಾನೆ; ಪ್ರೇಮಿಸುವವನಿಗೆ ಬಾಗಿಲು ತೆರೆಯುತ್ತದೆ.' ಟಾಗೂರರಲ್ಲಿ ಕಂಡದ್ದು ಪ್ರತಿಯೊಂದೂ ಸಂದೇಹಕ್ಕೆ ಎಡೆಗೊಡದೆ ಇದ್ದುದಲ್ಲದೆ ನಿಜವೆನ್ನುವುದನ್ನು ಸಾರುವಂಥಾದ್ದಾಗಿತ್ತು. ಅವರು ಜೀವನವನ್ನೇ ಒಂದು ಕಲಾಕೃತಿಯನ್ನಾಗಿ ಮಾಡಿದರು. ಅವರು ಗಿರಿಜನರಾದ ಸಂತಾಲರ ಬಗ್ಗೆ ಆಸಕ್ತಿವಹಿಸಿದ್ದರು. ಗಿರಿಜನರಿಂದ ಸ್ಫೂರ್ತಿಯನ್ನೂ ಪಡೆದರು. ನನಗೆ ಅನೇಕ ಸಲ ಅನ್ನಿಸುತ್ತದೆ, ಗಿರಿಜನ ಪ್ರದೇಶಗಳ ಮೇಲಿನ ಆಡಳಿತ ಕವಿಗಳ ಮತ್ತು ಕಲಾವಂತರ ಕೈಯಲ್ಲಿರಬೇಕು ಎಂದು.

ಇಂಡಿಯಾ ಸ್ವಾತಂತ್ರ್ಯದ ಕಡೆಗೆ ಸಾಗುತ್ತಿದ್ದ ಸಂದಿಗ್ಧ ಕಾಲದಲ್ಲಿ ಟಾಗೂರ್ ಮತ್ತು ಗಾಂಧೀಜಿ ದಾರಿ ತೋರಿಸಿದ್ದು ಜನರಿಗೆ ಹೆಮ್ಮೆಯನ್ನುಂಟುಮಾಡಿತು. ಮಹಾ ಸಾಮ್ರಾಜ್ಯವನ್ನು ಎದುರಿಸಲು ಗಾಂಧೀಜಿ ಜನಗಳಿಗೆ ಅಹಿಂಸಾ ಅಸ್ತ್ರವನ್ನು ಒದಗಿಸಿಕೊಟ್ಟು ಹುರಿದುಂಬಿಸಿದರು. ಆದರೆ ಸೌಂದರ್ಯದ ದೃಷ್ಟಿಯಿಂದ ನೋಡುವುದಾದರೆ ಅವರು ಅಶಕ್ತರಾಗಿದ್ದರು. ಕಾವ್ಯಕ್ಕೆ ಅವರು ಹೆಚ್ಚು ಗಮನ ಕೊಡಲಿಲ್ಲ. ಧಾರ್ಮಿಕ ಕಾವ್ಯವನ್ನು ಬಿಟ್ಟರೆ, ಕಲಾಭಿವೃದ್ಧಿಗೆ ಅವರು ಏನೇನೂ ಮಾಡಲಿಲ್ಲ. ಕೈಮಗ್ಗದ ಕೈಗಾರಿಕೆಯ ಮೂಲಕ ಅವರು ಸುಂದರ ಪ್ರಪಂಚವನ್ನೇ ಸೃಷ್ಟಿಮಾಡಬಹುದಿತ್ತು. ಆದರೆ ಹಾಗೆ ಮಾಡದೆ ಕೈಮಗ್ಗದ ಬಟ್ಟೆಯನ್ನು ಸರಳವಾದ

ಹಾಗೂ ಮನಸ್ಸಿಗೆ ಒಪ್ಪದ ಉಡುಪುಗಳನ್ನು ಮಾಡಲು ಉಪಯೋಗಿಸಿದರು. ಆ ಉಡುಪುಗಳನ್ನು ಈಗಲೂ ಅವರ ಅನುಯಾಯಿಗಳು ಹಾಕಿಕೊಳ್ಳುತ್ತಾ ಬಂದಿದ್ದಾರೆ. ತಮ್ಮ ಅನುಯಾಯಿಗಳಿಗೆ ಸೆರೆಮನೆಯ ಉಡುಪು ತೊಡಿಸಿ ಇಂಡಿಯಾದ ಸ್ಥಿತಿ ಎಂಥದೆಯೆಂಬುದನ್ನು ಸದಾ ಮನವರಿಕೆ ಮಾಡಿಕೊಡುವ ಉದ್ದೇಶ ಅವರಿಗಿತ್ತು. ಟಾಗೂರರು ಇಲ್ಲದಿದ್ದರೆ ಇಂಡಿಯಾ ದೇಶ ರಂಗುರಹಿತವಾದ ಹಾಗೂ ಬೇಜಾರು ಹಿಡಿಸುವ ಸ್ಥಳವಾಗುತ್ತಿತ್ತು. ಅವರಿಲ್ಲದಿದ್ದರೆ ಇಂಡಿಯಾ ಈ ಪ್ರಪಂಚದ ಅಂದ ಚೆಂದವನ್ನೂ ಮಾನವರ ಕಾವ್ಯದ ತಿರುಳನ್ನೂ ಮಾನವರು ಮಾಡುವ ವಸ್ತುಗಳನ್ನೂ ಮರೆತುಬಿಡುತ್ತಿತ್ತು. ಆದರೂ ಆ ಇಬ್ಬರು ವ್ಯಕ್ತಿಗಳನ್ನು ಒಟ್ಟುಗೂಡಿಸುವ ಅವಶ್ಯಕತೆ ಇತ್ತು ಇಂಡಿಯಾಕ್ಕೆ. ನನಗಂತೂ ತೀರಾ ಆವಶ್ಯಕವಿತ್ತು.

ಕಳೆದ ದಶಕದಲ್ಲಿ ನಾನು ನೆಹರೂ ಅವರ ಪ್ರಭಾವಕ್ಕೆ ಒಳಗಾಗುತ್ತಾ ಬಂದಿದ್ದೇನೆ. ಅವರು ಮಹಾವ್ಯಕ್ತಿಯಾಗಿದ್ದ ಕಾರಣವಷ್ಟೇ ಅಲ್ಲದೆ, ಅವರು ಗಿರಿಜನರ ಬಗ್ಗೆ ತಾಳಿದ ಧೋರಣೆಯ ಕಾರಣದಿಂದ ಅವರ ಬಗ್ಗೆ ತುಂಬಾ ಗೌರವ. ಗಿರಿಜನರ ಬಗ್ಗೆ 'ನೆಹರೂ ಅವರ ಬೋಧನೆಯನ್ನು ತಿಳಿಸುವ ಪಾದ್ರಿ' ಎಂದು ನನ್ನನ್ನು ನಾನೇ ಕರೆದುಕೊಂಡಿದ್ದೇನೆ. ಆದರೆ ನೆಹರೂ ನನ್ನ ಪುಸ್ತಕವೊಂದಕ್ಕೆ ಮುನ್ನುಡಿ ಬರೆಯುತ್ತಾ ನನ್ನಿಂದ ಕಲಿತೆ ಎಂದು ಹೇಳಿದ್ದಾರೆ. ಹೇಗೆ ಆಗಲಿ, ಅವರು ನನ್ನ ಮೇಲೆ ಭಾರಿ ಪ್ರಭಾವ ಬೀರಿದ್ದಾರೆ. ಅವರನ್ನು ಕಂಡಾಗಲೆಲ್ಲ ನಾನು ಉತ್ತೇಜಿತ ನಾಗಿದ್ದೇನೆ. ಅವರಲ್ಲಿ ಗಾಂಧೀಜಿಯವರ ಶಾಂತಿ ಹಾಗೂ ಸತ್ಯಗಳ ಮೇಲಿದ್ದ ತೀವ್ರ ಶ್ರದ್ಧೆ ಮತ್ತು ಟಾಗೂರರ ಈ ಪ್ರಪಂಚದಲ್ಲಿ ಈಸಬೇಕು ಇದ್ದು ಜೈಸಬೇಕು ಎಂಬ ಮನೋಭಾವ ಎರಡೂ ಸಮ್ಮಿಳಿತವಾಗಿವೆ. ಗಿರಿಜನರ ಬಗ್ಗೆ ಇರುವ ನಮ್ಮ ಆಲೋಚನೆಗಳಿಗೆ ಅವರು ವೈಜ್ಞಾನಿಕದೃಷ್ಟಿ, ಮಾನವೀಯತೆ ಹಾಗೂ ಗೌರವಗಳನ್ನು ತಂದುಕೊಟ್ಟಿದ್ದಾರೆ. ಪ್ರಧಾನಮಂತ್ರಿಗಳು ಗಿರಿಜನರ ಬಗ್ಗೆ ತಳೆದಿದ್ದ ಧೋರಣೆಯನ್ನು ಒಂದು ಮಾತಿನಲ್ಲಿ ಒಬ್ಬರು ಮೆಚ್ಚುವಂತೆ ಹೇಳಿದರು. ಅದೇನೆಂದರೆ, ನಮ್ರತೆ.

ನನಗೆ ಹಿಂದೂಮತ ಒಪ್ಪಿತವಲ್ಲವೆಂಬ ಆಪಾದನೆಯನ್ನು ಕೆಲವು ಸಲ ಮಾಡಿದ್ದಾರೆ. ಇದು ಶುದ್ಧ ಅಪದ್ಧ. ಹಿಂದೂಮತದ ಕೆಲವು ವಿಚಾರಗಳು ಗಿರಿಜನರಿಗೆ ಒಳ್ಳೆಯವಲ್ಲವೆಂದು ನಾನು ಹೇಳಿದ್ದೇನೆ ನಿಜ. ಹಿಂದೂ ಸುಧಾರಕರು ಗಿರಿಜನ ಸಮಾಜದಿಂದ ಕೆಟ್ಟುದನ್ನು ತೆಗೆದುಹಾಕುವ ಬದಲು, ಅದನ್ನು ತಂದುಹಾಕುವ ಸಂಭವವುಂಟು. ಮೊದಲು ಇಲ್ಲದ ಕಟ್ಟುನಿಟ್ಟಾದ ಜಾತಿಪದ್ಧತಿ, ವಿಧವಾವಿವಾಹ ನಿಷೇಧ ಪದ್ಧತಿ – ಇವೆಲ್ಲಾ ಹಿಂದೂ ಸುಧಾರಕರು ಮಧ್ಯ ಇಂಡಿಯಾದ ಗಿರಿಜನರಲ್ಲಿ ತಂದ ಸುಧಾರಣೆಗಳು. ಇಷ್ಟೇ ಅಲ್ಲದೆ, ಅದು ತಿನ್ನಬಾರದು ಇದು ಕುಡಿಯಬಾರದು ಎಂಬ ನಿಷೇಧಗಳು ಬೇರೆ. ಇವೆಲ್ಲಕ್ಕಿಂತ ಹೆಚ್ಚಿನ ವಿಚಾರವೆಂದರೆ, ಹಿಂದೂಮತ ಗಿರಿಜನ ಪ್ರದೇಶದಲ್ಲಿ ಹರಡಿದಂತೆ ಅವರಿಗೆ ಸಮಾಜದಲ್ಲಿ ದೊರೆಯುತ್ತಿದ್ದ ಕೀಳುಸ್ಥಾನ.

ಆದರೆ ಅದು ನಿಜವಾದ ಹಿಂದೂಧರ್ಮವಲ್ಲ. ಇಂದು ಯಾವುದನ್ನು ಓಡಿಸಬೇಕೆಂದು ಹಿಂದೂಮತದ ಮುಂದಾಳುಗಳು ಭಾರಿ ಪ್ರಯತ್ನಪಡುತ್ತಿದ್ದಾರೋ ಅದರ ವಿಡಂಬನ (parody). ಹಿಂದೂಧರ್ಮದಲ್ಲಿ ಶಕ್ತಿ ಮತ್ತು ಸೌಂದರ್ಯಗಳಿವೆ. ಅದನ್ನು ಅರಿತವರಾರೂ ಅದಕ್ಕೆ ಮಹಾಗೌರವ ಸಲ್ಲಿಸದೆ ಇರಲಾರರು. ಕಾವ್ಯವನ್ನು ಸಮೀಪಿಸಿದಂತೆ ಅಪನಂಬಿಕೆಯನ್ನು ಬೇಕಂತಲೇ ಬಿಟ್ಟು ಹಿಂದೂಧರ್ಮವನ್ನು ಸಮೀಪಿಸಿಬೇಕು. ಹಿಂದೂಗಳು, ಬಹು ದೊಡ್ಡ ವಿದ್ಯಾವಂತರು ಸಹ, ವಿಚಿತ್ರವಾದ ಭಾವನೆಗಳನ್ನು ಒಪ್ಪಿಕೊಂಡುಬಿಡುತ್ತಾರೆ. ಆದರೆ ಇದು ಅಷ್ಟೇನು ಮುಖ್ಯವಲ್ಲ. ಹುಚ್ಚು ಭಾವನೆ ಮತ್ತು ಅಸಂಬದ್ಧ ತಿಳುವಳಿಕೆಗಳನ್ನು ಮೀರಿ ಹಿಂದೂ ವೇದಾಂತ, ಚಿತ್ರಕಲೆ, ಶಿಲ್ಪಕಲೆ ಹಾಗೂ ಕಾವ್ಯದ ಮಹಾಸೌಧ ಮೆರೆಯುತ್ತಿವೆ. ಅದರ ಅತ್ಯುತ್ತಮವಾದ ಮಹಾ ಪುರುಷರು ಅದರಿಂದ ವಿಶಿಷ್ಟ ಶಕ್ತಿಯನ್ನು ಪಡೆದಿದ್ದಾರೆ. ಅವರ ಮೂಲಕ ನಾನು ಎಷ್ಟೋ ಶಕ್ತಿ ಪಡೆದಿದ್ದೇನೆ.

ಆದರೆ ಒಂದು ಸಣ್ಣ ತೊಡಕಿದೆ. ಅದೇನೆಂದರೆ, ಅನೇಕ ಹಿಂದೂಗಳು ತಾವು ಬಹು ಉತ್ತಮರೆಂದು ತೋರಿಸಿಕೊಂಡು ಮನಸ್ಸಿಗೆ ಕಹಿಯನ್ನುಂಟು ಮಾಡುವುದು. ನೀವು ಪ್ರಾಪಂಚಿಕರು, ಸುಖಲೋಲುಪ್ತರು ಎಂಬ ಭಾವನೆಯನ್ನುಂಟು ಮಾಡಿಬಿಡುತ್ತಾರೆ. ಏಕೆಂದರೆ ಅವರಲ್ಲಿ ಒಬ್ಬನು ಸೇದುವುದಿಲ್ಲ. ಇನ್ನೊಬ್ಬನು ಹಾಲು ಮಾತ್ರ ಕುಡಿಯತ್ತಾನೆ. ಮತ್ತೊಬ್ಬನು ಕಾದಂಬರಿ ಓದುವುದಿಲ್ಲವೆಂದು ಪ್ರತಿಜ್ಞೆ ಮಾಡುತ್ತಾನೆ. ಇವನ್ನೆಲ್ಲ ಮಾಡುತ್ತಿರುವ ನಾವು ಮತ್ತು ಅನೇಕರು ಹಿಂದೂ ಸ್ನೇಹಿತನಿಗೆ ತಕ್ಕಂತೆ ಬಾಳುವುದು ಕಷ್ಟವಾಗುತ್ತದೆ.

ಇತ್ತೀಚೆಗೆ ನನ್ನ ಮೇಲೆ ಮುಖ್ಯ ಆಧ್ಯಾತ್ಮಿಕ ಪ್ರಭಾವ ಬೀರಿರುವುದೆಂದರೆ ಬಹುಶಃ ಸರಳವಾದ ಬೌದ್ಧಮತ. ನಾನು ಈ ಸರಳ ಬೌದ್ಧಮತವನ್ನು ಕಂಡದ್ದು ಮೊದಲಿಗೆ ಸಿಲೋನಿನಲ್ಲಿ : ಅನಂತರ ಥೈಲಾಂಡಿನಲ್ಲಿ. ಅದರ ನಿಜವಾದ ಸ್ವರೂಪವನ್ನು ಕಂಡದ್ದು ಇಂಡಿಯಾದ ಈಶಾನ್ಯಭಾಗದ ಪರ್ವತದ ತಪ್ಪಲಿನ ಹಳ್ಳಿಗಳಲ್ಲಿ ಮತ್ತು ನೀಫಾದ ಗುಡ್ಡಗಳಲ್ಲಿರುವ ಖಮ್ತಿ (Kamti) ದೇವಸ್ಥಾನಗಳಲ್ಲಿ. ನಾನು ತಿಳಿದು ಕೊಂಡಿರುವ ಅಷ್ಟಿಷ್ಟು ಬೌದ್ಧಧರ್ಮ ಗುರುಗಳ ಮೂಲಕ ಅಥವಾ ವೇದಾಂತಿಗಳ ಮೂಲಕ ಬಂದುದಲ್ಲ; ಸರಳ ಜೀವನ ಮಾಡುವ ಸಾಮಾನ್ಯರ ಮೂಲಕ ಬಂದುದು; ಸಣ್ಣಪುಟ್ಟ ಹರಕಲು ಮುರಕಲು ಗುಡಿಗಳಿಂದ ಅರಿತದ್ದು.

ಒಂದು ದೃಷ್ಟಿಯಿಂದ ನೋಡಿದರೆ ನಾನು ಬೌದ್ಧಮತೀಯನಾಗುವುದು ಕಷ್ಟವೆಂದೇ ಹೇಳಬೇಕು. ಏಕೆಂದರೆ ನಾನು ಬಾಳನ್ನು ಬಹುವಾಗಿ ಪ್ರೀತಿಸುತ್ತೇನೆ; ಈ ಒಳ್ಳೆಯ ಹಾಗೂ ಕಾರುಣ್ಯದ ಪ್ರಪಂಚವನ್ನು ಪ್ರೀತಿಸುತ್ತೇನೆ; ಇಂದ್ರಿಯಗಳು ಕೊಡುವ ಸುಖವನ್ನು ಕಣ್ಣು, ಕಿವಿ ಮತ್ತು ನಾಲಗೆ ನೀಡುವ ಭೋಗಗಳನ್ನು – ಪ್ರೀತಿಸುತ್ತೇನೆ. ಒಳ್ಳೆಯ ಅಹಾರವೆಂದರೆ, ಸುಂದರವಾದ ಸಾಮಾನುಗಳೆಂದರೆ, ಜನರೆಂದರೆ, ಮಕ್ಕಳೆಂದರೆ, ವಿನೋದಕರವಾದ ಸ್ನೇಹಿತರೆಂದರೆ, ಹೊಗೆಸೊಪ್ಪು

ಪಾನಗಳೆಂದರೆ ನಾನು ಪ್ರೀತಿಸುತ್ತೇನೆ. ನನ್ನ ಮನೋಭಾವನೆಗಳು ಯಾವಾಗಲೂ ಕಾರಣ, ಕಲ್ಪನೆ ಮತ್ತು ವ್ಯಕ್ತಿಗಳಲ್ಲಿ ಸಿಕ್ಕಿಹಾಕಿಕೊಂಡಿರುತ್ತವೆ.

ಆದರೆ ನನ್ನಲ್ಲಿ ಮತ್ತೊಂದಿದೆ ಆಗಲೇ ನಾನು ಹೇಳಿದಂತೆ ಒಂದು ರೀತಿಯ ಮಾನಸಿಕ ವಿರಕ್ತತೆ ಹಾಗೂ ಅನಾಸಕ್ತಿಗಳಿಗೆ ನಾನು ಬೆಲೆಕೊಡುತ್ತೇನೆ. ಜೀವನ ದಲ್ಲಿರುವ ಒಳ್ಳೆಯದನ್ನು ನಾನು ಪ್ರೀತಿಸುತ್ತೇನೆ. ಆದರೆ ಅವು ಇಲ್ಲದಿದ್ದರೂ ಪರವಾಯಿಲ್ಲ, ಹೇಗೋ ಇರಬಲ್ಲೆ. ವಾಸ್ತವವಾಗಿ ಹಾಗೆ ಇರಬೇಕಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಒಂದು ನನಗೆ ದಿನೇದಿನೇ ಅನ್ನಿಸುತ್ತಿದೆ. ಏನೆಂದರೆ, ಒಳಗೆ ಶಾಂತಿ ಇಲ್ಲದಿದ್ದಲ್ಲಿ ಜೀವನದ ಬಗ್ಗೆ ನನಗಿರುವ ಆಸಕ್ತಿ ನನ್ನನ್ನು ಬಹಳ ದೂರ ಒಯ್ಯಲಾರದು ಎಂದು. ತವಕ, ಸಣ್ಣ ಪುಟ್ಟ ಹೊಟ್ಟೆಕಿಚ್ಚು, ಸಿಡುಕು, ಸಂಭ್ರಮ, ಅನುರಾಗ ಇವುಗಳಿಂದ ಬರುವ ಅಶಕ್ತಿ ಮನುಷ್ಯನ ಆಧ್ಯಾತ್ಮಿಕ ಉನ್ನತಿಗೆ ಅಡ್ಡಿತರುವುದಲ್ಲದೆ, ಈ ಪ್ರಪಂಚದ ಅಂದಚೆಂದ ಹಾಗೂ ಸುಂದರ ವಸ್ತುಗಳನ್ನು ಅನುಭವಿಸುವ ಶಕ್ತಿಯನ್ನೂ ಹಾಳುಮಾಡುತ್ತದೆ. ಸುಖ ಮತ್ತು ಒಳ್ಳೆಯ ಕೆಲಸ ಇವೆರಡಕ್ಕೂ ಆಂತರಿಕ ಶಕ್ತಿ ಆವಶ್ಯಕ.

ಇಂಥಾದ್ದನ್ನು ನಾನು ತೀವ್ರವಾಗಿ ಅನುಭವಿಸುತ್ತಿರುವಾಗ ಮತ್ತು ತುಚ್ಛ ಹಾಗೂ ಕ್ಷುಲ್ಲಕ ಬಂಧನಗಳು ನನ್ನಲ್ಲಿ ಅಶಾಂತಿಯನ್ನು ಹುಟ್ಟಿಸಿದಾಗ ನಾನು ಬೌದ್ಧಮತವನ್ನು ಅಭ್ಯಾಸಮಾಡಲಾರಂಭಿಸಿದೆ. ಅದರ ತತ್ವವನ್ನು ನಾನು ತಿಳಿದಿದ್ದೇನೆ ಎಂಬ ಬೂಟಾಟಿಕೆ ನನಗಿಲ್ಲ. ಇನ್ನೂ ಉತ್ತಮವಾದ ಮನುಷ್ಯನಾಗಿ ಮರುಜನ್ಮ ಪಡೆಯುವುದಕ್ಕೆ ಅಥವಾ ನಿರ್ವಾಣದ ಸಾಧನಕ್ಕೆ ಯಾರಿಗೆ ತಾನೆ ಇಷ್ಟವಿಲ್ಲ. ಆದರೆ ಅದು ಇನ್ನೂ ಬಹುದೂರ ಇದೆ. ಸದ್ಯಕ್ಕೆ ನಾನು ಮನಸ್ಸನ್ನು ಬಿಗಿಹಿಡಿದರೆ ಸಾಕು ; ನನ್ನ ಹೃದಯದಿಂದ ದ್ವೇಷವನ್ನು ದೂರಮಾಡಿದರೆ ಸಾಕು.

ಐದು ತೊಡಕುಗಳಿಂದ ಪಾರಾದರೆ ಮಾತ್ರ ಸತ್ಯತೆಯ ನೀಲಾಕಾಶದಲ್ಲಿ ವಿಹರಿಸಲು ಸಾಧ್ಯ ಎಂದು ಬೌದ್ಧ ಗ್ರಂಥಗಳು ಬೋಧಿಸುತ್ತವೆ. ಆದರೆ ಹಾಗೆ ಮಾಡಲು ಬಹಳ ಸಾಧನೆ ಬೇಕು. ಆದರೆ ಆ ಸಾಧನೆಯಲ್ಲಿಯೇ ಸುಖವಿರುವುದು. ಯಾವಾಗಲೂ ಗೊಣಗುಟ್ಟುತ್ತಾ ಇನ್ನೊಬ್ಬರನ್ನು ಕಂಡರೆ ದ್ವೇಷಿಸುತ್ತಾ ಇರುವ ಅನೇಕ ಜನರನ್ನು ಕಂಡಿದ್ದೇನೆ. ಅಸಮಾಧಾನದ ಭಾವನೆ ಸರ್ಕಾರಿ ನೌಕರರ ವೃತ್ತಿ ರೋಗ. ಆದರೆ ಬುದ್ಧಿವಂತನಾದವನು ಬುದ್ಧ ಹೇಳಿದಂತೆ ದಾಸ್ಯದಿಂದ, ಕೊನೆಗೆ ದೇವರ ದಾಸ್ಯದಿಂದಲೂ – ತನ್ನ ಭಾವನೆಗಳಿಗೆ, ತನ್ನ ಹಕ್ಕುಗಳಿಗೆ ಮತ್ತು ಬಾಧ್ಯತೆಗಳಿಗೆ ಬದ್ಧನಾದ ದಾಸ್ಯದಿಂದ – ಬಿಡುಗಡೆಯಾಗಿ ಬಿಡುತ್ತಾನೆ. ಹಾಗೆ ಮುಕ್ತನಾದ ಮನುಷ್ಯನಿಗೆ ಶಾಂತಿ ದೊರೆಯುತ್ತದೆ.

ಈ ಜೀವನದ ಅರ್ಥವೇನೆಂದು ನನಗೆ ಸ್ಪಷ್ಟವಾಗಿಲ್ಲ. ಆದರೆ ಈ ಜೀವನಕ್ಕೆ ಅರ್ಥವಿದೆ ಎಂಬುದು ಮಾತ್ರ ಸ್ಪಷ್ಟ. ಬಹು ಜನರು ತಪ್ಪುದಾರಿ ಹಿಡಿಯುವುದು ಈ ಅರ್ಥಕ್ಕೆ ಮತಧರ್ಮಶಾಸ್ತ್ರದಂತೆ ವ್ಯಾಖ್ಯಾನ ಮಾಡಬೇಕೆನ್ನುವುದರಿಂದ. ಹಾಗೆ

ಮಾಡುವಾಗ, ತಾವು ಒಂದು ದೇವರನ್ನಾಗಲೀ ಅಥವಾ ಒಂದು ಮತವನ್ನಾಗಲೀ ನಂಬಲು ಸಾಧ್ಯವಿಲ್ಲವೆಂದು ಕಂಡುಬಂದಾಗ, ಅವರು ಬಹಳ ಬಿಟ್ಟುಕೊಡುತ್ತಾರೆ; ಅವರು ಈ ಜೀವನದ ಅರ್ಥದ ಬಗ್ಗೆ ತಮ್ಮ ನಂಬಿಕೆಯನ್ನೇ ನೀಗಿಕೊಂಡುಬಿಡುತ್ತಾರೆ. ಹೀಗಾಗಬೇಕಾಗಿಲ್ಲವೆಂದು ನನ್ನ ಭಾವನೆ. ದೇವರಿದ್ದಾನೆಯೇ ಅಥವಾ ಇಲ್ಲವೇ ಎಂಬುದರ ಬಗ್ಗೆ ನನಗೆ ಅಷ್ಟು ಯೋಚನೆ ಇಲ್ಲ. ಸತ್ತಮೇಲೆ ಯಾವುದಾದರೂ ಜೀವವಾಗಿ ಹುಟ್ಟುವೆನೋ ಇಲ್ಲವೋ ಎಂಬುದೂ ನನ್ನ ತಲೆ ಕೆಡಿಸಿಲ್ಲ. ಇಂಥ ಅಸ್ಪಷ್ಟ ಹಾಗೂ ರಹಸ್ಯ ವಿಷಯಗಳ ಬಗ್ಗೆ ನನ್ನ ಅಭಿಪ್ರಾಯವೇನು ಎಂದು ಹೇಳುವುದು ಅನಾವಶ್ಯಕ. ದೇವರು ಇರುವುದು ಇಲ್ಲದಿರುವುದು ನಮ್ಮ ಓಟುಗಳ ಮೇಲೆ ನಿಂತಂತಿಲ್ಲ. ಅವನು ಇದ್ದಾನೆ ಅಥವಾ ಇಲ್ಲ ಹಾಗೆಯೇ ಸತ್ತಮೇಲೆ ಜೀವ ಇರುತ್ತದೆ ಅಥವಾ ಇಲ್ಲ. ನನ್ನ ಅಭಿಪ್ರಾಯ ಅದನ್ನು ಬದಲಾಯಿಸುವುದಿಲ್ಲ. ನಾನು ನನ್ನ ಅಭಿಪ್ರಾಯವನ್ನು ಅದರಿಂದ ಬದಲಾಯಿಸುವುದಿಲ್ಲ. ಹಿಂದಿನ ಕಾಲದಲ್ಲಿ ಒಂದು ನಂಬಿಕೆ ಇತ್ತು. ಮಾಡಿದ್ದುಣ್ಣೋ ಮಾರಾಯ ಎಂದು; ಇಲ್ಲಿ ಮಾಡಿದಂತೆ ನಮಗೆ ಮುಂದೆ ಬಹುಮಾನ ಎಂದು. ಆದರೆ ಇಂದು ಈ ಭಾವನೆ ಹೋಗುತ್ತಾ ಇದೆ. ಚಿತ್ರಗುಪ್ತರು ನಮ್ಮ ಹೆಗಲಮೇಲೆ ಕುಳಿತುಕೊಂಡು ನಾವು ಮಾಡಿದ್ದನ್ನೆಲ್ಲಾ ಬರೆದುಕೊಳ್ಳುತ್ತಾರೆ ಎಂಬುದನ್ನು ನಾವು ನಿಜವಾಗಿಯೂ ನಂಬುತ್ತಿಲ್ಲ.

ಆದರೂ ಯೋಚಿಸುತ್ತಾ ಹೋದಂತೆ ನಮ್ಮ ಅಲ್ಪ ಜೀವಿತ ಕಾಲ ಇಷ್ಟಕ್ಕೇ ಮುಗಿಯುವುದಿಲ್ಲವೆಂದು ಏನೋ ಒಂದು ಅನುಭವ ಆಗುತ್ತಿದೆ ಎಂಬುದು. ಮಾವನ ಪ್ರೇಮದ ಆನಂದಪರವಶತೆ, ಸೌಂದರ್ಯಾನುಭವ, ಒಳ್ಳೆಯದನ್ನು ಅಂಗೀಕರಿಸುವಿಕೆ – ಇವುಗಳಲ್ಲಿ ನಮ್ಮ ಸಾಮಾನ್ಯ ಜೀವನದಲ್ಲಿ ಕಾಣುವುದಕ್ಕಿಂತ ಹೆಚ್ಚು ಪ್ರೇಮ ಹಾಗೂ ಹೆಚ್ಚಿನ ವಾಸ್ತವಿಕತೆ ಇದೆ ಎಂಬುದರ ಅಲ್ಪಸ್ವಲ್ಪ ಸುಳುವು ಹೊಳವುಗಳನ್ನು ಕಾಣುತ್ತೇವೆ. ಅತೀಂದ್ರಿಯ ಅನುಭವ (mystical experience) ನಮ್ಮಿಂದ ಆಚೆ ಬೇರೊಂದಿದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ ಎಂದು ನನಗನಿಸುತ್ತದೆ.

ಆದರೆ ನನ್ನ ಮುಕ್ತಿ ಅಥವಾ ದೇವತಾಶಾಸ್ತ್ರ ಸಮ್ಮತವಾದ ಅಥವಾ ತತ್ವಶಾಸ್ತ್ರೀಯವಾದ ನನ್ನ ಅಭಿಪ್ರಾಯ ಅಷ್ಟೇನು ಮುಖ್ಯವಲ್ಲ. ಚಿಂತನ ಚೆಂದ. ದೇವತಾಶಾಸ್ತ್ರ (theology). ವಿಜ್ಞಾನಗಳ ರಾಣಿ. ಆದರೆ ಮನುಷ್ಯನನ್ನು ಉಳಿಸುವುದು ನಂಬಿಕೆಯಲ್ಲ.

ಹೀಗಿರುವಲ್ಲಿ, ಈ ಭೂಮಿಯ ಮೇಲೆ ನಮ್ಮ ಗುರಿ ಏನು ? ನಾನು ಏನೇ ಹೇಳಿರಲಿ ನಾವು ನಮ್ಮಿಂದಲೇ ಆರಂಭಿಸಬೇಕು. ಏಕೆಂದರೆ ನಾವು ನಮ್ಮನ್ನೇ ಕೊಂಚ ಅರಿಯದೆ, ನಾವು ನಮ್ಮಲ್ಲಿ ಶಾಂತಿ ಹಾಗೂ ಪ್ರೇಮವನ್ನು ಅನುಭವಿಸದೆ, ನಮ್ಮ ಜೀವನಕ್ಕೊಂದು ಅರ್ಥಕೊಡುವ ಕೆಲಸಗಳನ್ನು ಮಾಡಲು ಸಾಧ್ಯವಾಗುವುದಿಲ್ಲ. ಆ ಶಾಂತಿ, ಈ ಪ್ರೇಮ ನಮಗೆ ಮತಧರ್ಮದಲ್ಲಿ, ಕಾವ್ಯ ಅಥವಾ ಕಲೆಗಳಲ್ಲಿ,

ಆನಂದ ಅಥವಾ ಕಷ್ಟದ ಅನುಭವದಲ್ಲಿ ಸಿಗಬಹುದು. ಅಂತೂ ಅದು ಹೇಗಾದರೂ ಸಿಗಲಿ, ಅದು ನಮಗೆ ಅಷ್ಟಿಷ್ಟು ಬೇಕೇಬೇಕು. ನಮ್ಮ ಅನುಭವಗಳನ್ನು ಆಧ್ಯಾತ್ಮಿಕ ಅರ್ಥದಲ್ಲಿ (spiritual terms) ಹೇಳುವುದನ್ನು ನಾವು ಕಲಿಯಬೇಕು.

ಈ ದೃಷ್ಟಿಯಿಂದ ಯೋಚಿಸಿದರೆ ಈ ಪ್ರಪಂಚದಲ್ಲಿ ನಾವು ಮಾಡ ಬೇಕಾದ್ದೇನು ? ಐಶ್ವರ್ಯ ಅಥವಾ ಉನ್ನತ ಅಧಿಕಾರ ಸಿಕ್ಕಿದರೂ ಅದೇ ಅಂತ್ಯವಲ್ಲ. ಮೊಟ್ಟಮೊದಲ ನನ್ನಂಥ ಸಾಮಾನ್ಯರಿಗೆ ಸಾಧ್ಯವಾಗುವಂಥಾದ್ದು ಸುಖವಾದ ಸಂಸಾರ. ನಮ್ಮನ್ನು ಪ್ರತಿಯಾಗಿ ಪ್ರೀತಿಸುವ ಹೆಂಡತಿ ಮಕ್ಕಳನ್ನು ಪ್ರೀತಿಸುವುದಕ್ಕಿಂತ ಹೆಚ್ಚಾದ್ದು ಯಾವುದೂ ಇಲ್ಲ. ಸಂಸಾರಿಯಾಗಿ ಬಾಳುವುದಕ್ಕಿಂತ ಹೆಚ್ಚಾದ ಶಿಸ್ತು ಅಥವಾ ಆತ್ಮಾರ್ಪಣೆ ಬೇರೊಂದಿಲ್ಲ.

ಇದಾದ ಮೇಲೆ ಮಾಡಲು ಅರ್ಹವಾದಂತಹ ಏನಾದರೊಂದು ಕೆಲಸ ವಿರಬೇಕು. ತವಾಂಗ್ ಸಂಘರಾಮದಲ್ಲಿ (lamasary) ನೀರು ಹೊರುವವನೊಬ್ಬನ ಚಿತ್ರವಿದೆ. ಅವನು ತನ್ನ ಕೆಲಸವನ್ನು ಎಷ್ಟು ಅಚ್ಚುಕಟ್ಟಾಗಿ ಮಾಡುತ್ತಿದ್ದನೆಂದರೆ, ಈಗ ಅವನನ್ನು ಒಬ್ಬ ಮಹಾತ್ಮನಂತೆ ಭಾವಿಸುತ್ತಾರೆ. ಪೂಜ್ಯಭಾವನೆಯಿಂದ ಮಾಡಿದರೆ ಸಾಕು. ಯಾವ ಕೆಲಸವಾದರೂ ಸರಿ. ಯಾವುದಾದರೊಂದು ಮಹತ್ಕಾರ್ಯವನ್ನು ಕೈಗೆ ಹಚ್ಚಿಕೊಂಡವರಂತೂ ಪುಣ್ಯಾತ್ಮರೇ ನಿಜ. ಉದಾಹರಣೆಗೆ ಗಿರಿಜನರ ಸಮಸ್ಯೆ. ಅದರಿಂದ ತೊಂದರೆ, ತಾಪತ್ರಯ, ದುಃಖ–ಇವು ಒದಗಿದರೂ ಚಿಂತೆಯಿಲ್ಲ.

ಟಿ.ಎಸ್. ಎಲಿಯಟರ 'The Cocktail Party' ಎಂಬ ಗ್ರಂಥದಲ್ಲಿ ನನ್ನ ಭಾವನೆಗಳಂತಹ ಭಾವನೆಗಳು ಸೆಸಿಲೆಯಲ್ಲಿ ಉದ್ಭವವಾಗುತ್ತವೆ (ಆದರೆ ನಾನು ಭಗ್ನಪ್ರೇಮಿಯಾಗಿರಲಿಲ್ಲ ಆಕೆಯಂತೆ). ಆಕೆ ಪಾರಮಾರ್ಥಿಕವಾದ ಹಾಗೂ ಪ್ರಾಪಂಚಿಕವಾದ ಎರಡು ಕಾಡುಗಳನ್ನು ಎದುರಿಸಬೇಕಾಯಿತು. ಕರುಣೆ ಹೊರಕ್ಕೆ ದಾರಿ ತೋರಿಸಬಹುದೆಂದು ರೈಲಿ (Reilly) ಸೂಚಿಸುತ್ತಾನೆ. ಆಗ ಸೆಸಿಲೆ ಕೊಡುವ ಉತ್ತರ ಇದು : ಕಾಡಿನಿಂದ ಹೊರಕ್ಕೆ ದಾರಿಯನ್ನು ಕಂಡರೂ ನಿಧಿಯನ್ನು ಹುಡುಕಲು ಕಾಡಿಗೆ ಹೋದೆ. ಆದರೆ ಅದನ್ನು ಕಾಣಲಿಲ್ಲ ಎಂಬ ಸಂತೈಸಲಾಗದ ನೆನಪೊಂದು ಉಳಿಯುತ್ತದೆ. ಆ ನಿಧಿ ಅಲ್ಲಿರಲಿಲ್ಲ; ಬಹುಶಃ ಬೇರೆಲ್ಲಿಯೂ ಇಲ್ಲ. ಆದರೆ ಬೇರೆಲ್ಲಿಯೂ ಇಲ್ಲದಿದ್ದರೆ ಕಾಣಲಿಲ್ಲವಲ್ಲ ಎಂಬ ಕಳ್ಳ ಮನಸ್ಸೇಕೆ ?

ನಾನು ನಿಧಿಯನ್ನು ಅರಸಲು ಹೋದೆ. ಅದನ್ನು ರೋಗಪೀಡಿತರಲ್ಲಿ ದುಃಖಿತರಲ್ಲಿ ದರಿದ್ರರಲ್ಲಿ ಅರಸಿದೆ. ಆದರೆ ನಾನು ಆ ಭವ್ಯದೃಶ್ಯವನ್ನು ನೋಡಲಿಲ್ಲ. ಬಹುಶಃ, 'ಹೊಲಸು' ದೃಶ್ಯವನ್ನು ಕಂಡುಹಿಡಿದದ್ದೇ ಕೊನೆಗೆ ಹೆಚ್ಚು ಪ್ರಾಮುಖ್ಯ ವಾಯಿತೆಂದು ಕಾಣುತ್ತೆ. ಕೊನೆಗೆ ಮನುಷ್ಯರ ಆವಶ್ಯಕತೆ ಎಷ್ಟು ಇತ್ತೆಂದರೆ, ಪ್ರೀತಿಗೆ ಅವರೆಷ್ಟು ಪಾತ್ರರೆಂದರೆ, ದೇವರೇ ಹಿಂದಿನ ಪೀಠದಲ್ಲಿ ಕುಳಿತುಕೊಳ್ಳಬೇಕಾಯಿತು. ನಾನು ಮೊದಲಿನಿಂದಲೂ ನೈಜತೆಗೆ ಹಾತೊರೆಯುತ್ತಿದ್ದೆ. ಆ ನೈಜತೆಯನ್ನು

ಅನುಗ್ರಹಪೂರ್ಣವಾದರೂ ಕೃತ್ರಿಮವಾದ ಆಕ್ಸ್‌ಫರ್ಡ್ ಮರೆಮಾಚಿತ್ತು; ಅತಿ ಜರೂರಾದ ಸಮರ್ಬತಿಯ ರಾಜಕೀಯ ಉದ್ರೇಕಗಳು, ಅವು ಎಷ್ಟು ಆದರ್ಶವಾಗಿದ್ದರೂ, ಆ ನೈಜತೆಯನ್ನು ಮುಚ್ಚಿದ್ದುವು.

ಆದರೆ ಈ ನಿಧಿಯನ್ನು ಪಡೆಯಲಿಕ್ಕೆ ಎಲ್ಲರೂ ಭೌತಿಕ ಕಾಡಿಗೆ ಹೋಗಬೇಕಾಗಿಲ್ಲ. ಸ್ವರ್ಗ ನರಕಗಳು ನಮ್ಮಲ್ಲಿಯೇ ಇವೆ. ಮನುಷ್ಯನು ತನ್ನ ಮನಸ್ಸಿನ ಹಳ್ಳ ತಿಟ್ಟಿನ ಗುಡ್ಡಗಳನ್ನೇರಿ ತೀರ್ಥಯಾತ್ರೆ ಮಾಡಲೇಬೇಕು. ಯಾರು ಎಲ್ಲಿದ್ದರೂ ಈ ಶೋಧನೆ ನಡೆದೇ ನಡೆಯುತ್ತದೆ. ಅಂತಿಮ ನಿಧಿಯನ್ನು ನಾನು ಕಾಡಿನಲ್ಲಿ ಕಾಣಲಿಲ್ಲ. ಬಹುಶಃ ಅದು ಅಲ್ಲಿಲ್ಲ ಎಂದು ಕಾಣುತ್ತದೆ. ಅದು ಬೇರೆಲ್ಲಿಯೂ ಇರಲಾರದು.

ಆದರೂ ನಿಧಿಯೊಂದಿದೆ; ಹುಡುಕಿದರೆ ಅದು ಪ್ರತಿಯೊಬ್ಬ ಮನುಷ್ಯನಿಗೂ ಸಿಕ್ಕಬಹುದು. ಆ ನಿಧಿಯೇ 'ಪ್ರೇಮ' ಎಂದು ನನ್ನ ನಂಬಿಕೆ. ಅದು ಶಾಂತಿಯ ಸಹೋದರ ಹಾಗೂ ಸ್ನೇಹಿತನಾದ ಪ್ರೇಮ. ವೈವಿಧ್ಯಮಯವೂ ಗಹನವೂ ಆದ ಪ್ರೇಮ. ಪ್ರೇಮವು ಜ್ಞಾನಕ್ಕೆ ಬೆಳಕನ್ನು ಚೆಲ್ಲುತ್ತದೆ. ಸೌಂದರ್ಯಕ್ಕೆ ಅರ್ಥವನ್ನು ನೀಡುತ್ತದೆ. ಅದು ಶೀಲದ ಹೃದಯ. ಅದು ಮನೆಗೆ ಬಂದ ಅತ್ಯಂತ ಮೆಚ್ಚಿನ ಅತಿಥಿ. ದ್ವೇಷದ ಅಸ್ತ್ರಗಳಿಗಿಂತ ಪ್ರೇಮದ ಫಿರಂಗಿ ಹೆಚ್ಚು ಶಕ್ತಿಯುತವಾದದ್ದು; ಸರಿಯಾಗಿ ಉಪಯೋಗಿಸಿದರೆ ಗೆಲ್ಲಬಲ್ಲುದು. ಪ್ರೇಮ ಪ್ರತಿಯೊಬ್ಬ ಮನುಷ್ಯನಿಗೂ ಘನತೆ ಗೌರವಗಳನ್ನು ಕೊಡುತ್ತದೆ. ಹೆಮ್ಮೆ ಮನುಷ್ಯನನ್ನು ತಗ್ಗಿಸುತ್ತದೆ. ವ್ಯಸನದ, ಕಳಂಕದ, ಮತ್ತು ಲಜ್ಜಿತ ಮನುಷ್ಯನನ್ನು ಶಮನಮಾಡುತ್ತದೆ. ಕಡುಬಡವನಿಗೂ ಬಾಳಿಗೊಂದು ಅರ್ಥವಿದೆ ಎಂಬುದನ್ನು ಬೋಧಿಸುತ್ತದೆ. ತ್ರಹೇರ್ನೇ (Traherne) ಹೇಳಿದಂತೆ ಅದು ಮಾನವನ ಆತ್ಮದ ಅತ್ಯಂತ ಮಧುರ ಹಾಗೂ ಸ್ವಾಭಾವಿಕವಾಗಿ ನಿರತವಾಗುವ ಉದ್ಯೋಗ. ಇದು ನಿಜವಾಗಿಯೂ ಸತ್ಯ. ಏಕೆಂದರೆ ಮನುಷ್ಯ ಹುಟ್ಟುವುದು ಬದುಕುವುದು ಸಹಕಾರಕ್ಕಾಗಿ ಮತ್ತು ಸಹಬಾಳುವೆಗಾಗಿಯೇ ಹೊರತು ಪೈಪೋಟಿ ನಡೆಸುವುದು ಅಥವಾ ವಿರೋಧ ಕಟ್ಟಿಕೊಳ್ಳುವುದಕ್ಕಲ್ಲ. ಹಾಗಿದ್ದರೆ ಮಾತ್ರ ಮನುಷ್ಯ ನಿಜವಾಗಿಯೂ ಮಾನವೀಯತೆಯ ಮನುಷ್ಯನಾಗುತ್ತಾನೆ. ಏಕೆಂದರೆ ಮನುಷ್ಯನು ಈ ಪ್ರಪಂಚದಲ್ಲಿ ತನ್ನ ಪಾತ್ರವೇನು ಎಂಬುದನ್ನು ಪ್ರೇಮದ ಮೂಲಕ ಅರಿತಾಗಲೇ ಆತ ಒಂಟಿತನದ ಪ್ರತ್ಯೇಕತಾಶಕ್ತಿಯಿಂದ ಮುಕ್ತನಾಗುವುದು. ನನಗೂ ಎಲ್ಲಕ್ಕೂ ಸಂಬಂಧವಿದೆ ಎಂಬ ಭಾವನೆಯಿಂದ ಆತನ ವ್ಯಕ್ತಿತ್ವ ಉಬ್ಬುತ್ತದೆ. ಪ್ರೇಮಿಯ ಬಳಿಗೆ ಭೀತಿಯ ಪ್ರೇತ ಬರುವುದಿಲ್ಲ. ಅದು ಶಾಂತಿಯನ್ನು ನೀಡಿ ವಿರೋಧಕ ಶಕ್ತಿಗಳನ್ನು ಒಟ್ಟುಗೂಡಿಸುವ ಸೌಮ್ಯಶಕ್ತಿಯನ್ನು ತುಂಬುತ್ತದೆ.

ಪ್ರೇಮ ಮತ್ತು ಅದು ಹೇಳುವ ಕರ್ತವ್ಯಗಳು ಕಾಡಿನ ನಿಜವಾದ ಪಾಠ. ನಾನು ಆಧ್ಯಾತ್ಮಿಕ ತಿಳಿವಳಿಕೆಯನ್ನು ಕಾಣಲಿಲ್ಲ. ಕೆಲವರು ಹೇಳಬಹುದು, ನಾನು ಆಧ್ಯಾತ್ಮಿಕ ತಿಳಿವಳಿಕೆಯ ಬದಲು ಆಧ್ಯಾತ್ಮಿಕ ಅನರ್ಥಗಳನ್ನು ಕಂಡೆ ಎಂದು.

ಆದರೆ ನಾನು ನಿಜವಾಗಿಯೂ ತ್ವರಿತವಾದ ಪ್ರತಿಭಟನೆಯ ಕೇಳಿಕೆಗಳನ್ನು ಕಂಡುಹಿಡಿದೆ. ಬಹು ಬಡವರಲ್ಲಿ ಮತ್ತು ಶೋಷಣೆಗೊಳಗಾದವರಲ್ಲಿ ಮನುಷ್ಯನ ಬಾಳಿಗೆ ಮಹತ್ವವನ್ನು ನೀಡುವ ಹೆಚ್ಚು ಹರ್ಷವಾದ ಮೌಲ್ಯಗಳನ್ನು ಮುಂದುವರಿಸಿಕೊಂಡು ಬರುವ ಅವಶ್ಯಕತೆ ಇತ್ತು. ಅವರಿಗೆ ಆತ್ಮಗೌರವವನ್ನು, ತಮ್ಮನ್ನು ಪ್ರೇಮಿಸುವರೊಬ್ಬರಿದ್ದಾರೆಂಬ ಭಾವನೆಯನ್ನು, ಉಂಟುಮಾಡಬೇಕಾಗಿತ್ತು. ಶಾಂತಿಗಾಗಿ, ಹೊಂದಾಣಿಕೆಗಾಗಿ ಕೆಲಸಮಾಡಬೇಕಾದ ಅವಶ್ಯಕತೆ ಇತ್ತು. ಮನುಷ್ಯನು ತನ್ನ ಬಾಳನ್ನು ಇದಕ್ಕಿಂತಲೂ ದೊಡ್ಡ ಧ್ಯೇಯಕ್ಕಾಗಿ ಮುಡುಪಾಗಿಡಲು ಸಾಧ್ಯವಿಲ್ಲ. ಮಾನವಕುಲದ ಮಕ್ಕಳ ಮರುಕಗೂಡಿದ ಆಸೆ ಅಕಾಂಕ್ಷೆಗಳಿಗೆ, ಭಾವನೆಗಳಿಗೆ ಹಾಗೂ ಇಡೀ ಬಾಳಿಗೆಲ್ಲ ಗೌರವ ತೋರಿಸುವ ಅವಶ್ಯಕತೆ ಇತ್ತು.

ನನಗೆ ಕಾಡಿನಲ್ಲಿ ಸ್ಪಷ್ಟವಾದದ್ದು ಮತ್ತೊಂದು. ಅದೇನೆಂದರೆ, ಹೊಸ ಸಾಮಾಜಿಕ ವ್ಯವಸ್ಥೆಗೆ ಬೇಕಾದ ಸ್ಥಿರ ಮನಸ್ಸಿನ ಮತ್ತು ಬಡತನವನ್ನು ನೀಗಿಸಲು ಬೇಕಾದ ಕಾರ್ಯಶೀಲ ಯೋಜನೆಗಳ ಪ್ರಾಮುಖ್ಯತೆ. ಎಲ್ಲಕ್ಕಿಂತ ಮಿಗಿಲೆಂದರೆ, ಸೌಂದರ್ಯ, ಸ್ವಾತಂತ್ರ್ಯ ಮತ್ತು ಸುಖಗಳಿಗಾಗಿ, ಇದ್ದ ಸುಖವನ್ನು ಉಳಿಸುವುದಕ್ಕಾಗಿ, ಕಳೆದ ಸುಖವನ್ನು ತಂದು ಕೊಡುವುದಕ್ಕಾಗಿ ಕೆಲಸಮಾಡುವುದಕ್ಕಿಂತ ಪ್ರೇಮದ ಪ್ರಕಟಣೆ ಬೇರೊಂದಿಲ್ಲ ಎಂಬುದು.

ಇವುಗಳ ಸಾಧನೆ ಮಹಾಯೋಗಿಗಳೂ ತಪಸ್ವಿಗಳೂ ಹೇಳುವ ಮಹಾನಿಧಿಯಾಗಿಲ್ಲದಿರಬಹುದು. ಆದರೆ ಈ ಬಾಳಿನಲ್ಲಿ ನಾವು ಮಾಡಬಹುದಾದುದನ್ನು ಮಾಡಲೇಬೇಕು. ಸ್ವರ್ಗವನ್ನು ಮುಟ್ಟದಿರಬಹುದು. ಆದರೆ ಭೂಮಿಯ ಮೇಲೆ ಮಾಡಬೇಕಾದ್ದು ಬೇಕಾದಷ್ಟಿದೆ.

❐

ಎಲ್ವಿನ್‌ರ ಕೊನೆಯ ದಿನಗಳು

೧೯೬೩ನೇ ವರ್ಷದ ಮಧ್ಯಭಾಗದಿಂದ ಎಡೆಬಿಡದೆ ಮಾಡಿದ ಕೆಲಸ ಅವರ ಆರೋಗ್ಯಕ್ಕೆ ಹಾನಿಯನ್ನುಂಟುಮಾಡಿತು. ಕೆಲವು ಕಾಲ ಹಾಸಿಗೆಯಲ್ಲಿಯೇ ಇರಬೇಕಾಯಿತು. ಆದರೂ ಒಂದು ಸಭೆಯಲ್ಲಿ ಭಾಗವಹಿಸಲು ದೆಹಲಿಗೆ ಹೋದರು. ಅಲ್ಲಿ ಅವರು ಹೃದಯಾಘಾತದಿಂದ ನಿಧನರಾದರು. ೧೯೬೪ನೆಯ ಫೆಬ್ರವರಿ ೨೨ರಂದು ಅವರಿಗೆ ೬೨ ವರ್ಷ ತುಂಬುದಕ್ಕೆ ಕೆಲವೇ ತಿಂಗಳುಗಳ ಮುಂಚೆ ಅವರು ಇಹಲೋಕ ತ್ಯಜಿಸಿಬಿಟ್ಟರು. ಅವರ ಕೊನೆಯ ಅಭಿಲಾಷೆಯಂತೆ ಅವರ ಚಿತಾಭಸ್ಮವನ್ನು ಈಗಿನ ಅರುಣಾಚಲ ಪ್ರದೇಶಕ್ಕೆ ಸೇರಿದ ಇಂಡೋ–ಟಿಬೆಟ್ ಗಡಿಯಲ್ಲಿರುವ ಟುಟಿಂಗ್ (Tuting) ಬಳಿ ಹರಿಯುವ ಬ್ರಹ್ಮಪುತ್ರ ನದಿಯ ಉಪನದಿಯಾದ ಸಿಯಾಂಗ್ ನದಿಯಲ್ಲಿ ಬಿಡಲಾಯಿತು.

ಎಲ್ವಿನರ ಒಂದು ಪತ್ರ

ದಿವಂಗತ ಪಿ. ಕೋದಂಡರಾವ್ ಅವರಿಗೆ ವೆರಿಯರ್ ಎಲ್ವಿನರು ೧೯೪೧ರಲ್ಲಿ ಬರೆದ ಒಂದು ಪತ್ರ ಇತ್ತೀಚೆಗೆ ಬೆಳಕಿಗೆ ಬಂದಿದೆ. ಈ ಪತ್ರವನ್ನು ೧೯೭೧ರ ಜುಲೈ ೧೧ನೆಯ ತಾರೀಕಿನ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಪ್ರಕಟಿಸುತ್ತಾ ರಾವ್ ಅವರು ಹೀಗೆ ಹೇಳಿದರು :

In my paper on *Sociological Supersitions, which I submitted for publication in the volume, Essays in Anthoropology,* presented to Rai Bahadur Sarat Chandra Roy, the Father of Indian Anthropology, I had Examined some what critically the ideas of eminent anthropologists and in particular Dr. Verrier Elwin.

I, therefore, ventured to sumbit a copy of the Paper to Dr. Elwin for his information and, if he be pleased, his comments also, particularly as he was a great personal friend of mine and my occasional guest in the Servants of India Society, Poona. He was devoted to the aboriginals in India, lived among them, and even married Miss Koshi, a tribal lady.

That a Britisher, a Don of the Cambridge University, should marry an Indian aborigninal in India surprised many even among his friends in England and in India, and shocked both Indian and British orthodoxy.

ಎಲ್ವಿನರು ಬರೆದ ಈ ಕೆಳಕಂಡ ಪತ್ರದಿಂದ ಗಿರಿಜನರ ನಿಜಸ್ಥಿತಿಯನ್ನು ಅರಿಯದ ಪಟ್ಟಣಿಗರು ಅವರನ್ನು ನಾಗರಿಕರನ್ನಾಗಿ ಮಾಡುತ್ತೇವೆಂದು ಹೇಳಿ ತಯಾರಿಸುವ ಹೊಸ ಹೊಸ ಯೋಜನೆಗಳು ಎಷ್ಟು ಅಪಾಯಕಾರಿ ಎಂಬುದು ವ್ಯಕ್ತವಾಗುತ್ತದೆ ಪತ್ರ ಹೀಗಿದೆ :

My dear Kodanda Rao,

Very many thanks for your letter and for sending me a copy of the articles you have written for the S.C. Roy volume.

As you ask for my comments, I would venture to suggest that a fundamental fallacy in the article is likely to expose you to the easy ridicule of anthropologists. The fallacy is that you compare

two things that cannot be compared - a small closely knit aboriginal society like the Baiga and the vast inchoate mixed society of America. Naturally you cannot define or describe American culture or a typical American.

I entirely agree with you that you cannot find any fixed culture pattern in these highly developed, highly individualised societies. But the situation is very different in real primitive societies.

There is a perfectly definite and distinctive Baiga culture, quite different from the gond culture and the Uraon culture. If you had ever lived among primitive people you would recognise this and the merest tyro in sociology will at once point out that your article is the work of a study critic who has never done a piece of actual field-work.

You say that 'the same song need not necessarily appeal to all peoples of a so-called group.... Not all English people dance the Lambeth Walk.' I entirely agree. But the same type of song is sung by all the Biagas, and they do, as a matter of fact, all dance the same kind of dance.

You see this more clearly in Baster, where you have several different cultures living side by side, the Maria, the Muria, the Dhurwa, the Halba, and several others.

You are not altogether fair to me, i think, in treating me as an opponent of all alien contacts. I am not against all contacts, but against all bad contacts. After all, I have spent the best years of my life bringing education to these people, introducing them to the joys of the radio and the gramophone, giving them medicine, and generally awakening them to their rights and possibilities in the modern world. But I am concerned, not with theories but with life as it is.

The fact is that in almost every case the aboriginal's contact with the outside world is degrading one. You and Thakker Baba will persist in thinking that I am trying to stop the aboriginal from contact with people like Kodandarao and Thakkar Baba. But that is obviously absurd. What I want to do is to save these dear people from degradation and destruction.

As things are at present, the only'civilisation' with which they

can possibly come in contact is an unavailability degraded one, that of the low-caste villager, or the village money-lender, landlord or subordinate official. These contacts quiet invariably have the worst possible effect on the aboriginal. They destroy his religion and his morals, they debauch his women and introduce him to those very social abuses which people like yourself are doing so much to destroy in the rest of India.

I know of no exception to this. The comparatively pure, honest, hard - working hillman becomes the worst of liars, drunkard, destroyed by venereal disease, lazy and furtile.

You say that the aboriginal should not be denied the absolute truths of astronomy. But do you really suppose that he learns these truths in a District Council School? He is simply taught a new set of fallacies by his orthodox Brahmin pundit in place of his old set of fallacies.

You say that Baigas should not be deprived of the radio and the cinema. Naturally, I would give them both. But the culture contact from which I would save these people, far from giving them the radio and cinema, forbids them to enjoy even their own simple and innocent dances. Culture contact in the C.P. means the death of recreation of any kind. Here again, I am not stating opinions, but facts. All over the tribal districts of Gond 'reformers' fining the people if they dance and sing, spreading everywhere drabness and cultural death.

It is this wicked robbing of poor people of the little fun and happiness they have that I am fighting against. i am not interested in ultimate questions of whether the Baiga or Gond can ever be civilised. I hope he can. But at least let us wait till we have something to offer him. Don't let us deprive him of his meat till we can give him ghee and vegetables, or of his liquor till we can give him milk or tea.

It matters little that you should criticise me; I will be all right; an author can always hit back. But I do beg you to think twice before advocating policies or proposing philosophies that will, in the stern school of actual reality, bring despair and degeneration to poor and simple people.

Are you hostile to Tagore's attempt to revive Indian art and music, or to the Mahatma's to restrore to the villager his ancestral arts and crafts ? If you are not, why should you oppose the attempt

to recreate the old and often valuable art, song, craft of our aboriginals ?

With best wishes from us all. I hope to visit Grigson in Nagpur about August 7th for a few days. We will meet then. Kosi's love to Mary.

Ever Yours,

Verrier Elwin.

ಟಿಪ್ಪಣಿಗಳು

ಜಾನ್ ದಿ ಬಾಪ್ಟಿಸ್ಟ್

ಕ್ರೈಸ್ತನ ಬರುವಿಕೆಯನ್ನು ಸಾರಿದವನು. ದೈವಭಕ್ತ. ಇವನ ಬೋಧನೆಗಳನ್ನು ಕೇಳಿ ಸಿಟ್ಟಿಗೆದ್ದ ದೊರೆ ಹೆರೊಡ್ ಎಂಬುವನು ತನ್ನ ಪ್ರೇಯಸಿಯ ಪ್ರೇರಣೆಗೊಳಗಾಗಿ ಈತನ ತಲೆ ಕಡಿಸಿದ.

ಸೆಂಟ್ ಜಾನರ ಗಾಸ್ಪಲ್

ಹೊಸ ಒಡಂಬಡಿಕೆಯಲ್ಲಿ (New Testament) ಸೆಂಟ್ ಜಾನರ ಗಾಸ್ಪೆಲ್ ನಾಲ್ಕನೆಯದು. ಗಾಸ್ಪೆಲ್ ಎಂದರೆ ಸುವಾರ್ತೆ ಅಥವಾ ಕ್ರೈಸ್ತ ಮತ ಬೋಧೆ.

ಪವಿತ್ರ ಮೇಜು

ದೇವರಿಗೆ ಪವಿತ್ರ ನೈವೇದ್ಯವನ್ನು ಅರ್ಪಿಸುವ ಮೇಜು.

ಬಲ್‌ಹಮ್ ಮತ್ತು ಲೂಟಿಂಗ್ ಕಾಮನ್ಸ್

ಬಲ್‌ಹಮ್ ಎಂಬುದು ಲಂಡನ್ನಿನ ದಕ್ಷಿಣ ಹಾಗೂ ಪಶ್ಚಿಮ ದಿಕ್ಕುಗಳ ಮಧ್ಯದಲ್ಲಿರುವ ಒಂದು ಪ್ರಾಂತ. ಇದು ಅತ್ಯಂತ ಜನನಿಬಿಡವಾದ ಟ್ರಾನ್ಡ್ಸ್‌ವರ್ತ್ ಎಂಬ ಊರಿನ ಭಾಗವಾಗಿದೆ. ಲೂಟಿಂಗ್‌ಕಾಮನ್ಸ್ ಎಂಬುದು ಇದರ ಹತ್ತಿರದಲ್ಲೇ ಇದೆ. ಇವೆರಡೂ ಒಟ್ಟಿಗೆ ಸೇರಿ House of Commonsಗೆ ಸದಸ್ಯನೊಬ್ಬನನ್ನು ಚುನಾಯಿಸುತ್ತವೆ.

ಸಂತ ಫ್ರಾನ್ಸಿಸ್ ಆಫ್ ಅಸ್ಸೀಸಿ (೧೧೮೨–೧೨೨೬)

ಇಟಲಿ ದೇಶದ ಒಬ್ಬ ಸಂತ. ಅಸ್ಸೀಸಿ ಎಂಬ ಗ್ರಾಮದಲ್ಲಿ ಜನಿಸಿದವನು. ಮಧ್ಯಯುಗದ ಸಂತ ಜೀವನ ಹಾಗೂ ವೈಯಕ್ತಿಕ ಸೌಂದರ್ಯಕ್ಕೆ ಆದರ್ಶ ವ್ಯಕ್ತಿಯಾಗಿದ್ದರು.

ರಿಚರ್ಡ್ ರೋಲ್ (೧೩೦೦–೧೩೪೯)

ತನ್ನ ೧೯ನೆಯ ವಯಸ್ಸಿನಲ್ಲಿಯೇ ಆಕ್ಸ್‌ಫರ್ಡ್ ಬಿಟ್ಟು ಸನ್ಯಾಸಿಯಾದವನು. ಅನೇಕ ಧಾರ್ಮಿಕ ಗ್ರಂಥಗಳನ್ನು ಬರೆದಿದ್ದಾನೆ.

ಮೈಕೇಲ್ ಏಂಜಲೋ (೧೪೭೫–೧೫೬೪)

ಪುನರುತ್ಥಾನ ಕಾಲದ ಬಹು ಪ್ರಸಿದ್ಧನಾದ ವರ್ಣಚಿತ್ರಕಾರ. ಎರಡನೇ ಪೋಪ್ ಜೂಲಿಯಸನ ಅಪ್ಪಣೆಯ ಮೇರೆ ಇವನು ರೋಮಿನಲ್ಲಿರುವ ಸಿಸ್ಟಿನಿಕ್ ಛೇಪಲ್‌ನ ಮೇಲ್ಛಾವಣಿಯಲ್ಲಿ ವರ್ಣಚಿತ್ರಗಳನ್ನು ಚಿತ್ರಿಸಿರುತ್ತಾನೆ.

ಥಾಮಸ್ ಮೋರ್ (೧೪೭೮–೧೫೩೫)

ಪುನರುಜ್ಜೀವನ ಕಾಲದ ಪ್ರಸಿದ್ಧವಾದ ಲೇಖಕ ಹಾಗೂ ಜ್ಞಾನಿ. ರಾಜನಾದ ಎಂಟನೆ ಹೆನ್ರಿಯ ಆಸ್ಥಾನದಲ್ಲಿ ಪ್ರಮುಖ ಸದಸ್ಯನಾಗಿದ್ದ. ಪ್ರಾರಂಭದಲ್ಲಿ ರಾಜನ ವಿಶ್ವಾಸಕ್ಕೆ ಪಾತ್ರನಾಗಿದ್ದ. ಆದರೆ, ಅನಂತರ ಆಂಗ್ಲದೇಶದ ಚರ್ಚಿಗೆ ರಾಜನೇ ಅಧ್ಯಕ್ಷನೆಂಬುದನ್ನು ಅಂಗೀಕರಿಸದ ಕಾರಣದಿಂದ ಹೆನ್ರಿಯು ಇವನನ್ನು ಗಲ್ಲಿಗೆ ಹಾಕಿಸಿದನು. 'Utopia' ಎಂಬುದು ಮೋರನ ಪ್ರಸಿದ್ಧ ಕೃತಿ. ಇದು ಆಂಗ್ಲಭಾಷೆಗೆ ಇವನ ಕೊಡುಗೆ. ದಾರಿದ್ರ್ಯದಲ್ಲಿ ಸ್ವಾಭಾವಿಕವಾದ ಆಸಕ್ತಿ ಮತ್ತು ಮಾನವರಲ್ಲಿ ಭ್ರಾತೃತ್ವದ ಭಾವನೆ – ಇವು ಇವನನ್ನು ಇತರ ಸಂತರಿಂದ ಬೇರ್ಪಡಿಸುತ್ತವೆ. ತನ್ನ ಜೀವನದ ಬಹುಭಾಗವನ್ನು ಕುಷ್ಠರೋಗಿಗಳ ಹಾಗೂ ನಿರ್ಭಾಗ್ಯರಾದ ದೀನರ ಸೇವೆಯಲ್ಲಿ ಕಳೆದನು. ಸೃಷ್ಟಿಯ ಸಮಸ್ತ ಪ್ರಾಣಿಗಳನ್ನೂ ಇವನು ಪ್ರೀತಿಸುತ್ತಿದ್ದನು.

ಮಿಡಲ್‌ಟನ್ (ಥಾಮಸ್) (೧೫೭೦–೧೬೨೭)

ಷೇಕ್ಸ್‌ಪಿಯರನ ಸಮಕಾಲೀನನಾದ ಆಂಗ್ಲ ನಾಟಕಕಾರ. ಇವನ ನಾಟಕಗಳು ಬಹು ಜನಪ್ರಿಯವಾಗಿದ್ದುವು. ಆದರೆ, ಈಗ ಅವನ್ನು ಓದುವವರು ಕಡಿಮೆ. ಇವನ ನಾಟಕಗಳಲ್ಲಿ 'A Trick to Catch the Old one' ಮತ್ತು 'Women become Women' ಇವು ಮುಖ್ಯವಾದವು.

ಥಾಮಸ್ ಸ್ಟೀವನ್ಸ್

ಇಂಗ್ಲೆಂಡಿನಿಂದ ರೋಮಿಗೆ ಓಡಿಹೋಗಿ ಅಲ್ಲಿ ಜೊಸ್ಯೂಯಿಟ್ ಪಂಥವನ್ನು ಸೇರಿ ಇಂಡಿಯಾಕ್ಕೆ (ಅಂದರೆ ಪೋರ್ಚುಗೀಸರ ಗೋವಾಕ್ಕೆ) ಪಾದ್ರಿಯಾಗಿ ಕ್ರಿ.ಶ. ೧೫೭೯ರಲ್ಲಿ ಬಂದ ಪ್ರಥಮ ಇಂಗ್ಲಿಷನವ. ಕನ್ನಡ, ಕೊಂಕಣಿ ಮತ್ತು ಮರಾಠಿ ಭಾಷೆಗಳನ್ನು ಅಭ್ಯಾಸಮಾಡಿ, ಈ ಮೂರು ಭಾಷೆಗಳಲ್ಲಿಯೂ ಗ್ರಂಥಗಳನ್ನು ಬರೆದವ. 'ಓವಿ' ಛಂದಸ್ಸಿನಲ್ಲಿ ಬರೆದ ಈತನ 'ಕ್ರಿಸ್ತಪುರಾಣ' ಮರಾಠೀ ಭಾಷೆಯಲ್ಲಿ ಹೆಸರಾದ ಗ್ರಂಥ. ಕ್ರೈಸ್ತರು ಈಗಲೂ ಈ ಗ್ರಂಥವನ್ನು ತಮ್ಮ ಪೂಜಾ ಸಮಯದಲ್ಲಿ ಪಠಿಸುತ್ತಾರೆ. ಈತ ಕನ್ನಡದಲ್ಲಿ ಬರೆದ ಗ್ರಂಥಗಳು ಈಗ ಲುಪ್ತವಾಗಿವೆ.

ಫಾದರ್ ವಿನ್ಸ್‌ಲೋ (೧೫೯೫–೧೬೫೫)

೧೬೨೦ರಲ್ಲಿ 'ಮೇ ಫ್ಲವರ್' ಎಂಬ ಹಡಗಿನಲ್ಲಿ ಅಮೇರಿಕಾ ದೇಶಕ್ಕೆ ಹೋಗಿ ನೆಲಸಿದ ಆಂಗ್ಲ ಧರ್ಮಶುದ್ಧಿವಾದಕ (Puritan). ಪ್ಲಿಮತ್ ಎಂಬ ವಸಾಹತನ್ನು ಅಭಿವೃದ್ಧಿಪಡಿಸುವುದರಲ್ಲಿ ಪ್ರಮುಖವಾದ ಪಾತ್ರ ವಹಿಸಿದ್ದನು. ಇಂಗ್ಲೆಂಡಿಗೆ ಹಿಂದಿರುಗಿದನಂತರ ೧೬೨೪ರಲ್ಲಿ 'Good News from New York' ಎಂಬ ಗ್ರಂಥ ಪ್ರಕಟಿಸಿದನು. ಆಲಿವರ್ ಕ್ರಾಮ್‌ವೆಲ್ ಎಂಬುವನು 'Lord Protuton' ಆದನಂತರ ವಿನ್ಸ್‌ಲೋವನ್ನು ವೆಸ್ಟ್ ಇಂಡೀಸಿಗೆ ನಿಯೋಗವೊಂದರ ಜೊತೆ ಕಳುಹಿಸಿದನು. ಆದರೆ ಆತ ಅಲ್ಲಿಯೇ ಮೃತನಾದನು.

ಬೊಡ್ಲಿಯನ್

ಸರ್ ಥಾಮಸ್ ಬೊಡ್ಲಿ ಎಂಬುವನು ೧೬೦೨ರಲ್ಲಿ ಸ್ಥಾಪಿಸಿದ ಪುಸ್ತಕ ಭಂಡಾರ. ಇಂಗ್ಲೆಂಡಿನಲ್ಲಿ ಪ್ರಕಟವಾದ ಪ್ರತಿಯೊಂದು ಪುಸ್ತಕವೂ ಇಲ್ಲಿದೆ.

ಡ್ರಯ್ಡನ್ ಜೋನ್ (೧೬೩೧–೧೭೦೦)

ಇಂಗ್ಲೆಂಡಿನ ಹೆಸರಾಂತ ಕವಿಗಳಲ್ಲೊಬ್ಬ ನಾಟಕಕಾರನೂ ಆಗಿದ್ದ.

ಮಾರ್ ಮಾನಿಯೋಸ್

ಕೇರಳದಲ್ಲಿ ಜಾಕೊಬೈಟ್ ಆರ್ಚ್ ಬಿಷಪ್ಪನಾಗಿದ್ದ. ತನ್ನ ಅನುಯಾಯಿ ಗಳೊಡನೆ ೧೬೩೧ರಲ್ಲಿ ಕ್ಯಾಥೊಲಿಕ್ ಚರ್ಚ್ ಸೇರಿಕೊಂಡನು.

ಜೊನಾಥನ್ ಸ್ವಿಫ್ಟ್ (೧೬೬೭–೧೭೪೫)

ಪ್ರಾಯಃ ಆಂಗ್ಲಸಾಹಿತ್ಯದ ಶ್ರೇಷ್ಠ ವಿಡಂಬನಕಾರ. ಡಬ್ಲಿನ್‌ನಲ್ಲಿರುವ ಟ್ರಿನಿಟಿ ಕಾಲೇಜಿನಲ್ಲಿ ಅಧ್ಯಯನ. ೧೭೦೪ರಲ್ಲಿ ಪ್ರಕಾಶವಾದ ಇವನ 'Tale of a Tub' ಎಂಬುದು ಸಾಹಿತ್ಯದಲ್ಲಿ ಉನ್ನತ ಮಟ್ಟದ ವಿಡಂಬನಾತ್ಮಕ ಗ್ರಂಥ. ಪ್ರಾಚೀನ ಹಾಗೂ ಆಧುನಿಕ ಸಾಹಿತ್ಯದ ಪರಸ್ಪರ ಶ್ರೇಷ್ಠತೆಯ ವಿಶ್ಲೇಷಣೆಯನ್ನೊಳಗೊಂಡ ಇವನ 'Bathe of the Books' ಎಂಬುದು ಸುಂದರವಾದ ವಿಡಂಬನಾತ್ಮಕ ಗ್ರಂಥ. ಇವನ ಯಶಸ್ಸಿಗೆ ಕಾರಣವಾದುದು. 'Gulliver's Travels' ಎಂಬ ಗ್ರಂಥ ರಾಜಕಾರಣ ಮತ್ತು ರಾಜನೀತಿಜ್ಞರನ್ನು, ವಿಶೇಷವಾಗಿ ಮಾನವನ ವಿಶ್ಲೇಷಣಾತ್ಮಕವಾದ ವಿಷಯಗಳನ್ನು, ಕುರಿತ ಮರ್ಮಸ್ಪರ್ಶಿವಿಡಂಬನೆ. ರಾಕ್ಷಸರ ಹಾಗೂ ಕುಬ್ಜರ ಕಥೆಯ ರೂಪದಲ್ಲಿ ಈ ಗ್ರಂಥವು ಮಕ್ಕಳಿಗೆ ಸಂತೋಷವನ್ನುಂಟುಮಾಡುತ್ತಲಿದೆ. ಸ್ವಿಫ್ಟ್‌ನ ಚಾರಿತ್ರ್ಯವು ಮಲಿನಯುಕ್ತವಾದುದು. ಬಹು ಸ್ವಾಭಿಮಾನಿಯಾದುರಿಂದ ತನ್ನ ಯೌವನದಲ್ಲಿ ಭಾರಿ ಕಷ್ಟವನ್ನು ಅನುಭವಿಸಿದನು ದಾರಿದ್ರ್ಯದ ಅಪಮಾನದಿಂದ ಬೆಂದವನಾಗಿ ಜೀವನದ ಅಂತ್ಯದಲ್ಲಿ ಮಾನವದ್ವೇಷಿಯಾದನು.

ಅಲೆಕ್ಸಾಂಡರ್ ಪೋಪ್ (೧೬೬೭–೧೭೪೪)

ಹೆಸರಾದ ಕವಿಗಳಲ್ಲೊಬ್ಬ. ರೋಮನ್ ಕ್ಯಾಥೊಲಿಕ್ ಮತದ ಒಬ್ಬ ಬಟ್ಟೆ ವ್ಯಾಪಾರಿಯ ಮಗ. ಹನ್ನೆರಡನೆಯ ವಯಸ್ಸಿನಲ್ಲಿಯೇ ಕವನ ಬರೆಯಲಾರಂಭಿಸಿದ. ಷೇಕ್ಸ್‌ಪಿಯರ್ ಬಗ್ಗೆ ಮೊಟ್ಟಮೊದಲಿಗೇ ಬರೆಯಲಾರಂಭಿಸಿದವರಲ್ಲಿ ಇವನೊಬ್ಬ.

ವಿಲಿಯಂ ಕಾನ್‌ಗ್ರೀವ್ (೧೬೭೦–೧೭೨೯)

೧೭ನೆಯ ಶತಮಾನದಲ್ಲಿ ಅತ್ಯಂತ ಪ್ರಮುಖವಾದ ಆಂಗ್ಲ ನಾಟಕಕರ್ತೃ. ಇವನ 'Way of the World' ಎಂಬ ನಾಟಕವು ಬಹು ಸೊಗಸಾದುದು. ಬರ್ನಾರ್ಡ್ ಷಾನ ಶೈಲಿ ಹಾಗೂ ಹಾಸ್ಯವು ಕಾನ್‌ಗ್ರೀವ್‌ನ ಪ್ರಭಾವವನ್ನು ಅಭಿವ್ಯಕ್ತಿ ಗೊಳಿಸುತ್ತವೆ.

ವೋಲ್ಟೈರ್ (೧೬೯೪-೧೭೭೮)

ಫ್ರೆಂಚ್ ಭಾಷೆಯ ಸಾಹಿತಿ, ನಾಟಕಕಾರ ಹಾಗೂ ದಾರ್ಶನಿಕ. ಪ್ರಷ್ಯಾದೇಶದ ಫ್ರೆಡಿಕ್ ರಾಜನ ಆಶ್ರಯದಲ್ಲಿದ್ದನು. ಮತೀಯ ಹಾಗೂ ಇತರ ಎಲ್ಲಾ ವಿಧಗಳಾದ ಅಸಹಿಷ್ಣುಗಳನ್ನು ಎದುರಿಸಿದನು. ಫ್ರಾನ್ಸಿನ ದಂಗೆಗೆ ಬಹಳ ಪ್ರಭಾವವನ್ನು ಬೀರಿದನು. ಇವನ ಪ್ರಸಿದ್ಧವಾದ 'Candide' ಎಂಬ ಗ್ರಂಥವು ಅನೇಕ ಭಾಷೆಗಳಿಗೆ ಅನುವಾದವಾಗಿದೆ.

ವಿಲಿಯಂ ಬ್ಲೇಕ್ (೧೭೫೭-೧೮೨೭)

ಆಂಗ್ಲ ಕವಿ ಹಾಗೂ ಸಂತ. ಕೆತ್ತನೆ ಕೆಲಸ ಮಾಡುವವನಾಗಿ ತನ್ನ ಜೀವನವನ್ನು ಪ್ರಾರಂಭಿಸಿದನು. ಇವನ ಕೆತ್ತನೆ ಕೆಲಸಗಳು ಬಹು ಪ್ರಸಿದ್ಧ ಮತ್ತು ಪ್ರತಿಭಾನ್ವಿತವಾಗಿವೆ. ಕವಿ ಎಂಬ ಇವನ ಯಶಸ್ಸು ತನ್ನ ಬಾಲ್ಯಜೀವನವನ್ನುದ್ದೇಶಿಸಿ ರಚಿಸಿರುವ 'The Songs of Innocence' ಮತ್ತು 'The Songs of Experience' ಎಂಬ ಕಾವ್ಯಗಳನ್ನು ಅವಲಂಬಿಸಿದೆ.

ವಿಲಿಯಂ ವರ್ಡ್ಸ್‌ವರ್ತ್ (೧೭೭೦-೧೮೫೦)

ಇಂಗ್ಲೆಂಡಿನ ರಾಷ್ಟ್ರಕವಿ. ಪ್ರಕೃತಿಯ ವರ್ಣನೆಯಲ್ಲಿ ಹೆಸರಾದವನು.

ಅಬ್ಬೆ ಡೂಬ್ವಾ (೧೭೭೦-೧೮೪೮)

ಒಬ್ಬ ಫ್ರೆಂಚ್ ಕ್ರೈಸ್ತ ಪಾದ್ರಿ. ಮೂವತ್ತೊಂದು ವರ್ಷಗಳ ಕಾಲ ಇಂಡಿಯಾ ದಲ್ಲಿದ್ದು ಕ್ರೈಸ್ತ ಮತ ಪ್ರಚಾರ ಮಾಡಿದ. ಕೊನೆಗೆ ಪ್ಯಾರಿಸ್‌ನಲ್ಲಿ ಕಾಲವಾದ. ಪಾದ್ರಿಯ ಕೆಲಸದ ಜೊತೆಗೆ ಇಂಡಿಯಾದ ಜನಜೀವನವನ್ನು ಕುರಿತು "The Hindu Manners and Customs' ಎಂಬ ಅಪೂರ್ವ ಗ್ರಂಥ ರಚಿಸಿ ಬಿಟ್ಟುಹೋಗಿದ್ದಾನೆ. ಪಂಚತಂತ್ರ ಮತ್ತು ಗುರುಪರಮಾರ್ಥ ಎಂಬ ಗ್ರಂಥಗಳನ್ನು ಫ್ರೆಂಚ್ ಭಾಷೆಗೆ ತರ್ಜುಮೆ ಮಾಡಿದ್ದಾನೆ. ಶ್ರೀರಂಗಪಟ್ಟಣದಲ್ಲಿ ಅಬ್ಬೆಡೂಬ್ವಾ ಎಂದು ಒಂದು ಚರ್ಚು ಇದೆ.

ಸಾಮ್ಯುಯಲ್ ಟೇಲರ್ ಕೋಲರಿಡ್ಜ್ (೧೭೭೨-೧೮೩೪)

ಆಂಗ್ಲ ಸಾಹಿತ್ಯದಲ್ಲಿ ಅತ್ಯಂತ ಪ್ರತಿಭಾನ್ವಿತನಾದ ವ್ಯಕ್ತಿ. ಇವನು ಕವಿ, ನಾಟಕಕಕಾರ, ಸಾಹಿತ್ಯ ವಿಮರ್ಶಕ ಹಾಗೂ ದಾರ್ಶನಿಕ. ವರ್ಡ್ಸ್‌ವರ್ತ್ ಕವಿಯೊಡಗೂಡಿ ಇವನು ಭಾವಶೀಲ (Romantic) ಎಂಬ ಹೊಸದಾದ ಕವಿತಾಪದ್ಧತಿಯನ್ನು ಪ್ರಾರಂಭಿಸಿದನು. ಇವನಿಗೆ ಅಫೀಮು ತಿನ್ನುವ ಚಟವಿದ್ದಿತು. ಪ್ರಸಿದ್ಧನಾದ ಈ ಕವಿಯು ತನ್ನ ಅನೇಕ ಕವಿತೆಗಳನ್ನು ಅಪೂರ್ಣವಾಗಿ ರಚಿಸಿದ್ದಾನೆ. 'Rime of the Ancient Mariner' ಎಂಬುದು ಒಂದೇ ಇವನ ಪೂರ್ಣವಾದ ಕಾವ್ಯ. ಇವನ 'Kubla Khan' ಮತ್ತು 'Chirable' ಎಂಬ ಕಾವ್ಯಗಳು ಅವಶೇಷಮಾತ್ರಗಳಾಗಿವೆ.

ಜೇನ್ ಆಸ್ಟಿನ್ (೧೭೭೫–೧೮೧೭)

ಆಂಗ್ಲ ಸಾಹಿತ್ಯದ ಕಾದಂಬರಿಗಾರ್ತಿ ಚರ್ಚಿನ ಪಾದ್ರಿಯೋರ್ವನ ಮಗಳು. ಆಂಗ್ಲ ಸಾಹಿತ್ಯದ ಪ್ರತಿಭಾವಂತ ಕಾದಂಬರಿಕಾರರಲ್ಲಿ ಅನ್ಯತಮಳು. ಯಾವ ಘಟನೆಗಳಿಲ್ಲದ ಜೀವನ ನಡೆಸಿದವಳು. ಆರು ಕಾದಂಬರಿಗಳನ್ನು ರಚಿಸಿರುತ್ತಾಳೆ. ಪ್ರತಿಯೊಂದು ಅದ್ವಿತೀಯವಾದುದು. Pride and Prejudice' (೧೮೧೬), Sense and Sensibility' (೧೮೧೪), 'Mansfied Park' (೧೮೧೪), 'Emma' (೧೮೧೬) – ಈ ಕಾದಂಬರಿಗಳು ಇವಳ ಜೀವಿತ ಕಾಲದಲ್ಲಿಯೇ ಅಜ್ಞಾತವಾಗಿ ಪ್ರಕಟವಾದವು. ಮಧ್ಯಮ ಹಾಗೂ ಉತ್ತಮವರ್ಗದ ಮಹಿಳೆಯರ ನಿತ್ಯದ ಜೀವನದಲ್ಲಿನ ಸೂಕ್ಷ್ಮವಾದ ಹಾಗೂ ಕೋಮಲವಾದ ಭಾವನೆಗಳನ್ನು ವಿಶ್ಲೇಷಿಸುವ ಪಾತ್ರವನ್ನು ಚಿತ್ರಿಸುವುದರಲ್ಲಿ ಅಸ್ಟಿನ್‌ಳದು ಸಿದ್ಧಹಸ್ತ. ಹೃದಯವೈಶಾಲ್ಯ ಪ್ರಧಾನ ವಾಗಿದ್ದರೂ, ದೃಢವಾದ ಹಾಗೂ ಉಚಿತವಾದ ವಿಡಂಬನೆಯಿಂದ ಕೂಡಿರುವುದೇ ಈಕೆಯ ಜೀವನದ ದೃಷ್ಟಿಕೋನ.

ಥಾಮಸ್ ಕಾರ್‌ಲೈಲ್ (೧೭೮೫–೧೮೮೧)

ಸ್ಕಾಟ್ಲೆಂಡಿನ ಇತಿಹಾಸಜ್ಞ, ಸಾಹಿತ್ಯ ವಿಮರ್ಶಕ ಹಾಗೂ ಪ್ರಬಂಧಕಾರ. ೧೯ನೆಯ ಶತಮಾನದ ತತ್ವಜ್ಞಾನಿಗಳು ಹಾಗೂ ಸಾಹಿತಿಗಳ ಮೇಲೆ ಇವನ ಪ್ರಭಾವವು ಬಹಳವಾಗಿದ್ದಿತು. `Sartor Resartes' ಮತ್ತು 'The French Revolution' ಎಂಬ ಎರಡು ಗ್ರಂಥಗಳು ಇವನ ಅತ್ಯಂತ ಪ್ರಸಿದ್ಧವಾದ ರಚನೆಗಳು.

ಲುಯಿಜ್ ಸಿ.ಜಿ. (೧೮೦೬–೧೮೬೩)

ಈಟನ್ ಮತ್ತು ಕ್ರೈಸ್ತ ಚರ್ಚುಗಳಲ್ಲಿ ವಿದ್ಯಾಭ್ಯಾಸ. 'ಎಡಿನ್‌ಬರೊ ರೆವ್ಯೂ' ಪತ್ರಿಕೆಯ ಸಂಪಾದಕ. ಹಲವಾರು ಗ್ರಂಥಗಳ ಕರ್ತೃ. ಛಾನ್ಸೆಲರ್ ಆಫ್ ಎಕ್ಸೆಚೆಕರ್ ಮತ್ತು ಹೋಮ್ ಸೆಕ್ರೆಟರಿ ಆಗಿದ್ದ.

ಟೆನ್ನಿಸನ್ (೧೮೦೯–೧೮೯೨)

ಸುಪ್ರಸಿದ್ಧ ಕವಿ ಮತ್ತು ನಾಟಕಕಾರ. 'Lotus Eaters', 'Ulysses' ಮತ್ತು Mort D'Arthur' ಇವು ಇವನ ಸುಪ್ರಸಿದ್ಧ ಕೃತಿಗಳು.

ಬಿಷಪ್ ಮಗೀ (೧೮೨೧–೧೮೯೧)

ಓರ್ವ ಪ್ರಸಿದ್ಧನಾದ ಆಂಗ್ಲ ವ್ಯಕ್ತಿ. ಅನೇಕ ವರ್ಷಗಳು ಪೀಟರ್‌ಬರೋದಲ್ಲಿ ಬಿಷಪ್ ಆಗಿದ್ದನು. ಅನಂತರ, ಮರಣಕ್ಕೆ ಮುಂಚೆ ಯಾರ್ಕಿನ ಆರ್ಚ್‌ಬಿಷಪ್ ಆಗಿದ್ದನು. ಇವನು ಪ್ರಸಿದ್ಧನಾದ ವಾಗ್ಮಿ ಹಾಗೂ ಇಂಗ್ಲೆಂಡಿನ ಶ್ರೀಮಂತ ಸಭೆಯ (House of Lords) ಪ್ರಮುಖ ಸದಸ್ಯನಾಗಿದ್ದ.

ಮ್ಯಾಥ್ಯೂ ಆರ್ನಾಲ್ಡ್ (೧೮೨೨–೧೮೮೮)

ಪ್ರಸಿದ್ಧ ಆಂಗ್ಲಕವಿ ಹಾಗೂ ಸಾಹಿತ್ಯ ವಿಮರ್ಶಕ. ರಗ್ಬೀ ಸ್ಕೂಲಿನ ಖ್ಯಾತ ಮುಖ್ಯೋಪಾಧ್ಯಾಯನಾಗಿದ್ದ ಡಾ॥ ಅರ್ನಾಲ್ಡ್‌ನ ಪುತ್ರ. 'Culture and Anarchy', 'Essays in Criticism' ಮತ್ತು ಅನೇಕ ಕೃತಿಗಳನ್ನು ರಚಿಸಿರುತ್ತಾನೆ.

ಅನಿಬೆಸೆಂಟ್ (೧೮೪೭–೧೯೩೩)

ಭಾರತದಲ್ಲೇ ನೆಲಸಿದ್ದ ಆಂಗ್ಲ ಮಹಿಳೆ. ಭಾರತದಲ್ಲಿ `Theosophical Society' ಎಂಬ ಸಂಘವನ್ನು ಸ್ಥಾಪಿಸಿರುತ್ತಾಳೆ. ಭಾರತದ ಸ್ವಾತಂತ್ರ್ಯ ಸಮರದಲ್ಲಿ ಪ್ರಮುಖ ಪಾತ್ರ ವಹಿಸಿ ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷ ಪದವಿಯನ್ನು ೧೯೧೮ರಲ್ಲಿ ಅಲಂಕರಿಸಿದ್ದಳು. ಥಿಯಾಸಫಿಯ ವಿಷಯವಾಗಿಯೂ ಮತ್ತು ಭಾರತದ ವಿಷಯವಾಗಿಯೂ ಅನೇಕ ಗ್ರಂಥಗಳನ್ನು ಬರೆದಿರುತ್ತಾಳೆ.

ರಿಚರ್ಡ್ ಜೆಫ್ರೀಸ್ (೧೮೪೮–೧೮೮೭)

ರೈತರ ಮಗ. ಪ್ರಕೃತಿಯನ್ನು ಸೂಕ್ಷ್ಮವಾಗಿ ಕಾಣಬಲ್ಲ ಅಪೂರ್ವ ಶಕ್ತಿವಂತ ಕವಿ ಮತ್ತು ತತ್ವಶಾಸ್ತ್ರಜ್ಞ.

ಬ್ರೆಡ್ಲಿ ಎ.ಸಿ. (೧೮೫೧–೧೯೩೫)

ಸಾಹಿತ್ಯ ವಿಮರ್ಶಕ. ಷೇಕ್ಸ್‌ಪಿಯರ್ ಬಗ್ಗೆ ಬಹಳ ಬರೆದಿದ್ದಾನೆ. 'Shakes perean Tragedy' ಮತ್ತು 'Oxford Lectures on Poetry' – ಇವನ ಮುಖ್ಯ ಗ್ರಂಥಗಳು.

ಸ್ಟಿನ್‌ಬರ್ನ್ (೧೮೬೫–೧೯೩೯)

ಕವಿ ಮತ್ತು ನಾಟಕಕಾರ, ಡಬ್ಲಿನ್‌ನಲ್ಲಿ ಜನ್ಮ. ೨೧ನೆಯ ವಯಸ್ಸಿನಲ್ಲಿಯೇ ಸಾಹಿತ್ಯಕ್ಷೇತ್ರ ಪ್ರವೇಶ.

ಲಾರೆನ್ಸ್ ಹೌಸ್‌ಮನ್ (೧೮೬೫)

ಆಂಗ್ಲ ಸಾಹಿತಿ ಮತ್ತು ಕಲಾಕಾರ. ಇವನು ಸಮೃದ್ಧವಾದ ಲೇಖಕನಾಗಿರುತ್ತಾನೆ 'An Englishman's Love-Letters' ಎಂಬುದು ಇವನ ಅತ್ಯಂತ ಪ್ರಸಿದ್ಧವಾದ ರಚನೆ.

ರೊಮೈನ್ ರೊಲೆಂಡ್ (೧೮೬೬–೧೯೪೪)

ಫ್ರೆಂಚ್ ಇತಿಹಾಸಕಾರ ಮತ್ತು ಸಂಗೀತ ವಿಮರ್ಶಕ. ಕಾದಂಬರಿ, ಆತ್ಮಚರಿತ್ರೆ ಮತ್ತು ನಾಟಕಗಳ ಕರ್ತೃ. ಇಂಡಿಯಾದ ಮತಧರ್ಮದ ಬಗ್ಗೆಯೂ ಗ್ರಂಥಗಳನ್ನು ಬರೆದಿದ್ದಾರೆ. ಗಾಂಧೀಜಿ ಬಗ್ಗೆ ತುಂಬಾ ಪ್ರೀತಿ ವಿಶ್ವಾಸ ಇಟ್ಟುಕೊಂಡವರು.

ಜಾನ್ ಗಾಲ್ಸ್‌ವರ್ದಿ (೧೮೬೭–೧೯೩೩)

ಆಂಗ್ಲ ನಾಟಕಕಾರ ಹಾಗೂ ಪ್ರಬಂಧಕಾರ. ಇವನ ನಾಟಕಗಳು ಬಹುವಾಗಿ ಸಾಮಾಜಿಕ ವಿಷಯಗಳನ್ನು ಅವಲಂಬಿಸಿವೆ, `The Silver Box' ಮತ್ತು `The Strife' ಎಂಬುವು ಇವನ ಬಹು ಜನಪ್ರಿಯವಾದ ನಾಟಕಗಳು. ಇವನ `Forsyte-Saga' ಪ್ರಬಂಧಗಳು ಆಂಗ್ಲ ಕಾದಂಬರಿ ಸಾಹಿತ್ಯದ ಇತಿಹಾಸದಲ್ಲಿ ಇವನಿಗೆ ಶಾಶ್ವತವಾದ ಸ್ಥಾನವನ್ನು ಕಲ್ಪಿಸಿಕೊಟ್ಟಿವೆ. ಸಾಮಾಜಿಕ ಸಮಸ್ಯೆಗಳಿಂದ ಕೂಡಿದ ನಾಟಕಗಳಲ್ಲಿ ಇವನು ದೋಷಗಳ ವಿಶ್ಲೇಷಣೆಯನ್ನು ಮಾಡುತ್ತಾನೆ. ಆದರೆ ಪರಿಹಾರವನ್ನು ಸೂಚಿಸುವುದಿಲ್ಲ.

ಫ್ರಾನ್ಸಿಸ್ ಯಂಗ್‌ಹಸ್ಬೆಂಡ್ (೧೮೬೩).

ಬ್ರಿಟನ್ನಿನ ಓರ್ವ ಸೈನಿಕ ಹಾಗೂ ಪರಿಶೋಧಕ (Explorer). ಇವನು ಕಾಶ್ಮೀರದಿಂದ ಚೀನಾದವರೆಗೆ ಇರುವ ಹಿಮಾಲಯ ಪರ್ವತಶ್ರೇಣಿಯನ್ನು ಶೋಧಿಸಿದನು. ಮತ್ತು ೧೯೦೨ರಲ್ಲಿ ಟಿಬೆಟ್ಟಿಗೆ ಹೋಗಿದ್ದ ಆಂಗ್ಲರ ನಿಯೋಗದ ಜೊತೆಯಲ್ಲಿದ್ದನು. ೧೯೨೭ರಲ್ಲಿ ಪ್ರಕಟಿತವಾದ 'Epic of Mount Everest' ಎಂಬುದು ಇವನ ವಿಖ್ಯಾತವಾದ ಗ್ರಂಥ.

ಸರ್ ಜಾರ್ಜ್ ಗಾರ್ಡನ್

ಇವನಿಗೆ ಚೀನೀ ಗಾರ್ಡನ್ ಎಂದೂ ಹೆಸರು. ರಾಯಲ್ ಇಂಜಿನಿಯರ್ಸ್ ಅಧಿಕಾರಿ. ೧೮೬೩–೬೪ರಲ್ಲಿ ನಡೆದ ದಂಗೆಯ ಕಾಲದಲ್ಲಿ ಚೀನೀ ಸೇನೆಯ ನಾಯಕತ್ವ ವಹಿಸಿದ್ದವನು, ಸೂಡಾನಿನ ಗೌರ್‍ನರ್ ಜನರಲ್ ಸಹ ಆಗಿದ್ದನು.

ಬೋಜ್‌ವೆಲ್ ಜೇಮ್ಸ್

ಎಡಿನ್‌ಬರೋದಲ್ಲಿ ಜನ್ಮ, ಒಬ್ಬ ನ್ಯಾಯಾಧೀಶನ ಮಗ. ಲಾ ಓದಿದರೂ ಸಾಹಿತ್ಯ ಕ್ಷೇತ್ರದಲ್ಲಿ ವ್ಯವಸಾಯ ಮಾಡಿದವ. ಸ್ಯಾಮುಯೆಲ್ ಜಾನ್ಸನನ ಪರಿಚಯ ಪಡೆದು ಅವನ ಜೀವನದ ಚರಿತ್ರೆ ಬರೆದವನು. ಅಷ್ಟು ಅತ್ಯುತ್ತಮವಾದ ಜೀವನ ಚರಿತ್ರೆ ಯಾವ ಭಾಷೆಯಲ್ಲಿಯೂ ಇಲ್ಲವಂತೆ.

ಲಾರೆನ್ಸ್ ಡಿ. ಎಚ್. (೧೮೮೫–೧೯೩೦)

ಇಂಗ್ಲಿಷ್ ಸಾಹಿತ್ಯದಲ್ಲಿ ಹೆಸರಾದ ಕವಿ ಮತ್ತು ವಿಮರ್ಶಕ. ಷೇಕ್ಸ್‌ಪಿಯರ್ ಬಗ್ಗೆ ಬರೆದು ಹೆಸರಾದವನು.

ಜಾನ್ ಇಂಗಲ್‌ಸೆಂಟ್

ಇದೊಂದು ಇತಿಹಾಸಿಕ ಕಾದಂಬರಿ. ಪ್ರಕಟಣೆ ೧೮೮೧ರಲ್ಲಿ.

ರಡ್‌ಯಾರ್ಡ್ ಕಿಪ್ಲಿಂಗ್ (೧೮೬೫-೧೯೩೬)

ಆಂಗ್ಲ ಪ್ರಬಂಧಕಾರ ಹಾಗೂ ಕವಿ. ಬೊಂಬಾಯಿಯಲ್ಲಿ ಜನಿಸಿ, ತನ್ನ ಜೀವನದ ಉತ್ತಮ ಭಾಗವನ್ನು ಭಾರತದಲ್ಲೇ ಕಳೆದನು. ಇವನ ಗದ್ಯ ಹಾಗೂ ಪದ್ಯಗಳು ಸಾಮಾನ್ಯವಾಗಿ ಅಧಿಕಾರಿಶಾಹೀ ಪ್ರವೃತ್ತಿಯನ್ನು ಪ್ರತಿಧ್ವನಿಸುತ್ತವೆ. ಇವನ ಗ್ರಂಥಗಳು ಭಾರತೀಯರ ವಿಷಯದಲ್ಲಿ ಅವನಿಗಿದ್ದ ಸೂಕ್ಷ್ಮವಾದ ತಿಳುವಳಿಕೆಯನ್ನು ಸೂಚಿಸುತ್ತವೆ. 'Kim' ಮತ್ತು 'Barrack Room Ballads' ಇವು ಇವನ ಬಹು ಜನಪ್ರಿಯವಾದ ಗ್ರಂಥಗಳು.

ಪಿ.ಜಿ. ವೋಡ್‌ಹೌಸ್ (೧೮೮೧)

ಆಂಗ್ಲಭಾಷೆಯಲ್ಲಿನ ಹಾಸ್ಯಗಾರ ಮತ್ತು ನಾಟಕಕರ್ತೃ. ಇವನ ಅನೇಕ ಕಾದಂಬರಿಗಳಲ್ಲಿ ಬರುವ ಅಮರನಾದ ಜೀವ್ಸ್ ಎಂಬ ಪಾತ್ರವನ್ನು ಸೃಷ್ಟಿಸಿದವನು. ಇವನ ಪ್ರಮುಖವಾದ ರಚನೆಗಳಲ್ಲಿ 'Damzel in Distress', 'Picadilly Jim', 'The Inimitable Jeeves' ಮತ್ತು 'Right Ho Jeeves' ಎಂಬುವು ಸುಂದರವಾದವು. ಎರಡನೇ ಮಹಾಯುದ್ಧದ ನಂತರ ಯುದ್ಧದಲ್ಲಿ ಹಿಟ್ಲರನಿಗೆ ಸಹಾಯಮಾಡುವುದರಲ್ಲಿ ಪ್ರಮುಖ ಪಾತ್ರವಹಿಸಿದನೆಂಬುದಾಗಿ ಈತ ಬಹಳ ಕಷ್ಟದಲ್ಲಿ ಬಿದ್ದನು.

ರುಪರ್ಟ್ ಬ್ರೂಕ್ (೧೮೮೭-೧೯೧೫)

ರಗ್ಬಿ ಮಾಸ್ತರರೊಬ್ಬರ ಮಗ. ರಗ್ಬಿ ಶಾಲೆಯಲ್ಲಿ ಮತ್ತು ಕೇಂಬ್ರಿಡ್ಜ್‌ನ ಕಿಂಗ್ಸ್‌ಕಾಲೇಜಿನಲ್ಲಿ ಅಭ್ಯಾಸ. ಹೆಸರಾದ ಕವಿ. ಮೊಟ್ಟಮೊದಲನೆಯ ಕವನ ಸಂಗ್ರಹ ೧೯೧೧ರಲ್ಲಿ ಪ್ರಕಟಣೆ.

ಜಿ.ಕೆ. ಚೆಸ್ಟರ್‌ಟನ್ (೧೮೭೪)

ಆಂಗ್ಲಭಾಷೆಯಲ್ಲಿನ ವಿಮರ್ಶಕ ಹಾಗೂ ಪ್ರಬಂಧಕಾರ. ವಿರೋಧಾಭಾಸದ (paradox) ಸೂಚನೆ ಹಾಗೂ ವ್ಯಂಗ್ಯಗಳಿಂದ ತುಂಬಿದ ಇವನ ಗ್ರಂಥಗಳು ವ್ಯಾಪಕವಾದ ಇವನ ಪ್ರತಿಭೆಯನ್ನು ಅಭಿವ್ಯಕ್ತಗೊಳಿಸುತ್ತವೆ.

ಜೇಮ್ಸ್ ಎಲ್ ರಾಯ್ ಫ್ಲೆಕರ್ (೧೮೮೪-೧೯೧೫)

ಆಂಗ್ಲಕವಿ ಹಾಗೂ ನಾಟಕಕರ್ತೃ. ವೈಯಕ್ತಿಕ ಪ್ರವೃತ್ತಿ ಹಾಗೂ ಶ್ರೇಷ್ಠಮಟ್ಟದ ಪ್ರತಿಭೆಯನ್ನು ಹೊಂದಿದ್ದ ಕವಿ. ಕ್ರಿ.ಶ. ೧೯೨೩ರಲ್ಲಿ ಇವನು ತನ್ನ ಅತ್ಯಂತ ಶ್ರೇಷ್ಠವಾದ 'Hassan' ಎಂಬ ನಾಟಕವನ್ನು ರಚಿಸಿರುತ್ತಾರೆ.

ಆಸ್ಕರ್ ವೈಲ್ಡ್ (೧೮೫೬-೧೯೦೦)

ಕವಿ, ನಾಟಕಕಾರ ಹಾಗೂ ಹಾಸ್ಯಗಾರ. ಸೌಂದರ್ಯೋಪಾಸನೆಯ ವಿಷಯದಲ್ಲಿ

ಆಧುನಿಕ ತತ್ವ ಪ್ರತಿಪಾದಕರಲ್ಲಿ ಒಬ್ಬ. 'ಕಲೆಗಾಗಿ ಕಲೆ' ಎಂಬ ತತ್ವವನ್ನು ಅಂಗೀಕರಿಸಿದವನು. 'A Picture of the Dorion Grey', 'Lady Windermim Fan', 'A Woman of No Importance' ಹಾಗೂ 'The Importance of Being Earnest'– ಇವುಗಳನ್ನೊಳಗೊಂಡ ಅನೇಕ ನಾಟಕಗಳು ಇವನ ಕೃತಿಗಳಲ್ಲಿ ಕೆಲವು. ಅದ್ಭುತವಾದ ಶಕ್ತಿ ಮತ್ತು ಪ್ರತಿಭೆಯಿಂದ ಕೂಡಿದ್ದ ಆಸ್ಕರ್ ವೈಲ್ಡ್‌ನ ಅಂತಿಮ ಜೀವನವು ದುಃಖಮಯವಾಗಿದ್ದಿತು. ಅನೈತಿಕ ನಡವಳಿಕೆಗಾಗಿ ಅಪಾದಿತನಾಗಿ ಜೈಲಿಗೆ ಹೋದಾಗ ಅಲ್ಲಿ ಅವನು ತನ್ನ ದುರ್ನಡತೆಗಾಗಿ ಪಶ್ಚಾತ್ತಾಪಟ್ಟು. De Profundis' ಎಂಬ ಗ್ರಂಥದಲ್ಲಿ ತನ್ನ ಜೀವನದ ನೈಜ ಸಂಗತಿಯನ್ನು ಕೊಟ್ಟಿರುತ್ತಾನೆ.

ಅಲೆಕ್ಸಾಂಡರ್ ವುಲ್‌ಕೋಲ್ಟ್ (೧೮೮೭–೧೯೪೩)

ಅಮೇರಿಕಾ ದೇಶದ ನಾಟಕ ಮತ್ತು ಸಾಹಿತ್ಯ ವಿಮರ್ಶಕ ಹಾಗೂ ಪ್ರಬಂಧಕಾರ. ತನ್ನ ಜೀವಿತದ ಬಹು ಸಮಯವನ್ನು ನ್ಯೂಯಾರ್ಕಿನಲ್ಲಿ ಕಳೆದಿರುತ್ತಾನೆ. 'Mr. Dickens goes to Play' ಮತ್ತು 'While Rome Burns' ಇವೆರಡು ಇವನ ಪ್ರಸಿದ್ಧವಾದ ಗ್ರಂಥಗಳು. ಇವನ ಚಾರಿತ್ರ್ಯವನ್ನು ಆಧಾರವಾಗಿಟ್ಟುಕೊಂಡು ಮಾಸ್‌ಹಾರ್ಟ್ ಮತ್ತು ಕಾಫ್‌ಮನ್ ಇವರು ರಚಿಸಿರುವ 'The Man who came to Winner' ಎಂಬುದು ಸುಂದರವಾದ ನಾಟಕ.

ಎಲಿಯಟ್ ಟಿ.ಎಸ್. (೧೮೮೭–೧೯೬೫)

ಅಮೇರಿಕಾದಲ್ಲಿ ಜನ್ಮ. ಕವಿ ಮತ್ತು ಲೇಖಕ. 'Waste Land ' ಮತ್ತು 'Murder in the Cathedral'- ಇವು ಇವನ ಪ್ರಮುಖ ಗ್ರಂಥಗಳು.

ಸರ್ ವೋಲ್ಟರ್ ರೊಲೇ (೧೮೬೧–೧೯೨೨)

೧೯೦೪ರಿಂದ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಸಾಹಿತ್ಯದ ಪ್ರೊಫೆಸರ್. ಮಿಲ್ಟನ್, ವರ್ಡ್ಸ್‌ವರ್ತ್, ಷೇಕ್ಸ್‌ಪಿಯರ್ ಬಗ್ಗೆ ಬರೆದಿದ್ದಾನೆ.

ಎಜ್ರಾ ಪಾಂಡ್ (೧೮೮೫)

ಅಮೇರಿಕಾ ದೇಶದ ಕವಿ ಹಾಗೂ ಸಾಹಿತ್ಯ ವಿಮರ್ಶಕ ಆಂಗ್ಲ ಕಾವ್ಯ ಸಾಹಿತ್ಯದಲ್ಲಿ ೨೦ನೆಯ ಶತಮಾನದ ಎಲ್ಲಾ ಆಂಗ್ಲ ಕವಿಗಳ ಮೇಲೆ ಇವನ ಪ್ರಭಾವವೂ ಬಹು ಪ್ರಖರವಾಗಿರುತ್ತದೆ. ಆಂಗ್ಲ ಕಾವ್ಯ ಸಾಹಿತ್ಯದ ಬಹು ಪ್ರಸಿದ್ಧವಾದ ಟಿ.ಎಸ್. ಈಲಿಯಟ್ ಇವನ ಶಿಷ್ಯನಾಗಿದ್ದಾಗಲೇ ತನ್ನ ಸಾಹಿತ್ಯ ವ್ಯವಸಾಯವನ್ನು ಆರಂಭಿಸಿದನು. ಇವನು ಬಹಳ ಯಾತ್ರೆಗಳನ್ನು ಮಾಡಿರುತ್ತಾನೆ. ಹಾಗೂ ವ್ಯಾಪಕವಾಗಿ ಅನೇಕ ವಿಷಯಗಳ ಮೇಲೆ ಬರೆದಿರುತ್ತಾನೆ. 'Cantos' ಎಂಬುದು ಇವನ ಅತ್ಯಂತ ಪ್ರೌಢವಾದ ಗ್ರಂಥ. ಸಾಹಿತ್ಯ ವಿಮರ್ಶಕನಾಗಿಯೂ ಇವನ ಪ್ರಭಾವವು ಬಹಳವಾಗಿದೆ.

ಎರಡನೇ ಮಹಾಯುದ್ಧದ ಸಮಯದಲ್ಲಿ ಇಟಲಿಯಲ್ಲಿದ್ದು ಮುಸೊಲಿನಿಗೆ ಸಹಾಯಮಾಡುವುದರಲ್ಲಿ ತೊಡಗಿದ್ದನು. ಮತ್ತು ಆಂಗ್ಲ– ಅಮೇರಿಕನ್ನರ ಶಕ್ತಿಯನ್ನು ಖಂಡಿಸುತ್ತಿದ್ದನು. ಯುದ್ಧದ ನಂತರ ಇವನನ್ನು ಬಂಧನದಲ್ಲಿಟ್ಟರು. ಮನಶ್ಶಾಸ್ತ್ರಜ್ಞರು ಇವನನ್ನು ಪರೀಕ್ಷಿಸಿ ಬುದ್ಧಿ ವಿಕಲ್ಪವಾಗಿದೆಯೆಂದು ತೀರ್ಮಾನಿಸಿ, ಹುಚ್ಚರ ಆಸ್ಪತ್ರೆಗೆ ಸೇರಿಸಿದ್ದರು. ಆದರೆ ಈಚೆಗೆ ಇವನನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಿದರು. ಈಗ ಇಟಲಿಯಲ್ಲಿ ವಾಸವಾಗಿದ್ದಾನೆ.

ಡಾ॥ ಆರ್ನಾಲ್ಡ್ ಟಾಯನೆಬಿ

ಇಂಗ್ಲೆಂಡ್ ದೇಶದ ಪ್ರಸಿದ್ಧ ಇತಿಹಾಸಜ್ಞರಲ್ಲಿ ಅನ್ಯತಮ. 'Royal Institute of International Affairs and Research' ಎಂಬ ಸಂಸ್ಥೆಯ Director ಸ್ಥಾನದಲ್ಲಿದ್ದರು. ಲಂಡನ್ ವಿಶ್ವವಿದ್ಯಾನಿಲಯದಲ್ಲಿ ಅಂತರರಾಷ್ಟ್ರೀಯ ಇತಿಹಾಸದ ಪ್ರಾಧ್ಯಾಪಕರಾಗಿದ್ದರು. 'A Study of History' ಎಂಬುದು ಇವರ ಅದ್ಭುತವಾದ ಗ್ರಂಥ. ಇದು ಇತಿಹಾಸದ ಅಧ್ಯಯನಕ್ಕೆ ನೂತನವಾದ ದೃಷ್ಟಿಯನ್ನು ಕೊಡುತ್ತದೆ.

ಫಾದರ್ ಹೆರಾಜ್

ಇಂಡಿಯಾದಲ್ಲಿ ತುಂಬಾ ಕೆಲಸ ಮಾಡಿ ಹೆಸರಾದ ಭೂಗರ್ಭಶಾಸ್ತ್ರಜ್ಞ.

ಬಾಕ್ಸರ್ಸ್

ಸುಮಾರು ಕ್ರಿ.ಶ. ೧೯೦೦ ರಲ್ಲಿ ಚೀನಾದೇಶದಲ್ಲಿದ್ದ ಸಂಘವೊಂದರ ಹೆಸರು. ವಿದೇಶೀಯರನ್ನು ದೇಶದಿಂದ ಹೊರಗಟ್ಟುವುದೇ ಆ ಸಂಘದ ಮುಖ್ಯ ಧ್ಯೇಯವಾಗಿತ್ತು.

ಗೊಂಡರು (ಒಂದು ಟಿಪ್ಪಣಿ)

ಗೊಂಡರ ಸಂಖ್ಯೆ ಇಡೀ ಇಂಡಿಯಾದಲ್ಲಿ ಸುಮಾರು ಇಪ್ಪತ್ತು ಲಕ್ಷ. ಇವರು ಹೆಚ್ಚಾಗಿ ಇರುವುದು ಆಂಧ್ರಪ್ರದೇಶ, ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರಗಳಲ್ಲಿ. ಉತ್ತರ ಕರ್ನಾಟಕದಲ್ಲಿಯೂ ಅಲ್ಲಲ್ಲಿ ಗೊಂಡರೆಂಬ ಜಾತಿಯ ಜನರು ಇದ್ದಾರೆಂದು ತಿಳಿದುಬಂದಿದೆ.

ಜನರಲ್ ಕನ್ನಿಂಗ್ ಹಾಂ ಅವರು 'ಗೊಂಡ' ಎಂಬ ಪದ 'ಗೌಡ' ಎಂಬ ಪದದಿಂದ ಬಂದಿರಬಹುದೆಂದು ಊಹಿಸುತ್ತಾರೆ. (District Gazetteer of Jabalpur, ೧೯೬೭). ಗೊಂಡರು ಆಡುವ ಗೊಂಡಿ ಭಾಷೆಯು ಕನ್ನಡ ಮತ್ತು ತಮಿಳು ಭಾಷೆಗಳ ಮಿಶ್ರಣವೆಂದು ಎಲ್ವಿನರೇ ಹೇಳಿದ್ದಾರೆ. ಇವರ ಮಾತನ್ನು ಸಮರ್ಥಿಸುವ ಇನ್ನೊಂದು ವಿಷಯವಿದೆ. ಮಹಾರಾಷ್ಟ್ರದ ಯುಂಯತಮಲ್ ಜಿಲ್ಲೆಯಲ್ಲಿರುವ ಗೊಂಡರ ಒಳ ಜಾತಿಗೆ ಸೇರಿದ 'ಕೋಲಂ' ಎಂಬ ಜನರ ಭಾಷೆ, ಗೊಂಡಿ ಭಾಷೆಯಂತೆ ಕನ್ನಡ, ತಮಿಳು ಮತ್ತು ತೆಲುಗು ಭಾಷೆಗಳಿಗೆ ಹತ್ತಿರವೆಂದೂ, ಕೆಲವು ವಿಷಯಗಳಲ್ಲಿ ನೀಲಗಿರಿಯ ತೋಡರ ಭಾಷೆಯಂತೆ ಇರುವುದೆಂದೂ ಹೇಳಲಾಗಿದೆ. (**Maharastra State Gazetter,** ೧೯೬೮)

ಇನ್ನು ಗೊಂಡರಲ್ಲಿರುವ ಕೆಲವು ಸಂಪ್ರದಾಯಗಳನ್ನು ಗಮನಿಸಿದರೆ ಅವು ನಮ್ಮ ಸಂಪ್ರದಾಯಗಳಂತೆ ಇರುವುದನ್ನು ಗಮನಿಸಬಹುದು. ಹೆರಿಗೆಯಾದಾಗ ಕೂಸಿನ ಮೇಲಿನ ಮಾಸನ್ನು ನಮ್ಮಲ್ಲಿರುವಂತೆ ಒಂದು ಗುಂಡಿ ತೋಡಿ ಹೂಳುವುದು ಗೊಂಡರಲ್ಲಿ ಇದೆ. ಈ ಮಾಸನ್ನು ಗೊಂಡಿ ಭಾಷೆಯಲ್ಲಿ 'ಮೊತ್ತನ್ ಮಿಸ್ಸಾ' ಎಂದು ಕರೆಯುತ್ತಾರಂತೆ. (ಮಿಸ್ಸಾ–ಮಾಸು) ಗೊಂಡರ ಮದುವೆಯಲ್ಲಿ ನಮ್ಮಂತೆಯೇ ಹಸೆ ಬರೆದು ಅದರ ಮೇಲೆ ಹೆಣ್ಣನ್ನು ಕುಳ್ಳಿರಿಸುವುದು, ಆಕೆಯ ಮುಂದೆ ನೀರು ತುಂಬಿದ 'ಕಳಸ್' (ಕಳಸ) ಇಡುವುದು, ಗಂಡು ತನ್ನ ಊರಿನಿಂದ ನೆರೆಹೊರಟು ಹೆಣ್ಣಿನ ಊರಿಗೆ ಬಂದಾಗ ಊರ ಹೊರಗಡೆ ನಿಲ್ಲಿಸಿ ಗಂಡಿನ ಕಡೆಯವರ ಕೈಕಾಲು ತೊಳೆದು ಊರಿನ ಒಳಕ್ಕೆ ಕರೆದುತಂದು 'ಜನವಾಸ' ಎಂಬಲ್ಲಿ ಬಿಡಾರ ಹೂಡಿಸುವುದು ಇತ್ಯಾದಿ ಪದ್ಧತಿಗಳನ್ನು ಗಮನಿಸಬಹುದು.

ಗೊಂಡರಲ್ಲಿ ಆರು ಒಳಜಾತಿಗಳಿವೆ : ೧) ರಾಜಗೊಂಡರು ಅಥವಾ ಗೊಂಡರು, ೨) ಪರಧಾನರು (ಪ್ರಧಾನರು), ೩) ತೋಟಿ, ೪) ದಧ್ವೇ, ೫) ಗೋವರಿ ಮತ್ತು ೬) ಕೋಲಂ. ರಾಜಗೊಂಡರೇ ಉಳಿದವರಿಗಿಂತ ಹೆಚ್ಚಿನವರು. ಪರಧಾನರು ನಮ್ಮ ಹೆಳವರಂತೆ ರಾಜಗೊಂಡರ ವಂಶಾವಳಿ ಹೇಳಿಕೊಂಡು ಹಾಡುತ್ತಾರೆ. ಆದರೆ ಅವರ ವಾದ್ಯ ಗಂಟೆಯಲ್ಲ, ಕಿಂಜರಿ. ಇನ್ನೊಂದು

ಸಂಗತಿಯೆಂದರೆ, ತೋಟಿಗಳು ಪರಧಾನರ ವಂಶಾವಳಿಯನ್ನು ಹೇಳುವ ವಿಷಯ. (The Castes and Tribes of H.E.H. the Nizam's Dominions by Syed Sirajul Hasan) ಇದು ನಮ್ಮಲ್ಲಿಯೂ ಉಂಟೆ? ಉಂಟು. ಈಗಲೂ ಹಾಸನ ಜಿಲ್ಲೆಯಲ್ಲಿ 'ಹೊಲೆಯರು' ಒಕ್ಕಲಿಗ ಗೌಡರನ್ನು ಕುರಿತು ಹೊಗಳುವ ಪದ್ಧತಿ ಉಂಟು. ಮಲೆನಾಡಿನಲ್ಲಿ ಸತ್ತವರನ್ನು ಕುರಿತು ಶವದ ಕ್ರಿಯೆ ಆಗುವವರೆಗೆ ಅವರ ಗುಣಗಾನ ಮಾಡುವ ಕ್ರಮ ಉಂಟು. ಹರಿಹರ, ದಾವಣಗೆರೆ ಮತ್ತು ಹೊಳಲಕೆರೆ ತಾಲೂಕುಗಳಲ್ಲಿರುವ 'ಚಲವಾದಿ'ಗಳು (ಇವರು ಹರಿಜನರೇ) ಹೆಗಲಮೇಲೆ ಗಂಟೆ ನೇತಾಡಿಸಿಕೊಂಡು ತಿರುಗಾಡುತ್ತಾರೆ. ಇವರ ಹೆಗಲ ಮೇಲೆ ಅಡ್ಡಡ್ಡಲಾಗಿ ಕಂಬಿಯನ್ನು ಹೂತು ಒಂದು ಕಡೆಗೆ (ಮುಂಭಾಗಕ್ಕೆ) ಗಂಟೆಯನ್ನೂ ಹಿಂಭಾಗಕ್ಕೆ ಬಟ್ಟಲನ್ನೂ ಇದನ್ನು 'ಚಲವಾದಿ ಬಟ್ಟಲು' ಎನ್ನುತ್ತಾರೆ. ಗಂಟೆಯನ್ನು ಸರಪಣಿಯಿಂದ ನೇತುಹಾಕಿರುತ್ತಾರೆ. ನಡೆಯುವಾಗ ಗಂಟೆ ಮುಂಗಾಲಿಗೆ ತಗುಲಿ ಶಬ್ದ ಮಾಡುತ್ತದೆ. ಭಕ್ತರು ಕೊಡುವ ಭಿಕ್ಷೆಯನ್ನು ಮತ್ತು ಭಕ್ತರಿಗೆ ಕೊಡುವ ಪ್ರಸಾದವನ್ನು ಈ ಬಟ್ಟಲಿನಲ್ಲಿ ಕೊಡುತ್ತಾರೆ.

ನಮ್ಮ ಪುರಾಣಗಳಲ್ಲಿ ಹಾಗೂ ಇತಿಹಾಸಗಳಲ್ಲಿ ಬರುವ 'ಗೊಂಡವನ' ಮತ್ತು 'ಗೊಂಡಾರಣ್ಯ' ಎಂಬ ಮಾತುಗಳು ಗೊಂಡರು ನೆಲೆಸಿದ ಪ್ರದೇಶಗಳನ್ನು ಕುರಿತ ಮಾತುಗಳೆಂದು ತಜ್ಞರು ಅಭಿಪ್ರಾಯಪಡುತ್ತಾರೆ. ಬಹು ಹಿಂದೆ ಈಗಿನ ಮಹಾರಾಷ್ಟ್ರ, ಮಧ್ಯಪ್ರದೇಶ, ಒರಿಸ್ಸಾ ಮತ್ತು ಬಂಗಾಳ ವರೆಗೆ ಕನ್ನಡ ನಾಡು ವ್ಯಾಪಿಸಿತ್ತೆಂದು ಶಂಬಾಜೋಶಿಯವರು ಊಹಿಸುತ್ತಾರೆ. 'ಗೊಂಡ' ಎಂಬ ಮಾತು 'ಗಭಡ', 'ಗೌಂಡ' ಎಂಬಿತ್ಯಾದಿ ಮಾತುಗಳಿಗೆ ಸಮೀಪವೆಂದೂ ಹೇಳುತ್ತಾರೆ. ಈ ಊಹೆ ಸರಿ ಎಂದರೆ ಬೇರೆಯವರು ದಕ್ಷಿಣಕ್ಕೆ ವಲಸೆ ಬಂದಾಗ ಗೊಂಡರು ಬರಲಾರದೆ ಇದ್ದಲ್ಲಿಯೇ ಇದ್ದುಬಿಟ್ಟು ಬೇರೊಂದು ಪಂಗಡವಾಗಿ ಉಳಿದಿರಬಹುದು ಎಂದು ಹೇಳಬೇಕಾಗುತ್ತದೆ. ಅಂತೂ ಈ ಬಗ್ಗೆ ಸಂಶೋಧನೆ ಆಗಬೇಕು.

ವಿದ್ವಾಂಸರಾದ ಶ್ರೀ ಕೆ. ಎಸ್. ರಾಮ್‌ಅವರು ಈ ಬಗ್ಗೆ ೧೭-೪-೨೦೪೪ರ ಡೆಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಬರೆದಿರುವ ಇಂಗ್ಲಿಷ್ ಲೇಖನವನ್ನು ಗಮನಿಸಬಹುದು :

Kannada Footprints in Chattisgarh

Shcoked at the title ? Little wonder. Not many, after all, would expect Karnataka to have anything to do with Chhattisgarh, located more than 1,500 kms away. But that's how the course of history often runs.

Chhattisgarh is one of the three states of the Indian Union formed in 2000. It was sliced out of Madhya Pradesh. One of the prime attractions in Chhattisgarh is Bastar, the south - eastern 'peninsular' strip that hungs down on the map of erstwhile Madhya Pradesh.

Bastar is widely knwon for many reasons. 80% of its population is tribal. These are derivatives of Gonds : Maria, Muria, Bhatra, Dhakad, etc.

A large part of bastar is fast gaining popularity as an offbeat tourist destination. A destination for 'eco' and 'ethno' tourism.

Here, within a radious of 50 kms from Jagdalpur, the district headquarters, you have Chitrakoot, the country's largest waterfall; and , Kanger valley National Park, the bio-diversity of whose forests is counted as second only to the Amazon.

You have subterranean caves with breath-taking stalactites and stalagmites, and organ rocks that produce music!

Bastar has a dim history. It is part of Dandakaranya, the forestland sprawling on the northern side of the river Godavari.

In the early 15th centrury, the Kakutiya royal Annam Deo crossed the Godavari and fled into Bastar, after his brother, King Pratap Rudra Deo of Warangal was defeated and slain by Ahmad Shah Bahmani. The Kakatiyas have been described as 'a cadet branch of the Chalukyas.'

The Kakatiyas ruled over Bastar until the Indian Union was born in 1947. The viradavali of the Bastar Maharaja, to this day refers to him as 'Chalki-bans' meaning of the Chalukya line.

Well before the Kakatiyas established their kingdom here, Bastar was ruled by Chakrakoota lords. It is an established fact that a Kannada king ruled from Jagdalpur long before the advent of the Kakatiyas.

The extent of his kingdom is not celar. There are evidences in Bastar of an advanced Hindu rule, in the form of temple - ruins and stone inscriptions in old Kannada.

The chitrakoota kingdom surrounded the present - day Chitrakoot in Bastar. At Keskal, 130 kms north of Jagdalpur, there are several mounds. Excavation in some of these has revealed numerous black granite Shiva - lingas of various sizes have also been found here.

In and around a village named Bijapur in south Bastar, are found to this day a variety of Lingayats among the Maria Gonds of

Bastar. They wear to this day a 'linga' and 'rudraksh' round their necks.

It is interesting to note that the dialects the tribals speak in Bastar - Gondi, Bhatri, Halbi, just to mention three, have several words, apparently of Kannada origin.

These include kal (stone), wija / bija (seed), mara (tree), Chik (small), sara (necklace), jaaga (plot, generally sacred plot of land), gudi (temple) etc. Other interesting words are barna (bride-price), angadi (meanign not shop, but kitchen, beta (hunting, and betta mountain).

How does one account for this connection? When a vast kingdom like that of the Chalukyas disintegrates, it is common for 'ethnic pockets' to be created. These may be because of marooning of soldiers and others in a difficult terrain like Bastar.

Likewise, some people from the ruling state may simply choose not to return to their parent-land. Whatever the reason, connections like the above serve to underline the unity in diversity which, as Jawaharlal Nehru discovered, characterizes India.

ಕವಿಕಂಡ ಚಿತ್ರಕೂಟ

ಚಿತ್ರಕೂಟದ ವರ್ಣನೆಯನ್ನು ಕುವೆಂಪು ಅವರು ತಮ್ಮ 'ರಾಮಾಯಣ ದರ್ಶನ'ದಲ್ಲಿ ಬಹು ಸೊಗಸಾಗಿ ಚಿತ್ರಿಸಿದ್ದಾರೆ. ತಾವೇ ಕಂಡಂತೆ ಆ ವರ್ಣನೆ ಆಗುತ್ತದೆ. ಮಲೆನಾಡನ್ನು ಚಿತ್ರಿಸಿದ ವ್ಯಕ್ತಿ ಚಿತ್ರಕೂಟವನ್ನು ಊಹಿಸಿ ಬರೆಯಬಹುದು. ಆದರೆ ಅವರು ಹಾಗೆ ಮಾಡಿಲ್ಲ. ಬೇರೆ ರಾಮಾಯಣಗಳಲ್ಲಿ (ಅನೇಕ ರಾಮಾಯಣಗಳಿವೆ) ಬರುವ ವರ್ಣನೆಯನ್ನು ತಮ್ಮ ಪ್ರತಿಭೆಯಲ್ಲಿ ಬಹು ಭಾವಪರವಶರಾಗಿ ರಚಿಸಿದ್ದಾರೆ. ಶೈಲಭೈರವ ಎಂಬ ಪದವೇ ಸಾಕು ಆ ಅಮೆಜಾನ್ ಕಾಡಿನಂತಹ ಕಾಡಿಗೆ ಚಿತ್ರಕೂಟವನ್ನು ಹೋಲಿಸಿರುವುದು.

ಬಿದಿರುಮಳೆಯಲಿ ಕಳಲೆಗಳನಿಳ್ದು ಲರಿಲರಿಲ್
ಲರಿಲೆಂದು ಮುರಿದು ತಿನುತಿರ್ದಾನೆ; ನೆನೆಯದಂ;
ಚಿತ್ರಿಸಿಕೊ ! ಮರವಲುಗಿ ಪಣ್ವೆರಸಿ ಕಾಯ್ಗಳುಂ
ಕೆಡೆಯುವೋಲ್, ಕೊಂಬೆಯಿಂ ನೆಗೆದು ಕೊಂಬೆಗೆ ಹಾರಿ
ಕೀರುತೋಡುವ ಬಣ್ಣಗಪಿವಿಂಡು ನೆನೆಯದಂ;
ಚಿತ್ರಿಸಿಕೊ ! ಹೂದಿಂಗಳ್ಕೈತರಲ್ಕೊಸಗೆಯಿಂ

ಬನದೇವಿ ದೀಪೋತ್ಸವಂಗೈವಳೆಂಬಂತೆ
ಮೊಗ್ಗುಗೊಳ್ಳಿಗಳಿಂದೆ ಪೊಂಜಿನುರಿವೂವಿಂದೆ
ರಂಜಿಸುವ ಮುತ್ತುಗದ ಮರಗಳಂ; ನೆನೆ, ಮನವೆ;
ಚಿತ್ರಿಸಿಕೊ ! ಬೆಟ್ಟಮಂಡೆಯ ಬಂಡೆಹಣೆಯಿಂದೆ
ಚಾಚಿದಾ ಕಾಲ್ಗೋಡಿನಿಂ, ಮತ್ತೆ ಹೆಮ್ಮರದ
ಹೆಗ್ಗೋಡಿನಿಂ, ನೇಲ್ದು, ತುಪ್ಪದ ಹೊರೆಗೆ ಜೋಲ್ದ
ಹೆಡಗೆಯೊಡಲಿನ ಹುಟ್ಟಿ ಹೆಜ್ಜೇನ್ಗಳಂ; ನೆನೆದು
ಸವಿ, ಮನವೆ; ಚಿತ್ರಿಸಿಕೊ ! ನೆತ್ತಿಯಿಂ ಪರಿತಂದು
ಕಿಬ್ಬಿಗುರುಳ್ವಬ್ಬಿ ಬೆಳ್ಳಂಗೆಡವ ಚುಂಚಿಯಾ
ನೀರ್‌ಬೀಳಮಂ; ನೆನೆ ನವಿರ್ ನಿಮಿರಿ ! – ಅದೊ ಅಲ್ಲಿ,
ಕಣ್‌ತುಂಬೆ ಕಾಣುತಿದೆ ಚಿತ್ರಕೂಟಂ ! ಶಿವಾ,
ಸೊಗಸು ನೋಟಂ ! ವಿಪಿನಶಿವ ಜಟಾಜೂಟಂ !

ಮೆಯ್ಮರೆತು ಕಂಡರಾ ದೃಶ್ಯದೇವೇಂದ್ರನಂ
ಮೆಯ್ಯೆಲ್ಲ ಕಣ್ಣಾಗಿ, ಕಣ್ಣಾರುಮೊಂದಾಗಿ,
ಕಣ್ಣೊಂದುಮಿಲ್ಲದಾತ್ಮಾನಂದ ರಸವಾಗಿ
ಅಂತಹೀನ ಮಹಾಂತ ಸಂತತಮವಿಶ್ರಾಂತ
ಜಲಧಿಯ ಬೃಹನ್ನೀಲಿಮಾ ವಿರಾಡ್‌ರಂಗದೊಳ್
ತೆರೆಯನಟ್ಟುವ ತೆರೆಯನಟ್ಟುವ ತೆರೆಯ ತೆರದಿಂ
ಗಿರಿಯನಟ್ಟುವ ಗಿರಿಯ ಪಂಕ್ತಿಗಳ್
ಪರ್ವಿದುವು ದಿಟ್ಟಿ ಹೋಹನ್ನೆಗಂ ಮೇಣ್ ಕಣ್ಣಲೆದು
ಸೋಲ್ವನ್ನೆಗಂ, ಸಾಂದ್ರ ರೋಮರಾಜಿಯ ರುಂದ್ರ
ಚರ್ಮದೊಂದತಿಪೂರ್ವ ಭೂ ಬೃಹಜ್ಜಂತುವೆನೆ
ಹಬ್ಬಿ ಹಸರಿಸಿತುಬ್ಬಿತಡವಿ ದಟ್ಟಯ್ಸಿದಾ
ದಿಟ್ಟ ಮಲೆಪೊಡವಿ. ಮಂದಾಕಿನಿಯ ಪೆರ್ಪೊನಲ್
ಗಿರಿಗೆ ಮೇಖಲೆಯಾಗಿ ಕಂದರದ ಸೀಮೆಯಂ
ಸಿಂಗರಿದತ್ತು. ಕಿರುವೊನಲ ತೊರೆ ಮಾಲ್ಯವತಿ
ತಾನದ್ರಿಶಿರದಿಂ ರಜತರೇಖೆಯೋಲಿಳಿದು
ಕಂಗೊಳಿಸಿದತ್ತು, ಚಿನ್ನದ ಜನ್ನಿವಾರಮೆನೆ
ತಳತಳಿಸಿ, ಸಾಯಂ ಸಮೀಪ ದಿವಸೇಶ್ವರನ
ಕನಕಕಾಂತಿಯಲಿ. ಆ ಶೈಲಿ ಭೈರವ ಋಷಿಗೆ
ದರ್ಶನದಿನಾವೇಶವಶರಾದ ಮೂವರುಂ
ಕೈಮುಗಿದರರ್ಪಿಸಿದರಾತ್ಮ ನೈವೇದ್ಯಮಂ !

ಮರಣ ಸಂದೇಶಗಳು

ವೆರಿಯರ್ ಎಲ್ವಿನರು ನಿಧನರಾದಾಗ ಅವರ ಪತ್ನಿ ಲೀಲಾ ಎಲ್ವಿನರಿಗೆ ಬಂದ ದುಃಖಸೂಚಕ ಸಂದೇಶಗಳು :

೧೯೬೪ರ ಫೆಬ್ರವರಿ ೨೪ರಂದು ಪ್ರಧಾನಮಂತ್ರಿ ಜವಾಹರ್‌ಲಾಲ್ ನೆಹ್ರೂ ಅವರ ಪರವಾಗಿ **ಶ್ರೀಮತಿ ಇಂದಿರಾಗಾಂಧಿ ಅವರು ಬರೆದ ಪತ್ರ :**

Dear Mrs. Elwin,

As you know Dr. Verrier Elwin has been a friend of our family for many years. We met him on the 21st and he came later the same evening to talk to me about his future work. He has done a great deal for the tribal folk of India not only in the practical sphere but also in creating the right attitude towards them. His loss to our country and especially to the tribal people is a real one.

His sudden passing away came as a great shock to my father and me and we share your sorrow. Our throughts and prayers are with you. I am sure there will be many who will help but if there is anything I can do, do not hesitate to let me know.

೧೯೬೪ ಮಾರ್ಚ್ ೬ ರಂದು ಜೆ.ಆರ್.ಡಿ. ತಾತಾ ಅವರು ಬರೆದ ಪತ್ರ :

Dear Mrs. Elwin,

On my return to India from a prolonged business tour abroad, I was shocked and saddened by the news of Verrier's death.

I had the good fortune to come in contact with him from the very beginning of his dedicated career in India and ever since considered it a previlege to have him as a friend. There is no one I have known for whom I have had grater admiration and affection. I am sure he will live, for the rest of their lives, in the hearts and minds of all his friends and also the innumerable people to whose welfare he dedicated his life. If only there were more Verrier Elwins in this world, it would be a better and happier place to live in.

On behalf of my wife and myself, I extend to you and your children our deepest sympathy and condolences in your grievous loss.

Audy Kanffman ಅಡಿ ಕಾನ್ಫ್‌ಮನ್ ಎಂಬುವರು ಅಮೆರಿಕಾದಿಂದ ಬರೆದ ಪತ್ರ :

Dear Lila,

Two days ago, through a friend in Calcutt, I received with considerable shock the news of Verrier's sudden death in New Delhi.

I had, of course, known, as we all did, that Verrier had not been well for several years. Yet I had always hoped, and, indeed, expected, that I would have the good fortune to see him once again in this world.

Although I did not know Verrier long, I came quickly to esteem him as one of the finest gentleman I have met and also as a man of unusual and special ability. He was one of the few persons I have known who had real sympathy and understanding not only for one segment of the human race but for all mankind. In the few hours I spent with Verrier from time to time in late 1961 and in 1962 I learned more about the wide world around me than I could have in many months of formal education. But what is for me more important is that i came to value Verrier not so much for his knowledge, but as a friend.

I shall, of course, never know all the true circumstances of his activities, but it seemed to me that Verrier often stood alone, or almost alone, in a difficult struggle in defence of what he believed to be right. That he should have had the faith and conviction to pursue this struggle is a tribute to his courage and to his integrity.

The world has turned many times since I last saw you and Verrier. yet I carry in my heart, and shall carry it for rest of my life, the memory of some of the happiest days of my life. I am truly greatful that he should have lived long enough so that I might have the opportunity to know him.

If you ever have a chance to do so, Lila, please write and let me know what plans you may have for the future. I am many thousands of miles away and alsas, in no position to offer suggestions, advice or more than sympathy. For whatever little they may be worth you have my thoughts and my blessings, now and always.

'ಪ್ರಜಾವಾಣಿ' ದಿನಪತ್ರಿಯಲ್ಲಿನ ಸಂಪಾದಕೀಯ

"ಸುಪ್ರಸಿದ್ಧ ಮಾನವಶಾಸ್ತ್ರಜ್ಞ ಡಾ॥ ವೆರಿಯರ್ ಎಲ್ವಿನ್‌ರ ನಿಧನದಿಂದ ಭಾರತದ ಲಕ್ಷಾಂತರ ಗಿರಿಜನರು ತಮ್ಮ ಆಪ್ತಬಂಧುವೊಬ್ಬನನ್ನು ಕಳೆದುಕೊಂಡಂತಾಗಿದೆ. ವಿಶ್ವ ಮಾನವಶಾಸ್ತ್ರಜ್ಞನ ವಿರಳಪಂಕ್ತಿಯಲ್ಲಿ ಡಾ॥ ಎಲ್ವಿನ್‌ರದು ಒಂದು ವಿಶಿಷ್ಟಸ್ಥಾನ. ಭಾರತದ ವಿಭಿನ್ನ ಬುಡಕಟ್ಟುಗಳನ್ನು ಕುರಿತು ಅವರು ಬರೆದ ಹದಿನಾರಕ್ಕೂ ಹೆಚ್ಚು ಗ್ರಂಥಗಳು ಅವರ ಶ್ರದ್ಧೆ, ಪಾಂಡಿತ್ಯ, ಅನುಕಂಪ, ಪ್ರಾಮಾಣಿಕತೆಗಳ ಕನ್ನಡಿಯಂತಿವೆ. ಎಲ್ವಿನ್ ಶ್ರೇಷ್ಠ ದರ್ಜೆಯ ಪಂಡಿತರು. ಆದರೆ ಅವರ ಪಾಂಡಿತ್ಯ ಕೇವಲ ಪುಸ್ತಕಕ್ಕೆ ಸೀಮಿತವಾಗಿರಲಿಲ್ಲ. ಬದುಕಿನಲ್ಲಿ ಪ್ರತಿಫಲಿಸಿತ್ತು. ಭಾರತದ ಗಿರಿಜನರ ಬಗ್ಗೆ ಅವರು ಬೆಳೆಸಿಕೊಂಡ ಒಲವು ಅವರನ್ನು ಎಷ್ಟು ದೂರ ಒಯ್ದಿತೆಂದರೆ ಡಾ॥ ಎಲ್ವಿನ್ ತಮ್ಮ ಮೂರು ಮೂರೂವರೆ ದಶಕಗಳ ಸೇವಾ ಜೀವನದಲ್ಲಿ ಈ ಹಿಂದುಳಿದ ವರ್ಗಗಳ ಉದ್ಧಾರ ಕಾರ್ಯಕ್ಕೆ ತಮ್ಮನ್ನು ತಾವೇ ಅರ್ಪಿಸಿಕೊಂಡು ಬಿಟ್ಟರು. ಮನಸ್ಸು ಮಾಡಿದ್ದರೆ ಅಪಾರ ಸಂಪತ್ತನ್ನೂ ಅಧಿಕಾರವನ್ನೂ ಗಳಿಸಬಹುದಾಗಿದ್ದ ಈ ಆಂಗ್ಲ ಪಂಡಿತ ಗಿರಿಜನ ಕನ್ಯೆಯೊಬ್ಬಳನ್ನು ಮದುವೆಯಾಗಿ ಗಿರಿಜನರೊಡನೆಯೇ ನೆಲೆಸಿದರು. ಎಂದೇ ಈ ಕ್ಷೇತ್ರದಲ್ಲಿ ಅವರು ಅರಿಯದ ಭಾಷೆಯಿರಲಿಲ್ಲ. ಅವರಿಗೆ ಅಪರಿಚಿತವಾದ ಜೀವನ ವಿಧಾನವಿರಲಿಲ್ಲ. ಕ್ರೈಸ್ತ ಪಾದ್ರಿಯಾಗಿ ಭಾರತವನ್ನು ಅರಸಿ ಬಂದ ಈ ಮಾನವಪ್ರೇಮಿಯ ಮೇಲೆ ಮಹಾತ್ಮ ಗಾಂಧಿಯವರು ಬೀರಿದ ಪ್ರಭಾವ ಅನ್ಯಾದೃಶವಾದದ್ದು. ಎಲ್ವಿನರ ಅಖಂಡ ತಪಸ್ಸು ಅದಕ್ಕೊಂದು ಉಜ್ವಲ ನಿದರ್ಶನ."

R.S. Naidu (by H.L. Nage gowda)

Sri R. Seethapathi Naidu, popularly known as R.S. Naidu, was a versatile genius particularly in the field of sculpture, painting, and cartoons (political and social) including agro-economics. In the early days of the freedom movement Naidu played his own role by going underground and publishing articles in 'Vanguard', 'Congress Socialist', 'The National Front', 'Bharath Jyothi', 'The Hidnu' and "Manchester Guardian'. He had worked in close association with Umashankar Dixit, Minu Masani, Yusuf Meharali, Asholk Mehta, R.R. Diwakar, Jockim Alva etc.

After Independence, he settled down in Mysore in a house allotted to him by the Karnataka Housing Board. I had an opportunity to see him several times. He prepared some sketches of folk artists at my request. He was however not quite happy with himself in the sense that he complained of some outside force interfering with his brain.


He was an excellent friend. He wrote a number of letters to me. Every letter had a sketch or something by him.

The sketches made by him in this book have enchanced its value because he has breathed life into the photos taken by Verrier Elwin.

He was honoured with Kannada Rajyothsava Award in 1973 but he deserved much more.



೧೯೫೮ರಲ್ಲಿ ಷಿಲ್ಲಾಂಗ್ ರಾಜಭವನದಲ್ಲಿ ನಡೆದ ಹಿರಿಯ ಅಧಿಕಾರಿಗಳ ಸಮಾವೇಶ



ಪ್ರೊಫೆಸರ್ ಕ್ರಿಸ್ಟೊಫರ್ ಎಂಬ ಆಸ್ಟ್ರಿಯನ್ ವಿದ್ವಾಂಸ ಅವರೊಡನೆ ಷಿಲಾಂಗ್‌ನಲ್ಲಿ




ಶ್ರೀಮತಿ ಇಂದಿರಾಗಾಂಧಿಯವರೊಡನೆ – ಷಿಲ್ಲಾಂಗ್‌ನಲ್ಲಿ




ನೀಫಾದಲ್ಲಿ ವಿದ್ಯಾರ್ಥಿಗಳೊಡನೆ



ಜವಹರ್‌ಲಾಲ್ ನೆಹ್ರೂ ಅವರೊಡನೆ



Dr. Elwin's and his Family Members with Mrs. Elwin's sister Edyith Elwin




ಎಲ್ವಿನ್ ಓದಿದ ಆಕ್ಸ್‌ಫರ್ಡ್ ಯೂನಿವರ್ಸಿಟಿ
ಮೆರ್ಟನ್ ಕಾಲೇಜು




ಲೀಲಾ ಎಲ್ವಿನ್




ಬೊಂಬಾಯಿ ತಾಜ್‌ಮಹಲ್ ಹೋಟೆಲಿನಲ್ಲಿ ಜಹಾಂಗೀರ್ ಪಟೇಲ್, ಅವರ ಪತ್ನಿ ಮರಿಯಾ ಸೋ, ಯಾ ಪಟೇಲ್ ಮತ್ತು ಹಿವ್ ಲೇ ಅವರೊಡನೆ



Dr. Verrier Elwin with Mr. Fazal Ali,
the then Governer of Assam.




Dr. Verrier Elwin



ಆದಿವಾಸಿ ಮಕ್ಕಳೊಡನೆ ಎಲ್ವಿನ್



ಎಲ್ವಿನ್ ಒಬ್ಬ ಆದಿವಾಸಿ ಜೊತೆ



ಡಾ॥ ಎಲ್ವಿನರಿಗೆ ೧೯೬೧ರಲ್ಲಿ ದೊರೆತ ಪದ್ಮಭೂಷಣ ಪ್ರಶಸ್ತಿ



ಆದಿವಾಸಿ ಗೊಂಡ ಬುಡಕಟ್ಟಿಗೆ ಸೇರಿದ ಎಲ್ವಿನ್‌ರ
ಮೊದಲ ಹೆಂಡತಿ ಕೋಷಿ ಎಲ್ವಿನ್




ಮೊಟ್ಟಮೊದಲಿಗೆ ಎಲ್ವಿನ್ ಜೊತೆ ಕೆಲಸ ಮಾಡಿದ ಶ್ಯಾಮರಾವ್ ಹಿಲ್ ಲೇ
ಮತ್ತು ಅವರ ಪತ್ನಿ ಕುಸುಮ್ ಹಿವ್ ಲೇ




ವೆರಿಯರ್ ಎಲ್ವಿನ್ ತಮ್ಮ ಷಿಲ್ಲಾಂಗ್ ಪುಸ್ತಕ ಭಂಡಾರದಲ್ಲಿ




ಮೀರಾಬೆನ್ನಳೊಡನೆ ಸಬರ್ಮತಿ ಆಶ್ರಮದಲ್ಲಿ



ನಹರ್ ಅಶೋಕ್ ವಸಂತ್



ಕುಮಾರ್ – ಟಿಬೆಟ್ ಗಡಿಯಲ್ಲಿ – ೧೯೫೮




ಗೊಂಡ್ ಮಕ್ಕಳ ಜೊತೆ

ಪಟ್ಕೋಡಿ – ೧೯೩೮



ಎರಡು ವರ್ಷದ ಮಗುವಾಗಿದ್ದಾಗ ತಂದೆತಾಯಿಗಳೊಡನೆ



ವೆರಿಯರ್ ಎಲ್ವಿನ್ – ೧೯೫೩ರಲ್ಲಿ



ಗಾಂಧೀಜಿಯವರ ಜೊತೆ ಗಾಳಿಸವಾರಿ



ಬೈಗರು ಮೀನು ಹಿಡಿಯುತ್ತಿರುವುದು



ಬೈಗಾ – ಹೆಂಗಸು ಅಡಿಗೆ ಮಾಡುತ್ತಿರುವುದು



ಬೈಗಾ – ಬಿಂಜ್‌ವರ್



ಬೈಗಾನೊಬ್ಬ ಕೂನಿಯಿಂದ ಮೀನುಗಳನ್ನು
ಕೊಡುವುತ್ತಿರುವುದು



ಬೈಗಾ – ಮುರಿಯ




ಬೈಗಾ – ಯುವಕ ಭೂಮಿಯ



ಪಟಾರಿಯಾ ಆಗರಿಯಾ ಜನ



ಮುರಿಯ ಹೆಣ್ಣೊಬ್ಬಳು ನೃತ್ಯದ ಭಂಗಿಯಲ್ಲಿ



ಕೊನ್ಯಾಕ – ತನ್ನ ತಂದೆಯ ಸಮಾಧಿ ಗೊಂಬೆಯೊಡನೆ



ಕುಣಿತಕ್ಕೆ ಸಿದ್ಧಳಾದ ಭೂಮಿಯಾ ಹೆಣ್ಣು



ಕೊನ್ಯಾಕ್ ಹುಡುಗಿ ಹೆಣಿಗೆ ಕೆಲಸದಲ್ಲಿ



ಕೆಲಸಕ್ಕೆ ಹೊರಟ ಕೊನ್ಯಾಕ್ ಹುಡುಗಿ ಹುಲ್ಲಿನ ಲಂಗದಲ್ಲಿ



ಒರಿಯ ಕುಲುಮೆ



ದೂಧ್ ಭೈನಾ ಹೆಂಗಸು
– ಬೇರು ಕೀಳುವ ಹಾರೆಯೊಡನೆ



ಭೈರ್ಗೋತಿಯಾ ಹೆಂಗಸು



ಭೂಮಿಯಾ ಜನರ ಟುಮ್ಮಿ ಮತ್ತು ಡೋಲು



ಭೂಮಿಯಾ ಮದುವೆಯಾದ ಮೇಲೆ



ಭೂಮಿಯಾ



ಭೂಮಿಯಾ ಹುಡುಗಿ ನೇಯಿಗೆ ಕೆಲಸದಲ್ಲಿ



ಅಗರಿಯಾ ಹುಡುಗ ನೃತ್ಯದ ಉಡುಪಿನಲ್ಲಿ



ನೇಪಾಳದ ದೈವದ ಕುಣಿತ

ಲಡಾಖಿ ಜಾನಪದ ಕುಣಿತ



ಶತಮಾನೋತ್ಸವ ವರ್ಷ : ೨೦೧೪-೨೦೧೫

ಕನ್ನಡ ಸಾಹಿತ್ಯ ಪರಿಷತ್ತಿನ ನೂರರ ಸಂಭ್ರಮಕ್ಕೆ ಕಿರೀಟಪ್ರಾಯವಾದ ಯೋಜನೆ ಕನ್ನಡದ ನೂರು ಮೌಲಿಕ ಗ್ರಂಥಗಳ ಮರುಮುದ್ರಣ. ಈ ಪುಸ್ತಕಗಳ ಆಯ್ಕೆಯಲ್ಲಿ ಕನ್ನಡ ಸಾಹಿತ್ಯದ ವಿವಿಧ ಘಟ್ಟಗಳು, ಚಳುವಳಿಗಳು ಹಾಗೂ ವಿವಿಧ ಸಾಹಿತ್ಯಿಕ ಸಂವೇದನೆಗಳನ್ನು ಗಮನದಲ್ಲಿರಿಸಿಕೊಳ್ಳಲಾಗಿದೆ. ಸಾಹಿತ್ಯದ ಎಲ್ಲ ಪ್ರಕಾರಗಳಿಗೂ ಪ್ರಾತಿನಿಧ್ಯವಿರುವಂತೆ ಸಹ ನೋಡಿಕೊಳ್ಳಲಾಗಿದೆ. ಪ್ರತಿಭೆ, ಪ್ರಾದೇಶಿಕತೆ ಹಾಗೂ ಸಾಮಾಜಿಕ ನ್ಯಾಯಗಳನ್ನು ಪರಿಗಣಿಸಲಾಗಿದೆ. ಈ ಅಮೂಲ್ಯ ಕನ್ನಡ ಕೃತಿಗಳನ್ನು ಓದುಗರು ಪ್ರೀತಿ ಅಭಿಮಾನಗಳಿಂದ ಬರಮಾಡಿಕೊಳ್ಳುವರೆಂದು ನಂಬಿದ್ದೇನೆ.

ಪುಂಡಲೀಕ ಹಾಲಂಬಿ
ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦೦೧೮